ಕನ್ನಡ ವಿಶ್ವವಿದ್ಯಾಲಯ

ದೃಶ್ಯ ಮಾಧ್ಯಮ : ಜನಪದ ಕಲೆಗಳ ಆಧುನಿಕ ಪ್ರಕ್ರಿಯೆ

(ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕವಿತಾ ಸಾಗರ

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ - ೫೮೩ ೨೭೬

ಸಮಾಜ-ವಿಜ್ಞಾನ ನಿಕಾಯ ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ - ೫೮೩ ೨೭೬

೨೦೧೮

ದೃಶ್ಯ ಮಾಧ್ಯಮ : ಜನಪದ ಕಲೆಗಳ ಆಧುನಿಕ ಪ್ರಕ್ರಿಯೆ

(ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಕವಿತಾ ಸಾಗರ

ಮಾರ್ಗದರ್ಶಕರು

ಡಾ. ಸಿ.ಟಿ. ಗುರುಪ್ರಸಾದ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ-ವಿಜ್ಞಾನ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩ ೨೭೬

೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

'ದೃಶ್ಯ ಮಾಧ್ಯಮ : ಜನಪದ ಕಲೆಗಳ ಆಧುನಿಕ ಪ್ರಕ್ರಿಯೆ' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಪಿಎಚ್.ಡಿ. ಪದವಿಗಾಗಿ ಕವಿತಾ ಸಾಗರ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ: ವಿದ್ಯಾರಣ್ಯ

(ಡಾ.ಸಿ.ಟಿ.ಗುರುಪ್ರಸಾದ್)
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

'ದೃಶ್ಯ ಮಾಧ್ಯಮ : ಜನಪದ ಕಲೆಗಳ ಆಧುನಿಕ ಪ್ರಕ್ರಿಯೆ' ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಡಾ.ಸಿ.ಟಿ.ಗುರುಪ್ರಸಾದ್, ಪ್ರಾಧ್ಯಾಪಕರು, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ: ೦೫-೦೨-೨೦೧೮

ಸ್ಥಳ: ವಿದ್ಯಾರಣ್ಯ

(ಕವಿತಾ ಸಾಗರ)
ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಿ-ವಿಧಾನ

ಪ್ರಸ್ತಾವನೆ :

ಮಾನವನ ಬದುಕಿನ ಇತಿಹಾಸ ಲಕ್ಷಾಂತರ ವರ್ಷಗಳಷ್ಟು ಪ್ರಾಚೀನವಾದದ್ದು. ಹಳೇ ಶಿಲಾಯುಗ ತಾಮ್ರಯುಗ, ಲೋಹಯುಗ ದಾಟಿ ನಾಗರೀಕತೆಯ ಈ ಹಂತದಲ್ಲಿ ನಿಲ್ಲಲು ಮಾನವ ನಿರಂತರವಾಗಿ ಹೋರಾಟ ಮಾಡುತ್ತಾ ಬಂದಿದ್ದಾನೆ. ಒಂದು ಕಡೆ ನೆಲೆ ನಿಲ್ಲಲು ಆರಂಭಿಸಿದ ಕಾಲಕ್ಕೆ ನಾಗರೀಕತೆಯ ಉದಯವಾಯಿತು. ಸಂಸ್ಕೃತಿ ಪ್ರಜ್ಞೆ ಆರ್ವಿಭವಿಸಿತು. ಕೃಷಿ ಪ್ರಧಾನ ಬದುಕಿನ ಮಹತ್ವ ಅರ್ಥವಾದಂತೆಲ್ಲಾ ಬದುಕನ್ನು ಪ್ರೀತಿಸುವ ಗುಣ ಸಹಜವಾಯಿತು. ಈ ಪ್ರೀತಿಯ ಒಂದು ಭಾಗವಾಗಿಯೇ ಕಲೆ ಹುಟ್ಟಿಕೊಂಡಿತು. ಬೆಟ್ಟ-ಗುಡ್ಡ, ಗುಹೆ-ಕಂದರಗಳಲ್ಲಿ ಬದುಕುತ್ತಿದ್ದ ಆದಿ ಮಾನವ ತನ್ನ ಬದುಕಿನ ಚಹರೆಗಳ ಮೂಲಕ ತನ್ನದೇ ಆದ ಕಲೆಯನ್ನು ಸೃಷ್ಟಿಸಿಕೊಂಡ. ಹೆಚ್ಚು ನಾಗರೀಕನಾಗುತ್ತಾ ಕಲೆಯನ್ನು ಬದುಕಿನ ಭಾಗವಾಗಿಸಿಕೊಂಡ. ದೇವರು ಧರ್ಮ ಪರಿಕಲ್ಪನೆಗಳು ಮೂಡಿದಂದಿನಿಂದ ಭಗವಂತನ ಪ್ರೀತ್ಯರ್ಥವಾಗಿ, ಆರಾಧನಾ ರೂಪವಾಗಿ ಕಲೆ ಕಾಣಿಸಿಕೊಂಡದ್ದು ಈಗ ಇತಿಹಾಸ.

ಜನಪದರ ಬದುಕು ಮತ್ತು ಕಲೆ ಸಂಸ್ಕೃತಿಯ ಪ್ರಧಾನ ತಿಳುವಳಿಕೆಗಿಂತ ಅದು ಜನ ಸಾಮಾನ್ಯರ ಕಲೆಯಾಯಿತು. ನಂತರ ಪರ್ಯಾಯ ಸಂಸ್ಕೃತಿಯಾಗಿ ರೂಪುಗೊಂಡಿರುವುದು ವಿಶೇಷ. ನಮ್ಮ ಪುರಾಣ ಮಹಾಕಾವ್ಯಗಳು ಸಂಸ್ಕೃತಿಯ ಭಾಗವಾಗಿಯೇ ಕವಲೊಡೆದು ಪ್ರಧಾನ ಸಂಸ್ಕೃತಿಗಿಂತ ಪರ್ಯಾಯ ಸಂಸ್ಕೃತಿಯ ಮುಖವನ್ನೇ ಹೆಚ್ಚು ಅನಾವರಣಗೊಳಿಸಲಾಗಿದೆ. ರೈತರು, ಕುಶಲಕರ್ಮಿಗಳು, ಪಶುಪಾಲಕರು, ಶೂದ್ರರು, ದಲಿತರು ಈ ಪರ್ಯಾಯವಾಗಿ ಸಂಸ್ಕೃತಿಯ ಕುರುಹು. ನೆಲಮೂಲ

ಸಂಸ್ಕೃತಿಯ, ಸಾಮಾನ್ಯ ವರ್ಗದ ಜನ, ಕಲೆಗಳನ್ನ ತಮ್ಮ ಶ್ರದ್ಧಾಭಕ್ತಿಯ ದ್ಯೋತಕವಾಗಿ, ಉಳಿಸಿ ಬೆಳೆಸಿಕೊಂಡು ಬಂದರು. ಮೂಲತವಾಗಿ ಇದರ ಉದ್ದೇಶ ಮನರಂಜನೆಗಿಂತ ಆರಾಧನಾ ಭಾವದಲ್ಲಿಯೇ ಬೆಳೆದುಕೊಂಡು ಬಂದಿವೆ. ನೋಡುವ, ಕೇಳುವ ದೃಶ್ಯ ಮತ್ತು ಶ್ರವ್ಯ ಈ ಎರಡು ಮಾನದಂಡಗಳು ಇಲ್ಲಿಯ ತನಕ ಉಳಿದುಕೊಂಡು ಬಂದವು. ಹಾಗೆಯೇ ಇಂದಿಗೂ ಕೂಡ ಸಾಮಾಜಿಕವಾಗಿ ಹಿಂದುಳಿದಿರುವ ಅಂದರೆ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ತತ್ವ ಪದಕಾರರಾಗಿರಲಿ, ಕಿನ್ನರಿ ಜೋಗಿಗಳಾಗಲಿ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಮಹತ್ವವನ್ನು ಪಡೆಯದಿದ್ದೂ ಇದರ ಹಿಂದೆ ರಾಜಕೀಯ ಮತ್ತು ತಂತ್ರಗಾರಿಕೆ ಕೆಲಸ ಮಾಡುತ್ತಿದೆ ಎಂಬುದು ಕೂಡ ಬಹಳ ಮಹತ್ವವಾದ ಅಂಶವಾಗಿದೆ. ಜಾಗತೀಕರಣದ ಪ್ರಸ್ತುತದಲ್ಲಿ ಕಲೆ ಮತ್ತು ಸಾಂಸ್ಕೃತಿಕ ಬದುಕು ತೀವ್ರವಾದ ಪಲ್ಲಟ, ಸ್ಥಿತ್ಯಂತರಗಳಿಗೆ ಒಳಗಾಗುತ್ತಿರುವುದು ನಾವು ಗಮನಿಸುತ್ತಿದ್ದೇವೆ. ಅಳಿವಿನಂಚಿನಲ್ಲಿರುವ ಎಷ್ಟೋ ಅಲೆಮಾರಿ, ಅರೆ ಅಲೆಮಾರಿ, ಬುಡಕಟ್ಟುಗಳ ಪ್ರದರ್ಶನ ಕಲೆಗಳು ಜಾತಿಯ ಕಾರಣಕ್ಕಾಗಿ ಉಪೇಕ್ಷೆಗೆ ಒಳಗಾಗುತ್ತಿವೆ, ಜೊತೆಗೆ ಮೇಲ್ಜಾತಿಯ ಬಲಿಷ್ಠ ವರ್ಗದವರು, ಕಲೆಯನ್ನು ವ್ಯಾಪಾರದ, ವಾಣಿಜ್ಯದ ಸರಕುಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಇಂತಹ ಪರಿಕಲ್ಪನಾತ್ಮಕಗಳನ್ನು ಸೃಷ್ಟಿಸುತ್ತಿರುವ ಜನಪದ ಪ್ರದರ್ಶನ ಕಲೆಗಳನ್ನು ಒಟ್ಟಾಗಿ ಆಧುನಿಕ ಸಂವೇದನೆಗಳಿಗೆ ಪೂರಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ಇತಿಹಾಸ ಐದಾರು ಸಾವಿರ ವರ್ಷಗಳದ್ದು. ಕಾಲಗತಿಯಲ್ಲಿ ಎಷ್ಟೋ ರೀತಿಯ ಜನ ಬಾಳಿ ಬದುಕಿದ್ದಾರೆ. ಜನಪದರು ಹೇಗೆ ಬದುಕಿದರು ಎನ್ನುವುದಕ್ಕೆ ಅವಶೇಷಗಳ ಹೊರತು ಹೆಚ್ಚು ಸಾಕ್ಷಿಗಳಿಲ್ಲ. ಲಿಖಿತ ದಾಖಲೆಗಳು ದೊರೆಯುವ ಕಾಲಕ್ಕೂ ಹಿಂದಿನ ಜನ ಹೇಗೆ ಬದುಕಿದರು ಎಂಬುದು ನಮಗೆ ಇನ್ನೂ ಅಗೋಚರ. ಇಲ್ಲಿ ಬದುಕಿದ ಜನಪದರು ಒಂದೇ ಬಗೆಯವರಲ್ಲ. ಒಂದೇ ಗುಂಪಿನವರಲ್ಲ, ವೈವಿಧ್ಯತೆಗಳಿರುವಂತರು ನೂರಾರು ಗುಂಪುಗಳಾಗಿ ಒಡೆದು ಅವರವರದೇ ಆದ ಪ್ರತ್ಯೇಕ ಆಚಾರ ವಿಚಾರಗಳನ್ನು ರೂಪಿಸಿಕೊಂಡರು. ನಮ್ಮ ನಾಡಿನಲ್ಲಿ ಮೇಲ್ನೋಟಕ್ಕೆ ಒಂದು ಪ್ರಧಾನ ಸಂಸ್ಕೃತಿ ಕಂಡರೂ; ಒಳಹೊಕ್ಕು ನೋಡಿದರೆ ಒಂದು ಗುಂಪಿಗೂ ಮತ್ತೊಂದಕ್ಕೂ ಸಂಬಂಧವಿಲ್ಲ. ತಮ್ಮ ಪಾಡಿಗೆ ತಾವು ಬೆಳೆದು ಬಂದಿರುವ ಸಂಸ್ಕೃತಿಗಳು ಈ ನಾಡಿನಲ್ಲಿ ಅನೇಕ. ಅರಮನೆ ಗುರುಮನೆಗಳ ಪ್ರಭಾವಕ್ಕೆ ದೂರವಿದ್ದ ಬಹುಪಾಲು ಸಮಾಜ ಜೀವಿಗಳು ತಮ್ಮ ಬದುಕಿನ ಕಷ್ಟ–ಸುಖ–ನೋವು–ನಲಿವುಗಳನ್ನು ಸಹಜ ರೀತಿಯಲ್ಲಿ ತೋಡಿಕೊಂಡರು. ಅಕ್ಷರ ಜ್ಞಾನದಿಂದ ದೂರ ಉಳಿದಿದ್ದ ಜನರಿಗೆ ಅವರದೇ ಆದ ನೀತಿ ನಿಯಮಗಳನ್ನು ರೂಪಿಸಿಕೊಳ್ಳುವುದು ಅಗತ್ಯವಾಗಿತ್ತು. ಹುಟ್ಟಿನಿಂದ ಸಾಯುವ ವರೆಗಿನ ಬದುಕಿನ ಅನೇಕ ಹಂತಗಳಲ್ಲಿ ಒದಗುವ ಕಷ್ಟಗಳ ನಿವಾರಣೆಗೆ ಅವರು ತಮ್ಮದೇ ಆದ ಉಪಾಯಗಳನ್ನು ಆಚರಣೆಗಳನ್ನು ಕಂಡುಕೊಂಡರು. ಕರ್ನಾಟಕದ ಕೃಷಿಯೇ ಪ್ರಧಾನ. ನಮ್ಮ ಸಂಸ್ಕೃತಿಯನ್ನು

ಕಟ್ಟಿ ಬೆಳೆಸಿದವರು ಈ ಕಷ್ಟಜೀವಿಗಳೇ, ಭತ್ತ ಕುಟ್ಟುವ ಒನಕೆಯನ್ನು ಮಾಡಿಕೊಟ್ಟು ಹಾಡು ಕಟ್ಟಲು ನೆರವಾದದ್ದು ಸಂಸ್ಕೃತಿಯ ಬೆಳವಣಿಗೆಯ ಮೊದಲ ಹಂತ.

ಜನ ತಮ್ಮ ಬದುಕಿಗೆ ಮೂಲವಾಗಿ ಭಾವಿಸಿದ ಹಾಡು, ಹಸೆ, ಕುಣಿತ, ಗಾದೆ, ಒಗಟುಗಳನ್ನು ಕಟ್ಟಿದ್ದಾರೆ. ಜನಪದರು ಚದುರರ್ ನಿಜದಿ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್ ಎಂಬ ಕವಿ ವಾಣಿ ಅಕ್ಷರಶಃ ನಿಜ. ಇವರು ರಾಜರ ಅಸ್ಥಾನಗಳಲ್ಲಿ ಮೆರೆದವರಲ್ಲ, ಗುರುಮನೆಗಳಲ್ಲಿ ಕಲಿತವರಲ್ಲ. ಇವರಿಗೆ ದುಡಿಮೆಯೇ ವಿದ್ಯೆ, ಕೆಲಸವೇ ದೇವರು. ಶಿಷ್ಟ ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸದ ದಾಖಲೆ ಸಿಕ್ಕಿದರೆ, ಜನಪದ ಸಂಸ್ಕೃತಿಯ ಪ್ರಾಚೀನತೆಗೆ ಒಳಗಾಗುತ್ತಿರುವು ದನ್ನು ಅಲ್ಲದೇ ಎಷ್ಟೋ ಮೇಲ್ಜಾತಿಯ ಬಲಿಷ್ಠ ವರ್ಗದವರು, ಕಲೆಯನ್ನು ವ್ಯಾಪಾರದ ವಾಣಿಜ್ಯದ ಸರಕುಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿರುವುದನ್ನು ನೋಡುತ್ತಿದ್ದೇವೆ. ಹಲವು ಬಗೆಯ ಇಂತಹ ಪರಿಕಲ್ಪನಾತ್ಮಕ ಗಳನ್ನು ಸೃಷ್ಟಿಸುತ್ತಿರುವ ಜನಪದ ಪ್ರದರ್ಶನ ಕಲೆಗಳನ್ನು ಒಟ್ಟಾಗಿ ಆಧುನಿಕ ಸಂವೇದನೆಗಳಿಗೆ ಪೂರಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿರುವ ಒಂದೊಂದು ಜಾತಿ, ಪಂಗಡ, ಬುಡಕಟ್ಟು ತನಗೆ ತಾನೆ ಅನನ್ಯವಾದವುಗಳು. ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಇಂಥ ನೂರಾರು ಬಗೆಯ ಎಳೆಗಳು ಕಾಣುತ್ತವೆ. ಸಂಪ್ರದಾಯ, ನಂಬಿಕೆ, ವೇಷಭೂಷಣ, ಪ್ರಕೃತಿ ಪರಿಸರಕ್ಕೆ ಸ್ಪಂದಿಸಿ ರೂಪಿಸಿಕೊಂಡ ಕುಣಿತ, ಹಾಡು, ಕತೆ, ಆಟ ಇವೆಲ್ಲ ಅವರ ಸೃಜನಶೀಲತೆಗೆ ಆಧಾರವಾಗಿ ಬೆಳೆದಿವೆ. ಜನಪದ ಸಂಸ್ಕೃತಿ ಸಮೃದ್ಧಿ ಸತ್ವಗಳ ಗಣಿ. ಅದರ ಅಗಾಧತೆ ಮತ್ತು ವೈವಿಧ್ಯ ನಮ್ಮನ್ನು ವಿಸ್ಮಯಗೊಳಿಸುತ್ತದೆ. ಬದಲಾವಣೆ ಬದುಕಿನ ಅವಿಭಾಜ್ಯ ಅಂಗ. ಅದರ ಬದುಕಿನ ಮೂಲ ನೆಲೆ ಮತ್ತು ಸೆಲೆ ಜನಪದ ಸಂಸ್ಕೃತಿಯಲ್ಲಿದೆ. ಅದೂ ನಮ್ಮ ಹೆಮ್ಮೆಯ ಪರಂಪರೆ. ನಾಗಾಲೋಟದಿಂದ ಧಾವಿಸುವ ಆಧುನಿಕ ಜೀವನದಲ್ಲಿ ಈ ಪರಂಪರೆಯ ಬಗ್ಗೆ ಕೂಡ ಆತ್ಮೀಯತೆಯನ್ನು ಉಳಿಸಿಕೊಳ್ಳುವುದು ಅವಶ್ಯಕ. ಆಧುನಿಕತೆಯ ಔದಾಸೀನ್ಯ ನಮ್ಮ ಇಂದಿನ ಬದುಕನ್ನು ರೂಪಿಸಿದ್ದು ಜನರ ಸಂಸ್ಕೃತಿಯನ್ನು ಮರೆಯುವಂತೆ ಮಾಡಬಾರದು. ಪರ್ಯಾಯ ಸಂಸ್ಕೃತಿಯ ವರ್ಣಮಯ ವೈವಿಧ್ಯತೆಯನ್ನು ಅದು ಎಲ್ಲ ಸತ್ವದೊಡನೆ ಪರಿಚಯಿಸುವ ಕೆಲಸವನ್ನು ಪ್ರಬಂಧದಲ್ಲಿ ಮಾಡಲಾಗಿದೆ.

ಕಾಲ ಬದಲಾಗುತ್ತಿದೆ. ಜನ ಸಿನಿಮಾ ನೋಡಲು ಸಿನಿಮಾ ಮಂದಿರಗಳಿಗೆ ಹೋಗದೇ ಬದಲಾಗುತ್ತಿದ್ದಾರೆ. ವೀಡಿಯೋ, ಟಿ.ವಿ.ಗಳ ಮೊಬೈಲ್‌ಗಳ ಆಕರ್ಷಣೆ ಹೆಚ್ಚುತ್ತಿದೆ. ಹಳ್ಳಿಯ ಜನರೂ ಕೂಡ ತಮ್ಮಲ್ಲಿದ್ದ ಹಾಡು ಕುಣಿತಗಳನ್ನು ಮರೆತು ಆಧುನಿಕ ಮನರಂಜನೆಗಳತ್ತ ಆಕರ್ಷಿತರಾಗುತ್ತಿದ್ದಾರೆ. ನಗರ ಮತ್ತು ಗ್ರಾಮ ಎರಡೂ

ಕಡೆಗಣಿಸುತ್ತಿರುವ ಜನಪದರ ಅನೇಕ ಕ್ರಿಯಾತ್ಮಕ ಚುಟುವಟಿಕೆಗಳಲ್ಲಿ ಜೀವಂತಿಕೆ ನಶಿಸಿ ಹೋಗುವ ಕಾಲ ಬಂದಿದೆ. ಬದಲಾವಣೆಯ ಗಾಳಿ ಎಲ್ಲಾ ಕಡೆ ಬೀಸುತ್ತಿದೆ. ಜನಪದರ ಸಾಹಿತ್ಯ, ಕಲೆ, ಆಚಾರ, ವಿಚಾರಗಳೆಲ್ಲವೂ ಆಧುನಿಕ ಜೀವನಕ್ಕೆ ಅಸಂಗತವಾಗಿ ಕಾಣುತ್ತಿದೆ. ಆದರೆ ಜನಪದ ಸಂಸ್ಕೃತಿಯನ್ನು ಕಡೆಗಣಿಸುವುದರಿಂದ ನಮ್ಮ ಬಹುಪಾಲು ಜನರ ಬದುಕನ್ನು ಕಡೆಗಣಿಸಿದಂತಾಗುತ್ತದೆ. ಸಮಾಜದ ಜೀವಂತಿಕೆ ಇರುವುದು ಜನಪದ ಸಂಸ್ಕೃತಿಯಲ್ಲೇ. ನಮ್ಮ ಬದುಕಿನ ತಾಯಿ ಬೇರು ಗ್ರಾಮೀಣ ಸಂಸ್ಕೃತಿಯಲ್ಲೇ ಇದೆ. ಆದರೆ ಪರಂಪರೆಯಿಂದ ನಮಗೆ ಬಂದದ್ದೆಲ್ಲವನ್ನೂ ಅತ್ಯುತ್ತಮ ವರದಾನ ಎಂದು ಭಾವಿಸಬೇಕಿಲ್ಲ. ಅಭಿಮಾನದಿಂದ ನಮ್ಮ ವಿಮರ್ಶನ ಪ್ರಜ್ಞೆ ಕುರುಡಾಗಬೇಕಿಲ್ಲ. ಪರಂಪರೆಯಲ್ಲಿ ರೂಪುಗೊಂಡ ಅನೇಕ ಸಾಂಸ್ಕೃತಿಕ ವಿಚಾರಗಳನ್ನು ಒರೆಗೆ ಹಚ್ಚುವ ಕೆಲಸವನ್ನೂ ನಾವು ಮಾಡಬೇಕಾಗುತ್ತದೆ. ಈ ವಿಮರ್ಶೆಯ ಕೆಲಸದ ಪರಂಪರೆಯನ್ನು ಮತ್ತೆ ಅವಲೋಕಿಸುವುದರಿಂದ ಮಾತ್ರ ಸಾಧ್ಯವಾಗುತ್ತದೆ. ಜನಪದ ಸಂಸ್ಕೃತಿಯನ್ನು ಪರಿಚಯಿಸುವಾಗ ಅದರ ಮೇಲಾಗಿರುವ ಆಧುನಿಕತೆಯ ಪ್ರಭಾವ, ಅದರಿಂದಾದ ಪರಿವರ್ತನೆ ಇವುಗಳೆಲ್ಲವನ್ನೂ ವಸ್ತುನಿಷ್ಟವಾಗಿ ಗಮನಿಸಬೇಕಾಗಿದೆ. ಜನಪದ ಜೀವನ ಅನೇಕ ಆಘಾತಗಳಿಗೆ ಸಿಕ್ಕಿ ನಲುಗುತ್ತಿವೆ.

ಅಕ್ಷರಕ್ಕೆ ದೂರವಾದವರ ಕ್ರಿಯಾಶಕ್ತಿಯ ಸ್ವರೂಪವನ್ನು "ದೃಶ್ಯಮಾಧ್ಯಮ : ಜನಪದ ಕಲೆಗಳ ಆಧುನಿಕ ಪ್ರಕಿಯೆ" ಪರಿಚಯಿಸುತ್ತದೆ. ಬದಲಾಗುತ್ತಿರುವ ಜೀವನಾಭಿರುಚಿಗಳಿಗೆ ಜನಪದ ಪರಂಪರೆಯ ಕಲೆ, ಕುಣಿತಗಳನ್ನು ಪರಿಚಯಿಸುವ ಅಗತ್ಯವಿದೆ. ಬೆಂಗಳೂರಿನಿಂದ ಬೀದರ್‌ವರೆಗೆ ಹರಡಿಕೊಂಡಿರುವ ಕರ್ನಾಟಕದ ಹಿನ್ನೆಲೆಗೆ ಪ್ರಾಚೀನ ಇತಿಹಾಸವಿದೆ. ಮೌರ್ಯರ ಕಾಲದಿಂದ ಹಿಡಿದು, ಶಾತವಾಹನರು, ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕದಂಬರು, ಸಂಸ್ಥಾನಿಕರು ಹೊಯ್ಸಳರು ಮತ್ತು ಮೈಸೂರು ಅರಸರು ಹೀಗೆ ಅನೇಕ ರಾಜಮನೆತನಗಳು ಈ ನಾಡನ್ನು ಆಳಿವೆ. ಬ್ರಿಟಿಷರು ಭಾರತವನ್ನು ತಮ್ಮದನ್ನಾಗಿ ಮಾಡಿಕೊಂಡು ಆಳುವವರು ಯಾರಾದರೂ ಆಗಿರಲಿ ಬಾಳಿದ ನಮ್ಮ ಜನ ಮಾತ್ರ ಬಹಳ ಸಹನಶೀಲರು. ಸಾಧು ಸ್ವಭಾವದವರು. ಹೊರಗಿನಿಂದ ಬಂದವರನ್ನು ಪ್ರೀತಿಯಿಂದ ಸ್ವಾಗತಿಸಿ, ಅವರಲ್ಲಿರುವ ಉತ್ತಮಾಂಶಗಳನ್ನು ಗ್ರಹಿಸಿದರು. ತಮ್ಮಲ್ಲಿರುವ ಒಳ್ಳೆಯದನ್ನು ಧಾರೆಯೆರೆದರು.

ಸಮಾಜ ಬಹಳ ಹಿಂದಿನಿಂದಲೂ ಹಲವು ಕಾರಣಗಳಿಂದ ರೂಪಿಸಿಕೊಂಡಿರುವ ಪರಂಪರೆ ಪರವಿರೋಧದಿಂದ ಕೂಡಿ ರುವ ಸಂಸ್ಕೃತಿಯ ಒಟ್ಟು ಮೊತ್ತದ ಮಾನವೀಯ ಮೌಲ್ಯಗಳು, ಅಲ್ಲದೇ ಪ್ರಗತಿಪರ ದೃಷ್ಟಿಯಿಂದ ವಿವೇಚಿಸಿ ಒಳಿತನ್ನು ಆಯ್ದುಕೊಂಡು ಅದಕ್ಕೆ ಮೆರಗುಕೊಟ್ಟು ಮುಂದಿನ ತಲೆಮಾರಿಗೆ ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ

ಸಾಕಷ್ಟು ಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಆಳ ಮತ್ತು ವಿಸ್ತಾರಗಳನ್ನು ಅರ್ಥೈಸುವ ಪ್ರಯತ್ನ ಮುನ್ನೆಡೆಯುತ್ತಿವೆ. ಸತ್ಯವಾದುದೆಲ್ಲ ಸುಂದರ–ಸುಂದರ ವಾದುದೆಲ್ಲ ಸತ್ಯ, ಈ ಮಾತು ಅರ್ಥಪೂರ್ಣವಾಗಿ ನಮ್ಮ ಗ್ರಾಮೀಣರಿಗೆ ಸಲ್ಲುತ್ತದೆ. ಈ ಗ್ರಾಮೀಣರ ಬದುಕಿನ ಇನ್ನೊಂದು ಸುಂದರ ಹಾಗೂ ಸ್ವಾರಸ್ಯ ಪೂರ್ಣ ಕ್ಷೇತ್ರವೆಂದರೆ ಜನಪದ ಕಲೆಗಳದ್ದು. ರೈತರು ದುಡಿಯುವ ವರ್ಗದವರು ಹಾಗೂ ದೈವಭಕ್ತರಾದ ನಮ್ಮ ಜನಪದರು ದಿನದ ದಣಿವು ಕಳೆಯಲು ಹಾಡಿ ಕುಣಿದು ಕುಪ್ಪಳಿಸುತ್ತಾರೆ. ಹಿಂದೆ ಹಬ್ಬ ಹರಿದಿನ ಜಾತ್ರೆ ಉತ್ಸವಗಳಲ್ಲಿ, ಕಲೆಗಳ ಪ್ರದರ್ಶನದ ಜೊತೆಗೆ ವಾದ್ಯದೊಂದಿಗೆ, ಹಾಡಿ ತಮ್ಮ ಪ್ರತಿಭೆ, ಕೀರ್ತಿ ಹೆಚ್ಚಿಸಿಕೊಂಡು ಜನರ ನಡುವೆ, ಸತ್ಕಾರ ಸನ್ಮಾನ ಮಾಡಿಸಿಕೊಂಡು ಬಿರುದಾವಳಿ ಪಡೆದುಕೊಳ್ಳುತ್ತಿದ್ದರು. ಅಮಿತ ಪ್ರೋತ್ಸಾಹದಿಂದಲೇ ಅವರ ಕಲೆ ಹಸಿರಾಗಿ, ಚಿಗುರಿ ಹೆಮ್ಮರವಾಗಿ, ಇಂದು ಶತಶತಮಾನಗಳಿಂದ ಜನಪದರ, ಉಸಿರಿನೊಂದಿಗೆ ಬೆರೆತು ಬಂದಿರುತ್ತದೆ.

ಜನಸಾಮಾನ್ಯರಿಂದ ರಚನೆಯಾದ ಸಾಹಿತ್ಯವೇ ಜನಪದ ಸಾಹಿತ್ಯ. ಲಿಪಿ ಇಲ್ಲದ ಕಾಲದಲ್ಲಿ ಹುಟ್ಟಿಕೊಂಡ ಜನಪದವು ಬಾಯಿಂದ ಬಾಯಿಗೆ ಪ್ರಸಾರವಾಗಿ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಬಂದಿದೆ. ಜನಪದರು ತಮ್ಮ ಬದುಕಿನ ಕಷ್ಟ–ಕಾರ್ಪಣ್ಯಗಳನ್ನು, ನೋವು–ನಲಿವುಗಳನ್ನು ತಾವು ಮಾತನಾಡುವ ಸರಳ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ನಮ್ಮ ಜನಪದ ಸಾಹಿತ್ಯ ಸಮೂಹ ನಿಷ್ಟವೆಂದೆ ಹೇಳಬಹುದು. ದುಡಿಮೆಯ ಜೊತೆಯಲ್ಲಿಯೇ ಜನಪದ ಸಾಹಿತ್ಯ ಹುಟ್ಟಿರುವುದರಿಂದ ದುಡಿತದ ಲಯಗಳನ್ನು ಅನುಸರಿಸಿ ರಚಿತವಾಗಿದೆ. ಕೃಷಿಕ ಹೊಲದಲ್ಲಿ ಕೆಲಸ ಮಾಡುವಾಗ, ರಾಶಿ ಮಾಡುವಾಗ, ಹಂತಿ ಹೊಡೆಯುವಾಗ, ಹೆಣ್ಣು ಮಕ್ಕಳು ಸಸಿ ಹಚ್ಚುವಾಗ, ನೆಡುವಾಗ, ಕಳೆ ತೆಗೆಯುವಾಗ ಹಾಡನ್ನೂ ಕಟ್ಟಿ ಹಾಡಿದ್ದಾರೆ. ಮನೆಯಲ್ಲಿ ತಾಯಿ ಬೀಸುವಾಗ, ಕುಟ್ಟುವಾಗ, ತೊಟ್ಟಿಲು ತೂಗುತ್ತಾ, ಜೋಗುಳ ಹಾಡುವಾಗ ಜನಪದ ಗೀತೆಗಳು ರಚನೆಯಾಗಿವೆ. ಹೀಗೆಯೇ ಪೈರು ಕೈಗೆ ಬಂದಾಗ ಆರಾಧನೆಗಳು, ಅಚರಣೆಗಳು ಹುಟ್ಟಿಕೊಂಡವು. ಆರಾಧನೆ, ಆಚರಣೆಗಳ ಹಿನ್ನೆಲೆಯಲ್ಲಿ ಜನಪದ ಕಲೆಗಳು ಮೂಡಿಬಂದವು. ಆರಾಧನಾತ್ಮಕ, ಆಚರಣಾತ್ಮಕ, ಕಲೆಗಳಾದವು. ಬದುಕಿನ ಸಂದರ್ಭದಲ್ಲಿ ಹಿರಿಯರಿಂದ ಕಲಿತ ಜೀವನಾನುಭವ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿವೆ ಇದರ ಪೂರಕವಾಗಿ ಒಂದೊಂದು ಸಂಪ್ರದಾಯ ಆಚರಣೆಗಳು ಕಲೆಗಳು ರೂಪ ತಳೆದಿವೆ.

೧.೧ ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಪ್ರಸ್ತುತ ಸಂಶೋಧನೆಯ ವಿಷಯ "ದೃಶ್ಯಮಾಧ್ಯಮ: ಜನಪದ ಕಲೆಗಳ ಆಧುನಿಕ ಪ್ರಕ್ರಿಯೆ" ಈ ವಿಷಯವನ್ನು ಸ್ಪಷ್ಟೀಕರಿಸುವ ಅಗತ್ಯವಿದೆ. ಏಕೆಂದರೆ ಇಂದು ದೃಶ್ಯಮಾಧ್ಯಮ

ಒಂದು ಸಿಮೀತ ಅರ್ಥದಲ್ಲಿ ಬಳಕೆಯಾಗುತ್ತಿದೆ. ದೂರದರ್ಶನ, ಗಣಕಯಂತ್ರ, ಮೊದಲಾದ ದೃಶ್ಯ ಸಂವಹನ ಮಾಧ್ಯಮಗಳು ಬಂದ ಮೇಲೆ ವಿಷ್ಯುಯಲ್ ಮೀಡಿಯಾ ಎಂಬ ಅರ್ಥದಲ್ಲಿ ದೃಶ್ಯಮಾಧ್ಯಮದ ಪದ ಬಳಕೆಯಾಗುತ್ತಿದೆ ಸಿನಿಮಾ, ದೂರದರ್ಶನದಂತ ವಿಷ್ಯುಯಲ್ ಮೀಡಿಯಾಗಳು ಬಂದ ಮೇಲೆ ಜನಪದ ಕಲೆಗಳು ನಶಿಸಿ ಹೋಗುತ್ತಿವೆ. ಆದರೆ ಪ್ರಸ್ತುತ ಪ್ರಬಂಧದಲ್ಲಿ ದೃಶ್ಯಮಾಧ್ಯಮ ಎಂಬ ಪದವು ಹೆಚ್ಚು ವ್ಯಾಪಕ ಅರ್ಥದಲ್ಲಿ ಬಳಕೆಮಾಡಲಾಗಿದೆ. ಇಲ್ಲಿ ದೃಶ್ಯ ಎಂದರೆ ನೋಡುವ ಅಥವಾ ಪ್ರದರ್ಶನಾತ್ಮಕ ಎಂದರ್ಥ. ಜನಪದವು ಮೂಲತಃ ನೋಡುವ ಕಲೆ ಅಥವಾ ಪ್ರದರ್ಶನಾತ್ಮಕ ಕಲೆ • ಪ್ರಸ್ತುತ ಜಾಗತೀಕರಣದ ಸಂದರ್ಭದಲ್ಲಿ ಜಾನಪದದಂತಹ ಪ್ರದರ್ಶನಾತ್ಮಕ ಕಲೆಗಳು ಎದುರಿಸುತ್ತಿರುವ ಸವಾಲುಗಳನ್ನು ಅಲ್ಲದೇ ಪರಿಷ್ಕರಣೆಗೆ ಆಧುನೀಕರಣಗೊಳ್ಳಬೇಕಾದ ಬಗ್ಗೆ ಸಾಮಗ್ರಿಗಳನ್ನು ಅಳವಡಿಸಿದರೆ ಈ ಅಧ್ಯಯನವು ಸೂಕ್ತವಾಗುವ ಆಶಯದೊಂದಿಗೆ ಈ ವಿಷಯವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ದೇಸಿ ಸಂಸ್ಕೃತಿಗೆ ತನ್ನದೇ ಆದಂತಹ ಸ್ವರೂಪಗಳಿವೆ. ಪ್ರಾದೇಶಿಕತೆ, ಜನಾಂಗ, ಜಾತಿ, ವರ್ಣ, ಧರ್ಮ, ಭಾಷೆ, ಆಹಾರ–ಉಡುಪು ಹೀಗೆ ಸಾಂಸ್ಕೃತಿಕ ವೈವಿಧ್ಯತೆ ಇರುತ್ತದೆ. ಇದು ಇನ್ನೊಂದು ಸಂಸ್ಕೃತಿ ಯೊಂದಿಗೆ ಸಮೀಕರಣ ಆಗದೆ ಇರುವಂತದ್ದು. ಅದು ದೇಸಿ ಸಂಸ್ಕೃತಿಯಾಗಿ ಕಂಡು ಬರುತ್ತದೆ. ಇದನ್ನೇ ನಾವು ಜಾನಪದ, ಜನಪದ ಸಂಸ್ಕೃತಿಯಂತಲೂ ಕರೆದುಕೊಂಡು ಬಂದಿದ್ದೇವೆ. ಜನಪದವು ಶ್ರೀ ಸಾಮಾನ್ಯರ ಧರ್ಮ, ಜೀವನ–ಧರ್ಮವಾಗಿದೆ. ಇದು ಗ್ರಾಮ ಸಂಸ್ಕೃತಿಯನ್ನೂ ಪ್ರತಿನಿಧಿಸುತ್ತದೆ. ಗ್ರಾಮಗಳು ಜನಪದರು ನಗರಗಳತ್ತ ಮುಖ ಮಾಡಿದ್ದರ ಪರಿಣಾಮವಾಗಿ ನಿಧಾನವಾಗಿ ಜನಪದ ಕಲೆಗಳು ಅಳಿವಿನಂಚಿಗೆ ಬರತೊಡಗಿದವು. ನಾಗರೀಕರು ಯಾಂತ್ರಿಕ ಬದುಕಿನಿಂದ ಭಾವನಾತ್ಮಕ ಸಂಬಂಧಗಳನ್ನು ಕಳೆದುಕೊಂಡರು. ಆದರೆ ಮನುಷ್ಯನ ಭಾವನೆಗಳನ್ನೇ ಹಿಡಿದಿಡುವ ಜನಪದ ಪ್ರದರ್ಶನಾತ್ಮಕ ಕಲೆಗಳು ಕೂಡ ಜಾಗತೀಕರಣದ ಪ್ರಭಾವದಿಂದ ಮೂಲಭೂತ ತಾತ್ವಿಕತೆಯನ್ನೂ ಕಳೆದುಕೊಂಡವು. ಕೇವಲ ಮನರಂಜನೆ ಅಲ್ಲದೇ ಉದ್ಯಮವೆಂಬಂತೆ ಬಳಸಿಕೊಳ್ಳುತ್ತಿದ್ದಾರೆ. ಇಂದಿನ ಸಿನಿಮಾ, ಧಾರಾವಾಹಿಗಳು ಆಧುನಿಕ ಕ್ರೀಡೆಗಳು ಗ್ರಾಮೀಣ ಜನರ ಮನೋಭೂಮಿಕೆ ಯಲ್ಲಿ ಬೇರೂರಿವೆ. ಅವು ಪಾರಂಪರಿಕ ಕಲೆಗಳನ್ನು, ದೃಶ್ಯ ಮಾಧ್ಯಮಗಳನ್ನು ವಿಸ್ಮೃತಿಗೆ ತಳ್ಳುತ್ತಿದೆ. ಇದರಿಂದ ಕಲೆಗಳ ಜೊತೆ ಮನುಷ್ಯನ ಪಾರಂಪರಿಕ ಬದುಕಿನ ಚಾರಿತ್ರಿಕತೆಯ ವಿನಾಶಕ್ಕೆ ತುತ್ತಾಗುತ್ತಿವೆ. ಜನಪದವನ್ನು ಅಂದು–ಇಂದು–ಮುಂದು ಏಕೀಕರಣದ ಮೂಲಕ ಸ್ಥಾಯಿಗೊಳಿಸುವುದು. ಅನಕ್ಷರಸ್ಥರಿಂದ ಚೆನ್ನಾಗಿ ಬಳಕೆಯಾದ ಜಾನಪದ ಕಲೆಗಳನ್ನು ಜಾತ್ಯಾತೀತವಾಗಿ ಸಮನ್ವಯಗೊಳಿಸುವುದು. ಅಳಿವಿನ ಅಂಚಿನಲ್ಲಿರುವ ಈ ಜನಪದ ಕಲಾ ಪ್ರಕಾರಗಳನ್ನು ಉಜ್ಜೀವನ, ಉದ್ದೀಪನಗೊಳಿಸುವುದರೊಂದಿಗೆ ವ್ಯಾಪಕತೆಯನ್ನು ಉಂಟು ಮಾಡುವುದು. ಜಾತ್ಯಾತೀತ,

ಧರ್ಮಾತೀತ, ಮತಾತೀತ ಎಂಬುದು ಕಲೆಗಳಲ್ಲಿ ಮಾತ್ರ. ಅದರಲ್ಲಿ ಶ್ರೇಷ್ಠವಾದ ಜಾನಪದ ಕಲೆಯು ಆತ್ಮಾನಂದ ಮತ್ತು ಲೋಕಾನಂದವನ್ನು ನೀಡುತ್ತವೆ. ಅದ್ದರಿಂದ ಮನುಷ್ಯನ ಅಭಿವ್ಯಕ್ತಿಗೆ ಕಾರಣವಾದ ಜಾನಪದ ಕಲೆಯನ್ನು ದೃಶ್ಯ ಮಾಧ್ಯಮದಲ್ಲಿ ವ್ಯಾಪಕಗೊಳಿಸುವುದು ಈ ಮಹಾಪ್ರಬಂಧದ ಉದ್ದೇಶ.

ಜನಪದ ಕಲಾವಿದರೆಲ್ಲ ಕೂಲಿ ಮಾಡುತ್ತಾ, ತಮ್ಮ ಬದುಕನ್ನು ಕಳೆಯುತ್ತಿದ್ದಾರೆ. ಕಲೆಯಲ್ಲಿ ಮತ್ತು ದಿನದ ದುಡಿಮೆಯಲ್ಲಿ ಸಮತೋಲನ ಕಾಯ್ದು ಕೊಳ್ಳಲಾಗುವುದಿಲ್ಲ. ಹಾಗಾದರೆ ಕಲಿಯುವ ಆಸಕ್ತಿ ಇರುವವರು ಕಲಿಯಬೇಕು. ಕಲಿಕೆಯ ದಾರಿ, ದುಡಿಮೆಯ ದಾರಿಯಲ್ಲಿ ಸಮನ್ವಯತೆಯನ್ನು ಸಾಧಿಸಿ ಕಲೆಯನ್ನು ಊರ್ಜಿತಗೊಳಿಸಬೇಕಿದೆ. ಕೆಲವು ಕಲೆಗಳನ್ನು ಕೆಲವೇ ಸಮುದಾಯದವರು ಮಾತ್ರ ಮಾಡುತ್ತಾರೆ. ಪ್ರಸ್ತುತವಾಗಿ ಹೊಸ ತಲೆಮಾರಿನವರು ಮೂಲಕಲೆಯನ್ನು ಕಲಿತರೆ ಅಪಮಾನವೆಂದು ಭಾವಿಸುತ್ತಾರೆ. ಅದನ್ನು ಮುಂದುವರೆಸಿದರೆ ತಾವು ಕೀಳೆಂದು ತಿಳಿದುಕೊಂಡು ಮೂಲಕಲೆಯನ್ನು ಬಿಟ್ಟು ಬೇರೆ ವೃತ್ತಿಯ ಕಡೆ ವಾಲುತ್ತಿದ್ದಾರೆ. ಕೆಲವರಿಗೆ ಜನಪದ ಕಲೆಯನ್ನು ಕಲಿಯುವುದು ಬೇಡ. ಆಧುನಿಕತೆಯಲ್ಲಿ ಬೇರೆಯದನ್ನು ಕಲಿಯಬಹುದು ಎನ್ನುವ ಮನೋಭಾವ ಇದೆ. ತಲೆಮಾರುಗಳಿಂದ ಬಂದಿರುವ ಜನಪದ ಕಲೆಗಳು ಮಾರ್ಪಾಡಿನೊಂದಿಗೆ ಇಂದು ಜನಾಕರ್ಷಕವಾಗಿ ಬಿಂಬಿತವಾಗುತ್ತಿರುವ ಸತ್ಯವನ್ನು ಕಲಾವಿದರಿಗೆ ಮನಗಾಣಿಸುವ ಉದ್ದೇಶದಿಂದ ಪ್ರಬಂಧದಲ್ಲಿ ಮಾಹಿತಿಯನ್ನು ಅಡಕಗೊಳಿಸಲಾಗಿದೆ. ಜನಪದ ಕಲಾವಿದರು ಅನಕ್ಷರಸ್ಥರು. ಇವರು ತಲತಲಾಂತರದಿಂದ ಬಂದಿರುವ ಜನಪದ ಕಲೆಯನ್ನು ತಮ್ಮ ಮಕ್ಕಳು ಕಲಿತರೆ ನಮಗೂ ಅವಹೇಳನ ಮಾಡುತ್ತಾರೆ, ಎಂಬ ನೋವು ಕಲೆಯು ನಶಿಸುವುದಕ್ಕೆ ಕಾರಣವಾಗಿದೆ. ಅಂತಹವರನ್ನು ಗಮನಿಸಿ ಜನಪದ ಕಲೆ ಮತ್ತು ಜನಪದ ಕಲಾವಿದರ ಬೆಸುಗೆಯಾಗಿ, ಪುನಃ ಕಲೆಯನ್ನು ಈ ಪ್ರಬಂಧದಲ್ಲಿ ಅಳವಡಿಸಲಾಗಿದೆ. ಜನಪದ ಕಲೆಗಳನ್ನು ಶೈಕ್ಷಣಿಕವಾದ – ಸಾಮಾಜಿಕವಾದ ಅಧ್ಯಯನ ಕ್ಕೊಳಪಡಿಸುವಾಗ ಉದ್ದೇಶಗಳಾಚೆಗೂ ಇರುವ ಸಮಸ್ಯೆಗಳನ್ನು ಅನ್ವೇಷಿಸಿ, ಪರೀಕ್ಷಿಸಿ, ಪರಿಹರಿಸಿಕೊಂಡು ಅಧ್ಯಯನ ಮಾಡಲಾಗಿದೆ. ಈ ಸಂದರ್ಭದಲ್ಲಿ ಜನಪದ ಕಲೆಗಳನ್ನು ಉಳಿಸಿಕೊಳ್ಳುವುದು ಅಲ್ಲದೆ ದೃಶ್ಯಮಾಧ್ಯಮದಲ್ಲಿ ಅವುಗಳನ್ನು ಬಳಸಿಕೊಂಡು ತಳವರ್ಗದ ಜನಪದರಿಗೆ ಅದರ ಹರಹುಗಳನ್ನು ಗಮನಕ್ಕೆ ತಂದು ಅವರನ್ನು ಪ್ರಧಾನ ಭೂಮಿಕೆಗೆ ಒಡ್ಡುವುದು. ಜೊತೆಗೆ ಅದರಿಂದ ಪಡೆದ ಜ್ಞಾನವನ್ನು ದೃಶ್ಯ ಮಾಧ್ಯಮದ ಮೂಲಕ ಓರೆಗೆ ಹಚ್ಚುವುದು. ಈ ಹಿನ್ನೆಲೆಯಲ್ಲಿ ದೃಶ್ಯ ಮಾಧ್ಯಮದ ನೆಲೆಯಲ್ಲಿ ಜನಪದ ಕಲೆಗಳನ್ನು ಅಧ್ಯಯನ ಮಾಡಲಾಗಿದೆ.

ಜಾಗತೀಕರಣದ ಈ ಸಂಕ್ರಮಣ ಕಾಲಘಟ್ಟದಲ್ಲಿ ಇಡೀ ಸಾಂಸ್ಕೃತಿಕ ಜಗತ್ತಿನ ವೈವಿಧ್ಯತೆಯನ್ನು, ದೃಶ್ಯ ಮಾಧ್ಯಮಗಳು ಅಪೋಷನ ತೆಗೆದುಕೊಳ್ಳುತ್ತಿರುವ ಈ ಹೊತ್ತಲ್ಲಿ,

ಜನಪದದ ಸಾಂಪ್ರದಾಯಿಕ ಸವಾಲುಗಳ ಜೊತೆಯಲ್ಲಿ ಆಧುನಿಕ ಸವಾಲನ್ನು ಎದುರಿಸುವ ಸಂದಿಗ್ಧತೆಯಲ್ಲಿ ನಾವು ಬದುಕುತ್ತಿದ್ದೇವೆ. ಇನ್ನೊಂದೆಡೆ ಭಾರತೀಯ ಸಮಾಜದ ಜಾತಿ ವ್ಯವಸ್ಥೆ ಆರ್ಥಿಕತೆಯಲ್ಲಿ ಉಂಟಾಗಿರುವ ಪಲ್ಲಟಗಳು ಕೂಡ ನಮ್ಮ ಜನಪದ ಲೋಕವನ್ನು ಅಲ್ಲೋಲ-ಕಲ್ಲೋಲಗೊಳಿಸಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಒಂದೊಂದು ಜನಪದ ಪ್ರಕಾರ ಕಣ್ಮರೆ ಅಂದರೆ ಅದು ಕನ್ನಡ ಸಾಂಸ್ಕೃತಿಕ ಕಲ್ಪವೃಕ್ಷದ ಒಂದೊಂದು ಬೇರಿನ ವಿನಾಶವೆ ಸರಿ. ಈ ಪ್ರಕ್ರಿಯೆ ಹೀಗೆ ಮುಂದುವರೆದರೆ ಕನ್ನಡ ಸಾಂಸ್ಕೃತಿಕ ಕಲ್ಪವೃಕ್ಷದ ರೆಂಬೆ-ಕೊಂಬೆಗಳು ಒಂದೊಂದಾಗಿ ಮುರುಟಿ ಕೊಳ್ಳುವುದರಲ್ಲಿ ಸಂದೇಹವಿಲ್ಲ. ದೇಸಿ ಪರಂಪರೆಯನ್ನು ಕಳೆದುಕೊಳ್ಳುವುದು ಎಂದರೆ, ಕನ್ನಡತನವನ್ನು ಆ ಮೂಲಕ ಸಮುದಾಯವು, ತನ್ನನ್ನು ತಾನೇ ಆತ್ಮಹತ್ಯೆಗೆ ತೊಡಗಿಸಿಕೊಂಡಂತೆಯೇ ಸರಿ. ಈ ನಿಟ್ಟಿನಲ್ಲಿ ತಮ್ಮ ಆಡಳಿತ ಅನುಕೂಲಕ್ಕಾಗಿ, ಬ್ರಿಟಿಷರು ಜಾರಿಗೆ ತಂದ ಇಂಗ್ಲೀಷ್ ಶಿಕ್ಷಣ ಪದ್ಧತಿಯನ್ನು ಪರೋಕ್ಷವಾಗಿ ಸ್ವಾತಂತ್ರ್ಯ ಸಮರದ ಕಿಡಿಹಚ್ಚಲು ನೆರವಾದಂತೆ. ಈ ದೃಶ್ಯ ಮಾಧ್ಯಮದ ಸಾಧ್ಯತೆಗಳನ್ನು ನಾವು ನಮ್ಮ ದೇಸಿ ಪರಂಪರೆಯ, ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸಲು ಸಾಧ್ಯವೆ? ಎಂಬ ಹುಡುಕಾಟವು ಈ ಅಧ್ಯಯನದ ಮಹತ್ವದ ಉದ್ದೇಶವಾಗಿದೆ. ಕರ್ನಾಟಕದಲ್ಲಿ ಸುಮಾರು ೧೫೦ ಕ್ಕೂ ಹೆಚ್ಚು ಜನಪದ ಕಲೆಗಳಿವೆಯೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕ ಕಲೆಗಳು, ಗೇರು ಚನ್ನಬಸಪ್ಪ ಈ ಕಲೆಗಳು ಕನ್ನಡ ಸಂಸ್ಕೃತಿಯ ವಿಶಾಲ ಪರಂಪರೆಯಲ್ಲಿ ಯಾವಾಗ ಹುಟ್ಟಿಕೊಂಡವು? ಏಕೆ ಹುಟ್ಟಿಕೊಂಡವು. ಈ ಕಲೆಗಳ ಹುಟ್ಟಿನ ಹಿಂದಿನ ಉದ್ದೇಶವೇನು? ಈ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ, ಕರ್ನಾಟಕದ ದೇಸಿಧಾರೆಯ ಮಹತ್ವವನ್ನು ಅರಿಯವುದು ಕೂಡ ಈ ಪ್ರಬಂಧದ ಉದ್ದೇಶವಾಗಿದೆ. ಈ ಕಲೆಗಳ ಹುಟ್ಟಿನ ಹಿಂದೆ ಸಾಂಸ್ಕೃತಿಕ ಪರಿಸರ, ನಿಸರ್ಗದತ್ತ ಮನೋಭಾವ, ಧರ್ಮದ ಪ್ರಭಾವ, ಹಾಗೂ ಸಾಮಾಜಿಕ ರಾಜಕಾರಣವೂ ಅಡಗಿದೆ. ಈ ಎಲ್ಲವನ್ನೂ ಸೂಕ್ಷ್ಮ ದೃಷ್ಟಿಯಿಂದ ನೋಡುವ ಮೂಲಕ, ಕನ್ನಡನಾಡಿನ ಒಟ್ಟು ಸಾಂಸ್ಕೃತಿಕ ಚೌಕಟ್ಟಿನ ಜನಪದ ಕಲೆಗಳ ಸ್ಥಾನಮಾನವೇನು ಎಂಬುದನ್ನು ಅರಿಯುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

೨೦ರ ದಶಕದ ನಂತರದ ಜಾಗತಿಕ ವಿದ್ಯಮಾನಗಳು ಕಲಾ ಮಾಧ್ಯಮದ ಮೇಲೆ ಮಾಡಿರುವ ಪ್ರಭಾವ ವಿಶೇಷವಾಗಿರುತ್ತದೆ. ದೇಸೀಯತೆಯ ಮೇಲಿನ ಇದರ ಪ್ರಭಾವದ ಕುರಿತು ಮಿಶ್ರ ಪ್ರತಿಕ್ರಿಯೆಗಳಿವೆ. ಜಾಗತೀಕರಣ ಒಡ್ಡಿದ ಸವಾಲುಗಳನ್ನು ಸ್ವೀಕರಿಸಲು ನವ ಮಾಧ್ಯಮಗಳ ಮೊರೆ ಹೋಗಬೇಕಾದ ಹೊಸ ಆರ್ಥಿಕ-ಸಾಮಾಜಿಕ ಧೋರಣೆಗಳನ್ನು ಗಮನಿಸಲಾಗುವುದು. ಕಲಾವಿದರ ಸ್ಥಿತಿ-ಗತಿಯ ವಿಶ್ಲೇಷಣೆಯೂ ಇದರ ಒಂದು ಭಾಗ. ಸಾಂಸ್ಕೃತಿಕ ಜಗತ್ತಿನ ಮೇಲ್‌ಸ್ತರದಲ್ಲಿರುವ ಶಿಷ್ಟಕಲೆ ಮತ್ತು ಕಲಾವಿದರನ್ನು ಬಿಂಬಿಸುವ ರೀತಿಗೂ, ಕೆಳಸ್ತರದವರೆಂದೂ ಭಾವಿಸಲಾದ ಜನಪದ ಕಲಾವಿದರನ್ನು

ಬಿಂಬಿಸುವ ರೀತಿಗೂ ವ್ಯತ್ಯಾಸಗಳಿವೆ. ದೃಶ್ಯ ಮಾಧ್ಯಮಗಳು ಕೂಡ ಈ ಜಾನಪದ ಜಗತ್ತನ್ನು ನಿರ್ಲಕ್ಷಿಸಿದೆಯೇ ಅಥವಾ ತಮ್ಮ ಕಾರ್ಯಕ್ರಮಗಳ ಮೂಲಕ ನಿಜಕ್ಕೂ ಕಲೆ ಮತ್ತು ಕಲಾವಿದರನ್ನು ಗೌರವಿಸುತ್ತಿದೆಯೆ? ಹೀಗೆ ಎಲ್ಲಾ ಸಂಕೀರ್ಣ ಪ್ರಶ್ನೆಗಳನ್ನು ಇಟ್ಟುಕೊಂಡು ಸಮಷ್ಟೀಕರಣಗೊಳಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಸಮಕಾಲೀನ ಸಂದರ್ಭದಲ್ಲಿ ಜರುಗುವ ಸಾಮಾಜಿಕ ವಿದ್ಯಮಾನಗಳನ್ನು ಜನಪದ ಪ್ರದರ್ಶನ ಕಲೆಗಳ ಮೇಲಾಗುವ ಪರಿಣಾಮಗಳನ್ನು ಕ್ಷೇತ್ರಕಾರ್ಯದ ಮೂಲಕ ಗ್ರಹಿಸಲಾಗಿದೆ. ಇಂತಹ ಅಧ್ಯಯನವನ್ನು ಪ್ರದರ್ಶನಾತ್ಮಕ, ಸಾಮಾಜಿಕ, ಮಾನವಿಕ, ಸಮಾಜ ವಿಜ್ಞಾನಗಳ ಸೈದ್ಧಾಂತಿಕ ಚಿಂತನೆಗಳ ಮೂಲಕವಾಗಿ ಅಧ್ಯಯನವನ್ನು ಮಾಡಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಆಧುನಿಕ ಸಮಾಜದಲ್ಲಿ ಜನಪದ ಕಲೆಗಳು ಕ್ರಮೇಣ ಪರಿವರ್ತನೆಗೊಳ್ಳುತ್ತಾ ಕೆಲವು ನಶಿಸುತ್ತವೆ. ಪರಂಪರಾನುಗತವಾಗಿ ಪೋಷಿಸಿಕೊಂಡು ಬಂದ ಕಲೆಗಳು ಜೀವನಕ್ಕೆ ಹತ್ತಿರವಾದವುಗಳು. ಅಲ್ಲದೆ ಕರ್ನಾಟಕದಲ್ಲಿ ಕಲೆಗಳು ಪ್ರಾಂತೀಯವಾಗಿ ವೈವಿಧ್ಯತೆಯಿಂದ ಕೂಡಿವೆ. ದಕ್ಷಿಣ, ಉತ್ತರ, ಕರಾವಳಿ ಹೀಗೆ ಪ್ರಧಾನವಾಗಿ ಈ ಪ್ರಕಾರಗಳು ಕಂಡು ಬರುತ್ತವೆ. ಇಂತಹ ಪ್ರದೇಶಗಳಲ್ಲಿ ಕಂಡು ಬರುವ ಕಲೆಗಳು ನಾಡಿನ ವೈವಿಧ್ಯಮಯವಾದ ಸಂಸ್ಕೃತಿಯನ್ನು ಹಿಡಿದಿಟ್ಟಿದೆ. ಕಲಾವೈವಿಧ್ಯಮಯವಾದ ದೃಶ್ಯ ಮಾಧ್ಯಮದ ಮೂಲಕ ಬಹುತೇಕ ಅಭಿವ್ಯಕ್ತವಾಗುತ್ತವೆ. ಕರ್ನಾಟಕದಲ್ಲಿ ಅಲಕ್ಷಿತಕ್ಕೆ ಒಳಪಟ್ಟಿರುವ ಜನಪದ ಕಲೆಗಳನ್ನು ಆಯ್ದುಕೊಳ್ಳಲಾಗಿದೆ. ಹಟ್ಟಿಯಿಂದ–ಗ್ರಾಮ–ನಗರದವರೆಗೂ ಪಸರಿಸಿದ ಕಲೆಗಳ ಬಗ್ಗೆ ಅವಲೋಕನ ವೀಕ್ಷಣೆಯನ್ನು ಮಾಡುತ್ತಾ, ಸಮಕಾಲೀನ ಸಂದರ್ಭದಲ್ಲಿ ಅಧ್ಯಯಕ್ಕೆ ಒಳಪಡಿಸಲಾಗುವುದು. ಪೂಜಾಕುಣಿತ, ಕಿನ್ನರಿಜೋಗಿ ಮೇಳ, ಡೊಳ್ಳು ಕುಣಿತ, ತೊಗಲುಗೊಂಬೆ ಆಟ, ಉಮ್ಮತ್ತಾಟ, ಹಾಲಕ್ಕಿ ಸುಗ್ಗಿ ಕುಣಿತ, ಗಾರುಡಿಗೊಂಬೆ, ಪಟಾಕುಣಿತ, ಚೌಡಿಕೆ, ಹುಲಿವೇಷ, ಕಂಗೀಲು ಕುಣಿತ, ವೀರಗಾಸೆ, ಜಗ್ಗಲಿಗೆ, ದಟ್ಟಿ ಕುಣಿತ ಇಂತಹ ಕಲೆಗಳನ್ನು ವಿಶೇಷವಾಗಿ ಪ್ರಾದೇಶಿಕತೆಗೆ ಅನುಗುಣವಾಗಿ ಆಯ್ದುಕೊಂಡು ಆ ಪ್ರದೇಶದ ಸಾಂಸ್ಕೃತಿಕ ಹಿನ್ನಲೆಯೊಂದಿಗೆ ವಿಶ್ಲೇಷಣೆಗೆ ಮಾಡಲಾಗಿದೆ.

ಇಂದು ಮಾಧ್ಯಮ ಮತ್ತು ಕಲೆ ಬಹುಮುಖ್ಯವಾದ ಆಯಾಮವನ್ನು ಪಡೆಯುತ್ತಿದೆ. ಜಾಗತೀಕರಣದ ಈ ಹೊಸ್ತಲಲ್ಲಿ ನಿಂತು ನೋಡುವಾಗ ಅಧ್ಯಯನಕ್ಕೆ ಅಳವಡಿಸಲಾದ ಎರಡು ಪ್ರಶ್ನೆಗಳು ಮುಖ್ಯವಾಗುತ್ತವೆ. ಕಲಾಪ್ರಕಾರಗಳೆಂದರೆ ಪೂಜಾಕುಣಿತ, ಕಿನ್ನರಿಜೋಗಿ ಮೇಳ, ಡೊಳ್ಳು ಕುಣಿತ, ತೊಗಲುಗೊಂಬೆ ಆಟ, ಉಮ್ಮತ್ತಾಟ, ಹಾಲಕ್ಕಿ ಸುಗ್ಗಿ ಕುಣಿತ, ಗಾರುಡಿಗೊಂಬೆ, ಪಟಾಕುಣಿತ, ಚೌಡಿಕೆ, ಹುಲಿವೇಷ, ಕಂಗೀಲು ಕುಣಿತ, ವೀರಗಾಸೆ, ಜಗ್ಗಲಿಗೆ, ದಟ್ಟಿ ಕುಣಿತ ಹದಿನಾಲ್ಕು ಪ್ರಕಾರಗಳನ್ನು ಅಧ್ಯಯನಕ್ಕಾಗಿ ಇಲ್ಲಿ ಬಳಸಿಕೊಳ್ಳಲಾಗಿದೆ.

ಕಲೆ ಮತ್ತು ಕಲಾವಿದನ ಅನುಭವ ಬದುಕಿನ ಚಿತ್ರಣವನ್ನು ವಿಶ್ಲೇಷಿಸುವುದರ ಮೂಲಕ ಜಾಗತೀಕವಾಗಿ ಅದು ಪಡೆಯಬೇಕಾದ ಮಹತ್ವವನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಕರ್ನಾಟಕದಲ್ಲಿ ಸುಮಾರು ೧೫೦ ಕ್ಕೂ ಹೆಚ್ಚು ಕಲೆಗಳಿವೆ. ಅವುಗಳಲ್ಲಿ ಕೆಲವು ಆರಾಧನಾ ಕಲೆಗಳು, ಕೆಲವು ಫಲ ಸಮೃದ್ಧಿ ಆಚರಣೆಯ ಕಲೆಗಳು, ಕೆಲವು ರಂಗಭೂಮಿ ಕಲೆಗಳು ಮತ್ತು ಕೆಲವು ಮನರಂಜನಾ ಕಲೆಗಳು. ಈ ಎಲ್ಲಾ ಪ್ರಕಾರಗಳಲ್ಲಿ ಕಲೆಗಳು ಇವತ್ತಿಗೂ ಒಂದಲ್ಲ ಒಂದು ರೀತಿಯಲ್ಲಿ ಬಳಕೆಯಲ್ಲಿವೆ. ಆರಾಧನಾ ಉದ್ದೇಶದಿಂದ ಹುಟ್ಟಿಕೊಂಡ ಕಲೆಗಳು ಆ ಪರಿಸರವನ್ನು ಮೀರಿ ಇಂದು ವೇದಿಕೆಯ ಕಲೆಯಾಗಿ ಮಾರ್ಪಟ್ಟಿವೆ. ಫಲ ಸಮೃದ್ಧಿ ಆಚರಣೆ ಕಲೆಗಳು ಕೂಡ ಅಲ್ಲಲ್ಲಿ ವೇದಿಕೆಯ ಕಲೆಗಳಾಗಿವೆ. ಮನರಂಜನೆಗಾಗಿಯೇ ಹುಟ್ಟಿಕೊಂಡ ಕಲೆಗಳು ಹೊಸ-ಹೊಸ ರೂಪದಲ್ಲಿ ಭಿನ್ನ ಸ್ವರೂಪದ ಪ್ರದರ್ಶನಕ್ಕೆ ಬಳಕೆಯಾಗುತ್ತಿವೆ. ಕರಾವಳಿ ಯಕ್ಷಗಾನವನ್ನು ಹೊರತುಪಡಿಸಿ, ಇತರೆ ರಂಗಭೂಮಿ ಕಲೆಗಳಾದ ಗೊಂಬೆಯಾಟ, ಬಯಲಾಟ, ಸಣ್ಣಾಟ ಮತ್ತು ಕೃಷ್ಣ ಪಾರಿಜಾತ ಮುಂತಾದ ಕಲೆಗಳು ನಿರ್ಲಕ್ಷ್ಯಕ್ಕೆ ಒಳಗಾಗಿ ಅಳಿವಿನಂಚಿನಲ್ಲಿವೆ. ಆದರೆ ಇವತ್ತಿಗೂ ತಮ್ಮ ವೈವಿಧ್ಯತೆ ಅರ್ಥವಂತಿಕೆ ಹಾಗೂ ಗಟ್ಟಿಯಾದ ಪ್ರದರ್ಶನ ಗುಣದ ಕಾರಣವಾಗಿ ಕೆಲವು ಕಲೆಗಳು ಜನಮನ್ನಣೆ ಗಳಿಸಿವೆ. ಆಧುನಿಕ ಯುಗದಲ್ಲಿಯೂ ಧನಾತ್ಮಕವಾಗಿಯೋ ಅಥವಾ ಋಣಾತ್ಮಕವಾಗಿಯೋ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಇಂಥ ಪ್ರಾತಿನಿಧಿಕ ಹಾಗೂ ಸಾಂಸ್ಕೃತಿಕವಾಗಿ ಪ್ರಮುಖವಾದ ಕಲಾ ಪ್ರಕಾರಗಳನ್ನು ಆಯ್ದುಕೊಂಡು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ.

೧.೩ ಅಧ್ಯಯನದ ವಿಧಿ-ವಿಧಾನಗಳು

ಜನಪದ ಸಂಸ್ಕೃತಿಯು ಮೌಖಿಕ ಸ್ವರೂಪವನ್ನು ಪಡೆದುಕೊಂಡಿರುವುದರಿಂದ ಇಲ್ಲಿ ಕಂಡುಬರುವ ಆಚರಣೆಗಳೂ, ಕುಣಿತ ಸಂಪ್ರದಾಯಗಳೂ ಮತ್ತು ಪದ ಸಂಪ್ರದಾಯವು ಮೌಖಿಕ ಮಾಧ್ಯಮದಿಂದ ಅಭಿವ್ಯಕ್ತವಾಗುತ್ತವೆ. ಇಂತಹ ಸಾಂಸ್ಕೃತಿಕ ವೈವಿಧ್ಯಮಯಗಳೂ ಜನಪದರ ವಾಸ್ತವ ಬದುಕಿಗೆ ಸಹ ಸಂಬಂಧವನ್ನು ಹೊಂದಿರುತ್ತವೆ. ಇವು ಮೇಲು ನೋಟಕ್ಕೆ ವರ್ಣಮಯವಾಗಿ ಮತ್ತು ಮನರಂಜನೆ ಕೊಡುವಂತಹ ಕಲೆಗಳೆಂಬಂತೆ ತೋರ್ಪಡಿಸಿದರೂ, ಅವುಗಳ ಆಳದಲ್ಲಿ ಜನಪದರ ಸಾಮಾಜಿಕ ಬದುಕಾಗಿದೆ ಎಂಬುದನ್ನು ತಿಳಿಯಬೇಕು.

ಹೀಗೆ ವ್ಯಕ್ತಿ, ಸಮುದಾಯ ಮತ್ತು ಕಲೆಗಳನ್ನು ಒಂದನ್ನೊಂದು ಬೆಸೆದುಕೊಂಡಿವೆ. ಪ್ರದರ್ಶನ ಕಲೆಗಳ ಮೂಲಕ ಸಮುದಾಯವಾಗಲಿ, ವ್ಯಕ್ತಿಯಾಗಲಿ ತಮ್ಮ ಪರಂಪರೆಯನ್ನು (ಬಹುದೂರದಿಂದ ಸಾಗಿಸಿಕೊಂಡು ಬಂದಿರುತ್ತವೆ) ಕಟ್ಟಿಕೊಂಡಿರುತ್ತದೆ. ಈ ಪರಂಪರೆಗಳು ಪ್ರದರ್ಶನ ಕಲೆಗಳ ಮೂಲಕ ಭೂತ-ವರ್ತಮಾನಗಳನ್ನಾಗಿ ಬೆಸೆಯುವಂತೆ ಮಾಡುತ್ತದೆ.

ಆ ಮೂಲಕ ಜನಪದ ಸಮಾಜದಲ್ಲಿ ಹಳೆದು-ಹೊಸದು ಕೂಡಿಕೊಂಡಿರುತ್ತವೆ. ನಿತ್ಯ ಬದಲಾವಣೆಯಿಂದ ಸಮಾಜದಲ್ಲುಂಟಾಗುವ, ಪಲ್ಲಟಗಳು, ಬಿಕ್ಕಟ್ಟುಗಳನ್ನು ಪ್ರಸ್ತುತ ಸಂದರ್ಭದಲ್ಲಿ, ಅನ್ಯಶಿಸ್ತಿನ ಮಾರ್ಗದೊಂದಿಗೆ ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ಹಾಗಾಗಿಯೇ ಜನಪದ ದೃಶ್ಯಮಾಧ್ಯಮಗಳ ಅಧ್ಯಯನವು, ಕ್ಷೇತ್ರ ಕಾರ್ಯಕ್ಕೂ ಸಂಬಂಧಿಸಿದ್ದು, ಜೊತೆಗೆ ವಿಶ್ಲೇಷಣೆ ವಿಧಾನದ ಮಾರ್ಗವನ್ನು ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತ ಮಹಾಪ್ರಬಂಧಕ್ಕೆ ಒಳಪಡುವ ಕಲಾ ಪ್ರಕಾರಗಳ ವಿಸ್ತೃತ ಅಧ್ಯಯನ ಮತ್ತು ಉತ್ತರಾದಾಯಿತ್ವಕ್ಕೆ ಸಂಬಂಧಿಸಿದಂತೆ ಅಧ್ಯಯನದ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಸಂಬಂಧಿಸಿದ ಕೃತಿಗಳು, ಕಲಾವಿದರ ಆತ್ಮ ಚರಿತ್ರೆ, ಸಾಕ್ಷ್ಯಚಿತ್ರ, ವಕ್ತೃ ಮಾಹಿತಿ, ಹೀಗೆ ಲಭ್ಯ ಮಾಹಿತಿಗಳನ್ನು ಪ್ರಬಂಧದಲ್ಲಿ ಅಳವಡಿಸಲಾಗಿದೆ. ಪ್ರಾತ್ಯಕ್ಷಿಕೆ, ಕಲಾ ಪ್ರಕಾರಗಳ ಪ್ರದರ್ಶನಗಳನ್ನು ಅವಲೋಕಿಸಲಾಗಿದೆ. ಜನಪದ ಕಲೆಗಳ ಉಗಮ, ವಿಕಾಸದ ಕುರಿತು ಸ್ಥಳ, ಪರಿಶೀಲನೆ, ಕಲಾವಿದರ ಸಂದರ್ಶನ ಹಾಗೂ ಕಲಾ ಪ್ರಕಾರಗಳಲ್ಲಿ ಬಳಸಲ್ಪಡುವ ವೇಷಭೂಷಣಗಳ, ವಾದ್ಯ ಪರಿಕರಗಳ ಸಮಗ್ರ ಪರಿಚಯ ಮತ್ತು ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಯನದ ಕುರಿತಾದ ವಿಷಯನಿಷ್ಠ ಪ್ರಶ್ನಾವಳಿಗಳನ್ನು ಕಾಲಕಾಲಕ್ಕೆ ಸಂದರ್ಭೋಚಿತವಾಗಿ ಪ್ರಶ್ನಿಸುವುದರ ಮೂಲಕ ವಿಷಯದ ವಿಸ್ತಾರತೆಯನ್ನು, ವ್ಯಾಪಕತೆಯನ್ನು ಬಳಸಿಕೊಳ್ಳಲಾಗಿದೆ. ಜನಪದ ಕಲಾ ಪ್ರಕಾರಗಳ ಶ್ರೇಷ್ಠ ಕಲಾವಿದರಾದ ಪೂಜಾ ಕುಣಿತದ ಶಿವಣ್ಣ, ಹಾಲಕ್ಕಿ ಸುಗ್ಗಿ ಕುಣಿತದ ಗಣಪು ಗೌಡ, ಕಿನ್ನರಿಜೋಗಿ ಮೇಳದ ಗುಡ್ಡಪ್ಪ ಜೋಗಿ, ಡೊಳ್ಳು ಕುಣಿತ ಕಲಾವಿದರಾದ ಬಿ. ಟಾಕಪ್ಪ, ಉಮ್ಮತ್ತಾಟ ರಾಣಿ ಮಾಚಯ್ಯ, ತೊಗಲುಗೊಂಬೆ ಆಟ, ಕಲಾವಿದರಾದ ಬೆಳಗಲ್ಲು ವೀರಣ್ಣ, ಕಂಗೀಲು ಕುಣಿತ ಕಲಾವಿದ ಗುರುಚರಣ್ ಚೌಡಿಕೆ ಕಲಾವಿದೆ ರಾಧಾಬಾಯಿ ಮಾದರ, ಹುಲಿ ವೇಷದ ಜಯಣ್ಣ, ದಟ್ಟಿ ಕುಣಿತ ಕಲಾವಿದ ಸಿದ್ದಪ್ಪ ಕಮತಿ, ವೀರಗಾಸೆ ಮಹಿಳಾ ತಂಡದ ಕಲಾವಿದೆ ಶ್ವೇತಾ, ಪಟ ಕುಣಿತ ಕಲಾವಿದ ಹೊನ್ನೇಗೌಡ, ಮತ್ತು ಮಹಿಳಾ ತಂಡದ ಕಲಾವಿದೆ ಸುಕನ್ಯಾ, ಜಗ್ಗಲಿಗೆಯ ವೆಂಕಪ್ಪ ಪುಲಿ ಇವರುಗಳನ್ನು ಸಂದರ್ಶಿಸುವುದರ ಮೂಲಕ ಮತ್ತು ಪ್ರದರ್ಶನ ಅವಲೋಕಿಸುವುದರ ಮೂಲಕವಾಗಿ ಮತ್ತು ಒಟ್ಟಾರೆ ತಂಡದ ಸುಮಾರು ೨೫೦ ರಿಂದ ೩೦೦ ಕಲಾವಿದರಿಂದ ಕಲೆಗಳ ಅನೇಕ ಗುಣಾತ್ಮಕ ಅಂಶಗಳನ್ನು ಪರಾಮರ್ಶಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜಾನಪದ ಕಲಾ ಪ್ರಕಾರಗಳ ಪ್ರಾತ್ಯಕ್ಷಿಕೆ, ರಂಗ ಪ್ರದರ್ಶನ, ವೇಷಭೂಷಣ ಪದ್ಧತಿ, ಹಿಮ್ಮೇಳದ ವೈಭವ, ಸಮಯ ಮಿತಿ, ಉಪಯೋಗಿಸುವ ವಾದ್ಯ ಪರಿಕರ ಇವುಗಳನ್ನು ನೋಡಿ, ಕೇಳಿ, ಅವಲೋಕಿಸಲಾಗಿದೆ. ಮಹಾಪ್ರಬಂಧಕ್ಕೆ ಆಯ್ದ ಕಲೆಗಳ ಕಲಾವಿದರನ್ನು ಅವರವರ ಕ್ಷೇತ್ರದಲ್ಲಿ ತಮ್ಮ ತಂಡದೊಂದಿಗೆ ಸೇರುವಂತೆ ಸಂಘಟನೆ ಮಾಡಿ ಪ್ರತಿ ತಂಡದ ಎಲ್ಲಾ ಕಲಾವಿದರ ಜೊತೆ ಗುಂಪು ಚರ್ಚೆ ನಡೆಸಿ ಪಡೆದ ಉತ್ತಮ ಅಂಶಗಳನ್ನು

ಮಹಾಪ್ರಬಂಧದಲ್ಲಿ ಅಳವಡಿಸಲಾಗಿದೆ. ಪ್ರದರ್ಶನಾತ್ಮಕ, ಭೌಗೋಳಿಕ ಮತ್ತು ವಿಶ್ಲೇಷಣಾತ್ಮಕ ವಿಧಾನಗಳನ್ನು ಸಂಶೋಧನೆಗೆ ಅಳವಡಿಸಿಕೊಳ್ಳಲಾಗಿದೆ. ಪ್ರದರ್ಶನ ಕಲಾವಿದರ ಚಟುವಟಿಕೆಗಳನ್ನು ವಿಶ್ಲೇಷಣಾತ್ಮಕವಾಗಿ ವಿವರಿಸಲು ಪ್ರಶ್ನಾವಳಿ ಸಿದ್ಧಪಡಿಸಿ, ಸಂಶೋಧನೆಗೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಕಲೆಹಾಕಿಕೊಳ್ಳಲಾಗಿದೆ. ಜೊತೆಗೆ ಆಧುನಿಕ ಸಂಶೋಧನಾ ವಿಧಾನಗಳಾದ ಸಂದರ್ಶನ ಹಾಗೂ ಅನೌಪಚಾರಿಕ ಚರ್ಚೆಯ ವಿಧಾನಗಳನ್ನು ಅಳವಡಿಸಿಕೊಂಡು ವಸ್ತುನಿಷ್ಠವಾಗಿ ಮತ್ತು ವೈಜ್ಞಾನಿಕವಾಗಿ ದೃಶ್ಯಮಾಧ್ಯಮಕ್ಕೆ ಪೂರಕವಾಗಿ ಅಧ್ಯಯನ ಮಾಡಲಾಗುತ್ತದೆ. ಇದರಲ್ಲಿ ಜೀಶಂಪ, ಲಕ್ಕೆ, ಗೊ.ರು.ಚ, ಸಿ. ವೀರಣ್ಣ, ಮರಿಶಾಮಾಚಾರ್, ತೀ.ನಂ. ಶಂಕರನಾರಾಯಣ, ಕಾಳೇಗೌಡ ನಾಗಾವರ, ಶಿವರಾಮ ಕಾರಂತ ಡಾ. ಮಂಜುನಾಥ ಬೇವಿನಕಟ್ಟಿ, ಡಾ. ಹೆಬ್ಬಾಲೆ ಕೆ. ನಾಗೇಶ್ ಮುಂತಾದ ವಿದ್ವಾಂಸರು ರಚಿಸಿದ ಕೃತಿಗಳ ಆಧಾರವನ್ನು ಕೂಡ ಇಲ್ಲಿ ಪಡೆಯಲಾಗಿದೆ.

ಅಧ್ಯಯನಗಳ ವಿಶ್ಲೇಷಣೆಗೆ ಪ್ರಾಥಮಿಕ ಮತ್ತು ಅನುಷಂಗೀಕ ಮಾಹಿತಿಯನ್ನು ಅವಲಂಬಿಸಲಾಗಿದೆ. ಪ್ರಾಥಮಿಕ ಮಾಹಿತಿಯನ್ನು ಕ್ಷೇತ್ರ ಕಾರ್ಯಮಾಡಿ ಪ್ರಬಂಧಕ್ಕೆ ಅಳವಡಿಸಲಾಗಿದೆ. ಅಲ್ಲದೇ, ಕರ್ನಾಟಕದಾದ್ಯಂತ ಪ್ರಧಾನವಾಗಿರುವ ಸುಮಾರು ೧೪ ಕಲೆಗಳನ್ನು ಆಯ್ದುಕೊಳ್ಳಲಾಗಿದೆ. ಸುಮಾರು ೮೦ ರಿಂದ ೯೦ ಪುರುಷರು ಮತ್ತು ಸ್ತ್ರೀಯರ ಸಂದರ್ಶನದ ಮೂಲಕ ಅಧ್ಯಯನಕ್ಕೆ ಮಾಹಿತಿಯನ್ನು ಪಡೆದು ಅಳವಡಿಸಲಾಗಿದೆ. ಅಧ್ಯಯನಕ್ಕೆ ಅನುಕೂಲವಾದ ಅಗತ್ಯ ಅನುಷಂಗೀಕ ಮಾಹಿತಿಯನ್ನು ಆಯಾಯಾ ಗ್ರಾಮಗಳಲ್ಲಿ ದೊರೆತ ವೇಷಭೂಷಣಗಳು, ವಾದ್ಯ ಪರಿಕರಗಳು, ಆಕರ ಗ್ರಂಥಗಳು, ಬಿಡಿ ಲೇಖನಗಳು, ನಿಯತಕಾಲಿಕಗಳು ಇವುಗಳಿಂದ ಅನುಷಂಗೀಕ ಮಾಹಿತಿ ಪಡೆಯಲಾಗಿದೆ. ಇವುಗಳಿಗೆ ಮಾಹಿತಿಯನ್ನು ಒದಗಿಸಿದಂತ ಕಲಾ ಪ್ರಕಾರದ ಸಂಘಟನೆಗಳು ಇನ್ನೂ ಜೀವಂತವಾಗಿ ಸಕ್ರಿಯವಾಗಿ ಕಾರ್ಯನಿರತವಾಗಿದೆ. ಅಲ್ಲದೇ, ವಿವಿಧ ಸಮುದಾಯದ ಸ್ತ್ರೀ ಪುರುಷರು ಸದಸ್ಯರಾಗಿರುತ್ತಾರೆ. ಆದುದರಿಂದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಇವು ಕ್ರಿಯಾಶೀಲವಾಗಿವೆ. ಈ ಸಂಘಟನೆಗಳು ಸಮಾಜದ ಮುಖ್ಯ ಭಾಗವಾಗಿಯೂ ಕೂಡ ಕಾರ್ಯನಿರ್ವಹಿಸುತ್ತಿವೆ. ಸಮುದಾಯಗಳ ಧರ್ಮ, ಸಂಸ್ಕೃತಿ, ಭಾಷೆ ಬೇರೆಯಾಗಿದ್ದರೂ ಕೂಡ, ಜಾತ್ಯಾತೀತ ಮತ್ತು ಧರ್ಮಾಧಾರಿತವಾಗಿ ಸಮಾಜಗಳಲ್ಲಿ, ಇಂದು ಕೂಡ ಪ್ರದರ್ಶನ ಕಲೆಗಳನ್ನು ಏರ್ಪಡಿಸುತ್ತಾ, ಬರುವುದನ್ನು ನಾವು ನೋಡಬಹುದಾಗಿದೆ. ಆದುದರಿಂದ ವಿವಿಧ ಸಮುದಾಯದ ಮೇಲೆ ಸಕಾರಾತ್ಮಕವಾಗಿ, ಪರಿಣಾಮ ಬಿರುತ್ತದೆಂದು ಭಾವಿಸಬಹುದು. ಭೌಗೋಳಿಕ ಮತ್ತು ಪ್ರದರ್ಶನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಮಾಡಿ ಮಹಾ ಪ್ರಬಂಧಕ್ಕೆ ಅಳವಡಿಸಲಾಗಿದೆ.

ಅಧ್ಯಾಯ ಎರಡು

ದೃಶ್ಯಮಾಧ್ಯಮದ ವಿಕಾಸದ ಹಾದಿ

ಪ್ರಪಂಚದ ದೃಶ್ಯಮಾಧ್ಯಮದ ವಿವಿಧ ಕಾಲ, ದೇಶಗಳನ್ನು ಅಭ್ಯಾಸ ಮಾಡಲು ತೊಡಗುವ ಒಬ್ಬ ಸಂಶೋಧನಾ ವಿದ್ಯಾರ್ಥಿಗೆ ಮೊದಲು ಆಗುವ ಅನುಭವ ಕೂಡ ಒಂದು ವಿಸ್ಮಯವೇ. ಕಲೆ, ಸಾಹಿತ್ಯ, ಭಾಷೆ ಉದ್ದೇಶ ಸಂದರ್ಭ ಹೀಗೆ ಕಾಲಕೋಶವೊಂದರಲ್ಲಿ ಕೂತು ಓಡಾಡುವ ವಿಸ್ಮಯಕಾರಿ ಅನುಭವಗಳು–ಈ ದೃಶ್ಯಮಾಧ್ಯಮದ ಚಹರೆ. ಜಗತ್ತಿನ ದೃಶ್ಯಮಾಧ್ಯಮಕ್ಕೆ ಕಾಡುಮನುಷ್ಯನ ಜೀವನದ ವಿವಿಧ ಘಟ್ಟಗಳೇ ಸಾಕ್ಷಿ. ಭೂಮಿಗೆ ಆಕಾಶವೇ ಒಂದು ವಿಸ್ಮಯವಾದರೇ, ಆಕಾಶಕ್ಕೆ ಭೂಮಿಯ ಚಲನವಲನಗಳೇ ವಿಸ್ಮಯ. ಹೀಗಾಗಿ ದೃಶ್ಯಮಾಧ್ಯಮ ಭೂಮಿ, ಆಕಾಶ, ನಡುವೆ ಮನುಷ್ಯನ ಕಣ್ಣಿಗೆ ಕಂಡ ಒಂದು ವೈಜ್ಞಾನಿಕ ಅನ್ವೇಷಣೆ. ಪ್ರಕೃತಿಯ ಘಟನಾವಳಿಗಳು ಮನುಷ್ಯನ ಕಣ್ಣುಗಳಲ್ಲಿ ದೃಶ್ಯಗಳಾಗಿ ಚಲಿಸುತ್ತಾ, ಹಲವಾರು ಆಲೋಚನೆಗಳಿಗೆ, ಹಲವಾರು ಸಂಶೋಧನೆಗಳಿಗೆ ಕಾರಣವಾಯಿತು. ಪ್ರಪಂಚವೇ ಒಂದು ದೃಶ್ಯಮಾಧ್ಯಮ. ಜನಪದರು ಈಗಲೂ ಮಳೆಗಾಲದಲ್ಲಿ ಬರುವ ಗುಡುಗನ್ನು ಕೇಳಿಸಿಕೊಂಡು, ಅರ್ಜುನನು ರಥವನ್ನು ಓಡಿಸಿಕೊಂಡು ಬರುತ್ತಾನೆ. ಚಾಟಿಯಿಂದ ಕುದುರೆಗಳ ಬೆನ್ನಿಗೆ ಹೊಡೆಯುತ್ತಾನೆ. ಆ ಚಾಟಿಯ ತುದಿ ಮಿಂಚಾಗಿ ಭೂಮಿಗೆ ಅಪ್ಪಳಿಸುತ್ತದೆ ಎಂದು ಒಂದು ಕಥನವನ್ನೇ ಸೃಷ್ಟಿಸಿಬಿಡುತ್ತಾರೆ. ನಮ್ಮ ಜನಪದರು. ಬೆಳದಿಂಗಳ ರಾತ್ರಿ ಚಂದ್ರನನ್ನು ಕಂಡಾಗ ಅಲ್ಲಿ ಕಾಣುವ ಆಲದಮರದ ಆಕೃತಿಯು ಅಲ್ಲಿ ಮನುಷ್ಯ ಜೀವಿಸಲು ಸಾಧ್ಯ ಎಂಬುದು ಎಂದೋ ನಮ್ಮ ಜನಪದರಿಗೆ ತಿಳಿದಿದೆ. ಕಾಡು ಜೀವನದ ನೆಲೆಯಲ್ಲಿ ದೃಶ್ಯಮಾಧ್ಯಮದ ಕುರುಹುಗಳು ನಮಗೆ ಸಿಗಲಾರಂಭಿಸುತ್ತವೆ.

ಸಂಸ್ಕೃತ ಸಾಹಿತ್ಯದಲ್ಲಿ ದೃಶ್ಯಮಾಧ್ಯಮಕ್ಕೆ ಪೂರಕವಾಗಿ ಮೌಲ್ಯಯುತವಾದ ಸಾಮಗ್ರಿಗಳು ದೊರೆಯುತ್ತವೆ. ಕಾವ್ಯ, ಮಹಾಕಾವ್ಯ, ಪುರಾಣ, ಸ್ಮಾರಕಗಳ ಮೂಲಕ ತುಂಬಾ ಪ್ರಾಚೀನವಾದ ಪರಂಪರೆ ದೃಶ್ಯ ಮಾಧ್ಯಮಕ್ಕೆ ಇದೇ ಬೆಳಕು ಚೆಲ್ಲುವ ಅನೇಕ ಗ್ರಂಥಗಳೂ ಕೂಡಾ ಸಿಗುತ್ತವೆ. ಅವುಗಳೆಂದರೆ ತಂತ್ರ, ಮಂತ್ರ, ಆಗಮ, ವೇದ, ಉಪನಿಷತ್ತು, ಗೃಹಸೂತ್ರ, ಧರ್ಮಶಾಸ್ತ್ರ, ಅರ್ಥಶಾಸ್ತ್ರ, ಪಂಚರಾತ್ರ, ಪ್ರಥಿಮಾ ವಿಜ್ಞಾನ ಹೀಗೆ ಬೇರೆ ಬಾಕಿ ವಿಷಯಗಳ ಪ್ರಾಚೀನ ಮತ್ತು ಮಧ್ಯಕಾಲೀನ ಗ್ರಂಥಗಳಲ್ಲಿ ದೃಶ್ಯಮಾಧ್ಯಮಕ್ಕೆ ಪೂರಕವಾದ ಸಾಮಾಗ್ರಿಗಳು ಹೇರಳವಾಗಿ ದೊರೆಯುತ್ತವೆ. ಮನುಷ್ಯನ ಬದುಕಿಗೆ ಪೂರಕವಾಗಿರುತ್ತವೆ. ಆದುದರಿಂದ ದೃಶ್ಯ ಮಾಧ್ಯಮ ಮಾನವನ ಬದುಕಿನ ಜೀವನ್ಮುಖತೆಯನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಮೌಲ್ಯವನ್ನು ಹೊಂದಿದೆ. ಅಲ್ಲದೆ ಸರ್ವಧರ್ಮ ಸಮನ್ವಯ ತತ್ವಗಳ ಪ್ರಚಾರಕ್ಕಾಗಿ, ಬದುಕಿನ ದರ್ಶನಕ್ಕೆ ಶಿಕ್ಷಣದಲ್ಲಿ ಜ್ಞಾನ, ವಿಜ್ಞಾನ, ತಂತ್ರಜ್ಞಾನಕ್ಕಿಂತಲೂ, ದೃಶ್ಯಮಾಧ್ಯಮದ ಪಾತ್ರ ವರ್ತಮಾನಕಾಲದಲ್ಲಿ ತುಂಬಾ ಅವಶ್ಯಕತೆಯಿದೆ. ತಳವರ್ಗದವರಿಗೂ ಕೂಡಾ ತುಂಬಾ ಸುಲಭವಾಗಿ ಅನುಭವಜನ್ಯವಾಗಿದೆ. ಇದು ದೃಶ್ಯಮಾಧ್ಯಮಕ್ಕೆ ಭಾಷೆ, ದೇಶ, ಕಾಲ, ಬಣ್ಣ, ಇವ್ಯಾವುದಕ್ಕೂ ದೃಶ್ಯದಲ್ಲಿ ಪರಿಮಿತಿ ಇಲ್ಲ. ಹಾಗಾಗಿ ದೃಶ್ಯಮಾಧ್ಯಮವು ದೇಶ-ವಿದೇಶಗಳಲ್ಲಿ ಕೂಡಾ ಒಂದು ಭಾಷಾ ನೆಲೆಯಲ್ಲಿ ಪರಿಗಣಿಸಲಾಗುತ್ತಿದೆ. ಆದುದರಿಂದ ಇವೆಲ್ಲಾ ಹೂರಣಗಳು ಸೇರಿ ದೃಶ್ಯಮಾಧ್ಯಮವಾಗಿದೆ. ಹದಿನೇಳು ಸಾವಿರ ವರ್ಷಗಳ ಹಿಂದೆ ರಚಿತಗೊಂಡ ರಾಮಾಯಣ, ಮಹಾಭಾರತ ಕಾಲದಲ್ಲಿ ಈ ದೃಶ್ಯಮಾಧ್ಯಮ ನಮ್ಮ ಜನಪದರ ಕಣ್ಣಿನಲ್ಲಿ ಇನ್ನಷ್ಟು ಬೆಳವಣಿಗೆಯನ್ನು ಪಡೆಯಿತು. ನೂರಾರು ವರ್ಷಗಳ ಕಾಲ ಈ ಎರಡು ಕಾವ್ಯಗಳು ಜನಪದರ ಕಣ್ಣು ಮತ್ತು ನಾಲಗೆಯ ಮೇಲೆ ಸಾಕಷ್ಟು ವಿಸ್ತಾರಗೊಂಡವು. ಜನಪದರ ಕಣ್ಣುಗಳಲ್ಲಿ ಈ ಎರಡು ಕಾವ್ಯಗಳು ಮೊದಲು ದೃಶ್ಯಗಳಾಗಿ ಮೂಡುತ್ತಾ, ಆನಂತರ ಮೌಖಿಕ ಕಥನಕಗಳಾಗಿ ರೂಪುಗೊಂಡವು. ಈ ಎರಡು ಕಾವ್ಯಗಳು ಜನಪದರು ಕಟ್ಟಿಕೊಡುವ ದೃಶ್ಯಗಳು, ಆನಂತರ ಬೃಹತ್ ಕಥನಗಳಾಗಿ ಬೆಳೆದು ನಿಂತವು. ಸೀತೆಯನ್ನು ಅಪಹರಿಸಿದ ರಾವಣ ತನ್ನ ಪುಷ್ಪಕ ವಿಮಾನದಲ್ಲಿ ಎಳೆದೊಯ್ಯುತ್ತಾನೆ. ಜಟಾಯು ಆಕಾಶದಲ್ಲಿ ರಾವಣನ ಜೊತೆ ಹೋರಾಟ ಮಾಡುತ್ತದೆ. ಆಕಾಶದಲ್ಲಿ ಇದ್ದಕಿದ್ದಂತೆ ಗೋಚರಿಸುವ ರಾಕ್ಷಸರು, ರಾವಣನ ತಮ್ಮ ವಿಭೀಷಣ ಆಕಾಶ ಮಾರ್ಗದಲ್ಲಿ ಬಂದು ರಾಮನ ಜೊತೆ ಸೇರಿಕೊಳ್ಳುವುದು. ಹೀಗೆ ನಮ್ಮ ಜನಪದರ ಕನಸು ಮತ್ತು ಕಥನಕಗಳಲ್ಲಿ ದೃಶ್ಯಮಾಧ್ಯಮದ ಕುರುಹುಗಳು ಅಪಾರವಾಗಿ ಕಾಣುತ್ತೇವೆ. ಮಹಾಭಾರತದಲ್ಲೂ ಈ ದೃಶ್ಯಮಾಧ್ಯಮದ ಕುರುಹುಗಳು ಅಪಾರವಾಗಿ ಕಾಣಬಹುದಾಗಿದೆ. ಅರ್ಜುನ, ಕರ್ಣ, ಇವರಿಬ್ಬರು ಆಕಾಶಕ್ಕೆ ಬಾಣಗಳನ್ನು ಬಿಟ್ಟು ಕತ್ತಲು, ಬೆಳಕನ್ನು ಸೃಷ್ಟಿಸುವುದು, ದ್ರೋಣಾ ಚಾರ್ಯರ ಬಳಿ ಬಿಲ್ಲು ವಿದ್ಯೆ ಕಲಿಯುವ ಸಂದರ್ಭದಲ್ಲಿ, ಕೌರವರು ಭೀಮನಿಗೆ ವಿಷದ

ಲಾಡುಗಳನ್ನು ತಿನ್ನಿಸಿ ಸರೋವರಕ್ಕೆ ತಳ್ಳುವ ದೃಶ್ಯ, ಇವುಗಳೆಲ್ಲ ನಮ್ಮ ಜನಪದರ ಕಣ್ಣಿಗೆ ದೃಶ್ಯ ಮಾಧ್ಯಮದ ಕುರುಹುಗಳೇ.

ಸಂಸ್ಕೃತ ನಾಟಕಗಳಲ್ಲೂ ಕೂಡಾ ನಾವು ದೃಶ್ಯಮಾಧ್ಯಮವನ್ನು ಕಾಣಬಹುದಾಗಿದೆ. ಉದಾಹರಣೆಗೆ "ಧೂತ ವಾಕ್ಯದಲ್ಲಿ ವಾಸುದೇವನು ಪಾಂಡವರ ಧೂತನಾಗಿ, ಧುರ್ಯೋದನನ ಸಭೆಗೆ ಬರುತ್ತಾನೆ. ದುರ್ಯೋಧನನಿಗೆ ಕೃಷ್ಣನನ್ನು ಎದುರುಗೊಳ್ಳಲು ಇಷ್ಟವಿಲ್ಲ, ಆದ್ದರಿಂದ ದ್ರೌಪದಿಯ ಮಾನಭಂಗದ ಚಿತ್ರದ ದೃಶ್ಯವನ್ನು ಹರಡಿಕೊಂಡು ಅದರಲ್ಲಿ ಮಗ್ನನಾಗಿರುವಂತೆ ನಟಿಸುತ್ತಾನೆ. ಒಳಗೆ ಬಂದ ಕೃಷ್ಣ ಆ ದೃಶ್ಯವನ್ನು ನೋಡಿ ತಮ್ಮ ದ್ವೇಷ ಬಗ್ಗೆ ತಾವೇ ಹೊಗಳಿಕೊಳ್ಳುವುದನ್ನು ಹೀಯಾಳಿಸಿ ಪಟ ದೃಶ್ಯವನ್ನು ತೆಗೆದು ಒಳಗಿಡಲು ತಿಳಿಸುತ್ತಾನೆ. ಶಕ್ರನು ಬ್ರಾಹ್ಮಣ ರೂಪದಲ್ಲಿ ಬಂದು ಕರ್ಣನನ್ನು ಬೇಡಿದಾಗ ಬ್ರಾಹ್ಮಣನ ಧೀರ ಮಧುರ ಸ್ವರವನ್ನು ಕೇಳಿದ ಕರ್ಣನ ಕುದುರೆಗಳು ಕಿವಿ ಎತ್ತಿ, ಎವೆ ಇಕ್ಕದೆ ಕೊರಳ ಕೊಂಕಿಸಿ, ಅಂಗಗಳ ವಶದಪ್ಪಿ ಚಿತ್ರದಲ್ಲಿ ಬರೆದಂತೆ ನಿಂತುಕೊಂಡವು."[೧] ಎಂಬ ದೃಶ್ಯಮಾಧ್ಯಮದ ಕಲ್ಪನೆಯನ್ನು ನೀಡುವ ಕವಿಗಳು ಹಿಂದೆ ಇದ್ದರು ಎಂಬುವುದಕ್ಕೆ ನಾಟಕಗಳೇ ಸಾಕ್ಷಿಯಾಗಿವೆ. ಕವಿ ಕಾಳಿದಾಸ ತನ್ನ ನಾಟಕಗಳಲ್ಲಿ ಅರಮನೆ, ನಾಟ್ಯಗೃಹ ಬಗ್ಗೆ ದೃಶ್ಯಗಳ ವರ್ಣನೆ ಮಾಡಿರುವಷ್ಟು ಇನ್ಯಾರು ಮಾಡಿರಲಾರರು. ಮೇಘಧೂತ ನಾಟಕದಲ್ಲಿ ಬರುವ ಯಕ್ಷ ತನ್ನ ಮನೆಯ ಗುರುತನ್ನು ಮೇಘಕ್ಕೆ ಹೇಳುವಾಗ, ಮನೆಯ ಮುಂದಿರುವ ದೃಶ್ಯಗಳ ಬಗ್ಗೆ ಹೇಳುತ್ತಾನೆ. ಇಲ್ಲಿ ಕಾಳಿದಾಸ ದೃಶ್ಯಗಳನ್ನು ವರ್ಣಿಸಿರುವ ರೀತಿ ಸಹೃದಯ ಓದುಗರಿಗೆ ಯಕ್ಷನ ಮನೆಯ ಮುಂದೆಯೇ ನಾವಿದ್ದೇವೆ ಎನ್ನುವಂತೆ ಬಾಸವಾಗುತ್ತದೆ. ಇದು ನಾಟಕದಲ್ಲೇ ದೃಶ್ಯವನ್ನು ಅಳವಡಿಸುವ ಕಾಳಿದಾಸನ ಕಲ್ಪನೆ ಅನನ್ಯವಾದದ್ದು.

ಅಲ್ಲಿ ಬರುವ ಕಾಲ್ಪನಿಕ ವ್ಯಕ್ತಿಗಳೆಲ್ಲರೂ, ನಿಜವಾದ ವ್ಯಕ್ತಿಗಳಂತೆಯೇ ವ್ಯವಹರಿಸುತ್ತಾರೆ. ಕಾವ್ಯಗಳಲ್ಲಿ ದೊರೆಯುವ ವಿವರಗಳ ಮೇಲಿಂದ ಸಾಧನ ಸಾಮಗ್ರಿಗಳ, ವರ್ಣನೆಯ ಮೇಲಿಂದ ದೃಶ್ಯವನ್ನು ಸೆರೆಹಿಡಿಯುವವನು, ಉತ್ತಮ ತರದ ದೃಶ್ಯವನ್ನು ತಯಾರಿಸಬೇಕಾದರೆ ಆತನಲ್ಲಿರಬೇಕಾದ ಯೋಗ್ಯತೆ ಧ್ಯಾನ, ಸಮಾಧಿ, ಕಲ್ಪನಾ ವೈಖರಿ, ನಿರೀಕ್ಷಣ ಶಕ್ತಿ, ವರ್ಣ ವಿನ್ಯಾಸ ಇವುಗಳ ಮೇಲಿಂದ ಹಿಂದೂಸ್ಥಾನದ ಪ್ರಾಚೀನ ದೃಶ್ಯಕಾರರು ಮಾನವ ಹೃದಯದ ಭಿನ್ನ ಭಾವನೆಗಳನ್ನು, ರೂಪದ ಸೌಂದರ್ಯ ಸಹಜತೆಗಳನ್ನು, ಕಲ್ಪನೆಯ ವಿಲಾಸ ವೈಚಿತ್ರ್ಯಗಳನ್ನು, ಯಾವ ಬಗೆಯಲ್ಲಿ ಸೆರೆಹಿಡಿಯುತ್ತಿದ್ದರೆಂಬುದರ ಕಲ್ಪನೆ, ನಮಗೆ ತುಸುಮಟ್ಟಿಗಾದರೂ ಆಗಬಹುದು. ಕಲೆಯೊಂದು ದೃಶ್ಯ ಮಾಧ್ಯಮವಾಗಿ ರೂಪು ತಳೆದು ಪ್ರಪಂಚಾದ್ಯಂತ ಜನರಿಗೆ ಕಲೆಯ ರೂಪದಲ್ಲಿ ಮೋಡಿ ಮಾಡಿತು.

ದೃಶ್ಯಮಾಧ್ಯಮದ ಚರಿತ್ರೆಯ ಕುರುಹುಗಳು ಈ ಎರಡು ಕಾವ್ಯಗಳು. ಇದರಲ್ಲಿ ಬರುವ ಮಾಹಿತಿಗಳು, ಸಂದರ್ಭಗಳು ಮತ್ತೊಂದು ಮೌಖಿಕ ಕಾವ್ಯಕ್ಕಿಲ್ಲ. ಇವತ್ತಿನ ಆಧುನಿಕ ದೃಶ್ಯಮಾಹಿತಿಗಳ ಎಲ್ಲಾ ಕುರುಹುಗಳು ನಮ್ಮ ಜನಪದ ಕಥನಕಗಳಲ್ಲಿ ಕಂಡು ಬರುತ್ತವೆ. ಕಾಡುವಾಸಿಗಳಲ್ಲಿ ವೈಜ್ಞಾನಿಕ ವಿಚಾರಧಾರೆಗಳು ಋಂದುವರಿದುಕೊಂಡು ಬರಲಾಗಿದೆ. ಮನುಷ್ಯನ ಬದುಕು ವಿಸ್ತಾರಗೊಂಡಂತೆಲ್ಲಾ ಅವನ ಆಲೋಚನೆಗಳು ಅನ್ವೇಷಣೆಗಳು ಹೆಚ್ಚುತ್ತಾ ಬಂದಿದೆ. ತಮ್ಮ ಬದುಕಿನ ಅನುಭವಗಳನ್ನು ಕಥನಕಗಳನ್ನಾಗಿ ರೂಪಿಸುತ್ತಾ, ಮನಸ್ಸಿಗೆ ಆ ಕಥನಕಗಳಿಗೆ ದೃಶ್ಯಗಳನ್ನು ಕಟ್ಟಿಕೊಡುತ್ತಾ, ಮನಸ್ಸಿಗೆ ನೆಮ್ಮದಿಯನ್ನು ತುಂಬಿಕೊಳ್ಳುವ ಪರಿ ಆದಿಮ ಪರಂಪರೆಯಿಂದಲೂ ಮುಂದುವರಿದುಕೊಂಡು ಬರಲಾಗಿದೆ. ಮನರಂಜನೆಗಾಗಿ ರೂಪುಗೊಂಡ ಈ ದೃಶ್ಯಮಾಧ್ಯಮ ಹಲವಾರು ಮಾರ್ಪಾಡುಗಳನ್ನು ಹೊಂದುತ್ತಾ, ಬೆಳೆದು ಬಂದಿವೆ. ಇಂದು ಇವುಗಳು ನಿರ್ವಹಿಸುವ ಪಾತ್ರ ಅಪಾರವಾದುದು. ಮನುಷ್ಯನ ಬದುಕಿನ ಸುತ್ತ ಆವರಿಸಿಕೊಂಡು ಬಿಟ್ಟಿವೆ. ದಿನ ಬೆಳಗ್ಗೆ ಪ್ರಪಂಚದ ಮೇಲೆ ಇವುಗಳ ದೊಡ್ಡ ಪ್ರಮಾಣದ ಪರಿಣಾಮಗಳನ್ನು ಬೀರುತ್ತವೆ. ಇನ್ನು ವೇದಗಳ ಕಾಲದಲ್ಲಿ ಋಷಿಮುನಿಗಳು ತಮ್ಮ ದಿವ್ಯದೃಷ್ಟಿಯೊಳಗೆ ಎಲ್ಲವನ್ನೂ ನೋಡುತ್ತಿದ್ದರು. ಅಹಲ್ಯೆಯನ್ನು ಮೋಹಿಸಲು ಬಂದು ಇಂದ್ರ ಗೌತಮ ಮಹರ್ಷಿಯ ವೇಷವನ್ನು ತೊಡುತ್ತಾನೆ. ಆಗ ಮಹರ್ಷಿಯು ತನ್ನ ಮಾಯಾಜಾಲದಿಂದ ಇಂದ್ರನ ಕಪಟವನ್ನು ಕಂಡು ಶಾಪವನ್ನು ನೀಡುತ್ತಾನೆ. ಇಂತಹ ಸನ್ನಿವೇಷಗಳು ಪುರಾಣಗಳಲ್ಲಿ ಕಂಡು ಬರುತ್ತವೆ. ಪುರಾಣಮೂಲ ಕಥನಕಗಳಲ್ಲಿ ಕಟ್ಟಿಕೊಡುವ ದೃಶ್ಯಗಳು ಇಂದಿಗೂ ಆಧುನಿಕ ಮನುಷ್ಯನನ್ನು ಆಕರ್ಷಿಸುತ್ತವೆ. ಅದರಲ್ಲೂ ಧಾರ್ಮಿಕ ಕಾರ್ಯಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಇಲ್ಲಿ ಇನ್ನೊಂದು ವಿಚಾರವೆಂದರೆ ಮೊದಲು ಆದಿಮಾನವನು ದೃಶ್ಯಗಳನ್ನು ಕಂಡು, ಆನಂತರ ಆ ದೃಶ್ಯಗಳನ್ನು ಚಿತ್ರಗಳನ್ನಾಗಿ ಚಿತ್ರಿಸಿರಬೇಕು. ಹೀಗಾಗಿ ದೃಶ್ಯಮಾಧ್ಯಮ ಎಲ್ಲಾ ಕಲೆಗಳಿಗೆ ಮೂಲ ಬುನಾದಿಯಾಗಿದೆ. ಜಗತ್ತಿನ ಯಾವ ದೇಶಗಳಲ್ಲಿ ನೋಡಿದರೂ ಮೊದಲು ದೃಶ್ಯಮಾಧ್ಯಮ, ಆನಂತರ ಚಿತ್ರಕಲೆ, ಶಿಲ್ಪಕಲೆಗಳು ಬೆಳೆದು ಬಂದಂತವು. ಹೀಗೆ ಅಪಾರಜ್ಞಾನದೊಂದಿಗೆ ಬದುಕುತ್ತಿದ್ದ ಪ್ರತಿಯೊಂದು ಸಮುದಾಯಗಳು, ತಮ್ಮ ಸಮುದಾಯಗಳ ಚೌಕಟ್ಟಿನೊಳಗೆ ಮೊದಲು ಕಥನಕಗಳನ್ನು ಕಟ್ಟಿ ಆನಂತರ ಆ ದೃಶ್ಯಗಳನ್ನು ಕಲ್ಲು, ಬಂಡೆ, ಮರ, ಗಿಡಗಳ ಮೇಲೆ ಮೂಡಿಸುತ್ತಾ, ಆನಂತರ ಸತ್ತ ಪ್ರಾಣಿಯ ಚರ್ಮದ ಮೇಲೂ, ತಮ್ಮ ಬದುಕಿನ ಕಥನಕಗಳ ದೃಶ್ಯಗಳನ್ನು, ಆದಿಮ ಸಮುದಾಯಗಳು ಮಾಡಿವೆ.

ಇವತ್ತಿಗೂ ಅಗೋಚರವಾದ ಎಷ್ಟೋ ಸಂಗತಿಗಳು ಪುರಾಣ ಐತಿಹ್ಯ ವೇದಗಳಲ್ಲಿ ಕಂಡು ಬರುವ ದೃಶ್ಯಗಳು ಇವತ್ತಿಗೂ ಕಣ್ಣಿಗೆ ಕಾಣಿಸದು. ಆದರೆ ಆ ಲೋಕಗಳ ಬಗ್ಗೆ ದೃಶ್ಯ ಕಥನಕಗಳು ಬಹಳ ವಿಸ್ತಾರವಾಗಿ ಬೆಳೆದುಕೊಂಡಿವೆ. ಇವತ್ತಿಗೂ ಆ ಲೋಕಗಳ

ಬಗ್ಗೆ ತಿಳಿಯಲು ನಮಗೆ ದೊರಕುವ ಮಾಹಿತಿ ದೃಶ್ಯಗಳೇ ಹೊರತು ಕಥನಕಗಳಲ್ಲ. ಆನಂತರ ಭಾಷೆ ಬೆಳೆದಂತೆಲ್ಲಾ ದೃಶ್ಯಕ್ಕೆ ತಕ್ಕಂತೆ ಕಥನಕಗಳು ಬೆಳೆಯುತ್ತಾ ಬಂದಿರುತ್ತವೆ. ಪುರಾಣಗಳಲ್ಲಿ ಕಂಡು ಬರುವ ಪಾತಾಳಲೋಕ, ದೇವಲೋಕ, ಕೈಲಾಸಲೋಕ, ಯಮಲೋಕ, ಅಷ್ಟೇ ಅಲ್ಲಾ ಏಳುಲೋಕಗಳ ಕಲ್ಪನೆಯು ದೃಶ್ಯಮಾಧ್ಯಮದ ಕುರುಹುಗಳೇ ಆಗಿದೆ. ಆ ಕಾಲದ ಮಾಂತ್ರಿಕ ಪುರುಷರು ತಮ್ಮ ಶತ್ರುಗಳ ಕುತಂತ್ರಗಳನ್ನು ಮಾಯಾಜಾಲ ಎಂಬ ದೃಶ್ಯಮಾಧ್ಯಮದಿಂದ ಗಮನಿಸುತ್ತಿದ್ದರು. ಪುರಾಣಗಳಲ್ಲಿ ರೂಪಿತಗೊಂಡ ಕಥನಕಗಳಲ್ಲಿ ಪ್ರಾಣಿ, ಪಕ್ಷಿ, ಕ್ರಿಮಿಕೀಟಗಳು ಮನುಷ್ಯನಷ್ಟೇ ದಿವ್ಯಜ್ಞಾನ ಹೊಂದಿದ್ದವು. ಕೆಡುಕುಗಳನ್ನು ಮಾಯಾಜಾಲದಿಂದಲೇ ಕಾಣುತ್ತಿದ್ದವು. ಇದಕ್ಕೆ ಕುರುಹುಗಳು ಪಂಚತಂತ್ರ ಕಥೆಗಳಲ್ಲಿ ಕಾಣುತ್ತೇವೆ. ಜನಪದ ಕಥೆಗಳಲ್ಲಿ ಮೂಡಿಬರುವ ದೃಶ್ಯ ಕಥನಕಗಳು ಕೇಳುಗರಿಗೆ ಆಸಕ್ತಿಯನ್ನುಂಟು ಮಾಡುತ್ತದೆ. ಲೋಕದ ಬದುಕಿನಲ್ಲಿ ನಡೆಯುವ ಈ ವ್ಯಾಪಾರವನ್ನು ಶಿವ ಕೈಲಾಸದಲ್ಲಿ ಕುಳಿತು ನೋಡುವ ಪ್ರಸಂಗ. ಕೈಲಾಸ ಎಂಬುದು ದೃಶ್ಯಮಾಧ್ಯಮದ ಮೂಲಕ ಬಂದಿರುವಂತದ್ದಾಗಿದೆ. ಲೋಕದ ಬದುಕಿನೊಂದಿಗೆ ಚಲಿಸುತ್ತಾ ಬಂದ ದೃಶ್ಯಮಾಧ್ಯಮದ ಚಹರೆಗಳು ಎಲ್ಲಾ ನಾಗರೀಕತೆಗಳ ಒಡಲೊಳಗೆ ವಿಸ್ಮಯಗಳನ್ನು ಸೃಷ್ಠಿಸುತ್ತಾ, ಮನುಷ್ಯನ ಬದುಕನ್ನು ಆವರಿಸಿಕೊಂಡು ಮುನ್ನುಗ್ಗುತ್ತಿದೆ.

ಮೌಖಿಕ ಸಾಹಿತ್ಯದ ಎಲ್ಲಾ ಪ್ರಕಾರಗಳ ಬೆಳವಣಿಗೆಗೆ ದೃಶ್ಯಮಾಧ್ಯಮದ ಮಹತ್ವದ ಕೊಡುಗೆ ಅಪಾರವಾದುದು. ದೃಶ್ಯಗಳ ಬಳಕೆ ಇಲ್ಲದೆ ಒಂದು ಕಾವ್ಯ ಕಥನ ಪೂರ್ಣಗೊಳ್ಳದು. ಸ್ವಾರಸ್ಯ ಪಡೆಯಲಾರದು. ಈ ದೃಶ್ಯಮಾಧ್ಯಮದ ಕಲ್ಪನೆ ತಳ ಸಮುದಾಯಗಳ ಕೊಡುಗೆಯಾಗಿದೆ. ಪೂರ್ವ ಮಾನವನ ಇತಿಹಾಸದ ಕೊಡುಗೆಯಾದ ದೃಶ್ಯಮಾಧ್ಯಮ ಇಂದು ಪ್ರಭುತ್ವಶಾಹಿಗಳ ಹಿಡಿತದಲ್ಲಿ ವಾಣಿಜೀಕರಣಗೊಂಡು ಹಣಮಾಡುವ ಕೇಂದ್ರಗಳಾಗಿವೆ. ದೃಶ್ಯಮಾಧ್ಯಮ ಪ್ರಾಚೀನ ಕಾಲದಿಂದಲೂ ತನ್ನ ಕರುಹುಗಳನ್ನು ತೋರ್ಪಡಿಸುತ್ತಾ ಬಂದಿದೆ. ಅದರಲ್ಲೂ ಮೌಖಿಕ ಸಾಹಿತ್ಯದಲ್ಲಿ ಇದರ ಸೂಕ್ಷ್ಮತೆಗಳು ಅಪಾರವಾಗಿ ಕಾಣುತ್ತೇವೆ. ವೇದ–ಪುರಾಣ ಕಾಲದಿಂದಲೂ ಇದರ ಬೆಳವಣಿಗೆಯನ್ನು ಕಾಣಬಹುದು. ಇದಕ್ಕೆ ಹಲವಾರು ಕಥನಕಗಳು ನಿದರ್ಶನಗಳಾಗಿ ನಮ್ಮ ಮುಂದೆ ನಿಲ್ಲುತ್ತವೆ. ಆನಂತರ ನಾಗರೀಕತೆಗಳ ಒಡಲೊಳಗೆ ಇನ್ನಷ್ಟು ಅಭಿವೃದ್ಧಿಯನ್ನು ಪಡೆದುಕೊಂಡಿತು. ಈಜಿಪ್ಟ್, ರೋಮ್ ನಾಗರೀಕತೆಗಳ ಜೊತೆಗೆ ಗ್ರೀಕ್, ಹರಪ್ಪ, ಮಹೆಂಜಾದಾರೋ ನಾಗರೀಕತೆಗಳು, ಒಟ್ಟು ಮನುಷ್ಯನ ಬದುಕನ್ನು ಆವರಿಸಿಕೊಂಡು ಆಧುನಿಕತೆಯುಗದಲ್ಲಿ ಹಲವಾರು ರೂಪಾಂತರಗಳನ್ನು ಕಂಡುಕೊಂಡಿದೆ. ಆದಿಮ ಸಂಸ್ಕೃತಿಯ ಜ್ಞಾನ ಪರಂಪರೆಗಳು ತಲೆತಲಾಂತರಗಳಿಂದ ಮುಂದುವರೆದುಕೊಂಡು ಬಂದಿರುತ್ತವೆ. ಮನುಷ್ಯನ ವಿಕಾಸ ಹಾದಿಯಲ್ಲಿ ಹಲವಾರು ವೈಜ್ಞಾನಿಕ ವಿಚಾರಗಳು ಬೆಳಕಿಗೆ ಬಂದವು. ಆಧುನಿಕ ಕಾಲದ ಎಲ್ಲಾ ವಿಜ್ಞಾನದ ವಿಚಾರಗಳು ನಮ್ಮ ಪುರಾಣ

ಕಥನಗಳಲ್ಲಿ ಹೆಚ್ಚು ಹೆಚ್ಚು ದಾಖಲುಗೊಂಡಿರುವುದನ್ನು ಕಾಣುತ್ತೇವೆ. ಇವೆಲ್ಲವುಗಳು ಬರುವುದಕ್ಕೆ ಮುನ್ನವೇ ಮನುಷ್ಯನು ತನಗೆ ಸಿಕ್ಕಿದ ತಂತ್ರಜ್ಞಾನದಿಂದ ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ತನ್ನ ಕಲ್ಪನೆಗಳನ್ನು ದೃಶ್ಯಗಳ ಮುಖಾಂತರ ಬಿಂಬಿಸುತ್ತಿದ್ದ. ಇದಕ್ಕೆ ಉದಾಹರಣೆ ಅಂದರೆ ಚಿತ್ರಕಲೆಯ ನಂತರ ಬಂದ ಬ್ಯಾನರ್ ಕಲೆ. ಇದೊಂದು ದೃಶ್ಯಮಾಧ್ಯಮವಾಗಿ ಹೊರಹೊಮ್ಮಿದ್ದು ನಾಟಕಗಳ ಪ್ರಚಾರಕ್ಕಾಗಿ ಎಂಬ ಅಂಶವನ್ನು ಮನಗಾಣಬೇಕು.

ಪ್ರಾರಂಭದಲ್ಲಿ ಗೋಣಿ ಚೀಲಕ್ಕೆ ಸುಣ್ಣವನ್ನು ಬಳಿದು ಅದರ ಮೇಲೆ ಬಟ್ಟೆ ಹಾಕುವ ನೀಲಿಯಿಂದ ಆ ದಿನ ಪ್ರದರ್ಶಿತವಾಗುವ ನಾಟಕದ ಹೆಸರನ್ನು ಬರೆದು ಇಡಲಾಗುತ್ತಿತ್ತು. ಈ ರೀತಿ ಮಾಡುವುದರಿಂದ ನಾಟಕಕ್ಕೆ ಒಳ್ಳೆ ಪ್ರಚಾರ ಸಿಕ್ಕಿ ಪ್ರೇಕ್ಷಕರು ಬರುತ್ತಿದ್ದರು. ಈ ರೀತಿ ಪ್ರಚಾರ ಗಿಟ್ಟಿಸಿಕೊಂಡ ನಾಟಕ ಸದಾರಮೆ. ಅಕ್ಷರಗಳಿಗೆ ಸಿಮೀತವಾಗಿದ್ದ ಬ್ಯಾನರ್ ಕ್ರಮೇಣ ತನ್ನ ರೂಪ ಬದಲಿಸಿಕೊಂಡಿತು. ಆ ನಂತರ ಕಲಾವಿದರು ಪ್ರೇಕ್ಷಕರನ್ನು ಸೆಳೆಯಲು ನಾಟಕದ ದೃಶ್ಯಗಳನ್ನು ಬ್ಯಾನರ್‌ಗಳಲ್ಲಿ ಚಿತ್ರಿಸುತ್ತಿದ್ದರು. ಇಂತಹ ಚಿತ್ರ ಸಹಿತ ಬ್ಯಾನರ್‌ನ್ನು, ಪ್ರಚಾರಕ್ಕಾಗಿ ಎಲ್ಲಾ ನಾಟಕದವರು ಬಳಸಲು ಆರಂಭಿಸಿದರು. ದೃಶ್ಯ ಬದಲಾದಂತೆ ನಾಟಕದ ಸೀನರಿಗಳು ಬದಲಾದವು. ಹಳೇ ಕಲಾವಿದರು ಬ್ಯಾನರ್ ನಾಟಕದ ದೃಶ್ಯದ ಸೀನರಿಗಳನ್ನು ಕಂಡು ನಾಟಕ ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಬರುತ್ತಿದ್ದುದನ್ನು ಈಗಲೂ ನೆನಪಿಸಿ ಕೊಳ್ಳುತ್ತಾರೆ. ಆನಂತರ ಬ್ಯಾನರ್, ಕಟೌಟ್‌ಗಳ ಬಳಕೆ ಚಲನಚಿತ್ರದ ಪ್ರಚಾರಕ್ಕೂ ಕೂಡಾ ಬಳಸಿಕೊಳ್ಳ ಲಾಯಿತು. ಇದಕ್ಕೂ ಮುಂದುವರಿದಂತೆ ಇಂದಿನ ರಾಜಕಾರಣಿಗಳು ತಮ್ಮ ದೊಡ್ಡ ದೊಡ್ಡ ಸಮಾವೇಶಗಳಲ್ಲಿ ಬ್ಯಾನರ್ ಹಾಗೂ ಕಟೌಟ್‌ಗಳನ್ನು ಬಳಸುವುದನ್ನು ಕಾಣಬಹುದಾಗಿದೆ. ನಂತರ ಬಂದದ್ದೇ ಫ್ಲೆಕ್ಸ್. ಮೊದಲು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡು, ಆನಂತರ ಅದೇ ದಾಖಲೆಗಳೊಂದಿಗೆ ಯೂರೋಪ್ ರಾಷ್ಟ್ರಗಳಲ್ಲಿ ಮೊದಲು ವೈಜ್ಞಾನಿಕ ಪ್ರಯೋಗಗಳು ಪ್ರಾರಂಭಗೊಂಡವು. ಅದಕ್ಕೆ ಪೂರಕವಾದ ದೃಶ್ಯಮಾಧ್ಯಮದ ರೂಪಗಳಲ್ಲಿ ಒಂದಾದ ಚಲನಚಿತ್ರ ಟಿ.ವಿ. ರೇಡಿಯೋ, ಕಂಪ್ಯೂಟರ್, ಪೇಜರ್, ಮೊಬೈಲ್ ಇಂಟರ್‌ನೆಟ್ ಜಾಲ, ವಾಟ್ಸ್ ಅಪ್‌ಗಳ ರೂಪದಲ್ಲಿ ಇಡೀ ಪ್ರಪಂಚದಲ್ಲಿ ಹರಡಿಕೊಂಡಿರುತ್ತವೆ. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯವಾಗಿ ಮಾನವನ ಬದುಕನ್ನೇ ಆವರಿಸಿಕೊಂಡು ಬಿಟ್ಟಿವೆ. ಇಂತಹ ಸಾಹಿತ್ಯಕ, ಐತಿಹಾಸಿಕ ಹಿನ್ನಲೆಯನ್ನು ಹೊಂದಿರುವ ಅಂತರ್ಜಾಲದ ಬೆಳವಣಿಗೆಯನ್ನು ತಳಸಮುದಾಯಗಳ ಕೊಡುಗೆ ಎಂದು ಭಾವಿಸಿಕೊಂಡು ಒಂದೊಂದು ದೃಶ್ಯಮಾಧ್ಯಮದ ಹುಟ್ಟು, ಬೆಳವಣಿಗೆಯನ್ನು ಕಾಣಲಾಗುವುದು. ಆದಿಮ ಜ್ಞಾನದ ನೆಲೆಯಲ್ಲಿ ಹಲವು ರೀತಿಯ ಬದಲಾವಣೆಗಳೊಂದಿಗೆ ಮಾರ್ಪಾಡುಗಳಾಗಿವೆ. ಇಂದು ವಿಶ್ವಕ್ಕೆ ಸಂಪರ್ಕವನ್ನು ಉಂಟುಮಾಡಿರುವ

ದೃಶ್ಯಮಾಧ್ಯಮಗಳು ಮಾನವ ಸಮಾಜಕ್ಕೆ ಬಹು ಉಪಯೋಗಿ ಕೆಲಸ ಮಾಡುತ್ತಿವೆ. ಈ ಸೇವೆ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಂಡಿವೆ. ನಾವು ಕುಳಿತಲ್ಲೇ ಎಲ್ಲಾ ಕ್ಷೇತ್ರಗಳ ಮಾಹಿತಿಗಳನ್ನು ಪಡೆದುಕೊಳ್ಳಬಹುದು. ನಮ್ಮ ಶೈಕ್ಷಣಿಕ ಕ್ಷೇತ್ರದ ಮಾಹಿತಿಗಳನ್ನು ಸಂಶೋಧನಗಳಿಗೆ ಬೇಕಾದ ವಿಷಯ ಸಂಗ್ರಹಣೆಯನ್ನು ಪ್ರಧಾನವಾದ ರಾಷ್ಟ್ರವಾದುದರಿಂದ ಕೃಷಿಗೆ ಬೇಕಾದ ಮಾಹಿತಿಗಳನ್ನು ಇಂಟರ್‌ನೆಟ್ ಮುಖಾಂತರ ರೈತರು ಪಡೆದುಕೊಳ್ಳಬಹುದು. ಆಧುನಿಕತೆಯ ಸಂದರ್ಭದಲ್ಲಿ ದೃಶ್ಯಮಾಧ್ಯಮಗಳು ಇಡೀ ಮನುಷ್ಯನ ಬದುಕನ್ನೇ ಆವರಿಸಿಕೊಂಡಿವೆ. ಈ ದೃಶ್ಯಮಾಧ್ಯಮಗಳ ಸೃಷ್ಟಿ ಬಂಡವಾಳ ರಾಷ್ಟ್ರಗಳ ಅನುಕೂಲಕ್ಕೆ ಮಾಡಿಕೊಂಡದ್ದು, ಆದರೆ ಇವತ್ತು ಎಲ್ಲಾ ರಾಷ್ಟ್ರಗಳಲ್ಲೂ ದೃಶ್ಯಮಾಧ್ಯಮ ಪ್ರವೇಶವಾಗಿದೆ. ಎಷ್ಟೇಲ್ಲಾ ಅನುಕೂಲಗಳು ಮಾನವನ ಸಮಾಜಕ್ಕೆ ಆಗಿದ್ದರೂ, ಬಂಡವಾಳ ಶಾಹಿಗಳಿಗಂತೂ ಲಾಭವೇ. ತಮ್ಮ ಸರಕುಗಳನ್ನು ಮಾರಾಟಮಾಡಲು ಅವುಗಳ ಬಗ್ಗೆ ಮಾಹಿತಿಗಳನ್ನು ನೀಡಲು, ವೇಗವಾಗಿ ವ್ಯಾಪಾರ ನಡೆಸಲು ಅನುಕೂಲಕರವಾಗಿದೆ ಎಂಬುದು ಸತ್ಯವಾದರೂ, ಗ್ರಾಹಕ ಮತ್ತು ವ್ಯಾಪಾರಿಗಳ ನಡುವೆ ಯಾವುದೇ ಸಂಬಂಧ ಏರ್ಪಡುವುದಿಲ್ಲ. ಕೇವಲ ವ್ಯವಹಾರಿಕ ಸಂಬಂಧಗಳು ಮಾತ್ರ, ಹಿಂದೆ ಸರ್ಕಾರ ರೈತರ ಹೊಲಕ್ಕೆ ಹೋಗಿ ಕೃಷಿಯ ಮಾಹಿತಿಗಳನ್ನು ನೀಡುತ್ತಿದ್ದರು. ಆದರೆ ಇಂದು ಕೃಷಿಯ ಮಾಹಿತಿಗಳನ್ನು ಇಂಟರ್ ನೆಟ್ ಮುಖಾಂತರ ಬಿಡಲಾಗಿದೆ. ಎಷ್ಟು ಜನರಿಗೆ ಇದರ ಮಾಹಿತಿ ಸಿಗುತ್ತದೋ, ಇಲ್ಲವೋ, ಪ್ರತಿಯೊಂದು ಕ್ಷೇತ್ರಕ್ಕೂ ಆವರಿಸಿಕೊಂಡಿರುವ ದೃಶ್ಯಮಾಧ್ಯಮ ಮಾನವನ ಸಮಾಜಕ್ಕೆ ಒಳಿತನ್ನು ನೀಡುತ್ತೋ, ಇಲ್ಲ ಬಂಡವಾಳ ರಾಷ್ಟ್ರಗಳ ವ್ಯಾಪಾರದ ಮುಖ್ಯ ಕಾರ್ಯವನ್ನು ನಿರ್ವಹಿಸುತ್ತಿರುವುದಂತೂ ಸತ್ಯ. ದೃಶ್ಯಮಾಧ್ಯಮ ಮಾನವ ನಿರ್ಮಿತ ಅನ್ವೇಷಣೆಯಾದರೂ, ಮಾನವನ ಸೃಜನಶೀಲತೆಯನ್ನು ಮಾನವೀಯ ಸಂಬಂಧಗಳನ್ನು ದಿನದಿಂದ ದಿನಕ್ಕೆ ನಾಶಮಾಡುತ್ತಿದೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

ಅಡಿ ಟಿಪ್ಪಣಿ :

೧. ನರಸಿಂಹನ್ ಅ.ಲ., ಕಲೆ ಮತ್ತು ರಸಸ್ವಾದನೆ : ಜನಪದ ಕಲಾವಿಹಾರ, ಪು.ಸಂ–೪೦.

ಅಧ್ಯಾಯ ಮೂರು

ಜನಪದ ಕಲೆಗಳ ಲೋಕಾನುಸಂಧಾನ

೩.೧ ಜನಪದ ಕಲೆಗಳ ಪರಿಕಲ್ಪನೆ

ಮಾನವ ಅನಾದಿ ಕಾಲದಿಂದಲೂ ಪ್ರಕೃತಿಯನ್ನು ಕುತೂಹಲದ ಕಣ್ಣಿನಿಂದ ನೋಡುತ್ತಾ ಬಂದಿದ್ದಾನೆ. ಪ್ರಕೃತಿಯ ವಿಕೋಪಕ್ಕೆ ಭಯದಿಂದ ನಡುಗಿದ್ದಾನೆ. ಆರಾಧನೆಯಿಂದ ಪ್ರಕೃತಿಯ ರೂಪವನ್ನು ತಣಿಸಲು ಸಾಧ್ಯವೆಂದು ಭಾವಿಸಿ ಆರಾಧಿಸಿದ್ದಾನೆ. ಹಕ್ಕಿಪಕ್ಷಿಗಳ ಕೂಗಿಗೆ ಮನಸೋತು ಅವುಗಳ ಧ್ವನಿಗೆ ತನ್ನದನಿ ಬೆರೆಸಿ ಹಾಡಿದ್ದಾನೆ. ಭೂಮಿ, ಆಕಾಶ, ಬ್ರಹ್ಮಾಂಡವನ್ನು ಕಂಡು ಮೂಕ ವಿಸ್ಮಿತನಾಗಿ ಕಲ್ಪನೆಗಳನ್ನು ಹರಿಬಿಟ್ಟಿದ್ದಾನೆ. ತನ್ನ ಕಣ್ಣ ಮುಂದಿರುವುದೆಲ್ಲವನ್ನು ಪರೀಕ್ಷಿಸುತ್ತಾ, ಸರಿಕಂಡದ್ದನ್ನು ಸ್ವೀಕರಿಸುತ್ತಾ ಪರಿಷ್ಕರಿಸುತ್ತಾ ಮುನ್ನಡೆದು ಬಂದಿದ್ದಾನೆ. ಹೀಗೆ ಮನುಕುಲವು ಅನಾದಿಕಾಲದಿಂದ ಪಡೆದುಕೊಂಡ ಅನುಭವಗಳ ಮೊತ್ತವನ್ನೇ ಜಾನಪದವೆಂದು ಕರೆದರು. ಮಾನವನ ಬದುಕಿನ ಪೂರ್ಣ ವ್ಯಾಪಾರವನ್ನು ಜಾನಪದ ಒಳಗೊಂಡಿದೆ. ಮಾನವನ ಉಗಮದೊಂದಿಗೆ ಜಾನಪದದ ಉಗಮವೂ ಆಗಿದೆ. ಅನಾದಿ ಕಾಲದಿಂದಲೂ ತಮ್ಮದೆ ಆದ ಸಾಂಸ್ಕೃತಿಕ ವಲಯದಲ್ಲಿ ಜೀವನ ಮಾಡುತ್ತಾ ಬಂದ ಅನೇಕ ಗುಂಪುಗಳು ಇವೆ. ಈ ಗುಂಪುಗಳೇ ಜನಪದಗಳು. ಗುಂಪಿನಲ್ಲಿ ಸಂಬಂಧ ಬೆಸೆಯುವ ಮಜಲುಗಳು ಬಹುಮುಖ್ಯ. ಜನಪದರನ್ನು ಬೆಸೆಯುವ ಪ್ರಕಾರಗಳೆಂದರೆ ನಂಬಿಕೆ, ಆಚರಣೆ, ಭಾಷೆ, ಧರ್ಮ ಸಂಪ್ರದಾಯ ಇವೇ ಮೊದಲಾದುವು. ಕಾಡುಗೊಲ್ಲರ ಹಟ್ಟಿ, ಲಂಬಾಣಿ ತಾಂಡ, ಹಕ್ಕಿ–ಪಿಕ್ಕಿಯರ ಗುಡಾರಗಳು ಜನಪದಗಳಾಗಬಹುದು. ಆಧುನಿಕತೆಯ ಪ್ರಭಾವಗಳ ಮಧ್ಯದಲ್ಲಿಯೂ ತಮ್ಮ ಆಚರಣೆ ಸಂಪ್ರದಾಯ, ಕಲೆ ಸಾಹಿತ್ಯಗಳನ್ನುಳಿಸಿ ಕೊಂಡು ಬಂದ ಜನಸಮುದಾಯ.

ಜನಪದರ ಸಂಸ್ಕೃತಿಯೊಂದರ ಅಧ್ಯಯನ ಅತ್ಯಂತ ಮಹತ್ವಪೂರ್ಣವೆನಿಸಿದೆ. ಇದರಿಂದ ಜನಪದ ಸಂಸ್ಕೃತಿ ಸಮಾಜ ಮತ್ತು ಕಲೆಗಳಿರುವ ಸಂಬಂಧದ ಪರಿಚಯವಾಗುತ್ತದೆ. ಜನಪದ ಕಲೆಗಳಿಂದ ಒಂದೊಂದು ರೀತಿಯ ಆಯಾ ಜನಪದ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. "ಜಾನಪದದಲ್ಲಿ ಕಲೆಯ ಮುಖವೂ ಶಾಸ್ತ್ರದ ಮುಖವೂ ಸೇರಿಕೊಂಡಿದೆ. ಕಲೆಯ ಮುಖ ಆಸ್ವಾದನೆಗೆ ಸಂಬಂಧಿಸಿದ್ದು, ಶಾಸ್ತ್ರದ ಮುಖ ಅಧ್ಯಯನಕ್ಕೆ ಸಂಬಂಧಿಸಿದಿದ್ದುದು"[೧] ಎಂದು ಡಾ.ಹಾ.ಮಾ.ನಾಯಕರು ಹೇಳುತ್ತಾರೆ. ಕಲೆಗಳ ಪ್ರದರ್ಶನದಲ್ಲಿ ಕಲಾವಿದರು ಕಲೆ ಮತ್ತು ಕಲಾವಿದನ ನಡುವೆ ಇರುವ ಭಾವನಾತ್ಮಕ ಸಂಬಂದವು ಪ್ರೇಕ್ಷಕರ ನಡುವೆ ಜನಪದ ಕಲೆಯನ್ನು ಅದರ ಸತ್ವ ಮತ್ತು ತತ್ವದ ತಳಹದಿಯಲ್ಲಿ ವಿಜೃಂಭಿಸುತ್ತದೆ. ಡಾ.ಜೀ.ಶಂ.ಪ ಅವರು 'ಜನಪದ ಕಲೆಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಿದ್ದಾರೆ.

೧. ಜನಪದ ಪ್ರದರ್ಶನಾತ್ಮಕ ಕಲೆಗಳು

೨. ಇತರೆ ಜನಪದ ಕಲೆಗಳು

ಪ್ರದರ್ಶನಾತ್ಮಕ ಕಲೆಗಳಲ್ಲಿ ಯಕ್ಷಗಾನ ಬಯಲಾಟಗಳು, ನಾಟಕಗಳು, ಬೊಂಬೆಯಾಟಗಳು, ಜನಪದ ನೃತ್ಯಗಳು, ಜನಪದ ಮನರಂಜನ ಕಲೆಗಳು, ಮೋಡಿಗಳು ಮುಂತಾದವುಗಳು ಸೇರುತ್ತವೆ. ಇಷ್ಟೇ ವೈವಿಧ್ಯಮಯವಾಗಿ ಇತರ ಕಲೆಗಳೂ ತಮ್ಮ ಆಸ್ತಿತ್ವವನ್ನು ಗುರುತಿಸಿಕೊಳ್ಳುತ್ತವೆ. ಜನಪದ ಚಿತ್ರಕಲೆಯಲ್ಲಿ ರಂಗವಲ್ಲಿಯ ಕಲೆ, ಗೋಡೆಗಳ ಮೇಲೆ ಬಿಡಿಸುವ ಕಲೆ, ಮಡಕೆ, ಕುಡಿಕೆ, ಪಾತ್ರೆ- ಪರಡಿಗಳ ಮೇಲಿನ ಕಲೆ, ಬಟ್ಟೆ ಬರೆಗಳ ಮೇಲಿನ ಕಲೆ, ದೇವಾಲಯ ಶ್ರೀಮಠಗಳ ಭಿತ್ತಿ ಚಿತ್ರಗಳ ಮೇಲೆ ಬಿಡಿಸುವ ಕಲೆ ಯಕ್ಷಗಾನ ಬಯಲಾಟಗಳ ಮುಖವರ್ಣಿಕೆ, ತೊಗಲು ಗೊಂಬೆ, ಸೂತ್ರದ ಗೊಂಬೆಗಳ ಬಣ್ಣಗಾರಿಕೆ, ಹಚ್ಚೆಯ ಕಲೆ, ಮುಖವಾಡಗಳ ಬಣ್ಣಗಾರಿಕೆ, ಹೆಣಿಗೆಗಳ ಕಲೆ ಇನ್ನು ಅನೇಕವಾದವುಗಳು.'[೨]

ಜನಪದ ಕಲೆಯ ರೂಪಸ್ವರೂಪ ಗುಣ ಲಕ್ಷಣಗಳೇ ಎಲ್ಲಕ್ಕೂ ಮೂಲ ಆಕರ. ಬದುಕಿನ ಸಮಷ್ಠಿ ಕ್ರಿಯೆಗಳನ್ನೊಳಗೊಂಡ ಜನಪದ ಕಲೆಗಳು ಜನಪದರ ಉಸಿರು, ಸಮುದಾಯದ ಉತ್ಪತ್ತಿ ಎಂದರೆ ತಪ್ಪಾಗಲಾರದು. ದೇಜಗೌ ಅವರು 'ಜನಪದ ಕಲೆಗಳನ್ನು ನಾಲ್ಕು ರೀತಿಯಲ್ಲಿ ವಿಂಗಡಿಸಿದ್ದಾರೆ.

೧. ಉಪಯುಕ್ತ ಕಲೆಗಳು

೨. ಮತೀಯ ಕಲೆಗಳು,

೩. ಅಲಂಕರಣ ಕಲೆಗಳು

೪. ಲಲಿತಕಲೆಗಳು.

ಬುಟ್ಟಿಕುಡಿಕೆ ಮಡಿಕೆ ತಯಾರಿಕೆ, ಅಡುಗೆ, ಬಲೆ, ಹೆಣಿಗೆ ಇವೇ ಮುಂತಾದವುಗಳು ಉಪಯುಕ್ತ ಕಲೆಗಳ ಪರಿಧಿಯಲ್ಲಿ ಬರುತ್ತವೆ. ದೇವೋಪಾಸನೆಯ ಹಿನ್ನಲೆಯಲ್ಲಿ ಉಗಮಗೊಂಡ ಭೂತನೃತ್ಯ, ನಂದಿ ಕೋಲು ಕುಣಿತ, ವೀರಗಾಸೆ ಕುಣಿತ ಮೊದಲಾದವುಗಳನ್ನು ಮತೀಯ ಕಲೆಗಳ ಪಟ್ಟಿಯಲ್ಲಿ ಸೇರಿಸಬಹುದು. ವಸ್ತ್ರಾಭರಣಗಳು, ಜಡೆ, ತುರುಬು ರಂಗವಲ್ಲಿ ಮುಂತಾದುವನ್ನು ಅಲಂಕರಣ ಅಥವಾ ಶೃಂಗಾರ ಕಲೆಗಳೆಂದು ಕರೆಯಬಹುದು. ಸಾಹಿತ್ಯ, ಸಂಗೀತ, ಶಿಲ್ಪ ಮುಂತಾದುವು ಲಲಿತ ಕಲೆಗಳಾಗಿವೆ.'[೩]

ನಮ್ಮ ಜನಪದ ಕಲೆಗಳ ವೈವಿಧ್ಯ ಮತ್ತು ವ್ಯಾಪ್ತಿ ವಿಸ್ಮಯಕಾರಿ ಆಗಿವೆ. ಏಕೆಂದರೆ ಯಾವುದೇ ಕಲಾ ಪ್ರಕಾರವು ಅಧ್ಯಯನಕ್ಕೆ ಸಿಕ್ಕುವಂಥದ್ದಲ್ಲ. ಏಕೆಂದರೆ ಪ್ರತಿಯೊಂದು ಜನಪದ ಕಲಾಪ್ರಕಾರವೂ ತನ್ನದೇ ಆದ ವೈಶಿಷ್ಟತೆಯನ್ನು ಹೊಂದಿದೆ. ಬ್ರಿಟಿಷರು ಭಾರತವನ್ನು ಜಾನಪದದ ಅಮೂಲ್ಯ ಭಂಡಾರ ಎಂದು ಕರೆದಿದ್ದಾರೆ. ಭಾರತವನ್ನು ಪ್ರಾದೇಶಿಕವಾಗಿ ವಿಂಗಡಿಸಿದರೆ ಸುಮಾರು ಆರು ಸಾವಿರಕ್ಕೂ ಹೆಚ್ಚು ಕಲೆಗಳಿವೆ. ಜನಪದ ಕಲೆಗಳ ವಿಶ್ಲೇಷಣೆಗೆ ಅದರ ಪ್ರಾದೇಶಿಕ ಹಿನ್ನಲೆ ತುಂಬಾ ಉಪಯುಕ್ತವಾಗಿವೆ. ಪ್ರಾದೇಶಿಕ ಹಿನ್ನಲೆಯಿಂದ ಹಮ್ಮಿಕೊಂಡ ಕಲೆಗಳು ಆಯಾ ಪ್ರದೇಶಕ್ಕೂ ತಕ್ಕಂತೆ ಕೆಲವೊಂದು ಮಾರ್ಪಾಡು ಮಾಡಿಕೊಂಡಿರುತ್ತವೆ. ಕಲೆಗಳು, ಕೆಲವು ಪ್ರದರ್ಶನ ಕಲೆಗಳಾಗಿ ಕಂಡು ಬರುತ್ತವೆ. ಕೆಲವು ಜನಪದ ಕಲೆಗಳಲ್ಲಿ ಹಾಡಿನ ವಾದ್ಯ ಕುಣಿತಗಳು ವಿಜೃಂಭಿಸುತ್ತವೆ. ಮೂರು ಮಿಳಿತವಾಗಿ ಜನಪದರು ಉತ್ಸಾಹದಿಂದ ಮೈಮರೆಯುತ್ತಾರೆ. ಡಾ.ಜಿ.ಶಂ. ಪ ಅವರು ಹೇಳುವಂತೆ 'ಮನರಂಜನೆ ಕಲೆಗಳು ಕೆಲವು ಲಕ್ಷಣಗಳಿಂದಾಗಿ ಆರಂಭದಲ್ಲಿ ಜನಪದ ಸಮುದಾಯಗಳಿಗೆ ಉತ್ಸಾಹ, ಉಲ್ಲಾಸ ಮನರಂಜನೆ ಒದಗಿಸುತ್ತಾ ಬಂದಿರುತ್ತವೆ. ಕಾಲಾನಂತರದಲ್ಲಿ ಆಯಾ ಕಲಾವಿದರ ಉಪ ಜೀವನಕ್ಕೆ ಆಧಾರವಾದ ವೃತ್ತಿ ಕಲೆಯಾಗಿ ಪರಿಣಮಿಸಿದವು'[೪].

ಆರಾಧನಾ ಕಲೆಗಳು, ಭಕ್ತಿ, ಶ್ರದ್ಧೆ ಧಾರ್ಮಿಕ ನೆಲೆಯಲ್ಲಿ ದೇವರ ಆರಾಧನೆಯ ಹಿನ್ನಲೆಯಲ್ಲಿ ಬಂದ ಕಲೆಗಳಿಗೆ ಆರಾಧನಾ ಕಲೆ ಎಂದು ಕರೆಯಲಾಗಿದೆ. ಜನಪದ ಕಲೆಗಳು ಸಂದರ್ಭಕ್ಕೆ ತಕ್ಕಂತೆ ಪರಿವರ್ತನೆಗೆ ಒಳಗಾಗಿಯೂ ನಾಶವಾಗದೆ ಇರುವುದಕ್ಕೆ ಮುಖ್ಯಕಾರಣ ಅವುಗಳ ಧಾರ್ಮಿಕ ಬದ್ಧತೆ. ಪರಂಪರೆಯಿಂದ ಬಂದವುಗಳಾಗಿವೆ. ಕೆಲವು ಪ್ರಾಯೋಗಿಕ ಸಾಧ್ಯತೆಗಳಿಂದ ಸಾಂಸ್ಕೃತಿಕ ಹೊಂದಾಣಿಕೆಯಿಂದ ಕೂಡಿದ್ದು ಪಾರಂಪರಿಕವಾಗಿ ದೇಸಿಯವೇ ಆಗಿದ್ದು, ಆಯಾ ನೆಲದ ಗುಣವನ್ನು, ಅರ್ಥೈಸಿಕೊಂಡು ಬೆಳೆಯುತ್ತವೆ. ಭಕ್ತಿ, ಶ್ರದ್ಧೆ, ಧಾರ್ಮಿಕ ನೆಲೆಯಲ್ಲಿ ದೈವೀ ಶಕ್ತಿಯ ಆರಾಧನೆಯ ಹಿನ್ನಲೆಯಲ್ಲಿ ಬೆಳೆದು ಬಂದಂತಹ ಕಲೆಗಳಿಗೆ ಆರಾಧನಾ ಕಲೆಗಳೆನ್ನುತ್ತಾರೆ. ಹಬ್ಬ ಹರಿದಿನ ಜಾತ್ರೆ–ಉತ್ಸವ ಮುಂತಾದ ಸಂದರ್ಭದಲ್ಲಿ ಮುಖ್ಯ ಉತ್ಸವಕ್ಕೆ ಕುಂದುಂಟಾಗದಂತೆ ಸಂತೋಷ ಪಡಿಸುವ ಕಲೆಗಳೇ ಮನರಂಜನೆ ಕಲೆಗಳಾಗಿರುತ್ತವೆ.

೩.೨ ದೃಶ್ಯ ಮಾಧ್ಯಮ ಮತ್ತು ಜನಪದ ಕಲೆಗಳ ಪ್ರಕ್ರಿಯೆ

ಮಾನವನು ತನ್ನ ಉಗಮ ಮತ್ತು ವಿಕಾಸದ ಸಾಮಾಜಿಕ ನೆಲೆಯನ್ನು ಕಂಡುಕೊಂಡ ನಂತರದಲ್ಲಿ ಆಹಾರ, ನಿದ್ರೆ, ಭಯ, ಮೈಥುನ ಇವುಗಳನ್ನು ಹೊರತುಪಡಿಸಿ ಆತ್ಮಾನಂದವನ್ನು ಅರಸುತ್ತಿದ್ದನು. ಅವನ ಅನ್ವೇಷಿಸುವಿಕೆಯೇ ಜಾನಪದಕ್ಕೆ ಉಗಮವಾಯಿತು. ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತಾ ಸಮಾಜ ಸಮೂಹ ಮಾಧ್ಯಮದಲ್ಲಿ ಲೋಕಾನಂದವನ್ನು ನೀಡಿತು. ಅದುವೇ ಜಾನಪದ ಸಾಂಸ್ಕೃತಿಕ ಲೋಕದ ಉಗಮ. ಆ ಕಾಲದಲ್ಲಿ ಅದು ಆನಂದವನ್ನು ಕೊಡುವ ಮಾರ್ಗವೇ ಹೊರತು ಒಂದು ಶಾಸ್ತ್ರೀಯ ಚೌಕಟ್ಟಿನಲ್ಲಿ ಇರಲಿಲ್ಲ. ಕಾಲಕಳೆದಂತೆ ಅದರಲ್ಲಿ ಅನೇಕ ಮಾರ್ಪಾಡುಗಳಾಗುತ್ತಾ ಬಂದವು. ಅದುವೇ ಜಾನಪದ ವಿಕಾಸ ಸ್ಥಿತಿ. ಜಾನಪದವು ಜನರಿಂದ ಜನರಿಗಾಗಿ ಜನರಿಗೋಸ್ಕರ ನಿತ್ಯನೂತನವಾಗಿ ಸಮೂಹ ಮತ್ತು ಪ್ರಾದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ಪ್ರದರ್ಶಿಸುವ ಆತ್ಮಾನಂದವನ್ನು ಲೋಕಾನಂದವನ್ನು ಕೊಡುವ ಒಂದು ಕಲಾಮಾಧ್ಯಮ. ಜನ ಜೀವನಕ್ಕೆ ಅತ್ಯಂತ ಹತ್ತಿರವಾಗಿರುವ ಪರಿಸರ, ಪ್ರಾದೇಶಿಕ ಸಂಸ್ಕಾರ, ಹಬ್ಬಗಳ ಆಚರಣೆ, ಬೆಡಗು ಮೊದಲಾದವುಗಳ ಸಾಂಕೇತಿಕವನ್ನು ಸಾರುವ ಕಲಾಮಾಧ್ಯಮ. ಇದರಿಂದ ಶಿಕ್ಷಣವು ಸಂಸ್ಕೃತಿಯು ವೃದ್ಧಿಸುತ್ತದೆ. ಪ್ರಾದೇಶಿಕ ಏಕತೆಯೂ ಮೂಡುತ್ತದೆ. ಇಂತಹ ಉದ್ದೇಶವನ್ನಿಟ್ಟುಕೊಂಡ ನಮ್ಮ ಜಾನಪದ ಕಲೆಯು ಸರ್ವಾಂಗೀಣ ಪ್ರಗತಿಗೆ ಕಾರಣ. ಜಾತ್ಯಾತೀತವಾದ ಉದ್ದೇಶವನ್ನು ಸಾರುತ್ತಿದೆ. ಜಾನಪದ ಕಲೆಯು ಹೇಗೆ ಉಗಮವಾಯಿತೆಂಬುದನ್ನು ಶಾಸ್ತ್ರೀಯ ನಿರ್ವಚನೆಯಲ್ಲಿ ಒಳಪಡಿಸುವುದು ಕಷ್ಟಸಾಧ್ಯ. ನಿಖರವಾದ ಕಾಲ, ನಿಖರವಾದ ನಿರ್ವಚನ ಮತ್ತು ನಿಗಧಿತ ರೂಪು-ರೇಷೆಗಳನ್ನು ಸಿದ್ಧಾಂತಕ್ಕೆ ಒಳಪಡಿಸುವುದು ಕಷ್ಟ. ಆದರೂ ವ್ಯಕ್ತಿಯಿಂದ ಸಮಾಜಕ್ಕೆ ಬಾಯಿಂದ ಬಾಯಿಗೆ ಪ್ರಸಾರಗೊಂಡತಾಗಿದೆ. ಉದಾಹರಣೆಗೆ ಗೃಹಿಣಿಯೊಬ್ಬಳು ಮನೆಯಲ್ಲಿ ಕುಳಿತು ರಾಗಿಯನ್ನು ಬೀಸುತ್ತಿರುವ ಕಾಲ, ಆಯಾಸ ನಿವಾರಣೆಗೊ, ಮನಸ್ಸಿನ ಸಂತೋಷಕ್ಕೂ, ಗುನುಗುನಿಸಿದ ಒಂದು ಭಾವವೇ ಜಾನಪದ ಪದ್ಯವಾಗಿ ಹೊರಹೊಮ್ಮಿರಬಹುದು. ಗ್ರಾಮದ ಪುರುಷರು, ಹೆಂಗಳೆಯರು ಸೇರಿ ಒಟ್ಟಾಗಿ ಕೋಲಾಟ ಆಡುವಾಗ ಬಳಸಲ್ಪಡುವ ಗಾಯನ ನರ್ತನಗಳು ಜನಪದ ಕಲೆಯ ಅಂಗವೇ ಸರಿ. ಇದು ಕಾಲದಿಂದ ಕಾಲಕ್ಕೆ ಬೇರೆ ಬೇರೆ ಜನಪದ ಕಲೆಗಳು ಹುಟ್ಟಿಕೊಂಡಿರುತ್ತವೆ.

ಜನಪದ ಕಲಾ ಪ್ರಕಾರಗಳಾದ ಪಟಾ ಕುಣಿತ, ನಂದಿಧ್ವಜ, ಗಾರುಡಿಗೊಂಬೆ, ಡೊಳ್ಳುಕುಣಿತ, ಸುಗ್ಗಿಕುಣಿತ ಉಮ್ಮತ್ತಾಟ, ಹನ್ನೆರಡು ಸೆರಗಿನ ಕುಣಿತ, ಗುಮಟೆಪದ, ವೀರಗಾಸೆ, ಔಡಿಕೆ, ಜಗ್ಗಲಿಗೆ ಇನ್ನೂ ಮುಂತಾದ ಪ್ರಕಾರಗಳು ಮಾನವನ ಕಲ್ಪನೆಗೆ ನಿಲುಕಿ ಒಂದೊಂದು ಸಂದರ್ಭದಲ್ಲಿ ಕಲೆಗಳಾಗಿ ಮಾರ್ಪಟ್ಟು ಜನಪದ ಕಲೆಗಳ ಅನನ್ಯತೆಯನ್ನು ಎತ್ತಿ ಹಿಡಿದವು. ದೃಶ್ಯ ಮಾಧ್ಯಮದ ಆವಿಷ್ಕಾರದಿಂದಾಗಿ ಶಿಕ್ಷಣ ಮತ್ತು

ಮನರಂಜನೆಗೆ ಹೊಸ ಸಾಧ್ಯತೆಯೊಂದರ ಪರಿಚಯವಾದಂತಾಯಿತು. ಅಂದಿನಿಂದ ಇಂದಿನವರೆಗೂ ಸಮಾಜದ ವಿವಿಧ ವಿಷಯಗಳನ್ನು ದಾಖಲೀಕರಿಸಿ ಮತ್ತು ಜನರ ನಡುವೆ ಪ್ರಚುರಪಡಿಸುವುದು ನಿರಂತರವಾಗಿ ನಡೆದುಕೊಂಡು ಬರುತ್ತಲೇ ಇದೆ. ಆರಂಭದಲ್ಲಿ ಸಿನಿಮಾಗಳ ಮೂಲಕ ಜನಪ್ರಿಯತೆ ಪಡೆದ ದೃಶ್ಯಮಾಧ್ಯಮ ನಂತರದ ದಿನಗಳಲ್ಲಿ ಎಲ್ಲಾ ಬಗೆಯ ಕಲಾ ಪ್ರಕಾರಗಳನ್ನು ಅಭಿವ್ಯಕ್ತಗೊಳಿಸುವ ಸಶಕ್ತ ಮಾಧ್ಯಮವಾಗಿದೆ. ಅಳಿವಿನ ಅಂಚಿಗೆ ಸರಿದಿದ್ದ ಅನೇಕ ಕಲಾ ಪ್ರಕಾರಗಳು ಮರುಹುಟ್ಟು ಪಡೆದವು. ಸಾಮಾನ್ಯ ಜನ ಕಂಡು ಕೇಳರಿಯದ ಅನೇಕ ಕಲಾ ಪ್ರಕಾರಗಳ ಪರಿಚಯ ಮಾಡಿಕೊಂಡರು. ಇದರಿಂದಾಗಿ ಜನರ ಮನರಂಜನೆಯ ಸಾಧ್ಯತೆಯ ಜೊತೆ ಜೊತೆಗೆ ಹೊಸಜ್ಞಾನ ಕ್ಷಿತಿಜವೊಂದರ ಉದಯವಾಯಿತು. ವಿಶೇಷವಾಗಿ ಜನಪದ ಕಲೆಗಳು ದೃಶ್ಯ ಮಾಧ್ಯಮದ ಮೂಲಕ ದಾಖಲಿಸಲ್ಪಡುವ ಹೊಸಶಕೆಯೊಂದರ ಯುಗ ಆರಂಭವಾಯಿತು. ಕೇವಲ ಸೀಮಿತ ಸಮುದಾಯಗಳ ನಡುವೆ ಪ್ರಚಲಿತವಾಗಿದ್ದ ಜನಪದ ಕಲೆಗಳು ಅಂತರಾಷ್ಟ್ರೀಯ ಮನ್ನಣೆ ಪಡೆಯಲು ಸಾಧ್ಯವಾಯಿತು. ಆಗ ಆರಂಭವಾದದ್ದೆ ಬೆಂಗಳೂರು ದೂರದರ್ಶನದಲ್ಲಿ ಪ್ರಾರಂಭವಾದ ಜಾನಪದ ಸಂಚಿಕೆ ಸಿರಿಗಂಧ.

ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲು ಜಾನಪದ ಆಧಾರಿತ ಕಾರ್ಯಕ್ರಮವಾಗಿತ್ತು. ಅಷ್ಟರಮಟ್ಟಿಗೆ ಜನಪದ ಕಲೆಗಳ ಯಾವುದೇ ಕಾರ್ಯಕ್ರಮವೂ ಕೂಡಾ ದೃಶ್ಯ ಮಾಧ್ಯಮದಲ್ಲಿ ಪ್ರಸಾರ ಕಂಡಿರಲಿಲ್ಲ. ಜಾನಪದ ಪರಿಷತ್ತಿನ ರೂವಾರಿಯಾದ ಶ್ರೀ ಹೆಚ್.ಎಲ್. ನಾಗೇಗೌಡರ ಮಾರ್ಗದರ್ಶನದಲ್ಲಿ ಮೂಡಿಬಂದ ಈ ಕಾರ್ಯಕ್ರಮ ಕರ್ನಾಟಕದ ಜನಪದ ಕಲೆಗಳನ್ನು ನಾಡಿನ ಜನತೆಗೆ ಉಣಬಡಿಸಿತು. ಅಲ್ಲದೇ ಸಮಾಜದ ಮುಖ್ಯವಾಹಿನಿಗೆ ಬಾರದ ಅದೆಷ್ಟೋ ಬುಡಕಟ್ಟು ಸಮುದಾಯದವರನ್ನು ನಾಡಿಗೆ ಪರಿಚಯಿಸಿತು. ೧೯೯೪ರಿಂದ ೧೯೯೭ರ ವರೆಗೆ ನಿರಂತರವಾಗಿ ಮೂಡಿಬಂದ ಈ ಕಾರ್ಯಕ್ರಮ ಜನಮಾನಸದಲ್ಲಿ ಉಳಿಯಿತು. ದೂರದರ್ಶನದ ಹಿರಿಮೆ ಗರಿಮೆಯನ್ನು ಹೆಚ್ಚಿಸಿತು. ಈ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿನಿಂದಾಗಿ ಜನರಿಗೆ ಕಲಾವಿದರ ಮತ್ತು ಕಲೆಗಳ ಬಗ್ಗೆ ಅರಿವು ಮೂಡಿತು. ಅದೆಷ್ಟೋ ಕಲಾವಿದರಿಗೆ ಸರ್ಕಾರಿ ಕಾರ್ಯಕ್ರಮಗಳಲ್ಲಿ ವೇದಿಕೆ ದೊರೆಯಿತು. ದೃಶ್ಯಮಾಧ್ಯಮವೂ ಪ್ರಬಲವಾದ ಕಾರಣವಾಯಿತು. ಆನಂತರ ಅದೆಷ್ಟೋ ಖಾಸಗಿವಾಹಿನಿಗಳು ಬಂದವು ಆದರೆ ಎಲ್ಲವೂ ವಾಹಿನಿಗಳ ರೆವಿನ್ಯೂ ಮತ್ತು ಟಿ.ಆರ್.ಪಿ. (Tele Rating Point)ಗಳನ್ನೇ ಬಂಡವಾಳವಾಗಿಸಿಕೊಂಡು ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುತ್ತವೆ. ಸತ್ಯವನ್ನು ಸುಳ್ಳೆಂದು ಸುಳ್ಳನ್ನು ಸತ್ಯವನ್ನಾಗಿ ತೋರಿಸುವ ದೃಶ್ಯಮಾಧ್ಯಮಕ್ಕೆ ನಾಡಿನ ಸಾಂಸ್ಕೃತಿಕ ರಾಯಭಾರಿಯಾಗಿ ಜನಪದ ಕಲೆಗಳ ಅಳಿವು-ಉಳಿವಿನ ಬಗ್ಗೆ ಬಹು ಗುರುತರವಾದ ಜವಾಬ್ದಾರಿ ಇದೆ. ಅದನ್ನು ನಿಭಾಯಿಸುವ ಹೊಣೆಗಾರಿಕೆಯು ಇದೆ. ಇಂದು ಜನಪದ ಕಲೆ-ಕಲಾವಿದರ ಕುರಿತಾದ

ಸಾಕ್ಷ್ಯಚಿತ್ರ–ಕಿರುಚಿತ್ರಗಳನ್ನು ದೃಶ್ಯಮಾಧ್ಯಮದ ಮೂಲಕ ಪ್ರಸಾರಮಾಡಿ, ಜನಪದ ಕಲೆಗಳ ಪುನರುಜ್ಜೀವನಕ್ಕೆ ನಾಂದಿಹಾಡಿವೆ.

೩.೩ ದೃಶ್ಯಮಾಧ್ಯಮ ಮತ್ತು ಜನಪದ ಕಲೆಗಳು

೩.೩.೧ ಪೂಜಾ ಕುಣಿತ

ಜನಪದ ಕಲೆಗಳಲ್ಲಿ ಅತ್ಯಂತ ಮಹತ್ವವನ್ನು ಹೊಂದಿರುವ ಕಲೆ ಪೂಜಾ ಕುಣಿತ. ಇದು ಧಾರ್ಮಿಕ ಸಾಂಸ್ಕೃತಿಕ, ಶೈಕ್ಷಣಿಕ ಉದ್ದೇಶವನ್ನು ಒಳಗೊಂಡಿದೆ. ದೇವರ ಆರಾಧನೆಯ ಒಂದು ವಿಶಿಷ್ಟ ಭಕ್ತಿಭಾವ ಸಂಗಮವೇ ಪೂಜಾಕುಣಿತ. ಅಂದರೆ ಪೂಜಾ ಕ್ರಮದಲ್ಲಿಯೇ ನಮಗೆ ಇದರ ಪರಿಚಯವಾಗುತ್ತದೆ. ರೈತ ಕುಟುಂಬದವರ ಭಕ್ತಿ ಪರವಶತೆಯ ಧ್ಯೋತಕವಾಗಿ, ದೇವರಿಗಾಗಿಯೇ ಆಚರಿಸುವ ಕುಣಿತ ಪ್ರಧಾನ ಇದಾಗಿರುತ್ತದೆ. ದೃಶ್ಯಮಾಧ್ಯಮದಲ್ಲಿ ಈ ಕಲೆಯ ಪ್ರಧಾನ ಪಾತ್ರಧಾರಿ ಪೂಜಾ ಕಲಶವನ್ನು ಹೊತ್ತವನಾಗಿರುತ್ತಾನೆ. ಪೂಜಾ ಕಳಸವು ಸಮತೋಲನದ ಆಕರ್ಷಕ ಕೇಂದ್ರವಾಗಿರುತ್ತದೆ. ಇದು ದೈವೀ ಅಲಂಕಾರಿಕ ಪ್ರಭಾವಳಿಯಂತೆ ಶೋಭಿಸುತ್ತದೆ. ಇಲ್ಲಿ ಕಲಾ ಪ್ರದರ್ಶನ ಎನ್ನುವುದಕ್ಕಿಂತ ಒಬ್ಬ ವ್ಯಕ್ತಿಯು(ಮಹಿಳೆ ಅಥವಾ ಪುರುಷ) ಭಾರ ಭೂತವಾದ ಪೂಜಾ ಕಲಶವನ್ನು ಕತ್ತಿನ ಮೇಲೆ ಹೊತ್ತು ಸುತ್ತುತ್ತಾ ಇರುವುದು ಸಮತೋಲನ ಕಾಯ್ದುಕೊಳ್ಳುವಿಕೆಯ ನಿದರ್ಶನ. ಇದರಲ್ಲಿ ಯಾವುದೇ ನವರಸಗಳ ಅಭಿನಯವಿರುವುದಿಲ್ಲ. ಬದಲಿಗೆ ಭಕ್ತಿಭಾವ ಪ್ರಧಾನವಾಗಿರುತ್ತದೆ. ಪ್ರಧಾನ ಉದ್ದೇಶ ಭಕ್ತಿಯ ಪೂಜೆ ಹೊರತು, ಕಲೆಯಲ್ಲ ಜನಪದರೇ ಇದನ್ನು ಕಲಾತ್ಮಕ ಎಂದು ಒಪ್ಪಿಕೊಂಡಿಲ್ಲ. ಇದರಲ್ಲಿ ತಮಟೆ ವಾದನ ಎಂಬುದು ಹಿಮ್ಮೇಳದ ಧ್ವನಿಯಷ್ಟೇ. ಪೂಜಾ ಕುಣಿತದವನಿಗೆ ಹುಮ್ಮಸ್ಸು ಬರುವುದಕ್ಕಾಗಿ, ಶಬ್ಧ ಮತ್ತು ಲಯ ಎರಡನ್ನು ಜೋಡಿಸಿಕೊಂಡಿರುತ್ತಾನೆ.

ದೈಹಿಕ ಪರಿಶ್ರಮದ ಸಮತೋಲನವೊಂದನ್ನು ಬಿಟ್ಟರೆ ಮತ್ತೆ ಯಾವ ರೀತಿಯ ಕಲಾ ರಸಸ್ವಾದನೆಯು ಇದರಲ್ಲಿ ಇರುವುದಿಲ್ಲ. ವಿಷಯ ಪ್ರತಿಪಾದಿತ ಕಲೆ ಇದಲ್ಲ, ಸಂಭಾಷಣಾ ಅಥವಾ ಗಾಯನ ಇದು ಒಳಗೊಂಡಿಲ್ಲ. ಹಾಗೆಯೇ ತನ್ನ ಉದ್ದೇಶವನ್ನು ಹೊಂದಿದ ಸಂಕಲ್ಪ ಇದರಲ್ಲಿಲ್ಲ. ಇದು ಋಣಾತ್ಮಕ ಅಂಶವಾಗಿರುತ್ತದೆ. ಆದರೂ ಪೂಜಾ ಕುಣಿತವೆಂಬುದು ದೃಶ್ಯಮಾಧ್ಯಮದಲ್ಲಿ ಮಹತ್ವವನ್ನು ಪಡೆದಿದೆ. ಪೂಜೆ ಹೊತ್ತ ಕಲಾವಿದನು ಗಂಟೆಗಳ ಕಾಲ ತಲೆಯ ಮೇಲೆ ಹೊತ್ತು ಒಂದಿನಿತು ವ್ಯತ್ಯಯವಾಗದಿರುವಂತೆ ಹಿಮ್ಮೇಳದ ಸದ್ದಿನ ಲಯಕ್ಕೆ ತಕ್ಕದಾಗಿಯೇ ಕುಣಿಯುತ್ತಾನೆ. ಈ ಕುಣಿತ ವಿಶಿಷ್ಟ ಪ್ರಕಾರ ಮೌಲ್ಯವನ್ನು ಹೊಂದಿರುತ್ತದೆ.

ಇದರ ವೇಷಭೂಷಣಗಳು ಪೂಜೆಗೆ ಮಾಡುವ ಅಲಂಕಾರಗಳು ಆಕರ್ಷಕವಾಗಿರುತ್ತದೆ. ಸಾಧಾರಣವಾಗಿ ದೃಶ್ಯ ಮಾಧ್ಯಮದಲ್ಲಿ ಪೂಜಾಕುಣಿತವು ಇಂದು ಕೂಡಾ ವಿಶೇಷತೆಯನ್ನು

ಕಾಪಾಡಿಕೊಂಡಿದೆ. ಹೇಗೆಂದರೆ ೬೦ ರಿಂದ ೧೦೦ ಕೆ.ಜಿ. ತೂಕದ ಪೂಜೆಯನ್ನು ಹೊತ್ತ ಕಲಾವಿದ ಅನೇಕ ಚಮತ್ಕಾರಗಳನ್ನು ಮಾಡುತ್ತಾನೆ. ಈ ಚಮತ್ಕಾರಗಳಲ್ಲಿ ನೆಲದಲ್ಲಿ ಬಿದ್ದಿರುವ ನೋಟನ್ನು ಎತ್ತುವುದು, ಲಿಂಬೆಹಣ್ಣನ್ನು ಬಾಯಿಯಲ್ಲಿ ಕಚ್ಚಿ ತೆಗೆಯುವುದು. ನಾಲ್ಕೈದು ಮಕ್ಕಳನ್ನು ಒಟ್ಟಿಗೆ ತನ್ನ ಎಡಬಲಗಳಲ್ಲಿ ಎತ್ತುವುದು, ಇವೆಲ್ಲವೂ ನೋಡುವ ಪ್ರೇಕ್ಷಕನಿಗೆ ತಾನು ಆ ಸ್ಥಳದಲ್ಲಿಯೇ ಇದ್ದು ನೋಡುತ್ತಿರುವಂತೆ ಬಾಸವಾಗುತ್ತದೆ. ಅಲ್ಲದೇ ಈ ಚಮತ್ಕಾರಗಳು ಪ್ರೇಕ್ಷಕನ್ನು ಬೇರೆಡೆ ಗಮನಸೆಳೆಯದೇ ಹಿಡಿದಿಡುವಂತೆ ಮಾಡುತ್ತದೆ. ಪ್ರೇಕ್ಷಕನಿಗೂ ಗೊತ್ತು ಇಷ್ಟೊಂದು ಭಾರವನ್ನು ಹೊತ್ತ ಕಲಾವಿದ ಇಂತಹ ಚಮತ್ಕಾರಗಳನ್ನು ಮಾಡುವುದು ನಿಜಕ್ಕೂ ಕಷ್ಟ. ಹಾಗಾಗಿಯೇ ದೃಶ್ಯಮಾಧ್ಯಮದಲ್ಲಿ ಇಂದು ಕೂಡಾ ಕಲಾವಿದರು ಪ್ರೇಕ್ಷನಿಗೆ ಬೇಕಾಗುವಷ್ಟು ಮನರಂಜಿಸಲು ಅನೇಕ ರೀತಿಯ ಆಕರ್ಷಣೀಯವಾದ ಮತ್ತು ತಮ್ಮನ್ನು ತೊಂದರೆಗೆ ಸಿಲುಕಿಸುವ ಅನೇಕ ಚಮತ್ಕಾರಗಳನ್ನು ಅಳವಡಿಸಿಕೊಂಡಿದ್ದಾರೆ. ಇವರು ಅಳವಡಿಸಿಕೊಂಡ ಚಮತ್ಕಾರಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಂಡ ಮೇಲೆ ಮತ್ತೆ ಇವರು ಪ್ರೇಕ್ಷಕರನ್ನು ಹಿಡಿದಿಡುವ ಸಲುವಾಗಿ ಇನ್ನೊಂದು ಚಮತ್ಕಾರವನ್ನು ಕರಗತ ಮಾಡಿಕೊಂಡು ಪುಜಾಕುಣಿತವನ್ನು ಮುಂದುವರೆಸುತ್ತಾರೆ.



ಪೂಜಾಕುಣಿತದಲ್ಲಿ ಕಲಾವಿದರು

ನಮ್ಮ ಜನಪದರು ಬದುಕಿನ ಪ್ರತಿಯೊಂದು ಹಂತದಲ್ಲೂ ಸಂಪ್ರದಾಯ, ನಂಬಿಕೆ, ಆಚರಣೆಯನ್ನು ರೂಢಿ ಮಾಡಿಕೊಂಡವರು. ಅದನ್ನು ನಂತರದ ಪೀಳಿಗೆಯವರು ಮುಂದುವರೆಸಿ ಬರುವಂತೆ ಹಾದಿಯನ್ನು ಕಲ್ಪಿಸಿದ್ದಾರೆ. ಅಲ್ಲದೆ ಉಳಿಸಿ ಬೆಳೆಸಿಕೊಂಡು ಬಂದ ಅನೇಕ ಕಲೆಗಳಲ್ಲಿ ಪೂಜಾ ಕುಣಿತವೂ ಒಂದು. ದಕ್ಷಿಣ ಕರ್ನಾಟಕದ ಬೆಂಗಳೂರು

ಗ್ರಾಮಾಂತರ, ಮಂಡ್ಯ, ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತವಿರುವ ಪೂಜಾಕುಣಿತವು ಮೂಲತಃ ಶಕ್ತಿದೇವತೆಗೆ ಸಂಬಂಧಿಸಿದ್ದು. ಕುಣಿತ ಪೂಜೆ ಎನ್ನುವುದು ಗ್ರಾಮ ದೇವತೆಯ ಪ್ರತೀತಿ. ಸಾಮಾನ್ಯವಾಗಿ ಪೂಜೆಗಳೆಲ್ಲವೂ ಹೆಣ್ಣು ದೇವರುಗಳದ್ದಾಗಿರುತ್ತವೆ. ಪೂಜೆಯಲ್ಲಿ ಎರಡು ವಿಧ. ಮೊದಲೆಯದಾಗಿ ದೇವತೆಯ ಉತ್ಸವ ಮೂರ್ತಿಯನ್ನು ಒಂದು ಅಡ್ಡೆಗೆ ಬಿಗಿದು ನಾಲ್ಕಾರು ಜನ ಹೆಗಲ ಮೇಲೆ ಹೊತ್ತು ಮೆರೆಸುವುದು ಒಂದು ಬಗೆಯಾದರೆ, ಇನ್ನೊಂದು ಬಗೆಯಲ್ಲಿ ತಳಿ ಅಥವಾ ತಟ್ಟಿಗೆಯಲ್ಲಿ ಅಲಂಕರಿಸಿದ ಪೂಜೆಯನ್ನು ಒಬ್ಬರೇ ಹೊತ್ತು ಕುಣಿಯುವುದು ಮತ್ತೊಂದು ಬಗೆ. ಬಿದಿರಿನ 'ಗಳು' ಅಥವಾ ಸೀಳಿದ ದಬ್ಬೆಗಳನ್ನು ಬಳಸಿ ಸುಮಾರು ೫ ಅಡಿ ಉದ್ದ, ನಾಲ್ಕು ಅಡಿ ಅಗಲದ ಚೌಕಾಕೃತಿ ಹಂದರವನ್ನು ಮೊದಲೆ ಸಿದ್ಧಪಡಿಸಿಕೊಂಡಿರುತ್ತಾರೆ. ಈ ಹಂದರದ ಮಧ್ಯ ಬಾಗಕ್ಕೆ ಮೆರೆದೇವರ ವಿಗ್ರಹವನ್ನು ಇರಿಸಲು ಅನುಕೂಲವಾಗುವಂತೆ ಪುಟ್ಟದಾದ ಮರದ ಹಲಗೆಯನ್ನು ಜೋಡಿಸಿರುತ್ತಾರೆ. ನಂತರ ಅದರ ಮೇಲೆ ದೇವರ ವಿಗ್ರಹಗಳನ್ನಿರಿಸುತ್ತಾರೆ. ಎರಡು ಕಡೆಯ ತಳಿಯ ಉದ್ದಕ್ಕೂ ಭಕ್ತರು ಹರಕೆ ಹೊತ್ತು ಸಲ್ಲಿಸಿರುವ ಬಣ್ಣದ ಸೀರೆಗಳನ್ನು ಇಳಿಬಿಟ್ಟಿರುತ್ತಾರೆ. ಮಾರಿಯನ್ನು ಆರಾಧಿಸುವ ಸಂಸ್ಕೃತಿ ಇಡೀ ಕರ್ನಾಟಕದ ಉದ್ದಗಲಕ್ಕೆ ಇದೆಯಾದರೂ ಮಾರಮ್ಮನ ಹಬ್ಬದ ಸಂದರ್ಭದಲ್ಲಿ ಊರ ಗ್ರಾಮ ದೇವತೆಯನ್ನು ಪೂಜಿಸುತ್ತಾರೆ. ಇವುಗಳ ಪ್ರತೀಕಗಳೆ ಈ ಪೂಜೆ. ಇದು ಶಕ್ತಿ ದೇವತೆಗೆ ಸಂಬಂಧಿಸಿದ ಕುಣಿತ, ಹಬ್ಬದ ಸಂದರ್ಭದಲ್ಲಿ ಗುಡಿಯೊಳಗಿನ ದೇವತೆ 'ಪೂಜೆ' ರೂಪದಲ್ಲಿ ಹೊರಬರುತ್ತಾಳೆ. ಬೆಂಗಳೂರು, ಮಂಡ್ಯ, ಕೋಲಾರ, ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಈ ಪೂಜಾಕುಣಿತವು ಹೆಚ್ಚಾಗಿ ಕಂಡು ಬರುತ್ತದೆ.

ಪೂಜೆ ಕುಣಿತದಲ್ಲಿ ಸಿದ್ಧತೆ

ಸುಮಾರು ೫ ಅಡಿ ಉದ್ದವಿರುವ ೪ ಅಡಿ ಅಗಲವಿರುವ ಬಿದುರಿನಗಳುವಿಗೆ ಅಡ್ಡವಾಗಿ ಉದ್ದವಾಗಿ 'ಗಳು' ವನ್ನು ಜೋಡಿಸಿ ಪೂಜೆಯನ್ನು ಸಿದ್ಧಪಡಿಸುತ್ತಾರೆ. ಈ ರೀತಿಯಾಗಿ ಸಿದ್ಧಪಡಿಸಿದ ಪೂಜೆಗೆ 'ತಳಿ' ಎನ್ನುತ್ತಾರೆ. ಈ ತಳಿಯ ಮಧ್ಯಬಾಗದಲ್ಲಿ ದೇವರ ಮುಖವಾಡವನ್ನು ಜೋಡಿಸುತ್ತಾರೆ. ಆ ನಂತರ ತಳಿಯ ಉದ್ದಕ್ಕೂ ಬಣ್ಣ-ಬಣ್ಣದ ಸೀರೆಯನ್ನು ಇಳಿ ಬಿಡುತ್ತಾರೆ. ಸಾಧಾರಣವಾಗಿ ಈ ಸೀರೆಗಳೆಲ್ಲವೂ ಭಕ್ತರು ಹರಕೆ, ಹೊತ್ತು ಸಲ್ಲಿಸಿದ್ದಾಗಿರುತ್ತದೆ. ತಳಿಯ ಮೇಲಿನ ತುದಿಗೆ ಏಳು ಅಥವಾ ಒಂಭತ್ತು ಬೆಳ್ಳಿ ಇಲ್ಲವೆ ಹಿತ್ತಾಳೆಯ ಕಳಸಗಳಿಂದ ಅಲಂಕರಿಸುತ್ತಾರೆ. ತಳಿಯ ಮೇಲ್ಭಾಗಕ್ಕೆ ಅರ್ಧ ಚಂದ್ರಾಕಾರದ ಹಿತ್ತಾಳೆಯ ಪ್ರಭಾವಳಿ ಕಟ್ಟಿರುತ್ತಾರೆ. ಅದರ ಮೇಲೆ ಪೂರ್ಣಚಂದ್ರನ ಆಕಾರದ ಅಥವಾ ಉರುಟಾದ ಹಿತ್ತಾಳೆ ಪಟ್ಟಿಯನ್ನು ಕಟ್ಟಿರುತ್ತಾರೆ. ದೇವಿಯನ್ನು

ಭಕ್ತರು ನೀಡಿದ ಡಾಬು, ಓಲೆ, ಹಸ್ತ, ಕಡಗ, ಕಾಲುಮುರಿ ಮುಂತಾದ ಆಭರಣದಿಂದ ಅಲಂಕರಿಸುತ್ತಾರೆ. ದೇವಿಯ ವಿಗ್ರಹ ಮತ್ತು ತಳಿಗೆ ಹೂವಿನ ಮಾಲೆಯನ್ನು ಸೊಗಸಾಗಿ ಕಾಣುವಂತೆ ಇಳಿಬಿಡುತ್ತಾರೆ. ತಳಿಯ ಮುಂಭಾಗವನ್ನು ಸಿಂಗರಿಸಿದಂತೆ ತಳಿಯ ಹಿಂಭಾಗವೂ ಚೆನ್ನಾಗಿ ಕಾಣಲೆಂದು ಬೆನ್‌ಬಟ್ಟೆಯನ್ನು ಕಟ್ಟಿರುತ್ತಾರೆ. ಪೂಜೆಯನ್ನು ಹೊತ್ತು ಕುಣಿಯಲು ಅನುಕೂಲವಾಗುವಂತೆ ತಳಿಯ ಕೆಳಬಾಗದಲ್ಲಿ ಹಿತ್ತಾಳೆ ಅಥವಾ ಕಂಚಿನ ಗಿಂಡಿಯನ್ನು ಸೇರಿಸಿ ಬಿಗಿದಿರುತ್ತಾರೆ. ಇದರಿಂದ ಪೂಜಾ ಕುಣಿತ ಕಲಾವಿದ ಎಷ್ಟು ಕುಣಿದರೂ ಪೂಜೆ ಅಲಗಾಡದಂತೆ ಸಹಕರಿಸುತ್ತದೆ. ಸಾಧಾರಣವಾಗಿ ಊರಹಬ್ಬದಂದು ತಂತಮ್ಮ ಊರಿನ ಗ್ರಾಮದೇವತೆಯ ವಿಗ್ರಹವನ್ನು ತಳಿಯಲ್ಲಿರಿಸಿ ಪೂಜಾ ಕುಣಿತವನ್ನು ಮಾಡುವರು. ಪ್ರತಿ ಊರಿನ ಗ್ರಾಮ ದೇವತೆಯ ಗುಡ್ಡನೊಬ್ಬನನ್ನು ನೇಮಕ ಮಾಡಿರುತ್ತಾರೆ. ಅವನ ಕೆಲಸ ದೇವರಿಗೆ ಪೂಜೆ ಮಾಡುವುದು ಮಾತ್ರ ಪೂಜೆಯನ್ನು ಹೊತ್ತು ಕುಣಿಯುವವರೇ ಬೇರೆಯವರಾಗಿರುತ್ತಾರೆ.

ಪೂಜಾ ಕುಣಿತದ ವಿಧಗಳು

ತಮಟೆ, ನಗಾರಿ, ಡೋಲು ಇವುಗಳ ಲಯಕ್ಕನುಗುಣವಾಗಿ ಮೂರ್ಹೆಜ್ಜೆ, ನಾಲ್ಕೆಜ್ಜೆ, ಐದ್ಹೆಜ್ಜೆ, ಆರ್ಹೆಜ್ಜೆ, ಎಂಟ್ಹೆಜ್ಜೆ, ಹದಿನಾಲ್ಕೆಜ್ಜೆ ಹೀಗೆ ವಿವಿಧ ಮಟ್ಟುಗಳಲ್ಲಿ ಕುಣಿಯುತ್ತಾರೆ. ನಿಷ್ಣಾತರಾದ ನುರಿತ ಕಲಾವಿದರು. ೬೦ ರಿಂದ ೭೦ ಕೆ.ಜಿ. ಭಾರವಾದ ಪೂಜೆಯನ್ನು ಹೊತ್ತು ಚಮತ್ಕಾರಗಳನ್ನು ಮಾಡುತ್ತಾರೆ. ಸಾಲಾಗಿ ಬೋರಲಾಗಿ ಮಲಗಿಸಿದ ಮಡಕೆಗಳ ಮೇಲೆ ನಿಧಾನವಾಗಿ ಅದು ಒಡೆಯದಂತೆ, ನಡೆಯುವುದು ಮುಖವನ್ನು ಒಂದೇ ಕಡೆ ಮಾಡಿಕೊಂಡು ತಲೆ ಮೇಲಿರುವ ಪೂಜೆಯನ್ನು ಮಾತ್ರ ತಿರುಗಿಸುವುದು, ೮ ರಿಂದ ೧೦ ವರ್ಷ ತುಂಬಿದ ಮಕ್ಕಳನ್ನು ಎರಡು ಕೈಯಲ್ಲೂ ಹಿಡಿದುಕೊಂಡು ಕುಣಿಯುವುದು, ಸೊಂಟದ ಮೇಲೆ ಕೂರಿಸಿಕೊಂಡು ಕುಣಿಯುವುದು, ಎರಡೂ ಕೈಯಲ್ಲೂ ಪಟವನ್ನು ಹಿಡಿದುಕೊಂಡು ಕುಣಿಯುವುದು, ಕೆಳಗೆ ಇಟ್ಟಿರುವ ಲಿಂಬೆ ಹಣ್ಣನ್ನು ಪೂಜೆಯನ್ನು ಹೊತ್ತು ಬಾಯಲ್ಲಿ ತೆಗೆಯುವುದು ಕೆಳಗಿಟ್ಟಿರುವ ನೋಟನ್ನು ಬಾಯಲ್ಲಿ ಎತ್ತುವುದು. ಪೂಜೆ ಹೊತ್ತು ಹಗ್ಗದ ಮೇಲೆ ನಡೆಯುವುದು, ಹೀಗೆ ನುರಿತ ಕಲಾವಿದರು ಮಾತ್ರ ಈ ಚಮತ್ಕಾರಿಕ ಕುಣಿತವನ್ನು ಮಾಡಲು ಸಾಧ್ಯ. ಪೂಜಾ ಕುಣಿತದಲ್ಲಿ ತೊಟ್ಟಿಲು, ಕುಣಿತ, ಹಾಯ್ಗುಣಿತ, ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಎದುರು ಕುಣಿತ ಎಂಬ ವಿಧಗಳಿವೆ.

ಪೂಜಾ ಕುಣಿತದ ಸಂದರ್ಭ

ಪೂಜಾ ಕೂಣಿತವನ್ನು ಹಬ್ಬ-ಹರಿದಿನ ಜಾತ್ರೆ ಉತ್ಸವಗಳಲ್ಲಿ ಪ್ರದರ್ಶಿಸುತ್ತಾರೆ. ಕೆಲವು ಹಬ್ಬಗಳಲ್ಲಿ ಬೇರೆ ಊರುಗಳಿಂದ ಆಹ್ವಾನಿಸಲಾದ ಹತ್ತಾರು ದೇವತೆಗಳನ್ನು

ಒಂದಡೆ ಸೇರಿ ಪೂಜಾ ಕುಣಿತವನ್ನು ಏರ್ಪಡಿಸುತ್ತಾರೆ. ಆಯಾ ಊರುಗಳಿಂದ ಬಂದ ಹಿಮ್ಮೇಳದವರು ತಮಟೆಯವರು ಬಾರಿಸುವಾಗ ಹತ್ತಾರು ಪೂಜೆಗಳ ಕುಣಿತ ನೋಡಲು ಆಕರ್ಷಣೀಯವಾಗಿರುತ್ತದೆ.

ಪೂಜಾ ಕುಣಿತದ ವಿಧಿ-ವಿಧಾನ

ಪೂಜಾ ಕುಣಿತವನ್ನು ಮಾಡುವ ಕಲಾವಿದನು ತಾನು ಪೂಜೆಯನ್ನು ಹೊರುವ ದಿನಾಂಕ ನಿಗದಿ ಪಡಿಸಿದ ಮೇಲೆ ಆ ದಿನದಿಂದ ಹಬ್ಬ, ಜಾತ್ರೆ, ಉತ್ಸವ ಮುಗಿಯುವ ತನಕ ಬಹಳ ನಿಷ್ಠೆಯಿಂದ ಇರುತ್ತಾನೆ. ಬೇಗನೆ ಎದ್ದು ಸ್ನಾನಮಾಡಿ ದೇವರಿಗೆ ನಮಸ್ಕರಿಸಿ, ಪೂಜಾ ಕುಣಿತಕ್ಕೆ ಹೊರಡುವ ದಿನ ಉಪವಾಸವಿದ್ದು, ಊರ ಮುಂದಿನ ಮಾರಮ್ಮನಿಗೆ ಪೂಜೆ ಮಾಡಿಸಿ, ಮುಖವಾಡದ ವಿಗ್ರಹವನ್ನು ತಳಿಗೆ ಕಟ್ಟಿ ಪೂಜೆಯನ್ನು ಅಲಂಕರಿಸಿ, ತಮಟೆ ಮತ್ತು ನಗಾರಿ ಸದ್ದಿನೊಂದಿಗೆ ಪೂಜೆಯನ್ನು ಹೊತ್ತು ನಿರ್ಧಿಷ್ಟವಾಗಿ ಪೂಜಾ ಕುಣಿತ ನಡೆಯುವ ಸ್ಥಳಕ್ಕೆ ಊರಹಬ್ಬದಂದು ಹೋಗುತ್ತಾನೆ. ಅಲ್ಲಿ ಬೇರೆ ಊರುಗಳಿಂದ ಬಂದಿರುವ ಗ್ರಾಮ ದೇವತೆಗಳು ಸೇರಿರುತ್ತವೆ. ಈ ಎಲ್ಲಾ ದೇವತೆಗಳು ಒಂದೆಡೆ ಇಳಿಸಿ ಅಲ್ಲಿಯೇ ಬಿಡುತ್ತಾರೆ. ಸ್ವಲ್ಪ ಸಮಯದ ನಂತರ ಗ್ರಾಮದ ಪೂಜೆ ಹೊರುವವರು ಈ ಅಕ್ಕ ತಂಗಿ ಗ್ರಾಮ ದೇವತೆಯನ್ನು ಮಾತ್ರ ಆ ಗ್ರಾಮದ ಗುಡಿಯ ಒಳಗೆ ಒಯ್ದು ಪೂಜೆಯನ್ನು ಇಳಿಸಿ ಅಲ್ಲಿಯೇ ಬಿಡುತ್ತಾರೆ. ಸ್ವಲ್ಪ ಸಮಯದ ನಂತರ ಆ ಗ್ರಾಮದ ಪೂಜೆ ಹೊರುವವರು ಈ ಅಕ್ಕ ತಂಗಿ ಗ್ರಾಮ ದೇವತೆಯನ್ನು ಕುಣಿಸುತ್ತಾ ಎದುರು ಬದುರಾಗಿ ನಿಲ್ಲಿಸಿ, ಮಾತನಾಡಿಸಿ ಉಪಚರಿಸುತ್ತಾರೆ. ಆ ನಂತರ ಎಲ್ಲರೂ ಪೂಜಾರಿಯೊಂದಿಗೆ ನದಿಯ ಹತ್ತಿರ ಹೋಗಿ ಅಲ್ಲಿ ಪೂಜೆ ಮಾಡಿ ನೇಮ ಮುರಿದು ಊಟ ಮಾಡಿ ವಾಪಾಸು ತಮ್ಮ ತಮ್ಮ ಊರುಗಳಿಗೆ ಹೊರಡುತ್ತಾರೆ. ಅಕ್ಕಳಾದ ಗ್ರಾಮದೇವತೆ, ಪಕ್ಕದೂರಿನ ತಂಗಿ ಗ್ರಾಮದೇವತೆಯನ್ನು ಕಳಿಸುವಾಗ ಪುನಃ ಗುಡಿಗೆ ಕರೆದೊಯ್ದು ಫಲ ತಾಂಬೂಲವನ್ನು ನೀಡಿ ತಂಗಿಯನ್ನು ಮುಂದಿನ ವರುಷದ ಊರಹಬ್ಬಕ್ಕೆ ಬರಬೇಕೆಂದು ಆಹ್ವಾನಿಸುತ್ತಾಳೆ. ತಮ್ಮ ಊರಿಗೆ ವಾಪಾಸಾದ ತಂಗಿಯನ್ನು ಪೂಜಾಕುಣಿತದ ಕಲಾವಿದ ಊರ ಮುಂದಿನ ಗುಡಿಗೆ ಹೋಗಿ ಮುಖವಾಡವನ್ನು ಗುಡಿಗೆ ಹಿಂದಿರುಗಿಸಿ, ದೇವರಿಗೆ ಪೂಜೆಯನ್ನು ಮಾಡಿಸಿ ಕಲಾವಿದರು ತಮ್ಮ ತಮ್ಮ ಮನೆಗೆ ವಾಪಾಸಾಗುತ್ತಾರೆ.

ಪೂಜಾ ಕುಣಿತದ ಕಲಾವಿದ ಶಿವಣ್ಣ

ಪೂಜಾ ಕುಣಿತದಲ್ಲಿ ಕೇಳಿ ಬರುವ ಹೆಸರೆಂದರೆ ಶಿವಣ್ಣನವರದು. ಎಲ್ಲರೂ ಅವರನ್ನು ಪೂಜಾ ಕುಣಿತದ ಶಿವಣ್ಣ ಎಂದೇ ಕರೆಯುತ್ತಾರೆ. ಪೂಜಾ ಕುಣಿತದಲ್ಲಿ ಅನೇಕ ಚಮತ್ಕಾರಗಳನ್ನು ಮಾಡುವ ಶಿವಣ್ಣ ಸಂಘಟಕರಿಗೆ ಅಚ್ಚುಮೆಚ್ಚು. ಬೆಂಗಳೂರಿನ

ಗ್ರಾಮಾಂತರ ಜಿಲ್ಲೆಯಲ್ಲಿ ರಾಮನಗರ ತಾಲ್ಲೂಕಿನ ಅಂಕನಹಳ್ಳಿಯಲ್ಲಿ ಶಿವಣ್ಣನ ಕುಟುಂಬ ವಾಸವಾಗಿರುತ್ತದೆ. ಪೂಜಾ ಕುಣಿತದ ಶಿವಣ್ಣ ಪೂಜಾ ಕುಣಿತದ ಶಿವಣ್ಣ ಅವರ ತಂದೆ ಜಾಲಿಲಿಂಗಯ್ಯ, ತಾಯಿ ಮಾಯಮ್ಮ, ಅನ್ನ ಬಟ್ಟೆಗೂ ಗತಿಯಿಲ್ಲದ ಕಿತ್ತು ತಿನ್ನುವ ಬಡತನದಲ್ಲಿ ಹುಟ್ಟಿದ ಶಿವಣ್ಣನಿಗೆ ಓದನ್ನು ಅರ್ಧದಲ್ಲಿಯೇ ನಿಲ್ಲಿಸುವಂತೆ ಮಾಡಿತು. ಆಟ ಆಡಲು ಹೋದ ಹುಡುಗನು ಚಡ್ಡಿ ಹರಿದುಕೊಂಡು ಬಂದಾಗ, ತಾಯಿ ತೇಪೆ ಹಾಕಿದ ಚಡ್ಡಿಯನ್ನು ಹೊಲಿಯಲಾಗದ, ಸ್ಥಿತಿಯಲ್ಲಿದ್ದುದ್ದನ್ನು ಕಂಡು ತಾಯಿ ಮಗನಿಗೆ ಹೊಟ್ಟೆಗೆ ತಂದೆಯ ದುಡಿಮೆ ಸಾಕಾಗುವುದಿಲ್ಲ, ನೀನು ಕೆಲಸ ಮಾಡು ಎಂದುಹೇಳಿದರಂತೆ, ಆಗ ಶಿವಣ್ಣನಿಗೆ ೧೪ರ ವಯಸ್ಸು. ಶಿವಣ್ಣ ತಾನು ಏನು ಕೆಲಸ ಮಾಡಬೇಕೆಂದು ಯೋಚಿಸುತ್ತಾ ರಾತ್ರಿಯಲ್ಲಿ ಅಳುತ್ತಾ ಮಲಗಲಿಲ್ಲವಂತೆ. ಕಳ್ಳತನ ಮಾಡಬಾರದು, ಸುಳ್ಳನ್ನು ಹೇಳಬಾರದು. ಒಳ್ಳೆ ರೀತಿಯಲ್ಲಿ ಹಣ ಸಂಪಾದನೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾಗ ಚನ್ನಪಟ್ಟಣದಿಂದ ಬಂದ ಕಲಾವಿದರಾದ ನಾಗಾವರ ಶಿವಲಿಂಗಯ್ಯನವರ ಪೂಜಾ ಕುಣಿತದ ನೃತ್ಯವೇ ಶಿವಣ್ಣನಿಗೆ ಸ್ಫೂರ್ತಿ ಸೆಲೆಯಾಯಿತು. ಪೂಜಾ ಕುಣಿತದ ನಾಗಾವರ ಶಿವಲಿಂಗಯ್ಯನವರು ಇಡೀ ಹಳ್ಳಿಯಲ್ಲಿ ಅಲ್ಲಲ್ಲಿ ನಿಂತು ನೃತ್ಯ ಪ್ರದರ್ಶನ ಮಾಡುತ್ತಿದ್ದಾಗ ೧೪ ವರ್ಷದ ಹುಡುಗ ಶಿವಣ್ಣ ತದೇಕಚಿತ್ತದಿಂದ ಅವನ ಕುಣಿತವನ್ನು ಹಾವಭಾವನ್ನು ನೋಡಿ ತಾನು ಆ ಕಲೆಯನ್ನು ಕಲಿಯಬೇಕೆಂಬ ಆಸಕ್ತಿಯಿಂದ ಮನೆಯ ಮುಂದಿನ ಕಣದಲ್ಲಿ ರಾತ್ರಿಯಲ್ಲಿ ಹರಿವೆಯನ್ನು ತಲೆಯ ಮೇಲಿಟ್ಟುಕೊಂಡು ಅಭ್ಯಾಸ ಮಾಡಿದರು.



ಪೂಜಾಕುಣಿತದ ವೇಷದಲ್ಲಿ ಶಿವಣ್ಣನವರು

ಹರಿವೆಯ ಸಮತೋಲನ ಬಂದ ಮೇಲೆ ಒನಕೆಯನ್ನು ತಲೆಯ ಮೇಲಿಟ್ಟುಕೊಂಡು ಅಭ್ಯಾಸ ಮಾಡಿದರಂತೆ. ನಂತರ ತಲೆಯ ಮೇಲೆ ಭಾರವಿರಿಸಿಕೊಂಡು ಕಂಕುಳಲ್ಲಿ, ಬೆನ್ನಮೇಲೆ, ಒಟ್ಟು ಮೂರು ಮಕ್ಕಳನ್ನು ಎತ್ತಿಕೊಂಡು ಕುಣಿಯುವುದನ್ನು ಕಲಿತರು. ನೆಲದಲ್ಲಿ ಬಿದ್ದ ಲಿಂಬೆಹಣ್ಣನ್ನು ಕುಣಿಯುತ್ತಾ, ಕುಣಿಯುತ್ತಾ ಬಾಯಲ್ಲಿ ತೆಗೆಯುವುದು, ನೆಲದಲ್ಲಿಟ್ಟಿರುವ ನೋಟನ್ನು ಬಾಯಲ್ಲಿ ತೆಗೆಯುವುದು, ಕೂತು ಮಲಗಿ, ಕುಣಿಯುವುದನ್ನು ಕಲಿತು, ಊರವರ ಬಾಯಲ್ಲಿ ಅದೇನೋ ಕಲಿತಾನೋ ಶಿವಣ್ಣ ರಾತ್ರಿ ಹಗಲು ಎನ್ನದೇ ಕಲಿತಿದ್ದಾನೆ ಎನ್ನುವಂತೆ ಮಾಡಿದ್ದರು. ಒಕ್ಕಲಿಗ ಗೌಡರ ಜಾತಿಯಲ್ಲಿ ಹುಟ್ಟಿರುವ ಇವರಿಗೆ ಪೂಜಾ ಕುಣಿತವೇನು ಪೂರ್ವಿಕರಿಂದ ಬಂದದ್ದೇನು ಅಲ್ಲ. ಆದರೂ ಅಂದಿನ ನಾಗಾವರ ಶಿವಲಿಂಗಯ್ಯನವರ ಪೂಜಾ ಕುಣಿತದ ಹೆಜ್ಜೆಗಳು ಇವರಿಗೆ ಕಲಿಯಲು ಸ್ಫೂರ್ತಿಯ ಸೆಲೆಯಾಯಿತು. ಜೊತೆಗೆ ಅವರಲ್ಲಿದ್ದ ತುಡಿತವೇ ಇಂದು ದೇಶದಾದ್ಯಂತ ಶಿವಣ್ಣಸವರ ಹೆಸರು ಚಿರಪರಿಚಿತವಾಗಿರುವಂತೆ ಮಾಡಿದೆ.

ಸಾಮಾಜಿಕವಾಗಿ :

ಶಿವಣ್ಣನವರದು ತುಂಬು ಸಂಸಾರ. ಮೂವರು ಮಕ್ಕಳಿದ್ದಾರೆ. ಎರಡು ಗಂಡು ಮಕ್ಕಳು. ಒಬ್ಬಳು ಹೆಣ್ಣುಮಗಳು. ಪತ್ನಿ ಸಾವಿತ್ರಮ್ಮ ಪತಿಗೆ ಹೆಗಲಿಗೆ ಹೆಗಲಾಗೇ ನಿಂತಿದ್ದಾರೆ. ಬಡತನದಿಂದ ಬಂದ ಇವರು ಮೊದಮೊದಲು ಕೂಲಿಯನ್ನು ಮಾಡಿ ಜೀವನ ನಿರ್ವಹಣೆಯನ್ನು ಮಾಡುತ್ತಿದ್ದರು. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ತುಂಬಾ ಶ್ರಮವಹಿಸಿದ್ದಾರೆ. ಎರಡೂ ಮಕ್ಕಳು ಇಂದು ಕಾಲೇಜಿಗೆ ಹೋಗುತ್ತಿದ್ದಾರೆ. ಶಿವಣ್ಣನವರಿಗೆ ಮೊದ ಮೊದಲು ಕೂಲಿಯೊಡನೆ ಪೂಜಾ ಕುಣಿತದ ನಿರ್ವಹಣೆ ಮಾಡುವುದು ತುಂಬಾ ಕಷ್ಟವಾಗುತ್ತಿತ್ತು. ನಂತರ ಎರಡಲ್ಲೂ ಒಂದು ಸಮತೋಲವನ್ನು ಸಾಧಿಸಿ, ಪೂಜಾ ಕುಣಿತವನ್ನು ಕರಗತ ಮಾಡಿಕೊಂಡ ಮೇಲೆ ಅವರು ತಮ್ಮ ಕುಟುಂಬದಲ್ಲಿ ಹೆಚ್ಚಿನ ಸ್ಥಿರತೆಯನ್ನು ಕಂಡರು. ಈಗ ಕಾರ್ಯಕ್ರಮಗಳು ಹೇರಳವಾಗಿ ದೊರೆಯುವುದರಿಂದ ಇಂದು ಕುಟುಂಬವು ಸ್ಥಿರತೆಯನ್ನು ಕಾಪಾಡಿಕೊಂಡಿದೆ. ಮೊದಲ ಮಗ ಶಿವಕುಮಾರ್ ಬಿ.ಎ. ಓದುತ್ತಿದ್ದರೆ, ಎರಡನೇ ಮಗ ಲೋಹಿತ ಬಿ.ಕಾಂ. ಓದುತ್ತಿದ್ದಾನೆ. ಕೊನೆಯ ಮಗಳಾದ ಲಕ್ಷ್ಮೀಯ ಪಿಯುಸಿ ಮುಗಿಯುತ್ತಿದ್ದಂತೆ ಒಳ್ಳೆಯ ಕಡೆ ಸಂಬಂಧ ನೋಡಿ ಇಂಜೀನಿಯರ್ ವರನಿಗೆ ಮದುವೆಮಾಡಿಕೊಟ್ಟಿದ್ದಾರೆ. ಇಂದು ಇವರದು ಸುಖಿ ಸಂಸಾರ. ಇವರ ಶ್ರೀಮತಿಯವರು ಕೂಡಾ ಗಂಡನ ಮನಸ್ಸನ್ನು ಅರಿತು ಅವರಿಗೆ ಜೊತೆಯಾಗಿ ಸಂಸಾರ ನಿರ್ವಹಿಸಿದ್ದಾರೆ. ಶಿವಣ್ಣನವರು ಜಾನಪದ ದಿಗ್ಗಜ ಎಂದೇ ಖ್ಯಾತರಾಗಿರುವ ದಿವಂಗತ ಹೆಚ್.ಎಲ್. ನಾಗೇಗೌಡರ ಕಣ್ಣಿಗೇ ಬಿದ್ದಿದ್ದೇ ಒಂದು ಸುದೈವ ಎನ್ನುತ್ತಾರೆ. ತಮ್ಮ ಆರಂಭದ ದಿನಗಳಲ್ಲಿ ತಮಗೆ ಪ್ರೋತ್ಸಾಹ ನೀಡಿ ಬೆಳೆಸಿದರೆಂದು ಇಂದು ಕೂಡ

ನೆನೆಯುತ್ತಾರೆ. ಹಿಂದೆ ಇವರ ಕುಣಿತವನ್ನು ಕಂಡು ಅಪಹ್ಯಾಸ ಮಾಡುತ್ತಿದ್ದ ಜನ ಇಂದು ಇವರನ್ನು ಬಹಳ ಗೌರವಯುತವಾಗಿ ಮತ್ತು ತಮ್ಮ ಹಳ್ಳಿಯ ಹೆಸರನ್ನು ಎಲ್ಲೆಡೆ ಪಸರಸಿದರೆಂಬ ಹೆಮ್ಮೆಯಿಂದ ನೋಡುತ್ತಾರೆ. ಶಿವಣ್ಣ ಬರಿಯ ಕಲಾವಿದ ಮಾತ್ರವಲ್ಲ. ಉತ್ತಮ ಸಂಘಟಕರೂ ಹೌದು. ಕಲಾ ತಂಡಗಳನ್ನು ಕಟ್ಟಿ ತರಬೇತಿ ಕೊಟ್ಟು ದೇಶದ ನಾನಾ ಕಡೆ ಪ್ರದರ್ಶನ ನೀಡಿದ್ಧಾರೆ. ಅಲ್ಲದೇ ತಮ್ಮ ತಂಡದ ಹಿರಿಯ ಕಲಾವಿದರಿಗೆ ಮಾಸಾಶನ ಕೊಡಿಸಲು ಶ್ರಮಿಸಿದ್ದಾರೆ. ಊರಿನ ಒಳ್ಳೆಯ ಜನಪದ ತಂಡಗಳಿಗೆ ಬೇರೆ ಊರುಗಳಲ್ಲಿ ಕಾರ್ಯಕ್ರಮ ನೀಡುವಂತೆ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ಮತ್ತು ಇವರ ೩ ಜನ ಮಕ್ಕಳು ಕೂಡ ಕಲೆಯ ಕಡೆ ಒಲಿದಿದ್ದಾರೆ. ಇವರಲ್ಲಿ ತಮ್ಮ ತಮ್ಮ ತಂಡಗಳೊಂದಿಗೆ ಯುವಜನೋತ್ಸವ, ಯುವಜನ ಮೇಳ, ಜನಪದ ಜಾತ್ರೆ ಮುಂತಾದ ಕಡೆ ತಮ್ಮದೇ ಸ್ವಂತ ತಂಡದೊಂದಿಗೆ ಹೋಗಿ ಕಾರ್ಯಕ್ರಮ ನೀಡಿ ಬರುತ್ತಾರೆ.

ಕೆಲವೊಮ್ಮೆ ಚಲನಚಿತ್ರಗಳಿಗೂ ಕೂಡ ಜನಪದ ಕಲಾ ತಂಡಗಳು ಬೇಕೆಂದಾಗ ಪೂಜಾ ಕುಣಿತದ ಶಿವಣ್ಣನವರ ಮಗ ಶಿವಕುಮಾರ್ ಕಲಾ ತಂಡಗಳನ್ನು ಕರೆದೊಯ್ಯುತ್ತಾರೆ. ಗುರುಶಿಷ್ಯ ಪರಂಪರೆ ಎಂಬ ಕನ್ನಡ ಸಂಸ್ಕೃತಿ ಇಲಾಖೆ ಯೋಜನೆಯಡಿ ಶಿವಣ್ಣನವರು ಅನೇಕ ಅಸಕ್ತ ಯುವಕ ಯುವತಿಯರಿಗೆ ತರಬೇತಿ ನಿಡುತ್ತಿದ್ದಾರೆ, ಶಾಲಾ-ಕಾಲೇಜುಗಳಿಗೂ ಕೂಡ ಹೋಗಿ ಕಲಿಸುತ್ತಿದ್ದಾರೆ. ಇವರ ಹತ್ತಿರ ಕೆಲವು ಅಧಿಕಾರಿಗಳ ಮಕ್ಕಳು ಕಲಿತುಕೊಂಡು ಹೋಗಿ ಹೊರದೇಶದ ಅಕ್ಕ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಶಿವಣ್ಣನವರಿಗಂತೂ ತಮ್ಮ ಮಕ್ಕಳ ಬಗ್ಗೆ ಎಲ್ಲಿಲ್ಲದ ಹೆಮ್ಮೆ. ಅವರೇ ಹೇಳುವಂತೆ ಮಕ್ಕಳು ಸಣ್ಣವರಿದ್ದಾಗ ನಾವು ಬಡತನವನ್ನೇ ಹಾಸುಂಡಿದ್ದೆವು. ಯಾವಾಗ ಮಕ್ಕಳ ದೊಡ್ಡವರಾಗುತ್ತಾ ಬಂದರೋ, ಅವರಿಗೂ ಪೂಜಾ ಕುಣಿತದ ಕಲೆ ಕರಗತವಾಯಿತು. ಆಮೇಲೆ ನಾವೆಂದೂ ಹಿಂದಕ್ಕೆ ತಿರುಗಿ ನೋಡಲೇ ಇಲ್ಲ. ಸದಾ ಒಂದಿಲ್ಲೊಂದು ಕಾರ್ಯಕ್ರಮಗಳು ನಾನಿಲ್ಲದಿದ್ದರೂ ಈಗ ನಮ್ಮ ಮಕ್ಕಳು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳುತ್ತಾರೆ. ಅಲ್ಲದೇ ತಾನು ವಿದ್ಯಾಭ್ಯಾಸ ಕಲಿಯದಿದ್ದರೂ ಮಕ್ಕಳು ಇಂದು ಸ್ವತಂತ್ರವಾಗಿ ಬದುಕುತ್ತಿರುವ ಬಗ್ಗೆ ಅವರಿಗೆ ಹೆಮ್ಮೆ ಇದೆ.

ಸಾಂಸ್ಕೃತಿಕವಾಗಿ :

ಮಾರಿಯನ್ನು ಆರಾಧಿಸುವ ಹಿನ್ನಲೆಯಲ್ಲಿ ಪೂಜಾ ಕುಣಿತವು ಹುಟ್ಟಿಕೊಂಡಿದೆ. ಇದು ಶಕ್ತಿ ದೇವತೆಗೆ ಸಂಬಂಧಿಸಿದ ಕುಣಿತ. ಊರಹಬ್ಬ, ಜಾತ್ರೆ, ಮೆರವಣಿಗೆ ಮುಂತಾದ ಸಂದರ್ಭದಲ್ಲಿ ಈ ಹಬ್ಬವನ್ನು ಮಾಡುತ್ತಾರೆ. ಯಾವುದೇ ಹಬ್ಬದ ಸಂದರ್ಭವಿರಲಿ, ಪೂಜೆಯನ್ನು ತಲೆ ಮೇಲೆ ಇಟ್ಟುಕೊಂಡ ಕಲಾವಿದ ನಿಷ್ಠೆಯಿಂದ

ಇರುತ್ತಾನೆ. ಏಕೆಂದರೆ ಪೂಜೆಯನ್ನು ಪ್ರಧಾನವಾಗಿ ಹೊರುವವನು ಅವನೇ ದೇವರ ಮೇಲೆ ಭಯ, ಭಕ್ತಿ ಇವೆರಡೂ ಮೇಳೈಸಿಕೊಂಡು ಕಲಾವಿದ ಜಾತ್ರೆ ಉತ್ಸವಗಳಂದು ಬಹಳ ನಿಷ್ಠನಾಗಿರುತ್ತಾನೆ. ಊರಿನ ಮುಖಂಡರು, ಜಾತ್ರೆ ಅಥವಾ ಊರಹಬ್ಬವನ್ನು ನಿಗಧಿಮಾಡಿದ ಮೇಲೆ ಕಲಾವಿದ ಮತ್ತು ಅವನ ಕುಟುಂಬ ನಿಯಮಗಳಿಗೆ ಒಳಗಾಗುತ್ತದೆ. ತಮಗೆ ತಾವೇ ವಿಧಿನಿಷೇಧಗಳನ್ನು ಹೇರಿಕೊಂಡು, ಸಾತ್ವಿಕ ಆಹಾರವನ್ನು ಹಬ್ಬ ಮುಗಿಯುವವರೆಗೂ ಸೇವಿಸುತ್ತಾರೆ. ಮನೆಯವರಲ್ಲದೇ ಅವರ ಮನೆಗೆ ಯಾರೇ ಬಂದರೂ ಅವರು ಕೂಡಾ ನಿಯಮಗಳನ್ನು ಪರಿಪಾಲಿಸುವರು. ಮನೆಯಲ್ಲೂ ಯಾವುದೇ ರೀತಿಯ ಮುಟ್ಟುಚಟ್ಟುಗಳಾಗದಂತೆ ನಿಗಾವಹಿಸುತ್ತಾರೆ.

ಸಾಯಂಕಾಲದ ಹೊತ್ತಿಗೆ ಪೂಜಾ ಕಲಾವಿದ ನಿಗಧಿತ ಕಾರ್ಯಕ್ರಮ ನಡೆಯುವವರೆಗೂ ತನ್ನ ತಂಡದೊಂದಿಗೆ ಮತ್ತು ಪಕ್ಕವಾದ್ಯದವರೊಂದಿಗೆ ಊರಮುಂದಿನ ಗುಡಿಯ ಎದುರು ಸೇರಿ ಕುಣಿತವನ್ನು ಆರಂಭಿಸುತ್ತಾರೆ. ಪೂಜೆಯನ್ನು ಹೊರುವವರು ಒಕ್ಕಲಿಗ ಗೌಡರಾದರೆ, ಪಕ್ಕವಾದ್ಯದವರಾದ ತಮಟೆ ಮತ್ತು ನಗಾರಿ ಹೊಡೆಯುವವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಊರ ಮುಂದಿನ ಮಾರಮ್ಮನ ಪ್ರೀತ್ಯರ್ಥವಾಗಿ ಈ ಕುಣಿತ ನಡೆಯುತ್ತದೆ. ಇದು ಹಬ್ಬದ ಸಂದರ್ಭದಲ್ಲಿ ನಡೆಯುವ ಕುಣಿತವಾದರೆ, ಇನ್ನೂ ಜಾತ್ರೆಯ ಸಂದರ್ಭದಲ್ಲಿ ಅಕ್ಕಪಕ್ಕದೂರಿನ ಮಾರಮ್ಮ ದೇವರುಗಳಿಗೆ ವೀಳ್ಯವನ್ನು ಕೊಟ್ಟು, ಊರಿನ ಮುಖಂಡರು ತಮ್ಮ ಊರಿಗೆ ಬರಮಾಡಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಊರಿನ ಮಾರಮ್ಮನ ದೇವಿಯು ಪಕ್ಕದೂರಿನ ತನ್ನ ಅಕ್ಕತಂಗಿಯರನ್ನು ಗುಡಿಯ ಒಳಗೆ ಬರಮಾಡಿಕೊಳ್ಳುತ್ತಾಳೆ. ಪರ ಊರಿನಿಂದ ಬಂದ ಪೂಜಾ ಕುಣಿತದ ಕಲಾವಿದರು ಪೂಜೆಯನ್ನು ದೇವರ ಗುಡಿಯ ಒಳಗೆಬಿಟ್ಟು ತಾವು ಹೊರಗಡೆ ಬರುತ್ತಾರೆ. ಇದರ ಅರ್ಥ ಒಂದೆಡೆ ಸೇರಿದ ಅಕ್ಕ-ತಂಗಿ ದೇವರುಗಳು ಉಭಯ ಕುಶಲೋಪರಿಗಳನ್ನು ಮಾತನಾಡಿಕೊಳ್ಳಲಿ ಎಂಬುದು ನಂಬಿಕೆ. ಸಾಯಂಕಾಲದ ಹೊತ್ತಿಗೆ ಎಂದಿನಂತೆ ಪೂಜಾ ಕುಣಿತವು ಆರಂಭವಾಗುತ್ತದೆ. ಸುಮಾರು ೧೦ ರಿಂದ ೧೫ ದೇವರುಗಳು ಸೇರಿದಾಗ ಕುಣಿಯುವ ಕುಣಿತ ನೋಡಲು ಬಲು ಆಕರ್ಷಕವಾಗಿರುತ್ತದೆ. ಅಲ್ಲದೇ ಪೂಜಾಕುಣಿತದ ಕಲಾವಿದರು ತಮ್ಮ ಕುಣಿತದ ಲಯದೊಂದಿಗೆಯೇ ಅಕ್ಕ-ತಂಗಿ ದೇವಿಯರನ್ನು ಎದುರು-ಬದರು ಸೇರಿಸಿ ನಾವಿನ್ಯದಿಂದ ಕುಣಿಯುತ್ತಾರೆ. ಇದರ ಅರ್ಥ ಅವರೇ ಹೇಳುವಂತೆ ಅಕ್ಕ-ತಂಗಿಯರು ಮಾತನಾಡುತ್ತಾರೆ. ಪೂಜಾ ಕುಣಿತವೆಲ್ಲಾ ಮುಗಿದ ಮೇಲೆ ಮತ್ತೆ ಕಲಾವಿದರು ದೇವಿಯರನ್ನು ಊರಿನ ಗುಡಿಯಲ್ಲಿ ಕೂರಿಸುತ್ತಾರೆ. ನಂತರ ಜಾತ್ರೆಯೆಲ್ಲಾ ಮುಗಿದ ಮೇಲೆ ಮರುದಿನ ತಮ್ಮ ತಮ್ಮ ಊರಿಗೆ ಹೊರಡುತ್ತಾರೆ.

ಆದರೆ ಜಾತ್ರೆಗೆ ಹೊರಗಿನಿಂದ ಬಂದ ಎಲ್ಲಾ ದೇವರುಗಳು ಊರಿನತ್ತ ಸಾಗುತ್ತವೆ. ಮಾರಮ್ಮನ ಮೂಲದೇವರಿರುವ ಊರಿನ ಪೂಜಾರಿಯು ಶುಚಿಭೂತನಾಗಿ

ನಡೆಮುಡಿಯೊಂದಿಗೆ ಬಂದು ದೇವಿಯನ್ನು ಪೂಜಿಸಿ, ಎಲ್ಲರಿಗೂ ಮಂಗಳಾರತಿಯನ್ನು ನೀಡಿ ದೇವಿಯನ್ನು ಪೂಜಾ ಕುಣಿತದ ಕಲಾವಿದರಿಗೆ ನೀಡುತ್ತಾರೆ. ಈ ಕಲಾವಿದ ದೇವಿಯನ್ನು ಅದರ ಮೂಲಸ್ಥಾನಕ್ಕೆ ಸೇರಿಸುತ್ತಾನೆ. ನಂತರ ಬಂದಿರುವ ಎಲ್ಲರೂ ನದಿ ತೀರದಲ್ಲಿಯೇ ಅಡಿಗೆಯನ್ನು ಸಿದ್ಧಪಡಿಸಿ, ಊಟಮಾಡಿಕೊಂಡು ಮರಳುತ್ತಾರೆ. ಹೀಗೆ ಪ್ರತೀ ವರ್ಷವೂ ಊರಹಬ್ಬ ಮತ್ತು ಜಾತ್ರೆ ಸಂದರ್ಭದಲ್ಲಿ ಪೂಜಾ ಕುಣಿತದ ಕಲಾವಿದ ಮಾಡುತ್ತಾನೆ.

ಆರ್ಥಿಕವಾಗಿ :

ಶಿವಣ್ಣನವರು ಮೂಲತಃ ಕೃಷಿಕರಾಗಿದ್ದರು. ಅದರಿಂದ ಬರುವ ಆದಾಯ ತುಂಬಾ ಕಡಿಮೆ. ಇರುವ ಒಂದು ಎಕರೆ ತರಿ ಜಮೀನಿನಲ್ಲಿ ಇಡೀ ಕುಟುಂಬ ಜೀವನ ಸಾಗಬೇಕಾಗಿತ್ತು, ಆದ್ದರಿಂದ ಮೂಲವೃತ್ತಿಯಾಗಿ ಪೂಜಾಕುಣಿತವನ್ನು ಅಳವಡಿಸಿಕೊಂಡು ಅದರಿಂದ ಬಂದ ವರಮಾನದಿಂದ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ತಮ್ಮದೇ ಆದ ಕಲಾ ತಂಡಗಳನ್ನು ಕಟ್ಟಿ ತರಬೇತಿ ಕೊಟ್ಟು ದೇಶದ ನಾನಾ ಕಡೆ ಪ್ರದರ್ಶನ ನೀಡಿದ್ದಾರೆ. ಕಲೆ-ಕಲಾವಿದರನ್ನು ಬೆಳೆಸುವತ್ತ ತಮ್ಮ ಜೀವನ ಮೀಸಲಾಗಿರಿಸಿರುವ ಶಿವಣ್ಣನವರಿಗೆ ಸಿಗುವುದು ಮಾತ್ರ ಅತ್ಯಲ್ಪ ಸಂಭಾವನೆ. ಹೀಗಾಗಿ ಇವರಿಗೆ ಜೀವನ ನಿರ್ವಹಣೆ ದುಸ್ತರವಾಗಿದೆ. ಅಲ್ಲದೇ ಕಲಾವಿದರಿಗೆ ಕೊಡುತ್ತಿರುವ ಗೌರವ ಸಂಭಾವನೆ ನಗದು ಕೊಡದೆ ಆರ್.ಟಿ.ಜಿ.ಎಸ್ ಮುಖಾಂತರ ಕೊಡುತ್ತಿರುವುದು ಇಂದು ಎಲ್ಲಾ ಕಲಾ ಸಂಘದವರಿಗೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಅದ ಹೇಗೆಂದರೆ ಕಾರ್ಯಕ್ರಮ ನೀಡಲು ಹೊರಡುವ ಮುನ್ನವೇ ಬರುವ ಎಲ್ಲಾ ಕಲಾವಿದರಿಗೂ ಇವರು ಮೊದಲೇ ಸಂಭಾವನೆ ನೀಡಿ ಕರೆದುಕೊಂಡು ಹೋಗುತ್ತಾರೆ. ಕಾರ್ಯಕ್ರಮ ಮುಗಿದು ಮೇಲೆ ಸರ್ಕಾರದಿಂದ ಬರುವ ಸಂಭಾವನೆ ೧೫ ರಿಂದ ಒಂದು ತಿಂಗಳ ಒಳಗಾಗಿ ಬರುತ್ತದೆ. ಆದರೆ ಬರುವುದು ಎಲ್ಲಾ ಕಲಾವಿದರ ಹೆಸರಿಗೆ ಬ್ಯಾಂಕಿನ ಮುಖಾಂತರ ಬ್ಯಾಂಕಿಗೆ ಬರುವ ಸಂಭಾವನೆಯನ್ನು ಯಾರೂ ಇವರಿಗೆ ವಾಪಾಸ್ಸು ಬಂದು ಕೊಡುವುದಿಲ್ಲ. ಕಾರ್ಯಕ್ರಮ ನೀಡಲೆಬೇಕೆಂಬ ಹುಮ್ಮಸ್ಸಿನಿಂದ ಅವರಿವರ ಕೈಯಲ್ಲಿ ಸಾಲ ತೆಗೆದುಕೊಂಡ ಕಲಾವಿದ ಅದನ್ನು ತನ್ನ ಸ್ವಂತ ಖರ್ಚಿನಲ್ಲಿ ಕಟ್ಟುವ ಪರಿಸ್ಥಿತಿ ಉಂಟಾಗಿದೆ.

ಸುಮಾರು ೧೯೬೨ ರಿಂದ ಇಂದಿನ ತನಕ ಪೂಜಾ ಕುಣಿತದಲ್ಲಿ ಅಂತಹದ್ದೇನು ಮಹತ್ತರವಾದ ಬದಲಾವಣೆಗಳು ಉಂಟಾಗಿಲ್ಲ. ಆದಾಗ್ಯೂ ಬದಲಾವಣೆಗಳೇನಾದರೂ ಆಗಿದ್ದರೆ ಅದೇನಿದ್ದರೂ, ವೇಷ-ಭೂಷಣದಲ್ಲಿ, ಸಂಗೀತದಲ್ಲಿ, ತಮಟೆಯಲ್ಲಿ ಚಲನಚಿತ್ರಗೀತೆಗಳ ಸಂಗೀತ, ಕುಣಿತಗಳ ಗತಿ ಲಯ ಎಲ್ಲವೂ ಮೊದಲಿನಂತೆಯೇ ಇದೆ. ಆದರೆ ಇಂದು ಜನಪದ ಕಲೆಗಳಿಗೆ ಮೊದಲಿಲ್ಲದ ಮನ್ನಣೆ ಸಿಗುವುದೇ ಸಂತೋಷದ ವಿಚಾರ.

೩.೩.೨ ಕಿನ್ನರಿ ಜೋಗಿ ಮೇಳ

ಕಿನ್ನರಿಜೋಗಿ ಕಲೆ ತುಂಬಾ ಆಕರ್ಷಣೀಯ. ಮಾರುದ್ದದ ಬಿದಿರ ಕೋಲಿಗೆ ಸೋರೆಬುರೆಡೆಯನ್ನು ಕಟ್ಟಿರುತ್ತಾರೆ. ಆ ಕೋಲಿಗೆ ತಂತಿ ಅಳವಡಿಸಿರುತ್ತಾರೆ. ಇದಕ್ಕೆ ಕಿನ್ನರಿವಾದ್ಯ ಎಂದು ಕರೆಯುತ್ತಾರೆ. ಇದನ್ನು ಹಿಡಿದುಕೊಂಡು ನುಡಿಸುತ್ತಾ ಖಂಡಕಾವ್ಯಗಳನ್ನು ಹಾಡುವರು. ಇವರನ್ನು ಕಿನ್ನರಿ ಜೋಗಿ ಎಂದೂ ಕರೆಯುತ್ತಾರೆ. ಜೋಗಯ್ಯ, ಜೋಗಪ್ಪ ಎಂತಲೂ ಕರೆಯುವ ವಾಡಿಕೆ ಇದೆ. ಸಾಮಾನ್ಯವಾಗಿ ಶಿವಮೊಗ್ಗ, ಧಾರಾವಾಡ, ಬೆಳಗಾಂ, ಬಿಜಾಪುರ ಜಿಲ್ಲೆಗಳಲ್ಲಿ ಕಂಡು ಬರುವ ಇವರನ್ನು ದೇವರ ಮಕ್ಕಳೆಂದು ಸಹ ಕರೆಯುತ್ತಾರೆ. ಇವರು ಈ ಕಲೆಯನ್ನು ಈ ಕೆಳಗಿನ ಹಾಡಿನ ಮೂಲಕ ಅರಿಯಬಹುದು.

ಚೆಲುವಯ್ಯ ಚೆಲುವೋ ತಾನಿ ತಂದನಾ
ನೀ ಮಾಯಾರಿಪೇ ಕೋಲನ್ನ ಕೋಲೇ
ಬೆಟ್ಟದ ಮ್ಯಾಗಳ ಜಿಲ್ಲೆ ಬಿದಿರು
ಬೇಲಿ ಮ್ಯಾಗಳ ಸೋರೆ ಬುರುಡೆ
ಲೋಲು ಕಿನ್ನರಿ ನುಡಿಸೋನ್ಯಾರಯ್ಯಾ....

ಈ ಜನಪದ ಗೀತೆಯನ್ನು ಎಲ್ಲರು ಕೇಳಿರುತ್ತೇವೆ. ಈ ಗೀತೆಯು ಕಿನ್ನರಿ ಜೋಗಿಗಳ ಕೆಲವು ವಾದ್ಯದ ಬಗ್ಗೆ ತಿಳಿಸುತ್ತದೆ. ಜೋಗಿಗಳು ಸಾಮಾನ್ಯವಾಗಿ ರೂಪವಂತರಾಗಿರುತ್ತಾರೆ.

ಕಿನ್ನರಿ ಜೋಗಿಗಳು ಮತ್ತು ಪುರಾಣದ ಕಥೆಗಳು

ಅರ್ಜುನನೇ ತಮ್ಮ ವೇಷ ಹಾಕಿದ್ದನೆಂದೂ, ತಾವು ಅವನ ಪರಂಪರೆಗೆ ಸೇರಿದವರೆಂದು ಹೇಳುತ್ತಾರೆ. ಇವರಲ್ಲಿ ಕೆಲವರು ಭೈರವ ಸ್ವಾಮಿಗೆ ನಡೆದುಕೊಳ್ಳುತ್ತಾರೆ. ಕಿನ್ನರಿ ಜೋಗಿಗಳ ಕುರಿತು ಅನೇಕ ರೀತಿಯ ಪುರಾಣಗಳಿವೆ. ಭೀಮಕವಿ ರಚಿಸಿದ 'ಬಸವಪುರಾಣ' ದಲ್ಲಿ ಕಿನ್ನರಿ ಶಬ್ದವನ್ನು ತಿಳಿಸಿರುತ್ತಾರೆ. ಶರಣರ ಸಂಘದಲ್ಲಿದ್ದ ಕಿನ್ನರಿ ಬೊಮ್ಮಯ್ಯ ನೆಂಬ ವ್ಯಕ್ತಿಯ ಬಗ್ಗೆ ಉಲ್ಲೇಖವಿದೆ. ಶಿವಶರಣರ ರತ್ನ ಕೋಶದಲ್ಲಿ ಕಿನ್ನರಿ ವಿಚಾರವಿದೆ. ಕೋಣನ ಮುಂದೆ ಕಿನ್ನರಿ ಬಾರಿಸಿದಂಗೆ ಎಂಬುದಾಗಿ ಕಿನ್ನರಿಯ ಕುರಿತು ಜನಪದರಲ್ಲಿ ಅನಾದಿಕಾಲದಿಂದಲೂ ಗಾದೆಗಳ ರೂಪದಲ್ಲಿ ಬಳಕೆಯಲ್ಲಿದೆ. ಕಿನ್ನರಿ ಜೋಗಿಗಳು ಅರ್ಜುನನೆ ತಮಗೆ ಕಿನ್ನರಿ ನೀಡಿ ದೀಕ್ಷೆ ನೀಡಿದ್ದಾನೆಂದು ಹೇಳುತ್ತಾರೆ. ಅರ್ಜುನ ಜೋಗಿಗಳು ಕಥೆಯ ಪುರಾಣ ಅನೇಕ ರೀತಿಯಲ್ಲಿವೆ. ಪಾಂಡವರು ಕಾಡಿನಲ್ಲಿ ಹದಿನಾಲ್ಕು ವರ್ಷವಿದ್ದಾಗ ಕಾಡಿನಲ್ಲಿ ಜೋಗಿಗಳ ಭೇಟಿಯಾಗುತ್ತಾರೆ. ಆ ಸಂದರ್ಭದಲ್ಲಿ ಅರ್ಜುನನು ತಾನು ಕೊಂದಿದ್ದ ರಾಕ್ಷಸನ ಬುರುಡೆ ಮತ್ತು ನರವನ್ನು

ಕಿನ್ನರಿ ಮಾಡಿ ನೀಡಿದನೆಂದು ಹೇಳುತ್ತಾರೆ. ಅರ್ಜುನನೆ ಅವರಿಗೆ ಕಿನ್ನರಿ ಕೊಟ್ಟಿದ್ದರಿಂದ ಅವರು ಪಾಂಡವರ ಕಥೆ ಹಾಡಲು ಆರಂಭಿಸಿದರು. ದ್ರೌಪದಿ ಅರ್ಜುನ ಇಬ್ಬರು ಪಗಡೆಯಾಟ ಆಡುವಾಗ ದ್ರೌಪದಿ ತಾನು ಸೋತರೆ ಮಣಿಪುರದ ದಾಸಿಯಾಗುವುದಾಗಿ, ಅರ್ಜುನ ಸೋತರೆ ೧೨ ವರ್ಷ ಜೋಗಿಯಾಗಿ ದೇಶಾಂತರ ಹೋಗಬೇಕೆಂದು ಪಂಥ ಕಟ್ಟುತ್ತಾರೆ. ಆಟದಲ್ಲಿ ಸೋತ ಅರ್ಜುನನು ಗುಡ್ಡದ ಕಲ್ಲಿನ ಸಿದ್ದರ ಮಠಕ್ಕೆ ಬಂದು ಅಲ್ಲಿ ಸಿದ್ದರ ಸೇವೆ ಮಾಡುತ್ತಾನೆ. ಅವರ ಮುಂದೆ ತಾನು ಜೋಗಿಯಾಗುವುದಾಗಿ ಕೇಳಿಕೊಳ್ಳುತ್ತಾನೆ. ಆಗ ಸಿದ್ಧರು ಮಾಳವತಿ ದೇಶದ ರಾಕ್ಷಸಿಯನ್ನು ಕೊಂದು, ಅದರ ದೇಹದಿಂದ ಕಿನ್ನರಿ ಮಾಡಿ, ಅರ್ಜುನನಿಗೆ ಜೋಗಿ ದೀಕ್ಷೆಯನ್ನು ನೀಡುತ್ತಾರೆ. ಈ ಅರ್ಜುನನ ಸಂತತಿಯೇ ಕಿನ್ನರಿ ಜೋಗಿಗಳು ಎಂಬ ಪ್ರತೀತಿ ಇದೆ. ವನವಾಸಕ್ಕೆ ಹೋದ ಅರ್ಜುನನಿಗೆ ತನ್ನ ತಾಯಿಯನ್ನು ನೋಡಬೇಕೆಂಬ ಆಸೆಯಾಗುತ್ತದೆ. ತಾಯಿಯು ಅವನನ್ನು ಅರ್ಜುನನಿವನು ಎಂದು ಕಂಡು ಹಿಡಿದರೆ ಮತ್ತೆ ೧೨ ವರ್ಷ ವನವಾಸ ಮಾಡಬೇಕಾಗುತ್ತೆ. ಅಲ್ಲದೇ ಅವನು ಋಷಿಯಲ್ಲಿ ತಾನು ಅರಿಕೆ ಮಾಡಿಕೊಳ್ಳುತ್ತಾನೆ. ಋಷಿಯ ವೇಷ ಮರೆಸಿಕೊಂಡು ಹೋಗುವಂತೆ ಹೇಳುತ್ತಾರೆ. ಅವರ ಮಾತಿನಂತೆ ರಾಕ್ಷಸಿಯನ್ನು ಕೊಂದು ಅವಳ ದೇಹದ ವಿವಿಧ ಭಾಗಗಳಿಂದ ಕಿನ್ನರಿಯನ್ನು ತಯಾರಿಸಿ, ಜೋಗಿ ವೇಷ ಧರಿಸಿ ತಾಯಿಯನ್ನು ಭೇಟಿ ಮಾಡುತ್ತಾನೆ. ತನ್ನ ಕೆಲಸ ಮುಗಿದ ನಂತರ ಕಿನ್ನರಿಯನ್ನು ತನ್ನ ಶಿಷ್ಯನಿಗೆ ನೀಡಿ ದೀಕ್ಷೆಯನ್ನು ಕೊಟ್ಟು ಪಾಂಡವರ ಕಥೆ ಹಾಡಿಕೊಂಡು ಇರುವಂತೆ ಹೇಳುತ್ತಾನೆ.

ಇನ್ನೂ ಕೆಲವು ಜೋಗಿಗಳು ಶಿವನಿಂದ ಕಿನ್ನರಿಯನ್ನು ಪಡೆದು, ಕುಲಬಿರುದನ್ನು ಕೂಡ ಪಡದಿರುತ್ತಾರೆ. ಈ ಕುರಿತಂತೆ ಅದರ ಕಥೆ ಹೀಗಿದೆ – ಶಿವನು ಗಂಗೆಯನ್ನು ಮೆಚ್ಚಿಸಲು ಜೋಗಿಯ ವೇಷದಲ್ಲಿ ಹೋಗುತ್ತಾನೆ. ಅದನ್ನು ಕಂಡು ಗಂಗೆಗೆ ಕೋಪ ಬರುತ್ತದೆ. ಆಗ ಶಿವನು ತನ್ನ ನಿಜರೂಪವನ್ನು ತೋರುತ್ತಾನೆ. ಆಗ ಶಿವನು ತನ್ನ ಬೆವರಿನಿಂದ ಜೋಗಿಯನ್ನು ಸೃಷ್ಟಿಸಿದ. ಅವನಿಗೆ ಕಿನ್ನರಿಯನ್ನು ನೀಡಿ ಭೂಲೋಕದಲ್ಲಿ ಸಂಚರಿಸುವಂತೆ ಹೇಳಿದ ಕಥೆಗಳು ಇವೆ. ಭೈರವನ ಆರಾಧಕರಾದ ಇವರು ನಾಥ ಪಂಥದ ಅನುಯಾಯಿಗಳು. ಇವರು ಕಿವಿಗೆ ಕಪಾಲಿ, ಕರ್ಣಕುಂಡಲ ತೊಡಿಸಿ, ಭೈರವನ ಸನ್ನಿದಿಯಲ್ಲಿ ದೀಕ್ಷೆ ಪಡೆಯುತ್ತಾರೆ ಅಲ್ಲದೇ ಕತ್ತಿಗೆ ಸಿಂಗನಾಥ ಎಂಬ ದಾರವನ್ನು ಕಟ್ಟಲಾಗುತ್ತದೆ. ಆ ನಂತರವೇ ಇವರು ಜೋಗಿಗಳಾಗುವುದು.

ಕಿನ್ನರಿ ವಾದ್ಯ ತಯಾರಿಕೆ

ಕಿನ್ನರಿ ಒಂದು ತಂತಿ ವಾದ್ಯ. ಸುಮಾರು ಮೂರು ಮೊಳದ ಉದ್ದದ ಬಿದಿರಿನ ಗಳುವಿಗೆ ಮೂರು ಸೋರೆ ಬುರುಡೆಯನ್ನು ಸಿಕ್ಕಿಸುತ್ತಾರೆ. ಅದರಲ್ಲಿ ಎರಡು ದೊಡ್ಡ

ಸೊರೆ ಬುರೆಡೆ. ಒಂದು ಚಿಕ್ಕದ್ದು. ಬಿದಿರಿನ ಹೊರ ಮೈಗೆ ಮುಳ್ಳು ಹಂದಿ ಚಿಪ್ಪಿನಿಂದ ಮಾಡಿದ ೧೨ ಮೆಟ್ಟಿಲುಗಳಿರುತ್ತವೆ. ಅದನ್ನು ಅವರು 'ಸಾರಿ' ಎಂದು ಕರೆಯುತ್ತಾರೆ. ಸಾರಿಗಳನ್ನು ಜೇನಿನ ಮೇಣದಿಂದ ಅಂಟಿಸುತ್ತಾರೆ. ಬಿದಿರಿನ ಒಂದು ತುದಿಗೆ ತಿರುಪುವ ಶೂಲದ ಕಡ್ಡಿಯನ್ನು ಬಂದಿಸಿದ್ದು, ಮತ್ತೊಂದು ತುದಿಗೆ ಮರದ ಗಿಣಿಯನ್ನು ಬಂದಿಸಿರುತ್ತಾರೆ. ಸಾರಿಯ ಮೇಲಿಂದ ಹಾಯ್ದು ಬರುವ ತಂತಿಗಳು ಈ ಮರದ ಗಿಣಿಯನ್ನು ಸುತ್ತುವರೆದಿರುತ್ತದೆ. ಶೂಲದ ಕಡ್ಡಿಗಳನ್ನು ತಿರುಗಿಸಿ ಶೃತಿಗೆ ಸರಿಹೊಂದುವಂತೆ ಹೊಂದಿಸಿಕೊಂಡು ಹಾಡುತ್ತಾರೆ. ಈ ಕಲಾವಿದರು ಕಚ್ಚೆಪಂಚೆ, ಅದರ ಮೇಲೆ ನಿಲುವಂಗಿ, ಕರಿಯಕೋಟು, ಭುಜದಿಂದ ಇಳಿ ಬಿಟ್ಟ ಶಲ್ಯ, ತಲೆಗೆ ಮುಂಡಾಸು, ಮುಂಡಾಸಿನ ಮದ್ಯೆ ತ್ರಿಶೂಲ, ಇಲ್ಲದಿದ್ದರೆ ನವಿಲುಗರಿ ಸಿಕ್ಕಿಸಿಕೊಳ್ಳುತ್ತಾರೆ. ಉದ್ದದ ಮುತ್ತಿನ ಸರ, ಕಿವಿಗೆ ಕಾಪಾಲಿ, ಮತ್ತು ಕರ್ಣಕುಂಡಲ, ಕೈಯಲ್ಲಿ ಕಿನ್ನರಿ, ಹೆಬ್ಬೆರಳಿಗೆ ಗಗ್ಗರ, ಕಾಲಿಗೆಗೆಜ್ಜೆ, ಹೆಗಲಿಗೆ ಜೋಳಿಗೆ, ಇವಿಷ್ಟು ಕಿನ್ನರಿ ಜೋಗಿಗಳ ವೇಷಭೂಷಣಗಳು.

ಕಿನ್ನರಿ ಜೋಗಿಗಳಲ್ಲಿ ಮೇಳದ ಕ್ರಮ

ಮೇಳಗಳಲ್ಲಿ ಮೂರು ಇಲ್ಲವೇ ಐದು ಜನರಿರುತ್ತಾರೆ. ಇವರು ಕೇವಲ ಅರ್ಜುನ ಜೋಗಿಯ ಹಾಡನ್ನು ಮಾತ್ರ ಹಾಡುವುದಿಲ್ಲ. ಕಿನ್ನರಿಯನ್ನು ನುಡಿಸಿ, ಗಗ್ಗರವ ಗಿಲಿಗಿಸಿ ಹಾಡತೊಡಗಿದರೆ ಮಹಾಭಾರತ ನಮ್ಮ ಮುಂದೆ ಕಟ್ಟಿ ನಿಲ್ಲುತ್ತದೆ. ಹಾಡುವಾಗ ಸಣ್ಣ-ಸಣ್ಣ ಹೆಜ್ಜೆ ಹಾಕಿ ರಂಗಕ್ಕೆ ಲವಲವಿಕೆ ತುಂಬುತ್ತಾರೆ. ಕಿನ್ನರಿ, ದಂಬರಿಗೆ, ಪಿಳ್ಳಂಗೋವಿ, ಬೆಟಗಿ, ಗಗ್ಗರ, ಕಿರುಗೆಜ್ಜೆ ಇವರು ಬಳಸುವ ಪ್ರಮುಖ ವಾದ್ಯಗಳು. ಇತ್ತೀಚಿನ ಸೇರ್ಪಡೆ ಹಾರ್ಮೋನಿಯಂ. ಇವರು ಬಾಳ ಭಿಕ್ಷರಾಜ, ಬಸವಕುಮಾರ ಲೋಹಿತಕುಮಾರ, ಲೀಲಾವತಿ, ಲಕ್ಷಾಪತಿ ರಾಜ, ಶಿವ ಪಾರ್ವತಿ, ಗಂಗೆ-ಗೌರಿ, ಭೈರವ-ಮಾಳವ್ವ, ಭೈರವ-ಕಾಳಿ, ರಾಜಹಂಸ-ಪರಮಹಂಸ, ಆಶಾವತಿ, ಶಾಮಸೇನ, ಚಿತ್ರಶೇಖರ, ಸೋಮಶೇಖರ, ಬಸವಕುಮಾರ, ಲೋಹಿತಕುಮಾರ, ಸತಿಶೀಲಾವತಿ, ಗೋಪಮ್ಮನ ಕತೆ ಮುಂತಾದವುಗಳನ್ನು ಹೇಳುತ್ತಾರೆ. ಗಣೇಶ ಸ್ತುತಿಯಿಂದ ಆರಂಭವಾಗುವ ಮೇಳದಲ್ಲಿ ಪ್ರಧಾನ ಹಾಡುಗಾರ ಹಾಡುತ್ತಾ ನರ್ತಿಸುತ್ತಿದ್ದರೆ. ಇನ್ನುಳಿದವರು ಹಿಮ್ಮೇಳ ಹಾಡುತ್ತಾ, ಹೂಗುಟ್ಟುತ್ತಾ, ನರ್ತಿಸುವಲ್ಲಿ ನರ್ತಿಸುತ್ತಾ, ಹೂಗುಟ್ಟುವಲ್ಲಿ ಹೂ ಗುಟ್ಟುತ್ತಾ, ರಂಜನೀಯ ವೇಷಭೂಷಣಗಳಿಂದ ಸಾಹಿತ್ಯ, ಸಂಭಾಷಣೆ, ಸಂಗೀತದಿಂದ ಮೇಳೈಸಿದ ಈ ಕಲೆ ನೋಡುಗರ ಮೇಲೆ ಪ್ರಭಾವ ಬೀರುವುದಂತೂ ನಿಜ, ಕಿನ್ನರಿ ಜೋಗಿಗಳು ಪ್ರೇಕ್ಷಕರ ಅಭಿರುಚಿಯನ್ನರಿತು ಸಮಯ, ಸಂದರ್ಭ, ಸ್ಥಳ, ಇವುಗಳನ್ನು ವಿವೇಚಿಸಿ ನಿಂತಲ್ಲಿಯೇ ಹೊಸತನ್ನು ಹೇಳಿ ಪ್ರೇಕ್ಷಕರನ್ನು ಹಿಡಿದಿಡುವ ಕಲೆಗಾರಿಕೆ ಇವರಿಗೆ ಸಿದ್ಧಿಸಿದೆ. ಮೇಳ ಮುಗಿದ ಮೇಲೆ ಕಿನ್ನರಿಯನ್ನು ಮನೆಗೆ ಒಯ್ಯುವುದಿಲ್ಲ. ಅದನ್ನು ಊರಿನ ದೇವಸ್ಥಾನದಲ್ಲಿರಿಸಿ ಪೂಜಿಸುತ್ತಾರೆ.

ನವರಾತ್ರಿಯಂದು ಕಿನ್ನರಿಗೆ ವಿಶೇಷ ಪೂಜೆಯನ್ನು ಮಾಡಿ ಕೋಳಿ ಬಲಿಕೊಡುತ್ತಾರೆ. ಹೀಗೆ ತಮ್ಮ ಜೀವನಕ್ಕೆ ಹತ್ತಿರವಾದ ಕಿನ್ನರಿಯನ್ನು ಪ್ರೀತಿಯಿಂದ ಕಾಣುತ್ತಾರೆ.

ಕಿನ್ನರಿ ಜೋಗಿಗಳ ಮೇಳ ನೆಡೆಯುವ ಸಂದರ್ಭ

ಹಬ್ಬ ಹರಿದಿನ, ಜಾತ್ರೆ-ಉತ್ಸವ, ಗಣ್ಯರ ಹುಟ್ಟು ಹಬ್ಬ ಹೇಗೆ ಸಮಾರಂಭ ಮುಂತಾದ ಸಂದರ್ಭಗಳಲ್ಲಿ ಕಿನ್ನರಿ ಜೋಗಿ ಮೇಳ ನಡೆಯುತ್ತದೆ. ಜೋಗಿಗಳಲ್ಲಿ ಹಂಡೆ ಜೋಗಿ, ಬಾಲಜೋಗಿ, ಎಣ್ಣೆ ಜೋಗಿ, ಎಂಬ ಪಂಗಡಗಳಿವೆ. ಕಿನ್ನರಿ ಜೋಗಿಗಳನ್ನು ಹರಕೆ ಜೋಗಿ ಅರ್ಜುನ ಜೋಗಿ, ಭೈರ ಜೋಗಿ ಎಂದು ಕರೆಯುತ್ತಾರೆ. ಜೋಗಿಗಳು ಅಲೆಮಾರಿ ಗುಂಪಿಗೆ ಸೇರಿದವರು ಸಂಸಾರ ಸಮೇತರಾಗಿ ಊರಿಂದೂರಿಗೆ ಹೋಗುವ ಇವರು ಅಲ್ಲಲ್ಲಿಯೆ ಬಿಡಾರ ಹೂಡುತ್ತಾರೆ ಮತ್ತು ಮನೆ ಮನೆ ತಿರುಗಿ ಕಿನ್ನರಿ ನುಡಿಸಿ ಕಥೆ ಹಾಡು ಹೇಳಿ ದವಸ-ಧಾನ್ಯ ಸಂಗ್ರಹಿಸುತ್ತಾರೆ. ಇಂದು ಕೆಲವು ಕಡೆ ನೆಲೆ ನಿಂತು ಜೋಗಿ ಕುಟುಂಬದವರು ಮನೆ ಮಠ ಮಾಡಿಕೊಂಡು, ವೃತ್ತಿ ಗಾಯಕರಾಗಿ ತಮ್ಮ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದಾರೆ. ಅಂಥವರಲ್ಲಿ ನಾಡಿನ ಪ್ರಸಿದ್ಧ ಕಿನ್ನರಿ ಜೋಗಿ ಕಲಾವಿದ ಗುಡ್ಡಪ್ಪ ಜೋಗಿ ಒಬ್ಬರು.



ಕಿನ್ನರಿ ಜೋಗಿಗಳು ಕಾರ್ಯಕ್ರಮದಲ್ಲಿ ತಮ್ಮ ಕಲೆಯೊಂದಿಗೆ

ಕಿನ್ನರಿ ಮೇಳ-ಕಲಾವಿದ ಗುಡ್ಡಪ್ಪ ಜೋಗಿ

ಕಿನ್ನರಿಮೇಳ ಎಂದರೆ ಸಂಘಟಕರಿಗೆ ನೆನಪಾಗುವುದು ಸಾಗರದ ಗುಡ್ಡಪ್ಪಜೋಗಿಯವರು. ತಟ್ಟನೇ ನಿಂತ ನಿಂತಲ್ಲಿಯೇ ತನ್ನ ಆಶು ಕವಿತ್ವದಿಂದ ಎದುರಿಗಿದ್ದವರ ಬಗ್ಗೆ ನಿರರ್ಗಳವಾಗಿ ಮೂರು ರಾತ್ರಿ ಬೇಕಾದರೂ ಹಾಡುತ್ತಾರೆ. ಅಂತಹ ಅಪ್ರತಿಮ ಕಲಾವಿದ ಈ ಗುಡ್ಡಪ್ಪಜೋಗಿ.



ಕಿನ್ನರಿ ಮೇಳ ಕಲಾವಿದ ಗುಡ್ಡಪ್ಪ ಜೋಗಿ ಅವರೊಂದಿಗೆ

ಸಾಮಾಜಿಕವಾಗಿ :

ಊರೂರು ಸುತ್ತುತ್ತಾ ಮೌಖಿಕ ಪರಂಪರೆಯ ಜಾನಪದ ಗಾಯನವನ್ನು ಜನರಿಗೆ ಪರಿಚಯ ಮಾಡಿಕೊಡುತ್ತಿರುವ ಜಾನಪದ ಕಲಾವಿದ ಕೆ. ಗುಡ್ಡಪ್ಪಜೋಗಿಯವರು. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ನೆಲೆಸಿದ್ದಾರೆ. ಮೂಲತಃ ಉತ್ತರ ಕರ್ನಾಟಕದ ಹಾನಗಲ್ ಬಳಿಯ ತಿಳುವಳ್ಳಿ ಗ್ರಾಮದವರು. ಗುಡ್ಡಪ್ಪ ತನ್ನ ತಂದೆ ಕಣಿವೆಪ್ಪ, ತಾಯಿ ಬಸಮ್ಮ ಜೋಗಿಯ ಮೊದಲ ಮಗನಾಗಿ ಜನಿಸಿದರು. ಓದಿದ್ದು ಕೇವಲ ಮೂರನೇ ತರಗತಿಯವರೆಗೆ ಮಾತ್ರ. ತಮ್ಮ ಹನ್ನೆರಡನೇ ವಯಸ್ಸಿನಲ್ಲೇ ತಮ್ಮ ತಂದೆ ಮತ್ತು ದೊಡ್ಡಪ್ಪನವರೊಂದಿಗೆ ಜೋಳಿಗೆ ತಗುಲಿ ಹಾಕಿಕೊಂಡು, ಕಿನ್ನರಿ ಹಿಡಿದು ಜೋಗಿಯ ವೇಷ ತೊಟ್ಟು ಹೊರಟರು. ಭಿಕ್ಷಾಟನೆ ಈ ಜನಾಂಗದವರ ಮುಖ್ಯ ಕಸುಬು. ಒಂದು ಅರ್ಥದಲ್ಲಿ ಅಲೆಮಾರಿಗಳೂ ಕೂಡ. ಬಯಲು ಸೀಮೆಯಲ್ಲಿ ಪಂಚಮಿ ಭಿಕ್ಷೆ ಮೀಸಲಾದರೆ, ಉತ್ತರ ಕನ್ನಡದಲ್ಲಿ ಭಿಕ್ಷಾಟನೆ. ಮಲೆನಾಡಿನಲ್ಲಿ ಕಾರ್ತಿಕ ಹಬ್ಬಗಳಂದು ಇವರಿಗೆ ಆದಾಯವಿದೆ. ಹಾಡುಗಾರಿಕೆಯನ್ನೇ ವೃತ್ತಿ ಮಾಡಿಕೊಂಡು ಭಿಕ್ಷಾಟನೆಯ ಮೂಲಕವೆ ಬದುಕಿಗೊಂದು ದಾರಿ ಕಂಡುಕೊಂಡ ಜನಾಂಗದ ನಡುವೆ ಹುಟ್ಟಿಯೂ ಗುಡ್ಡಪ್ಪ ಜೋಗಿ ತನ್ನ ಹದಿನಾರನೆಯ ವಯಸ್ಸಿನಲ್ಲಿ ಭಿಕ್ಷಾಟನೆಯನ್ನು ತ್ಯಜಿಸಿದ್ದು ಒಂದು ವಿಶೇಷ. ಮನೆ ಮನೆ ಬಾಗಿಲಿಗೆ ಹೋಗುವುದು, ಮನೆಯವರು ಕನಿಷ್ಠವಾಗಿ ಕಂಡು ಏನೋ ಹೇಳುವುದು, ತನಗೆ ಹಿಡಿಸಲಿಲ್ಲವಾದ್ದರಿಂದ ಈ ದಾರಿಯನ್ನು

ತಾನು ಬಿಟ್ಟಿದ್ದೇನೆ ಎಂದು ಗುಡ್ಡಪ್ಪಜೋಗಿ ಹೇಳುತ್ತಾರೆ. ಸಾಮಾನ್ಯರಾಗಿ ಕಾಣುವ ಗುಡ್ಡಪ್ಪ ಜೋಗಿಯವರು ಕೆಂಪು ಬಣ್ಣದ ಜರಿ ರುಮಾಲು, ಕೋಟು ಧರಿಸುವರು. ಮಣಿಹಾರ, ಗೆಜ್ಜೆ ಧರಿಸಿ ಚಿಟಿಕೆ ಹಿಡಿದು ವೇದಿಕೆ ಏರಿ ನಿಂತರೆ ಬೇರೆಯೆ ವ್ಯಕ್ತಿಯಾಗುತ್ತಾರೆ. ಲಾವಣಿ, ಗೀಗೀಪದಗಳಿಂದ ಹಿಡಿದು ರಾತ್ರಿ ಒಂಭತ್ತಕ್ಕೆ ಪ್ರಾರಂಭಿಸಿ ಬೆಳಗಿನ ಜಾವ ಆರು ಗಂಟೆಗೆ ಮುಗಿಸುವ ದೀರ್ಘ ಕಥೆಗಳನ್ನು ಇವರು ಹಾಡಿ ತೋರಿಸುತ್ತಾರೆ. ಜನಪದದ ಎಲ್ಲ ವೈಶಿಷ್ಟಗಳೂ ತುಂಬಿರುವ ರಾಜಹಂಸ, ಪರಮಹಂಸನ ಕಥೆ, ಬಸವ ಕುಮಾರ್ ಲೋಹಿತಕುಮಾರನ ಕಥೆ, ಕೈಲಾಸ ಲೋಕದ ಗೋಪ–ತಾಯಿಯ ಕಥೆ, ವೀರಸೇನೆ ಕಥೆ, ನೀಲಕಂಠ ಮಹಾರಾಜನ ಕಥೆ, ಲಕ್ಷಾಪತಿ ರಾಜನ ಕಥೆ, ಸೋಮಶೇಖರ ಚಿತ್ರಶೆಟ್ಟಿಕಥೆ, ಆರಾವತಿ ಶಾಮಶೇಖರ ಕಥೆ, ಬೆಳ್ಳಿ ಮರ ಬಂಗಾರದಲಿ, ರತ್ನಹಿಂಗಾರ, ಮುತ್ತಿನ ತೆಂಗಿನಕಾಯಿ ಎಂಬ ದೀರ್ಘ ಹೆಸರಿನ ಕಥೆ ಹೀಗೆ ಸುಮಾರು ಹತ್ತು ಹದಿನೈದು ಕಥೆಗಳನ್ನು ಗುಡ್ಡಪ್ಪ ಹೇಳುತ್ತಾರೆ.

ಈ ಕಥೆಗಳಲ್ಲಿಯ ಪ್ರಮುಖ ಅಂಶ ಪೌರಾಣಿಕ ಕಥೆ, ಮಾನವೀಯ ಸಂಬಂಧಗಳು, ಪ್ರಣಯ, ಪ್ರೇಮ ಮತ್ಸರ, ಸೇಡು ನಿಗೂಢತೆ ಪಶ್ಚಾತ್ತಾಪ, ಪೈಪೋಟಿ ಜೊತೆಗೆ ನಗರಗಳ ವರ್ಣನೆ, ಸಮುದ್ರ ಪಯಣ, ಅರಮನೆಗಳ ಚೆಲುವು, ಹೂದೋಟಗಳು ಇತ್ಯಾದಿ ರಂಜನೀಯವಾದುದೆಲ್ಲವನ್ನೂ ಮೌಖಿಕವಾಗಿ ಕಟ್ಟಿ ನಿಲ್ಲಿಸುತ್ತಾರೆ. ಭಾವ ಸನ್ನಿವೇಶಕ್ಕೆ ತಕ್ಕ ರಾಗಗಳಲ್ಲಿ ಹೇಳಲಾಗುವ ಹಾಡುಗಳನ್ನು ಅನಂತರ ಸಂಭಾಷಣೆಯ ರೂಪದಲ್ಲಿ ಹೇಳುವ ಮಾತುಗಳೇ ಗುಡ್ಡಪ್ಪನ ಸಂಗಾತಿಗಳು. ಸಮಯ ಸಂದರ್ಭಕ್ಕೆ ಅನುಗುಣವಾಗಿ ಮಂತ್ರಿ, ಚಾರಕರಾಗಿ, ಗೂಢಚಾರ, ಕುದುರೆ ಸವಾರ ಮೊದಲಾದ ಪಾತ್ರ ವಹಿಸುತ್ತಾರೆ. ಮಾತು ವಾದ ವಿವಾದ, ಜಗಳ ಇತ್ಯಾದಿ ಇವರಲ್ಲೇ ನಡೆದು ಕುತೂಹಲವನ್ನು ಕೆರಳಿಸುತ್ತಾರೆ. ಆಟದ ಪ್ರಾರಂಭದಲ್ಲಿ ಕೋಟು ಇತ್ಯಾದಿ ಧರಿಸಿ, ಗುಡ್ಡಪ್ಪ ಕಥೆಯಲ್ಲಿ ರಾಜನಾಗುತ್ತಾರೆ. ರಾಜಕುಮಾರನ ಆಗಮನವಾಗುತ್ತಿದ್ದಂತೆ ಜರಿಯ ವಲ್ಲಿ, ಹಾರ, ಗೆಜ್ಜೆ ಇತ್ಯಾದಿ ಧರಿಸಿ ಬಂದು ಕಥೆಗೊಂದು ಶೋಭೆಯನ್ನು ತಂದುಕೊಡುತ್ತಾರೆ. ಕಥೆಯ ಓಟಕ್ಕೆ ಅನುಗುಣವಾಗಿ ಮತ್ತು ಪ್ರೇಕ್ಷಕವರ್ಗವನ್ನು ರಂಜಿಸಲು ಉರ್ದು ಹಾಡು, ತೆಲುಗು, ಮರಾಠಿ ಹಾಡುಗಳು, ಮಲೆಯಾಳಂ ಹಾಡು, ಜೋಗುಳ ಹಾಡು ಕೂಡ ನಡುವೆ ಬಂದು ಹೋಗುತ್ತದೆ. ಕಥೆಯ ಮಧ್ಯೆ ಗೀಗೀಪದಗಳು, ಲಾವಣಿಗಳನ್ನು ಹೇಳುವುದು ಒಂದು ವಿಶೇಷ. ಕಥೆ ಮತ್ತೆ ಮುಂದುವರೆಯುತ್ತದೆ. ಬೆಳಗಿನ ತನಕ. ಹೀಗೆ ಗುಡ್ಡಪ್ಪಜೋಗಿಯವರು ಜನರಿಗೆ ಕಥೆಯೂ ತಮ್ಮ ಮುಂದೆ ನಡೆಯುತ್ತಿದೆಯೇನೋ ಎಂಬಂತೆ ಹೇಳುತ್ತಾರೆ.

ಈ ಕಲಾವಿದನಿಗೆ ವೇದಿಕೆಯ ಮೇಲೆ ನಿಲ್ಲುವ ದಿಟ್ಟತನ, ಜನಪದ ಗಾಯನಕ್ಕೆ ಬೇಕಾದ ಗಡಸುತನ, ಶಬ್ದಗಳನ್ನು ಬಿಡಿಸಿ ಹೇಳುವ ಕಲೆಗಾರಿಕೆ, ಶ್ರೋತೃಗಳ ಮನಸೆಳೆಯುವ

ರಾಗ ಧ್ವನಿ ಎಲ್ಲವೂ ಇದೆ. ಇವರ ಸಂಗಡಿಗರು ಕೂಡ ಉತ್ತಮ ಕಲಾವಿದರು ಕೆಲ ಸಂದರ್ಭಗಳಲ್ಲಿ ಸಣ್ಣ ಹೆಜ್ಜೆ ಹಾಕಿಕೊಂಡು, ಗೆಜ್ಜೆಯ ನಾದ ಮಾಡುತ್ತ ಇವರು ಕುಣಿಯುವುದು ಮತ್ತೂ ಹೆಚ್ಚು ಆಕರ್ಷಿಸುತ್ತದೆ. ಈ ಕಾರಣದಿಂದಾಗಿಯೇ ಗುಡ್ಡಪ್ಪ ಹಾಡುಗಾರಿಕೆಗೆ ವಿದ್ಯಾವಂತರು ಬೆರಗಾಗುತ್ತಾರೆ ಎಂದು ಹೇಳುವುದು ಒಪ್ಪಬೇಕಾದ ಮಾತು. ಕಿನ್ನರಿ ಜೋಗಿಗಳದು ವರ್ಣರಂಜಿತವಾದ ವೇಷಭೂಷಣದಿಂದ ಕೂಡಿದ ಬದುಕು. ಹೊಟ್ಟೆ ಪಾಡಿಗಾಗಿ ಭಿಕ್ಷಾಟನೆ ಮಾಡಿದರೂ, ಕಿನ್ನರಿ ಹಿಡಿದು ಬದುಕನ್ನೇ ಕಲಾಮಯವಾಗಿಸಿಕೊಂಡ ವಿಶಿಷ್ಟವಾದ ಜನ ಜೋಗಿಗಳು. ನಾಥ ಪಂಥಕ್ಕೆ ಸೇರಿದ ಯಾವುದಾದರೂ ಒಂದು ಕ್ಷೇತ್ರಕ್ಕೆ ಹೋಗಿ ತಮ್ಮ ಜೋಗಿ ವೃತ್ತಿಯ ಪರವಾನಗಿಯನ್ನ ನವೀಕರಿಸಕೊಳ್ಳುತ್ತಾರೆ. ಮೂಲತಃ ಮರಾಠಿ ಮನೆಮಾತಿನ ಇವರು ಕನ್ನಡ ಪ್ರದೇಶದಲ್ಲಿ ನೆಲೆಸಿದ ನಂತರ ಸ್ಥಳೀಯ ಭಾಷೆಯಾದ ಕನ್ನಡವನ್ನೇ ಕಲಿತು ಅದರಲ್ಲೇ ಕಥೆ ಹಾಡುವ ಕಲೆಗಾರಿಕೆಯನ್ನು ರೂಢಿಸಿಕೊಂಡವರು.

ಗುಡ್ಡಪ್ಪ ಹೆಚ್ಚು ಓದಿದವರಲ್ಲ, ಆದರೆ ಆಶುಕವಿ, ಎಸ್.ಟಿ.ಬಸ್, ಪೋಲೀಸ್ ಇಲಾಖೆ, ಸರಕಾರದ ಕೆಲ ವಿಫಲ ಯೋಜನೆಗಳ ಕುರಿತು ಇವರು ಬರೆದಿರುವ ಲಾವಣಿಗಳನ್ನು ಜನ ಯಾವಾಗಲೂ ಕೇಳಬಯಸುತ್ತಾರೆ. ಸಾಕ್ಷರತಾ ಆಂದೋಲನದ ಆಶ್ರಯದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೆಲ ಆಯ್ದ ತಂಡಗಳಿಗೆ ಗುಡ್ಡಪ್ಪ ಜೋಗಿ ಒಂದು ತಿಂಗಳು ಲಾವಣಿ ಗೀಗೀಪದಗಳನ್ನು ಕಲಿಸುವುದರ ಜೊತೆಗೆ ಹಾಡುಗಳನ್ನು ಬರೆದಿದ್ದಾರೆ. ಶಿವಮೊಗ್ಗ ಜಿಲ್ಲೆಯ ಅಕ್ಷರತುಂಗಾದವರು ಪ್ರಕಟಿಸಿದ ಬಾ ತಂಗಿ ಶಾಲೆಗೆ ಹಾಡನ್ನು ಇವರೇ ರಚಸಿದ್ದಾರೆ. ಅಲ್ಲದೆ ಸರ್ಕಾರದ ಅರಿವಿನ ಕಾರ್ಯಕ್ರಮದಲ್ಲಿ ಇವರ ಪಾಲು ಇದೆ. ಪಲ್ಸ್ ಪೋಲೀಯೋ ಕಾರ್ಯಕ್ರಮದಲ್ಲಿ ಜಾನಪದ ಕಥೆ, ಜಾನಪದ ಲಾವಣಿ, ಜಾನಪದ ಗೀತೆಗಳ ಮೂಲಕ ಜನರಿಗೆ ಅರಿವಿಗೆ ಬರುವಂತೆ ಪಲ್ಸ್ ಪೋಲಿಯೋದ ಅಗತ್ಯ, ಅನಿವಾರ್ಯತೆಗಳ ಬಗ್ಗೆ ತಿಳಿಸಲು ಶ್ರಮಿಸಿ ಸಫಲರಾಗಿದ್ದಾರೆ. ಗುಡ್ಡಪ್ಪ ಜೋಗಿಯವರಿಗೆ ಮೂರು ಜನ ಮಕ್ಕಳಿದ್ದಾರೆ. ಇವರ ಪುತ್ರಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇರುವ ಎರಡು ಗಂಡು ಮಕ್ಕಳು ಕೂಡ ವಿದ್ಯಾಭ್ಯಾಸವನ್ನು ಮಾಡಿ ಸ್ವಂತ ಕಾಲ ಮೇಲೆ ನಿಂತಿದ್ದಾರೆ.

ಮೊದಲ ಮಗನಿಗೆ ಇತ್ತೀಚೆಗೆ ಕೆ.ಇ.ಬಿ.ಯಲ್ಲಿ ಕೆಲಸವೂ ದೊರೆತ್ತಿದೆ. ಇವರ ತಮ್ಮ ಸುರೇಶ್ ಜೋಗಿಯವರು ಸರ್ಕಾರಿ ನೌಕರರಾಗಿದ್ದು, ಹೆಬ್ರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಾರ್ಯಕ್ರಮಗಳಿದ್ದಾಗ ಇವರೊಂದಿಗೆ ಹಾಡಿ ಕುಣಿದು ಅಣ್ಣನ ಕೆಲಸಕ್ಕೆ ಜೊತೆಯಾಗುತ್ತಾರೆ. ಮನೆಯಲ್ಲಿ ಇವರ ಶ್ರೀಮತಿಯವರಿಂದ ಪ್ರೋತ್ಸಾಹ ಕೂಡ ದೊರಕುತ್ತಿದೆ. ಇಡೀ ಸಂಸಾರವೇ ಇವರನ್ನು ಪ್ರೋತ್ಸಾಹಿಸುತ್ತಿದೆ. ಇಂದು ಹೆಸರು ಮಾಡಿರುವ ಗುಡ್ಡಪ್ಪ ಜೋಗಿಯವರ ಸಾಫಲ್ಯದ ಹಿಂದೆ ಇವರ ಇಡೀ ಸಂಸಾರವೆ ಬೆನ್ನೆಲುಬಾಗಿದೆ ಎಂದರೆ

ತಪ್ಪಾಗಲಾರದು. ಇವರನ್ನು ಸ್ಥಳೀಯರು ಬಹಳ ಗೌರವದಿಂದ ಕಾಣುತ್ತಾರೆ. ಕಲೆಯಲ್ಲಿ ಅಥವಾ ಯಾವುದೇ ಕಾರ್ಯಕ್ರಮಗಳಲ್ಲಿ ತೊಡಕಾದರೆ ಇವರ ಮಾರ್ಗದರ್ಶನ ಬೇಡುತ್ತಾರೆ. ಆಸಕ್ತರಿಗೆ ತರಬೇತಿಯನ್ನು ನೀಡಿ ಈ ಕಲೆಯನ್ನು ಉಳಿಸಬೇಕೆನ್ನುತ್ತಾರೆ. ಈ ಕಲೆ ಮುಂದೆಯೂ ಉಳಿಯಬೇಕು. ಬೆಳೆಯಬೇಕೆಂಬುದೇ ಜೋಗಿಯವರ ಆಶಯವಾಗಿದೆ. ಇಂದು ಇಡೀ ಕುಟುಂಬವೇ ಸುಸ್ಥಿತಿಯಲ್ಲಿದ್ದರೂ ತನಗೆ ಖ್ಯಾತಿಯನ್ನು ತಂದ ಈ ಕಲೆಯ ಬಗ್ಗೆ ಗುಡ್ಡಪ್ಪ ಅವರಿಗೆ ಎಲ್ಲಿಲ್ಲದ ಪ್ರೀತಿ. ಹಾಗಾಗಿ ಅವರು ಇಂದು ತಂಡವಿಲ್ಲದ್ದರೂ ಕಾರ್ಯಕ್ರಮಗಳನ್ನು ಒಪ್ಪಿಕೊಂಡಾಗ, ತನ್ನ ಮನೆಯ ಸದಸ್ಯರಿಗೆ ಕೆಲಸಕ್ಕೆ ರಜೆ ಹಾಕಿಸಿಯಾದರೂ ತಂಡವನ್ನು ಕಟ್ಟಿಕೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡುತ್ತಾರೆ. ಇವರ ಮಕ್ಕಳು ಕೂಡಾ ಕಲೆಯನ್ನು ತುಂಬಾ ಪ್ರೀತಿಸುತ್ತಾರೆ. ಕೈತುಂಬಾ ಸಂಬಳ ತರುವ ಕೆಲಸವಿದ್ದರೂ, ಇಂದೂ ಕಲೆಗೆ ಬೆಲೆಯನ್ನು ಕೊಟ್ಟು ಉಳಿಸಿಕೊಂಡು, ನಡೆಸಿಕೊಂಡು ಬರುತ್ತಿದ್ದಾರೆ.

ಇವರು ಜಾನಪದ ಉತ್ಸವ, ಜಾನಪದ ಕಾರ್ಯಾಗಾರ ಕರ್ನಾಟಕ ಸರಕಾರದ ಸಾಕ್ಷರತಾ ಆಂದೋಲನ, ಸಂಗೀತ ಮತ್ತು ನಾಟಕದ ವಿಭಾಗದ ಇನ್ನೂ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಆಕಾಶವಾಣಿಯಲ್ಲೂ ಕೂಡ ಇವರ ಕಂಠ ಝೇಂಕರಿಸಿದೆ. ಬರೀ ಜೋಗಿಪದಗಳಲ್ಲದೆ, ಗೀಗೀಪದ, ಲಾವಣಿ, ತತ್ವ ಪದಗಳನ್ನು ಮೈಗೂಡಿಸಿಕೊಂಡಿದ್ದಾರೆ. ಇವರಿಗೆ ೧೯೯೯ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ೨೦೦೭ರ ಸಂದೇಶ್ ಕಲಾ ಪ್ರಶಸ್ತಿ, ೨೦೧೦ರ ಆರ್ಯಭಟ ಪ್ರಶಸ್ತಿ, ಕರ್ನಾಟಕ ಜಾನಪದ ಪರಿಷತ್ತಿನ ದೊಡ್ಡ ಮನೆ ಲಿಂಗೇಗೌಡ ಪ್ರಶಸ್ತಿ ೨೦೧೩ರ ಜಾನಪದ ಅಕಾಡೆಮಿ ಪ್ರಶಸ್ತಿಯು ಸೇರಿಕೊಂಡು ಗುಡ್ಡಪ್ಪನವರನ್ನು ನಿಜವಾದ ಅರ್ಥದಲ್ಲಿ ಸಾಧನೆಯ ಗುಡ್ಡಮಾಡಿದೆ. ಸರಕಾರ ಮತ್ತು ಅಕಾಡೆಮಿಗಳು ಕಲಾವಿದ ಉತ್ತಮ ಸ್ಥಿತಿಯಲ್ಲಿರುವಾಗಲೆ ಅವನನ್ನು ಪುರಸ್ಕರಿಸಬೇಕು, ಗೌರವಿಸಬೇಕು ಎಂಬುದು ಇವರ ಅನಿಸಿಕೆ. ಹಾಡುವ ವಯಸ್ಸಿನಲ್ಲಿ, ಕುಣಿಯುವ ಅವನನ್ನು ಪುರಸ್ಕರಿಸಿದರೆ, ಅವನು ಮತ್ತು ಉತ್ಸಾಹದಿಂದ ಹುಮ್ಮಸ್ಸಿನಿಂದ ಹಾಡುತ್ತಾನೆ, ಕುಣಿಯುತ್ತಾನೆ. ಜನ ಕೂಡ ಅವನ ಪ್ರತಿಭೆಯನ್ನು ಜೀವಂತ ಕಾಣುತ್ತಾರೆ. ಕಲಾವಿದನಿಗೆ ೭೦/೮೦ ವರ್ಷವಾದಾಗ ಅವನಿಗೆ ಕೊಡುವ ಪುರಸ್ಕಾರದಿಂದ ಏನು ಲಾಭ? ಉತ್ತಮ ಕಲಾವಿದನನ್ನು ಬೇಗ ಗುರುತಿಸಿ, ಬೇಗನೆ ಪುರಸ್ಕರಿಸಿ ಇದನ್ನು ಯೋಚಿಸಬೇಕಾಗಿದೆ ಎಂದು ಅವರು ಸರ್ಕಾರಕ್ಕೆ ಹೇಳುತ್ತಾರೆ?

ಸಾಂಸ್ಕೃತಿಕವಾಗಿ :

ಮಹಾರಾಷ್ಟ್ರ ಮೂಲದಿಂದ ಬಂದಿರುವ ಕಿನ್ನರಿಜೋಗಿಗಳ ಮಾತೃಭಾಷೆ ಮರಾಠಿ. ನಾಥ ಸಂಪ್ರದಾಯದ ಅನುಯಾಯಿಗಳಾದ ಇವರು ಕಾಳಭೈರವನ ಆರಾಧಕರು.

ಕರ್ನಾಟಕದ ೧೨ ಜಿಲ್ಲೆಗಳಲ್ಲಿ ಇವರು ಕಂಡು ಬರುತ್ತಾರೆ. ಜೋಗಿ ಸಮುದಾಯದವರಿಗೆ ಮಂಗಳೂರಿನ ಕದ್ರಿ ಕಾಳಭೈರವ ಮಠವು ಮಹತ್ವದ್ದಾಗಿದೆ. ಜೋಗಿಗಳು ಎಲ್ಲೆಲ್ಲಿ ಮನೆಮಾಡಿಕೊಂಡಿರುತ್ತಾರೋ ಅಲ್ಲೇ ಹತ್ತಿರದಲ್ಲಿರುವ ಕಾಲಭೈರವ ಮಠಗಳಿಗೆ ನಡೆದುಕೊಳ್ಳುತ್ತಾರೆ. ದಸರಾ ಹಬ್ಬದಲ್ಲಿ ಇವರು ಮೇಳಗಳಲ್ಲಿ ಉಪಯೋಗಿಸುವ ಕಿನ್ನುರಿ, ಶಿವಜೋಳಿಗೆ, ತ್ರಿಶೂಲ, ಜಿಂಕೆ ಕೊಂಬಿನ ವಾದ್ಯ-ಶಿಂಗನಾದವನ್ನು ನುಡಿಸಿ, ಕಾಳಭೈರವನ ಮುಂದಿಟ್ಟು ಪೂಜೆ ಮಾಡುತ್ತಾರೆ. ನವರಾತ್ರಿಯಲ್ಲಿ ಒಂಭತ್ತು ದಿನವೂ ಪೂಜೆ ಮಾಡುತ್ತಾರೆ. ಇದಕ್ಕೆ ಇವರು ದೀಪ ಹಾಕುವುದು ಎಂದು ಕರೆಯುತ್ತಾರೆ. ಜೋಗಿಗಳು ಬುಡಕಟ್ಟು ಸಂಸ್ಕೃತಿಯವರು. ಇವರು ಎಲ್ಲೇ ಮೇಳಗಳನ್ನು ನೀಡಿ ಬರಲಿ, ಬಂದ ನಂತರ ಕಿನ್ನುರಿಯನ್ನು ಕಾಳಭೈರವನ ಜಗುಲಿಯಲ್ಲಿಯೇ ಇಡುತ್ತಾರೆ.

ಕಾಲಭೈರವನ ಅನುಯಾಯಿಗಳಾದ ಇವರು ಕರಿನಾಯಿಯ ಪೂಜೆಯನ್ನು ಮಾಡುತ್ತಾರೆ. ಪ್ರತೀ ಹಬ್ಬದಲ್ಲೂ ಕೂಡಾ ಜನಪದ ವಾದ್ಯಗಳ ರಾಜನೆಂದೇ ಹೆಸರಾದ ಕಿನ್ನುರಿಯನ್ನು ಕಾಳಭೈರವನ ಪದ ತಲದಲ್ಲಿಟ್ಟು ಪೂಜೆ ಮಾಡುತ್ತಾರೆ. ತಮಗೆ ಅನ್ನನೀಡುವ ಕಿನ್ನುರಿಯ ಬಗ್ಗೆ ಇವರಿಗೆ ಎಲ್ಲಿಲ್ಲದ ಪ್ರೀತಿ. ಹಾಗಾಗಿಯೇ ಯಾವುದೇ ಸಂದರ್ಭದಲ್ಲಿಯೂ ಕೂಡ ಕಿನ್ನುರಿಯು ಕಾಳಭೈರವನ ಹತ್ತಿರದಲ್ಲಿಯೇ ಇರುತ್ತದೆ. ನವರಾತ್ರಿ ಆಯುಧಪೂಜೆ ದಿನ ಕಿನ್ನರಿಜೋಗಿಗಳು ಹಿರಿಯರಿಗೆ ಎಡೆಹಾಕುವ ಹಬ್ಬವನ್ನು ಮಾಡುತ್ತಾರೆ. ಈ ಹಬ್ಬಕ್ಕೆ ಖಂಡೆಪೂಜೆ ಎನ್ನುತ್ತಾರೆ. ಆ ದಿನ ಬೆಳಿಗ್ಗೆಯ ಮನೆಯ ಮುಖ್ಯಸ್ಥನು ಖಾಲಿ ಹೊಟ್ಟೆಯಲ್ಲಿದ್ದು, ಶುಚಿರ್ಭೂತನಾಗಿ ಕಾಳಭೈರವನ ಪೂಜೆಯನ್ನು ನೇಮದಿಂದ, ನಿಷ್ಠೆಯಿಂದ ಮಾಡುತ್ತಾನೆ. ಆನಂತರ ಅವರ ಮನೆಯವರೆಲ್ಲರೂ ಹಿರಿಯರಿಗೆ ಇಷ್ಟವಾಗುವ ತಿಂಡಿ-ತಿನಿಸುಗಳನ್ನು, ಆಹಾರ, ಪಾನೀಯ ಗಳನ್ನು ಮಡಿಯಿಂದ ಮಾಡುತ್ತಾರೆ. ಈ ಹಬ್ಬಕ್ಕೆ ಕುಲಬಾಂಧವರೆಲ್ಲಾ ಬರಲೇಬೇಕು. ಎಷ್ಟೇ ದೂರದ ಊರಲ್ಲಿದ್ದರೂ ಅಂದು ಅವರೆಲ್ಲಾ ಹಾಜರಾಗುತ್ತಾರೆ. ಸಾಯಂಕಾಲ ಏಳರ ಹೊತ್ತಿಗೆ ಎಲ್ಲರೂ ಒಂದೆಡೆ ಸೇರಿ, ಗಂಡಿನ ಎಡೆ ಮತ್ತು ಹೆಣ್ಣಿನ ಎಡೆಯನ್ನು ಸಿದ್ಧಮಾಡುತ್ತಾರೆ.

ಒಂದು ಹೊಸ ಕುಂಭಕ್ಕೆ ನೀರನ್ನು ಸುರಿದು, ತೆಂಗಿನ ಕಾಯಿಯನ್ನು ಇಟ್ಟು, ಹೊಸ ಬಟ್ಟೆಯನ್ನು ಹೊದಿಸಿ, ಅದನ್ನು ಒಂದು ಮಣೆಯ ಮೇಲೆ ಇಡುತ್ತಾರೆ. ಆನಂತರ ಬಂದಿರುವ ಎಲ್ಲಾ ಬಾಂಧವರು ಅದಕ್ಕೆ ಧೂಪವನ್ನು ಹಾಕುತ್ತಾರೆ. ಇದೆಲ್ಲವೂ ಮುಗಿದ ಮೇಲೆ ಒಂದು ದೊಡ್ಡ ಹರಿವಾಣದಂತಹ ತಟ್ಟೆಗೆ ಮನೆಯಲ್ಲಿ ಮಾಡಿರುವ ಎಲ್ಲಾ ತಿಂಡಿ-ತಿನಿಸುಗಳನ್ನು ಹಾಕಿ, ಅದನ್ನು ಹಜಾರದ ಮಧ್ಯದಲ್ಲಿಡುತ್ತಾರೆ. ಈಗ ಕುಲಬಾಂಧವರೆಲ್ಲರೂ ಬಂದು ಪ್ರಸಾದದ ರೂಪದಲ್ಲಿ, ಅದರಲ್ಲಿರುವ ಸ್ವಲ್ಪ ಸ್ವಲ್ಪ ತಿನಿಸುಗಳನ್ನು ತೆಗೆದುಕೊಂಡು ಮುಖ್ಯಸ್ಥನ ಅಪ್ಪಣೆಯ ಮೇರೆಗೆ ತಿನ್ನಬೇಕು. ಇದಾದ ನಂತರ ಎಲ್ಲರೂ ಕೂಡಿ ಸಹಭೋಜನವನ್ನು ಮಾಡುತ್ತಾರೆ. ಈ ಹರಿವಾಣದಂತಹ

ತಟ್ಟೆಯಲ್ಲಿ ಇಟ್ಟ ತಿನಿಸನ್ನು ಪ್ರಸಾದವೆಂದು ಸ್ವೀಕರಿಸುವುದರ ಹಿನ್ನಲೆಯಾಗಿ ಕುಲಬಾಂಧವರಲ್ಲಿ ವೈಮನಸ್ಯವಿದ್ದರೆ ಅದು ಅಲ್ಲಿಗೇ ಮುಕ್ತಾಯವಾಗಲೆಂದು ಹೇಳುತ್ತಾರೆ ಗುಡ್ಡಪ್ಪ ಜೋಗಿ.

ಕಿನ್ನರಿ ಜೋಗಿಗಳು ಗಾಳಿದುರ್ಗಮ್ಮನ ಹಬ್ಬವನ್ನು ಜೂನ್ ತಿಂಗಳು ಮತ್ತು ಮೇ ತಿಂಗಳಿನಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ. ಸಾಧಾರಣವಾಗಿ ಅಲೆಮಾರಿಗಳಾಗಿರುವ ಕಿನ್ನರಿಜೋಗಿಗಳು ಇತ್ತೀಚೆಗೆ ಒಂದು ಕಡೆ ನೆಲೆಸಿದ್ದಾರೆ. ಇನ್ನೂ ಕೆಲವು ಜೋಗಿಗಳು ಮೊದಲಿನಂತೆಯೇ ಊರೂರು ಸುತ್ತುತ್ತಿರುತ್ತಾರೆ. ಮಳೆಗಾಲ ಬರುವುದಕ್ಕಿಂತ ಮುನ್ನ ಇವರ ಊರಾದ ತಿಳುವಳ್ಳಿ ಬಂದು ಎಲ್ಲರೂ ಕೂಡಿ ಈ ಹಬ್ಬವನ್ನು ಆಚರಿಸುತ್ತಾರೆ. ಈ ಆಚರಣೆ ಹೇಗಿದೆ ಎಂದರೆ ಊರಿನ ಹೊರಗಡೆ ಮಾತಂಗಿ ದೇವಿಯ ಪಾದವನ್ನು ಮಾಡಿ, ಚಪ್ಪರವನ್ನು ಹಾಕುತ್ತಾರೆ. ಮೈನೆರೆಯದ ಐದು ಜನ ಹೆಣ್ಣು ಮಕ್ಕಳಿಗೆ ಸ್ನಾನಮಾಡಿಸಿ, ಹೊಸಬಟ್ಟೆಯನ್ನು ಹಾಕಿ, ತಲೆಯ ಮೇಲೆ ಬಿಂದಿಗೆಯಲ್ಲಿ ಹೊಸ ನೀರನ್ನು ತರುತ್ತಾರೆ. ವಾಲಗ, ಆರತಿ ಯೊಂದಿಗೆ ಅವರನ್ನು ಮಾತಂಗಿ ದೇವಿಯ ಚಪ್ಪರ ಹಾಕಿರುವಲ್ಲಿ ಕರೆತಂದು ಕೂರಿಸುತ್ತಾರೆ. ಮುತ್ತೈದೆಯರು ಆ ಮಕ್ಕಳಿಗೆ ಉಡಿತುಂಬುತ್ತಾರೆ. ನಂತರ ಜೋಗಿ ಗಂಡಸರುಗಳು ಆ ಮಕ್ಕಳಿಗೆ ಪೂಜೆ ಮಾಡುತ್ತಾರೆ. ಇದೆಲ್ಲವೂ ಆದ ಮೇಲೆ ಅವರವರ ಪ್ರತಿಷ್ಠೆಗೆ ತಕ್ಕಂತೆ ಕೋಳಿ ಅಥವಾ ಕುರಿ ಬಲಿಯನ್ನು ಕೊಡುತ್ತಾರೆ. ನಂತರ ಅವುಗಳ ಮಾಂಸವನ್ನು ಹಂಚಿಕೊಳ್ಳುತ್ತಾರೆ. ಸಾಯಂಕಾಲದ ಹೊತ್ತಿಗೆ ಮಾತಂಗಿಗೆ ಎಡೆಯನ್ನಿಟ್ಟು ಈ ಮಕ್ಕಳಿಗೆ ಇನ್ನೊಮ್ಮೆ ಮಂಗಳಾರತಿಯನ್ನು ಮಾಡಿ, ಕುಂಭದಲ್ಲಿರುವ ನೀರನ್ನು ಮಾತಂಗಿಯ ಪಾದ ಕಮಲಕ್ಕೆ ಚಲ್ಲಿ ಮಕ್ಕಳನ್ನು ಮನೆಗೆ ಕಳುಹಿಸುತ್ತಾರೆ. ಈ ಆಚರಣೆಯ ಉದ್ದೇಶ ಅವರೇ ಹೇಳುವಂತೆ ಊರೂರು ತಿರುಗಿ ಬಂದ ಜೋಗಿಗಳು ಎಲ್ಲಾ ದೇವರುಗಳನ್ನು ನೋಡಿರುತ್ತಾರೆ. ತಾವು ತಮ್ಮ ಗ್ರಾಮದಲ್ಲಿ ಇರುವಷ್ಟು ದಿನ ಯಾವುದೇ ರೀತಿಯ ರೋಗ-ರುಜಿನಗಳು ಬಾರಬಾರದು ಎಂದು. ಈ ಆಚರಣೆಯಲ್ಲಿ ಆ ಗ್ರಾಮದಲ್ಲೇ ನೆಲೆನಿಂತವರೂ ಕೂಡಾ ಭಾಗಿಯಾಗುತ್ತಾರೆ.

ಆರ್ಥಿಕವಾಗಿ :

ಕಿನ್ನರಿ ನುಡಿಸೋಣ ದನಿ ಚೆಂದವೋ... ಎಂದು ಹಾಡುವ ಊರಿಂದೂರಿಗೆ ಅಲೆಯುತ್ತಾ, ಕಂಕುಳಲ್ಲಿ ಜೋಳಿಗೆ ಹಾಕಿಕೊಂಡು ಜನ ಕೊಟ್ಟ ದವಸ ಧಾನ್ಯಗಳನ್ನು ಸ್ವೀಕರಿಸುತ್ತಾ ಒಂದು ಕಡೆ ಬಿಡಾರ ಬಿಟ್ಟು ಮಾರನೇ ದಿನ ಅಲ್ಲಿಂದ ಜಾಗ ಖಾಲಿ ಮಾಡಿ ಪರ ಊರಿಗೆ ಹೋಗುವ ಅಲೆಮಾರಿಗಳಾಗಿದ್ದರು ಜೋಗಿಗಳು, ಇಂದು ಮನೆ, ಜಮೀನು ಮಾಡಿಕೊಂಡು ಒಂದು ಕಡೆ ನೆಲೆ ನಿಂತಿದ್ದಾರೆ. ತಮ್ಮ ಪಾರಂಪರಿಕ ಕಲೆಯನ್ನು ಆಧುನಿಕ ಅಗತ್ಯಕ್ಕನುಗುಣವಾಗಿ ಬದಲಾಯಿಸಿಕೊಂಡು ವರ್ತಮಾನದೊಂದಿಗೆ

ಹೆಜ್ಜೆ ಹಾಕುತ್ತಿದ್ದಾರೆ. ಕಲೆಯನ್ನು ನಂಬಿ ಬದುಕುತ್ತಿರುವ ಕಲಾವಿದರಿಗೆ ಹೊಟ್ಟೆ ತುಂಬ ಉಂಡು ಮಲಗುವುದು ಇಂದೂ ಕೂಡ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಹಿಂದಿನ ಕಲಾವಿದರು ಮಾತ್ರ ಈ ಕಲೆಯಲ್ಲಿ ಬಂದಿದ್ದಾರೆ. ಇಂದಿನ ಪೀಳಿಗೆಯವರು ತಮ್ಮ ತಮ್ಮ ಕಾರ್ಯಕ್ಷೇತ್ರದ ಆಯ್ಕೆಯನ್ನು ತಾವೇ ಮಾಡಿಕೊಂಡು ನೆಮ್ಮದಿಯಿಂದಿರಲು ಇಚ್ಚಿಸುತ್ತಾರೆ. ಇವರಿಗೆ ಕೈ ತುಂಬಾ ಕಾರ್ಯಕ್ರಮಗಳಿದ್ದರೂ ಆರ್.ಟಿ.ಜಿ.ಎಸ್ ನ ಸಮಸ್ಯೆಯಿಂದಾಗಿ ತಂಡ ಒಡೆಯುತ್ತಿದೆ ಎನ್ನುತ್ತಿದ್ದಾರೆ. ಅಲ್ಪಸ್ವಲ್ಪ ಜಮೀನಿನಲ್ಲಿ ಕೃಷಿ ಮಾಡಿಕೊಂಡು ತಮ್ಮದೇ ಆದ ರೀತಿಯಲ್ಲಿ ಜೀವನ ನಿರ್ವಹಣೆ ಮಾಡಿಕೊಂಡು ಕಲೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಗುರುಶಿಷ್ಯ ಪರಂಪರೆ ಯೋಜನೆಯಡಿ ಅನೇಕ ಅಸಕ್ತ ಯುವಕ ಯುವತಿಯರಿಗೆ ಜನಪದ ಕುಣಿತವನ್ನು ಕಲಿಸುತ್ತಿದ್ದಾರೆ. ಇಂದು ನಶಿಸಿ ಹೋಗುತ್ತಿರುವ ಕಿನ್ನರಿಜೋಗಿ ಕಲೆಯ ಮಧ್ಯೆ ಇವರದು ಗಟ್ಟಿಧ್ವನಿ ಬದುಕಿಗಾಗಿ ಈಗ ಹರಿಕಥೆ, ಶಿವಕತೆಯನ್ನು ನಡೆಸುತ್ತಾ ಜನಪ್ರಿಯ ಹಾಡುಗಳನ್ನು ಹಾಡುತ್ತಾರೆ. ಅವರೇ ಕಟ್ಟಿದ ಕೆಲವು ಹಾಡುಗಳು ನಗೆಬುಗ್ಗೆಯನ್ನು ಹರಿಸುತ್ತಾ ಸಮಾಜದ ಓರೆ ಕೋರೆಗಳನ್ನು ಟೀಕಿಸುತ್ತದೆ. ಹೀಗೆ ಕಲೆಯಿಂದ ಮತ್ತು ಕೃಷಿಯಿಂದ ಬದುಕನ್ನು ಇಂದಿಗೂ ಮುಂದುವರೆಸುವುದನ್ನು ಕಾಣಬಹುದು.

ದೃಶ್ಯಮಾಧ್ಯಮದಲ್ಲಿ ಕಿನ್ನರಿ ಜೋಗಿ ಮೇಳ

ಕಿನ್ನರಿಜೋಗಿ ಮೇಳದ ವೇಷಭೂಷಣವೇ ವರ್ಣರಂಜಿತ. ಈ ಪೋಷಾಕು ದೃಶ್ಯಮಾಧ್ಯಮದಲ್ಲಿ ಶ್ರೀಮಂತವಾಗಿ ಕಣ್ಣುಕೋರೈಸುವಂತೆ ಕಾಣುತ್ತದೆ. ಕಿನ್ನರಿಜೋಗಿ ಮೇಳ ಆರಂಭವಾಗುತ್ತಿದ್ದಂತೆಯೇ ಲಘುವಾದ ನರ್ತನ, ಮುಖ್ಯಕಲಾವಿದನ ಹಾವ–ಭಾವ, ಹಿಮ್ಮೇಳದವರ ದನಿಗೂಡಿಸುವಿಕೆ ಪ್ರೇಕ್ಷಕವರ್ಗವನ್ನು ರಂಜಿಸುತ್ತದೆ. ಮಧ್ಯಮಧ್ಯದಲ್ಲಿ ಉಪಕಥೆಗಳಂತೆ ಬರುವ ಪ್ರಸ್ತುತ ಸಮಸ್ಯೆಗಳು ಇಂದಿನ ಬದುಕಿಗೆ ಹೊಂದಿಕೊಂಡಂತೆ ಇರುತ್ತದೆ. ಕಥೆಯನ್ನು ಹೆಣೆಯುವ ಶೈಲಿಯೇ ಇಂದೂ ಕೂಡಾ ಇವರು ದೃಶ್ಯಮಾಧ್ಯಮದಲ್ಲಿ ಇರುವಂತೆ ಮಾಡಿದೆ. ಕೆಲವೊಮ್ಮೆ ಉರ್ದು, ಮರಾಠಿ, ಗುಜರಾತಿ, ಕೊಂಕಣಿ, ತುಳು ಮುಂತಾದ ಪ್ರಾದೇಶಿಕ ಭಾಷೆಯನ್ನು ಬಳಸಿ ಜನರಿಗೆ ತಮಾಶೆಯನ್ನು ಮಾಡಿ, ನುಗುವಿನ ಬುಗ್ಗೆಯನ್ನು ತರಿಸುತ್ತಾರೆ. ಹೀಗಾಗಿ ಕೆಲವು ಜನಪದ ಕಲೆಗಳು ಬೇಗ ಬೇಗನೆ ಪ್ರಚಾರಕ್ಕೆ ಬಂದು ದೃಶ್ಯಮಾಧ್ಯಮದಲ್ಲಿ ಪದೇ ಪದೇ ತನ್ನನ್ನು ನೋಡುವಂತೆ ಮಾಡಿಸಿಕೊಳ್ಳುತ್ತವೆ. ಇದರಲ್ಲಿ ರಾಜಕಾರಣಿಗಳ ವಿಡಂಬನಾಹಾಸ್ಯ, ಪತಿಪತ್ನಿಯರ ಜಗಳ, ಸಂಸಾರದ ಸರಿಗಮ, ಇವೆಲ್ಲವೂ ಒಟ್ಟಾರೆಯಾಗಿ ಕೂಡಿದ್ದು, ಪೌರಾಣಿಕ ಮತ್ತು ಆಧುನಿಕ ಬದುಕಿಗೆ ಒಂದು ಸೇತುವೆಯಾಗಿ ಕಿನ್ನರಿಜೋಗಿ ಮೇಳದವರು ಸಮಾಜಕ್ಕೆ ಒಂದು ಧನಾತ್ಮಕ ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ದೃಶ್ಯಮಾಧ್ಯಮದ

ಅಳವಡಿಕೆಗಾಗಿಯೇ ಸಣ್ಣ-ಪುಟ್ಟ ಪ್ರಸಂಗಗಳನ್ನು ತಾವೇ ರಚಿಸಿ, ಅದರಲ್ಲಿ ಹಾಸ್ಯದ ಲೇಪನ ಹಿತಮಿತವಾಗಿ ಬಳಸಿ, ಜನಮಾನಸದಲ್ಲಿ ಇಂದೂ ಕೂಡಾ ಉಳಿದಿದ್ದಾರೆ. ಹೀಗೆ ಪದೇ ಪದೇ ದೃಶ್ಯಮಾಧ್ಯಮದಲ್ಲಿ ಬಂದಾಗ, ಒಬ್ಬ ಜನಪದ ಕಲಾವಿದ ಇದ್ದಕ್ಕಿದ್ದಂತೆಯೇ ಜನಪದ ಸೆಲೆಬ್ರಿಟಿ ಆಗಿಬಿಡುತ್ತಾನೆ. ಇದರಿಂದ ಅವನಿಗೆ ಪ್ರಚಾರವೂ ಸಿಗುತ್ತದೆ. ಆರ್ಥಿಕವಾಗಿ ಸದೃಢನಾಗುತ್ತಾನೆ. ಕಿನ್ನರಿಜೋಗಿ ಕಲೆಯು ದೃಶ್ಯಮಾಧ್ಯಮದಲ್ಲಿ ವೀಕ್ಷಿಸುವಾಗ, ತುಂಬಾ ಆಕರ್ಷಣೀಯ ಏಕೆಂದರೆ ಕಲಾವಿದ ಕಿನ್ನರಿವಾದ್ಯ, ಇನ್ನಿತರೆ ಸಾಮಗ್ರಿಗಳನ್ನು ಹಿಡಿದು, ಒಬ್ಬ ಕಲಾವಿದನೇ ನುಡಿಸಿ, ಅಭಿವ್ಯಕ್ತ ಪಡಿಸುವುದು ಕೂಡಾ ಚಮತ್ಕಾರವಾಗಿರುತ್ತದೆ. ಜನಪದ ವಾದ್ಯ ಕೂಡಾ ಆಕರ್ಷಣೀಯವಾಗಿರುತ್ತದೆ. ಜನಪದ ಕಲೆಗೆ ದೃಶ್ಯಮಾಧ್ಯಮದ ಕೊಡುಗೆ ಎಂದರೆ ತಪ್ಪಾಗಲಾರದು. ಸರ್ಕಾರದ ಹಲವು ಯೋಜನೆಗಳ ಪ್ರಚಾರಕ್ಕೆ ಕಿನ್ನರಿಜೋಗಿಗಳನ್ನು ಬಳಸಿಕೊಳ್ಳುತ್ತಾರೆ. ಅವರು ತಮ್ಮ ಸಾಹಿತ್ಯ, ಕಂಠಸಿರಿ ಮಾಧುರ್ಯದಿಂದ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಮಾಡಿದ್ದಾರೆ. ಪಲ್ಸ್‌ಪೋಲಿಯೋ, ಹೆಪಟೈಟೀಸ್ ಬಿ, ದಡಾರ ಚುಚ್ಚುಮದ್ದು ಮುಂತಾದ ಸರ್ಕಾರದ ಅಭಿಯಾನಗಳನ್ನು ಕಿನ್ನರಿ ಜೋಗಿಗಳನ್ನು ಬಳಸಿಕೊಂಡು ಚಿತ್ರೀಕರಿಸಿ, ದೃಶ್ಯಮಾಧ್ಯಮದಲ್ಲಿ ಪ್ರಸಾರಮಾಡಿ ಜನರಿಗೆ ಮತ್ತು ಮಕ್ಕಳಿಗೆ ಏಕಕಾಲದಲ್ಲಿ ಮಾಹಿತಿಯನ್ನು ನೀಡುತ್ತದೆ. ಇಂತಹ ಸಂದರ್ಭದಲ್ಲಿ ಕಿನ್ನರಿಜೋಗಿ ಮೇಳವು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತದೆ.

೩.೩.೩ ಡೊಳ್ಳು ಕುಣಿತ

ಇದು ಗಂಡು ಕಲೆ. ಡೊಳ್ಳು ಕುಣಿತ ಪುರುಷ ಪ್ರಧಾನವಾದ ಕಲೆ. ವೀರಪ್ರಧಾನವಾದುದು. ಈ ಕಲೆ ಬಿಜಾಪುರ, ಬಳ್ಳಾರಿ, ಶಿವಮೊಗ್ಗ, ಚಿಕ್ಕಮಗಳೂರು ಬೆಳಗಾವಿ ತುಮಕೂರು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಈ ಕಲೆಯನ್ನು ಸಾಧಾರಣವಾಗಿ ಕುರುಬರು, ದೀವರು, ಉಪ್ಪಾರ ಜನಾಂಗದವರು ಪ್ರದರ್ಶಿಸುತ್ತಾರೆ. ಆರಾಧನೆಯ ಹಿನ್ನಲೆಯಲ್ಲಿ ಬಂದಿರುವ ಈ ಕಲೆಯನ್ನು ಕಡ್ಡಾಯವಾಗಿ ಆರಾಧನೆಗಳಲ್ಲಿ ಬಾರಿಸುತ್ತಾರೆ ಮತ್ತು ಕುಣಿಯುತ್ತಾರೆ.

ಡೊಳ್ಳು ಕಲೆ ಮತ್ತು ಪುರಾಣ ಕಥಾನಕಗಳು

ಪುರಾಣದಲ್ಲಿರುವ ಕತೆಯೊಂದು ಹೀಗಿದೆ. ಡೊಳ್ಳಾಸುರ ರಾಕ್ಷಸನು ಸೂಜಿಯ ಮೇಲೆ ನಿಂತು ತಪಸ್ಸನ್ನು ಮಾಡಿದ. ಅವನ ತಪಸ್ಸನ್ನು ಮೆಚ್ಚಿ ಶಿವ ಪ್ರತ್ಯಕ್ಷನಾದ. ಶಿವ ಏನು ವರ ಬೇಕೆಂದು ಡೊಳ್ಳಾಸುರನನ್ನು ಕೇಳಿದ. ಅದಕ್ಕೆ ಪ್ರತಿಯಾಗಿ ನಾನು ಶಿವನನ್ನು ನುಂಗಬೇಕೆಂದ. ಆಗ ಶಿವನು ತಥಾಸ್ತು ಅಂದ. ಆಗ ಶಿವನನ್ನು ನುಂಗಿಬಿಡುತ್ತಾನೆ. ಡೊಳ್ಳಾಸುರನ ಹೊಟ್ಟೆಯಲ್ಲಿ ಶಿವ ಬೆಳೆಯುತ್ತಾನೆ. ಶಿವನ ಬಾರ ತಾಳಲಾರದೆ ಶಿವನನ್ನು

ಕುರಿತು ಹೊಟ್ಟೆಯೊಳಗಿಂದ ಹೊರಗೆ ಬಾ ಎಂದು ಶಿವನನನ್ನು ಕೇಳುತ್ತಾನೆ. ಆಗ ಶಿವ ಡೊಳ್ಳಾಸುರನ ಹೊಟ್ಟೆ ಸೀಳಿಕೊಂಡು ಹೊರಗೆ ಬರುತ್ತಾನೆ. ಶಿವ ರಾಕ್ಷಸನ ಹೊಟ್ಟೆಯನ್ನು ಡೊಳ್ಳಾಗಿ ಮಾಡಿ, ಚರ್ಮವನ್ನು ಇಕ್ಕೆಲಗಳಿಗೆ ಬಿಗಿದು, ಕರುಳನ್ನು ಹಗ್ಗ ಮಾಡಿಕೊಂಡು, ಕೈಗಳನ್ನು ಗುಣಿಯಾಗಿ ಮಾಡಿ ಅದನ್ನು ಕುರುಬರಿಗೆ ದಾನ ಮಾಡಿದನಂತೆ.

ಇನ್ನೊಂದು ಪುರಾಣದ ಪ್ರಕಾರ ಡೊಳ್ಳಾಸರುನೆಂಬ ರಾಕ್ಷಸನು ಶಿವನನ್ನು ಕುರಿತು ತಪಸ್ಸು ಮಾಡಿದ. ಶಿವನು ತನ್ನ ಹೊಟ್ಟೆಯಲ್ಲೆ ನೆಲೆಸಬೇಕೆಂಬ ವರವನ್ನು ಪಡೆಯುತ್ತಾನೆ. ಶಿವನು ಎಲ್ಲವನ್ನೂ ತೊರೆದು ರಾಕ್ಷಸನ ಹೊಟ್ಟೆ ಸೇರುತ್ತಾನೆ. ಶಿವನಿಲ್ಲದೆ ಲೋಕವು ಕಳೆಗುಂದುತ್ತದೆ. ಇದನ್ನು ತಿಳಿದ ಶಿವನ ಗಣಗಳು ವಿಷ್ಣುವನ್ನು ಪ್ರಾರ್ಥಿಸಿದರು. ಶಿವನು ಪಂಚರಾತ್ರಿಯಂದು ಡೊಳ್ಳಾಸುರನ ಹೊಟ್ಟೆಯೊಡೆದು ಹೊರಬಂದನು. ಹೊರಬಂದ ಶಿವನು ರಾಕ್ಷಸನ ಹೊಟ್ಟೆಯನ್ನೆ ವಾದ್ಯವನ್ನಾಗಿ ಮಾಡಿಕೊಳ್ಳುತ್ತಾನೆ. ರಾಕ್ಷಸನ ಕೋರೆಯಿಂದ ಗುಣಿಯನ್ನು ಮಾಡಿಕೊಂಡು, ಅಂಗೈಯಿಂದ ತಾಳವನ್ನು ಮಾಡುತ್ತಾನೆ. ಈ ವಾದ್ಯವನ್ನು ತಾನೆ ಬಡಿಯಲು ಆರಂಭಿಸುತ್ತಾನೆ. ಈ ಅದ್ಭುತ ಡೊಳ್ಳಿನ ಮಾಧುರ್ಯಕ್ಕೆ ತಾನೇ ಮಾರುಹೋಗಿ ತಾನು ಕುಣಿಯಲಾರಂಭಿಸಿದ. ಭೂಮಿಯಲ್ಲಿರುವ ಕುರುಬರಿಗೆ ಈ ವಾದ್ಯವನ್ನು ನೀಡಿ ಕೆಟ್ಟ ಕಾರ್ಯಕ್ಕೆ ಡೊಳ್ಳನ್ನು ಬಡಿದರೆ ನಾಶವಾಗಿ ಹೋಗುತ್ತೀರಿ. ಒಳ್ಳೆಯ ಕಾರ್ಯಕ್ಕೆ ಮಾತ್ರ ಡೊಳ್ಳು ಬಾರಿಸಿರಿ ಎಂದು ಹೇಳಿದನಂತೆ.

ಮತ್ತೊಂದು ಪುರಾಣದ ಪ್ರಕಾರ ಒಮ್ಮೆ ಶಿವ ಪಾರ್ವತಿಯರಿಬ್ಬರು ಜೂಜಾಡುತ್ತಿದ್ದರು. ಪಂಥದಲ್ಲಿ ಸೋತವರು ಕೈಲಾಸ ಬಿಟ್ಟು ಯಾರ ಕಣ್ಣಿಗೂ ಕಾಣದಂತೆ ಜೀವಿಸಬೇಕೆಂದು ಪಣ ತೊಟ್ಟಿದ್ದರು. ಆಟದಲ್ಲಿ ಶಿವಸೋತು ಯಾರ ಕಣ್ಣಿಗೂ ಬೀಳದಂತೆ ಭೂಲೋಕಕ್ಕೆ ಬಂದು ಒಂದು ಗವಿಯಲ್ಲಿ ಕಲ್ಲಾಗಿ ಹೋದ. ಶಿವನು ಕಲ್ಲಾಗಿ ಬಿದ್ದ ಜಾಗವನ್ನು ಶಿವನಿಲ್ಲದೆ ಮಾಯಾಮೂರ್ತಿ ಎಂಬ ಮಾಯಾವಿ ಕಾಯುತ್ತಿದ್ದ. ಶಿವನಿಲ್ಲದೆ ಪ್ರಪಂಚ ಅಲ್ಲೋಲಕಲ್ಲೋಲವಾಗಿತ್ತು. ಪಾರ್ವತಿಗೂ ಜಗತ್ತನ್ನು ನೋಡಿ ಕೊಳ್ಳುವುದರಲ್ಲಿ ಸಾಕಾಗಿ ಹೋಗಿತ್ತು. ನಾರದನು ಶಿವನನ್ನು ಪತ್ತೆ ಮಾಡಿ ಮಾಯಾಮೂರ್ತಿಯನ್ನು ಕೊಂದನು. ಶಿವನು ತನ್ನನ್ನು ಕಾವಲಿದ್ದ ಮಾಯಾಮೂರ್ತಿಯ ನೆನಪಿಗಾಗಿ ಅವನ ದೇಹದಿಂದ ಡೊಳ್ಳನ್ನು ಮಾಡಿದ. ನಾರದನು ಕೂಡಲೆ ಈ ಡೊಳ್ಳನ್ನು ಬಾರಿಸಿ ದೇವಿಯೆ ನಿಮ್ಮಯ ದೇವರು ಬಂದಾನ ಬನ್ನಿರೆ ಎಂದು ಹಾಡಿದನು. ಪಾರ್ವತಿಯು ಸಖಿಯರೊಂದಿಗೆ ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೆ ಎಂದು ಶಿವನನ್ನು ಸ್ವಾಗತಿಸುತ್ತಾಳೆ.

ದೈವೀ ಆರಾಧನೆಯ ಹಿನ್ನಲೆಯಾಗಿ ಬಂದಿರುವ ಕಲೆ ಡೊಳ್ಳು, ಡೊಳ್ಳು ಕುಣಿತವನ್ನು ಚೆನ್ನಾಗಿ ರೂಢಿಸಿಕೊಂಡವರು ನಾಯಕರು, ದೀವರು ಮತ್ತು ಕುರುಬರು, ಮೈಲಾರಲಿಂಗನ ಆರಾಧನೆ ಮತ್ತು ಜಾತ್ರಾ ಸಂದರ್ಭದಲ್ಲಿ ಕುರುಬರು ಡೊಳ್ಳು ಬಾರಿಸುತ್ತಾ ಹಾಡುವುದು

ಮೊದಲಿಗೆ ಸಂಪ್ರದಾಯವಾಗಿದೆ. ದೀವರು ಭೂಮಿ ಹುಣ್ಣಿಮೆ, ಗೌರಿಪೂಜೆ, ಮುಂತಾದ ಸಂದರ್ಭಗಳಲ್ಲಿಯೂ ಡೊಳ್ಳು ಕುಣಿತ ಮಾಡುತ್ತಾರೆ.

ಡೊಳ್ಳು ಮಾಡುವ ವಿಧಾನ

ಡೊಳ್ಳನ್ನು ಹೆಬ್ಬೇವು ಇಲ್ಲವೇ ಹೊನ್ನೆ ಮರಗಳಿಂದ ಮಾಡುತ್ತಾರೆ. ಹಗುರವಾದ ಮರಗಳಿಂದ ಮಾಡಿದರೆ ಎತ್ತಲೂ ಕೂಡ ಸುಲಭ. ಎರಡೂವರೆ ಅಡಿ ಉದ್ದದ ಮರ ಸೀಳಿ, ಅದರ ಒಳಭಾಗವನ್ನು ಪೂರ್ತಿಯಾಗಿ ಟೊಳ್ಳು ಮಾಡುತ್ತಾರೆ. ಬಲಭಾಗಕ್ಕೆ ಕುರಿಯ ಚರ್ಮ, ಎಡಭಾಗಕ್ಕೆ ಅಡಿನ ಚರ್ಮವನ್ನು ಹೊದಿಸುತ್ತಾರೆ. ನಂತರ ಸೆಣಬಿನ ಹಗ್ಗವನ್ನು ಉಪಯೋಗಿಸಿ ಹೊರಮೈಯನ್ನು ಬಿಗಿಯಲಾಗುತ್ತದೆ. ಡೊಳ್ಳನ್ನು ಬಡಿಯಲು ಒಂದೂವರೆ ಅಡಿ ಉದ್ದದ ಬಿದಿರಿನ ಕೋಲನ್ನು ಉಪಯೋಗಿಸುತ್ತಾರೆ. ಇದಕ್ಕೆ ಗುಣಿ ಎಂದು ಕರೆಯುತ್ತಾರೆ.

ಡೊಳ್ಳು ಕುಣಿತದ ವಿಧಗಳು



ಡೊಳ್ಳುಕುಣಿತದಲ್ಲಿ ಕಲಾವಿದರು

ಡೊಳ್ಳು ಮೇಳದಲ್ಲಿ ೪ ರಿಂದ ೧೨ ಜನರಿರುತ್ತಾರೆ. ಕಲಾವಿದರೆಲ್ಲರೂ ವಿಶೇಷ ಪೋಷಾಕುಗಳನ್ನು ಧರಿಸುತ್ತಾರೆ. ಉತ್ತರ ಕರ್ನಾಟಕದ ಕುರುಬರು ಮೈಗೆ ಕಂಬಳಿ ಸುತ್ತಿರುತ್ತಾರೆ. ಮಲೆನಾಡಿನ ಭಾಗದ ದೀವರು, ನಾಯಕರು ಸೊಂಟಕ್ಕೆ ಕಂಬಳಿ ಸುತ್ತಿಕೊಂಡು, ಮೈಗೆ ಹುಲಿ ಬಣ್ಣದ ರೀತಿಯ ಪೋಷಾಕು ಇಲ್ಲವೆ ಸೊಪ್ಪನ್ನು ಕಟ್ಟಿಕೊಂಡು ಡೊಳ್ಳು ಬಾರಿಸುತ್ತಾರೆ. ಮದ್ಯದಲ್ಲಿ ಸೂತ್ರಧಾರನೊಬ್ಬನಿದ್ದು ಅವನು ತಾಳವನ್ನು ನುಡಿಸುತ್ತಿರುತ್ತಾನೆ. ಕುಣಿತದ ಗತಿ ಆ ತಾಳಕ್ಕೆ ಸರಿಯಾಗಿ ಬದಲಾಗುತ್ತದೆ. ಕುಳಿತು ಬಾರಿಸುವುದು,

ಲಾಗಹಾಕುವುದು, ಹಾರುವುದು, ಮಂಡಿ ಬಡಿತ, ಮರಗಾಲು ಬಡಿತ, ಗಾಡಿಚಕ್ರದ ಬಡಿತ ಹೀಗೆ ಹಲವಾರು ವಿಧಗಳಿವೆ. ಡೊಳ್ಳಿನ ಮೇಲೆ ಕೈ ಪಟ್ಟು ಹಾಕುತ್ತಾ ಮುಖ್ಯಕಲಾವಿದ ಹಾಡನ್ನು ಹಾಡುತ್ತಾ ಹಿಮ್ಮೇಳದವರು ಇದಕ್ಕೆ ದನಿಗೂಡಿಸುತ್ತಾರೆ. ಇದಕ್ಕೆ ಡೊಳ್ಳಿನ ಕೈಪಟ್ಟು ಎನ್ನುತ್ತಾರೆ. ಪರಂಪರೆಯಿಂದ ದೈವೀ ಆರಾಧನೆಯ ಹಿನ್ನಲೆಯಾಗಿ ಬಂದ ಈ ಕಲೆ ಇಂದು ಮನರಂಜನೆಯಾಗಿ ಮನ್ನಣೆ ಪಡೆದಿದೆ. ಯಾವುದೇ ಧಾರ್ಮಿಕ, ಸಾಂಸ್ಕೃತಿಕ ಸಮಾರಂಭಗಳಲ್ಲಿ ಡೊಳ್ಳು ಕುಣಿತ ಇದ್ದೇ ಇರುತ್ತದೆ. ಹಬ್ಬ, ಜಾತ್ರೆ, ಗಣಪತಿ ವಿಸರ್ಜನೆ, ರಾಜಕಾರಿಣಿಗಳ ಸಭೆ ಸಮಾರಂಭಗಳಿಗೆ ಡೊಳ್ಳು ಕುಣಿತ ಇರಲೇಬೇಕು.

ಡೊಳ್ಳು ಕುಣಿತ-ಕಲಾವಿದ ಟಾಕಪ್ಪ

ಡೊಳ್ಳು ಎಂದಾಗ ನೆನಪಾಗುವುದು ಕಲಾವಿದ ಟಾಕಪ್ಪ. ಏಕೆಂದರೆ ತನ್ನ ಹುಟ್ಟೂರು ಸಾಗರದಿಂದ ಸಾಗರದಾಚೆಯ ನಾಡಿಗೂ ಡೊಳ್ಳು ಕಲೆಯನ್ನು ಪರಿಚಯ ಮಾಡಿದ್ದೇ, ಕಣ್ಣೂರಿನ ಡೊಳ್ಳು ಕಲಾವಿದ ಟಾಕಪ್ಪನವರು.

ಸಾಮಾಜಿಕವಾಗಿ :

ಟಾಕಪ್ಪ ದೀವರ ಜನಾಂಗದವರು. ತಂದೆ ಹುಚ್ಚಪ್ಪ, ತಾಯಿ ಗೌರಮ್ಮ. ಇವರು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಣ್ಣೂರು ಇವರ ಗ್ರಾಮ. ತಂದೆ ಕೂಲಿ ಕೆಲಸದ ಜೊತೆಗೆ ತೆಂಗಿನಮರದಿಂದ ಸೇಂದಿ ಇಳಿಸುವ ಕೆಲಸ ಮಾಡುತ್ತಿದ್ದರು. ಟಾಕಪ್ಪ ಅವರು ಬಿ.ಎ. ಪದವಿ ಪಡೆದಿರುತ್ತಾರೆ. ಶಿವಮೊಗ್ಗದಲ್ಲಿ ಬಿ.ಎ. ಓದುತ್ತಿರುವ ಕಾಲದಲ್ಲೇ ಅಂದರೆ ೧೯೭೭ರಲ್ಲೇ ೧೫ ಜನಪದ ಕಲಾವಿದರೊಂದಿಗೆ ಸಂಘ ರಚನೆ ಮಾಡಿದರು. ಡೊಳ್ಳು ಕುಣಿತಕ್ಕೆ ತಾವೇ ವೇಷ-ಭೂಷಣಗಳನ್ನು ಮಾಡಿದರು. ಅಂದು ಕಟ್ಟಿದ ಈ ತಂಡದಲ್ಲಿ ಈಗ ಸುಮಾರು ೧೫೦ ಕ್ಕೂ ಹೆಚ್ಚು ನುರಿತ ಕಲಾವಿದರಾಗಿದ್ದಾರೆ. ಅಲ್ಲದೇ ಈ ತಂಡದಲ್ಲಿ ಎಲ್ಲಾ ವಯೋಮಾನದವರೂ ಇರುವುದು ಹೆಗ್ಗಳಿಕೆಯಾಗಿದೆ. ಟಾಕಪ್ಪನವರು ಕಲಾವಿದರಾಗಿ, ಸಂಘಟಕರಾಗಿ, ಮಾರ್ಗದರ್ಶಕರಾಗಿ, ತರಬೇತುದಾರರಾಗಿ ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಾಪ್ರದರ್ಶನ ಮಾಡಿರುವರು.

ಟಾಕಪ್ಪನವರು ಬರೀ ಕಲಾವಿದರಾಗಿ ಅಲ್ಲದೆ ತಮ್ಮನ್ನು ಜನಾನುರಾಗಿಯಾಗಿ ಗುರುತಿಸಿಕೊಂಡಿ ದ್ದಾರೆ. ಇವರನ್ನು ಕನ್ನಡ ಸಂಸ್ಕೃತಿ ಇಲಾಖೆಯವರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯವರು ಯುವ ಕಲಾವಿದರಿಗೆ ತರಬೇತಿ ನೀಡಲು ಕರೆಸುತ್ತಾರೆ. ಕೈಗಾರಿಕಾ ಸಹಕಾರ ಸಂಘದ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಪ್ರಾಥಮಿಕ ಸಹಕಾರ ಸಂಘಗಳ ನಿರ್ದೇಶಕರಾಗಿ, ಗ್ರಾಮ ಪಂಚಾಯಿತಿ, ಮಂಡಲ ಪಂಚಾಯಿತಿಯ ಸದಸ್ಯರಾಗಿ, ಉಪಪ್ರಧಾನರಾಗಿ, ಪ್ರಧಾನರಾಗಿ, ತಾಲ್ಲೂಕು ಪಂಚಾಯತಿಯ ಉಪಾಧ್ಯಕ್ಷರಾಗಿ

ಹಾಗೂ ಅನೇಕ ಸಂಘ-ಸಂಸ್ಥೆಗಳ ನಿರ್ದೇಶಕರಾಗಿ, ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಜನಪದ ಕಲಾಸೇವೆಯನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರ ೧೯೯೮-೨೦೦೧ರ ಅವಧಿಯಲ್ಲಿ ಜಾನಪದ ಯಕ್ಷಗಾನ ಅಕಾಡೆಮಿಯ ಸದಸ್ಯರನ್ನಾಗಿ ನೇಮಿಸಿದ್ದು ಗಮನಾರ್ಹವಾಗಿದೆ.

೧೯೮೭ರಲ್ಲಿ ಟಾಕಪ್ಪನವರ ಡೊಳ್ಳು ತಂಡವು ಡಾ.ಬಸವರಾಜ ನೆಲ್ಲೀಸರ ಅವರ ನೇತೃತ್ವದಲ್ಲಿ ಉಡುಪಿಯ ಜಾನಪದ ಅಧ್ಯಯನ ಕೇಂದ್ರ; ಆರ್.ಆರ್.ಸಿ ಯ ಮುಖ್ಯಸ್ಥರಾದ ಪ್ರೊ.ಕು.ಶಿ.ಹರಿದಾಸಭಟ್ಟರ ಮಾರ್ಗದರ್ಶನದಲ್ಲಿ ರಷ್ಯಾಕ್ಕೆ ತೆರಳಿತ್ತು. ರಷ್ಯಾ ದೇಶದಲ್ಲಿ ಭಾರತೋತ್ಸವನ್ನು ಕಂಡ ಅಲ್ಲಿಯ ಜನತೆಯ ಒತ್ತಾಯದ ಮೇರೆಗೆ ಈ ತಂಡವನ್ನು ಮತ್ತೆ ೩ ತಿಂಗಳು ಬೇರೆ-ಬೇರೆ ಕಡೆ ಪ್ರದರ್ಶನ ನೀಡುವಂತೆ ಅಲ್ಲಿಯ ಸರಕಾರ ಪರವಾನಗಿ ನೀಡಿತು. ಟಾಕಪ್ಪನವರು ಹೇಳುತ್ತಾರೆ, ಜೀವನದಲ್ಲಿ ಆ ಮೂರು ತಿಂಗಳು ಅವಿಸ್ಮರಣೀಯ. ಆ ಊರಿನ ಜನ ನಮಗೆ ಎಷ್ಟೊಂದು ಪ್ರೀತಿ ವಿಶ್ವಾಸದಿಂದ ಕಂಡರು. ಕೆಲವರಂತೂ ಅನೇಕ ಕೊಡುಗೆಗಳನ್ನು ನೀಡಿದ್ದನ್ನು ಅವರು ಇಂದು ಕೂಡ ನೆನೆಯುತ್ತಾರೆ. ರಷ್ಯಾದ ಮೂವತ್ತೈದಕ್ಕೂ ಹೆಚ್ಚು ನಗರಗಳಲ್ಲಿ ಪ್ರದರ್ಶನವನ್ನು ಈ ಸಂಘ ನೀಡಿದೆ. ಸಾಗರ ತಾಲ್ಲೂಕಿನ ಈ ಯುವಕರ ಡೊಳ್ಳಿನ ಸಂಭ್ರಮ ಸಾಗರದಾಚೆಯ ರಷ್ಯನ್ ಕಲಾವಿದರ ಮನಸೂರೆಗೊಳಿಸಿತು. ಇವರ ಡೊಳ್ಳು ಕುಣಿತದ ಕಲಾವೈಭವವನ್ನು ಲಕ್ಷಾಂತರ ರಷ್ಯನ್ನರು ಮೆಚ್ಚಿದರು. ಟಾಕಪ್ಪನವರಿಗೆ ವಿದೇಶ ಪ್ರವಾಸದ ಬಗ್ಗೆ ಕೇಳಿದರೆ ಎರಡು ಮರೆಯಲಾರದ ನೆನಪನ್ನು ಬಿಚ್ಚಿಡುತ್ತಾರೆ.

ಡೊಳ್ಳಿನವರು ಚೆನ್ನಾಗಿ ತಾಲೀಮು ಮಾಡುವುದನ್ನು ಕಂಡು ಶಿವರಾಮ ಕಾರಂತರು ಟಾಕಪ್ಪನವರನ್ನು ಹೊಗಳುತ್ತಿದ್ದರಂತೆ, ಅವರ ವೇಷಭೂಷಣದ ಬಗ್ಗೆಯೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದನ್ನು ಬಹಳ ನಮ್ರತೆಯಿಂದ ಇಂದೂ ಕೂಡ ಸ್ಮರಿಸುತ್ತಾರೆ. ಇಂದು ಡೊಳ್ಳು ಸಂಸ್ಕಾರಗೊಂಡ ಕಲೆಯಾಗಿದೆ. ಹಿಂದೆ ಟಾಕಪ್ಪನವರು ಸಣ್ಣವರಿದ್ದಾಗ ರೋಹಿಣಿ ಮಳೆ ಬಂದಾಗ ಮಾತ್ರ ಡೊಳ್ಳನ್ನು ಬಡಿಯುತ್ತಿದ್ದರಂತೆ. ಅದನ್ನು ಕಂಡ ಟಾಕಪ್ಪನವರಿಗೆ ಅದನ್ನು ಕಟ್ಟಿ ಒಳಗಿಡುವಾಗ ತುಂಬಾ ಬೇಸರವಾಗುತ್ತಿತ್ತಂತೆ. ಹಾಗಾಗಿ ಅವರು ಬಿ.ಎ. ಓದುವಾಗ ಹಬ್ಬ ಜಾತ್ರೆ, ಉತ್ಸವಗಳಲ್ಲಿ ಕುಣಿಯಲು ಡೊಳ್ಳನ್ನು ಪದೇ ಪದೇ ಬಳಸಲು ಆರಂಭಿಸಿದರಂತೆ. ಅಂದು ಬಡಿದ ಡೊಳ್ಳಿನ ನೀನಾದ ಇಂದೂ ಕೂಡಾ ನಿಂತಿಲ್ಲ. ಹಾಗಾಗಿಯೇ ಡೊಳ್ಳು ಕುಣಿತದ ಜೊತೆ ಜೊತೆ ಟಾಕಪ್ಪನವರೂ ಕೂಡಾ ಬೆಳೆದರು.

ಸಾಂಸ್ಕೃತಿಕವಾಗಿ :

ಬೀರೇದೇವರ ಪ್ರೀತ್ಯರ್ಥವಾಗಿ ಈ ಕುಣಿತ ನಡೆಯುತ್ತದೆ. ಹಬ್ಬ-ಹರಿದಿನ, ಜಾತ್ರೆ, ಉತ್ಸವ ಮುಂತಾದ ಸಂದರ್ಭಗಳಲ್ಲಿ ಡೊಳ್ಳು ಕುಣಿತ ಇದ್ದೇ ಇರುತ್ತದೆ. ಮೊದಲು

ಮೈಲಾರಲಿಂಗನ ಆರಾಧನೆಯ ಸಂದರ್ಭದಲ್ಲಿ ಡೊಳ್ಳು ಬಾರಿಸುತ್ತಾ ಕುರುಬರು ಕುಣಿಯುವುದು ಸಂಪ್ರದಾಯವಾಗಿತ್ತು. ಶಿವಮೊಗ್ಗ ಜಿಲ್ಲೆಯ ದೀವರು ಭೂಮಿ ಹುಣ್ಣಿಮೆ, ಗೌರಿಪೂಜೆ ಮುಂತಾದ ಎಲ್ಲಾ ಧಾರ್ಮಿಕ ಸಂದರ್ಭಗಳಲ್ಲೂ ಡೊಳ್ಳು ಕುಣಿತ ಮಾಡುತ್ತಿದ್ದರು. ಆದರೆ ಇಂದು ಡೊಳ್ಳು ಕುಣಿತಕ್ಕೆ ಯಾವುದೇ ನಿರ್ದಿಷ್ಟವಾದ ಕಾಲಮಾನವಾಗಲೀ, ಜನಾಂಗಕ್ಕೆ ಸಂಬಂಧಿಸಿದ ಕುಣಿತವಾಗಲಿ ಇಲ್ಲ. ಇಂದು ಡೊಳ್ಳು ಕುಣಿತವು ಸಾಧಾರಣವಾಗಿ ತೇರು, ಜಾತ್ರೆ, ಉತ್ಸವ, ಮೆರವಣಿಗೆ ಮುಂತಾದ ಎಲ್ಲಾ ಸಂದರ್ಭಗಳಲ್ಲಿ ಡೊಳ್ಳು ಕುಣಿತವನ್ನು ಮಾಡುತ್ತಾರೆ. ಟಾಕಪ್ಪನವರ ತಂದೆಯ ಕಾಲದಲ್ಲಿ ಡೊಳ್ಳನ್ನು ಭೂಮಿಹುಣ್ಣಿಮೆಯ ಸಂದರ್ಭದಲ್ಲಿ ಮಾತ್ರ ಪೂಜೆಮಾಡಿ ಅದನ್ನು ಬಡಿದು ಮತ್ತೆ ಕಟ್ಟಿಡುತ್ತಿದ್ದರಂತೆ. ಅದನ್ನು ಮತ್ತೆ ತೆಗೆಯುವುದು ಮುಂದಿನ ಭೂಮಿಹುಣ್ಣಿಮೆಗೆ ಮಾತ್ರ. ಇದನ್ನು ನೋಡಿದ ಟಾಕಪ್ಪನವರು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಿದ್ದರಂತೆ ಇನ್ನು ಈ ಡೊಳ್ಳನ್ನು ನೋಡಲು ಮುಂದಿನ ಭೂಮಿ ಹುಣ್ಣಿಮೆಯವರೆಗೂ ಕಾಯಬೇಕು?

ಸಾಧಾರಣವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಜಾತ್ರೆ, ಉತ್ಸವದ ಸಂದರ್ಭದಲ್ಲಿ ಡೊಳ್ಳನ್ನು ನುಡಿಸುತ್ತಾರೆ. ವರ್ಷಕ್ಕೊಂದಾವರ್ತಿ ನಡೆಯುವ ಊರಹಬ್ಬ ಮತ್ತು ಜಾತ್ರೆಯಲ್ಲಿ ಡೊಳ್ಳು ವಿಜೃಂಭಿಸುತ್ತದೆ. ಜಾತ್ರೆ ನಿಗಧಿಪಡಿಸಿದ ದಿನಾಂಕದ ಮೊದಲು ಊರಿನ ಹಿರಿಯರು ಡೊಳ್ಳುಮೇಳದ ಮುಖಂಡ ಮತ್ತು ಕಲಾವಿದರನ್ನು ಕರೆಯಿಸಿ ಸಭೆ ನಡೆಸುತ್ತಾರೆ. ಸುತ್ತಮುತ್ತಲಿನ ಡೊಳ್ಳುಮೇಳದ ಮುಖಂಡರು ಸಭೆಗೆ ಹಾಜರಿರುತ್ತಾರೆ. ನಿಗಧಿತ ದಿನಾಂಕ ಗೊತ್ತಾದ ಬಳಿಕ ಎಲ್ಲಾ ಕಲಾವಿದರು ಒಂದೆಡೆ ಸೇರಿ, ೨೦ ದಿನಗಳ ಮುಂಚಿತವಾಗಿಯೇ ತರಬೇತಿ ಮಾಡುತ್ತಾರೆ. ಹೊಸ ಹೊಸ ಚಮತ್ಕಾರಗಳನ್ನು ಹುಟ್ಟುಹಾಕುತ್ತಾರೆ. ಜಾತ್ರೆಯ ದಿನ ಉದ್ದಮ್ಮ ದೇವಿಯ ದೇವಸ್ಥಾನಕ್ಕೆ ಎಲ್ಲಾ ಕಲಾವಿದರು ಬೆಳಿಗಿನ ಜಾವ ಮೂರು ಗಂಟೆಗೆ ಬಂದು ಪೂಜೆಯನ್ನು ನೆರವೇರಿಸುತ್ತಾರೆ. ಪೂಜಾ ವಿಧಿವಿಧಾನದ ನಂತರ ಎಲ್ಲರೂ ವೇಷಭೂಷಣವನ್ನು ತೊಟ್ಟು ಡೊಳ್ಳನ್ನು ಹೆಗಲಿಗೇರಿಸಿ ಅದಕ್ಕೊಮ್ಮೆ ಪೂಜೆ ಮಾಡಿಸುತ್ತಾರೆ. ಸುಮಾರು ೮ ಗಂಟೆಯೊಳಗೆ ದೇವಸ್ಥಾನದ ಆವರಣದಲ್ಲಿ ದೇವಿಯನ್ನು ಸಂಪ್ರೀತಳನ್ನಾಗಿಸಲು ದೇವಸ್ಥಾನದ ಆವರಣದಲ್ಲಿ ಡೊಳ್ಳು ಕುಣಿತವನ್ನು ಮಾಡುತ್ತಾರೆ. ಬೇರೆ ಊರುಗಳಿಂದ ಬಂದಿರುವ ಎಲ್ಲಾ ಕಲಾವಿದರು ತಮ್ಮ ತಮ್ಮ ಡೊಳ್ಳು ತಂಡದೊಂದಿಗೆ ಸರತಿಯ ಸಾಲಿನಂತೆ ಸಿದ್ಧವಾಗಿರುತ್ತಾರೆ. ಒಂದು ಮೇಳ ಮುಗಿಯುತ್ತಿದ್ದಂತೆ ಇನ್ನೊಂದು ಮೇಳವು ದೇವಸ್ಥಾನದ ಆವರಣದಲ್ಲಿ ದೇವಿಗಾಗಿಯೇ ಡೊಳ್ಳು ಕುಣಿತವನ್ನು ಆರಂಭಿಸುತ್ತಾರೆ. ಇದೆಲ್ಲಾ ಮುಗಿಯಲು ಸುಮಾರು ನಾಲ್ಕು ತಾಸಾದರೂ ಬೇಕಾಗುತ್ತದೆ. ಆನಂತರ ಬೇರೆ ಜನಪದ ಕಲೆಗಳೊಂದಿಗೆ ದೇವಿಯನ್ನು ಹೊತ್ತ ಮೆರವಣಿಗೆಯೊಂದಿಗೆ ಡೊಳ್ಳು ಕಲಾವಿದರು ಸೇರಿಕೊಳ್ಳುತ್ತಾರೆ. ಹೀಗೆ ಊರಿನ ಎಲ್ಲಾ ಕೇರಿಗಳನ್ನು ದೇವಿಯ ಪಲ್ಲಕ್ಕಿಯೊಂದಿಗೆ ಇವರು ಕೂಡಾ ದರ್ಶನ ಮಾಡುತ್ತಾರೆ. ಎಲ್ಲೆಲ್ಲಿ ಮುಖ್ಯ ಎನಿಸುತ್ತದೆಯೋ, ಅಲ್ಲಲ್ಲಿ

ನಿಂತು ಡೊಳ್ಳು ಪ್ರದರ್ಶನವನ್ನು ನೀಡುತ್ತಾರೆ. ಮತ್ತು ಹೊಸದಾಗಿ ಕಲಿತಿರುವ ಅನೇಕ ಚಮತ್ಕಾರಗಳನ್ನು ಮಾಡಿ, ಪ್ರೇಕ್ಷಕರಿಂದ ಬೇಷ್ ಎನಿಸಿಕೊಳ್ಳುತ್ತಾರೆ. ಮೆರವಣಿಗೆ ಮುಗಿದ ನಂತರ ಪುನಃ ದೇವಸ್ಥಾನಕ್ಕೆ ಬಂದು ಮತ್ತೊಮ್ಮೆ ದೇವಿಯ ಪೂಜೆಮಾಡಿ, ಮಂಗಳಾರತಿಯನ್ನು ತೆಗೆದುಕೊಂಡು, ಪ್ರಸಾದವನ್ನು ಸ್ವೀಕರಿಸಿ, ಎಲ್ಲಾ ಕಲಾವಿದರು ತಮ್ಮ ತಮ್ಮ ಮನೆಗೆ ನಿರ್ಗಮಿಸುತ್ತಾರೆ.

ಆರ್ಥಿಕವಾಗಿ :

ಟಾಕಪ್ಪನವರು ೪ ಮಕ್ಕಳ ತಂದೆ. ಅವರಲ್ಲಿ ಮೂರು ಗಂಡು, ಒಂದು ಹೆಣ್ಣು. ಮೊದಲ ಮಗ ಮನೆಯಲ್ಲಿದ್ದು ಕೃಷಿ ಜಮೀನು ಮತ್ತು ಕುರಿ ಸಾಕಾಣಿಕೆಯನ್ನು ಮಾಡಿಕೊಂಡಿದ್ದಾರೆ. ಸೊಸೆ ಮನೆಯ ಅಚ್ಚುಕಟ್ಟು, ಪತಿಗೆ ಕೆಲಸದಲ್ಲಿ ಸಹಾಯ ಮಾಡುತ್ತಾ ಅತ್ತೆ, ಮಾವ, ಅಜ್ಜಿಯನ್ನು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ. ಇನ್ನಿಬ್ಬರು ಮಕ್ಕಳು ಸರ್ಕಾರಿ ನೌಕರಿಯಲ್ಲಿದ್ದಾರೆ. ಇವರ ಪತ್ನಿ ಮುರುಗೆಮ್ಮ ಕೂಡ ಪತಿಯ ಎಲ್ಲಾ ಕೆಲಸಕ್ಕೆ ಸಾಥ್ ನೀಡುತಿದ್ದಾರೆ. ಇವರಿಗೆ ಈ ಕಲೆಯಿಂದಾಗಿ ಜೀವನ ನಿರ್ವಹಣೆ ನಡೆಯುತ್ತದೆ. ಜೊತೆಗೆ ಕುರಿ ಸಾಕಾಣೆಯನ್ನು ಮಾಡಿಕೊಂಡು ಜೀವನದ ನೌಕೆಯನ್ನು ಸುಗಮವಾಗಿ ಸಾಗಿಸಿಕೊಂಡು ಬರುತ್ತಿದ್ದಾರೆ. ದೂರದ ದೆಹಲಿ, ಚೆನ್ನೈ, ಮುಂಬೈಗಳಿಗೆ ತಂಡವನ್ನು ಕಳಿಸುವಾಗ ಪರಿಚಯಸ್ಥರಿಂದ ಕೈಗಡ ತೆಗೆದುಕೊಂಡು ಅನಂತರ ಹಣ ಬಂದಾಗ ಹಿಂದಿರುಗಿಸುತ್ತಾರೆ. ತಮ್ಮ ಜೀವನ ನಿರ್ವಹಣೆಗಾಗಿ ಸ್ವಲ್ಪ ಜಮೀನನ್ನು ಖರೀದಿ ಮಾಡಿದ್ದಾರೆ. ಇವರ ಮಗ ಆ ಜಮೀನಿನಲ್ಲಿ ಕೃಷಿಮಾಡುತ್ತಾರೆ. ಜೊತೆಗೆ ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆಯನ್ನು ಮಾಡುತ್ತಾರೆ ಮತ್ತು ಮೊಮ್ಮಕ್ಕಳನ್ನು ಮಗಳ ಒಬ್ಬ ಮಗ ಎಂ.ಬಿ.ಬಿ.ಎಸ್. ಓದುತ್ತಿದ್ದಾನೆ. ಅವನನ್ನು ಇವರೇ ಓದಿಸುತ್ತಿದ್ದಾರೆ ಕೂಡ. ಇನ್ನೆಲ್ಲಾ ಮೊಮ್ಮಕ್ಕಳು ಎಂ.ಕಾಂ. ಎಂ.ಎ. ಮುಂತಾದ ಸ್ನಾತಕೋತ್ತರ ಪದವಿಯನ್ನು ಮಾಡುತ್ತಿದ್ದಾರೆ. ಇವರ ಯಾವುದೇ ಮಕ್ಕಳಿಗೂ ಡೊಳ್ಳಿನ ಆಸಕ್ತಿ ಇಲ್ಲ. ಕೃಷಿ ಮತ್ತು ಸಾಕಾಣಿಕೆಯಿಂದ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಡೊಳ್ಳಿನ ಕಾರ್ಯಕ್ರಮದಿಂದ ಬಂದ ಗೌರವ ಸಂಭಾವನೆಯಲ್ಲಿ ಸಹಕಲಾವಿದರಿಗೆ ಕೊಟ್ಟು ಇನ್ನುಳಿದ ಹಣವನ್ನು ವಾದ್ಯ ಪರಿಕರಗಳನ್ನು ಸರಿಪಡಿಸುವುದು ಮತ್ತು ವೇಷಭೂಷಣಗಳನ್ನು ಕೊಂಡುಕೊಳ್ಳುವುದಕ್ಕೆ ವಿನಿಯೋಗಿಸುತ್ತಾರೆ.

ದೃಶ್ಯಮಾಧ್ಯಮದಲ್ಲಿ ಡೊಳ್ಳು ಕುಣಿತ

ಡೊಳ್ಳುಕುಣಿತ ದೃಶ್ಯಮಾಧ್ಯಮದಲ್ಲಿ ಗಂಡು ಕಲೆಯಂದೇ ಬಹು ಜನಪ್ರಿಯತೆಯನ್ನು ಹೊಂದಿದೆ. ಡೊಳ್ಳು ಒಂದು ದೊಡ್ಡ ವಾದ್ಯವಾಗಿರುವುದರಿಂದ, ಎತ್ತಲು ಭಾರವೂ ಇರುವುದರಿಂದ ಪ್ರೇಕ್ಷಕವರ್ಗಕ್ಕೆ ಡೊಳ್ಳನ್ನು ಕಲಾವಿದನು ಎತ್ತಿಹಿಡಿದು, ಕುಣಿದು, ಲಾಗ

ಹಾಕುವುದನ್ನು ನೋಡುವುದು ರೋಮಾಂಚನ ಕಾರಿಯಾಗಿರುತ್ತದೆ. ಲಘುನರ್ತನದಿಂದ ಆರಂಭವಾಗುವ ಇವರ ಕುಣಿತ ಡೊಳ್ಳಿನ ಬಡಿತಕ್ಕೆ ಅನುಗುಣವಾಗಿ ಬಿರುಸಾಗುತ್ತಾ ನಡೆಯುತ್ತದೆ. ಆಗ ಕಲಾವಿದ ಮತ್ತು ಪ್ರೇಕ್ಷಕರ ನಡುವೆ ಒಂದು ಸಂಬಂಧ ಏರ್ಪಡುತ್ತದೆ. ಪ್ರೇಕ್ಷಕನು ಮುಂದೆ ಏನು ಚಮತ್ಕಾರ ಮಾಡುತ್ತಾರೆ ಎಂದು ತುದಿಗಾಲಿನಲ್ಲಿ ನಿಂತು ಕಾಯುತ್ತಾನೆ.

ದೃಶ್ಯಮಾಧ್ಯಮಕ್ಕಾಗಿಯೇ ಇವರು ಕೆಲವೊಂದು ಚಮತ್ಕಾರವನ್ನು ಮಾಡುತ್ತಾರೆ. ವೃತ್ತಾಕಾರ, ಒಬ್ಬರ ಮೇಲೆ ಒಬ್ಬರು ನಿಂತು ಲಾಗಹಾಕಿ ಡೊಳ್ಳು ಬಡಿಯುವುದು, ಪಿರಮಿಡ್ಡನ್ನು ಮಾಡುವುದು ಕಷ್ಟಸಾಧ್ಯ. ಹೇಗೆಂದರೆ ಕಲಾವಿದರು ಬಾಗಿದಾಗ, ಅವರ ಮೇಲೆ ಡೊಳ್ಳು ಸಮೇತ ಮುಖ್ಯ ಕಲಾವಿದ ಅವರನ್ನು ಹತ್ತಿ ಮೇಲೇರುವುದು ಅಲ್ಲೇ ಕೈಬಿಟ್ಟು ಕುಣಿಯುವುದು, ಡೊಳ್ಳನ್ನು ಭಾರಿಸುವುದು ಇವೆಲ್ಲವೂ ನೋಡಲು ರೋಮಾಂಚನಕಾರಿಯಾಗಿರುತ್ತವೆ. ಡೊಳ್ಳನ್ನು ಹಿಡಿದು ಕಲಾವಿದರೆಲ್ಲರೂ ಕುಕ್ಕರಗಾಲಿನಲ್ಲಿ ಕುಳಿತು ದುಂಡಾಗಿ ಸುತ್ತುತ್ತಾ ಡೊಳ್ಳನ್ನು ಬಡಿಯುತ್ತಾರೆ. ಡೊಳ್ಳನ್ನು ಬಾರಿಸುತ್ತಲೇ ಇದ್ದಕ್ಕಿದ್ದಂತೆ ಎರಡು ಅಥವಾ ಮೂರು ಅಡಿ ಮೇಲೆ ಹಾರುತ್ತಾರೆ ಅಥವಾ ನೆಗೆಯುತ್ತಾರೆ. ಇದೆಲ್ಲವೂ ದೃಶ್ಯಮಾಧ್ಯಮದಲ್ಲಿ ನೋಡಲು ಸಂತಸವೆನಿಸುತ್ತದೆ. ಜೋಡಿ ಕಲಾವಿದರು ಎಡಗಾಲ ಮಂಡಿಯನ್ನು ನೆಲಕ್ಕೆ ಊರಿ, ಬಲಗಾಲ ಮೇಲೆ ಡೊಳ್ಳನ್ನು ಊರಿಕೊಂಡು ಭಾರಿಸುತ್ತಾರೆ. ಸುಮಾರು ೩ ರಿಂದ ೪ ಅಡಿ ಎತ್ತರದ ಮರಗಾಲನ್ನು ಕಾಲಿಗೆ ಸಿಕ್ಕಿಸಿಕೊಂಡು ಅದರ ಮೇಲೆಯೇ ನಡೆಯುತ್ತಾ ಡೊಳ್ಳನ್ನು ಭಾರಿಸುತ್ತಾರೆ. ಸ್ವಲ್ಪ ಆಯ ತಪ್ಪಿದರೂ ಜೀವಕ್ಕೆ ಅಪಾಯ. ಇದಂತೂ ಎಂಥವರಿಗೂ ಎದೆ ಝುಲ್ಲೆನಿಸುತ್ತದೆ.



ಡೊಳ್ಳುಕುಣಿತ ಮಹಿಳಾ ತಂಡ, ಸಾಗರ.

ಎತ್ತಿನ ಗಾಡಿಯ ಚಕ್ರವನ್ನು ನೆಲದಲ್ಲಿ ಮಲಗಿಸಿ ತಲೆಯ ಮೇಲೆ ನೀರು ತುಂಬಿದ ಬಿಂದಿಗೆಯನ್ನಿಟ್ಟು ಚಕ್ರದ ಮೇಲೆ ನಿಂತು ಡೊಳ್ಳು ಬಾರಿಸುತ್ತಾರೆ. ಬಾಯಲ್ಲಿ ತುಂಬಿದ ಕೊಡವನ್ನು ಕಚ್ಚಿಹಿಡಿದು ನೀರು ಚೆಲ್ಲದಂತೆ ಡೊಳ್ಳು ಬಾರಿಸುತ್ತಾ ಕುಣಿಯುತ್ತಾರೆ. ದೊಡ್ಡ ಡೊಳ್ಳಿನ ಮೇಲೆ ಚಿಕ್ಕ ಡೊಳ್ಳನ್ನು ಇಟ್ಟು ಎರಡೂ ಡೊಳ್ಳನ್ನು ಒಂದಾದ ಮೇಲೊಂದರಂತೆ ನಿಯಮಿತವಾಗಿ ಬಾರಿಸುತ್ತಾರೆ. ಹೀಗೆ ಚಿತ್ರೀಕರಿಸುವಾಗ ಒಂದಿಲ್ಲೊಂದು ಚಮತ್ಕಾರಗಳಿಂದ ಪ್ರೇಕ್ಷಕವರ್ಗವನ್ನು ಹಿಡಿದಿಡುತ್ತಾರೆ. ಕಲಾವಿದ ಹಿಂದೊಂದು ಡೊಳ್ಳು, ಮುಂದೊಂದು ಡೊಳ್ಳು ಕಟ್ಟಿಕೊಂಡು ಅದರ ಮೇಲೆ ಚಿಕ್ಕಮಕ್ಕಳನ್ನು ಕೂರಿಸಿಕೊಂಡು ನಿಯಮಿತವಾಗಿ ಬಾರಿಸುತ್ತಾ ವೃತ್ತಾಕಾರವಾಗಿ ಸುತ್ತುತ್ತಾರೆ. ಈ ಎಲ್ಲಾ ಚಮತ್ಕಾರಗಳು ದೃಶ್ಯಮಾಧ್ಯಮಕ್ಕಾಗಿ ಚಿತ್ರೀಕರಿಸಿ, ಸಂಕಲಿಸಿ, ಪ್ರಸಾರಮಾಡಿದಾಗ ಪ್ರೇಕ್ಷಕರೇ ತಮ್ಮ ಕಣ್ಣನ್ನೇ ತಾವು ನಂಬದವರಾಗುತ್ತಾರೆ, ಮತ್ತು ಕಲಾವಿದರ ಚಮತ್ಕಾರಗಳಿಗೆ ಬೆರೆಗಾಗುತ್ತಾರೆ.

ದೃಶ್ಯಮಾಧ್ಯಮದಲ್ಲಿ ಇಂದೂ ಕೂಡಾ ಡೊಳ್ಳು ಕುಣಿತಕ್ಕೆ ಅಗ್ರಸ್ಥಾನವಿದೆ. ಚಿತ್ರೀಕರಣ ಮಾಡುವಾಗಲೇ ನಿರ್ದೇಶಕ ಏನೆಲ್ಲಾ ಚಮತ್ಕಾರಗಳಿವೆ ಎಂದು ಮುಖ್ಯಸ್ಥನನ್ನು ಕೇಳಿ, ತಿಳಿದು ನಂತರ ಚಿತ್ರೀಕರಣ ಮಾಡುತ್ತಾರೆ. ಅಲ್ಲದೇ ಚಲನ ಚಿತ್ರರಂಗದಲ್ಲೂ ಕೂಡಾ ಡೊಳ್ಳು ತನ್ನತನವನ್ನು ಮೆರೆದಿದೆ. ಪ್ರಾದೇಶಿಕ ಸೊಗಡಿನಿಂದ ಕೂಡಿದ ದೃಶ್ಯವನ್ನು ಕಲಾತ್ಮಕವಾಗಿ ಚಿತ್ರೀಕರಿಸಲು ನಿರ್ದೇಶಕರುಗಳು ನಮ್ಮ ಜನಪದ ಕಲೆಗಳಿಗೆ ಮೊರೆಹೋಗಲೇಬೇಕು. ದೃಶ್ಯದಿಂದ ದೃಶ್ಯಕ್ಕೆ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಕೊಡಲು ಹಲವು ಕಲೆಗಳ ನಡುವೆ ಡೊಳ್ಳುಕುಣಿತವನ್ನು ಮಾಡಿಸುತ್ತಾರೆ. ಡೊಳ್ಳಿನ ಸದ್ದೇ ಅಬ್ಬರವಾಗಿ ದೃಶ್ಯಕ್ಕೆ, ಸಂಗೀತಕ್ಕೆ ಮೆರುಗು ತರುತ್ತದೆ.

೩.೩.೪ ತೊಗಲುಗೊಂಬೆಯಾಟ

ಇದೊಂದು ಪ್ರಾಚೀನ ಚಿತ್ರಕಲೆ. ಇಲ್ಲಿ ಮನುಷ್ಯರು ಪಾತ್ರದಾರಿಗಳಾಗಿರುವುದಿಲ್ಲ. ಆದರೆ ಕಲಾವಿದರು ಗೊಂಬೆಗಳನ್ನು ಬಳಸಿ ವಿಶಿಷ್ಟ ರೀತಿಯಲ್ಲಿ ಪ್ರದರ್ಶಿಸುತ್ತಾರೆ. ಈ ಕಲೆ ಗ್ರಾಮೀಣ ಬದುಕಿನೊಂದಿಗೆ ಬೆಳೆದುಬಂದಿದೆ. ಈ ತೊಗಲುಗೊಂಬೆಯಾಟವೇ ಪ್ರದರ್ಶಕ ರಂಗಕಲೆಯ ಅಡಿಪಾಯವಾಗಿರುತ್ತದೆ. ಇದು ಜಗತ್ತಿನ ಪ್ರಾಚೀನ ಕಲೆಗಳಲ್ಲಿ ಒಂದು. ತನ್ನ ಭಾವನೆಗಳ ಅಭಿವ್ಯಕ್ತಿಗೆ ಮನುಷ್ಯ ಬಳಸಿಕೊಂಡಿದ್ದು ತೊಗಲುಗೊಂಬೆಗಳನ್ನು, ತಂತ್ರಜ್ಞಾನ ಬೆಳೆದಿರದ ದಿನಗಳಲ್ಲಿ ಗ್ರಾಮೀಣ ಜನರಿಗೆ ಮನರಂಜನೆ ನೀಡುತ್ತಿದ್ದ ಕಲೆಗಳ ಪೈಕಿ ತೊಗಲುಗೊಂಬೆಯಾಟವೂ ಒಂದು. ಮಳೆಗಾಲದಿಂದ ಬೇಸಿಗೆಯವರೆಗೆ ಹೊಲಗಳಲ್ಲಿ ದುಡಿಯುತ್ತಿದ್ದ ರೈತಾಪಿ ಜನರಿಗೆ ಸುಗ್ಗಿ ನಂತರ ಬಿಡುವು ಸಿಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಕಲಾವಿದರಿಗೆ ಅವರು ಧಾನ್ಯ ಹಣ ನೀಡಿ ಗೊಂಬೆಯಾಟ ಆಡಿಸುತ್ತಿದ್ದರು. ರಾತ್ರಿಯಿಂದ ಬೆಳಗಿನವರೆಗೂ ಮನರಂಜನೆಯನ್ನು ಪಡೆಯುತ್ತಿದ್ದರು.

ತೊಗಲುಗೊಂಬೆಯವರು ಅಲೆಮಾರಿ, ಶಿಳ್ಳೇಕ್ಯಾತ ಜನಾಂಗಕ್ಕೆ ಸೇರಿದ ಅಲೆಮಾರಿಗಳು. ಶಿಳ್ಳೇಕ್ಯಾತರನ್ನು ಗೊಂಬೆರಾಮರು, ಚಿತ್ರಮರಾಠರು, ಕಟಬರಾಟ, ಕಥಾನಾಯಕರಾಟ ಎಂದು ಕರೆಯುತ್ತಾರೆ. "ಈ ಕಲೆಯು ಶಾತವಾಹನ, ಪಲ್ಲವ, ಚಾಲುಕ್ಯ, ಕಾಕತೀಯ, ರಾಜರ ಕಾಲದಲ್ಲದೇ ವಿಜಯನಗರ, ತಾಂಜವೂರು, ರಾಜರುಗಳ ಕಾಲದಲ್ಲಿ ಅತ್ಯಂತ ಉನ್ನತ ಸ್ಥಿತಿಯನ್ನು ಪಡೆದು ಪ್ರಾಚೀನ ರೇವು ಪಟ್ಟಣಗಳಾದ ಜೀಮಾನಿ ಪಟ್ಟಣ, ಕೋರಂಗಿ, ವಾಂಡ್ರೇವು ಇವುಗಳ ಮೂಲಕವಿದೇಶಗಳಿಗೆ ತೆರಳಿದ ಭಾರತೀಯರೊಡನೆ ಆಗ್ನೇಯ ಏಷಿಯಾವನ್ನು ಪ್ರವೇಶಿಸಿದವು ಎಂಬ ಅಭಿಪ್ರಾಯವಿದೆ".[೫]

ಇಂಡೋನೇಷ್ಯಾದಲ್ಲಿ ಮದುವೆ, ಹುಟ್ಟು, ಸಾವು ಮುಂತಾದ ವಿಶೇಷ ಸಂದರ್ಭದಲ್ಲಿ ತೊಗಲುಗೊಂಬೆಯಾಟವನ್ನು ಪ್ರದರ್ಶಿಸುತ್ತಾರೆ. ಸತ್ತವರ ಆತ್ಮ ತೊಗಲುಗೊಂಬೆಗಳಲ್ಲಿ ಪ್ರವೇಶಿಸುತ್ತವೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಚೀನಾದ "ವ್ಯೂಟಿ ಚಕ್ರವರ್ತಿಯ ಸತ್ತ ಹೆಂಡತಿಯ ದುಃಖ ಮರೆಸಲು ಕಲಾಕಾರನೊಬ್ಬ ಪರದೆಯ ಹಿಂದೆ ಸತ್ತರಾಣಿಯ ಚಿತ್ರಪಟ ಹಿಡಿದು, ರಾಜನ ಜೊತೆಗೆ ಅವಳು ಜೀವಂತವಿರುವಾಗ ಮಾತನಾಡಿದಂತೆ ಸ್ತ್ರೀ ಧ್ವನಿಯಿಂದ ಮಾತಾಡಿ ಅವನ ದುಃಖ ಕಡಿಮೆ ಮಾಡಿದ್ದುದ್ದಾಗಿ ತಿಳಿದು ಬರುತ್ತದೆ. ಈ ಹಿನ್ನಲೆಯಲ್ಲಿ ಅವಾಗನೆಯ ಕಲ್ಪನೆಯೂ, ಸತ್ತವರ ಸ್ಮರಣೆ ಈ ಕಲೆಯಾಗಿ ಅಡಕವಾಗಿರುವುದು ಕಂಡು ಬರುತ್ತದೆ".[೬]



ತೊಗಲುಗೊಂಬೆಯಾಟದಲ್ಲಿರುವ ತೊಗಲು ಗೊಂಬೆಗಳು

ಐತಿಹ್ಯದ ಪ್ರಕಾರ ತೊಗಲುಗೊಂಬೆ ಆಟಗಾರರಿಗೆ ಗೊಂಬೆರಾಮ ಅಂತಲೂ ಕರೆಯುತ್ತಾರೆ. ಅಂದರೆ ಶ್ರೀರಾಮನು ಸಾಯುವ ಮುನ್ನ ಭಕ್ತರಿಗೆ ಚಿತ್ರಪಟವನ್ನು ನೀಡಿ

ಇದರಿಂದ ಜೀವಿಸಿರಿ ಎಂದನಂತೆ, ಅಂದಿನಿಂದ ಗುಹನ ವಂಶಕ್ಕೆ ಸೇರಿದ ಇವರು ಗೊಂಬೆರಾಮರಾಗಿ ಆಟ ನಡೆಸುತ್ತಾ ಬಂದರಂತೆ ಅಂದರೆ ಗೊಂಬೆರಾಮರು ತಮ್ಮ ಮೊದಲ ಮಗನಿಗೆ ರಾಮನೆಂದು ಹೆಸರನ್ನಿಡುತ್ತಾರೆ. ತೊಗಲುಗೊಂಬೆ ಆಟ ಕುಟುಂಬದ ಕಲೆ ಕುಟುಂಬದ ಸದಸ್ಯರು ಗಂಡಸರು, ಹೆಂಗಸರು, ಮಕ್ಕಳು ಎಲ್ಲರೂ ಈ ಕಲೆಯ ಪ್ರದರ್ಶನದಲ್ಲಿ ಪಾಲ್ಗೊಳ್ಳುತ್ತಾರೆ. ಚರ್ಮವನ್ನು ಸಂಪಾದಿಸುವುದು, ಚರ್ಮವನ್ನು ಹದಗೊಳಿಸುವುದು, ಪಾರದರ್ಶಕಗೊಳಿಸುವುದು, ಅದರ ಮೇಲೆ ಚಿತ್ರ ರಚಿಸಿ, ಬಣ್ಣ ಹಾಕುವುದು, ಪ್ರದರ್ಶನಕ್ಕೆ ಗೊಂಬೆಯನ್ನು ಅಣಿಗೊಳಿಸುವುದು, ಪ್ರದರ್ಶನದಲ್ಲಿ ಸಂಭಾಷಣೆ ಹಾಡುಗಳನ್ನು ಹಾಡುವುದು ಇವೆಲ್ಲವು ಸಾಮಾನ್ಯವಾಗಿ ಒಂದೇ ಕುಟುಂಬದವರು ಮಾಡುತ್ತಾರೆ.

ತೊಗಲು ಗೊಂಬೆ ರಚನೆ ಮತ್ತು ವಿನ್ಯಾಸ

ತೊಗಲುಗೊಂಬೆಗಳನ್ನು ಜಿಂಕೆ, ಆಡು, ಕತ್ತೆ, ಎಮ್ಮೆ ಚರ್ಮಗಳಿಂದ ತಯಾರಿಸುತ್ತಾರೆ. ಇವುಗಳಲ್ಲಿ ಜಿಂಕೆಯ ಚರ್ಮ ನಯವಾಗಿ ಸೂಕ್ಷ್ಮವಾಗಿದ್ದು ಪರಾದರ್ಶಕತೆಯಿಂದ ಕೂಡಿರುತ್ತದೆ. ಅಲ್ಲದೇ ಹೆಚ್ಚು ಕಾಲ ಬಾಳಿಕೆ ಬರುತ್ತದೆ. ಚರ್ಮವನ್ನು ಮೊದಲು ಬಿಸಿ ನೀರಿನಲ್ಲಿ ಅದ್ದಿ ಚಾಕುವಿನಿಂದ ಕೆರೆದು ನಯಗೊಳಿಸುತ್ತಾರೆ. ಚರ್ಮದ ಒಳಗಡೆ ಮಾಂಸವಿದ್ದರೆ ಅದನ್ನು ತಣ್ಣೀರಿನಲ್ಲಿ ತೊಳೆದು ಶುಚಿಮಾಡುತ್ತಾರೆ. ಹೀಗೆ ಹದಮಾಡಿದ ಚರ್ಮವನ್ನು ನೆರಳಿನಲ್ಲಿ ಒಣಗಿಸುತ್ತಾರೆ. ಬಿಸಿಲಿಗೆ ಒಣಗಿಸಿದರೆ ಚರ್ಮ ಸುಕ್ಕುಗಟ್ಟುತ್ತದೆ. ನೆರಳಿನಲ್ಲಿ ಚೆನ್ನಾಗಿ ಒಣಗಿದ ಮೇಲೆ ಅದರ ಮೇಲೆ ಮೊನಚಾದ ಸಾಧನವಾದ ಚರ್ಮದ ಮೇಲೆ ಅವಶ್ಯವಾದ ಮೂರ್ತಿಗಳ ರೇಖಾಚಿತ್ರ ಬಿಡಿಸಿಕೊಳ್ಳುತ್ತಾರೆ. ಸೂಕ್ತ ಬಣ್ಣಗಳನ್ನು ಆಯಾ ಭಾಗಗಳಿಗೆ ಹಚ್ಚುತ್ತಾರೆ. ತೊಗಲುಗೊಂಬೆಗಳ ಕೈ, ಕಾಲು, ತಲೆ, ನಡು ಇವು ಅತ್ತಿತ್ತ ಆಡುವಂತ ವ್ಯವಸ್ಥೆ ಮಾಡಿರುತ್ತಾರೆ. ಚಲಿಸಬೇಕಾದ ಭಾಗಗಳನ್ನು ಮೂಲದೇಹ ಭಾಗದಿಂದ ಕತ್ತರಿಸಿ ಸಣ್ಣದಾರದಿಂದ ಕಟ್ಟುತ್ತಾರೆ. ಬಿದಿರಿನ ಸಣ್ಣ ಕಡ್ಡಿಗಳನ್ನು ಗೊಂಬೆಗಳ ಮಧ್ಯಭಾಗಕ್ಕೆ ಕಟ್ಟಿದ್ದು, ಕೈ ಮುಂತಾದ ಚಲನೆಯುಳ್ಳ ಭಾಗಗಳಿಗೆ ಬೇರೆ ಬೇರೆ ಕಡ್ಡಿಗಳನ್ನು ಕಟ್ಟಿರುತ್ತಾರೆ. ಈ ಕಡ್ಡಿಗಳ ಆಧಾರದಿಂದ ಗೊಂಬೆಗಳನ್ನು ಹಿಡಿದಿರುತ್ತಾರೆ. ನೋಡುವವರಿಗೆ ಗೊಂಬೆಗಳೇ ಕೈ-ಕಾಲು ಆಡಿಸಿದಂತೆ ಕಾಣುತ್ತದೆ. ಚೂಪಾದ ಲೋಹದ ವಸ್ತುವಿನಿಂದ ಚಿತ್ರಗಳನ್ನು ರಚಿಸುತ್ತಾರೆ. ಸಾಧಾರಣವಾಗಿ ಪಾತ್ರಗಳ ಮುಖ ಒಂದು ಬದಿ ಇರುವಂತೆ ಚಿತ್ರ ರಚಿಸುತ್ತಾರೆ. ಇದರಿಂದ ಪಾತ್ರವು ಸಂಭಾಷಣೆ ಹೇಳಲು ಮತ್ತು ಕುಣಿಸಲು ಅನುಕೂಲವಾಗುತ್ತದೆ. ಪಾತ್ರಕ್ಕೆ ತಕ್ಕ ಬಣ್ಣಗಾರಿಕೆ ಹಾಗೂ ವೇಷಭೂಷಣಗಳನ್ನು ರಚಿಸುವಲ್ಲಿ ಕಲಾವಿದರು ತಮ್ಮ ಸ್ವೋಪಜ್ಞತೆ ಮೆರೆಯುತ್ತಾರೆ. ಸ್ತ್ರೀ ಪಾತ್ರದ ಗೊಂಬೆಗಳು ಪುರುಷ ಪಾತ್ರದ ಗೊಂಬೆಗಳು ನಿಚ್ಚಳವಾಗಿ ಬೇರೆ ಬೇರೆಯಾಗಿ

ಕಾಣುತ್ತವೆ. ಸ್ತ್ರೀ ಪಾತ್ರದ ಗೊಂಬೆಗಳಿಗೆ ಆಭರಣಗಳನ್ನು ಕತ್ತಿಗೆ, ಕೈಬಳೆ, ಮೂಗುತಿ, ಇವುಗಳನ್ನು ಚರ್ಮದಲ್ಲಿ ರಂಧ್ರ ಕೊರೆದು ಚಿತ್ರಿಸುತ್ತಾರೆ. ಪ್ರದರ್ಶನದ ವೇಳೆ ದೀಪವು ಈ ರಂಧ್ರದಿಂದ ಹಾದುಹೋಗಿ ಆಭರಣಗಳಿಗೆ ಕಾಂತಿಯನ್ನು ನೀಡುತ್ತದೆ. ರಾಮ,ವಿಷ್ಣು, ಕೃಷ್ಣ ಮುಂತಾದ ಪಾತ್ರಗಳಿಗೆ ನೀಲಿ, ನಸುಗಂಪು, ಹಳದಿ ಬಣ್ಣವನ್ನು ಉಳಿದಂತೆ ದುಷ್ಟ ರಾಕ್ಷಸ ಪಾತ್ರಗಳಿಗೆ ಕಡುಗೆಂಪು, ಸಿಂಧೂರ, ಕಪ್ಪು ಬಣ್ಣಗಳನ್ನು ಬಳಸುತ್ತಾರೆ. ಸಾಧಾರಣವಾಗಿ ಗೊಂಬೆಗಳ ಆಕರ್ಷಣೆಗೆ ಅವರು ಹಚ್ಚುವ ಬಣ್ಣ ಹಾಗೂ ಕುಸುರಿ ಕೆಲಸವೇ ಆಗಿದೆ.

ಗೊಂಬೆಗಳು ನೇರವಾಗಿ ನಿಂತುಕೊಳ್ಳುವಂತೆ ಮಾಡಲು, ಬಿದಿರನ ಮಧ್ಯಕ್ಕೆ ಸೀಳಿ ಅದರ ಮಧ್ಯೆ ಗೊಂಬೆ ಸಿಕ್ಕಿಸಿ, ದಾರದಿಂದ ಅಲ್ಲಲ್ಲಿ ಹೊಲೆಯುತ್ತಾರೆ. ಗೊಂಬೆಯನ್ನು ಕುಣಿಸಲು ಅನುಕೂಲವಾಗು ವಂತೆ, ಕೆಳಗಡೆ ಅರ್ಧ ಅಡಿ ಉದ್ದದಷ್ಟು ಕಡ್ಡಿಯನ್ನು ಬಿಟ್ಟಿರುತ್ತಾರೆ. ತೊಗಲು ಗೊಂಬೆಗಳ ಬಣ್ಣವನ್ನು ಕಲಾವಿದರೆ ತಯಾರಿಸಿಕೊಳ್ಳುತ್ತಾರೆ. ಪರಂಪರಾಗತ ರೀತಿಯಲ್ಲಿ ಗಿಡಮೂಲಿಕೆಗಳನ್ನು ಬಳಸಿ ತಯಾರಿಸುವ ಬಣ್ಣಗಳು ಬಹುಕಾಲದವರೆಗೆ ಬಾಳಿಕೆ ಬರುತ್ತದೆ. ಇವರು ಕಾರ್ಯಕ್ರಮ ನೀಡಲು ಸಾಮಾನ್ಯವಾಗಿ ಆರು ಅಡಿ ಎತ್ತರ ಎಂಟು ಅಡಿ ಅಗಲದ ವೇದಿಕೆಯನ್ನು ಸಿದ್ದಪಡಿಸುತ್ತಾರೆ ವೇದಿಕೆಯ ಮಧ್ಯಭಾಗವು ಶುಭ್ರವಾದ ಬಿಳಿ ಬಟ್ಟೆಯಿಂದ ಕಟ್ಟುತ್ತಾರೆ. ಇನ್ನುಳಿದ ಮೂರು ಕಡೆ ಕಪ್ಪು ಬಟ್ಟೆಯಿಂದ ಮುಚ್ಚುತ್ತಾರೆ. ಬಿಳಿ ಬಟ್ಟೆಯಿರುವ ಕಡೆ ಗೊಂಬೆಗಳು ಪ್ರೇಕ್ಷಕರಿಗೆ ಗೋಚರಿಸುತ್ತವೆ. ಪರದೆಯ ಹಿಂದೆ ಒಳಗಡೆ ಹಿಂಭಾಗದಲ್ಲಿ ಗ್ಯಾಸ್‌ಲೈಟನ್ನು ಬಿಟ್ಟಿರುತ್ತಾರೆ. ಅದರ ಬೆಳಕು ತೊಗಲುಗೊಂಬೆಗಳ ಮೇಲೆ ಬಿದ್ದು ಪ್ರತಿಫಲನ, ಪಂಚೆಯ ಮೇಲೆ ಅದ್ಭುತವಾಗಿ ಕಾಣಿಸಿಕೊಳ್ಳುತ್ತದೆ. ಭಾಗವತರು, ಪಾತ್ರಧಾರಿಗಳು, ಹಿಮ್ಮೇಳದ ಹಾಡುಗಾರರು ಇರುತ್ತಾರೆ. ಮೊದಲೆಲ್ಲ ರಾಮಾಯಣ, ಮಹಾಭಾರತ, ದಶಾವತಾರ ಮುಂತಾದ ಕಥೆಗಳನ್ನು ಮಾಡುತ್ತಿದ್ದರು. ನಂತರ ಬಂದ ಕಲಾವಿದರು ಆಟಕ್ಕೆ ಹೊಸ ವಸ್ತುಗಳ ಪ್ರಯೋಗ ಮಾಡಿದರು. ಸ್ವಾತಂತ್ರ್ಯ ಸಂಗ್ರಾಮ, ಕಿತ್ತೂರು ರಾಣಿ ಚೆನ್ನಮ್ಮ, ಬಸವೇಶ್ವರ, ಛತ್ರಪತಿ ಶಿವಾಜಿ, ಬಸವಣ್ಣ, ಶಿಶುನಾಳ ಷರೀಪ್, ಬಾಪುಕಥೆ ಹೀಗೆ ಹಲವಾರು ಕಥೆಗಳನ್ನಿಟ್ಟುಕೊಂಡು ತೊಗಲುಗೊಂಬೆ ಆಡಿಸುತ್ತಾರೆ.

ಗಣೇಶನ ಪ್ರಾರ್ಥನೆಯೊಂದಿಗೆ ಆಟ ಆರಂಭವಾಗುತ್ತದೆ. ಆಟವನ್ನು ಚಮತ್ಕಾರಿಕವಾಗಿ ಮಾಡಿ ಪ್ರೇಕ್ಷಕರನ್ನು ಅಲೌಕಿಕ ಪ್ರಪಂಚಕ್ಕೆ ಕರೆದೊಯ್ಯುವರು. ಆಯಾ ಪಾತ್ರಗಳ ಸಂಭಾಷಣೆಯನ್ನು ಹಾಡನ್ನು ಹೇಳುತ್ತಾ ಎರಡೂ ಕೈಗಳಿಂದ ಒಂದೊಂದು ಗೊಂಬೆಯನ್ನು ಹಿಡಿದು ಕುಣಿಸುವ ರೀತಿ ಅಚ್ಚರಿಯನ್ನುಂಟು ಮಾಡುತ್ತದೆ. ನಾಲ್ಕಾರು ಪಾತ್ರಗಳು ಒಟ್ಟಿಗೆ ಬಂದಾಗ ಅವುಗಳೆಲ್ಲವುಗಳ ಸಂಭಾಷಣೆ ಹಾಡನ್ನು ಏಕಕಾಲದಲ್ಲಿ ಕಲಾವಿದರು ನಿರ್ವಹಿಸಬೇಕಾಗುತ್ತದೆ. ತೊಗಲು ಗೊಂಬೆಯಾಟಕ್ಕೆ ಬಳಸುವ ಸಾಹಿತ್ಯ ರಾಮಾಯಣ,

ಮಹಾಭಾರತ, ಭಾಗವತ, ಪುರಾಣ ಹಾಗೂ ಜನಪದ ಕಥೆಗಳಿಂದ ಆಯ್ದು ಕೊಂಡಿರುತ್ತಾರೆ. ಹಾಡುವಾಗ ಕನ್ನಡ ಹಾಡುಗಳ ಜೊತೆ-ಜೊತೆಗೆ ಮರಾಠಿ ಹಾಗೂ ತೆಲುಗು ಹಾಡುಗಳನ್ನು ಸೇರಿಸುತ್ತಾರೆ.



ತೊಗಲುಗೊಂಬೆ ಆಟ

ಇವರು ಬಳಸುವ ವಾದ್ಯಪರಿಕರಗಳು ವಿಶಿಷ್ಟವಾದವುಗಳು. ಸಾಧಾರಣವಾಗಿ ಒಂದೇ ಕುಟುಂಬದವರು ಸೇರಿ ಆಟವನ್ನು ಆಡಿಸುವುದರಿಂದ ಹೆಂಗಸರು, ಗಂಡಸರು, ಸೇರಿಯೆ ಹಾಡುತ್ತಾರೆ. ಮೃದಂಗ ಬುರಿಬುರಿ ಹಾಗೂ ಪಾದರೆ ಎನ್ನುವ ವಾದ್ಯಗಳನ್ನು ಬಳಸುತ್ತಾರೆ. ಪ್ರದರ್ಶನ ಮುಗಿದ ಬಳಿಕ ಈ ಗೊಂಬೆಗಳನ್ನು ಬಟ್ಟೆಯಿಂದ ಸುತ್ತಿ ಮರದ ಪೆಟ್ಟಿಗೆಯಲ್ಲಿ ಜೋಪಾನವಾಗಿಡುತ್ತಾರೆ. ಇಲ್ಲವಾದರೆ ಗೊಂಬೆಗಳು ಮಾಸುವ ಅಥವಾ ಹಾಳಾಗುವ ಸಂಭವವಿರುತ್ತದೆ. ಒಂದು ಕಾಲದಲ್ಲಿ ನೂರಾರು ಜನರಿಗೆ ಮನರಂಜನೆ ನೀಡಿ ಹತ್ತಾರು ಕಲಾವಿದರಿಗೆ ದಾರಿತೋರಿಸಿದ್ದ ತೊಗಲುಗೊಂಬೆ ಎನ್ನುವ ಅಪೂರ್ವವಾದ ಕಲೆ ಇಂದು ನಮ್ಮ ಮನೆ ಮನಗಳಿಂದ ದೂರವಾಗುತ್ತಿದೆ ಎನ್ನುವುದು ನಿಜಕ್ಕೂ ವಿಪರ್ಯಾಸ. ಇದರ ಮಧ್ಯೆಯೇ ಈ ಕಲೆಯನ್ನು ಜಾಗತಿಕ ಮಟ್ಟದಲ್ಲಿ ಕೊಂಡೊಯ್ದು ಕೀರ್ತಿ ಬೆಳಗಲ್ಲು ವೀರಣ್ಣನವರಿಗೆ ಸಲ್ಲುತ್ತದೆ.

ತೊಗಲುಗೊಂಬೆ ಕಲಾವಿದ ಬೆಳಗಲ್ಲು ವೀರಣ್ಣ

ತೊಗಲುಗೊಂಬೆ ಆಟದಲ್ಲಿ ಬೆಳಗಲ್ಲು ವೀರಣ್ಣ ಅವರ ಹೆಸರುಚಚಿರಪರಿಚಿತವಾದುದು. ಬೆಳಗಲ್ಲು ವೀರಣ್ಣ ಅವರದು. ರಾಜ್ಯ, ರಾಷ್ಟ್ರ, ಅಂತರ್‌ರಾಷ್ಟ್ರ ಮಟ್ಟದಲ್ಲೇ ತೊಗಲುಗೊಂಬೆಗೆ ಒಂದು ಹೊಸ ಆಯಾಮವನ್ನು ನೀಡಿ, ಇವರ ತೊಗಲುಗೊಂಬೆಯಾಟವು ಜನಮಾನಸದಲ್ಲಿ

ಉಳಿಯುವಂತೆ ಮಾಡಿದ್ದಾರೆ. ಇಂದು ಕೂಡ ತೊಗಲುಗೊಂಬೆ ಆಡಿಸುವಾಗ ಬೆಳಗಲ್ಲು ವೀರಣ್ಣನವರ ಕಂಠ ಪ್ರತಿಧ್ವನಿಸುತ್ತದೆ. ಪ್ರೇಕ್ಷಕರು ಈ ಕಲಾವಿದರ ಕೈಚಳಕವನ್ನು, ಕಂಠಸಿರಿಯನ್ನು ನೋಡಲೆಂದು, ಕೇಳಲೆಂದೇ ಕಾರ್ಯಕ್ರಮಕ್ಕೆ ಬರುತ್ತಾರೆ.



ತೊಗಲುಗೊಂಬೆ ಕಲಾವಿದರಾದ ಶ್ರೀ ಬೆಳಗಲ್ಲು ವೀರಣ್ಣ

ಸಾಮಾಜಿಕವಾಗಿ :

ವೀರಣ್ಣನವರ ಹುಟ್ಟೂರು ಬಳ್ಳಾರಿ ಸಮೀಪದ ಕುಗ್ರಾಮ ಬೆಳಗಲ್ಲು. ತಂದೆ ದೊಡ್ಡ ಹನುಮಂತಪ್ಪ, ತಾಯಿ ಈರಮ್ಮ ಹಾಗೂ ಹನ್ನೆರಡು ಜನ ಮಕ್ಕಳು. ಐದು ಜನ ಹೆಣ್ಣು. ಗಂಡು ಮಕ್ಕಳಲ್ಲಿ ನಾಲ್ಕು ಜನ ಕೆಲ ದಿನಗಳಲ್ಲಿಯೇ ತೀರಿಹೋಗಿದ್ದರು. ಹೀಗಾಗಿ ಬದುಕುಳಿದಿದ್ದ ಗಂಡು ಮಗ ವೀರಣ್ಣನವರನ್ನು ಕಂಡರೆ ಎಲ್ಲರಿಗೂ ಅಪರಿಮಿತ ಪ್ರೀತಿ. ಅಲ್ಲದೇ ಇವರಿಗೆ ವರುಷ ಎಂಟಾದರೂ ಸೊಂಟದಿಂದ ಇಳಿಸುತ್ತಿರಲಿಲ್ಲವಂತೆ. ಅಪ್ಪನಿಗೆ ೪೬ ಎಕರೆ ಜಮೀನು ದೊಡ್ಡ ಮನೆ ಎಲ್ಲವೂ ಇತ್ತು. ಆದರೆ ಇವರ ತಂದೆಯವರು ಬಯಲಾಟದ ಹುಚ್ಚಿನಿಂದಾಗಿ ೨೨ ಎಕರೆ ಜಮೀನನ್ನು ಮಾರಿ ರಂಗಕಲೆಯ ಬೆನ್ನು ಹತ್ತಿದರು. ಬೆಳಗಲ್ಲು ವೀರಣ್ಣನವರಿಗೆ ೮ ವರ್ಷವಿದ್ದಾಗ ಇವರ ತಂದೆ-ತಾಯಿ ಇಬ್ಬರು ಯಾವುದೋ ರೋಗಕ್ಕೆ ಬಲಿಯಾಗಿ ತೀರಿಕೊಂಡರು. ಮದುವೆಯಾಗಿ ಅಕ್ಕಂದಿರೆಲ್ಲಾ ಅವರ ಗಂಡಂದಿರ ಮನೆಯಲ್ಲಿಯೇ ಇದ್ದರು. ಆಗ ಅಕ್ಕಂದಿರಿಗೆ ತಮ್ಮನನ್ನು ಸಾಕುವ ಜವಾಬ್ದಾರಿ ಬಿತ್ತು. ಆಗ ವೀರಣ್ಣನವರು ತುಂಬಾ ಸಣ್ಣವರಿದ್ದ ಕಾರಣದಿಂದ ಅಕ್ಕಂದಿರು ತಮ್ಮನನ್ನು ಕರೆದುಕೊಂಡು ಹೋದರು. ಇವರ ತಂದೆ ದೊಡ್ಡ ಹನುಮಂತಪ್ಪನವರು ತಮ್ಮ ಶ್ರೀಮಂತಿಕೆಯ ದಿನಗಳಲ್ಲಿ ಊರಿನ ಕೆಲ ಬಡತನದ ಮನೆಯವರಿಗೆ ಆಶ್ರಯ

ನಿಡಿದ್ದರು. ಅಪ್ಪ-ಅಮ್ಮ ಇಲ್ಲದ ವೀರಣ್ಣನಿಗೆ ಅವರ ತಂದೆಯ ಕೃತಜ್ಞತೆಯನ್ನು ನೆನೆಸುತ್ತಾ ಊರಿನವರೇ ಅವರಿಗೆ ಆಶ್ರಯ ನೀಡಿದ್ದರು. ತಂದೆಯಿಂದ ಬಳುವಳಿಯಾಗಿ ಬಂದಿದ್ದ ಬಯಲಾಟವನ್ನು ಇವರು ಮುಂದುವರೆಸಿಕೊಂಡು ಹೋದರು. ಸಮಧುರ ಕಂಠವನ್ನು ಹೊಂದಿದ್ದ ವೀರಣ್ಣನು ಸಣ್ಣವಯಸ್ಸಿನಲ್ಲಿಯೇ ರಂಗಗೀತೆಯನ್ನು ಕಲಿತರು ಸಖಿ ಪಾತ್ರದಿಂದ ಇವರು ರಂಗ ಪ್ರವೇಶ ಮಾಡಿದರು. ಸಖಿ ಪಾತ್ರಧಾರಿಯು ಸುಶ್ರಾವ್ಯವಾಗಿ ಹಾಡುತ್ತಾ ನೃತ್ಯ ಮಾಡಬೇಕಾಗಿತ್ತು. ಇವರು ಹಿಂದಿ ಹಾಡುಗಳಿಗೆ ನರ್ತಿಸುತ್ತಿದ್ದರು. ಅಪ್ಪ ಇರುವಾಗಲೇ ಸಂಭಾಷಣೆ ಹೇಳುವುದು, ನೃತ್ಯ ಮಾಡುವುದು ಹಾರ್ಮೋನಿಯಂ ವಾಯಲಿನ್ ನುಡಿಸುವುದನ್ನು ಕಲಿತಿದ್ದರು.

ಇವರ ಒಬ್ಬ ಅಕ್ಕನ ಗಂಡ ತೊಗಲುಗೊಂಬೆಯಾಟದ ಕಲಾವಿದರಾಗಿದ್ದರು. ಅವರಿಗೆ ಬಾಮೈದನನ್ನು ಕಂಡರೆ ಅಪರಿಮಿತ ಪ್ರೀತಿ. ಅವರ ಆಟದಲ್ಲಿ ಭಕ್ತಪ್ರಹ್ಲಾದನ ಪಾತ್ರವನ್ನು ಇವರಿಂದ ಮಾಡಿಸಿದರು. ಆ ಪಾತ್ರದ ನಂತರ ಹಲವಾರು ಪಾತ್ರವನ್ನು ಇವರಿಂದಲೇ ಮಾಡಿಸಿದರು. ಜೊತೆಜೊತೆಗೆ ನೃತ್ಯವನ್ನು ಕೂಡ ಮಾಡಿ ಜನರ ಪ್ರಶಂಸೆಗೆ ಪಾತ್ರರಾದರು. ಇವರು ನೃತ್ಯ ಎಷ್ಟೊಂದು ಜನಪ್ರಿಯವಾಯಿತೆಂದರೆ ನಾಟಕ ನೋಡಲು ಬರುವ ರಾಜಕಾರಣಿಗಳು, ಪ್ರತಿಷ್ಠಿತ ವ್ಯಕ್ತಿಗಳು ಕೂಡ ಇವರ ನೃತ್ಯವನ್ನು ನೋಡಲೇಬೇಕೆಂದು ಪಟ್ಟು ಹಿಡಿದು ಕುಳಿತು ಇವರ ನೃತ್ಯ ನೋಡಿದ ಮೇಲೆಯೆ ಹೊರಡುತ್ತಿದ್ದರು. ವೀರಣ್ಣನವರ ಕಂಚಿನ ಕಂಠವನ್ನು ಕೇಳಿದವರು ಇವರಿಗೆ ಪಂಚಾಕ್ಷರಿ ಗವಾಯಿಗಳ ಆಶ್ರಮಕ್ಕೆ ಕರೆತಂದರು. ಅಲ್ಲಿ ಅವರಿಗೆ ಓದಿನ ಗೀಳೂ ಅಂಟಿಕೊಂಡಿತು. ಗವಾಯಿಗಳ ಅಣತಿಯತೆ ಕಲಿಕೆ ಆರಂಭವಾದದ್ದು ಇಲ್ಲಿಯ ತನಕವೂ ಮುಗಿದಿಲ್ಲವೆನ್ನುತ್ತಾರೆ.

ಬಳ್ಳಾರಿ ಜಿಲ್ಲೆಯವರಾದ ಬೆಳಗಲ್ಲು ವೀರಣ್ಣನವರದು ದೊಡ್ಡ ಸಂಸಾರ. ಕಡು ಬಡತನದಿಂದ ಬಂದ ಇವರು ಮೂಲತಃ ತೊಗಲುಗೊಂಬೆ ಆಡಿಸುವ ಮನೆತನದಲ್ಲಿಯೇ ಹುಟ್ಟಿದವರು. ಚಿಕ್ಕಂದಿನಿಂದಲೇ ತಂದೆ-ತಾಯಿಯನ್ನು ಕಳೆದುಕೊಂಡ ಇವರು ರಂಗಭೂಮಿಯ ಕಡೆ ಆಕರ್ಷಿತರಾದರು. ಅಲ್ಲಿ ಇವರು ಯಶಸ್ಸನ್ನೂ ಕೂಡಾ ಕಂಡರು. ಕಮಲಾದೇವಿ ಚಟ್ಟೋಪಧ್ಯಾಯ ಮತ್ತು ವಿಜಯ ಸಾಸನೂರು ಇವರುಗಳ ಮಾರ್ಗದರ್ಶನದಿಂದ ಮತ್ತೆ ತಮ್ಮ ಮನೆತನದಿಂದ ಬಂದ ಕುಲಕಸುಬಾದ ತೊಗಲುಗೊಂಬೆ ಕಡೆ ವಾಲಿದರು. ಹೊಟ್ಟೆ-ಬಟ್ಟೆಗಾಗಿ ತೊಗಲುಗೊಂಬೆಯಾಡಿಸುತ್ತಿದ್ದ ಇವರು ವಿಚಾರವಂತರೂ ಕೂಡ ಆಗಿದ್ದರು. ತಮ್ಮ ವಂಶಪಾರಂಪರ್ಯವಾಗಿ ಬಂದಿರುವ ಈ ಕಲೆಯನ್ನು ಹೇಗಾದರೂ ಮಾಡಿ, ಮೌಢ್ಯದಿಂದ ಆಚೆಗೆ ತರುವ ಹಂಬಲವಿತ್ತು. ಹೀಗಿರುವಾಗ ಇವರಿಗೆ ದೆಹಲಿಯ ಅಪ್ನಾ ಉತ್ಸವ್‌ಗೆ ಇವರು ಕಾರ್ಯಕ್ರಮ ನೀಡಲು ಕರೆ ಬಂದಿತು. ಆಗ ಇವರು ತಮ್ಮ ಪತ್ನಿ ಮಹಾಲಿಂಗಮ್ಮ ಹಾಗೂ ಆರುಜನ ಮಕ್ಕಳೊಂದಿಗೆ ಕಾರ್ಯಕ್ರಮವನ್ನು ನೀಡಿದರು. ಕಾರ್ಯಕ್ರಮವು ಯಶಸ್ವಿಯೂ ಆಯಿತು.

ಹೀಗೆ ಇವರು ಒಂದಾದ ಮೇಲೆ ಒಂದರಂತೆ, ತಮ್ಮ ಅವಿರತ ಶ್ರಮದಿಂದ, ತೊಗಲುಗೊಂಬೆಗೆ ಹೊಸ ಆಯಾಮವನ್ನು ನೀಡಿದರು. ಇಂದು ಇವರ ನಾಲ್ಕುಜನ ಗಂಡು ಮಕ್ಕಳು ಬೇರೆ ಬೇರೆ ಕೆಲಸದಲ್ಲಿದ್ದು, ಕಾರ್ಯಕ್ರಮವಿದ್ದಾಗ ಎಲ್ಲರೂ ಒಟ್ಟಾಗಿ ಕೂಡಿ ಕಾರ್ಯಕ್ರಮವನ್ನು ಯಶಸ್ವಿ ಮಾಡುತ್ತಾರೆ. ಇವರ ಮೊದಲ ಮಗ ಮಹೇಶ್ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದರೆ, ಎರಡನೇ ಮಗ ಮಲ್ಲಿಕಾರ್ಜುನ ತೊಗಲುಗೊಂಬೆ ಮೇಳವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಮೂರನೇ ಮಗ ಪ್ರಕಾಶ್ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ ಬಳ್ಳಾರಿಯಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೂ ಕೂಡಾ ಒಳ್ಳೆಯಕಡೆ ಮದುವೆಮಾಡಿಕೊಟ್ಟಿದ್ದಾರೆ. ಒಬ್ಬ ಅಳಿಯ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ, ಹಿಂದೂಸ್ಥಾನಿ ಗಾಯಕ ವೆಂಕಟೇಶ್ ಅವರು. ಇನ್ನೊಬ್ಬ ಮಗಳು ಶಾಲಾ ಶಿಕ್ಷಕಿಯಾಗಿದ್ದಾರೆ. ಅವರ ಪತಿ ತೊಗಲುಗೊಂಬೆ ಮೇಳವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಕೊನೆಯ ಮಗ ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮಕ್ಕಳು ಒಂದಿಂಲ್ಲೊಂದು ಕಾರ್ಯಕ್ಷೇತ್ರದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಆದರೆ ಅಪ್ಪಮಾಡುವ ತೊಗಲುಗೊಂಬೆಯಾಟದಲ್ಲಿ ಇವರೆಲ್ಲರೂ ಪಾಲ್ಗೊಂಡು; ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡುತ್ತಾರೆ. ಹೊರದೇಶಗಳಿಗೆ ಕಾರ್ಯಕ್ರಮಗಳನ್ನು ನೀಡುವಾಗ ಇಡೀ ಕುಟುಂಬವೇ ಒಂದಾಗಿ ಹೋಗುತ್ತಾರೆ. ಇವರ ಶ್ರೀಮತಿಯವರು ಬಹುಕಷ್ಟದಿಂದ ಆರುಜನ ಮಕ್ಕಳನ್ನು ಸಾಕಿಸಲಹಿದ್ದಾರೆ. ರಂಗಕ್ಕೆ ಹೊಸಹೊಸ ಪ್ರಯೋಗಗಳನ್ನು ತರುವಲ್ಲಿ ನಮ್ಮ ಬಡತನವೂ ಕಾರಣವಿತ್ತು ಎನ್ನುತ್ತಾರೆ ವೀರಣ್ಣನವರು. ಜನರು ಬೇರೆ ಬೇರೆ ಕಥೆ ನೋಡುತ್ತಾರೆ ಎನ್ನುವ ಆಸೆಯೇ ಹೊಸ ಹೊಸ ಅನ್ವೇಷಣೆಗಳನ್ನು ನಡೆಸುವಲ್ಲಿ ದಾರಿ ತೋರಿಸಿತು. ನಾವು ಮತ್ತು ಅದರಲ್ಲಿ ಯಶಸ್ವಿಯಾದೆವು ಎನ್ನುತ್ತಾರೆ.

ಸಾಂಸ್ಕೃತಿಕವಾಗಿ :

ಈ ಕಲೆಯು ದೈವರಾಧನೆ ಮತ್ತು ನಂಬಿಕೆಗಳಿಗೆ ಅನುಗುಣವಾಗಿ ಬೆಳೆದು ಬಂದಿದೆ. ಸಾಧಾರಣವಾಗಿ ಉತ್ತರ ಕರ್ನಾಟಕದ ಭಾಗದಲ್ಲಿ ಬಿರುಬೇಸಿಗೆ ಹೆಚ್ಚಿರುವುದರಿಂದ ಚರ್ಮದಿಂದ ಮಾಡಿದ ತೊಗಲುಗೊಂಬೆಗಳು ಬಾಳಿಕೆ ಬರುತ್ತವೆ. ತೊಗಲುಗೊಂಬೆ ಆಡಿಸುವವರ ನಂಬಿಕೆ ಪ್ರಕಾರ ಮಳೆ ಬಾರದ ಸಂದರ್ಭದಲ್ಲಿ ಮೂರುರಾತ್ರಿ ರಾಮಾಯಣದ ಕಥೆಯನ್ನು ಮಾಡಿಸಿದರೆ, ಮಳೆ ಬರುತ್ತದೆಂಬ ನಂಬಿಕೆ ಇದೆ. ಹಾಗಾಗಿಯೇ ಹಿಂದಿನವರು ಆಟ ಆಡಿಸುತ್ತಿದ್ದರು. ಆಟ ಮುಗಿದ ಮೇಲೆ ಕಾಣಿಕೆಯಾಗಿ ತೊಗಲುಗೊಂಬೆಯವರಿಗೆ ಭೂಮಿ, ದಸವಧಾನ್ಯ ನೀಡುತ್ತಿದ್ದರು. ಕೆಲವೊಮ್ಮೆ ಹರಕೆಯ ಆಟವಾಗಿಯೂ

ತೊಗಲುಗೊಂಬೆ ಆಟವನ್ನು ಆಡಿಸುತ್ತಾರೆ. ಈ ಕಲೆಯು ಇಂದೂ ಕೂಡಾ ಲೋಕಾಶ್ರಯದಿಂದ ನಡೆಯುತ್ತಿದೆ ಎಂದರೆ ತಪ್ಪಾಗಲಾರದು. ವೈಷ್ಣವ ಪಂಥದ ಹಿನ್ನಲೆಯಿಂದ ಬಂದ ಇವರು ರಾಮಾಯಣದದ ಕಥೆಯನ್ನು ಹೇಳುತ್ತಾರೆ. ಹಾಸ್ಯಪಾತ್ರಧಾರಿ ಕಿಳ್ಳೇಕ್ಯಾತ, ವಿದೂಷಕ ಇವರು ಕೂಡಾ ರಾಮನಾಮವನ್ನು ಜಪಿಸುತ್ತಾರೆ. ಇವರ ಮಾತೃಭಾಷೆ ಮರಾಠಿ. ಈ ರಾಮ ಮತ್ತು ಆಂಜನೇಯನನ್ನು ಆರಾಧಿಸುತ್ತಾರೆ. ಇಂದು ಕಾಲ ಬದಲಾದಂತೆ ತೊಗಲುಗೊಂಬೆಯಾಟವು ಸಾಂಸ್ಕೃತಿಕವಾಗಿಯೂ ಬದಲಾಗಿದೆ. ಹಿಂದೆ ಮಳೆ ಬರುವುದಕ್ಕಾಗಿ ಆಡಿಸುತ್ತಿದ್ದ ಆಟ ಇಂದು ಶಿವಶರಣರ, ಸ್ವಾತಂತ್ರ್ಯ ಹೋರಾಟಗಾರರ, ಪ್ರಚಲಿತ ವಿದ್ಯಮಾನಗಳ ಕಥೆಯೊಂದಿಗೆ ತನ್ನತನವನ್ನು ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದು; ಮುನ್ನೆಡೆಯುತ್ತಿದೆ.

ಇದು ಜಗತ್ತಿನ ಪ್ರಾಚೀನ ಕಲೆಗಳಲ್ಲಿ ಒಂದು. ತನ್ನ ಭಾವನೆಗಳ ಅಭಿವ್ಯಕ್ತಿಗೆ ಮನುಷ್ಯ ಬಳಸಿಕೊಂಡಿದ್ದು ತೊಗಲುಗೊಂಬೆಗಳನ್ನು, ತಂತ್ರಜ್ಞಾನ ಬೆಳೆದಿರದ ದಿನಗಳಲ್ಲಿ ಗ್ರಾಮೀಣ ಜನರಿಗೆ ಮನರಂಜನೆ ನೀಡುತ್ತಿದ್ದ ಕಲೆಗಳ ಪೈಕಿ ತೊಗಲುಗೊಂಬೆಯಾಟವೂ ಒಂದು. ಮಳೆಗಾಲದಿಂದ ಬೇಸಿಗೆಯವರೆಗೆ ಹೊಲಗಳಲ್ಲಿ ದುಡಿಯುತ್ತಿದ್ದ ರೈತಾಪಿ, ಜನರಿಗೆ ಸುಗ್ಗಿ ನಂತರ ಬಿಡುವು ಸಿಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಕಲಾವಿದರಿಗೆ ಅವರು ಧಾನ್ಯ ಹಣ ನೀಡಿ ಗೊಂಬೆಯಾಟ ಆಡಿಸುತ್ತಿದ್ದರು. ರಾತ್ರಿಯಿಂದ ಬೆಳಗಿನವರೆಗೂ ಮನರಂಜನೆಯನ್ನು ಪಡೆಯುತ್ತಿದ್ದರು. ಆದರೆ ಇಂದು ಕಾಲ ಬದಲಾಗಿದೆ. ಊರ ಮುಖಂಡರು ಮತ್ತು ಜಮೀನ್ದಾರರು ಹಿರಿಯ ಕಲಾವಿದರನ್ನು ಅತ್ಯಂತ ಪ್ರತಿಯಿಂದ ಗೌರವಿಸುತ್ತಿದ್ದರು. ಈಗ ಹಳ್ಳಿಗಳಲ್ಲಿ ಹಿರಿತಲೆ ಇಲ್ಲದೇ ಇರುವುದರಿಂದ ಅವರ ಮಕ್ಕಳಿಗೆ ಕಲೆ ಮತ್ತು ಕಲಾವಿದರ ಆ ಸಂಪ್ರದಾಯದ ಬಗ್ಗೆ ಹೆಚ್ಚು ತಿಳುವಳಿಕೆ ಇರದ ಕಾರಣ ತೊಗಲುಗೊಂಬೆಯವರು ಊರಿನಲ್ಲಿ ಕಾರ್ಯಕ್ರಮ ನೀಡಿದರೂ ಮನೆಮನೆಗಳಿಂದ ಬರುವ ಕಾಣಿಕೆ ರೂಪವು ತುಂಬಾ ಕಡಿಮೆಯಾಗಿದೆ. ಹೀಗಾಗಿ ಯಾವುದೇ ತೊಗಲುಗೊಂಬೆಯಾಟದವರಾದರೂ ಊರಿಂದೂರಿಗೆ ಹೋಗಿ ಕಾರ್ಯಕ್ರಮ ನೀಡಲು ಇಂದು ಉತ್ಸುಕರಾಗಿಲ್ಲ.

ಆರ್ಥಿಕವಾಗಿ :

ಆರಂಭದಲ್ಲಿ ವೀರಣ್ಣನವರು ಚಂದ್ರಯ್ಯ ಗುರುಗಳ ಕಂಪನಿಯಲ್ಲಿ ದುಡಿಯುತ್ತಿದ್ದರು. ಎರಡು ಹೆಣ್ಣು ಮಕ್ಕಳನ್ನು ಸಾಕಲು ಸಾಕಾಗುವಷ್ಟು ಅವರಿಗೆ ಹಣ ಬರುತ್ತಿರಲಿಲ್ಲ. ಆಗ ಅವರು ಜಾತ್ರೆ-ಉತ್ಸವಗಳಲ್ಲಿ ಕ್ಯಾಂಪ್ ಮಾಡುತ್ತಿದ್ದರು. ಆ ಸಮಯದಲ್ಲಿ ವೀರಣ್ಣನವರು ನಾಟಕ ಕಲಿಯಲು ಹೋಗುತ್ತಿದ್ದರು, ಕೆಲವೊಮ್ಮೆ ರಸಿಕರ ಆಹ್ವಾನವನ್ನು ಗೌರವಿಸಿ ಪಾತ್ರ ಮಾಡುತ್ತಿದ್ದರು. ಇವರಿಗೆ ಮೊದಲಿನಿಂದಲೂ ಹಣಕಾಸಿನ ಪ್ರಾಪಂಚಿಕ ಜ್ಞಾನ

ಕಡಿಮೆ. ನಾಟಕ ಮಾಡುವಾಗ ಲುಕ್ಸಾನ ಮಾಡಿಕೊಂಡದ್ದನ್ನು ಈಗಲೂ ಸ್ಮರಿಸುತ್ತಾರೆ. ತನ್ನ ಕಷ್ಟದ ದಿನಗಳಲ್ಲಿ ತನಗೆ ಸಹಾಯ ಮಾಡಿದ ಹಾರ್ಮೋನಿಯಂ ಮಾಸ್ತರ್, ಸಿರಿಗೇರಿ ನಾಗನಗೌಡರನ್ನು ಇಂದಿಗೂ ಮನದುಂಬಿ ನೆನೆಯುತ್ತಾರೆ.

ದೃಶ್ಯಮಾಧ್ಯಮದಲ್ಲಿ ತೊಗಲುಗೊಂಬೆ ಆಟ

ಜನಪದ ರಂಗಭೂಮಿಯಲ್ಲಿ ಗೊಂಬೆಯಾಟಗಳು ವಿಶೇಷ ಕಲಾ ಪ್ರದರ್ಶನವಾಗಿರುತ್ತದೆ. ಒಬ್ಬ ಮನುಷ್ಯನ ಭಾವಾಭಿವ್ಯಕ್ತಿ ಹೇಗೋ ಹಾಗೆ ಗೊಂಬೆಗಳನ್ನು ಸಮಯೋಚಿತವಾಗಿ ಆಕಾರಯುತವಾಗಿ ಸನ್ನಿವೇಶದ ಚೌಕಟ್ಟಿನೊಳಗೆ ಪ್ರದರ್ಶಿಸುತ್ತಾರೆ. ಈ ಗೊಂಬೆಯಾಟದ ಪ್ರದರ್ಶನದ ಹಿಂದೆ ವ್ಯಕ್ತಿಯ ಸೂತ್ರಧಾರಿಕೆ ಇರುತ್ತದೆ. ಇಲ್ಲಿ ಸೂತ್ರದ ಗೊಂಬೆಯಾಟ ಹಾಗೂ ತೊಗಲುಗೊಂಬೆಯಾಟ ಎಂಬ ಪ್ರಭೇದಗಳಿವೆ. ಪ್ರಮುಖವಾಗಿ ಅಲೆಮಾರಿ ಶಿಳ್ಳೆಕ್ಯಾತ ಜನಾಂಗಕ್ಕೆ ಸೇರಿದರೂ ಕೂಡ ಜಾತ್ಯಾತೀತವಾದ ಕಲಾ ಮಾಧ್ಯಮ ಇದಾಗಿದೆ. ಇಲ್ಲಿ ಬಳಸಲ್ಪಡುವ ಗೊಂಬೆಗಳು ಕಥೆಯನ್ನು ದೃಶ್ಯಮಾಧ್ಯಮದಲ್ಲಿ ನಿರ್ಜೀವವಾಗಿ ಕಂಡರೂ ಹಿನ್ನಲೆಯ ಧ್ವನಿ ಅದಕ್ಕೊಂದು ಭಾವಸ್ಪುಟವನ್ನು ನೀಡುತ್ತದೆ. ಆಂಗೀಕ ಚಲನೆಗಳು ಸಂಕೇತವನ್ನು ಮಾತ್ರ ಪ್ರಕಟಪಡಿಸುತ್ತವೆ. ಹಿನ್ನಲೆಯಲ್ಲಿರುವ ಸಂಭಾಷಣಾ ಧ್ವನಿಗಳು ಭಾವಾ ಪ್ರಧಾನವಾಗಿರುವುದರಿಂದ ಇದರ ಒಟ್ಟು ಆಶಯವನ್ನು ಗ್ರಹಿಸಬಹುದು.

ತೊಗಲು ಎಂದರೆ ಚರ್ಮ ಎಂದರ್ಥ. ಚರ್ಮವನ್ನು ಹದವಾಗಿರಿಸಿ ಮನುಷ್ಯ ಪ್ರಾಣಿ ಪಕ್ಷಿಗಳ ಆಕಾರವನ್ನು ನೀಡಿ ಅದಕ್ಕೊಂದು ರೂಪಕೊಟ್ಟು ತನ್ನ ನಿರ್ದೇಶನಕ್ಕೆ ಜನಪದ ಕಲಾವಿದ ಗೊಂಬೆಗಳನ್ನು ಬಳಸಿಕೊಳ್ಳುತ್ತಾನೆ. ಹಿಮ್ಮೇಳ ಮುಮ್ಮೇಳಗಳ ಮೂಲಕ ಇಲ್ಲಿ ಪ್ರದರ್ಶನ ಸಾಕ್ಷಾತ್ಕಾರಗೊಳ್ಳುತ್ತದೆ. ಈ ತೊಗಲುಗೊಂಬೆ ಆಟದಲ್ಲಿ ಧನಾತ್ಮಕ ಅಂಶಗಳನ್ನು, ಋಣಾತ್ಮಕ ಅಂಶಗಳನ್ನು ಕಾಣುತ್ತೇವೆ. ಒಂದು ಕಲಾ ಪ್ರಕಾರವು ಗೊಂಬೆಗಳ ಮೂಲಕ ಪ್ರದರ್ಶಿತವಾಗುವಾಗ ದೃಶ್ಯಮಾಧ್ಯಮದಲ್ಲಿ ಚಲನವಲನಗಳನ್ನು ಮಾತ್ರ ಗ್ರಹಿಸಬಹುದೇ ಹೊರತು ಶೃಂಗಾರಾದಿ ನವರಸಗಳನ್ನು ಅಥವಾ ಮುಖದಲ್ಲಿ ಅಭಿನಯಿಸಲ್ಪಡುವ ಸೂಕ್ಷಾಂಶಗಳನ್ನು ಗ್ರಹಿಸುವುದಕ್ಕೆ ಸಾಧ್ಯವಿಲ್ಲ. ಕಣ್ಣು, ಮೂಗು, ಗಲ್ಲ ಮೊದಲಾದ ಭಾವಾಭಿವ್ಯಕ್ತಿಯನ್ನು ನಿರ್ಜೀವಗೊಂಬೆಗಳಿಂದ ನೋಡುವುದಕ್ಕೆ ಸಾಧ್ಯವಾಗದು. ಆಂಗೀಕ ಚಟುವಟಿಕೆಗಳು ಯಾವುದೇ ಸ್ಪುರಣೆಯನ್ನು ಪ್ರದರ್ಶಿಸುವುದಿಲ್ಲ. ಇಲ್ಲಿ ಧನಾತ್ಮಕ ಅಂಶಗಳಿಗಿಂತಲೂ ಹೆಚ್ಚಾಗಿ ಋಣಾತ್ಮಕ ಅಂಶಗಳನ್ನು ತುಂಬಾ ಗಮನಿಸಬಹುದು. ಆದರೂ ಇದರ ಹಿಂದಿರುವ ಜನಪದ ಕಲಾವಿದ ಆ ಕಲೆಯ ಕುರಿತು ನಿರ್ವಹಿಸಿದ ಶ್ರಮ ಮತ್ತು ಕಲಾ ಪೋಷಣೆ ಪ್ರಶಂಸನೀಯವಾದದ್ದು.

ಮನುಷ್ಯ ಸದಾ ಕ್ರಿಯಾಶೀಲ. ತನ್ನ ಕನಸುಗಳನ್ನು ಹಲವಾರು ವಿಧಾನಗಳ ಮೂಲಕ ಹೊರ ಹಾಕುತ್ತಾನೆ. ನಾಗರೀಕತೆ ಬೆಳದದ್ದೇ ಹೀಗೆ. ಕಲೆ ಅಂಥದ್ದೊಂದು

ಅಭಿವ್ಯಕ್ತಿಯ ಮಾರ್ಗ. ತೊಗಲುಗೊಂಬೆಯಾಟ ಒಂದು ಅದ್ಭುತ ಕಲೆ. ಒಂದು ಕಾಲದಲ್ಲಿ ಸೊಗಸಾದ ಮನರಂಜನೆ ನೀಡಿ, ಜನರನ್ನು ಮೋಡಿ ಮಾಡಿತ್ತು. ಹತ್ತಾರು ಕಲೆಗಳ ಮಧ್ಯೆಯೂ ತನ್ನ ಅಸ್ತಿತ್ವ ಉಳಿಸಿಕೊಂಡಿತ್ತು. ಆದರೆ ಆಧುನಿಕತೆ ಬೆಳೆದಂತೆ ಹೊಸ ಜಗತ್ತಿಗೆ ಹೊಂದಿಕೊಳ್ಳಲು ಇದಕ್ಕೆ ಆಗುತ್ತಿಲ್ಲ. ಮನರಂಜನೆಗೋಸ್ಕರ ಹುಟ್ಟಿದ ಕಲೆಗಳು ಮನುಕುಲದ ಕತೆ ಹೇಳುತ್ತಾ ಬೆಳೆದವು. ತಂತ್ರಜ್ಞಾನ ಬದಲಾದಂತೆ ತಾವು ಬದಲಾಗುತ್ತಾ ಬಂದವು. ಕೆಲ ಕಲೆಗಳು ರೂಪ ಬದಲಿಸಿಕೊಂಡು ಹೊಸತನ ಒಪ್ಪಿಕೊಂಡರೆ ಬಹಳಷ್ಟು ಕಲೆಗಳಿಗೆ ಇಂದಿಗೂ ಕೂಡ ಬದಲಾವಣೆ ಸಾಧ್ಯವಾಗಿಲ್ಲ. ಆದರೆ ತೊಗಲು ಗೊಂಬೆಯಾಟ ಆಧುನಿಕತೆಯ ಸ್ಪರ್ಶಕ್ಕೆ ಬಹುಬೇಗ ಒಪ್ಪಿಕೊಂಡಿತು. ಹೇಗೆಂದರೆ ಪ್ರಸ್ತುತ ಸನ್ನಿವೇಶವನ್ನು ತನ್ನ ಕಥೆಯಲ್ಲಿ ಅಳವಡಿಸಿಕೊಂಡು, ತಾನು ಹೇಳುವ ಸಂದೇಶವನ್ನು ಸೂತ್ರಧಾರ ಗೊಂಬೆಗಳ ಮುಖಾಂತರ ಹೇಳಿಸುತ್ತಾನೆ. ದೃಶ್ಯಮಾಧ್ಯಮ ದಲ್ಲಿ ತೊಗಲುಗೊಂಬೆಯನ್ನು ಚಿತ್ರೀಕರಿಸುವಾಗ, ಕಥೆಯನ್ನು ಕಾಲಮಿತಿಗೆ ಒಳಪಡಿಸುತ್ತಾರೆ. ವಚನಕಾರರ ಆತ್ಮಚರಿತ್ರೆ, ಪೌರಾಣಿಕ, ಸಾಮಾಜಿಕ, ಐತಿಹಾಸಿಕ ಮುಂತಾದ ಕತೆಗಳನ್ನು ಪ್ರಸ್ತುತ ಸನ್ನಿವೇಶಕ್ಕೆ ಅನುಗುಣವಾಗಿ ಹೊಂದಿಸಿ ಜನಗಳ ಮನರಂಜಿಸುತ್ತಾರೆ. ದೃಶ್ಯಮಾಧ್ಯಮವು ಇಂದು ಜಾಹೀರಾತುಗಳಿಗೆ ತೊಗಲುಗೊಂಬೆಯಾಟವನ್ನು ಬಳಸಿಕೊಂಡಿದೆ. ಇದರಿಂದ ಮಕ್ಕಳಾದಿಯಾಗಿ ಎಲ್ಲರಿಗೂ ವಸ್ತುವಿನ ಮಾರುಕಟ್ಟೆಯೊಂದಿಗೆ ತೊಗಲುಗೊಂಬೆಗೆ ಪ್ರಚಾರ ಸಿಗುತ್ತದೆ. ಅಲ್ಲದೇ ನಮ್ಮಲ್ಲಿ ತೊಗಲುಗೊಂಬೆಯೆಂಬ ಜನಪದಕಲೆಯೊಂದಿದೆ ಎಂದು ಎಲ್ಲರಿಗೂ ತಿಳಿಯುತ್ತದೆ. ದೃಶ್ಯಮಾಧ್ಯಮವೇ ಒಂದು ನೆರಳು-ಬೆಳಕಿನಾಟ. ಈ ನೆರಳು-ಬೆಳಕಿನಾಟದಲ್ಲೂ ತೊಗಲುಗೊಂಬೆಯಾಟವು ಸೇರ್ಪಟ್ಟಿರುವುದು ಒಂದು ವಿಶೇಷವೇ.

ಈ ಕಲೆ ಮಕ್ಕಳನ್ನು ಆಕರ್ಷಿಸುತ್ತದೆ. ಅಲ್ಲದೇ ಇಂದು ಮಕ್ಕಳು ಕೂಡಾ ಬಿಳಿಯ ಗೋಡೆಗೆ ನೆರಳಿನಂತೆ ತಮ್ಮ ಕೈಯಲ್ಲಿಯೇ ಪ್ರಾಣಿಗಳನ್ನು ಮಾಡಿ, ಗೋಡೆಯ ಮೇಲೆ ಬಿಂಬಿತವಾಗುವ ರೂಪವನ್ನು ಕಂಡು ತಾವೂ ಕೂಡ ತೊಗಲುಗೊಂಬೆಯಾಡಿಸುತ್ತೇವೆ ಎಂಬ ಭಾವನೆಯಿಂದ ಆಟವಾಡುವುದನ್ನು ಕಾಣುತ್ತೇವೆ. ಇಂದು ಚಲನಚಿತ್ರದಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ಕತೆಗಳು ಕಡಿಮೆಯಾಗಿವೆ. ಬಹುಶಃ ಕೋಟಿವೆಚ್ಚದ ಅದ್ದೂರಿ ಚಿತ್ರೀಕರಣದ ಹಾಗೂ ಚಿತ್ರ ಬಿಡುಗಡೆಯಾದ ಮೇಲೆ ಹಣ ವಾಪಾಸ್ ಬರದೇ ಇದ್ದರೆ ಎಂಬ ಡೋಲಾಯಮಾನ ಸ್ಥಿತಿಯಲ್ಲಿ ನಿರ್ದೇಶಕ ಮತ್ತು ನಿರ್ಮಾಪಕರಿರುತ್ತಾರೆ. ಆದರೆ ತೊಗಲುಗೊಂಬೆಯನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸಿದಾಗ, ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಯಾವುದೇ ಇರಲಿ, ಕ್ಷಣಾರ್ಧದಲ್ಲಿ ಪರದೆಯ ಮುಂದೆ ಪಾತ್ರಗಳು ಕಳೆಕಟ್ಟುತ್ತವೆ. ಪಾತ್ರಧಾರಿಗಳ ವೇಷಭೂಷಣ, ಆಂಗಿಕ ಚಲನೆ, ಹಿಮ್ಮೇಳದ ಧ್ವನಿ, ಎಲ್ಲವೂ ಕೂಡಿ ಒಂದು ಕಿರುಚಿತ್ರ ನೋಡಿದ ಅನುಭವವಾಗುತ್ತದೆ. ಈಗ ಮಕ್ಕಳನ್ನು

ಸೆಳೆಯುವ ಜಾಹೀರಾತಿಗಾಗಿಯೂ ತೊಗಲುಗೊಂಬೆಯಾಟವನ್ನು ಆಡಿಸುವುದು ಸಾಮಾನ್ಯವಾಗಿದೆ. ಅಲ್ಲದೇ ಇಂದು ಕೂಡ ದೃಶ್ಯಮಾಧ್ಯಮದಲ್ಲಿ ಈ ಕಲೆ ಉಳಿದುಕೊಂಡು ಬಂದಿದೆ.

೩.೩.೫ ಪಟ ಕುಣಿತ

ಜನಪದ ಕಲೆಗಳು ದೇವರ ಆರಾಧನೆ ಮತ್ತು ನಂಬಿಕೆ ಹಿನ್ನೆಲೆಯಲ್ಲಿ ಹುಟ್ಟಿಕೊಂಡವುಗಳು. ಆದರೆ ಇವುಗಳಲ್ಲಿ ಆಯಾ ನೆಲದ ಸೊಗಡು ಸೇರಿಕೊಂಡಿದೆ. ಮಣ್ಣಿನ ಮಕ್ಕಳ ನೈಜ ಪರಿಸರದಲ್ಲಿ ಜನಿಸಿ, ಬೆಳೆದ ಅಂಥದೊದ್ದು ಕಲಾ ವಿಶೇಷ ಪಟಾ ಕುಣಿತ. ನಮ್ಮ ಜನಪದರು ಬದುಕಿನ ಪ್ರತಿಯೊಂದು ಕ್ಷಣಗಳನ್ನು, ಅಪ್ತತೆಯಿಂದ ಅನುಭವಿಸುವ ಗುಣವುಳ್ಳವರು. ಸಂಪ್ರದಾಯ ನಂಬಿಕೆ, ಕಲೆ, ದುಡಿಮೆಯನ್ನೇ ಜೀವಾಳವಾಗಿಸಿಕೊಂಡು ಬದುಕುತ್ತಿರುವವರು. ಈ ಕಾರಣಕ್ಕಾಗಿ ಪ್ರಾದೇಶಿಕತೆಯ ಸೊಗಡು ಬೀರುವ ಅನೇಕ ಕಲೆಗಳು ಇನ್ನೂ ಸ್ವಲ್ಪ ಮಟ್ಟಿಗೆ ಜೀವಂತವಾಗಿ ಉಳಿದಿವೆ. ಜನಪದರ ಬದುಕಿನ ಆಳ, ಅಗಲ, ರೀತಿ,ನೀತಿ ಅಸಾಧಾರಣ ಪ್ರತಿಭೆಗೆ ಇವು ಜೀವಂತ ನಿದರ್ಶನ. ಪಟ ಕುಣಿತ ಹಳೆ ಮೈಸೂರು ಪ್ರಾಂತ್ಯದ ಮಂಡ್ಯ, ಮೈಸೂರು, ತುಮಕೂರು, ಬೆಂಗಳೂರು ಮುಂತಾದ ಕಡೆ ಇದು ಕಂಡು ಬರುತ್ತದೆ. ಗ್ರಾಮಾಂತರ ಜಿಲ್ಲೆಗಳಲ್ಲಿ ಕಂಡು ಬರುವ ವಿಶಿಷ್ಟ ಕಲೆ. ಸುಗ್ಗಿ ಕುಣಿತ, ರಂಗದ ಕುಣಿತದ ಸಂದರ್ಭದಲ್ಲೇ ಈ ಪಟಾಕುಣಿತದ ಪ್ರದರ್ಶನವೂ ನಡೆಯುತ್ತದೆ. ಈ ಕಲಾವಿದರ ಸಂಭ್ರಮ, ಉತ್ಸಾಹ, ಕುಣಿತದ ವಿನ್ಯಾಸಗಳು ಈ ಕಲೆಗೆ ವಿಶೇಷ ಅರ್ಥ ನೀಡಿವೆ. ವಿಜಯೋತ್ಸವದ ಸಂಕೇತವಾದ ಈ ಕಲೆ ಸುಗ್ಗಿ ಪೈರನ್ನು ಮನೆಗೆ ತಂದ ರೈತನ ಪ್ರತೀಕವೂ ಹೌದು ಎನ್ನುತ್ತಾರೆ ಜಾನಪದ ತಜ್ಞರು.

ಪಟಗಳ ತಯಾರಿ

ಈ ಪಟಗಳ ತಯಾರಿಯೂ ವಿಶಿಷ್ಟವಾದುದು. ಇದಕ್ಕಾಗಿ ಇವರು ಬಳಸೋದು ಬಿದಿರನ್ನು ಸುಮಾರು ೧೦–೧೨ ಅಡಿ ಎತ್ತರಕ್ಕೆ ಬಿದಿರನ್ನು ಕತ್ತರಿಸಿ ಅದರ ತುದಿಗೆ ಕಳಸವನ್ನು ಸಿಕ್ಕಿಸುತ್ತಾರೆ. ನಂತರ ರೇಷ್ಮೆಯ ಗೊಂಡೆಯ ಜಾಲರಿ ತುದಿಯಿಂದ ಕಳಸಕ್ಕೆ ಬಿಗಿಯಾದ ಗಂಟು ಹಾಕಿ ಕಟ್ಟಿ, ಬಿದಿರಿನ ಸುತ್ತ ಬಿಗಿಯಾಗಿ ಸುತ್ತುತ್ತಾರೆ. ಕೊನೆಯಲ್ಲಿ ಮತ್ತೆ ಗಟ್ಟಿಯಾಗಿ ಗಂಟು ಹಾಕುತ್ತಾರೆ. ಹೀಗೆ ಪಟ ಸಿದ್ದಗೊಂಡ ಮೇಲೆ ಇವರು ರಂಗಕ್ಕಿಳಿಯಲು ತಮ್ಮ ವೇಷಭೂಷಣಗಳೊಂದಿಗೆ ಸಜ್ಜಾಗುತ್ತಾರೆ. ಬಹಳಷ್ಟು ಎತ್ತರವಿರುವ ಬಿದಿರಿನ ಪಟವನ್ನು 'ನವಾರ' ಎಂಬ ಚೀಲದಲ್ಲಿ ಹಾಕಿಕೊಂಡು ಕೈಯಲ್ಲಿ ಹಿಡಿದು ಕುಣಿಯುತ್ತಾರೆ. ಪಟದ ಸಮತೋಲವನ್ನು ಕಾಯ್ದುಕೊಳ್ಳಲು ಈ ಬಟ್ಟೆಯ ಚೀಲ ನೆರವಾಗುತ್ತದೆ.

ಗ್ರಾಮ ದೇವತೆ ಹಬ್ಬಗಳಲ್ಲಿ, ಜಾತ್ರೆಗಳಲ್ಲಿ, ಭಾಗವಂತಿಕೆ, ಮೇಳಗಳಲ್ಲಿ ಪಟಾಕುಣಿತದ ಪ್ರದರ್ಶನ ನಡೆಯುತ್ತದೆ. ಊರ ಜಾತ್ರೆಗಳಲ್ಲಿ ಪ್ರದರ್ಶನ ನೀಡುವುದಕ್ಕೂ ಮೊದಲು ಇವರು ಮನೆಯ ಎದುರು ದೇವರನ್ನು ಪ್ರಾರ್ಥಿಸಿ, ನಂತರ ಕಲಾ ಪ್ರದರ್ಶನಕ್ಕೆ ಹೊರಡುತ್ತಾರೆ. ಹೀಗೆ ಹೊರಟ ತಂಡ ದೇವಾಲಯಕ್ಕೆ ಬಂದು ದೇವರಿಗೆ ವಿಶೇಷ ಪೂಜೆ ನೇರವೇರಿಸಿದ, ಬಳಿಕ ಜನರನ್ನು ರಂಜಿಸಲು ಕುಣಿತವನ್ನು ಪ್ರದರ್ಶಿಸುತ್ತದೆ. ಆಳೆತ್ತರದ ಬಿದಿರಿನ ಸಮತೋಲನ ಕಾಯ್ದುಕೊಂಡು ಗತ್ತಿನಿಂದ ಕುಣಿಯುವ ಈ ಕಲಾವಿದರಿಗೆ ಅಷ್ಟೇ ಸುಲಭವಾಗಿ, ತಮ್ಮ ಬದುಕಿನ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ವೈಷ್ಣವ ಸಂಪ್ರದಾಯಕ್ಕೆ ಸೇರಿದ ಪಟಾಕುಣಿತವು, ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತದೆ. ಸುಮಾರು ೧೦ ರಿಂದ ೧೫ ಅಡಿ ಉದ್ದವಿರುವ ಬಿದುರಿನ ಬೊಂಬಿಗೆ ಬಣ್ಣ-ಬಣ್ಣದ ಬಟ್ಟೆಗಳನ್ನು ಸುತ್ತಿ ಅಲಂಕರಿಸುತ್ತಾರೆ. ಅದರ ತುದಿಗೆ ಮತ್ತು ಕೊನೆಗೆ ಕುಚ್ಚುಗಳನ್ನು ಕಟ್ಟುತ್ತಾರೆ. ಕಲಾವಿದರು ಹೆಗಲಿಗೆ ಜನಿವಾರದಂತೆ ಪುಟ್ಟ ಬಟ್ಟೆಯ ಚೀಲವನ್ನು ಹಾಕಿಕೊಂಡಿರುತ್ತಾರೆ. ಇದಕ್ಕೆ ನವಾರ ಎಂದು ಕರೆಯುತ್ತಾರೆ. ನವಾರದಲ್ಲಿ ಪಟವನ್ನು ಕೂರಿಸಿಕೊಂಡು ಕುಣಿಯುವಾಗ ಪಟದ ಸಮತೋಲನ ಕಾಪಾಡಬೇಕು. ಒಂದು ಕೈಯಲ್ಲಿ ಪಟ ಇನ್ನೊಂದು ಕೈಯಲ್ಲಿ ವಸ್ತ್ರವನ್ನು ಹಿಡಿದು ತಮಟೆ ಮತ್ತು ನಗಾರಿ ಬಡಿತಕ್ಕೆ ಕುಣಿಯುತ್ತಾರೆ. ಪಟಾ ಕುಣಿತವು ವಿಜಯೋತ್ಸವ ಸಂದರ್ಭದ ಕಲೆ ಎನ್ನಬಹುದು ಕುಣಿತದಲ್ಲಿರುವ ಉತ್ಸಾಹ ವೀರಾವೇಶ ಹುರುಪು, ಸಂತಸದ ಸನ್ನಿವೇಶ ನಿರ್ಮಾಣ ಮಾಡುತ್ತದೆ. ನೋಡುಗರಿಗೆ ಅತ್ಯಾಕರ್ಷಕವಾಗಿ ಕಂಡು ಆನಂದವನ್ನುಂಟು ಮಾಡುತ್ತದೆ.



ಪಟಾ ಕುಣಿತ

ವೇಷಭೂಷಣ

ಕಲಾವಿದರು ಕಚ್ಚೆ ಪಂಚೆಯನ್ನು ಕಾಸೆ ಅಂಗಿಯನ್ನು ತೊಟ್ಟಿರುತ್ತಾರೆ. ತಲೆಗೆ ರುಮಾಲು ಸುತ್ತಿ ಸೊಂಟಕ್ಕೆ ಅಡ್ಡ ಬಟ್ಟೆಯನ್ನು ಸುತ್ತಿರುತ್ತಾರೆ. ಹಣೆಗೆ ಉದ್ದ ನಾಮವನ್ನು ಕುಂಕುಮದಲ್ಲಿಟ್ಟು ಕೊಂಡಿರುತ್ತಾರೆ. ಕಾಲಿಗೆ ಗೆಜ್ಜೆ ಮತ್ತು ಎಡಗೈಯಲ್ಲಿ ಬಿಳಿಯ ವಸ್ತ್ರ ಇವು ಕಲಾವಿದರ ವೇಷಭೂಷಣಗಳು.

ಕುಣಿತದ ವಿಧಗಳು

ಪಟಾ ಕುಣಿತದಲ್ಲಿ ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಎರಡ್ಹೆಜ್ಜೆ ಮೂರೆಜ್ಜೆ, ಸುತ್ತು ಹೆಜ್ಜೆ, ಸಾಲು ಹೆಜ್ಜೆ ಎಂಬ ಕುಣಿತದ ತಾಳಗಳಿರುತ್ತವೆ. 'ಗೋಪುರ' ಕುಣಿತವನ್ನು ಕಡ್ಡಾಯವಾಗಿ ಮಾಡುತ್ತಾರೆ. ೮–೧೦ ಜನ ಕಲಾವಿದರಿದ್ದು ಮಂಡಲಾಕಾರದಲ್ಲಿ ಕುಣಿಯುತ್ತಾ ತಮ್ಮ ಪಟಗಳನ್ನು ಮಧ್ಯದ ಬಿಂದುವಿನಲ್ಲಿ ಸಂಯೋಜಿಸುತ್ತಾರೆ. ಕಲಾವಿದರು ಹಿಂದು ಮುಂದು ಕುಣಿಯುವಾಗ ಇಡೀ ಗೋಪುರ ಚಲಿಸಿದಂತೆ ಕಾಣುತ್ತದೆ. ಹೂವಿನ ಕುಣಿತವೆಂದರೆ ಎಲ್ಲಾ ಪಟಗಳನ್ನು ಕಲಾವಿದರು ಬಾಗಿಸಿ ಕತ್ತರಿಯಾಕಾರದಲ್ಲಿ ನಿರ್ಮಿಸಿ ಹೂಗೊಂಚಲಿನಂತೆ ಕಾಣಿಸುತ್ತಾರೆ. ಗಾಳಿಗೆ ಆಗಾಗ ಪಟವು ಬಳುಕುವ ಹೂವಿನಂತೆ ಕಾಣುತ್ತದೆ.

ಇದನ್ನು ನೋಡುವಾಗ ಇಡೀ ಗೊಪುರವೇ ರಂಗಸ್ಥಳದಲ್ಲಿ ಓಡಾಡುತ್ತಿರುವಂತೆ ಭಾಸವಾಗುತ್ತದೆ. ವಿಜಯೋತ್ಸವ, ಸಂಭ್ರಮಾಚರಣೆಗಳ ಅಂಗವಾಗಿ ಹುಟ್ಟಿಕೊಂಡ ಈ ಕಲೆಗೆ ಮೊದಲು ಸಾಕಷ್ಟು ಪ್ರೋತ್ಸಾಹವಿತ್ತು. ಪಟಾಕುಣಿತದಲ್ಲಿ ಹೆಜ್ಜೆ ಕುಣಿತ, ಗೆಜ್ಜೆ ಕುಣಿತ; ಹೂವಿನ ಕುಣಿತ, ಗೋಪುರ ಕುಣಿತ ಹೀಗೆ ಅನೇಕ ವಿಧಗಳಂಟು ಈ ವಿಧಗಳು ಒಂದಕ್ಕಿಂತ ಒಂದು ವಿಶಿಷ್ಟ ಮತ್ತು ಆಕರ್ಷಕ. ಪಟಾ ಕುಣಿತದಲ್ಲಿ ಇಷ್ಟೇ ಜನರಿರಬೇಕು ಎನ್ನುವ ನಿಯಮವಿಲ್ಲದಿದ್ದರೂ ಸಾಧಾರಣವಾಗಿ ೧೦ ರಿಂದ ೧೫ ಜನ ಭಾಗವಹಿಸುತ್ತಾರೆ. ಹಿಮ್ಮೇಳದಲ್ಲಿ ತಮಟೆ ವಾದ್ಯಗಳನ್ನು ಬಾರಿಸುವವರು ೨–೩ ಜನರಿದ್ದಾರೆ. ಸಮ ಸಂಖ್ಯೆಯಲ್ಲಿ ೧೦–೧೨ ಜನ ಕುಣಿತಗಾರರಿರುತ್ತಾರೆ. ಈ ಕುಣಿತದ ಹೆಜ್ಜೆಗಳನ್ನು ವರಸೆಗಳೆಂದು ಕರೆಯುತ್ತಾರೆ. ಕೈಯಲ್ಲಿ ಪಟಗಳನ್ನು ಆಧಾರವಾಗಿ ಹಿಡಿದು ಒಬ್ಬರ ಹೆಗಲಿನ ಮೇಲೆ ಇನ್ನೊಬ್ಬರು ಹತ್ತಿ ಕುಣಿಯುವುದನ್ನು ನೋಡುವಾಗ ಮೈರೋಮಾಂಚನಗೊಳ್ಳುತ್ತದೆ. ಕಲಾವಿದರು ಪಟಗಳನ್ನು ಹಿಡಿದು ಎರಡು ಸಾಲುಗಳಲ್ಲಿ ನಿಂತು ಪ್ರದಕ್ಷಿಣೆ ಅಪ್ರದಕ್ಷಿಣೆಯಾಗಿ ಎಡಬಲಗಳಲ್ಲಿ ಸುತ್ತುತ್ತಾ ಕುಣಿಯುವ ಕುಣಿತಕ್ಕೆ ಮೂರನೇ ಹೆಜ್ಜೆ ಅಥವಾ ಮೂರನೇ ವರಸೆ ಎನ್ನುತ್ತಾರೆ. ತಮಟೆ ಲಯ ಏರು ಗತಿಗೆ ಸಾಗುತ್ತಿದ್ದಂತೆ ಕುಣಿಯುವವರ ಉತ್ಸಾಹ, ಬಿರುಸು ಇನ್ನಷ್ಟು ಹೆಚ್ಚುತ್ತದೆ. ಹಬ್ಬ ಜಾತ್ರೆ ಉತ್ಸವಗಳಲ್ಲಿ, ಸಿನಿಮಾ, ಕಿರುತೆರೆ ಹಾಗೂ ವಿವಿಧ ಕಲಾಮೇಳಗಳಲ್ಲಿ ಪಟಾ ಕುಣಿತವಿರುತ್ತದೆ.

ಸಾಮಾಜಿಕವಾಗಿ :

ಹೊನ್ನೆಗೌಡರ ತಂದೆ ಈರೇಗೌಡ ಮತ್ತು ತಾಯಿ ಸಾಕಮ್ಮ. ಊರು ಪಾಂಡವಪುರ ತಾಲ್ಲೂಕಿನ ಹೆಗ್ಗಡ ಹಳ್ಳಿ. ಮೂರು ಜನ ಮಕ್ಕಳಲ್ಲಿ ಎರಡನೆಯವರಿವರು. ಬಾಲ್ಯದಿಂದಲೂ ಜನಪದ ಕಲೆಗಳ ಮೇಲೆ ಎಲ್ಲಿಲ್ಲದ ಆಸಕ್ತಿ. ಶಾಲೆ ಕಲಿಯಲು ಹೋಗಬೇಕಾದರೆ ಗೊರವರು, ಹೆಳವರು ಗ್ರಾಮದೊಳಗೆ ಬಂದರೆ ಆ ದಿನ ಈ ಹುಡುಗ ಅವರ ಹಿಂದೆ ಸುತ್ತುತ್ತಾ ಅವರೇನು ಮಾಡ್ತಾರೆ ಎನ್ನುವುದನ್ನು ನೋಡುತ್ತಾ ಶಾಲೆಗೆ ರಜಾ ಹಾಕುತ್ತಿದ್ದ. ಊರಿನ ಉತ್ಸವ, ಹಬ್ಬ, ಜಾತ್ರೆಗಾಗಿ ಕಲಾವಿದರೆಲ್ಲಾ ಸೇರಿ ಒಂದೆಡೆ ಸೇರಿಕೊಂಡು ಕಲೆಗಳ ತಾಲೀಮು ನಡೆಸುವಾಗ ಬೆಳಗಿನ ತನಕ ಈ ಹುಡುಗ ನಿದ್ದೆಯನ್ನು ಮಾಡದೆ ಹೆಜ್ಜೆಗಳನ್ನು ಕಲಿಯುತ್ತಿದ್ದನಂತೆ. ಹೊನ್ನೇಗೌಡರು ದೈವಭಕ್ತರು. ಪಟಾಕುಣಿತವನ್ನು ತಂದೆ–ತಾಯಿಯ ಪ್ರೋತ್ಸಾಹದಿಂದ ಕಲಿತಿದ್ದಾರೆ. ಹೊನ್ನೆಗೌಡರಿಗೆ ಹುಲಿವೇಷ, ಕೋಲಾಟ, ಪಟ ಕುಣಿತ, ಗಾರುಡಿಗೊಂಬೆ ಹಲವು ಜನಪದ ಕಲೆಗಳನ್ನು ಕರಗತವಾಗಿವೆ. ಇವರ ಗುರುಗಳು ಗಾರುಡಿ ಗೊಂಬೆ ಅರಿತಿದ್ದವರು ಕೃಷ್ಣೇಗೌಡರು ತಮ್ಮ ಗುರುಗಳಂತೆಯೇ ಹಲವು ಕಲೆಗಳನ್ನು ಕಲಿಯಬೇಕೆಂಬ ಹೆಬ್ಬಯಕೆ ಈತನದು. ತಂದೆ ಈರೇಗೌಡರು ಕೂಡಾ ಕಲಾವಿದರೇ, ಮಗನಿಗೂ ಈ ಕಲೆ ಕೈಬೀಸಿ ಕರೆದದ್ದು ಅವರಿಗೆ ಸಂತಸ ತಂದಿದೆ. ಅವರು ಇದನ್ನು ಮುಂದುವರಿಸಬೇಕೆಂದು ತಮ್ಮ ಈ ಇಳಿವಯಸ್ಸಿನಲ್ಲಿಯೂ ಹಾರೈಸುತ್ತಾರೆ. ಸಂಘಟನಾ ಶಕ್ತಿ, ಮಾತಾನಾಡುವ ಕೌಶಲ, ನಯ–ವಿನಯಗಳನ್ನು ಮೈಗೂಡಿಸಿಕೊಂಡಿರುವ ಹೊನ್ನೆಗೌಡರ ತಂಡದಲ್ಲಿ ಸೇರಲು ಕಲಾವಿದರು ನಾ ಮುಂದು ತಾ ಮುಂದು ಎನ್ನುತ್ತಾರೆ. ಎಲ್ಲರನ್ನೂ ಪ್ರೀತಿಯಿಂದ ನೋಡುವ ಹೊನ್ನೇಗೌಡರ ಪಟಾಕುಣಿತ ತಂಡವು ಆದಿಚುಂಚನಗಿರಿ ಭೈರವೇಶ್ವರ ಗೀತಗಾಯನ ಮೇಳ, ಬೆಂಗಳೂರು ದೂರದರ್ಶನದಲ್ಲಿ ೩೦ ನಿಮಿಷದ ಕಾರ್ಯಕ್ರಮ; ಸಮಯ ಟಿ.ವಿ, ನಮ್ಮ ಕಲೆ ನಮ್ಮ ಬದುಕು ಕಾರ್ಯಕ್ರಮ; ಬೆಂಗಳೂರಿನ ಕರ್ನಾಟಕ ಜಾನಪದ ಅಕಾಡೆಮಿ, ಮಂಡ್ಯ ಸಾಹಿತ್ಯ ಸಮ್ಮೇಳನ ಮೈಸೂರು ದಸರೆ ಮಹೋತ್ಸವ, ರಾಷ್ಟ್ರೀಯ ಕ್ರೀಡಾಕೂಟ ವಿಶ್ವಕನ್ನಡ ಸಮ್ಮೇಳನಗಳಲ್ಲಿ ಕಲಾ ಪ್ರದರ್ಶನ ಮಾಡಿದ್ದಾರೆ. ಅನೇಕ ಸಂಘ ಸಂಸ್ಥೆಗಳು ಅವರನ್ನು ಸನ್ಮಾನಿಸಿವೆ. ನಾಗಪುರ ಸೌತ್ ಸೆಂಟ್ರಲ್ ಝೋನ್‌ಗೂ ಕೂಡ ಇವರ ತಂಡ ಹೋಗಿದೆ. ಪಟಾಕುಣಿತವೆಂದರೆ ಹೊನ್ನೇಗೌಡರೇ ಬೇಕು ಎನ್ನುತ್ತಾರೆ ಸಂಘಟಕರು. ಏಕೆಂದರೆ ಪಟಕುಣಿತದಲ್ಲಿ ಕೌಶಲ್ಯವನ್ನು ಹೊಂದಿದ್ದಾರೆ.

ಆರ್ಥಿಕವಾಗಿ :

ಕಾರ್ಯಕ್ರಮಗಳಿದ್ದಾಗ ಜನಪದ ಕಲೆಗೆ ಒತ್ತು ಕೊಟ್ಟು ಕಾರ್ಯಕ್ರಮ ನೀಡುತ್ತಾರೆ. ಕಾರ್ಯಕ್ರಮಗಳಿಲ್ಲದ ವೇಳೆಯಲ್ಲಿ ಹೊಲ ಗದ್ದೆಗಳನ್ನು ನೋಡಿಕೊಂಡಿರುತ್ತಾರೆ.

ಸಾಯಾಂಕಲವಾದಾಗ ಊರ ಯುವಕರನ್ನು ಸೇರಿಸಿಕೊಂಡು ಪಟಾಕುಣಿತವನ್ನು ಹೇಳಿಕೊಡುತ್ತಾರೆ. ಕಾರ್ಯಕ್ರಮಗಳಿಂದ ಬಂದ ಗೌರವ ಸಂಭಾವನೆಯಿಂದ ಮೇಳದ ವಾದ್ಯ ಪರಿಕರ, ವೇಷಭೂಷಣ, ಇವುಗಳನ್ನು ಸರಿ ಹೊಂದಿಸಿಕೊಳ್ಳುತ್ತಾರೆ. ೩೦ ವರ್ಷದ ಹೊನ್ನೆಗೌಡ ಯುವಜನೋತ್ಸವ ಮೇಳದಲ್ಲಿ ಪಾಲ್ಗೊಂಡಿದ್ದಾರೆ. ಪಟಾಕುಣಿತದ ತರಬೇತಿಯನ್ನು ದಿನ ಮಾಡಿಸುತ್ತಾರೆ. ಇವರ ಪಟಾ ಕುಣಿತಕ್ಕೆ ಬೇಡಿಕೆ ಹೆಚ್ಚು. ಕಲೆ, ಪ್ರತಿಭೆ, ನಾಯಕತ್ವ ಎಲ್ಲಾ ಗುಣಗಳ ಶ್ರೀಮಂತಿಕೆ ಹೊಂದಿರುವ ಹೊನ್ನೇಗೌಡರ ಬಂಡಿ ಸಾಗುತ್ತಿರುವುದು ಮಾತ್ರ ಬಡತನದ ಹಾದಿಯಲ್ಲಿ ಹಳೆಯ ಕಾಲದ ಹಂಚಿನ ಮನೆ, ಸಿಮೆಂಟು ಕಾಣದ ನೆಲ, ಕತ್ತಲಗೂಡಿನಂತಿರುವ ಅಡುಗೆಯ ಮನೆ ಇವರ ಪರಿಸ್ಥಿತಿಗೆ ಮೂಕ ಸಾಕ್ಷಿಯಾಗಿವೆ. ಇಷ್ಟಾದರೂ ಕಲೆಗೆ ಬೆಲೆ ದೊರೆಯ ಬಹುದೆನ್ನುವ ನಿರೀಕ್ಷೆಯಲ್ಲಿ ಎಲ್ಲಾ ದುಃಖವನ್ನು ಎದೆಯಲ್ಲೇ ಹುಗಿದು ಮೇಲ್ನೋಟಕ್ಕೆ ನಗು-ನಗುತ್ತಲೆ ಇರುತ್ತಾರೆ ಹೊನ್ನೇಗೌಡರು. ಕಾರ್ಯಕ್ರಮಗಳಿಂದ ಬಂದ ಗೌರವ ಸಂಭಾವನೆಯನ್ನು ಸಹಕಲಾವಿದರಿಗೂ ನೀಡಿ, ಉತ್ತಮ ರೀತಿಯಲ್ಲಿ ತಂಡವನ್ನು ಮುನ್ನಡೆಸುತ್ತಿದ್ದಾರೆ. ಇರುವ ಸ್ವಲ್ಪ ಜಮೀನಿನಲ್ಲಿ ಋತುಮಾನಕ್ಕೆ ತಕ್ಕಂತೆ ಸೇವಂತಿಗೆ, ಕನಕಾಂಬರ, ಸುಗಂಧರಾಜ ಹೂಗಳನ್ನು ಬೆಳೆಯುತ್ತಾರೆ. ಜಮೀನಿನಲ್ಲಿ ಬಂದ ಆದಾಯದಿಂದ ಸಂಸಾರವನ್ನು ತೂಗಿಸುತ್ತಾರೆ. ಅಲ್ಲದೇ ಪಟ ಕುಣಿತದಿಂದ ಬಂದ ಸಂಭಾವನೆಯಲ್ಲಿ ಕೂಡ ತಮ್ಮ ಬದುಕನ್ನು ನೆಡೆಸುತ್ತಿದ್ದಾರೆ.

ಸಾಂಸ್ಕೃತಿಕವಾಗಿ :

ಪಟ ಕುಣಿತವು ವೈದಿಕ ಸಂಸ್ಕೃತಿಯ ಹಿನ್ನಲೆಯಾಗಿ ಬಂದಿದೆ. ಶಂಕರಾಚಾರ್ಯರು ಪಟಾಕುಣಿತಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿರುವುದನ್ನು ಕಾಣಬಹುದು. ಮೇಲುಕೋಟೆಯ ಚೆಲುವ ನಾರಾಯಣ ಸ್ವಾಮಿಯ ಉತ್ಸವದಲ್ಲಿ ಸ್ವಾಮಿಯು ಮೆರವಣಿಗೆ ಬರುವುದಕ್ಕೂ ಮೊದಲು ಪಟಾಕುಣಿತವು ಹೊರಡಬೇಕು. ಪಟಾಕುಣಿತ ಬಂತೆಂದರೆ ಜನರಿಗೆ ದೇವರು ಹೊರಟಿದೆ ಎಂದರ್ಥ. ದೂರದಿಂದಲೇ ಗಮನಿಸಿದ ಭಕ್ತರುಗಳು ದೇವರ ಪೂಜೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರಂತೆ. ಶಂಕರಾಚಾರ್ಯ ಸಮಯದಲ್ಲಿ ಪಟದ ಜೊತೆ ಹಿಟ್ಟಿನ ಪಟವೂ ಇತ್ತಂತೆ. ಹಿಟ್ಟಿನಪಟದೊಂದಿಗೆ ಬೇರೆ ಜನಪದ ಕಲೆಗಳು ಇರುತ್ತಿದ್ದವು. ಊರಿಂದ ಊರಿಗೆ ಹೊರಡುವ ಮೆರವಣಿಗೆಯು ಮುಂದೆ ಹಿಟ್ಟಿನಪಟ ಇರುತ್ತಿತ್ತು. ಕಾರಣವಿಷ್ಟೇ ಇಂದು ಊಟದ ವ್ಯವಸ್ಥೆ ಆ ಹಳ್ಳಿಗಳಲ್ಲಿ ಆಗಬೇಕೆಂದು. ಇದು ಅಂದಿನ ಸಂಪ್ರದಾಯವಾಗಿತ್ತು. ಗ್ರಾಮ ದೇವತೆಗಳನ್ನು ಮೊದಲು ಹತ್ತಾರು ಹಳ್ಳಿಗೆ ಪಲ್ಲಕ್ಕಿಯಲ್ಲಿ ಹೊತ್ತುಕೊಂಡು ಹೋಗುತ್ತಿದ್ದರು. ಮಧ್ಯಾಹ್ನದ ಊಟದ ಸಮಯದಲ್ಲಿ ಭಾಗವಂತಿಕೆ ಮೇಳದೊಂದಿಗೆ ಹಿಟ್ಟಿನ ಪಟವಿದ್ದರೆ ಯಾವ ಗ್ರಾಮವನ್ನು ತಲುಪುತ್ತದೆಯೋ ಅಂದು

ಅಲ್ಲೇ ವಿಶ್ರಮಿಸಿ, ಆ ಊರಿನವರ ಆತಿಥ್ಯವನ್ನು ಪಡೆದು, ಮರುದಿನ ಮತ್ತೆ ಬೇರೆ ಗ್ರಾಮಕ್ಕೆ ಹೊರಡುತ್ತಿದ್ದರು. ಹೀಗೆ ಪಟವು ಜನಪದ ಕಲೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತ್ತು. ಪಟಕ್ಕೆ ಜವಳಿ ಕುಣಿತವೆಂದು ಕರೆಯುತ್ತಿದ್ದರು. ಪಟಕ್ಕೆ ಬಾವುಟ ಮತ್ತು ಕಳಸದಿಂದ ಅಲಂಕರಿಸುತ್ತಿದ್ದರು. ಇಂದು ಕೂಡಾ ದೇವರ ಮೆರವಣಿಗೆ ಉತ್ಸವಗಳಲ್ಲಿ ಈ ಪಟಗಳದ್ದೇ ಕಾರುಬಾರು.

ವಿಜಯೋತ್ಸವದ ಸಂಭ್ರಮದಲ್ಲಿಯೇ ಪಟಕುಣಿತವನ್ನು ಮಾಡುತ್ತಾರೆ. ಊರಹಬ್ಬ, ಜಾತ್ರೆ, ಉತ್ಸವ, ಮೆರವಣಿಗೆ, ತೆಪ್ಪೋತ್ಸವ ಮುಂತಾದ ಸಂದರ್ಭದಲ್ಲಿ ಪಟಾಕುಣಿತ ನಡೆಯುತ್ತದೆ. ಹಿಂದೆ ರಾಜರು ಯುದ್ಧದಲ್ಲಿ ಗೆದ್ದಾಗ ತಮ್ಮ ಊರಿಗೆ ಬರುವ ಸಂದರ್ಭದಲ್ಲಿ ಪಟ್ಟಣವಾಸಿಗಳು ಕೊಂಬೆ, ಕಹಳೆ, ನಗಾರಿ, ಪಟಾಕುಣಿತದೊಂದಿಗೆ ಅವರನ್ನು ಊರಿಗೆ ಬರಮಾಡಿಕೊಳ್ಳುತ್ತಿದ್ದರು. ಈ ಪಟಾಕುಣಿತವು ಗೆಲುವಿನ ಸಂದರ್ಭದಲ್ಲಿ ಆಚರಿಸುವ ಆಚರಣೆಯಾಗಿದೆ. ಯಾವುದೇ ಸಂಭ್ರಮ-ಸಡಗರಗಳಿದ್ದರೂ ಅಲ್ಲಿ ಪಟಾಕುಣಿತ ಇರಲೇಬೇಕು. ಊರಿನಲ್ಲಿ ಯಾವುದೇ ಆಚರಣೆ, ಸಂಪ್ರದಾಯವಿರಲಿ, ಅಂದು ಪಟಾಕುಣಿತವನ್ನು ದೇವರಿಗೋಸ್ಕರವಾಗಿ ಮಾಡುತ್ತಾರೆ. ಭಾಗವಂತಿಕೆ ಮಾಡುವವರು ಮತ್ತು ಹರಿದಾಸರು ಪಟಾಕುಣಿತವನ್ನು ಹೊರುತ್ತಾರೆ. ಪಟದ ಕಲಾವಿದನು ಸಾಮಾನ್ಯವಾಗಿ ಹಣೆಗೆ ನಾಮವನ್ನು ಧರಿಸುತ್ತಾನೆ. ಗ್ರಾಮದೇವತೆಯ ಹಬ್ಬ, ದೀಪಾವಳಿ ಹಬ್ಬ, ಸುಗ್ಗಿಹಬ್ಬಗಳಲ್ಲಿ ಊರಿಗೆ ಊರೇ ಸೇರಿ ಪಟಾ ಕುಣಿತದಲ್ಲಿ ಭಾಗಿಯಾಗುತ್ತಾರೆ.

೩.೩.೬ ಗಾರುಡಿ ಗೊಂಬೆ

ಮನುಷ್ಯ ಸದಾ ಕ್ರಿಯಾಶೀಲ. ತನ್ನ ಭಾವನೆ, ಕನಸು ಹಾಗೂ ಕಲ್ಪನೆಗಳ ಅಭಿವ್ಯಕ್ತಿಗೆ ಆತ ಬಳಸಿದ್ದು ಕಲಾ ಮಾಧ್ಯಮವನ್ನು. ಜೀವನ ಶೈಲಿ ಬದಲಾದಂತೆ ಹೊಸ ರೀತಿಯ ಕಲೆಗಳು ಬೆಳೆದವು. ಜನರಿಗೆ ಮನರಂಜನೆ ನೀಡಿವ ಕಲೆಗಳಲ್ಲಿ ಗಾರುಡಿಗೊಂಬೆಯು ಒಂದು. ಇದು ಒಂದು ಶುದ್ಧ ಮನರಂಜನಾತ್ಮಕ ಕಲೆ. ವೇಷಭೂಷಣ, ವಯ್ಯಾರದ ಕುಣಿತದಿಂದಾಗಿ ಪ್ರೇಕ್ಷಕರನ್ನು, ನಗುವಿನ ಕಡಲಲ್ಲಿ ತೇಲಿಸುವ ಈ ಕಲೆ, ಹಬ್ಬ-ಹರಿದಿನ ಜಾತ್ರೆ-ಉತ್ಸವಗಳಿಗೆ ವಿಶೇಷ ರಂಗು ನೀಡುತ್ತವೆ. ನಮ್ಮ ಬದುಕು ನೋವು ನಲಿವುಗಳ ಸಂಗಮ ಕಣ್ಣೀರ ಅಂಚಿನಲ್ಲಿ ನಗೆ ಉಕ್ಕುವುದು, ನಗೆಯ ಅಂತ್ಯಕ್ಕೆ ಕಣ್ಣೀರಿಡುವುದು ಬದುಕಿನ ಸೊಗಸುಗಳಲ್ಲೊಂದು ಬಿಗುವಿನ ನಡುವೆ ನಗುವಿನ ಮುತ್ತು ಹುಡುಕಲು ನಾವು ಸದಾ ಪ್ರಯತ್ನಿಸುತ್ತೇವೆ. ದಿನವಿಡೀ ದುಡಿಮೆಯಲ್ಲಿ ಕಳೆಯುತ್ತಿದ್ದ ನಮ್ಮ ಜನಪದರು ಕೂಡ ಬಸವಳಿದ ಮೈಮನಸ್ಸಿಗೆ, ಮುದ ನೀಡಲು ಹತ್ತಾರು ಕಲೆಗಳನ್ನು ಹುಟ್ಟು ಹಾಕಿದರು. ದುಡಿತ ಬೇಸರವಾದಾಗ, ಬಿಡುವು ಸಿಕ್ಕಾಗ ತಮ್ಮ ಶ್ರಮಕ್ಕೆ ಉತ್ತಮ ಫಲ ದೊರಕಿದಾಗ ಖುಷಿಯಿಂದ ಇಂತಹ ಕಲೆಗಳ ಪ್ರದರ್ಶನವನ್ನು ಏರ್ಪಡಿಸಿ ಸಂಭ್ರಮ

ಪಡುತ್ತಿದ್ದರು. ತಮ್ಮ ನೋವುಗಳನ್ನು ಮರೆಯುತ್ತಿದ್ದರು. ಗ್ರಾಮೀಣ ಜನತೆಯನ್ನು ರಂಜಿಸಲು ಹುಟ್ಟಿಕೊಂಡ ಶುದ್ಧ ಹಾಸ್ಯ ಪ್ರಧಾನವಾದ ಕಲೆ ಗಾರುಡಿ ಗೊಂಬೆ. ಗಾರುಡಿಗ ಎಂದರೆ ಮಾಂತ್ರಿಕ ಈ ಗಾರುಡಿಗೊಂಬೆಗಳು ಕೂಡ ತಮ್ಮ ಆಕಾರ ರೂಪ ಒನಪು ವಯ್ಯಾರಗಳಿಂದ, ಮೋಡಿ ಮಾಡಿ ನೋಡುವವರನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ಮಂಡ್ಯ, ಮೈಸೂರು, ಶಿವಮೊಗ್ಗ, ತುಮಕೂರು, ಕೋಲಾರ, ಬೆಂಗಳೂರು, ಗ್ರಾಮಾಂತರ ಜಿಲ್ಲೆಗಳಲ್ಲಿ ಈ ಕಲೆ ಕಂಡು ಬರುತ್ತದೆ ಆಯಾ ಪ್ರದೇಶಕ್ಕೆ ತಕ್ಕಂತೆ ಈ ಕಲೆಗೆ ಗಾರುಡಿಗೊಂಬೆ ತಟ್ಟೆರಾಯ, ಮಾನು ಬೊಂಬಲು ಇತ್ಯಾದಿ ಹೆಸರುಗಳಿವೆ.



ಗಾರುಡಿ ಗೊಂಬೆ

ಹಿಂದೆ ಸಂಕ್ರಾಂತಿಯ ಸಂಭ್ರಮದಲ್ಲಿ ಸುಗ್ಗಿಯ ಹಿಗ್ಗಿನಲ್ಲಿ ಗಾರುಡಿಗೊಂಬೆಗಳಿಗೆ ಹೆಚ್ಚು ಮಹತ್ವ ನೀಡಲಾಗುತ್ತಿತ್ತು. ತಮ್ಮ ಊರಿನಲ್ಲಿ ಇಲ್ಲದಿದ್ದರೂ ಪರ ಊರುಗಳಿಂದ ಕಲಾ ತಂಡಗಳನ್ನು ಕರೆಸಿ ಗ್ರಾಮೀಣ ಜನತೆ ರಂಜನೆ ಪಡೆಯುತ್ತಿದ್ದರು. ದಸರಾ ಮೆರವಣಿಗೆಯಲ್ಲಿ ಇಂದಿಗೂ ಗಾರುಡಿ ಗೊಂಬೆಗೆ ವಿಶೇಷ ಸ್ಥಾನವಿದೆ. ಈ ಗೊಂಬೆಗಳು ಮೆರವಣಿಗೆಯಲ್ಲಿ ಹೊರಟವೆಂದರೆ, ಇದು ಮದುವೆಯ ದಿಬ್ಬಣದಂತೆ ಗೋಚರವಾಗುತ್ತದೆ. ಜಾತ್ರೆ ಉತ್ಸವಗಳಲ್ಲಿ ಈ ಗಾರುಡಿಗೊಂಬೆಗಳು ವಿಶೇಷ ಶೋಭೆ ನೀಡುತ್ತವೆ. ನಮ್ಮ ಜನಪದರು ತಮ್ಮ ಎಲ್ಲಾ ಶುಭ ಕಾರ್ಯಗಳನ್ನೂ ದೇವರ ಪೂಜೆಯೊಂದಿಗೆ ಆರಂಭಿಸುತ್ತಾರೆ. ಗಾರುಡಿ ಗೊಂಬೆಗಳು ಕುಣಿತದ ಪ್ರಾರಂಭವೂ ಕೂಡ, ದೇವರ ಆರಾಧನೆಯೊಂದಿಗೆ ಆರಂಭವಾಗುತ್ತದೆ. ರಾತ್ರಿಯ ಹೊತ್ತಿನಲ್ಲಿ ಈ ಗೊಂಬೆಗಳ ಕುಣಿತವನ್ನು ನೋಡುವುದೇ ಒಂದು ಚೆಂದ. ಹೆಸರಿಗೆ ತಕ್ಕಂತೆ ಗಾರುಡಿಗೊಂಬೆ ಒಂದು ಸಮ್ಮೋಹಕ ಕಲೆ. ಮಕ್ಕಳಿಗಂತೂ ಈ ಗೊಂಬೆಗಳ ಕುಣಿತ ನೋಡುವುದೆಂದರೆ ತುಂಬಾ ಖುಷಿ.



ಗೊಂಬೆಗಳ ಅಂದ ಚೆಂದವನ್ನು ಮುಟ್ಟಿ ಮುಟ್ಟಿ ನೋಡುತ್ತಾ ಗೊಂಬೆಗಳೊಂದಿಗೆ, ತಾವು ಗೊಂಬೆಗಳಾಗಿ ಕುಣಿದು ಕುಪ್ಪಳಿಸಿ, ಮಕ್ಕಳು ಸಂತೊಷ ಪಡುತ್ತಾರೆ. ದೊಡ್ಡವರೂ ಕೂಡ ಈ ಕುಣಿತಕ್ಕೆ ಜೊತೆಯಾಗುತ್ತಾರೆ. ಗಾರುಡಿಗೊಂಬೆಯಲ್ಲಿ ಒಂದು ಹೆಣ್ಣುಗೊಂಬೆ ಮತ್ತೊಂದು ಗಂಡುಗೊಂಬೆ ಇರುತ್ತದೆ. ಗಂಡು ಗೊಂಬೆಯು ಪುಂಗಿಯನ್ನು ಕೈಯಲ್ಲಿ ಹಿಡಿದಿರುತ್ತದೆ. ಈ ಗೊಂಬೆಗಳು ನೋಡಲು ರಾಜರಾಣಿ ಅಥವಾ ಯಜಮಾನ ಯಜಮಾನಿಕೆಯಂತೆ ಕಾಣಿಸುತ್ತವೆ. ಇದರ ಜೊತೆಗೆ ಮನರಂಜನೆ ನೀಡಲು ತಮಾಷೆ ಗೊಂಬೆಗಳಾದ ಅಜ್ಜ-ಅಜ್ಜಿ, ಹುಡುಗ-ಹುಡುಗಿ, ಅಯ್ಯಂಗಾರಿಗೊಂಬೆ, ಪತಿ-ಪತ್ನಿ ಮೊದಲಾದವುಗಳಿರುತ್ತವೆ. ಮಹಾಭಾರತದಲ್ಲಿ ಬರುವ ಶ್ರೀಕೃಷ್ಣ ಗಾರುಡಿಯ ಕಥೆಯೇ ಈ ಕಲೆಗೆ ಸ್ಪೂರ್ತಿ.

ಗಾರುಡಿಗೊಂಬೆ ರಚನೆ

ಗಾರುಡಿ ಗೊಂಬೆ ಕುಣಿತಕ್ಕೆ ಪ್ರಾದೇಶಿಕವಾಗಿ ಬೇರೆ-ಬೇರೆ ಹೆಸರಿನಿಂದ ಕರೆಯುವರು. ಗಾಡಿಗನ ಕುಣಿತ, ಮಾನು ಬೊಂಬಲು, ತಟ್ಟೆರಾಯ ಕುಣಿತವೆಂತಲೂ ಕರೆಯುತ್ತಾರೆ. ಮೈಸೂರು,ಮಂಡ್ಯ, ಹಾಸನ, ಕೋಲಾರ, ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಸಾಮಾನ್ಯವಾಗಿ ಒಕ್ಕಲಿಗರು, ನಾಯಕರು, ಪರಿಶಿಷ್ಟ ಜಾತಿಯವರು ಪ್ರದರ್ಶಿಸುತ್ತಾರೆ. ಗಾರುಡಿ ಗೊಂಬೆಯನ್ನು ಹತ್ತು ಹದಿನೈದು ಅಡಿ ಅಳೆತ್ತರದ ಬಿದಿರಿನ ತಡಿಕೆಯಿಂದ ಮಾಡುವರು. ಹಗುರವಾದ ಮರದಿಂದ ಮಾಡಿದ ಕಲೆ ಇದಕ್ಕೆ ಜೇಡಿ ಮಣ್ಣು ಮತ್ತು ಮೇಣವನ್ನು ಬಳಸಿ ಒಳಗೆ ಟೊಳ್ಳಾಗಿರುವ ಮರದ ಕೈಗಳನ್ನು ಜೋಡಿಸುತ್ತಾರೆ.

ವೇಷಭೂಷಣ

ಸಾಮಾನ್ಯವಾಗಿ ಗೊಂಬೆಗಳಿಗೆ ಕೆಂಪು ಬಣ್ಣವನ್ನು ಬಳಿದಿರುತ್ತಾರೆ. ಹೆಣ್ಣು ಬೊಂಬೆಗೆ ಸೊಂಟದಿಂದ ಕೆಳಭಾಗದಲ್ಲಿ ದೊಡ್ಡದಾದ ಲಂಗವನ್ನು ಕಟ್ಟಿರುತ್ತಾರೆ. ಗಂಡು ಗೊಂಬೆಗೆ ಸೊಂಟದ ಕೆಳಗೆ ಪಂಚೆಯಂತೆ ಬಟ್ಟೆಯನ್ನು ಇಳಿಬಿಟ್ಟಿರತ್ತಾರೆ. ಗೊಂಬೆಯನ್ನು ಹೊರುವವರು ತೆಳು ಬಟ್ಟೆಯನ್ನು ಒಳಗಿನಿಂದ ನೋಡುತ್ತಾ ಗೊಂಬೆ ಕುಣಿಸುವಾಗ, ಒಂದಕ್ಕೊಂದು ಡಿಕ್ಕಿ ಹೊಡೆಯದಂತೆ ಲಘುವಾಗಿ ಹೆಜ್ಜೆ ಹಾಕುತ್ತಾರೆ. ಸಾಧಾರಣ ವಾಗಿ ಗಂಡುಗೊಂಬೆಗಳು ಸೊಂಟದ ಮೇಲೆ ಕೈಇಟ್ಟು ಇಲ್ಲವೇ ಪುಂಗಿಯನ್ನು ಊದುವ ಭಂಗಿಯಲ್ಲಿರು ತ್ತದೆ. ಹೆಣ್ಣುಗೊಂಬೆಯು ಸ್ತ್ರೀ ಸಹಜವಾದ ಲಾಲಿತ್ಯದಿಂದ ಕೂಡಿದ್ದು, ಸೀರೆ, ರವಿಕೆ ತೊಟ್ಟು; ಸೆರಗನ್ನು ಸೊಂಟಕ್ಕೆ ಸಿಕ್ಕಿಸಿರುತ್ತಾರೆ. ಗೊಂಬೆಗಳಲ್ಲಿ ಗಂಡು-ಹೆಣ್ಣು, ಭಟ್ಟ, ವಿದೂಷಕ-ವಿದೂಷಕಿ, ರಾಜ-ರಾಣಿ, ಜಮೀನ್ದಾರ ಮಕ್ಕಳು ಅಜ್ಜ-ಅಜ್ಜಿ ಹೀಗೆ ತುಂಬು ಸಂಸಾರವನ್ನೇ ಕಾಣಬಹುದು. ಈ ಕಲೆ ಯನ್ನು ಜಾತ್ರೆ ಉತ್ಸವ

ಸಂಕ್ರಾಂತಿ ಹಬ್ಬ ಮುಂತಾದ ಸಂದರ್ಭಗಳಲ್ಲಿ ಪ್ರದರ್ಶನ ಮಾಡುವರು. ಕಲಾವಿದರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಮಟೆ, ವಾಲಗ, ಮೃದಂಗ, ಡೋಲು ಇವುಗಳ ಗತ್ತಿಗೆ ಅನುಗುಣವಾಗಿ ಲಘುವಾಗಿ ನರ್ತಿಸುತ್ತಾರೆ. ಗೊಂಬೆಗಳು ಭಾರ ಇರುವುದರಿಂದ ಆಗಾಗ ಕೈಬದಲಾಯಿಸಿಕೊಂಡು ಕುಣಿಯು ತ್ತಾರೆ. ಗಾರುಡಿ ಗೊಂಬೆ ಕುಣಿತವು ಮಕ್ಕಳಿಂದ ಹಿಡಿದು ದೊಡ್ಡವರಾದಿಯಾಗಿ ಎಲ್ಲರಿಗೂ ಸಂತಸ ನೀಡುತ್ತದೆ. ಕೆಲವೊಮ್ಮೆ ಇದರೊಂದಿಗೆ ಕೀಲು ಕುದುರೆ ಮತ್ತು ನವಿಲು ಕುಣಿತವನ್ನು ಸೇರಿಸುವುದುಂಟು.

ತೊಗಲುಗೊಬೆಯಾಟದ ಸಂದರ್ಭ

ಸುಂಕಾತೊಣ್ಣೂರು ಗ್ರಾಮ ಪಾಂಡವಪುರ ತಾಲ್ಲೂಕಿನಲ್ಲಿ ಶಿವರಾತ್ರಿ ಹಬ್ಬ ತುಂಬಾ ಅದ್ದೂರಿಯಿಂದ ನಡೆಯುತ್ತದೆ. ಈ ಹಬ್ಬದಲ್ಲಿ ಗಾರುಡಿ ಗೊಂಬೆಗಳ ಪ್ರದರ್ಶನವೇ ಮುಖ್ಯವಾಗಿರುತ್ತದೆ. ವಿಭಿನ್ನ ಶೈಲಿಯ ವಿವಿಧ ಗಾರುಡಿಗೊಂಬೆಗಳಿರುತ್ತವೆ. ರಾಜ-ರಾಣಿ ವಿದೂಷಕ- ವಿದೂಷಕಿ, ಗಾರುಡಿಗ- ಗಾರುಡಿಗಿ, ಶೆಟ್ಟಿ-ಶೆಟ್ಟಿ ಹೆಂಡತಿ ಹೀಗೆ ಜೋಡಿ ಇದ್ದು, ವಾದ್ಯದೊಂದಿಗೆ ವಿವಿಧಾಕಾರದಲ್ಲಿ ನರ್ತಿಸುತ್ತಾ ನೋಡುಗರ ಚಿತ್ತಾಕರ್ಷಿಸು ತ್ತದೆ. ಇದರೊಂದಿಗೆ ದೊಡ್ಡ ಮತ್ತು ಚಿಕ್ಕಗೊಂಬೆಗಳಿರುತ್ತವೆ. ಗೊಂಬೆಗಳಿಗೆ ಪರುಷ ವೇಷ-ಭೂಷಣ ಹೆಣ್ಣು ಬೊಂಬೆಗಳಿಗೆ ಸ್ತ್ರೀಯರ ಉಡುಪುಗಳನ್ನು ಧರಿಸಿಒಂದೇ ಸಂಸಾರದಂತೆ ಕೂಡಿ ನರ್ತಿಸುವುದನ್ನು ಕಾಣಬಹುದು.

ಗಾರುಡಿ ಗೊಂಬೆ ಕಲಾವಿದ ಕೃಷ್ಣೇಗೌಡ

ಕೃಷ್ಣೇಗೌಡರು ಪಾಂಡವಪುರ ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದವರು. ಇವರಲ್ಲಿರುವ ವಿಶೇಷ ಕಲೆಯೇ ಈ ಮಟ್ಟಿಗಿನ ಬೆಳವಣಿಗೆಗೆ ಕಾರಣ. ಆರೇಳು ಕಲೆಗಳನ್ನು ಮೈಗೂಡಿಸಿಕೊಂಡಿರುವ ಕೃಷ್ಣೇಗೌಡರದು ಪ್ರೌಢ ಪ್ರತಿಭೆ. ಜನಪದ ಕಲೆ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಇವರು ದೇಶಿಯ ಕಲೆಗಳ ಆಗರ.

ಸಾಮಾಜಿಕವಾಗಿ :

ಪಾಂಡವಪುರದ ಚಿಕ್ಕಹೊನ್ನೆಗೌಡ ಕೆಂಪಮ್ಮನವರ ಮಗನಾದ ಕೃಷ್ಣೇಗೌಡರು ಜನಿಸಿದ್ದು ೧೯೬೪ರಲ್ಲಿ. ಇವರ ತಾಯಿ ಕೆಂಪಮ್ಮ ಮತ್ತು ತಂಗಿ ಬೋರಮ್ಮನವರು, ಇವರು ಸೋಬಾನೆ ಪದ ಹಾಡುತ್ತಿದ್ದರಂತೆ. ಕೃಷ್ಣೇಗೌಡರು ಬಾಲ್ಯದಲ್ಲೇ ೧೦ನೇ ವಯಸ್ಸಿನಲ್ಲಿ ಚಿಕ್ಕಮ್ಮ ಹಾಡುತ್ತಿದ್ದ ಜನಪದ ಗೀತೆ ಮತ್ತು ಸೋಬಾನೆ ಪದಗಳಿಂದ ಪ್ರಭಾವಿತರಾಗಿ ತಾವು ಅವರೊಂದಿಗೆ ಕಲಿತು ಹಾಡಲು ಆರಂಭಿಸಿದರು. ತಂದೆಯವರು ತೀರಿಕೊಂಡ ನಂತರ ಹನ್ನೆರಡು ಕಂಬದ ಹಟ್ಟಿ ಮನೆಯಲ್ಲಿ ೧೬ ಜನರಿದ್ದರು. ತಾಯಿ ಕೆಂಪಮ್ಮ ಬೆಲ್ಲದ ವ್ಯಾಪಾರ ಮಾಡುತ್ತಿದ್ದರು. ವಿಕಲಚೇತನಳಾದ ಅಕ್ಕನನ್ನು ಸಾಕುವ ಜವಾಬ್ದಾರಿ

ಕೃಷ್ಣೇಗೌಡರ ಮೇಲಿತ್ತು ಅದನ್ನು ಅವರು ತುಂಬಾ ಕಾಳಜಿಯಿಂದ ನಿಭಾಯಿಸಿದರು. ತಮ್ಮ ತಂದೆಯಿಂದ ಬಳುವಳಿಯಾಗಿ ಬಂದಿರುವ ಗಾರುಡಿಗೊಂಬೆಯನ್ನು ಕಲಿತಿರುವ ಕೃಷ್ಣೇಗೌಡರು ಹಿಂದೆಲ್ಲಾ ತಂದೆಯೊಡನೆ ಜಾತ್ರೆ, ಉತ್ಸವ, ಮೆರವಣಿಗೆಗಳಲ್ಲಿ ಕೋಡಂಗಿಯ ವೇಷವನ್ನು ಧರಿಸಿ, ಊರೂರು ಸುತ್ತುತ್ತಿದ್ದರಂತೆ. ಇವರ ತಂದೆಯವರು ಗಾರುಡಿಗೊಂಬೆಯ ನಿಷ್ಣಾತ ಕಲಾವಿದರು. ಜಾತ್ರೆ, ಉತ್ಸವ, ಹಬ್ಬ, ಮೆರವಣಿಗೆ ಮುಂತಾದ ಸಂದರ್ಭಗಳಲ್ಲಿಯೇ ಗಾರುಡಿಗೊಂಬೆಯನ್ನು ಮಾಡುತ್ತಾರೆ.

ಜನಪದ ಕಲೆಗಳ ವ್ಯಾಮೋಹದಿಂದ ಸೋಬಾನೆ ಪದದೊಂದಿಗೆ ಗಾರುಡಿ ಗೊಂಬೆ; ಹನ್ನೆರಡು ಸೆರಗಿನ ಕುಣಿತ, ಪಟಾಕುಣಿತ, ರಂಗದ ಕುಣಿತ, ವೀರಗಾಸೆ ಕುಣಿತ ಹೀಗೆ ಎಲ್ಲವನ್ನೂ ಕರಗತ ಮಾಡಿಕೊಂಡಿರುವ ಕೃಷ್ಣೇಗೌಡರು ಬಹುಮುಖ ಪ್ರತಿಭೆ ಗೊಂಬೆ ಹೊತ್ತು ಕುಣಿಯುವುದು ಬಹು ಪ್ರಯಾಸದ ಕೆಲಸ. ಗೊಂಬೆ ತುಂಬಾ ಭಾರವಾಗಿ, ಎತ್ತರವಾಗಿರುವುದರಿಂದ ಸಮತೋಲನ ಕಾಪಾಡಬೇಕು. ಒಳಗೆ ಗಾಳಿ ಬರದೇ ಇರುವುದರಿಂದ ಉಸಿರು ಗಟ್ಟುತ್ತದೆ. ಹಾಗಾಗಿಯೇ ಕಲಾವಿದರು ಹದಿನೈದು ನಿಮಿಷಕ್ಕೊಮ್ಮೆ ಕೈ ಬದಲಾಯಿಸುತ್ತಾರೆ. ಇಂದು ಕೃಷ್ಣೇಗೌಡರು ಗಾರುಡಿ ಕೃಷ್ಣೇಗೌಡರೆಂದು ಪಾಂಡವಪುರ ತಾಲೂಕಿನಲ್ಲಿ ಚಿರಪರಿಚಿತರಾಗಿದ್ದಾರೆ. ಜನರು ಕೂಡ ಇವರನ್ನು ತುಂಬಾ ಆಪ್ತತೆಯಿಂದ ಕಂಡು ಗೌರವಿಸುತ್ತಾರೆ. ಅನೇಕ ಸಂಘ ಸಂಸ್ಥೆಗಳು ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ, ಮುಖ್ಯ ಅತಿಥಿಗಳಾಗಿಯೂ ಕರೆಯುತ್ತಾರೆ. ಏನನ್ನೂ ಓದದೇ ತನ್ನ ಅರಿವಿನ ತಿಳಿವಿನಿಂದ ಕಲೆಯನ್ನು ಮೈಗೂಡಿಸಿಕೊಂಡು ಈ ಹಂತದವರೆಗೆ ಬಂದಿರುವ ಈ ಕಲೆಗಾರ ನಿಜವಾಗಿಯೂ ಪ್ರತಿಭಾನ್ವಿತನೆಂದೇ ಹೇಳಬೇಕು. ಕನ್ನಡ ಸಂಸ್ಕೃತಿ ಇಲಾಖೆಯ ಗುರು-ಶಿಷ್ಯ ಪರಂಪರೆ ಯೋಜನೆಯಡಿ ಹಲವು ಶಾಲಾ ಕಾಲೇಜುಗಳಿಗೆ ಹೋಗಿ ಯುವಕ ಯುವತಿಯರಿಗೆ ಜನಪದ ಕಲೆಗಳನ್ನು ಹೇಳಿಕೊಡುತ್ತಾರೆ.

ಉತ್ತಮ ಸಂಘಟಕರಾಗಿರುವ ಕೃಷ್ಣೇಗೌಡರು ಕೋಲಾಟ ರಂಗದ ಕುಣಿತ, ಪಟಾಕುಣಿತ, ಗಾರುಡಿಗೊಂಡೆ, ಸೋಬಾನೆ ಪದ ಮುಂತಾದ ತಂಡಗಳನ್ನು ತಾವೇ ಕರೆದೊಯ್ಯುತ್ತಾರೆ. ಹಲವಾರು ಕಲಾವಿದರಿಗೆ ಹಾಸ್ಯತರುವಂತಹ ವಸ್ತುಗಳನ್ನು ತೊಡಿಸಿ ಜನರನ್ನು ನಗಿಸುವ ಗಾರುಡಿ ಗೊಂಬೆ ಪ್ರದರ್ಶನ ಹಾಸ್ಯಕ್ಕೆ ಒತ್ತು ನೀಡಲಾಗುತ್ತದೆ. ಜನರ ಪ್ರೇಕ್ಷಕರ ಮನಸ್ಸನ್ನು ಉಲ್ಲಾಸಗೊಳಿಸುವುದೆ ಈ ಕಲೆಯ ಪ್ರಮುಖ ಉದ್ದೇಶ. ಕೃಷ್ಣೇಗೌಡರಿಗೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ನೀಡಿ ಸನ್ಮಾನಗಳು ಸಂದಿವೆ. ೧೯೮೬ ರಲ್ಲಿ ಜಾನಪದ ಲೋಕದ ಹೆಚ್.ಎಲ್.ನಾಗೇಗೌಡರು ಇವರ ಕಲೆಯನ್ನು ಗುರುತಿಸಿ ಕಾರ್ಯಕ್ರಮ ನೀಡಲು ಅವಕಾಶ ನೀಡಿದರು. ಸುಮಾರು ೨೫ ವರ್ಷಗಳಿಂದ ಕೃಷ್ಣೇಗೌಡರು ಗ್ರಾಮೀಣ ಪ್ರದೇಶಗಳಲ್ಲಿ ನಗರ ಪಟ್ಟಣಗಳಲ್ಲಿ ಜಾನಪದ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ರಂಜಿಸಿದ್ದಾರೆ. ಮಂಡ್ಯ ಜಿಲ್ಲೆಯ ವಿವಿದೆಡೆ, ರಾಜ್ಯ ಹಾಗೂ ಹೊರ ರಾಜ್ಯಮಟ್ಟದಲ್ಲಿ ಕೇರಳದ

ಕಾಸರಗೋಡಿನಲ್ಲಿ, ಗಾರುಡಿಗೊಂಬೆ ಪ್ರದರ್ಶನ ನೀಡಿ ಜನ ಮೆಚ್ಚುಗೆ ಪಡೆದಿದ್ದಾರೆ. ನಾಡಹಬ್ಬ ಸಂದರ್ಭದಲ್ಲಿ ಮತ್ತು ೪ನೇ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದಾರೆ. ಆಕಾಶವಾಣಿ, ಬೆಂಗಳೂರು ದೂರದರ್ಶನ, ಖಾಸಗಿ ಛಾನಲ್‌ಗಳಲ್ಲಿ ಕೂಡ ಇವರ ಕಾರ್ಯಕ್ರಮ ಗಾರುಡಿ ಗೊಂಬೆ ಪ್ರಸಾರವಾಗಿದೆ.

ಆರ್ಥಿಕವಾಗಿ :

ಒಂದು ಎಕರೆ ಜಮೀನಿನಲ್ಲಿ, ಋತುಮಾನಕ್ಕೆ ತಕ್ಕ ಬೆಳೆಗಳನ್ನು ಬೆಳೆಯುತ್ತಾರೆ. ಹೆಗ್ಗಡಹಳ್ಳಿ ಮಂಡ್ಯ ಜಿಲ್ಲೆಯ, ಪಾಂಡವಪುರ ತಾಲೂಕಿನವರು. ಆಶ್ರಯ ಸಿಕ್ಕಿದರೂ ಕನ್ನಂಬಾಡಿಯ ಆಸರೆಯಿಲ್ಲ. ಬಟ್ಟಾ ಬಯಲು ಪ್ರದೇಶ. ಮಳೆಗೆ ಪೂರಕವಾಗಿ ಬೆಳೆ. ಸಾಮಾನ್ಯ ಮಳೆಗೆ ರಾಗಿ, ಹೆಚ್ಚಿನ ಮಳೆ ಸುರಿದು ಕೆರೆ ತುಂಬಿದರೆ ಭತ್ತ ಮಾತ್ರ ಬೆಳೆಯುತ್ತಾರೆ. ಮಳೆ ಬಂದಷ್ಟು ಬರಲಿ. ಕೆರೆ ತುಂಬಲಿ, ತುಂಬದಿರಲಿ ಇರುವ ಅಲ್ಪಸ್ವಲ್ಪ ಹೊಲದಲ್ಲಿ ಕೃಷ್ಣೇಗೌಡರು ಬಾವಿ ನೀರಾದರೂ ಸೇದಿಯಾದರೂ ರಂಗುರಂಗಿನ ಹೂವು ಬೆಳೆಯುತ್ತಾರೆ. ಜೊತೆಗೆ ವೀಳ್ಯದೆಲೆಯ ಹಂಬನ್ನು ಹಬ್ಬಿಸುತ್ತಾರೆ. ಕನಕಾಂಬರಿ, ಸೇವಂತಿಗೆ, ಚೆಂಡುಹೂ, ಪಟಾಸು ಕಾಲಕ್ಕನುಸಾರವಾಗಿ ಹಾಕಿ ಬೆಳೆ ತೆಗೆಯುತ್ತಾರೆ. ಜೊತೆಗೆ ಹಾಡುತ್ತಾರೆ. ಜನಪದ ಹಾಡುಗಳನ್ನು ಮೂಲ ಧಾಟಿಯಲ್ಲೇ ಹಾಡುವ ಕಲೆಗಾರ, ಅವರೇ ಹೇಳುವಂತೆ ದಿನವೂ ತಿನ್ನುವ ಹಿಟ್ಟು ಅಂಬಲಿ ಅವರ ಕಂಠಕ್ಕೆ ಮಾಧುರ್ಯ ತಂದು ಕೊಟ್ಟಿದೆ. ಹೂವಿನ ಬೆಳೆಯಿಂದ ಇವರ ಕುಟುಂಬ ನಡೆಯುತ್ತಿದೆ. ಸೋಬಾನೆ ಪದ, ಕೋಲಾಟ, ಪಟಕುಣಿತ ಕರಗತ ಮಾಡಿಕೊಂಡಿರುವ ಇವರು ಉತ್ಸವ, ಸಮಾರಂಭ, ಮದುವೆಗಳಲ್ಲಿ ಹಾಡನ್ನು ಹಾಡುತ್ತಾರೆ. ಅವರು ನೀಡುವ ಗೌರವ ಸಂಭಾವನೆಯಿಂದ ಇವರ ತಂಡದಲ್ಲಿ ಉಪಯೋಗಿಸುವ ಪರಿಕರಗಳನ್ನು ನವೀಕರಿಸಲು ಉಪಯೋಗಿಸುತ್ತಾರೆ. ಅಲ್ಲದೇ ತಂಡದ ಪ್ರತಿಯೊಬ್ಬರಿಗೂ ಹಣ ಸಂದಾಯ ಮಾಡಿ ತಂಡ ಒಡೆಯದಂತೆ ನೋಡಿಕೊಂಡಿದ್ದಾರೆ.

ಸಾಂಸ್ಕೃತಿಕವಾಗಿ :

ಶ್ರೀಕೃಷ್ಣ ಗಾರುಡಿಗ ಕಥೆಯಿಂದಾಗಿ, ಗಾರುಡಿಗೊಂಬೆಗೆ ಈ ಹೆಸರು ಬಂದಿದೆ. ಭಾರತ ಸಂಗ್ರಾಮವನ್ನು ಗೆದ್ದವರು ಯಾರು, ಎನ್ನುವ ವಿಷಯದಲ್ಲಿ ಭೀಮಾರ್ಜುನರಿಗೆ ವಾದ ಏರ್ಪಟ್ಟು, ನಾನು ನಾನು ಎನ್ನುವ ಅಹಂಕಾರ ಏರ್ಪಟ್ಟಿರುತ್ತದೆ. ಈ ಭಾರತ ಸಮರ ವಿಜಯೋತ್ಸವಕ್ಕೆ ನಿಜವಾದ ಕಾರಣ ಮತ್ತು ಸೂತ್ರಧಾರ ಶ್ರೀಕೃಷ್ಣ ಎನ್ನುವುದನ್ನು, ಅವರು ತಮ್ಮ ಅಹಂಕಾರದಿಂದ ಮರೆತಿರುತ್ತಾರೆ. ಭೀಮಾರ್ಜುನರಿಗೆ ಬಂದ ಅಹಂಕಾರವನ್ನು ದೂರಮಾಡುವುದಕ್ಕಾಗಿ, ಕೃಷ್ಣನು ಯೋಚಿಸಿ ಹಾವಾಡಿಗನ ವೇಷದಲ್ಲಿ ಬಂದು ತನ್ನ ಚಾಕಚಕ್ಯತೆಯಿಂದ, ಗಾರುಡಿಗನಾಗಿ ನಿಜವಾದ ಪ್ರಭುತ್ವವನ್ನು ಸ್ಥಾಪಿಸಿದವರು ಯಾರು?

ಪಾಂಡವರ ಜಯಕ್ಕೆ ಕಾರಣವನ್ನು ನಿರೂಪಿಸುತ್ತಾನೆ. ಇದು ಭಾರತ ವಿಧಿತವಾದರೂ ಕಾಲಕ್ರಮೇಣ ಜಾನಪದೀಯವಾಗಿ ಅತ್ಯಂತ ಹೆಚ್ಚು ಪ್ರಸಾರವನ್ನು ಪಡೆಯಿತು. ಶ್ರೀಕೃಷ್ಣ ಗಾರುಡಿ ಎಂಬ ಹೆಸರಿನಲ್ಲಿ ಜನಪದ ಕಲೆಯಲ್ಲಿ ಮೇಳೈಸಿ, ದೊಡ್ಡ ದೊಡ್ಡ ಗಾತ್ರದ ಪುಂಗಿಯನ್ನು ಊದುವ ಗಾರುಡಿ ಗೊಂಬೆಗಳನ್ನು ಜನಪದ ಕಲಾವಿದರು ಅತ್ಯಂತ ಜನಾಕರ್ಷಕವಾಗಿ ಪ್ರದರ್ಶಿಸುತ್ತಾ ಬಂದರು. ಹಾವಾಡಿಗನ ವೇಷದಲ್ಲಿರುವ ಶ್ರೀಕೃಷ್ಣ, ತನ್ನ ಜಾನಪದೀಯ ಪರಿಭಾಷೆಯ ಮೂಲಕ ಇಡೀ ಕಥೆಯನ್ನು, ವಿಸ್ತರಿಸುವ ರೀತಿ ಅಪ್ಯಾಯಮಾನ. ಪುಂಗಿ ಪರಿಕರದ ಮೂಲಕ ಹಾವಾಡಿಸುವ ಕ್ರಮ ಮತ್ತು ಇದರಲ್ಲಿ ಜನಪದ ರಂಗಭೂಮಿ ಶ್ರೀಮಂತಗೊಳ್ಳುವಲ್ಲಿ, ಶ್ರೀಕೃಷ್ಣನ ಪಾರಮ್ಯದ ಸಂದೇಶವನ್ನು ಸಾರುವಲ್ಲಿ, ಸಫಲತೆಯನ್ನು ಸಾಕ್ಷಾತ್ ಕರಿಸಿದೆ. ಇದನ್ನು ಗಾರುಡಿಗೊಂಬೆಯ ರೂಪದಲ್ಲಿ ಗೊಂಬೆಗಳನ್ನು ಪಾತ್ರವನ್ನಾಗಿಸಿ, ತನ್ಮೂಲಕ ನಿರ್ಜೀವಗೊಂಬೆಗಳು ವಿಷಯಗ್ರಸ್ತ ಸಜೀವತೆಯ ಸಂದೇಶವನ್ನು ನೀಡುತ್ತದೆ.

ಗಾರುಡಿಗೊಂಬೆಯಲ್ಲಿ ಹಾವಾಡಿಗನ ವೇಷ ಹಾಕಿರುವ, ಪುಂಗಿಯನ್ನು ಕೈಯಲ್ಲಿ ಹಿಡಿದು, ಊದುವ ಆಳೆತ್ತರದ ಗಾರುಡಿಗನಿದ್ದಾನೆ. ಸಾಧಾರಣವಾಗಿ ಈ ಕಲೆಯನ್ನು ಮೆರವಣಿಗೆ, ಉತ್ಸವ, ಜಾತ್ರೆ, ಹಬ್ಬಗಳಲ್ಲಿ ಪ್ರದರ್ಶಿಸುತ್ತಾರೆ. ಗಾರುಡಿಗೊಂಬೆಯಲ್ಲಿ ಪುಂಗಿ ಊದುವ ಗೊಂಬೆಯನ್ನು ಬಿಟ್ಟು ಇನ್ನುಳಿದ ಗೊಂಬೆಗಳು ವಿದೂಷಕ, ವಿದೂಷಕಿ, ಅಜ್ಜ-ಅಜ್ಜಿ, ಅಯ್ಯಂಗಾರಿ ಸಂಸಾರ, ಹುಡುಗ-ಹುಡುಗಿ, ಮಕ್ಕಳು ಮುಂತಾದ ಗೊಂಬೆಗಳಿರುತ್ತವೆ. ಅದನ್ನು ನಿಯಂತ್ರಿಸುವವನು ಪುಂಗಿಯನ್ನು ಊದುವ ಆಳೆತ್ತರದ ಗೊಂಬೆ. ಗಾರುಡಿಗೊಂಬೆ ಕೇವಲ ಮೂರು ತಂಡಗಳು ಮಾತ್ರ ಇವೆ. ೬೦-೮೦ ಕೆ.ಜಿ.ಯ ಪೂಜೆಯನ್ನು ಹೊತ್ತು ಕುಣಿಯುವ ಹೆಣ್ಣುಮಕ್ಕಳು ೪೦ ಕೆ.ಜಿ. ತೂಕದ ಅಳೆತ್ತರದ ಬೊಂಬೆಯನ್ನು ಸರಾಗವಾಗಿ ಎತ್ತಬಹುದು. ಇಡೀ ಕರ್ನಾಟಕದಲ್ಲಿ ಗಾರುಡಿಗೊಂಬೆಗಳ ಹೆಣ್ಣು ಮಕ್ಕಳ ತಂಡವಿಲ್ಲ. ಬಹುಶಃ ಗೊಂಬೆಹೊತ್ತು ಕುಣಿಯುವಾಗ ಉಸಿರಾಡಲು ಕಷ್ಟವಾಗುತ್ತದೆ. ಅಲ್ಲದೆ, ಒಳಗಡೆ ಗಾಳಿಯಾಡುವುದಿಲ್ಲ. ಈ ಕಾರಣವೂ ಇರಬಹುದು ಹೆಣ್ಣು ಮಕ್ಕಳು ಈ ಕಲೆಯಲ್ಲಿ ಆಸಕ್ತಿ ತೋರಿಸದಿರುವುದು.

ದೃಶ್ಯ ಮಾಧ್ಯಮದಲ್ಲಿ ಗಾರುಡಿ ಗೊಂಬೆ

ಗಾರುಡಿಗೊಂಬೆ ಪ್ರದರ್ಶನವು ಒಟ್ಟು ಕುಟುಂಬದ ವ್ಯವಸ್ಥೆಗೆ ಪ್ರಚೋದಿಸುತ್ತದೆ. ಇಂದಿನ ಸಂದರ್ಭದಲ್ಲಿ ಒಟ್ಟು ಕುಟುಂಬದ ಕಲ್ಪನೆಯೇ ಯಾರಿಗೂ ಇಲ್ಲ. ಆದರೆ ನಮ್ಮ ಜನಪದ ಕಲೆಗಳು ಇಂದಿಗೂ ಕೂಡಾ ಸಮಾಜಕ್ಕೆ ಸಂದೇಶವನ್ನು ನೀಡುವುದರಲ್ಲಿ ಮುಂಚೂಣಿಯಲ್ಲಿದೆ. ದೃಶ್ಯಮಾಧ್ಯಮಕ್ಕೆ ಗಾರುಡಿಗೊಂಬೆಯನ್ನು ಅಳವಡಿಸುವಾಗ, ಅದರ ಮುಖ್ಯಸ್ಥ ಗಾರುಡಿಗೊಂಬೆಗಾಗಿಯೇ ೧೦ ರಿಂದ ೨೦ ನಿಮಿಷವಿರುವ ಅಲ್ಪಾವಧಿಯ

ಕತೆಯನ್ನು ಹೆಣೆಯುತ್ತಾನೆ. ಈ ಕತೆ ದೃಶ್ಯಮಾಧ್ಯಮದಲ್ಲಿ ಚಿತ್ರೀಕರಿಸಿದಾಗ, ಒಟ್ಟಾರೆ ಕುಟುಂಬ ವ್ಯವಸ್ಥೆಯ ಸಂದೇಶವಿದ್ದು, ಎಲ್ಲರಿಗೂ ಮನಮುಟ್ಟುವಂತೆ ಗೊಂಬೆಗಳು ಅಭಿನಯಿಸುತ್ತವೆ. ಇಂದಿನ ಸನ್ನಿವೇಶದಲ್ಲಿ ಗಂಡ-ಹೆಂಡತಿ ಇಬ್ಬರೇ ಇರುವ ಸಂಸಾರ ಹೆಚ್ಚು. ಮನೆಯಲ್ಲಿ ದೊಡ್ಡವರಿದ್ದಾಗ ಮಕ್ಕಳನ್ನು ಲಾಲಿಸುವ ಅನೇಕ ದೃಶ್ಯಗಳನ್ನು ಗಾರುಡಿಗೊಂಬೆಯಲ್ಲಿ ಮಾಡುತ್ತಾರೆ. ಗಾರುಡಿಗೊಂಬೆಯ ಪ್ರದರ್ಶನ ನೋಡಿದರೆ, ಯಾವುದೇ ಪ್ರೇಕ್ಷಕನಿಗಾದರೂ ಒಟ್ಟು ಕುಟುಂಬದಲ್ಲಿರಬೇಕೆಂಬ ಸದ್ಭಾವನೆ ಬರುತ್ತದೆ. ಎಲ್ಲರೂ ಒಟ್ಟಿಗೆ ಇರಲಾಗದಿದ್ದರೂ ತಾತ್ಕಾಲಿಕವಾಗಿಯಾದರೂ ಹಾಗಿರಬೇಕೆಂಬ ಭಾವನೆಯನ್ನು ಮನಸ್ಸಿನಲ್ಲಿ ತರಿಸುತ್ತದೆ. ಮನೆಯ ಪ್ರತಿಯೊಬ್ಬ ಸದಸ್ಯರ ಪಾತ್ರವನ್ನು, ಜವಾಬ್ದಾರಿಯನ್ನು ಗೊಂಬೆಗಳ ಮೂಲಕ ಮಾರ್ಮಿಕವಾಗಿ ತೋರಿಸುತ್ತಾರೆ. ಆಳೆತ್ತರದ ಗೊಂಬೆಗಳು ಪ್ರೇಕ್ಷಕರೆಲ್ಲರಿಗೂ ಮುದನೀಡುತ್ತದೆ ಮತ್ತು ಗೊಂಬೆಗಳ ಮೂಲಕ ತಾವು ಕೊಡುವ ಸಂದೇಶವನ್ನು ಜನರಿಗೆ ನಮ್ಮ ಜನಪದರು ಮುಟ್ಟಿಸುತ್ತಾರೆ; ಹಾಗಾಗಿ ಇಂದು ಮೆರವಣಿಗೆ, ಉತ್ಸವ, ಜಾತ್ರೆ ಮುಂತಾದ ಸಂದರ್ಭಗಳಲ್ಲಿ ಈ ಗಾರುಡಿಗೊಂಬೆ ಕುಣಿತ ಇರಲೇಬೇಕು. ಮಕ್ಕಳಿಗೆ ಮನೆಯೇ ಒಂದು ಪಾಠಶಾಲೆ. ಮನೆಯಲ್ಲಿನ ಸಂಬಂಧಿಗಳಿಂದ ಸಂಬಂಧವನ್ನು ಅರಿಯುತ್ತವೆ. ಎಲ್ಲರೊಡನೆ ಬೆರೆತು ಒಂದಾಗಿ, ಹಂಚಿತಿನ್ನುವ ಮನೋಭಾವ ಬೆಳಸಿಕೊಳ್ಳುತ್ತವೆ. ದೃಶ್ಯಮಾಧ್ಯಮದಲ್ಲಿ ಜನಪದ ಕಲೆಯಾದ ಗಾರುಡಿಗೊಂಬೆಯು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

ಆಳೆತ್ತರದ ಗಾರುಡಿಗೊಂಬೆಗಳು ಸುಮಾರು ೪೦ ರಿಂದ ೫೦ ಕೆ.ಜಿ. ಭಾರವಿರುತ್ತದೆ. ಗೊಂಬೆಗಳನ್ನು ಹೊತ್ತಾಗ ಕಲಾವಿದರಿಗೆ ಸರಿಯಾಗಿ ಕಣ್ಣುಗಳು ಕಾಣುವುದಿಲ್ಲ ಮತ್ತು ಉಸಿರಾಟಕ್ಕೆ ತೊಂದರೆಯಾಗುತ್ತದೆ. ಅಗಲವಾದ ಈ ಗೊಂಬೆಗಳು, ಹಿಮ್ಮೇಳದ ಸಂಗೀತಕ್ಕೆ ಕಲಾವಿದರು ಲಯಬದ್ಧವಾಗಿ ಕುಣಿಯುವಾಗ ಒಂದಕ್ಕೊಂದು ಡಿಕ್ಕಿಹೊಡೆಯುವ ಸಾಧ್ಯತೆಯಿರುತ್ತದೆ. ಹಾಗಾಗಿ ದೃಶ್ಯಮಾಧ್ಯಮಕ್ಕೆ ಚಿತ್ರೀಕರಿಸುವಾಗ ಎರಡು-ಮೂರು ಕ್ಯಾಮೆರಾಗಳ ಬಳಕೆ ಇದ್ದರೆ ಹೆಚ್ಚು ಸೂಕ್ತ. ಏಕೆಂದರೆ ಕಲಾವಿದರು ಗಾರುಡಿಗೊಂಬೆ ಕುಣಿತವನ್ನು ಪದೇ ಪದೇ ಮಾಡಲಾಗುವುದಿಲ್ಲ. ಕಾರಣವಿಷ್ಟೇ ಆಕಾರದಲ್ಲಿ ಗೊಂಬೆಗಳು ಬಹಳ ದೊಡ್ಡದಾಗಿರುತ್ತವೆ. ಗೊಂಬೆಗಳನ್ನು ಹೊತ್ತಾಗ ಕಲಾವಿದರಿಗೆ ಒಳಗೆ ಗಾಳಿಹೋಗದೆ ಉಸಿರುಗಟ್ಟುತ್ತದೆ ಮತ್ತು ಅಕ್ಕ-ಪಕ್ಕದ ಗೊಂಬೆಗಳು ಸರಿಯಾಗಿ ಕಾಣದೆ ಒಂದಕ್ಕೊಂದು ಮುಖಾಮುಖಿಯಾಗಿ ಡಿಕ್ಕಿ ಹೊಡೆಯುತ್ತವೆ. ಹೀಗಾಗ ಬಾರದೆಂದರೆ ನಿರ್ದೇಶಕರು ಎರಡು-ಮೂರು ಕ್ಯಾಮೆರಾಗಳಲ್ಲಿ ಚಿತ್ರೀಕರಿಸಿದರೆ ಕಲಾವಿದರಿಗೆ ಒಳ್ಳೆಯದು. ಇಂದು ಅತೀವೇಗದ ಬದುಕಿನಲ್ಲಿ ಯಾರಲ್ಲಿಯೂ ಹಾಸ್ಯಕ್ಕಾಗಲೀ, ಸಂಬಂಧಕ್ಕಾಗಲಿ ಬೆಲೆ ಇಲ್ಲವಾಗಿದೆ. ಈ ಗಾರುಡಿಗೊಂಬೆ ಕುಣಿತವು ಹಾಸ್ಯಕ್ಕೆ ಮತ್ತು ಸಂಬಂಧಗಳಿಗೆ ಬೆಲೆ

ಕಟ್ಟಿಕೊಡುತ್ತದೆ. ಮಕ್ಕಳಾದಿಯಾಗಿ ದೊಡ್ಡವರನ್ನು ಕೂಡ ಕಾರ್ಯಕ್ರಮ ಪ್ರಸಾರವಾದಾಗ ಮನರಂಜಿಸುತ್ತದೆ.

೩.೩.೭ ಚೌಡಿಕೆ

ಶಕ್ತಿದೇವತೆ ಯಲ್ಲಮ್ಮನ ಆರಾಧಕರೇ ಚೌಡಿಕೆಯವರು. ಚೌಡಿಕೆ ಎನ್ನುವುದು ಒಂದು ವಾದ್ಯವಿಶೇಷ. ಇದರ ಮುಖ್ಯ ಕೇಂದ್ರಗಳು ಬಳ್ಳಾರಿ ಜಿಲ್ಲೆಯ ಉಚ್ಚಂಗಿ, ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿ ರಾಯಚೂರು ಜಿಲ್ಲೆಯ ಮುನೀರಾಬಾದ್ ಮತ್ತು ಬೆಳಗಾಂ ಜಿಲ್ಲೆಯ ಸವದತ್ತಿ ಇಂದೂ ಕೂಡ ಚೌಡಿಕೆ ಸಂಪ್ರದಾಯ ಜನಪ್ರಿಯವಾಗಿದೆ. ಚೌಡಿಕೆ ನುಡಿಸುವವರನ್ನು ಜೋಗಿ, ಜೋಗತಿ ಎಂದು ಕರೆಯುತ್ತಾರೆ. ಇವರು ದೀಕ್ಷೆ ಪಡೆದು ಎಲ್ಲಮ್ಮ ದೇವಿಯ ಸೇವೆ ಮಾಡುತ್ತಾರೆ. ಚೌಡಿಕೆ ಹೇಗೆ ಬಂತು ಎನ್ನುವುದಕ್ಕೆ ಅನೇಕ ಕಥೆಗಳಿವೆ. ಅವುಗಳು ಈ ಕೆಳಗೆ ವಿವರಿಸಲಾಗಿದೆ. ಚೌಡಿಕೆ ಸಂಪ್ರದಾಯಕ್ಕೆ ಸಂಬಂಧಿಸಿದ ಅನೇಕ ಪುರಾಣಗಳನ್ನು ಈ ಕೆಳಗಿನಂತೆ ನೋಡಬಹುದು.

ಜಮದಗ್ನಿಯ ಆಶ್ರಯದಲ್ಲಿದ್ದ ಕಾಮಧೇನು ತನಗೆ ಬೇಕೆಂಬ ದುರಾಸೆಯಿಂದ, ಕಾರ್ತವೀರ್ಯನು ಜಮದಗ್ನಿಯನ್ನು ಕೊಂದು ಕಾಮಧೇನುವನ್ನು ಕೊಂಡೊಯ್ಯುತ್ತಾನೆ. ಜಮದಗ್ನಿಯ ಪತ್ನಿ ರೇಣುಕೆಯು ದುಃಖದಲ್ಲಿ ತೊಳಲಾಡುತ್ತಾಳೆ. ಅವಳ ದುಃಖ ನಿವಾರಣೆಗಾಗಿ, ಪರಶುರಾಮ ಕಾರ್ತವೀರ್ಯನನ್ನು ಕೊಂದು ಕಾಮಧೇನುವನ್ನು ಮರಳಿ ಪಡೆಯುತ್ತಾನೆ. ಪರಶುರಾಮನು ಕಾರ್ತವೀರ್ಯನ ಶರೀರದ ಭಾಗಗಳಿಂದ ಚೌಡಿಕೆ ವಾದ್ಯವನ್ನು ರಚಿಸುತ್ತಾನೆ. ಅವನ ಹೊಟ್ಟೆಯನ್ನು ಕೊಳಗ ಮಾಡಿ, ಕರುಳನ್ನು ತಂತಿ, ಕೈಯನ್ನು ಸರಿಗೋಲು, ಬೆರಳನ್ನು ಬಾರಿಸುವ ಕಡ್ಡಿಯನ್ನಾಗಿ ಮಾಡಿಕೊಂಡು ತಾಯಿಯ ಮುಂದೆ ಈ ವಾದ್ಯವನ್ನು ನುಡಿಸಿ ಅವಳನ್ನು ಸಂಪ್ರೀತಳನ್ನಾಗಿ ಮಾಡುತ್ತಾನೆ.

ಇನ್ನೊಂದು ಪುರಾಣದಲ್ಲಿರುವ ಕಥೆಯಲ್ಲಿ ರೇಣುಕೆಯು ಪ್ರತಿದಿನ ಸೂರ್ಯೋದಯಕ್ಕೆ ಮುನ್ನ ನದಿಯಲ್ಲಿ ಸ್ನಾನ ಮಾಡಿ ಸರ್ಪವನ್ನು ತಲೆಯ ಮೇಲೆ ಸಿಂಬೆಯನ್ನಾಗಿ ಮಾಡಿಕೊಂಡು ಕೊಡದಲ್ಲಿ ನೀರನ್ನು ತರುತ್ತಿದ್ದಳು. ಒಂದು ದಿನ ಹೀಗೆ ನೀರನ್ನು ತರುತ್ತಿರುವಾಗ ಗಂಧರ್ವರ ಜಲ ಕ್ರೀಡೆಯನ್ನು ನೋಡಿ ಅವಳ ಮನಸ್ಸು ಚಂಚಲವಾಗುತ್ತದೆ. ಆಗ ಬಿಂದಿಗೆ ಒಡೆಯುತ್ತದೆ. ಋಷಿಯ ವ್ರತ ಭಂಗವಾಗಿದ್ದಕ್ಕೆ ಆತನ ಶಾಪಕ್ಕೆ ಗುರಿಯಾಗುತ್ತಾಳೆ. ಶಾಪಕ್ಕೆ ಗುರಿಯದ ಆಕೆ ರೋಗದಿಂದ ನರಳುತ್ತ ಅಲೆದಾಡುತ್ತಿದ್ದಾಗ ಚಿಕ್ಕಯ್ಯ ಮತ್ತು ಜೋಗಯ್ಯ ಎಂಬ ಶರಣರು ಸಿಗುತ್ತಾರೆ. ಅವರ ಕೃಪೆಯಿಂದ ಇವಳ ಶಾಪವಿಮೋಚನೆಯಾಗುತ್ತದೆ. ಆಗ ಅವಳು ಅವರನ್ನು ಪ್ರಾರ್ಥಿಸುತ್ತಾಳೆ. ಅನಂತರದಲ್ಲಿ ಮಹಾಮಹಿಮರಾದ ಆಕೆಯನ್ನು ಚಿಕ್ಕಯ್ಯ ಜೋಗಯ್ಯ ಪರಂಪರೆಯವರು ಇವಳನ್ನು ಸ್ತುತಿಸುತ್ತಾರೆ. ಈ ಪರಂಪರೆಯ ಸಂಪ್ರದಾಯವೇ ಚೌಡಿಕೆ.

ಮತ್ತೊಂದು ಪುರಾಣದಲ್ಲಿರುವ ಕಥೆ, ಬೇಟಾಸುರನೆಂಬ ರಾಕ್ಷಸನು ಜನರಿಗೆ ತುಂಬಾ ತೊಂದರೆ ಕೊಡುತ್ತಿದ್ದ. ಇದನ್ನು ತಿಳಿದ ರೇಣುಕೆಯು ಪರಶುರಾಮನಿಗೆ ಅವನನ್ನು ಕೊಲ್ಲಲು ತಿಳಿಸುತ್ತಾಳೆ. ಪರಶುರಾಮನು ಅವನನ್ನು ಕೊಂದು ಅವನ ನರಗಳಿಂದ ತಂತಿಯನ್ನು ಮಾಡಿ ಚೌಡಿಕೆಯನ್ನು ನುಡಿಸುತ್ತಾನೆ. ಹೀಗೆ ಬೇರೆ ಬೇರೆ ಕಥೆಗಳು ಪುರಾಣದಲ್ಲಿವೆ.

ಚೌಡಿಕೆ ರಚನೆ

ಚೌಡಿಕೆ ಮರ ತಂತಿ ಮತ್ತು ಚರ್ಮ ಮೂರು ಸೇರಿ ಮಾಡಿದ ವಾದ್ಯ. ಎರಡು ಅಥವಾ ಎರಡೂವರೆ ಅಡಿ ಉದ್ದದ ಹೊನ್ನೆ, ಬೇವು ಅಥವಾ ಮಾವಿನ ದಿಮ್ಮಿಯನ್ನು ಕೊರೆದು ಕೊಳಗವನ್ನು ಮಾಡಿ ಅದರ ಮೇಲೆ ಕುರಿಯ ಚರ್ಮವನ್ನು ಹೊದೆಸಿರುತ್ತಾರೆ. ಅದರ ಮಧ್ಯರಂಧ್ರದಿಂದ ಎಳೆದು ತಂದ ತಂತಿಯನ್ನು ದಂಡದ ತುದಿಗೆ ಕಟ್ಟಿರುತ್ತಾರೆ. ಶೃತಿಗೆ ತಕ್ಕಂತೆ ಬಿಗಿ ಸಡಿಲ ಮಾಡಬಹುದು. ಈ ತಂತಿಯನ್ನು ಕೊಳಗದ ಒಳಭಾಗದಲ್ಲಿ ಕೈಯಿಂದ, ಕಡ್ಡಿಯಿಂದ ಮೀಟಿದಾಗ ನಾದ ಹೊರಹೊಮ್ಮುತ್ತದೆ.

ವೇಷಭೂಷಣ

ಕಚ್ಚೆಪಂಚೆ, ತಲೆಗೆ ಬಿಳಿಪೇಟ, ಅದರ ಮೇಲೊಂದು ಕೋಟು, ಹಣೆಯಲ್ಲಿ ದೇವಿಯ ಭಂಡಾರ, ಕೊರಳಲ್ಲಿ ಮಣಿ, ಹೆಗಲಲ್ಲಿ ಜೋಳಿಗೆ ಹಾಕಿರುತ್ತಾರೆ.



ಚೌಡಿಕೆ

ಜೋಗಯ್ಯಗಳು ಈ ಧಿರಿಸ ನ್ನು ಧರಿಸುತ್ತಾರೆ. ಜೋಗತಿಯರು ಹಸಿರು ಅಥವಾ ಹಳದಿ ಬಣ್ಣದ ಸೀರೆ ಕುಪ್ಪಸ, ಕೈ ತುಂಬಾ ಹಸಿರು ಗಾಜಿನ ಬಳೆ, ಹಣೆಯಲ್ಲಿ ದೊಡ್ಡದಾದ ಕುಂಕುಮ ಭಂಡಾರ, ತಲೆತುಂಬಾ ಹೂವು, ಕಾಲಿಗೆ ಗೆಜ್ಜೆ, ತಲೆಯ

ಮೇಲೆ ದೇವಿಯ ಪ್ರತೀಕವಾದ ಅಡ್ಡಣಿಗೆ, ಇಲ್ಲವೆ ಬಿಂದಿಗೆ ಇರುತ್ತದೆ. ಬಿಂದಿಗೆ ತಾಮ್ರದ್ದಾಗಿದ್ದು; ಅದನ್ನು ನವಿಲುಗರಿಗಳಿಂದ ಅಲಂಕರಿಸುತ್ತಾರೆ. ಅದರ ಮುಂಭಾಗ್ಗಕೆ ಯಲ್ಲಮ್ಮನ ಮೂರ್ತಿಯನ್ನಿಟ್ಟು ಅಲಂಕರಿಸುತ್ತಾರೆ. ಚೌಡಿಕೆ ಕಲಾವಿದರಲ್ಲಿ ಎರಡು ವಿಧಗಳುಂಟು. ಒಂದು ಧಾರ್ಮಿಕ ಸಂಪ್ರದಾಯದವರು, ಇನ್ನೊಂದು ಲೌಕಿಕ ಸಂಪ್ರದಾಯದವರು. ಧಾರ್ಮಿಕ ಸಂಪ್ರದಾಯದವರು ಯಲ್ಲಮ್ಮನ ಭಕ್ತರಾಗಿ, ದೀಕ್ಷೆ ಪಡೆದು, ವಿಧಿಬದ್ಧರಾಗಿ ದೇವಿ ಕಥೆಯನ್ನು ಹಾಡುತ್ತಾ ಊರಾಡುತ್ತಾರೆ. ಭಿಕ್ಷೆ ಅವರ ಉದ್ಧೇಶವಲ್ಲ. ಬದುಕುವುದಕ್ಕಾಗಿ ಅಷ್ಟೇ. ದೇವಿಯ ಪಂಥದ ಪ್ರಚಾರ ಇಲ್ಲಿ ಮುಖ್ಯವಾಗಿರುತ್ತದೆ. ಇನ್ನು ಲೌಕಿಕ ಸಂಪ್ರದಾಯದವರು ಯಲ್ಲಮ್ಮನ ಭಕ್ತರಾದರೂ ವಿಧಿಬದ್ಧ ಸೇವಕರಲ್ಲ. ಯಲ್ಲಮ್ಮನ ಕಥೆ ಜೊತೆ ಕಥನಗೀತೆ ಯಲ್ಲಮ್ಮನ ಮಹಿಮೆ, ಬಾಲನಾಗಮ್ಮ ಭಿಕ್ಷುರಾಜ, ಚೂಡಾಮಣಿ ಹೀಗೆ ಹಲವು ಕಥನ ಕಾವ್ಯಗಳನ್ನು ಹಾಡುತ್ತಾರೆ.

ಚೌಡಿಕೆಯಲ್ಲೂ ಗಂಡಸರ ಮೇಳ, ಹೆಂಗಸರ ಮೇಳಗಳಿವೆ. ಹೆಂಗಸರ ಮೇಳ ಉತ್ತರ ಕರ್ನಾಟಕದಲ್ಲಿ ಕಂಡು ಬಂದರೆ, ಗಂಡಸರ ಚೌಡಿಕೆ ಮೇಳ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎರಡು ಭಾಗದಲ್ಲೂ ಕಂಡು ಬರುತ್ತದೆ. ಗಂಡಸರ ಚೌಡಿಕೆ ಮೇಳದಲ್ಲಿ ಮೂರು ಜನ ಗಂಡಸರಿರುತ್ತಾರೆ. ಮುಖ್ಯಗಾಯಕ ಚೌಡಿಕೆಯನ್ನು, ಉಳಿದವರು ತಾಳ ಮತ್ತು ತುಂತುಣಿಗಳನ್ನು ನುಡಿಸುತ್ತಾರೆ. ಚೌಡಿಕೆಯನ್ನು ಎಡತೋಳಿನ ಮಧ್ಯದಲ್ಲಿ ಹಿಡಿದು ನುಡಿಸುತ್ತಾರೆ. ಪಕ್ಕವಾದ್ಯಗಳು ಕೂಡ ಇವರಿಗೆ ಜೊತೆ ನೀಡುತ್ತವೆ.
ಚೌಡಿಕೆ ನುಡಿಸುವಾಗ ಹಾಡಿನ ಮೇಳಕ್ಕನುಗುಣವಾಗಿ ನರ್ತಿಸುತ್ತಾರೆ. ಮುಮ್ಮೇಳ ಹಾಡುವಾಗ ಮುಖ್ಯ ಗಾಯಕನೆ ಚೌಡಿಕೆಯನ್ನು ಹಿಡಿದಿರುತ್ತಾನೆ.

ಚೌಡಿಕೆ ಕಲಾವಿದೆ ರಾಧಾಬಾಯಿ ಮಾದರ

ಬೆಳಗಾವಿ ಜಿಲ್ಲೆಯ ಎಲ್ಲಮ್ಮ ವಾಡಿಯ ಕೊಕಟನೂರಿನ ರಾಧಾಬಾಯಿ ಮಾದರ ತನ್ನ ಚೌಡಿಕೆ ಪದಗಳಿಂದ ನಾಡಿಗೆ ಮನೆ ಮಾತಾಗಿದ್ದಾರೆ. ಚೌಡಿಕೆ ಕಲೆಯಲ್ಲಿ ರಾಧಾಬಾಯಿ ಮಾದರ ಎತ್ತಿದ ಕೈ ಅಥಣಿ ತಾಲೂಕಿನ ಕೊಕಟನೂರಿನ ಎಲ್ಲಮ್ಮವಾಡಿ ಶ್ರೀ ರೇಣುಕಾ ದೇವಿ ಚೌಡಿಕೆ ಜಾನಪದ ಕಲಾ ತಂಡ ಕಟ್ಟಿಕೊಂಡು ನಡೆಸಿಕೊಂಡು ಬರುತ್ತಿದ್ದಾರೆ. ಆಮೇಲೆ ಚಿಕ್ಕವರಿರುವಾಗಲೇ ಅಂದರೆ ಸುಮಾರು ೫ ವರ್ಷದವರಿರುವಾಗ ಚೌಡಿಕೆ ಕಲೆಯನ್ನು ಸಿದ್ದಿಸಿಕೊಳ್ಳಲು ಮುಂದಾದರು. ಇವರ ತಂದೆ ಮಾರುತಿ ಎಲ್ಲಪ್ಪ ಮಾದರ ಅವರೆ ಗುರುಗಳು. ಇವರಿಗೆ ಮೂರು ಹೆಣ್ಣುಮಕ್ಕಳು ಮತ್ತು ಎರಡು ಗಂಡು ಮಕ್ಕಳಿದ್ದಾರೆ. ರೇಣುಕಾ ದೇವಿಯ ಆರಾಧನಾ ಗೀತೆಯನ್ನು ಚೌಡಿಕೆ ನುಡಿಸುತ್ತಾ, ಜೊತೆಗೆ ಹಾಡಲು ಆಸಕ್ತಿವಹಿಸುತ್ತಿದ್ದ ರಾಧಾಬಾಯಿ ಅವರನ್ನು ಬೆಳೆಸಿದ್ದು ಸ್ಥಳೀಯ ಸಂಘ ಸಂಸ್ಥೆಗಳು.

ಸಾಮಾಜಿಕವಾಗಿ :

ಕೊಕಟನೂರಿನ ಮಾರುತಿಮಾದರ ಮತ್ತು ಸೀತವ್ವ ದಂಪತಿಗಳಿಗೆ ನಾಲ್ಕು ಮಕ್ಕಳು. ಅದರಲ್ಲಿ ಎರಡು ಹೆಣ್ಣು ಮಕ್ಕಳು ಮತ್ತು ಎರಡು ಗಂಡು ಮಕ್ಕಳು. ಆ ದಿನಗಳಲ್ಲಿ ಮಾರುತಿಮಾದರ ಅವರು ನಿಪುಣ ಚೌಡಿಕೆ ಕಲಾವಿದರಾಗಿದ್ದರು. ಅವರಿಗೆ ಚೌಡಿಕೆ ಎಂದರೆ ಅತೀವ ಪ್ರೀತಿ. ತಮ್ಮ ವಂಶಪಾರಂಪರ್ಯವಾಗಿ ಬಂದಿರುವ ಈ ಕಲೆಯನ್ನು ಮುಂದುವರಿಸಿಕೊಂಡು ಹೋಗಲೇಬೇಕೆಂಬ ಹೆಬ್ಬಯಕೆ. ಹೀಗಾಗಿ ಇವರು ಎರಡು ಗಂಡು ಮಕ್ಕಳಿಗೂ ಕಲೆಯನ್ನು ಹೇಳಿಕೊಡಲು ಆರಂಭಿಸಿದರು. ಆದರೆ ಆ ಮಕ್ಕಳಿಗೆ ಇದು ತಲೆಗೆ ಹತ್ತಲಿಲ್ಲ. ಚಿಂತಾಕ್ರಾಂತರಾದ ಇವರು ತಮ್ಮ ಹೆಂಡತಿಯಾದ ಸೀತವ್ವಗೆ ಗಂಡು ಮಕ್ಕಳಿಗೆ ಈ ಕಲೆ ಒಲಿಯುವುದಿಲ್ಲವೆಂದು ಹೇಳುತ್ತಾರೆ. ಆಗ ಸೀತವ್ವ ಅವರಿಗೆ ಒಲಿಯದಿದ್ದರೇನಂತೆ ಹೆಣ್ಣು ಮಕ್ಕಳಿಗಾದರೂ ಹೇಳಿಕೊಡಬಹುದಲ್ಲಾ...? ಎಂದಾಗ, ಇವರು ಕೂಡಲೇ ಕಾರ್ಯಪ್ರವೃತ್ತರಾಗುತ್ತಾರೆ. ಇಬ್ಬರು ಹೆಣ್ಣು ಮಕ್ಕಳಲ್ಲಿ ಒಬ್ಬರು ರಾಧಾಬಾಯಿಯಾದರೆ, ಇನ್ನೊಬ್ಬಳು ಲಕ್ಷ್ಮೀಬಾಯಿ.

ಇನ್ನು ಏನ್ನನ್ನೂ ಅರಿಯದ ಈ ಮುದ್ದು ಕಂದಮ್ಮಗಳಿಗೆ ಐದು ವರ್ಷವಿರುವಾಗಲೇ ಜೋಗತಿಯ ಮುತ್ತನ್ನು ಹಾಕಿ, ದೀಕ್ಷೆಯನ್ನು ನೀಡಿ ಚೌಡಿಕೆಯನ್ನು ಕೈಯಲ್ಲಿ ಕೊಟ್ಟರು. ದಿನಕ್ಕೆ ಒಂದು ಹಾಡಿನಂತೆ ಅಪ್ಪ ಹೇಳಿಕೊಡುವಾಗ ಈ ಮಕ್ಕಳು ಕಲಿಯುತ್ತಿದ್ದರಂತೆ. ಕಲಿಯದಿದ್ದರೆ ಬಾಸುಂಡೆ ಬೀಳುತ್ತವೆ ಎಂಬ ಹೆದರಿಕೆಯಿಂದಲೇ ಅಂಜಿ ಕಲಿಯುತ್ತಿದ್ದರಂತೆ. ಆನಂತರ ತಂದೆಯೊಂದಿಗೆ ಮನೆ ಮನೆಗೆ ಹೋಗಿ ಭಿಕ್ಷೆ ಬೇಡುವುದು ಈ ಮಕ್ಕಳಿಗೆ ಸಾಮಾನ್ಯವಾಗಿ ಹೋಯಿತು. ಇದರಲ್ಲಿ ರಾಧಾಬಾಯಿ ಮಾದರ ತುಂಬಾ ಚುರುಕಾಗಿ ಹಾಡನ್ನು ಕಲಿತು, ಚೌಡಿಕೆಯನ್ನು ನುಡಿಸಿ ಜನರನ್ನು ಆಕರ್ಷಿಸುತ್ತಿದ್ದಳು. ರಾಧಾಬಾಯಿಯ ಹಾಡಿಗಾಗಿಯೋ ಏನೋ ಮನೆಯವರು ಕಾಣಿಕೆಯಾಗಿ ನೀಡುವ ದವಸಧಾನ್ಯಗಳಲ್ಲಿ ಜೀವನ ನಿರ್ವಹಣೆ ಆರಾಮದಾಯಕವಾಗಿಯೇ ಸಾಗುತ್ತಿತ್ತು. ನಂತರದ ದಿನಗಳಲ್ಲಿ ರಾಧಾಬಾಯಿ ಒಂದು ಕಡೆ ಭಿಕ್ಷಾಟನೆಗೆ ಹೊರಟರೆ, ತಂದೆ ಮತ್ತು ಲಕ್ಷ್ಮೀಮಾದರ ಅವರು ಇನ್ನೊಂದು ಕಡೆಗೆ ಭಿಕ್ಷಾಟನೆಗೆ ಹೋಗುತ್ತಿದ್ದರು. ತಂದೆಗೆ ವಯಸ್ಸಾದ ನಂತರ ಅವರು ಮನೆಯಲ್ಲೇ ಉಳಿದರು. ಅಣ್ಣಂದಿರು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಆಗ ಸ್ವಲ್ಪ ಜೀವನ ನಿರ್ವಹಣೆ ಕಷ್ಟವಾಯಿತು. ಏಕೆಂದರೆ ಆಧುನಿಕತೆ ಆಗಷ್ಟೇ ದಾಪುಗಾಲಿಡುತ್ತಿತ್ತು. ಇವರು ಭಿಕ್ಷೆಗೆ ಹೋದಾಗ, ಹಿರಿಯ ತಲೆಮಾರಿನ ಜನ ಇರದೇ ಅವರ ಮಕ್ಕಳು ಇವರನ್ನು ಉಪೇಕ್ಷಿಸಿ ಏನನ್ನೂ ಕೊಡುತ್ತಿರಲಿಲ್ಲ. ಆಗ ಇವರ ಜೀವನ ನಿರ್ವಹಣೆ ಕಷ್ಟವಾಗುತ್ತಿತ್ತು. ಆ ಸಮಯದಲ್ಲೇ ರಾಧಾಬಾಯಿ ಮಾದರ ಅವರು ಯಾವುದೋ ಸಣ್ಣ-ಪುಟ್ಟ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ತಮ್ಮದೇ ಆದ ಒಂದು ಸ್ವಂತ ತಂಡವನ್ನು ಕಟ್ಟಿಕೊಂಡರು. ರಾಧಾಬಾಯಿ ಕಾರ್ಯಕ್ರಮಗಳನ್ನು ನೀಡುತ್ತಾ, ಸ್ವತಂತ್ರವಾಗಿ

ಬದುಕಿನ ಹೋರಾಟವನ್ನು ನಡೆಸುತ್ತಾ ತಮ್ಮನ್ನು ತಾವು ನೋಡಿಕೊಳ್ಳುತ್ತಿದ್ದರು ಮತ್ತು ತಮ್ಮ ತಂಡದಲ್ಲಿದ್ದ ಸಹಕಲಾವಿದರನ್ನು ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ಜಾನಪದ ಲೋಕದ ರೂವಾರಿಯಾದ ಹೆಚ್.ಎಲ್. ನಾಗೇಗೌಡರ ಕಣ್ಣಿಗೆ ಬಿದ್ದರು. ಅಲ್ಲಿಂದ ಇವರ ಚೌಡಿಕೆ ಪದದ ಗತಿ ಬದಲಾಯಿತು. ನಾಡಿನಲ್ಲಿ ಹೆಚ್ಚಿನ ಜನಮನ್ನಣೆ ಗಳಿಸಿದರು. ರಾಜ್ಯೋತ್ಸವ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡರು.

ಇಂದು ರಾಧಾಬಾಯಿ ಮಾದರ ನೊಂದ ಎಲ್ಲಾ ಹೆಣ್ಣುಮಕ್ಕಳಿಗೆ ಹೇಳುವುದೇನೆಂದರೆ ಬರುವ ಕಷ್ಟಕೋಟಲೆಗಳನ್ನು ಎದುರಿಸಿಯೇ ನಾವು ನಮ್ಮ ಜೀವನಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕು ಎನ್ನುತ್ತಾರೆ. ಇಂದು ಇವರು ಸತತ ಪರಿಶ್ರಮದಿಂದ ನಾಡಿನಾದ್ಯಂತ ಚೌಡಿಕೆಯಲ್ಲೇ ಒಳ್ಳೆಯ ಕಲಾವಿದೆ ಎನಿಸಿಕೊಂಡಿದ್ದಾರೆ. ಇವರಿಗೆ ರಾಜ್ಯಪ್ರಶಸ್ತಿ ಕೂಡಾ ದೊರೆತಿದೆ.

ಸಾಂಸ್ಕೃತಿಕವಾಗಿ :

ಜೋಗತಿಯರು ದೀಕ್ಷೆಯನ್ನು ಪಡೆಯುವುದೆಂದರೆ ಸಂಪ್ರದಾಯವನ್ನು ಪ್ರಚಾರ ಮಾಡಲು ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆಂದೇ ಅರ್ಥ. ಜೋಗತಿ ದೀಕ್ಷೆಯು ಪೂಜಾರಿಯ ಮನೆಯಲ್ಲಿ ನಡೆಯುತ್ತದೆ. ಜೋಗತಿಯರು ದೀಕ್ಷೆಗೂ ಮುನ್ನ ಮೂರು ಹೊಂಡಗಳಲ್ಲಿ ಮಿಂದು ಬರುತ್ತಾರೆ. ನಂತರ ಹಿರಿಯ ಜೋಗತಿಯರೊಂದಿಗೆ ಸಂಬಂಧಿಕರೊಂದಿಗೆ ವಾದ್ಯಮೇಳದ ಜೊತೆ ಹೋಗುತ್ತಾರೆ. ಪೂಜಾರಿಯ ಮನೆಯಲ್ಲಿ ರೇಣುಕಾದೇವಿ ಪರಶುರಾಮನನ್ನು ಪೂಜಿಸುತ್ತಾರೆ. ಹಿರಿಯ ಜೋಗತಿಯರು ಹೊಸ ಜೋಗತಿಗೆ ಹೂವಿನ ಹಾರ ಹಾಕುತ್ತಾರೆ. ಐದು ಮನೆಗಳಿಗೆ ಹೋಗಿ ಭಿಕ್ಷೆ ಬೇಡಬೇಕು. ಐದು ದಿನಗಳ ಕಾಲ, ಮಾದಿಗರ ಮನೆಯ ಮಾತಂಗಿ ಕಟ್ಟೆಯ ನೀರಿನಿಂದ ಶುದ್ಧಗಳಾಗಬೇಕು. ಜೊತೆ-ಜೊತೆಗೆ ಬಡವರಿಗೆ ಊಟ ನೀಡುತ್ತಿರಬೇಕು. ದೀಕ್ಷೆಯ ಸಂದರ್ಭದಲ್ಲಿ ಮೂರು ರೀತಿಯ ಉಡುಪುಗಳನ್ನು ಧರಿಸುವುದಾಗಿ ದೇವರಲ್ಲಿ ಬೇಡಿಕೊಂಡಿರುತ್ತಾರೆ. ದಿಗಂಬರರಾಗುವುದು, ಬೇವಿನ ಉಡುಗೆ, ವಸ್ತ್ರದ ಉಡುಗೆಗಳು ಈ ಮೂರು ರೀತಿಯ ಉಡುಗೆಯವರು ಜೋಗುಳ ಬಾವಿಯಿಂದ ದೇವಾಲಯದವರೆಗೆ ಸಂಬಂಧಿಕರೊಂದಿಗೆ ಬರುತ್ತಾರೆ. ದೇವಾಲಯ ತಲುಪಿದ ನಂತರ ಉಡುಪು ಬದಲಾಯಿಸಿ ಮತ್ತೆ ಪವಿತ್ರ ಸ್ನಾನ ಮಾಡುತ್ತಾರೆ.

ಹಿಂದೆ ಚೌಡಿಕೆ ಕಲಿಯುವಾಗ, ಜೋಗತಿ ಮುತ್ತನ್ನು ಹಾಕಿರಬೇಕೆಂಬ ಸಂಪ್ರದಾಯವಿತ್ತು. ಜೋಗತಿಯರನ್ನು ಮುತ್ತಿನ ಆಧಾರದ ಮೇಲೆ ಗುರುತಿಸುತ್ತಿದ್ದರು. ಬಿಳಿ ಬಣ್ಣದ ಮುತ್ತು ಧರಿಸುವವರು ಗರತಿಯರು. ಇವರು ಯಾವಾಗ ಬೇಕಾದರೂ ಮದುವೆಯಾಗಬಹುದು. ಈ ಮುತ್ತು ಧರಿಸುವವರಿಗೆ ಯಾವುದೇ ರೀತಿಯ ಜಾತಿಯ

ನಿರ್ಬಂಧವಿರಲಿಲ್ಲ. ಇದನ್ನು ಎಲ್ಲಾ ಜಾತಿಯವರು ಧರಿಸುತ್ತಾರೆ. ಕೆಂಪು ಬಣ್ಣದ ಮುತ್ತನ್ನು ಧರಿಸುವವರನ್ನು ವೇಶ್ಯೆಯೆಂದು ಕರೆಯುತ್ತಾರೆ. ಈ ಜೋಗತಿಯರನ್ನು ಬಸವಿ ಬಿಡುತ್ತಾರೆ. ಇದು ಸಾಮಾನ್ಯವಾಗಿ ಹಿಂದುಳಿದ ಜಾತಿಯಲ್ಲಿ ರೂಢಿಯಲ್ಲಿದೆ. ಬಿಳಿ ಮತ್ತು ಕೆಂಪು ಬಣ್ಣದ ಮಿಶ್ರ ಮುತ್ತುಗಳನ್ನು ಧರಿಸುವವ ಜೋಗತಿಯರು ದೇವಾಲಯದಲ್ಲಿ ಮಂಗಳಾರತಿಯನ್ನು ಹಿಡಿಯುತ್ತಾರೆ. ದೇವಾಲಯದ ನಿರ್ವಹಣೆಯನ್ನು ಮಾಡುವುದು ಇವರ ಕೆಲಸವಾಗಿರುತ್ತದೆ.

ಯಲ್ಲಮ್ಮನ ಭಕ್ತರಾದ ಜೋಗಿಗಳಲ್ಲಿ ಜಗಹೊತ್ತ ಜೋಗಿ, ಕೊಡದ ಜೋಗಿ ಎಂಬ ಎರಡು ಪಂಥಗಳಿವೆ. ಈ ಎರಡರಲ್ಲಿಯೂ ಸ್ತೀ ಪುರುಷರಿಬ್ಬರು ಇರುತ್ತಾರೆ. ಪುರುಷರು ದೀಕ್ಷೆ ಪಡೆದು ಸ್ತ್ರೀಯೆ ಆಗಿ ಬಿಡುವುದು ಒಂದು ಕ್ರಮ. ದೀಕ್ಷೆ ಪಡೆದು ಪುರುಷರಂತೆ ಇರುವವರಿದ್ದಾರೆ. ಹೆಂಗಸರು ದೀಕ್ಷೆ ಪಡೆದು ಮುದುವೆಯಾಗದೆ ದೇವರ ಹೆಸರಿನಲ್ಲಿಯೇ ಇರುತ್ತಾರೆ. ಕೆಲವರು ದೀಕ್ಷೆ ಪಡೆದು ಸಂಸಾರಸ್ಥರಾಗಿದ್ದಾರೆ. ಇದರಲ್ಲಿ ಜಗಹೊತ್ತವರು ಇದಕ್ಕೆ ಹಡ್ಲಗೆ ಎನ್ನುತ್ತಾರೆ. ಹಡ್ಲಗೆ ಎಂದರೆ ಬಿದುರಿನ ಬುಟ್ಟಿ. ಈ ಬುಟ್ಟಗೆ ಅಲ್ಲಲ್ಲಿ ಬಳೆ ಮತ್ತು ನಾಗಹೆಡೆಗಳನ್ನು ಸಿಕ್ಕಿಸಿರುತ್ತಾರೆ. ಇದನ್ನು ಹೊತ್ತು ಜೋಗಪ್ಪ ಜೋಗಮ್ಮಗಳು ಭಿಕ್ಷೆಗೆ ಹೋಗುತ್ತಾರೆ. ಜಗವನ್ನು ಹೊತ್ತ ಜೋಗ ಜೋಗತಿಯರ ಅದರ ಸಮತೋಲವನ್ನು ಕಾಪಾಡಿಕೊಳ್ಳುತ್ತಾರೆ. ಕೂರುವಾಗ, ಏಳುವಾಗ, ನಡೆಯುವಾಗ ಕೂಡ ಅದನ್ನು ಅವರು ಕೈಯಲ್ಲಿ ಹಿಡಿಯುವುದಿಲ್ಲ. ಇವರು ಕುಣಿಯುವಾಗ ಹೆಚ್ಚು ರಭಸವಾಗಿರುತ್ತದೆ. ಮೂವರಿಗಿಂತ ಹೆಚ್ಚು ಜನ ಜೋಗತಿಯರು ಒಟ್ಟಾದಾಗ ಬಿರುಸಿನ ಸವಾಲಿನ ಕುಣಿತ ಏರ್ಪಡುತ್ತದೆ. ಕುಣಿಯುತ್ತಾ ಕುಣಿಯುತ್ತಾ ಮೈದುಂಬಿ ಜೋಗತಿಯರು ರಭಸವಾದಷ್ಟು ಕುಣಿತವನ್ನು ಗೌಣವಾಗಿಸಿ ದೇವಿಯ ಜೊತೆ ಸಂಭಾಷಿಸುತ್ತಾ ಅವಿನಾಭಾವ ಸಂಬಂಧ ಏರ್ಪಡಿಸಿಕೊಳ್ಳುತ್ತಾರೆ.

ಜಾನಪದ ಲೋಕದ ರೂವಾರಿಯದ ಶ್ರೀ.ಎಚ್.ಎಲ್. ನಾಗೇಗೌಡರು ಇವರನ್ನು ಗುರುತಿಸಿ ತಾವು ನಿರ್ಮಾಣ ಮಾಡುತ್ತಿದ್ದ 'ಜಾನಪದ ಸಂಚಿಕೆ ಸಿರಿಗಂಧ' ಕಾರ್ಯಕ್ರಮಕ್ಕೆ ಅರ್ಧ ಗಂಟೆಯ ಕಿರುಚಿತ್ರವನ್ನು ದಾಖಲಿಸಿಕೊಂಡರು. ಇದು ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗಿ ಅನೇಕ ಕಾರ್ಯಕ್ರಮಗಳು ದೊರೆತವು. ೧೯೯೪ರಲ್ಲಿ ಧಾರವಾಡ ಆಕಾಶವಾಣಿಯಲ್ಲಿ ಎ ಗ್ರೇಡ್ ಕಲಾವಿದರಾಗಿ ಆಯ್ಕೆ ಆದರು. ಇಂದಿಗೂ ಕೂಡ ರೇಡಿಯೋದಲ್ಲಿ ಈಕೆಯ ಚೌಡಿಕೆ ಪದಗಳು ಪ್ರಸಾರವಾಗುತ್ತಿವೆ. ಚೌಡಿಕೆ ಕಲೆಗೆ ಚೌಡಿಕೆ ಬಹಳ ಮುಖ್ಯವಾದ ವಾದ್ಯ ಪರಿಕರ. ಇದರೊಂದಿಗೆ ಶೃತಿಗಾಗಿ ತಾಳ ಡೋಲಕ್‌ಗಳನ್ನು ನುಡಿಸಲಾಗುತ್ತದೆ. ಚೌಡಿಕೆಯನ್ನು ಬಗಲಿಗೆ ಹಾಕಿಕೊಂಡು ಹಾಡಲು ನಿಂತರೆ, ಪ್ರೇಕ್ಷಕರ ಮೈಜುಂ ಎನ್ನುತ್ತದೆ. ದಸರಾ ಉತ್ಸವ ಗಡಿನಾಡು ಉತ್ಸವ ಅಖಿಲ ಕರ್ನಾಟಕ ಜಾನಪದ ಮೇಳ, ಕಿತ್ತೂರು ಉತ್ಸವ, ಜಾನಪದ ಜಾತ್ರೆ, ವಿಶ್ವಕನ್ನಡ

ಸಮ್ಮೇಳನ, ವಿವಿಧ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಚೌಡಿಕೆ ನುಡಿಸಿ ರಾಧಾಬಾಯಿ ತಂಡ ಭೇಷ್ ಎನಿಸಿಕೊಂಡಿದೆ. ಕರ್ನಾಟಕ ಸರಕಾರ ಇವರಿಗೆ ಕರ್ನಾಟಕ ರತ್ನಶ್ರೀ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿವೆ. ನಾಡಿನ ಮೇರುನಟ ಡಾ.ರಾಜ್‌ಕುಮಾರ್ ಅವರ ಕುರಿತು ಹಾಡನ್ನು ರಚಿಸಿ, ಬೆಂಗಳೂರಿನಲ್ಲಿ ಡಾ.ರಾಜ್ ಉಪಸ್ಥಿತಿಯಲ್ಲಿ ನಡೆದ ಸಮಾರಂಭದಲ್ಲಿ ಹಾಡಿ ಅವರಿಂದ ಬೆನ್ನು ತಟ್ಟಿಸಿಕೊಂಡ ಹೆಗ್ಗಳಿಕೆ ಇವರದು. ಇವರ ತಂಡ ಹಾಡಲು ನಿಂತರೆ ಪ್ರೇಕ್ಷಕ ವರ್ಗ ಮುಂದೆ, ಯಾವ ಚೌಡಿಕೆ ಪದ ಹಾಡುತ್ತಾರೆ ಎಂದು ಕಾಯುತ್ತಿರುತ್ತಾರೆ. ಮೊದಲನೆ ಹಾಡಿನಲ್ಲಿ ಯಾರನ್ನ ನೆನೆಯಲಿ ಗೌರಿ ಮಗ ಗಣಪನ್ನ, ಗೌರಿಮಗ ಗಣಪನ್ನ ನೆನೆದರೆ ಬರಲಾರದ ಹಾಡು ಬರತಾವ ಎಂಬ ಪದದಿಂದ ಆರಂಭಿಸುತ್ತಾರೆ. ನಂತರ ಹುಟ್ಟಿ ಬಂದೆ ಯಲ್ಲಮ್ಮನಾಗಿ, ಏಳುಕೊಳ್ಳದಲ್ಲಿರುವ ಯಲ್ಲಮ್ಮನ ಜಾತ್ರಿ ನೋಡೋಣ ಬಾ ಸೇರಿದಂತೆ ಹಲವಾರು ರೀತಿಯ ಪದಗಳನ್ನು ಹಾಡಿ ಅಭಿಮಾನಿ ವರ್ಗವನ್ನು ರಂಜಿಸುತ್ತಾರೆ.

ಆರ್ಥಿಕವಾಗಿ :

ಊರೂರು ಸುತ್ತಾತ್ತ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಾ, ಅನೇಕ ವಿದ್ವಾಂಸರ ಸಹೃದಯರ ಮೆಚ್ಚುಗೆಯನ್ನು ಪಡೆದ ಈ ಕಲಾವಿದೆ ಒಂದು ದಿನ ತಾನು ಜೋಗತಿ ಪಟ್ಟವನ್ನು ಕಿತ್ತು ತನ್ನೊಡನೆ ಎಲ್ಲಾ ಕಾರ್ಯಕ್ರಮಗಳಿಗೂ ಜೊತೆಯಾಗಿ ಬೆನ್ನುಲೆಬಾಗಿದ್ದ ಮೃತ್ಯುಂಜಯರವರನ್ನು ಮದುವೆಯಾಗಿ ಇಂದು ತಮ್ಮದೇ ಆದ ಪುಟ್ಟ ಸಂಸಾರವನ್ನು ಮಾಡಿಕೊಂಡಿದ್ದಾರೆ. ಎಲ್ಲರಂತೆ ಸಾಮಾನ್ಯ ಬದುಕನ್ನು ನಡೆಸುತ್ತಿದ್ದಾಳೆ. ಇವರ ಪತಿ ಮೃತ್ಯುಂಜಯ ಇವರು ಕೂಡ ಜನಪದ ಕಲಾವಿದರು, ಆರ್ಥಿಕವಾಗಿ ತೀರಾ ಹಿಂದುಳಿದ ಈ ಕಲಾವಿದೆಗೆ, ಸರಕಾರದಿಂದ ಸಂಘ ಸಂಸ್ಥೆಗಳು ಕಾರ್ಯಕ್ರಮಕ್ಕೆ ಕೊಡುವ ಗೌರವ ಸಂಭಾವನೆಯಿಂದ ಮಾತ್ರ ಜೀವನ ನಿರ್ವಹಣೆ ಆಗಬೇಕಿದೆ. ಇವರಿಗೆ ಇಬ್ಬರು ಮಕ್ಕಳು. ಒಬ್ಬ ಐಟಿಐ ಮಾಡಿ, ಬೆಂಗಳೂರಿನಲ್ಲಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಇರುವ ಒಬ್ಬಳು ಮಗಳು ಬಿ.ಎ. ಓದುತ್ತಿದ್ದಾಳೆ. ಕಲೆಯನ್ನೇ ನಂಬಿ ಬದುಕುತ್ತಿರುವ ಇವರಿಗೆ ನಿಜಕ್ಕೂ ಜೀವನ ನಿರ್ವಹಣೆ ದುಸ್ತರವಾಗಿದೆ. ನುರಿತ ಕಲಾವಿದರಿಗೆ ಸರಕಾರ ವಿಶೇಷ ಯೋಜನೆಯೊಂದನ್ನು ರೂಪಿಸಿ, ಸಹಾಯಧನ ನೀಡಬೇಕು ಎನ್ನುತ್ತಾರೆ. ಈ ಕಲೆಯ ರಕ್ಷಣೆಗೆ ಸರಕಾರ ಕಾಳಜಿ ವಹಿಸಬೇಕಿದೆ ಎನ್ನುತ್ತಾರೆ. ದೇವದಾಸಿ ಪದ್ಧತಿಯ ಹಿನ್ನಲೆಯಾಗಿ ಬಂದಿರುವ ಕಾರಣದಿಂದ ಚೌಡಿಕೆಯನ್ನು ಕಲಿಯಲು ಯಾವ ಹೆಣ್ಣು ಮಕ್ಕಳು ಮುಂದೆ ಬರುವುದಿಲ್ಲವೆಂದು ಅಳಲು ತೋಡಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಗಂಡಸರ ಚೌಡಿಕೆ ಮೇಳ ನಾಲ್ಕು ತಂಡಗಳಿವೆ. ಚೌಡಿಕೆಯ ಈ ನಾಲ್ಕು ತಂಡಗಳು ಮುಂಚೂಣಿಯಲ್ಲಿವೆ. ಈ ತಂಡಗಳಿಗೆ ಸಮಸಮವಾಗಿ ಕಾರ್ಯಕ್ರಮ ಸಿಗುತ್ತವೆ.

ದೃಶ್ಯಮಾಧ್ಯಮದಲ್ಲಿ ಚೌಡಿಕೆ

ಜನಪದ ಕಲೆಯಾದ ಚೌಡಿಕೆ ಗೀತ, ವಾದ್ಯ ಮತ್ತು ನರ್ತನದಿಂದ ಕೂಡಿದ ಕಲೆ. ಬಲು ಅಪರೂಪದ ಕಲೆ. ದೃಶ್ಯಮಾಧ್ಯಮದಲ್ಲಿ ಚೌಡಿಕೆ ನುಡಿಸುವಾಗ ಬರುವ ಮಾಧುರ್ಯಕ್ಕೆ ಜನ ಮನಸೋತಿದ್ದಾರೆ. ಹುಟ್ಟಿಬಂದೆ ಎಲ್ಲಮ್ಮನ್ನಾಗಿ ಎಂದು ಹಾಡುವ ಚೌಡಿಕೆಯವರು, ವೀಕ್ಷಕರಿಗೆ ತಮಗರಿವಿಲ್ಲದೆಯೇ ಹಾಡುಗಳನ್ನು ಕೇಳುವಂತೆ ಪ್ರಚೋದಿಸುತ್ತಾರೆ. ಅಲ್ಲದೇ ವೀಕ್ಷಕರು ಕೂಡಾ ಅವರ ಹಾಡುವ ಹಾಡುಗಳನ್ನು ಆಸ್ವಾದಿಸುತ್ತಾರೆ. ಚೌಡಿಕೆಯನ್ನು ಹಿಡಿದು ಲಘುನರ್ತನದೊಂದಿಗೆ ಹಾಡುವ ಚೌಡಿಕೆಪದ ಎಲ್ಲರಿಗೂ ಮನರಂಜಿಸುತ್ತದೆ. ಚೌಡಿಕೆಯನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸುವುದು ಸ್ಪರ್ಧಾತ್ಮಕವಾಗಿ ಒಂದು ಸಾಹಸವೇ ಆಗಿರುತ್ತದೆ. ಏಕೆಂದರೆ ಚೌಡಿಕೆಯನ್ನು ಅದರ ರೂಪು-ರೇಷಗಳನ್ನು ದೃಶ್ಯಕ್ಕೆ ಅಳವಡಿಸುವಾಗ, ಅಚಾತುರ್ಯದಿಂದಾದರೂ ಯಾವುದೇ ಒಂದು ತಂತಿಯನ್ನು ಬಿಡುವಹಾಗಿಲ್ಲ. ಒಟ್ಟಾರೆಯಾಗಿ ಎಲ್ಲವನ್ನೂ ಚಿತ್ರೀಕರಿಸಬೇಕು. ಇದರಲ್ಲಿ ಕ್ಯಾಮೆರಾಮೆನ್‌ನ ಚಾಣಾಕ್ಷ್ಯತನ ಹೆಚ್ಚಾಗಿರುತ್ತದೆ. ಜನರಿಗೆ ಚೌಡಿಕೆ ನುಡಿಸುವಾಗ ಬರುವ ಶಬ್ಧವನ್ನು ತೋರಿಸುವುದು ಹರಸಾಹಸವೇ ಸರಿ. ಇದಕ್ಕೆಲ್ಲಾ ಪಕ್ವತೆಯನ್ನು ಹೊಂದಿರುವ, ವಿಷಯ ತಜ್ಞತೆಯಿಂದ ಕೂಡಿರುವ ಕ್ಯಾಮೆರಾಮನ್ ಇದ್ದರೆ ಚೆನ್ನಾಗಿರುತ್ತದೆ.

ಇದನ್ನು ನುಡಿಸಿ ಹಾಡುವ ಕಲಾವಿದ-ಕಲಾವಿದೆಯರು ಲಘು ನರ್ತನದಿಂದ ಕೂಡಿ ಏರುದನಿಯಲ್ಲಿ ಚೌಡಿಕೆ ಬಾರಿಸುತ್ತಾ ಹಾಡುತ್ತಾರೆ. ಹಿಮ್ಮೇಳದವರು ಇವರ ಏರುದನಿಗೆ, ಲಘುನರ್ತನಕ್ಕೆ ತಾಳ ಮತ್ತು ತುಂತುಣಿಗಳನ್ನು ನುಡಿಸಿ, ಚೌಡಿಕೆ ಪದವು ಇನ್ನಷ್ಟು ಇಂಪಾಗಿ ಕೇಳುವಂತೆ, ನೋಡುವಂತೆ ಮಾಡುತ್ತಾರೆ. ಚೌಡಿಕೆಯವರು ದೇವಿಯ ಹಾಡು ಕಥನಗಳೊಂದಿಗೆ ಇನ್ನಿತರ ಕಥನಗಳನ್ನು ಹಾಡುತ್ತಾರೆ. ದೃಶ್ಯಮಾಧ್ಯಮಕ್ಕೆ ಚಿತ್ರೀಕರಿಸುವಾಗ ಅವರು, ತಮ್ಮ ಕಥನ ಕಾವ್ಯಗಳನ್ನು ಸೀಮಿತ ಕಾಲಮಿತಿಗೆ ಅಳವಡಿಸಿಕೊಳ್ಳುತ್ತಾರೆ. ಯಾವ ಕಥೆ ಜನರಿಗೆ ಮನಸೆಳೆಯುತ್ತದೆಯೋ ಅಷ್ಟೇ ಭಾಗವನ್ನು ಪ್ರಮುಖವಾಗಿ ತೆಗೆದುಕೊಂಡು, ಚೌಡಿಕೆ ಬಾರಿಸಿ, ತಾಳ, ದಮಡಿಗಳ ಹಿನ್ನೆಲೆಗೆ ಅನುಗುಣವಾಗಿ ತಮ್ಮ ಹಾವಾಭಾವ, ಚಲನವಲನಗಳಿಂದ ಪ್ರೇಕ್ಷಕರ ಕಣ್ಣಿಗೆ ಕಟ್ಟುವಂತೆ, ಮನಮುಟ್ಟುವಂತೆ ರಂಜಿಸುತ್ತಾರೆ. ಪ್ರೇಕ್ಷಕರು ಕೂಡ ಆ ಕಷ್ಟಕೋಟಲೆಗಳು ತಮಗೇ ಬಂದವೇನೋ ಎಂಬಂತೆ, ತಾವು ಅನುಭವಿಸಿ ಕಥೆಯಲ್ಲಿ ತಲ್ಲೀನರಾಗುತ್ತಾರೆ. ಮಧ್ಯ ಮಧ್ಯ ಚೌಡಿಕೆಪದ, ಮಧ್ಯ ಮಧ್ಯ ಕಥೆ, ಲಘುನರ್ತನ ಇವೆಲ್ಲವೂ ಕೂಡಿ ಕಾರ್ಯಕ್ರಮವು ಒಳ್ಳೆ ಕಳೆಗಟ್ಟುತ್ತದೆ. ಕಥನ-ಕಾವ್ಯಗಳ ಮಧ್ಯೆ ಜನರಿಗೆ ಬೇಸರವಾಗಬಾರದೆಂದು ಇತ್ತೀಚೆಗೆ ಯಾವುದಾದರೂ ಒಂದು ಸಿನಿಮಾ ಹಾಡಿಗೆ ಚೌಡಿಕೆಯನ್ನು ಬಾರಿಸುತ್ತಾರೆ. ಚೌಡಿಕೆ, ಲಘುನರ್ತನ, ಕಂಠಸಿರಿ, ಹಿಮ್ಮೇಳದ ತಾಳ, ದಮ್ಮಡಿಗಳ ಮಾಧುರ್ಯ ಎಲ್ಲವೂ ಕೂಡಿ, ಚೌಡಿಕೆಪದ ದೃಶ್ಯಮಾಧ್ಯಮದಲ್ಲಿ, ಒಂದು ದೃಶ್ಯಕಾವ್ಯವಾಗಿ ಮೂಡಿಬರುತ್ತದೆ.

೩.೩.೮ ಉಮ್ಮತ್ತಾಟ

ಕೊಡವ ಹೆಂಗಸರೆ ಆಡುವ ವಿಶಿಷ್ಟಕಲೆಯೇ ಈ ಉಮ್ಮತ್ತಾಟ. ಇದನ್ನು ಬಿಮ್ಮತ್ತಾಟ ಎಂದೂ ಸಹ ಕರೆಯುತ್ತಾರೆ ಬಿಮ್ಮತ್ತ ಎಂದರೆ ಕಂಚಿನ ತಾಳ ಎಂದರ್ಥ. ಕೊಡವ ಹೆಂಗಳೆಯರು ತಮ್ಮ ವಿಶಿಷ್ಟ ರೀತಿಯ ಸಾಂಪ್ರದಾಯಿಕ ಉಡುಗೆಯನ್ನು ತೊಡುತ್ತಾರೆ.



ಉಮ್ಮತ್ತಾಟ

ಸೀರೆ ನೆರಿಗೆಯು ಹಿಂಭಾಗಕ್ಕೆ ಬರುವಂತೆ ತೊಡುವುದು, ಉದ್ದ ತೋಳಿನ ರವಿಕೆಯನ್ನು ಪೂರ್ಣವಾಗಿ ಕೈ ಮುಚ್ಚುವಂತೆ ತೊಡುತ್ತಾರೆ. ತಲೆಗೆ ಬಟ್ಟೆಯನ್ನು ಕಟ್ಟಿರುತ್ತಾರೆ. ಇದಕ್ಕೆ ಮಂಡೆತುಣಿ ಎಂದು ಕರೆಯುತ್ತಾರೆ. ಸಾಧಾರಣವಾಗಿ ಎಲ್ಲಾ ವಯೋಮಾನದವರು ಉಮ್ಮತ್ತಾಟದಲ್ಲಿ ಪಾಲ್ಗೊಳ್ಳುತ್ತಾರೆ. ಇದಕ್ಕೆ ವಯಸ್ಸಿನ ಅಂತರವಿಲ್ಲ. ವೃತ್ತಾಕಾರವಾಗಿ ಮಹಿಳೆಯರು ಲಘು ನರ್ತನ ಮಾಡುತ್ತಾ ತಾಳವನ್ನು ಬಡಿಯುತ್ತಾ ಕಾವೇರಮ್ಮಾದೇವಿ ತಾಯಿ ಕಾಪಾಡೆಂಗಳಾ ಎಂದು ಪ್ರಾರಂಭವಾಗುವ ಗೀತೆಯೊಂದಿಗೆ ಹೆಜ್ಜೆ ಹಾಕಲು ಆರಂಭಿಸುತ್ತಾರೆ. ಹಾಡು ಬದಲಾದಂತೆ ಕುಣಿತದ ಹೆಜ್ಜೆ ಬದಲಾಗುತ್ತದೆ. ಈ ಕುಣಿತದಲ್ಲಿ ಏಳು ರೀತಿಯ ಹೆಜ್ಜೆಗಳನ್ನು ಬದಲಾಯಿಸುತ್ತಾರೆ. ಕಾವೇರಿ ಮಾತೆ, ಕೊಡಗಿನ ಜನ, ಪರಿಸರ, ವನ್ಯಸಂಪತ್ತು, ಅತಿಥಿ ಸತ್ಕಾರಗಳಿಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ. ಯಾವುದೇ ಆಚರಣೆ ಸಂಪ್ರದಾಯಗಳಿರಲಿ ಉಮ್ಮತ್ತಾಟವನ್ನು ಆಡುತ್ತಾರೆ ಕೊಡವ ಸುಂದರಿಯರ ಈ ಕುಣಿತ ನಿಜಕ್ಕೂ ಮೋಹಕ. ಮೊದಲು ವೃತ್ತಾಕಾರವಾಗಿ ಇವರು ನರ್ತಿಸುವಾಗ ಮಧ್ಯದಲ್ಲಿ ಕಾವೇರಿ ತಾಯಿಯಂತೆ, ಒಬ್ಬರನ್ನು ಸಿದ್ಧಪಡಿಸಿ ಅವರಿಗೆ ಆಕಾಶ ನೀಲಿಯ ಸೀರೆ ಉಡಿಸಿ, ತಲೆಗೆ ಕೀರಿಟವನ್ನಿಟ್ಟು, ಸಣ್ಣ ಬಿಂದಿಗೆಯಲ್ಲಿ ನೀರನ್ನು ತುಂಬಿಸಿ ಅವರ ಕೈಯಲ್ಲಿ ಕೊಟ್ಟು ನಿಲ್ಲಿಸುತ್ತಿದ್ದರು. ಹಾಡಿನ ಗತಿ ಬದಲಾದಂತೆ

ಕಾವೇರಿ ತಾಯಿಯು ಸ್ವಲ್ಪ-ಸ್ವಲ್ಪ ನೀರನ್ನು ಚೆಲ್ಲಬೇಕು. ಹಾಡು ಮುಗಿಯುತ್ತಿದ್ದಂತೆ ಅದರಲ್ಲಿರುವಷ್ಟು ನೀರು ಖಾಲಿಯಾಗಬೇಕು.

ಆನಂತರದಲ್ಲಿ ಕಾವೇರಿ ದೇವಿಯು ಮಧ್ಯದಲ್ಲಿ ನಿಂತಿದ್ದರೂ, ಕೈಯಲ್ಲಿರುವ ಬಿಂದಿಗೆಯಲ್ಲಿ ನೀರಿರುತ್ತಿರಲಿಲ್ಲ. ಬದಲಾಗಿ ಅದನ್ನೇ ಹೋಲುವ ಪಾರದರ್ಶಕವಾದ ಬಟ್ಟೆಯನ್ನು ಬಿಂದಿಗೆಯ ಕಂಠದಿಂದ ನೀರು ಹರಿದು ಕೆಳಗೆ ಬೀಳುವ ರೀತಿ ಇಳಿ ಬಿಡುತ್ತಿದ್ದರು. ಇದಾದ ನಂತರ ಕಾವೇರಿ ತಾಯಿಯ ಬದಲು ದೊಡ್ಡ ದೀಪವನ್ನಿಟ್ಟು ಅದರ ಸುತ್ತ ಕಾವೇರಿ ತಾಯಿಯನ್ನು ಸ್ತುತಿಸುತ್ತಾ ನರ್ತಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅದೂ ಕೂಡ ಹೋಗಿ, ವೃತ್ತಾಕಾರವಾಗಿ ಕಾವೇರಿ ತಾಯಿಯಿಲ್ಲದೆ, ದೀಪವಿಲ್ಲದೆ, ನರ್ತಿಸುವುದನ್ನು ರೂಢಿಸಿಕೊಂಡಿದ್ದಾರೆ. ಆದರೆ ಕೊಡವ ಸಮಾಜದ ವಿಶಿಷ್ಟಕಲೆಯಾದ ಉಮ್ಮತ್ತಾಟ್ ಇನ್ನೂ ಕೂಡ ಯಾವುದೇ ಮಾರ್ಪಾಟನ್ನು ಮಾಡಿಕೊಳ್ಳದಿರುವುದೇ ಸಂತಸದ ಸಂಗತಿ. ಅದರ ಮೂಲ ಹೇಗಿದೆಯೊ ಹಾಗೆಯೇ ಇಂದೂ ಕೂಡ ಮಾಡುತ್ತಾರೆ.

ಉಮ್ಮತ್ತಾಟ ಕಲಾವಿದೆ-ರಾಣಿಮಾಚಯ್ಯ

ಕೊಡವ ಸಂಸ್ಕೃತಿಯ ಕಲೆಯಾದ ಉಮ್ಮತ್ತಾಟವನ್ನು ಹೊರಜಗತ್ತಿಗೆ ಸಮರ್ಥವಾಗಿ ಪರಿಚಯಿಸಿದವರು ರಾಣಿಮಾಚಯ್ಯ, ಉಮ್ಮತ್ತಾಟ ಎಂಬ ಮಹಿಳೆಯರ ನೃತ್ಯ ಪ್ರಕಾರವನ್ನು ದೇಶದೆಲ್ಲೆಡೆ ಜನಪ್ರಿಯಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಸಾಮಾಜಿಕವಾಗಿ :

ರಾಣಿ ಮಾಚಯ್ಯನವರು ೧೯೪೩ ಏಪ್ರಿಲ್ ೪ ರಂದು ವೀರಾಜಪೇಟೆ ತಾಲ್ಲೂಕಿನ ಸಿದ್ದಾಪುರದಲ್ಲಿ ಜನಿಸಿದರು. ಇವರ ತಂದೆ ಮೇದಪ್ಪ, ತಾಯಿ ಸೀತಮ್ಮ ಮಧ್ಯಮ ವರ್ಗದವರು. ಕಂಡ್ರತಂಡ ಕುಟುಂಬದ ಮೇದಪ್ಪನವರು ಸಿದ್ದಾಪುರದಲ್ಲಿ ದಿನಸಿ ವ್ಯಾಪಾರ ಮಾಡಿಕೊಂಡಿದ್ದರು. ತಾಯಿ ಸೀತಮ್ಮ ಶಿಕ್ಷಕಿಯಾಗಿದ್ದರು. ಮಗಳು ಇನ್ನೂ ಚಿಕ್ಕವಳಿರುವಾಗಲೇ, ಮೇದಪ್ಪ ವೀರಾಜಪೇಟೆ ಸಮೀಪ ಕಾಕೋಟು ಪರಂಬುವಿನಲ್ಲಿ ತೋಟ ಖರೀದಿಸಿದ್ದರು. ಹಾಗಾಗಿ ಇವರ ವಾಸ ಸಿದ್ದಾಪುರದಿಂದ ಕಾಕೋಟು ಪರಂಬುವಿಗೆ ಸ್ಥಳಾಂತರವಾಯಿತು. ಬಾಲಕಿ ರಾಣಿಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಾಕೋಟು ಪರಂಬುವಿನಲ್ಲಿ, ಪ್ರೌಢಶಾಲೆ ಹಾಗೂ ಕಾಲೇಜು ಶಿಕ್ಷಣವನ್ನು ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿ ಪೂರ್ಣಗೊಳಿಸಿದರು. ಪದವಿ ಮುಗಿದ ಬಳಿಕ ರಾಣಿಯವರು ೧೭-೫-೧೯೬೭ ರಲ್ಲಿ ಮಡಿಕೇರಿಯ ವಕೀಲರಾದ ಶ್ರೀ ಐಮುಡಿಯಂಡ ಮಾಚಯ್ಯನವರನ್ನು ವಿವಾಹವಾದರು.

ಶಾಲಾ-ಕಾಲೇಜು ಅವಧಿಯಲ್ಲಿ ಓದಿನಲ್ಲಿ ಚುರುಕಾಗಿದ್ದ ರಾಣಿ ಪಠ್ಯೇತರ ಚಟುವಟಿಕೆಗಳಲ್ಲೂ ತುಂಬಾ ಆಸಕ್ತಿ ಹೊಂದಿದ್ದರಂತೆ. ಶಾಲೆಯ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ತಪ್ಪದೇ ಭಾಗವಹಿಸಿ, ಶಿಕ್ಷಕರ ಮತ್ತು ಪೋಷಕರ ಮೆಚ್ಚುಗೆಗೆ ಪಾತ್ರರಾಗಿದ್ದರೆ. ಇವರುಗಳ ಪ್ರೋತ್ಸಾಹದಿಂದ ಮುಂದೆ ಕಾಲೇಜಿನಲ್ಲಿ ಉಮ್ಮತ್ತಾಟ, ಕೋಲಾಟ ಹಾಗೂ ಇನ್ನಿತರ ನೃತ್ಯಗಳಲ್ಲಿ ಹೆಚ್ಚಿನ ಆಸಕ್ತಿ ಬೆಳಸಿಕೊಳ್ಳಲು ನಾಂದಿಯಾಯಿತು. ಹಾಗಾಗಿ ಕಾಲೇಜಿನ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಇವರದ್ದೇ ಅಗ್ರಸ್ಥಾನವೆಂದು, ಇವರ ಸಹ ಪಾಠಿಗಳು ಇಂದೂ ನೆನಪಿಸಿಕೊಳ್ಳುತ್ತಾರೆ. ರಾಣಿ ಮಾಚಯ್ಯನವರ ಕಲಾ ಪ್ರತಿಭೆಗೆ ಪ್ರೋತ್ಸಾಹದ ನೀರೆರೆದು ಪೋಷಿಸಿದರು. ಪತಿ ಐಮುಡಿಯಂಡ ಮಾಚಯ್ಯನವರು- ಕಲೆ-ಸಂಸ್ಕೃತಿ ಬಗ್ಗೆ ಅಪಾರವಾದ ಕಳಕಳಿ ಇದ್ದ ಅವರು ಪತ್ನಿಯನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಂದುವರೆಯಲು ಸಹಕರಿಸಿದರು. ಮುಂದೆ ರಾಣಿ ಮಾಚಯ್ಯನವರು ಯುವತಿಯರ ತಂಡವೊಂದನ್ನು ಕಟ್ಟಿಕೊಂಡು "ಉಮ್ಮತ್ತಾಟ್" ನೃತ್ಯದ ತರಬೇತಿ ನೀಡಿದರು. ಕಾವೇರಿ ಮಾತೆಯ ಸ್ತುತಿಯೊಂದಿಗೆ ಪ್ರಾರಂಭವಾಗುವ ನಿಧಾನಗತಿಯ ಗೀತ ಕುಚ್ಚಕ್ಕೆ ಲವಲವಿಕೆಯ ಹೊಸರೂಪ ಕೊಟ್ಟು ಅದನ್ನು ಹೆಚ್ಚು ಜನಪ್ರಿಯಗೊಳಿಸಲು ಶ್ರಮಿಸಿದರು.

ಸುಮಾರು ಮೂರ್‍ನಾಲ್ಕು ದಶಕಗಳ ಹಿಂದೆ ಕೊಡಗಿನಲ್ಲಿ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಹೊರ ಪ್ರದೇಶಗಳಲ್ಲಿ ಅದರಲ್ಲೂ ಸಾರ್ವಜನಿಕವಾಗಿ ಹಾಗೂ ವೇದಿಕೆಗಳಲ್ಲಿ ನೃತ್ಯ ಮಾಡಿಸಲು ಹಿಂಜರಿಯುತ್ತಿದ್ದ ಕಾಲ. ಅಂತಹ ಮೂಗು ಮುರಿಯುತ್ತಿದ್ದ ಕಾಲದಲ್ಲೇ, ಎಲ್ಲಾ ಮುಜುಗರಗಳನ್ನು ಹೋಗಲಾಡಿಸಿ ಅದಕ್ಕೊಂದು ಗೌರವಯುತ ಸ್ಥಾನಮಾನವನ್ನು ಕಲ್ಪಿಸಿ ಕೊಟ್ಟವರು ರಾಣಿಮಾಚಯ್ಯ. ಹೀಗಾಗಿ ಕೊಡಗಿನ ತಲಕಾವೇರಿಯಿಂದ ಕಾಶ್ಮೀರದವರೆಗೂ ಬೆಡಗಿನ ಉಮ್ಮತ್ತಾಟ ನೃತ್ಯವನ್ನು ರಾಣಿಮಾಚಯ್ಯ ಜನಪ್ರಿಯಗೊಳಿಸಿದರಲ್ಲಿ ಮೊದಲಿಗರಾದರು. ಇನ್ನೂ ಹಲವಾರು ಕುಣಿತ ಪ್ರಕಾರಗಳಿವೆಯಾದರೂ ಕೊಡಗಿನ ಸಾಂಸ್ಕೃತಿಕ ಲೋಕದಲ್ಲಿ ಉಮ್ಮತ್ತಾಟ ಮೂಡಿಸಿದ ಹೆಜ್ಜೆ ಅಭೂತಪೂರ್ವ, ಇದರ ಹಿಂದಿನ ರಾಣಿಮಾಚಯ್ಯ ಅವರ ಶ್ರಮವನ್ನು ಯಾರೂ ಅಲ್ಲಗಳೆಯಲಾರದು. ರಾಣಿಮಾಚಯ್ಯ ನಾಯಕತ್ವದ ತಂಡ ಎಂದ ಕೂಡಲೇ ಕೊಡಗಿನ ಮಹಿಳೆಯರು ನೃತ್ಯದಲ್ಲಿ ಪಾಲ್ಗೊಳ್ಳಲು ಹಿಂಜರಿಯುತ್ತಿರಲಿಲ್ಲ. ಪೋಷಕರು ತಮ್ಮ ಮಕ್ಕಳನ್ನು ನಿರ್ಭೀತಿಯಿಂದ ಕಳುಹಿಸಿಕೊಡುತ್ತಿದ್ದರು.

ರಾಣಿಯವರು ತಂಡಗಳಿಗೆ ನಿರಂತರ ತರಬೇತಿ ನೀಡುತ್ತಾ ಬಂದರು. ನೃತ್ಯದಲ್ಲಿ ಪ್ರಾದೇಶಿಕತೆಯ ಕಂಪನ್ನು ಉಳಿಸಿಕೊಂಡು ಹೊಸ ಹೊಸ ಆವಿಷ್ಕಾರಗಳನ್ನು ಮಾಡುವಲ್ಲಿ ಯಶಸ್ವಿಯಾದರು. ಅಪಾರ ಜನಪ್ರಿಯತೆಯನ್ನು ಹೊಂದಿದ್ದ ಶ್ರೀಮತಿ ರಾಣಿಮಾಚಯ್ಯ ೧೯೮೦ರಲ್ಲಿ ತಮ್ಮದೇ ಆದ ಕಾವೇರಿ ಕಲಾ ವೃಂದ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ, ಅದರ ಮೂಲಕ ಮತ್ತಷ್ಟು ಸದೃಢವಾಗಿ ತಂಡಗಳನ್ನು ಕಟ್ಟಿ ಬೆಳೆಸತೊಡಗಿದರು.

ಕೊಡವ ಭಾಷೆಯಲ್ಲದೇ, ಕನ್ನಡ ಗೀತೆಗಳಿಗೂ ನೃತ್ಯಗಳನ್ನು ಮಾಡಿಸಿ, ಅಪಾರ ಜನಮನ್ನಣೆ ಗಳಿಸಿದರು. ಶ್ರೀಮತಿ ರಾಣಿಮಾಚಯ್ಯನವರ ಮೂರ್‍ನಾಲ್ಕು ದಶಕಗಳ ಸಾಂಸ್ಕೃತಿಕ ಕ್ಷೇತ್ರದ ಕಲಾ ಸೇವೆಯನ್ನು ಪರಿಗಣಿಸಿದ ಸರ್ಕಾರ ೨೦೧೦ರಲ್ಲಿ ಇವರನ್ನು ಮೂರು ವರ್ಷಗಳ ಅವಧಿಗೆ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಈ ಹಿಂದೆಯೇ ಎರಡು ಬಾರಿ ಅಕಾಡೆಮಿ ಸದಸ್ಯರಾಗಿದ್ದ ಇವರಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ತೊಡಕಾಗಲಿಲ್ಲ. ಗೌರವಾನ್ವಿತ ಸದಸ್ಯರೊಂದಿಗೆ ಅನೇಕ ಯೋಜನೆಗಳನ್ನು ಕಾರ್ಯ ರೂಪಕ್ಕಿಳಿಸಿದರು. ಮೂರು ವರ್ಷಗಳಲ್ಲಿ ತಮ್ಮ ಕಲಾ ಕ್ಷೇತ್ರದ ಅನುಭವಗಳನ್ನು ಮತ್ತು ಪರಿಣತಿಯನ್ನು ಅನುಷ್ಠಾನಗೊಳಿಸಿದ ತೃಪ್ತಿ ಇವರಿಗಿದೆ. ಕೊಡಗಿನ ಎಲ್ಲಾ ಜನವರ್ಗಗಳಲ್ಲಿ ಜನಪದ ಕಲೆ–ಕಲಾವಿದರಿಗೆ ಮತ್ತು ಅವುಗಳ ಉಳಿವು ಬೆಳವಣಿಗೆಗೆ ಹೆಚ್ಚು ಒತ್ತು ನೀಡಿ ಪ್ರೋತ್ಸಾಹಿಸಿದರು.

ಕಲಾ ಸೇವೆಯಲ್ಲಿ ಮಾತ್ರವಲ್ಲದೆ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲೂ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡರು. ಮಡಿಕೇರಿಯ ಕೊಡವ ಸಮಾಜದ ಸದಸ್ಯರಾಗಿ ಮಹಿಳಾ ಸಮಾಜದ ನಿರ್ದೇಶಕಿಯಾಗಿ, ಮಡಿಕೇರಿ ತಾಲ್ಲೂಕು ಕನ್ನಡ ಸಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾಗಿ, ಮಡಿಕೇರಿ ನಗರಸಭೆಯ ಸದಸ್ಯರಾಗಿ, ಜನರಲ್ ತಿಮ್ಮಯ್ಯ ಶಾಲೆ ಆಡಳಿತ ಮಂಡಳಿ ಸದಸ್ಯೆಯಾಗಿ, ಜನತಾ ಬಜಾರ್ ಮತ್ತು ಮಡಿಕೇರಿ ತಾಲ್ಲೂಕು ಯುವ ಜನ ಒಕ್ಕೂಟದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಿ ಅವರಿಗೆ ಭವಿಷ್ಯದ ಹಾದಿ ತೋರಿಸುವ ಕಾಯಕದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವುದು ಅವರ ಸಾಮಾಜಿಕ ಕಳಕಳಿಯನ್ನು ಎತ್ತಿ ತೋರಿಸುತ್ತದೆ. ಹತ್ತಾರು ಆಸಕ್ತ ಯುವತಿಯರಿಗೆ ನೆರವು ನೀಡಿ ನೆರಳಾಗಿದ್ದಾರೆ. ಶ್ರೀಮತಿ ರಾಣಿಮಾಚಯ್ಯನವರ ಸುಧೀರ್ಘ ಕಲಾ ಸೇವೆ ಮತ್ತು ಸಾಮಾಜಿಕ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಸಾಂಸ್ಕೃತಿಕವಾಗಿ :

ಉಮ್ಮತ್ತಾಟ ಒಂದು ಸೌಮ್ಯಕುಣಿತ. ಈ ಕುಣಿತದ ಹಿನ್ನಲೆಯಲ್ಲಿ ಸಮುದ್ರ ಮಥನದ ಕಥೆಯಿದೆ. ಸಮುದ್ರ ಮಥನ ಕಾಲದಲ್ಲಿ ಹುಟ್ಟಿದ ಅಮೃತವನ್ನು ರಾಕ್ಷಸರಿಗೆ ದಕ್ಕದಂತೆ ಮಾಡಲು ಮೋಹಿನಿರೂಪ ತಾಳಿದ ವಿಷ್ಣು ತನ್ನ ಬಗೆಬಗೆಯ ನೃತ್ಯಗಳಿಂದ ಅಸುರರನ್ನು ಬೆರಗುಗೊಳಿಸಿ, ಸುರರಿಗೆ ಅಮೃತವನ್ನು ಹಂಚಿದ ಕಥೆಯೇ ಈ ನೃತ್ಯಕ್ಕೆ ಮೂಲ ಎನ್ನುತ್ತಾರೆ. ಅಲ್ಲದೇ ಉಮ್ಮತ್ತಾಟ ಕೊಡವರ ಕುಲದೇವಿಯಾದ ಕಾವೇರಮ್ಮನ ಆರಾಧನೆಯೂ ಹೌದು.

ಸಾಧಾರಣವಾಗಿ ಉಮ್ಮತ್ತಾಟದ ಹಾಡುಗಳಲ್ಲಿ ಕೊಡುಗಿನ ಕುಲದೇವಿ, ಕಾವೇರಿಯ ಸ್ತುತಿ, ಪುರಾಣ, ಅತಿಥಿ ಸತ್ಕಾರ, ಪ್ರಕೃತಿ ಸಂಪತ್ತು, ಕಾವೇರಿ ತೀರ್ಥದ ಮಹಿಮೆ, ಕಾಯಕ ಗೀತೆಯನ್ನು ಸಾರುವ ಗೀತೆಗಳು ಇವೆ.

ಕಾವೇರಮ್ಮ ದೇವಿ ತಾಯಿ ಕಾಪಾಡೆಂಗಳಾ

ಬಾವ ಬಟ್ಟೆ ಕಾಟಿತಂದ್ ಚಾಕ್ ದೇವಿ ನೀ

ಈ ಗೀತೆಯಲ್ಲಿ ಕಾವೇರಮ್ಮ ನಮಗೆಲ್ಲರಿಗೂ ಬದುಕಿ ಬಾಳುವ ಹಾದಿಯನ್ನು ತೋರಲಿ ಎಂಬ ಪ್ರಾರ್ಥನೆಯಿದೆ. ಅತಿಥಿ ಸತ್ಕಾರವನ್ನು ಬಿಂಬಿಸುವ ಹಾಡುಗಳು ಉಮ್ಮತ್ತಾಟದಲ್ಲಿವೆ. ಮನೆಗೆ ಯಾರಾದರೂ ಬಂದಾಗ ಮನೆ ಒಡತಿಯು ಅವರಿಗೆ ಒಂದು ಚೆಂಬು ನೀರನ್ನು ತಂದು ಬಂದಿರಾ ಎಂದು ಸ್ವಾಗತಿಸುತ್ತಾಳೆ. ಇದು ಕೊಡುವ ಸಮಾಜದ ವಿಶಿಷ್ಟ ಸ್ವಾಗತ ಅತಿಥಿ ಸತ್ಕಾರವನ್ನು ಬಿಂಬಿಸುವ ಗೀತೆ ಉಮ್ಮತ್ತಾಟದಲ್ಲಿದೆ. ಅತಿಥಿಗಳೇ ನಿಮಗೆ ಸ್ವಾಗತ ನಿವೇಲ್ಲರೂ ಕ್ಷೇಮವೇ? ಇಲ್ಲಿನ ದೇವರ ಹಬ್ಬ ಚೆನ್ನಾಗಿದೆಯಲ್ಲವೆ? ಮನೆಯಲ್ಲಿ ಮಕ್ಕಳೆಲ್ಲರೂ ಚೆನ್ನಾಗಿ ಬಾಳುತ್ತಿದ್ದಾರೆಯೇ? ಗದ್ದೆ, ತೋಟಗಳು ಫಸಲಿನಿಂದ ತುಂಬಿ ತುಳುಕುತ್ತಿವೆಯೇ? ಹೀಗೆ ಕೊಟ್ಟಿಗೆಯ ದನಕರುಗಳು, ಆಳುಕಾಳುಗಳ ಯೋಗಕ್ಷೇಮವನ್ನು ವಿಚಾರಿಸುವ ಈ ರೀತಿಯ ಹಾಡು ಅನನ್ಯವಾದದ್ದು.

ಕೊಡಗಿನ ಪ್ರಾಕೃತಿಕ ಸಂಪತ್ತಿನ ವರ್ಣನೆ, ಕಾಡಿನಲ್ಲಿ ಸಿಗುವ ವಿವಿಧ ರೀತಿಯ ಜೇನುಗಳ ವರ್ಣನೆ, ಕಾವೇರಿ ತೀರ್ಥದ ಮಹಿಮೆ, ಇಗ್ಗತಪ್ಪ, ಬೈತೂರಪ್ಪ ಮುಂತಾದ ದೈವಗಳನ್ನು ಸ್ತುತಿಸುವ ಗೀತೆಗಳು ಕೂಡಾ ಇವೆ. ಹಾಗೆಯೇ ಜನರು ನಂಬಿಕೊಂಡು ಬಂದ ಕಾಯಕ ಗೀತೆಗಳು ಕೂಡ ಉಮ್ಮತ್ತಾಟದ ಸಾಹಿತ್ಯದ ಪ್ರಚುರಪಡಿಸುತ್ತವೆ. ದೇವಿಯು ಮನೆಯನ್ನು ಗುಡಿಸುತ್ತಾ, ಮೊಸರು ಕಡೆಯುತ್ತಾ, ಹಾಲು ಕರೆಯುತ್ತಾ, ಕೊಟ್ಟಿಗೆಯನ್ನು ಶುಚಿಗೊಳಿಸುತ್ತಾ, ಸಗಣಿ ತೆಗೆಯುತ್ತಾ, ಸೌದೆ ಹೊರುತ್ತಾ ನರ್ತಿಸು ತಾಯಿ ಎಂದು ಹಾಡುವ ಕಾಯಕ ಗೀತೆಯು ಉಮ್ಮತ್ತಾಟದಲ್ಲಿದೆ. ಅಂದರೆ ಒಂದು ಉಮ್ಮತ್ತಾಟದ ನೃತ್ಯದಲ್ಲಿ ಪ್ರಕೃತಿ ವರ್ಣನೆ, ಅತಿಥಿ ಸತ್ಕಾರ, ಕಾವೇರಿ ತೀರ್ಥದ ಮಹಿಮೆ, ಕಾಯಕದ ಮಹಿಮೆ ಮುಂತಾದವುಗಳನ್ನು ಒಳಗೊಂಡ ಸಾಹಿತ್ಯವು ಇದೆ.

ಬಹಳ ಹಿಂದಿನಿಂದಲೂ ಉಮ್ಮತ್ತಾಟ ನೃತ್ಯವೂ ಅಸ್ಥಿತ್ವದಲ್ಲಿತ್ತು ಎಂದು ಕೊಡವ ಹಿರಿಯ ಜಾನಪದ ಕಲಾವಿದರು, ತಜ್ಞರು ಹೇಳುತ್ತಾರೆ. ಹಿಂದೆ ಬಲ್ಲತ್ ನಾಡಿನ ಭದ್ರಕಾಳಿ ದೇವಸ್ಥಾನದಲ್ಲಿ ಊರಿನ ಮಹಿಳೆಯರಿಂದ ಉಮ್ಮತ್ತಾಟ ಸೇವೆ ನಡೆಯುತ್ತಿತ್ತಂತೆ. ದೇವಸ್ಥಾನದಲ್ಲಿ ಹಬ್ಬದ ಕಟ್ಟಳೆ ನಿಗಧಿಯಾದ ೯ ದಿನವೂ ಉಮ್ಮತ್ತಾಟ ನಡೆಯುತ್ತಿತ್ತು. ಅದರ ಆಚರಣೆ ಹೇಗಿತ್ತು ಎಂದರೆ ಬೆಳಗಿನ ಜಾವ ಪಕ್ಷಿಗಳು ಏಳುವುದಕ್ಕಿಂತ ಮೊದಲು ಊರಿನ ಪ್ರತಿಯೊಂದು ಮನೆತನದಿಂದ ಒಬ್ಬ ಮಹಿಳೆ ಎದ್ದು ತಣ್ಣೀರಿನಲ್ಲಿ

ಸ್ನಾನಮಾಡಿ, ಸಂಪೂರ್ಣ ನಗ್ನವಾಗಿ ದೇವಸ್ಥಾನಕ್ಕೆ ಹೋಗಿ ಕಂಚಿನ ತಾಳಹಿಡಿದು ನರ್ತಿಸುತ್ತಿದ್ದರಂತೆ. ಈ ಮಹಿಳೆಯರು ನರ್ತಿಸಿ ಮನೆಗೆ ಬರುವವರೆಗೂ ಊರಿನ ಯಾರೂ ಕಿಟಕಿ ಬಾಗಿಲು ತೆರೆಯುವಂತಿಲ್ಲ. ಮನೆಯಿಂದ ಯಾರೂ ಹೊರಗೆ ಬರುವಂತಿಲ್ಲ. ಇದು ಅಲ್ಲಿನ ಕಟ್ಟಳೆಯಾಗಿತ್ತು. ನೃತ್ಯಗಾತಿಯರು ಮನೆಗೆ ಬಂದ ಮೇಲೆ ಇನ್ನುಳಿದಂತೆ ಕೆಲಸ-ಕಾರ್ಯಗಳು ನಡೆಯುತ್ತಿದ್ದವಂತೆ.

ಉಮ್ಮತ್ತಾಟದ ಕುರಿತು ಇನ್ನೊಂದು ಕಥೆಯಿದೆ. ಭೂಲೋಕದಲ್ಲಿ ಕವೇರನೆಂಬ ಋಷಿ ಇದ್ದನು. ಮದುವೆಯಾಗಿ ಹತ್ತುವರ್ಷಗಳಾದರೂ ಮಕ್ಕಳಭಾಗ್ಯವಿರಲಿಲ್ಲ. ಆದ್ದರಿಂದ ಚಿಂತಾಕ್ರಾಂತನಾಗಿ ದೇಶ ಸಂಚಾರ ಹೊರಟು, ಹೊನ್ನಿನಂತಹ ಕೊಡಗಿಗೆ ಬಂದರಂತೆ. ಅಲ್ಲಿನ ಸಹ್ಯಾದ್ರಿ ಬೆಟ್ಟದಲ್ಲಿ ತಪಸ್ಸುಮಾಡಿದರಂತೆ. ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ ಬ್ರಹ್ಮನು ತನ್ನ ದತ್ತು ಮಗಳಾದ ಲೋಪಾಮುದ್ರೆಯನ್ನು ದಂಪತಿಗಳಿಗೆ ನೀಡಿದನಂತೆ. ಆ ಸಂದರ್ಭದಲ್ಲಿ ಕಾವೇರಿ ಇಂದಿನವರೆಗೆ, ಲೋಪಾಮುದ್ರೆಯಾಗಿ ಬ್ರಹ್ಮದೇವನ ಮಗಳಾಗಿದ್ದ ನಾನು, ಮುಂದೆ ಕವೇರನ ಮಗಳು ಕಾವೇರಿಯಾಗುವೆ ಎಂದಳಂತೆ. ಇದರಿಂದ ಕವೇರಿ ದಂಪತಿಗಳು ಸಂತಸಗೊಂಡರು. ಬ್ರಹ್ಮ ಬಂದು ಸಹ್ಯಾದ್ರಿಯ ಬೆಟ್ಟದಲ್ಲಿ ನಿಂತಿದ್ದರಿಂದ ಅದು ಬ್ರಹ್ಮಗಿರಿಯಾಯಿತು. ಮಗಳೊಂದಿಗೆ ಕವೇರಿ ದಂಪತಿಗಳು ಹಲವು ವರ್ಷಗಳ ಕಾಲ ಸುಖವಾಗಿ ಬಾಳಿ ಬದುಕಿದರು. ಕವೇರಿ ದಂಪತಿಗಳ ಮರಣಾನಂತರ ಕಾವೇರಿ ಒಂಟಿಯಾದಳು. ಆಗ ಆಕೆಯ ಸಹಾಯಕ್ಕಾಗಿ ಬ್ರಹ್ಮಗಿರಿ ತಪ್ಪಲಲ್ಲಿದ್ದ ಕೆಲವು ಕೊಡವತಿಯರು ಬ್ರಹ್ಮಗಿರಿಗೆ ಬಂದು ನೆಲೆಸಿದರು. ಆ ಸಂದರ್ಭದಲ್ಲಿ ಕಾವೇರಿ ತಾನು ಮೊದಲು ಉಮಾದೇವಿಯಾಗಿ, ನಂತರ ಲೋಪಾಮುದ್ರೆಯಾಗಿ ಆನಂತರ ಕವೇರನ ಮಗಳು ಕಾವೇರಿಯಾಗಿದ್ದೇನೆ ಎಂದು ತನ್ನ ಜನ್ಮವೃತ್ತಾಂತವನ್ನು ಹೇಳುತ್ತಾಳೆ. ಇದನ್ನು ಕೇಳಿದ ಕೊಡವತಿಯರು, ಉಮಾದೇವಿಯಾಗಿದ್ದಾಗ ತನ್ನ ಸಖಿಯರೊಂದಿಗೆ ನರ್ತಿಸಿದ, ನೃತ್ಯವನ್ನು ತಮಗೂ ಕಲಿಸಿಕೊಡಬೇಕೆನ್ನುತ್ತಾರೆ. ಇದಕ್ಕೆ ಒಪ್ಪಿದ ಕಾವೇರಿ ಈಗ ತಾನು ಕಾವೇರಮ್ಮೆ ಎಂಬ ಹೆಸರಿನಲ್ಲಿ ಇರುವುದರಿಂದ ಕೊಡವರ ಪ್ರಕೃತಿ, ಆಚಾರಕ್ಕನುಗುಣವಾಗಿ ಹಾಡುತ್ತಾ ನರ್ತಿಸಿದಳಂತೆ. ಇದರಿಂದ ಸಂತೋಷಗೊಂಡ ಕೊಡವತಿಯರು, ಕಾವೇರಮ್ಮೆಯನ್ನು ಮಧ್ಯನಿಲ್ಲಿಸಿ, ತಾವೂ ಸುತ್ತಲೂ ನರ್ತಿಸಿದರಂತೆ. ಇದರಿಂದ ಸಂತೋಷಗೊಂಡ ಕಾವೇರಮ್ಮೆ ತನ್ನ ನಿಜರೂಪವಾದ ಉಮಾದೇವಿ ರೂಪವನ್ನು ತಾಳಿದಳು. ಇದನ್ನು ಕಂಡ ಕೊಡವತಿಯರು ಈ ನೃತ್ಯಕ್ಕೆ ಉಮ್ಮತ್ತಾಟ ಎಂದರು. ಉಮಾದೇವಿ ಕಲಿಸಿದ ನೃತ್ಯ ಉಮ್ಮತ್ತಾಟ ಎನ್ನಲಾಗಿದೆ.

ಸಾಧಾರಣವಾಗಿ ಉಮ್ಮತ್ತಾಟನ್ನು ಕೊಡವರ ಮದುವೆ ಸಂದರ್ಭದಲ್ಲಿ, ಹಬ್ಬಹರಿದಿನಗಳ ಸಂದರ್ಭದಲ್ಲಿ, ಮನೆಗೆ ಅತಿಥಿಗಳು ಬಂದಾಗ ಹೆಣ್ಣು ಮಕ್ಕಳೆಲ್ಲಾ ಒಟ್ಟಾಗಿ ಕೂಡಿ ಈ ಕುಣಿತವನ್ನು ಮಾಡುತ್ತಾರೆ ಮತ್ತು ಶುಭಸಮಾರಂಭಗಳಲ್ಲೂ ಈ

ನೃತ್ಯವನ್ನು ಪ್ರದರ್ಶಿಸುತ್ತಾರೆ. ಇಂದು ಈ ಕಲೆಯನ್ನು ಉಳಿಸಬೇಕೆಂಬ ಆಶಯದಿಂದ ಹಿರಿಯರೆಲ್ಲರೂ ಸೇರಿ ಒಮ್ಮತದ ತೀರ್ಮಾನದಿಂದ ಇಂದು ಎಲ್ಲಾ ಸಾಮಾಜಿಕ ಸಮಾರಂಭಗಳಲ್ಲೂ ಪ್ರದರ್ಶಿಸಲ್ಪಡುತ್ತಿದೆ.

ಆರ್ಥಿಕವಾಗಿ :

ಶ್ರೀಮತಿ ರಾಣಿಮಾಚಯ್ಯ, ಐಮುಡಿಯಂಡ ಮಾಚಯ್ಯರವರಿಗೆ ಇಬ್ಬರು ಮಕ್ಕಳು. ಇವರ ಪತಿ ವಕೀಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮಗ ಸತೀಶ್, ಮಗಳು ಸರಿತಾ, ಇಬ್ಬರಿಗೂ ಮದುವೆಯಾಗಿದೆ. ಅವರವರ ಕಾರ್ಯಕ್ಷೇತ್ರದಲ್ಲಿ ಸಮರ್ಥರಾಗಿ ತಮ್ಮ ಕಾಲ ಮೇಲೆ ತಾವು ನಿಂತಿದ್ದಾರೆ. ೨೦೦೭ರಲ್ಲಿ ಶ್ರೀ ಮಾಚಯ್ಯನವರು ತಮ್ಮ ೭೦ನೇ ವಯಸ್ಸಿನಲ್ಲಿ ನಿಧನರಾದರು. ಅವರ ನಿಧನ ನಂತರವೂ ಇಂದಿಗೂ ಮಗ ಸತೀಶ್, ಅವರ ಪತ್ನಿ ಶ್ರೀಮತಿ ಜಯಾ ಸತೀಶ್ ಹಾಗೂ ಮಗಳು ಸರಿತಾ, ಅವರ ಪತಿ ಶ್ರೀ ಎನ್.ಕೆ. ದೇವಯ್ಯನವರ ಸಹಕಾರದಿಂದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರಿಗೆ ಕಾಫಿ ತೋಟವಿದ್ದು; ಕಾಫೀತೋಟದಲ್ಲಿ ಕಾಳುಮೆಣಸು, ಏಲಕ್ಕಿ, ಬಾಳೆ ಇವುಗಳನ್ನೆಲ್ಲಾ ಬೆಳೆಯುತ್ತಾರೆ. ಸಾಂಸ್ಕೃತಿಕ ಚಟುವಟಿಕೆಗಳ ನಡುವೆಯೂ ತಮ್ಮದೇ ಆದ ಜೀವನಶೈಲಿಯನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೇ ಕೊಡವ ಅಕಾಡೆಮಿಗೆ ಅಧ್ಯಕ್ಷರಾಗಿಯೂ ನೇಮಕರಾಗಿದ್ದರು. ಕಾಫಿತೋಟದಿಂದ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಮಾಡುತ್ತಾರೆ. ರಾಣಿಮಾಚಯ್ಯನವರು ತಮ್ಮ ತೋಟವನ್ನು ನೋಡಿಕೊಂಡು, ಇವುಗಳ ಮಧ್ಯೆ ಇವರು ಕಲೆಗಾಗಿ ತಮ್ಮ ಸಮಯವನ್ನು ಮೀಸಲಿಟ್ಟಿದ್ದಾರೆ.

ಸರ್ಕಾರದ ಕಾರ್ಯಕ್ರಮಗಳಿಂದ ಬಂದ ಹಣ, ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿ ಬರುವುದಕ್ಕೆ ಖರ್ಚಾಗುತ್ತದೆ. ಆರ್.ಟಿ.ಜಿ.ಎಸ್. ಮುಖಾಂತರ ಹಣಕೊಡುವುದು ಸಮಸ್ಯೆಯೇ ಏಕೆಂದರೆ ಒಮ್ಮೆ ಬಂದ ಕಲಾವಿದರು ಇನ್ನೊಮ್ಮೆ ಬರುವುದಿಲ್ಲ. ಕಾರ್ಯಕ್ರಮಕ್ಕೆ ಬರುವುದಕ್ಕಿಂತ ಮೊದಲೇ ಅವರಿಗೆ ಗೌರವ ಸಂಭಾವನೆ ನೀಡಿರುತ್ತೇವೆ. ಅವರ ಖಾತೆಗೆ ಹಣ ಬಂದ ಮೇಲೆ ಅವರು ನಮ್ಮನ್ನು ತಿರುಗಿಯೂ ನೋಡುವುದಿಲ್ಲ. ಆರ್.ಟಿ.ಜಿ.ಎಸ್. ಮುಖಾಂತರ ಗೌರವಧನ ಬರುವುದರಿಂದ ತಂಡ ಒಡೆಯುತ್ತಿದೆ ಎಂದು ಹೇಳಬಹುದು. ಪ್ರತಿ ಕಾರ್ಯಕ್ರಮಕ್ಕೂ ಹೊಸ ಹೊಸ ತಂಡದ ಅನ್ವೇಷಣೆ ಮಾಡಿ ಅವರಿಗೆ ಕಲಿಸುವುದು ತುಂಬಾ ಕಷ್ಟಸಾಧ್ಯ. ಆದ್ದರಿಂದ ಇತರೆ ಸಂಘ ಸಂಸ್ಥೆಗಳು ನೀಡುವಂತೆ ಸರ್ಕಾರದ ಕಾರ್ಯಕ್ರಮಗಳೂ ಕೂಡ. ಗೌರವ ಸಂಭಾವನೆ ಆ ಕೂಡಲೇ ಕೊಟ್ಟರೆ ಒಳ್ಳೆಯದು ಎನ್ನುತ್ತಾರೆ. ಬಂದಿರುವ ಕಲಾವಿದರಿಗೆ ಅಲ್ಲಿಯೇ ಕೊಟ್ಟರೆ ತಂಡಗಳು ಒಡೆಯುವುದು ನಿಲ್ಲುತ್ತದೆ. ಕೊಡಗಿನವರು ಮಾತ್ರ ಮಾಡುವ ಉಮ್ಮತ್ತಾಟ ಕರ್ನಾಟಕದ ಬೇರೆ ಭಾಗಗಳಲ್ಲಿ ಉಮ್ಮತ್ತಾಟ ಯಾರು ಕಲಿತು ಆಡುವುದಿಲ್ಲ.

ಕೊಡಗಿನಲ್ಲಿಯೇ ಸುಮಾರು ಐದಾರು ತಂಡಗಳಿವೆ. ಅಲ್ಲಿರುವ ತಂಡಗಳೆಲ್ಲವೂ ಹೆಸರು ಮಾಡಿಲ್ಲ ಅದರಲ್ಲಿ ೩ ತಂಡಗಳು ಮಾತ್ರ ಹೆಸರುವಾಸಿಯಾಗಿದ್ದಾವೆ.

ದೃಶ್ಯಮಾಧ್ಯಮದಲ್ಲಿ ಉಮ್ಮತ್ತಾಟ್

ಹೆಸರೇ ಹೇಳುವಂತೆ ಕೊಡಗು ಕರ್ನಾಟಕದ ಎರಡನೇ ಕಾಶ್ಮೀರ ಅಂದೇ ಖ್ಯಾತಿ. ಇಲ್ಲಿನ ಜನ ಸುರಸುಂದರರು. ತಮ್ಮ ಆಚಾರ–ವಿಚಾರ, ಉಡುಗೆ–ತೊಡುಗೆ ಇವುಗಳ ಬಗ್ಗೆ ಹೆಚ್ಚಿಗೆ ಒತ್ತು ನೀಡುತ್ತಾರೆ. ಎಲ್ಲೇ ಇರಲಿ, ಯಾವುದೇ ಸಾಮೂಹಿಕ ಕಾರ್ಯಕ್ರಮವಿರಲಿ ತಮ್ಮ ಸಾಂಪ್ರದಾಯಿಕ ಉಡುಗೆಯಲ್ಲಿಯೇ ಅವರು ಬರುತ್ತಾರೆ. ಅತ್ಯಂತ ಅಭಿಮಾನದಿಂದ ನಾವು ಕೊಡುಗರು ಎಂದು ಹೇಳುವ ಇವರಲ್ಲಿ ಅನೇಕ ಜನಪದಕಲೆಗಳಿವೆ. ಅದರಲ್ಲಿ ಉಮ್ಮತ್ತಾಟ ಒಂದು. ದೃಶ್ಯಮಾಧ್ಯಮಕ್ಕೆ ಉಮ್ಮತ್ತಾಟ ಚಿತ್ರೀಕರಿಸುವಾಗ, ಅನೇಕ ಹೆಂಗಳೆಯರು ಕೊಡಗಿನ ಸೀರೆಯಲ್ಲಿ ರಾರಾಜಿಸುತ್ತಾರೆ. ಕುಳಿತುನೋಡುವ ಪ್ರೇಕ್ಷಕರಿಗೆ ಸಾಂಪ್ರದಾಯಿಕ ಸೀರೆ, ಸುಂದರವಾದ ಸ್ತ್ರೀ ಸಮೂಹ, ಲಾಲಿತ್ಯವಾಗಿ, ವೃತ್ತಾಕಾರವಾಗಿ ಕುಣಿಯುವ ಹೆಂಗಳೆಯರ ಸಮೂಹ ಕಣ್ಮನ ಸೆಳೆಯುತ್ತದೆ. ಟಿ.ವಿ. ಪರದೆಯ ಗ್ಲಾಮರ್ ಒಂದಿನಿತು ಕಡಿಮೆಯಾಗುವುದಿಲ್ಲ. ಏಕೆಂದರೆ ಒಬ್ಬರಿಗಿಂತ ಒಬ್ಬರು ಸೌಂದರ್ಯದಲ್ಲಿ ಮೇಲುಗೈ ಪಡೆದಿರುತ್ತಾರೆ. ಉಮ್ಮತ್ತಾಟದಲ್ಲಿ ಬಳಸುವ ಕೆಂಪುಸೀರೆ ತುಂಬುತೋಳಿನ ರವಿಕೆ, ತಲೆಗೆ ಕಟ್ಟಿರುವ ಕೆಂಪು ವಸ್ತ್ರ, ವೃತ್ತಾಕಾರವಾಗಿ ತಿರುಗುವಾಗ, ಅರಳಿದ ಕಮಲದ ದಳಗಳೇನೋ ಎಂಬಂತೆ ನಾಜೂಕಾಗಿ ಹೆಜ್ಜೆಯನ್ನಿರಿಸಿ, ತಾಳವನ್ನು ಕುಟ್ಟುತ್ತಾ ಲಯಬದ್ಧವಾಗಿ ಮುಂದಕ್ಕೆ ಸಾಗುತ್ತಾರೆ. ಇದನ್ನು ನೋಡುವುದೇ ಒಂದು ಸೌಭಾಗ್ಯ. ಹಾಗಾಗಿ ದೃಶ್ಯಮಾಧ್ಯಮದಲ್ಲಿ ಉಮ್ಮತ್ತಾಟ ಇಂದಿಗೂ ಕೂಡಾ ಇದೆ. ಅಂದು–ಇಂದಿಗೂ ಈ ಕಲೆಯಲ್ಲಿ ಅಷ್ಟೇನೂ ವ್ಯತ್ಯಾಸವಾಗಿಲ್ಲ. ಆದರೂ ಈ ಕಲೆ ಯಾವುದೇ ರೀತಿಯ ಮಾರ್ಪಾಡಾಗದೇ ಇದ್ದಹಾಗೆ ಇದ್ದು, ತನ್ನ ತನವನ್ನು ಕಾಯ್ದುಕೊಂಡಿರುವುದು ಸಂತಸದ ಸಂಗತಿ. ಇದಕ್ಕೆಲ್ಲಾ ಕಾರಣ ಕೊಡಗಿನ ಯುವತಿಯರೆಂದೇ ಹೇಳಬೇಕು. ಯುವತಿಯರ ಲಘು ನರ್ತನಕ್ಕೆ ಹಿಮ್ಮೇಳದ ದನಿ ಜೊತೆಗೂಡುತ್ತದೆ.

೩.೩.೯ ಹಾಲಕ್ಕಿ ಸುಗ್ಗಿ ಕುಣಿತ

ಸುಗ್ಗಿ ಹಬ್ಬವನ್ನು ಕರ್ನಾಟಕದ ಎಲ್ಲಾ ಕಡೆಗಳಲ್ಲಿಯು ಆಚರಿಸುತ್ತಾರೆ. ಹಾಲಕ್ಕಿಯವರ ಸುಗ್ಗಿಕುಣಿತವು ಹೋಳಿ ಹಬ್ಬದ ಆಚರಣೆಗೂ ಅಂಥಹ ವ್ಯತ್ಯಾಸವಿಲ್ಲ ಬೇರೆ ಎಲ್ಲಾ ಜಾತ್ರೆ ಹಬ್ಬಗಳಂತೆಯೇ ನಾವು ಹಾಲಕ್ಕಿ ಸುಗ್ಗಿ ಕುಣಿತವನ್ನು ನೋಡಬೇಕಾಗುತ್ತದೆ. ಹಾಲಕ್ಕಿಯವರ ಸುಗ್ಗಿ ಕುಣಿತವು ವರ್ಣರಂಜಿತವಾಗಿ, ಆಕರ್ಷಣೀಯವಾಗಿರುತ್ತದೆ. ಹಾಲಕ್ಕಿಯವರು ಈ ಕುಣಿತದಲ್ಲಿ ಗುರುತಿಸಿಕೊಂಡಂತೆ ಬೇರೆಯಾವ ಜನಾಂಗದವರೂ ಗುರುತಿಸಿಕೊಂಡಿಲ್ಲ.

ಪುರಾಣದಲ್ಲಿ ಹಾಲಕ್ಕಿ ಸುಗ್ಗಿ ಕುಣಿತದ ಬಗ್ಗೆ ಇರುವ ಕಥಾನಕಗಳು

ಒಮ್ಮೆ ಕೈಲಾಸದಲ್ಲಿ ಗಂಗೇ ಗೌರಿಯ ಮಕ್ಕಳಿಗೆ ತಾವು ಕಲೆಯನ್ನು ಕಲಿಯಬೇಕೆಂಬ ಆಸೆಯಾಗುತ್ತದೆ. ಆಗ ಶಿವನು ಅವರನ್ನು ಗುರುವಿನ ಬಳಿ ಕಳಿಸಿಕೊಡುತ್ತಾನೆ. ಗುರುವು ಆ ಮಕ್ಕಳಿಗೆ ಚನ್ನಮಣೆ, ಹಾವು ಏಣಿ ಆಟ, ಚೆಂಡಾಟ ಈ ಮೂರರಲ್ಲಿ ಯಾವುದನ್ನು ಕಲಿಸಲಿ ಎಂದು ಕೇಳಿದಾಗ ಅದನ್ನು ದನಕಾಯುವ ಹುಡುಗರ ಆಟ ಹಾಗಾಗಿ ಆ ಆಟ ಬೇಡ ಎನ್ನುತ್ತಾರೆ. ಅದಕ್ಕೆ ಗುರುವು ಅಲಾಬಿ ಆಟ ಕಲಿಸುತ್ತೇನೆನ್ನುತ್ತಾನೆ. ಅದಕ್ಕೆ ಅದು ಮುಸಲ್ಮಾನರ ಆಟ, ಬೇಡ ಎನ್ನುತ್ತಾರೆ. ಕೋಲಾಟ ಕಲಿಸಲೇ ಎಂದಾಗ ಅದನ್ನು ಹರಿಜನರಾಡುವ ಆಟವೆಂದು, ಸಂಗ್ಯಾಬಾಳ್ಯ ಆಟ ಕಲಿಸಲೆ ಎಂದಾಗ ಬೇಡ ಅದನ್ನು ಸಿದ್ದೇರು ಆಡುತ್ತಾರೆ. ಯಕ್ಷಗಾನ ಕಲಿಸಲೆ ಎಂದಾಗ ಅದು ಬ್ರಾಹ್ಮಣರ ಆಟವೆನ್ನುತ್ತಾರೆ. ಇನ್ನೊಂದು ಕಲೆ ಇದೆ ಅದನ್ನು ನಾನು ನಿಮಗೆ ಕಲಿಸಿದರೆ, ನಿಮ್ಮ ತಂದೆ ತಾಯಿಯರು ಅದನ್ನು ಒಪ್ಪುವುದಿಲ್ಲ ಎನ್ನುತ್ತಾರೆ. ಮಕ್ಕಳು ಆಗ ಆ ಕಲೆಯನ್ನೇ ಕಲಿಸಿ ಅನ್ನುತ್ತಾರೆ. ಆ ಕಲೆಯೇ ಸುಗ್ಗಿಕುಣಿತ, ಗುರು, ಮಕ್ಕಳ ಒತ್ತಾಯಕ್ಕೆ ಮಣಿದು ಸುಗ್ಗಿ ಕುಣಿತವನ್ನು ಕಲಿಸಿಕೊಡುತ್ತಾರೆ. ಸುಗ್ಗಿ ಕುಣಿತವನ್ನು ಕಲಿತ ಮಕ್ಕಳು ಮನೆ ಮನೆಯ ಮುಂದೆ ಸುಗ್ಗಿಕುಣಿತವನ್ನು ಮಾಡಲು ಹೊರಡುತ್ತಾರೆ.

ಆಗ ಶಿವನು ಮಕ್ಕಳಿಗೆ ಇದು ನಮ್ಮಂತವರಿಗೆಲ್ಲ, ಎಂದು ಹೇಳಿ ಮಕ್ಕಳಿಗೆ ಶಾಪಕೊಡುತ್ತಾನೆ. ಮಕ್ಕಳು ಹೆದರಿ ಕೈಯಲ್ಲಿರುವ ಕೋಲುಕುಂಚವನ್ನು ನೆಲಕ್ಕೆ ಬೀಳಿಸುತ್ತಾರೆ ನೆಲಕ್ಕೆ ಬಿದ್ದ ಈ ಕೋಲುಕುಂಚವನ್ನು ಹಾಲಕ್ಕಿ ಒಕ್ಕಲಿಗರ ಹುಡುಗನೊಬ್ಬ ಎತ್ತಿಕೊಳ್ಳುತ್ತಾನೆ. ಗಂಗೆ–ಗೌರಿಯ ಮಕ್ಕಳೂ ಮೊದಲ ಆಟದಲ್ಲೆ, ಅಪಶಕುನವಾಯಿತೆಂದು ತಿಳಿದು ಆ ಹುಡುಗನಿಗೆ ಎಲ್ಲವನ್ನು ಒಪ್ಪಿಸಿ ಬಿಡುತ್ತಾರೆ. ಆಗ ಗುರುಗಳು ಹಾಲಕ್ಕಿ ಒಕ್ಕಲಿಗರ ಹುಡುಗನಿಗೆ ಐದು ದಿನಗಳ ಕಾಲ ಮಾಂಸಹಾರವನ್ನು ತ್ಯಜಿಸಿ, ಹಸಿರು ಗಿಡಗಳನ್ನು ಕಡಿಯಬಾರದು, ದೇವರನ್ನು ಪೂಜಿಸಿ ಕಲೆಯನ್ನು ಪ್ರದರ್ಶಿಸಬೇಕು ಎಂದು ಹೇಳುತ್ತಾರೆ. ಅದರಂತೆಯೇ ಹಾಲಕ್ಕಿ ಒಕ್ಕಲಿಗರು ಇಂದು ಕೂಡ ಅದರಂತೆ ನಡೆದುಕೊಂಡು ಬರುತ್ತಿದ್ದೇವೆ ಎಂದು ಹೇಳುತ್ತಾರೆ.

ಇನ್ನೊಂದು ಕಥೆಯ ಪ್ರಕಾರ ಒಮ್ಮೆ ತ್ರಿಮೂರ್ತಿಗಳು ಸುಗ್ಗಿಕುಣಿತವನ್ನು ಆರಂಭಿಸುತ್ತಾರೆ. ಮಹಾದೇವ ಗುಮಟೆ ವಾದ್ಯವನ್ನೂ, ಬ್ರಹ್ಮನು ಜಾಗಟೆಯನ್ನು ಬಾರಿಸುತ್ತಾ ನಾರಾಯಣನ ಮನೆಗೆ ಬರುತ್ತಾರೆ. ಅಲ್ಲಿ ಲಕ್ಷ್ಮೀಯು ಮೂವರಿಗೂ ಆರತಿ ಬೆಳಗಿ ಊಟಕ್ಕೆ ಕರೆಯುತ್ತಾಳೆ ಮೂವರು ಊಟಕ್ಕೆ ಕುಳಿತಾಗ ದನಕಾಯುವ ಹುಡುಗನೊಬ್ಬ ಮನೆಯೊಳಗೆ ಬಂದು ಗುಮಟೆಯನ್ನು ಬಾರಿಸುತ್ತಾನೆ. ಅದರ ಮಧುರ ಧ್ವನಿಗೆ ತ್ರಿಮೂರ್ತಿಗಳು ಮರಳುಗಾತ್ತಾರೆ. ಈ ವಾದ್ಯವನ್ನು ಬಾರಿಸಲು ನೀನೆ ಯೋಗ್ಯ ಎಂದು ಅವನಿಗೆ ಅದನ್ನು ಕೊಟ್ಟು

ವರುಷಕ್ಕೊಮ್ಮೆ ನಿಮ್ಮ ಜಾತಿಯವರು ಸುಗ್ಗಿ ಹೊರಡಿಸಿ ಇದನ್ನು ಬಾರಿಸಬೇಕು ಎಂದು ಆರ್ಶೀವದಿಸಿ ಕಳುಹಿಸುತ್ತಾರೆ. ಹಾಲಕ್ಕಿ ಸುಗ್ಗಿಯವರು ಏಳು ಸೀಮೆಗಳಲ್ಲಿದ್ದಾರೆ. ಆ ಸೀಮೆಗಳೆಲ್ಲೆಲ್ಲಾ ಪಾಲ್ಗುಣ ಶುದ್ಧ ದಶಮಿಯಿಂದ ಹುಣ್ಣಿಮೆವರೆಗೆ ನಡೆಯುತ್ತದೆ ಗೋಕರ್ಣದಲ್ಲಿ ಮಾತ್ರ ಚೈತ್ರ ಶುದ್ಧ ಹುಣ್ಣಿಮೆಯವರಿಗೆ ನಡೆಯುತ್ತದೆ. ಈ ಸೀಮೆಗಳಲ್ಲಿ ವ್ಯವಸ್ಥಿವಾಗಿ ಆಡಳಿತ ನಡೆಸಲು ಅವರು ಅದನ್ನು ವಿಂಗಡಿಸಿಕೊಂಡಿದ್ದಾರೆ.

ವೇಷಭೂಷಣ

ಹಿರಿಸುಗ್ಗಿಯ ಶಿರೋಭೂಷಣ ತುರಾಯಿಯನ್ನು ಬಣ್ಣ-ಬಣ್ಣದ ಕಾಗದ, ಬೇಂಗಡೆ, ಚೆಂಡು ಇವುಗಳಿಂದ ತಯಾರಿಸುತ್ತಾರೆ. ಶಿರೋಭೂಷಣದ ಮೇಲೆ ಹಕ್ಕಿಗಳು ಕುಳಿತಂತೆ, ಕಾಣುವ ಹಾಗೆ ಗುಡಿಗಾರನು ತಯಾರಿಸಿಕೊಡುತ್ತಾನೆ. ಸೊಂಟಕ್ಕೆ ಸೀರೆಯನ್ನು ಮೊಣಕಾಲಿನವರೆಗೆ ಬರುವಂತೆ ನೆರಿಗೆಯಿಟ್ಟು, ಪಾಯಿಜಾಮ ತೊಡುತ್ತಾರೆ. ಕೆಂಪು, ಹಸಿರು, ಹಳದಿ, ಬಣ್ಣದ ನಿಲುವಂಗಿಯನ್ನು ಹಾಕಿ ಅದರ ಮೇಲೆ ಜಾಕೀಟು ಧರಿಸಿ, ಸೊಂಟಕ್ಕೆ ತುಂಡು ವಸ್ತ್ರವನ್ನು ಕಟ್ಟಿರುತ್ತಾನೆ. ಕುತ್ತಿಗೆ ಮಣಿಹಾರಗಳನ್ನು, ತಲೆ ರುಮಾಲು ಸುತ್ತಿ, ತುರಾಯಿಯನ್ನು, ಪೂಜಿಸಿ ಕಟ್ಟಿಕೊಳ್ಳುತ್ತಾರೆ. ತುರಾಯಿಯು ಕೆಳಗೆ, ಹಣೆಯ ಮೇಲೆ ಬೇಗಡೆ ಮಣಿ, ಕನ್ನಡಿ ಚೂರುಗಳನ್ನು ಕೂರಿಸಿದ ಕಮಾನಿನ ಆಕಾರದ ಮುಂಗಟ್ಟು ಕಟ್ಟಿಕೊಳ್ಳುತ್ತಾರೆ. ಮುತ್ತಿನ ಸರವನ್ನು ಇಳಿಬಿಡುತ್ತಾರೆ. ಸುಗ್ಗಿಯ ವೇಷಧರಿಸಿದ ಕಲಾವಿದರನ್ನು ಕಂಡರೆ ಮೈದುಂಬಿ ನಿಂತ ಗಿಡಮರ ನೋಡಿದಂತಾಗುತ್ತದೆ.

ಹಾಲಕ್ಕಿ ಸುಗ್ಗಿ ಕುಣಿತ



ಹಾಲಕ್ಕಿ ಸುಗ್ಗಿ ಕುಣಿತ

ಕಲಾವಿದರು ಕೈಗಳಲ್ಲಿ ಕೋಲನ್ನು ಹಿಡಿದು ಹಿಮ್ಮೇಳದ ವಾದ್ಯದ ಗತ್ತಿಗೆ ಅನುಗುಣವಾಗಿ ಪದಗಾರರು ಹಾಡಿದ ಪದವನ್ನು ಪುನರಾವರ್ತನೆ ಮಾಡುತ್ತಾ ಕೋಲಾಡಿ ಕುಣಿಯತ್ತಾರೆ. ಹಿಮ್ಮೇಳದವರ ತಾಳ-ಲಯಕ್ಕನುಗುಣವಾಗಿ ಕುಣಿಯುವವರ ಕುಣಿತ, ಭಂಗಿ, ವಿನ್ಯಾಸಗಳು ಬದಲಾಗುತ್ತವೆ. ಅನೇಕ ಬಗೆಯ ಕೋಲಾಟಗಳು ರೂಪಗೊಳ್ಳುತ್ತವೆ. ಚಿನ್ನದ, ರನ್ನದ ಬಳ್ಳಿಯ ಕಂಚಿನ ಕೋಲುಗಳು, ಸಾಗೆ ನವಿಲು, ಕತ್ತರಿ, ಜಡೆಕೋಲು, ಹೂವಿನಕೋಲು ಹೀಗೆ ಹತ್ತು ಹಲವು ಬಗೆಯ ಕೋಲಾಟಗಳು ಮೈದಾಳುತ್ತವೆ. ಕಲಾವಿದರು ಕೋಟೆ ಬೇಧಿಸಿದಂತೆ, ಸಮಾಂತರ ವರ್ತುಲ ಚೌಕಾಕಾರದಲ್ಲಿ ನಿಂತು ಕುಣಿದು ಕೋಲಾಡುವುದು ಚಿತ್ತಾಕರ್ಷಕವಾಗುವುದು.

ಕಲಾವಿದರು ನವಿಲುಗರಿಯಿಂದ ತಯಾರಿಸಿದ ಕುಂಚವನ್ನು ಎಡಗೈಯಲ್ಲಿ ಹಿಡಿದು, ಬಲಗೈ ಕೋಲಿನಿಂದ ಕುಂಚದ ಬುಡಕ್ಕೆ ತಾಗಿಸುತ್ತಾ, ವಾದ್ಯದ ಲಯಕ್ಕನುಗುಣವಾಗಿ ಚೋಹೋಚೋ, ಸೋಹೋಸೋ, ಓಹೋಸಾ, ದಯ್ಯೋ, ದಯ್ಯೋ ಎಂದು ಕೂಗುತ್ತಾ ವಿವಿಧ ಭಂಗಿಗಳಲ್ಲಿ ಕುಣಿಯುತ್ತಾರೆ. ಪದಗಳ ಏರಿಳಿತದಿಂದ ಮತ್ತು ಕೂಗುವವನ ಸನ್ನೆಗನುಗುಣವಾಗಿ, ಕುಣಿತ ಭಿನ್ನ ಸ್ವರೂಪ ಪಡೆಯುತ್ತದೆ. ಕಲಾವಿದರು ಸರಪಳಿಯಂತೆ ಹೆಣೆದು, ವರ್ತುಲ ಉಪವರ್ತುಲಗಳಲ್ಲಿ ನಿಂತು, ತಾಳ ಮದ್ದಳೆ ಗುಮಟೆಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಸುಗ್ಗಿ ಕುಣಿತದವರು ಅಲಾವಿ ಪದಗಳನು ಹಾಡುತ್ತಾರೆ. ಗೌಡನ ಮನೆಯಲ್ಲಿ ಕೋಲಾಟ ಮುಗಿದೊಡನೆ ಗೌಡನು ಕಲಾವಿದರನ್ನು ಸತ್ಕರಿಸಿ ಉಡುಗೊರೆ ನೀಡುತ್ತಾನೆ. ಕಣಿ ಹೇಳುವವರು ಗೌಡನನ್ನು ಹೊಗಳುತ್ತಾರೆ. ಅಲ್ಲಿಂದ ಮುಂದಿನ ಮನೆಗೆ ತೆರಳುತ್ತಾರೆ. ಸಾಧಾರಣವಾಗಿ ಸುಗ್ಗಿಕುಣಿತವನ್ನು ತುಳಸಿ ಕಟ್ಟೆಯ ಮುಂದೆ ಮಾಡುತ್ತಾರೆ. ಸುಗ್ಗಿಕುಣಿತ ಮೇಳದವರು ಬೇರೆ ಊರಿಗೆ ಹೋದಾಗ ಅವರ ಎಲ್ಲಾ ವ್ಯವಸ್ಥೆಯನ್ನು ನೋಡಿಕೊಳ್ಳುವ ಹೊಣೆ ಆಯಾ ಊರಿನ ಗೌಡನ ಮೇಲಿರುತ್ತದೆ. ಕಲಾವಿದರು ತಿರುಗಿ ಬರುವುದು ಹುಣ್ಣಿಮೆಯ ದಿನ. ತಿರುಗಿ ಬಂದ ನಂತರ ಊರವರ ಮನೆಯ ಮುಂದೆ ಸುಗ್ಗಿಕುಣಿದು, ಗೌಡನ ಮನೆಗೆ ಹೋಗಿ ಅಲ್ಲಿ ಆರತಿ ಬೆಳಗಿಸಿಕೊಂಡು ಕರಿಕಣಕ್ಕೆ ಬಂದು ವೇಷವನ್ನು ಕಳಚುತ್ತಾರೆ. ರಾತ್ರಿ ಕಾಮಹನವನ್ನು ಮಾಡಿ, ಅಗ್ನಿಯ ಮುಂದೆ ಕೋಲು ಕುಂಚವನ್ನಿಟ್ಟು ವಂದಿಸಿ ಸುಗ್ಗಿ ಕುಣಿತಕ್ಕೆ ಮುಕ್ತಾಯ ಹಾಡುತ್ತಾರೆ.

ಸುಗ್ಗಿ ಹಬ್ಬಕ್ಕೆ ಸಂಬಂಧಿಸಿದ ನಂಬಿಕೆಗಳು

ಸುಗ್ಗಿಯನ್ನು ಆಚರಿಸುವುದರಿಂದ ಕಾಲಕಾಲಕ್ಕೆ ಸರಿಯಾಗಿ ಮಳೆ ಬರುತ್ತದೆ. ಧವಸ ಧಾನ್ಯಗಳು ತುಂಬಿಕೊಂಡಿರುತ್ತದೆ. ಶಿವ, ವಿಷ್ಣು, ಬ್ರಹ್ಮ ಸೂರ್ಯದೇವ ದೇವಾನುದೇವತೆಗಳನ್ನು ಸುಗ್ಗಿಕುಣಿತದಿಂದ ಸಂಪ್ರೀತರನ್ನಾಗಿಸಬಹುದು.ದೇವರ ಅನುಗ್ರಹದಿಂದ ಶಾಂತಿ ಲಭಿಸುತ್ತದೆ. ಮಕ್ಕಳಾಗದಿರುವವರಿಗೆ ಮಕ್ಕಳಾಗುತ್ತದೆ ರೋಗ ರುಜಿನಗಳು

ಬರುವುದಿಲ್ಲ. ಸಮೃದ್ಧ ಬೆಳೆ ಬರುತ್ತದೆ. ಹೀಗೆ ಹಲವು ನಂಬಿಕೆಗಳಿದ್ದರೆ ಸುಗ್ಗಿಯನ್ನು ಕಟ್ಟದ ಊರಿಗೆ ಶುಭವಿಲ್ಲ ಎಂಬ ಗಾದೆಯೂ ಹುಟ್ಟಿದೆ.

ಹಾಲಕ್ಕಿ ಸುಗ್ಗಿ ಕುಣಿತ-ಕಲಾವಿದ ಗಣಪುಗೌಡ

ಹಾಲಕ್ಕಿ ಸುಗ್ಗಿ ಕುಣಿತವೆಂದರೆ ಸೌಮ್ಯ ಸ್ವಭಾವದ ಕಲಾವಿದ ಗಣಪುಗೌಡರು ತಟ್ಟನೇ ನೆನಪಿಗೆ ಬರುತ್ತಾರೆ. ತಮ್ಮ ನಯವಾದ ಮಾತು, ವಿನಯವಂತಿಕೆಯಿಂದ ತಂಡದ ಮತ್ತು ಪ್ರೇಕ್ಷಕರ ಗಮನ ಸೆಳೆದಿದ್ದಾರೆ. ಗಣಪುಗೌಡರು ವಿದ್ಯಾವಂತರಾಗಿದ್ದು, ಸುಗ್ಗಿಕುಣಿತದಲ್ಲಿ ಅನೇಕ ಪರಿಷ್ಕರಣೆಗಳನ್ನು ಮಾಡುತ್ತಾ ಬಂದಿದ್ದಾರೆ. ಪರಂಪರೆಯಿಂದ ಬಂದ ಜನಪದ ಸಂಸ್ಕೃತಿಯನ್ನು ಶ್ರೀಮಂತಗೊಳಿಸಲು ಹರಸಾಹಸ ಪಡುತ್ತಿರುವವರಲ್ಲಿ ನಮ್ಮ ನಡುವಿರುವ ಗಣಪುಗೌಡರು ಒಬ್ಬರು.

ಸಾಮಾಜಿಕವಾಗಿ :

ಉತ್ತರ ಕನ್ನಡ ಜಿಲ್ಲೆಯ ಕರ್ಕಿಯ ಶಿಕಾರದ ಬಡವಾ ಹನುಮಂತಗೌಡ ಹಾಗೂ ಕರಿಯಮ್ಮ ದಂಪತಿಗಳ ಪುತ್ರ ಗಣಪುಗೌಡ ಇವರ ತಂದೆಯವರು ಮೊದಲು ಸುಗ್ಗಿಕುಣಿತವನ್ನು ಮಾಡುತ್ತಿದ್ದರು ಪರಂಪರೆಯಿಂದ ಬಂದ ಸುಗ್ಗಿಕುಣಿತವನ್ನು ಬೆಳೆಸುವ ಮಹತ್ಕಾರ್ಯದಲ್ಲಿ ಗಣಪುಗೌಡರು ಮುಂದಾಗಿದ್ದಾರೆ. ಇವರ ತಂದೆಗೆ ನಾಲ್ಕು ಜನ ಮಕ್ಕಳು. ಎರಡು ಹೆಣ್ಣು ಮತ್ತು ಎರಡು ಗಂಡು. ಎಲ್ಲರೂ ಕೂಲಿ ಮಾಡುತ್ತಾರೆ. ಬದುಕಿಗೆ ಜನಪದವನ್ನೇ ಅಂಟಿಸಿಕೊಂಡಿರುವ ಈ ಕಲಾವಿದ ಇನ್ನೇನು ಜನಪದ ಕಲಾಪ್ರಕಾರ ಅಳಿದೇ ಹೋಯಿತು, ಎಂಬ ಸೊಲ್ಲಿನ ನಡುವೆಯೂ ಹಾಲಕ್ಕಿ ಒಕ್ಕಲಿಗರ ಸುಗ್ಗಿ ಕುಣಿತವನ್ನು ಹಳ್ಳಿಯಿಂದ ದಿಲ್ಲಿಗೆ ಕೊಂಡೊಯ್ದಿದ್ದಾರೆ. ತಂದೆಯ ಆಸೆಯಂತೆ ಸುಗ್ಗಿ ಕುಣಿತವನ್ನು ಐದುವರ್ಷವಿರುವಾಗಲೇ ಕಲಿತಿದ್ದಾರೆ. ಉಳಿದ ಅಣ್ಣ ಮತ್ತು ತಮ್ಮ ಕಲೆಯನ್ನು ಕಲಿಯದೇ ಕಲೆಯಿಂದ ವಿಮುಖರಾಗಿದ್ದಾರೆ. ಕೂಲಿ ಕೆಲಸವನ್ನು ಮಾಡಿಕೊಂಡಿದ್ದಾರೆ. ತಂದೆಯ ಆಶ್ರಯದಲ್ಲೇ ಬೆಳೆದ ಇವರು ಶಾಲೆಗೆ ಹೋಗುತ್ತಿದ್ದಾಗಲೇ ಕಲೆಯನ್ನು ಕಲಿತು, ತಂದೆಯೊಂದಿಗೆ ಕಾರ್ಯಕ್ರಮಗಳನ್ನು ನೀಡಿ, ಬೇಷ್ ಎನಿಸಿಕೊಂಡಿದ್ದಾರೆ.

ಸಣ್ಣವರಿದ್ದಾಗಲೇ ಕಾರ್ಯಕ್ರಮಗಳನ್ನು ನೀಡಿರುವುದರಿಂದ, ತಂಡವನ್ನು ಕಟ್ಟಿರುವುದರಿಂದ ಇವರಲ್ಲಿ ನಾಯಕತ್ವದ ಗುಣಗಳು ಇವೆ ಎಂದೇ ಹೇಳಬಹುದು. ಸಂಘಟಕರಿಗೆ ಕಡಿಮೆ ಸಮಯದಲ್ಲಿಯೇ ಸುಗ್ಗಿಕುಣಿತ ಬೇಕೇ ಬೇಕು ಎಂದರೆ ಒದಗಿಬರುವ ಕಲಾವಿದ ಇವರು. ಆದ್ದರಿಂದಲೇ ಇರಬೇಕು ಸಂಘಟಕರೆಲ್ಲರಿಗೂ ಗಣಪುಗೌಡರು ಬೇಕೇ ಬೇಕು. ಬಿ.ಎ. ಓದುವಾಗ ಈ ಕಲೆ ಉಳಿಯಲೆಂದು ಅನೇಕ ರೀತಿಯ ಹೊಸಮಟ್ಟುಗಳನ್ನು ಸುಗ್ಗಿಕುಣಿತಕ್ಕೆ ಅಳವಡಿಸಿದ್ದಾರೆ. ಆ ಮಟ್ಟುಗಳು ಇಂದೂ ಕೂಡಾ

ಪ್ರಚಲಿತವಾಗಿವೆ. ಕಲೆಯೊಂದು ನಿಂತ ನೀರಾಗದೆ, ಹರಿಯಬೇಕೆಂದರೆ ಕಾಲ, ಸಂದರ್ಭಕ್ಕನುಗುಣವಾಗಿ ಬದಲಾವಣೆಗೆ ಒಳಪಡಬೇಕು ಎನ್ನುತ್ತಾರೆ. ಹಳೇ ಕಲಾವಿದರು ನಿವೃತ್ತಿ ಹೊಂದಿದರು, ಹೊಸ ಕಲಾವಿದರು ತುಂಬಾ ಸಂತಸದಿಂದ ಇವರ ತಂಡಕ್ಕೆ ಸೇರಿಕೊಳ್ಳುತ್ತಾರೆ. ಸಹಕಲಾವಿದರನ್ನು ಗೌರವದಿಂದ, ಪ್ರೀತಿಯಿಂದ ನೋಡಿಕೊಳ್ಳುವ ಒಳ್ಳೆಯ ಮನಸ್ಸು ಇವರದ್ದು.

ಅನೇಕ ಕಾರ್ಯಕ್ರಮಗಳಿಗೆ ಹೋದಾಗ, ತುಂಬಾ ಸಮಸ್ಯೆಗಳನ್ನು ಎದುರಿಸಿದ್ದಾರೆ. ಅದರಿಂದ ತುಂಬಾ ಪಾಠ ಕಲಿತೆವೆಂದು ಹೇಳುತ್ತಾರೆ. ಅಲ್ಲದೇ ಸಂಘಟಕರು ಕಾರ್ಯಕ್ರಮವನ್ನು ಮಾಡಿಸಿ, ಹಣ ಕೊಡದೆ, ಊಟ ಕೊಡಿಸದೆ ಕಲಾವಿದರನ್ನು ತುಚ್ಛವಾಗಿ ಕಂಡದ್ದನ್ನು ಹೇಳುವಾಗ ಇವರ ಕಣ್ಣಂಚು ಒದ್ದೆಯಾಗುತ್ತದೆ. ಇವೆಲ್ಲವನ್ನು ಮೀರಿ, ಇಂದು ಕಲಾವಿದ ಕಲೆಯನ್ನು ಬೆಳೆಸಲು ಬದುಕುಬೇಕು ಎಂದು ಛಲದಿಂದ ಹೇಳುತ್ತಾರೆ. ಉತ್ತರ ಕನ್ನಡದ ಹಲವೆಡೆಗಳಲ್ಲಿ ತಮ್ಮದೇ ತಂಡವನ್ನು ರಚಿಸಿಕೊಂಡು ಸುಗ್ಗಿಕುಣಿತ ಪ್ರದರ್ಶಿಸಿ ಉತ್ತರ ಕನ್ನಡದಲ್ಲೇ ಹೆಸರು ವಾಸಿಯಾಗಿದ್ದಾರೆ. ಉತ್ತಮ ಸಂಘಟಕರಾಗಿ, ಕಲಾವಿದರಿಗೆ ಸಹೃದಯರಾಗಿ ಜನಾನುರಾಗಿಯಾಗಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಿಂದ ಬೆಂಗಳೂರಿಗೆ ಕನ್ನಡ ಸಂಸ್ಕೃತಿ ಇಲಾಖೆ, ಜಾನಪದ ಅಕಾಡೆಮಿಗಳಿಗೆ ಓಡಾಡುವ ಇವರು, ಕಲಾವಿದರಿಗೆ ಮಾಸಾಶನ ಬರದಿದ್ದರೆ ಅದರ ಓಡಾಟ ಅರ್ಜಿ ಹಾಕುವುದು, ಇವುಗಳಲ್ಲವನ್ನೂ ತಾವೇ ಮಾಡಿ, ಹಿರಿಯ ಕಲಾವಿದರ ಚಿಂತೆಯನ್ನು ದೂರಮಾಡುತ್ತಿದ್ದಾರೆ. ಅರ್ಜಿಯನ್ನು ಅನುಸರಿಸಿ ಮಾಸಾಶನ ಅವರ ಕೈ ತಲುಪುವಂತೆ ಮಾಡುತ್ತಿದ್ದಾರೆ. ಹಾಗಾಗಿ ಈ ಜಿಲ್ಲೆಯ ಜನಪದ ಕಲಾವಿದರಿಗೆ ಇವರೆಂದರೆ ಅಚ್ಚುಮೆಚ್ಚು. ಶಾಲಾ–ಕಾಲೇಜುಗಳಿಗೆ ಹೋಗಿ ಜನಪದ ನೃತ್ಯ ತರಬೇತಿಯನ್ನು ನೀಡುತ್ತಾರೆ. ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಮಕ್ಕಳಿಗೆ ಕಲಿಸಿದ ಹಾಲಕ್ಕಿ ಸುಗ್ಗಿ ಕುಣಿತಕ್ಕೆ ಯುವಜನೋತ್ಸವ ಮೇಳದಲ್ಲಿ ಪ್ರಥಮ ಬಹುಮಾನ ಬಂದಿದ್ದನ್ನು ತುಂಬಾ ಸಂತಸದಿಂದ ಹೇಳಿಕೊಳ್ಳುತ್ತಾರೆ.

ಆರ್ಥಿಕವಾಗಿ :

ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದಲೇ ಬಂದವರು ಕಷ್ಟಪಟ್ಟು ಶಿಕ್ಷಣವನ್ನು ಪಡೆದ ಇವರು. ಬಿ.ಎ. ಓದಿದ್ದಾರೆ. ಇವರಿಗೆ ಎರಡು ಮಕ್ಕಳಿದ್ದು, ಒಬ್ಬ ಮಗ ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾನೆ. ಮಗಳು ೭ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಇರುವ ೧೫ ಗುಂಟೆ ಜಮೀನಿನಲ್ಲಿ ಭತ್ತ ಬೆಳೆಯುತ್ತಾರೆ. ಅವರ ಹೇಳುವಂತೆ ಮನೆಯ ನಿರ್ವಹಣೆಗೆ ಅಲ್ಲಿ ಬರುವ ಭತ್ತ ಸಾಕೆನ್ನುತ್ತಾರೆ. ಇನ್ನುಳಿದಂತೆ ಕಾರ್ಯಕ್ರಮವಿಲ್ಲದಿದ್ದಾಗ, ತಾವೂ ಕೂಲಿ ಕೆಲಸಕ್ಕೆ ಹೋಗುತ್ತೇವೆ ಎನ್ನುತ್ತಾರೆ. ಇವರ ಎಲ್ಲಾ ಕೆಲಸ–ಕಾರ್ಯಗಳಿಗೆ ಇವರ ಪತ್ನಿ ಸವಿತಾ ಜೊತೆಜೊತೆಯಾಗಿ ನಿಲ್ಲುತ್ತಾರೆ. ಮಡದಿ ಮಕ್ಕಳು ಇವರ ಕಲೆಗೆ

ಪ್ರೋತ್ಸಾಹ ನೀಡುತ್ತಿದ್ದಾರೆ. ಇವರ ಪರಿಮಿತಿಗೆ ತಕ್ಕಂತೆ ಸುಗ್ಗಿ ಕುಣಿತದ ವ್ಯಾಪ್ತಿಯನ್ನು ಹಿಗ್ಗಿಸಿದ್ದಾರೆ. ಕಾರ್ಯಕ್ರಮದಿಂದ ಬಂದ ಗೌರವ ಸಂಭಾವನೆ ಏನೇನೂ ಸಾಕಾಗುವುದಿಲ್ಲ. ಬೇರೆ ಊರುಗಳಿಗೆ ಕಾರ್ಯಕ್ರಮ ನೀಡಲು ಹೋದಾಗ ಮನೆವಾರ್ತೆಯನ್ನು ಇವರ ಶ್ರೀಮತಿಯವರು ನಡೆಸಿಕೊಂಡು ಹೋಗುತ್ತಿದ್ದಾರೆ. ತನ್ನ ಪತಿಯ ಬಗ್ಗೆ ಪ್ರಶಂಸೆಯ ಮಾತನ್ನಾಡುತ್ತಾರೆ. ಜನಪದ ಕಲೆಯೊಂದು ಉಳಿದರೆ ನಾಡಿನ ಸ್ವತ್ತು ಉಳಿದಂತೆ ಎನ್ನುತ್ತಾರೆ. ಇವರು ಕನ್ನಡ ಸಂಸ್ಕೃತಿ ಇಲಾಖೆವತಿಯಿಂದ ಜಾನಪದ ಪರಿಷತ್ತಿನ ವತಿಯಿಂದ ಗುರು–ಶಿಷ್ಯ ಪರಂಪರೆಯ ಅಡಿಯಲ್ಲಿ ಬರುವ ಕೆಲವು ಯೋಜನೆಗಳಿಗೆ ತರಬೇತುದಾರರಾಗಿ ಶಾಲಾ–ಕಾಲೇಜುಗಳಿಗೆ ಹೋಗಿ ಮಕ್ಕಳಿಗೆ ತಮ್ಮ ಕಲೆ ಮತ್ತು ಕುಣಿತದ ತರಬೇತಿಯನ್ನು ನೀಡುತ್ತಾರೆ. ಅದರಿಂದ ಬರುವ ಗೌರವ ಸಂಭಾವನೆಯು ಇವರ ಸಂಕಷ್ಟಗಳಿಗೆ ನೆರವಾಗುತ್ತವೆ ಎನ್ನುತ್ತಾರೆ.

ಸಾಂಸ್ಕೃತಿಕವಾಗಿ :

ಊರಿನ ಮುಖಂಡ ಅರಸುಗೌಡನು ಸುಗ್ಗಿಕುಣಿತದ ಮೇಳಕ್ಕೆ ವಾದ್ಯ ಪರಿಕರಗಳನ್ನು ನೀಡುವುದು ವಾಡಿಕೆ. ಈ ಪರಿಕರಗಳನ್ನು ನೀಡುವ ಮೊದಲು ಕಲಾವಿದರಿಗೆ ಕರಿ ಅಕ್ಕಿಯನ್ನು ಮಂತ್ರಿಸಿಕೊಡುತ್ತಾನೆ. ಕರಿಅಕ್ಕಿ ಎಂದರೆ ಹಬ್ಬದ ದಿನ ಅರಸುಗೌಡನು ನೇಮದಿಂದ ಇದ್ದು, ಕೊಡುವ ಅಕ್ಕಿ. ಹೋಳಿಹುಣ್ಣಿಮೆ ಹಬ್ಬ ಆರಂಭವಾಗುವ ೧೫ ದಿನಗಳ ಮೊದಲು ಅರಸುಗೌಡನು ಮತ್ತು ಕಲಾವಿದರು ತಮ್ಮ ನೇಮ–ನಿಷ್ಠೆಯಿಂದ ಇರುತ್ತಾರೆ. ಕರಿ ಅಕ್ಕಿಯೊಂದಿಗೆ ನಂತರ ಕೋಲು, ಕುಂಚ, ಜಾಗಟೆ, ಗುಮಟೆ, ತಾಳ, ಇತ್ಯಾದಿಗಳನ್ನು ನೀಡುತ್ತಾನೆ. ಕರಿಅಕ್ಕಿಯು ಇವರಿಗೆ ಪವಿತ್ರವಾದುದು. ಅದನ್ನು ಕಲಾವಿದರು ಸೊಂಟದಲ್ಲಿ ಭದ್ರವಾಗಿಟ್ಟುಕೊಳ್ಳುತ್ತಾರೆ. ಕರಿಯಕ್ಕಿ ಹಿಡಿಯದ ಕಲಾವಿದರು ಬಿಳಿಯಕ್ಕಿಯನ್ನು ಹಿಡಿದಿರುತ್ತಾರೆ. ನಂತರ ಕಲಾವಿದರು ಊರ ಮುಂದಿನ ದೇವಸ್ಥಾನದ ಆವರಣದಲ್ಲಿರುವ ಸುಗ್ಗಿ ಕಟ್ಟುವ ಸ್ಥಳಕ್ಕೆ ಬರುತ್ತಾರೆ. ಸುಗ್ಗಿ ಕಟ್ಟುವ ಸ್ಥಳವನ್ನು ಕರಿಕಣ ಎಂದು ಕರೆಯುತ್ತಾರೆ. ಕರಿಕಣವು ಹತ್ತಡಿ ಎತ್ತರವಿರುವ ಚೌಕಾಕಾರದ ಚಪ್ಪರ ಹೊಂದಿದ್ದು ಅದನ್ನು ಮೂರು ಕಡೆಯಿಂದ ಮುಚ್ಚಿರುತ್ತಾರೆ. ಚಪ್ಪರದ ಮಧ್ಯದಲ್ಲಿ ಹಲವಾರು ಕೊಂಬೆಗಳಿರುವ ಒಂದು ಕಂಬವಿರುತ್ತದೆ. ಈ ಕಂಬಕ್ಕೆ ಸುರಗಿ ಕಂಬವೆಂದು ಹೆಸರು. ಕಲಾವಿದರು ತಮ್ಮ ವಾದ್ಯ ಪರಿಕರಗಳನ್ನು ಆ ಕೊಂಬೆಗೆ ತೂಗು ಹಾಕುತ್ತಾರೆ. ಕಲಾವಿದರೆಲ್ಲರೂ ಮೊದಲ ದಿನ ಅಲ್ಲಿಗೆ ಹೋಗಿ ಕಾಮದೇವನನ್ನು ಪ್ರತಿಷ್ಠಾಪಿಸಿ ನಂದಾದೀಪವನ್ನು ಹಚ್ಚಿ, ಐದು ತೆಂಗಿನಕಾಯಿ, ಬಾಳೆಗೊನೆಯನ್ನು ನೈವೇದ್ಯ ಮಾಡಿ, ನಾಯಕ ಹಾಡು ಹೇಳಿದಂತೆ ಕಲಾವಿದರು ಹಾಡುತ್ತಾ ಇಡೀ ರಾತ್ರಿ ಸುತ್ತುತ್ತಾರೆ. ಈ ಹಾಡಿನಲ್ಲಿ ಊರಿನ ಎಲ್ಲಾ ದೇವರುಗಳ ಹೆಸರು ಸೇರಿಸಿಕೊಳ್ಳುತ್ತಾರೆ.

ಕಲಾವಿದರೆಲ್ಲರೂ ಕರಿಕಣದಿಂದ ಹೊರಡುವಾಗ ತಾವು ಹೊರಟಿದ್ದನ್ನು ಊರ ಜನರಿಗೆ ಮನದಟ್ಟು ಮಾಡಲು ಹೆದ್ದುಂಬೆ ಕೋಲು ಎಂಬ ವಾದ್ಯವನ್ನು ಊದುತ್ತಾರೆ. ಹೆದ್ದುಂಬೆ ಮರದಿಂದ ಮಾಡಿದ ಈ ವಾದ್ಯದ ಧ್ವನಿ ಸುಮಾರು ನಾಲ್ಕು ಕಿಲೋಮೀಟರ್‌ವರೆಗೂ ಕೇಳಿಸುತ್ತದೆ. ಈ ವಾದ್ಯದ ಬದಲಾಗಿ ಸನ್ನೆಕೋಲು ಎಂಬ ವಾದ್ಯವನ್ನು ಊದುತ್ತಾರೆ. ಈ ವಾದ್ಯದ ಧ್ವನಿ ಕೇಳಿದೊಡನೆ ಗ್ರಾಮದ ಜನ ಸುಗ್ಗಿಕುಣಿತವನ್ನು ಎದುರುಗೊಳ್ಳಲು ಅಣಿಯಾಗುತ್ತಾರೆ. ಕಲಾವಿದರು ಮೊದಲು ಗ್ರಾಮದ ಮುಖಂಡರ ಮನೆಗೆ ಹೋಗಿ ಪ್ರದರ್ಶನ ನೀಡುತ್ತಾರೆ. ತುಳಸಿ ಕರಿದೇವರು ಮತ್ತು ಆಯಾ ಊರಿನಲ್ಲಿದ್ದ ದೇವರುಗಳ ಹಾಡುಗಳನ್ನು ಹಾಡಿ, ಕುಣಿತವನ್ನು ಮಾಡಿ, ಜನರನ್ನು ಸಂಪ್ರೀತರನ್ನಾಗಿಸುತ್ತಾರೆ. ಗ್ರಾಮದ ಪ್ರತಿ ಮನೆಯವರು ಸುಗ್ಗಿಕುಣಿತವನ್ನು ಆದರದಿಂದ ಬರಮಾಡಿಕೊಂಡು ಆರತಿ ಬೆಳಗಿ ಗೌರವಾರ್ಥವಾಗಿ ಕಾಣಿಕೆ ನೀಡುತ್ತಾರೆ. ಸುಮಾರು ೭ ದಿನ ಹಗಲು-ರಾತ್ರಿ ತಿರುಗಾಡಿ ಕಲಾವಿದರು ಕಾಣಿಕೆಯಾಗಿ ದವಸಧಾನ್ಯಗಳನ್ನು ತರುತ್ತಾರೆ. ಹೋಳಿಹುಣ್ಣಿಮೆ ಪ್ರಮುಖವಾಗಿರುವ, ಹಾಲಕ್ಕಿ ಒಕ್ಕಲಿಗರಿಗೆ ಸುಗ್ಗಿ ಕುಣಿತವು ಊರಾಡುವುದು ಸಂಪ್ರದಾಯವೂ ಕೂಡ. ಆದರೆ ಇಂದು ಕಾಲ ಬದಲಾಗಿ, ಅಕ್ಕ-ಪಕ್ಕದ ಊರುಗಳಿಗೆ ಹೋದರೂ ಕೂಡಾ ಹಿಂದಿನಷ್ಟು ಕಾಣಿಕೆಯನ್ನು ಯಾರೂ ನೀಡುವುದಿಲ್ಲ ಎನ್ನುತ್ತಾರೆ ಗಣಪುಗೌಡರು.

ದೃಶ್ಯ ಮಾಧ್ಯಮದಲ್ಲಿ ಹಾಲಕ್ಕಿ ಸುಗ್ಗಿ ಕುಣಿತ

ಹಾಲಕ್ಕಿ ಜನಾಂಗದವರೇ ಮಾಡುವ ಸುಗ್ಗಿ ಕುಣಿತವು ತುಂಬಾ ವಿಶಿಷ್ಟವಾದದ್ದು. ದೃಶ್ಯಮಾಧ್ಯಮದಲ್ಲಿ ಇದು ಚಿತ್ತಾಕರ್ಷಕವಾಗಿ ಕಾಣುತ್ತದೆ. ೧೫ ರಿಂದ ೨೦ ಜನ ಕೂಡಿ ಮಾಡುವ ಈ ಕಲೆ ಅತ್ಯಾಕರ್ಷಕ ವಾದದ್ದು. ಅವರ ಧರಿಸಿರುವ ವೇಷಭೂಷಣಗಳು ಶಿರಸ್ತ್ರಾಣಕ್ಕೆ ಉಪಯೋಗಿಸುವ ನವಿಲುಗರಿ, ಬೆಂಡು ಇವುಗಳೆಲ್ಲವೂ ನೋಡಲು ಮನಮೋಹಕವಾಗಿರುತ್ತದೆ. ಇವರು ಕುಣಿದರೆಂದರೆ ತಲೆಯ ಮೇಲೆ ಬಣ್ಣಬಣ್ಣದ ಪಕ್ಷಿಗಳು ಬಂದು ಕೂತಂತೆ ಕಾಣುತ್ತದೆ. ಹಾಲಕ್ಕಿ ಸುಗ್ಗಿ ಕುಣಿತವು ಹಿಮ್ಮೇಳದ ವಾದ್ಯಕ್ಕೆ ಅನುಗುಣವಾಗಿ ಲಘುವಾದ ನರ್ತನದೊಂದಿಗೆ ಆರಂಭವಾಗಿ, ಬಿರುಸಿನ ಚಾಲನೆಯನ್ನು ಪಡೆಯುತ್ತದೆ. ಇದರಲ್ಲಿರುವ ಎಲ್ಲಾ ಕಲಾವಿದರು ಮನಮೋಹಕವಾಗಿ ನರ್ತಿಸುತ್ತಾರೆ. ಟಿ.ವಿ. ಮಾಧ್ಯಮದಲ್ಲಿ ಈ ಕಲೆ ಪ್ರಸಾರವಾದಾಗ ಕಲಾವಿದರೊಂದಿಗೆ ಗಿಳಿಹಿಂಡು ತಲೆಯ ಮೇಲೆ ಕುಳಿತಂತೆ ಕಾಣುತ್ತದೆ. ಹೀಗಾಗಿ ಹಾಲಕ್ಕಿ ಸುಗ್ಗಿಕುಣಿತ ದೃಶ್ಯಮಾಧ್ಯಮದಲ್ಲಿ ಆಕರ್ಷಕವಾಗಿ ಮೂಡಿಬರುತ್ತದೆ.

೩.೧.೧೦ ದಟ್ಟಿ ಕುಣಿತ

ಗಂಡು ಮೆಟ್ಟಿದ ನಾಡೆಂದೇ ಪ್ರಸಿದ್ಧವಾಗಿರುವ ಉತ್ತರ ಕರ್ನಾಟಕ ಅನೇಕ ಜನಪದ ಕಲೆಗಳ ತವರೂರು. ನಮ್ಮ ಜನಪದಕ್ಕೆ ಹಾಲುಮತ ಕುರುಬರ ಕೊಡುಗೆ ಅತ್ಯಮೂಲ್ಯವಾದುದು. ಕರ್ನಾಟಕದ ಆದಿವಾಸಿಗಳಾದ ಇವರಿಗೆ ಸಮೃದ್ಧ ಇತಿಹಾಸ ಮತ್ತು ಭವ್ಯ ಪರಂಪರೆ ಇದೆ. ಇವರು ಎಂಥಹ ಜೀವಂತ ಸಂಸ್ಕೃತಿಯಲ್ಲಿ ಬದುಕಿದ್ದರು ಎನ್ನುವುದಕ್ಕೆ ಅವರು ಬೆಳೆಸಿ ಉಳಿಸಿದ ಸಾಹಿತ್ಯ, ಸಂಗೀತ, ವಾದ್ಯ, ಕುಣಿತಗಳೇ ಸಾಕ್ಷಿ: ಕಂಬಳಿ, ಕುರಿ, ಡೊಳ್ಳು ಇವರ ಸಾಂಗತ್ಯ–ಸಂಕೇತಗಳು. ಇವರು ಆಡುವ ದಟ್ಟಿಕುಣಿತ ಒಂದು ಅಸಾಧಾರಣ ಜನಪದ ಕಲೆ. ಇದು ಮುಖ್ಯವಾಗಿ ಬೆಳಗಾವಿ ಜಿಲ್ಲೆ ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ಕಂಡು ಬರುತ್ತದೆ. ದೇವರನ್ನು ಒಲಿಸಲು ಪೂಜೆ–ಪುನಸ್ಕಾರ–ಪ್ರಸಾದಗಳನ್ನು ಸಮರ್ಪಿಸುವಂತೆ ವಾದ್ಯ ಸತ್ಯ ನುಡಿ ಸಂಗೀತದ ಮೂಲಕ ಸೇವೆ ಸಲ್ಲಿಸುವುದು ತಲೆ–ತಲಾಂತರದಿಂದ ಬಂದಿದೆ.

ದಟ್ಟಿ ಕಲೆಗೆ ಸಂಬಂಧಿಸಿದಂತೆ ಪುರಾಣಗಳು

ಭಸ್ಮಾಸುರನಿಗೆ ಶಿವನು ಉರಿಹಸ್ತವನ್ನು ಕರುಣಿಸಿದ. ಭಸ್ಮಾಸುರ ಯಾರ ತಲೆಯ ಮೇಲೆ ಕೈ ಇಡುತ್ತಾನೆಯೋ, ಅವರು ಸುಟ್ಟು ಹೋಗುತ್ತಾರೆ. ಆಗ ಭಸ್ಮಾಸುರನು ಎಲ್ಲರಿಗೂ ಕಾಟ ಕೊಡಲಾರಂಭಿಸುತ್ತಾನೆ. ದೇವತೆಗಳೆಲ್ಲರೂ ಶಿವನ ಮೊರೆ ಹೋಗುತ್ತಾರೆ. ಆಗ ಶಿವನು ಮೋಹಿನಿಯ ರೂಪದಲ್ಲಿ ಬಂದು, ದಟ್ಟಿ ಸೀರೆಯನ್ನುಟ್ಟು, ಅವತರಿಸಿ ಭಸ್ಮಾಸುರನನ್ನು ಕೊಂದಳು ಎಂಬ ಕಥೆಯಿದೆ. ಇನ್ನೊಂದು ಪುರಾಣದಲ್ಲಿ ಶುಂಭ ನಿಶುಂಭರೆಂಬ ರಾಕ್ಷಸರು ಬ್ರಹ್ಮನನ್ನು ಕುರಿತು ಉಗ್ರ ತಪಸ್ಸು ಮಾಡುತ್ತಾರೆ. ಅವರ ತಪಸ್ಸಿಗೆ ಒಲಿದ ಬ್ರಹ್ಮನು ಅವರು ಕೇಳಿದ ವರ ಅನುಗ್ರಹಿಸಿದ. ಅವರು ತಮಗೆ ಹೆಣ್ಣಿನಿಂದ ಮಾತ್ರ ಮರಣ ಬರಬೇಕೆಂದು ವರ ನೀಡಿದ್ದರು. ಶುಂಭ–ನಿಶುಂಭರು ಕೂಡ ಎಲ್ಲರಿಗೂ ಉಪಟಳ ಕೊಡಲು ಆರಂಭಿಸಿದರು ಆಗ ಪಾರ್ವತಿಯು ಅವರನ್ನು ನಿಗ್ರಹಿಸಲು ಶಕ್ತಿಯ ಅವತಾರವಾಗಿ ದಟ್ಟಿತೊಟ್ಟು ಕುಣಿದು ಅವರನ್ನು ಸಂಹಾರ ಮಾಡಿದಳೆಂಬ ಪ್ರತೀತಿ ಇದೆ.

ಸಾಧಾರಣವಾಗಿ ಜಾತ್ರೆ ಉತ್ಸವ, ಹಬ್ಬ, ಗುಗ್ಗೊಳೋತ್ಸವ, ಭಕ್ತರಮನೆಗಳಿಗೆ ದೇವರ ಪಲ್ಲಕ್ಕಿಗಳು ಹೋಗುವಾಗ ಜಾತ್ರೆ, ಉತ್ಸವಗಳಿಗೆ ಹೋಗುವಾಗ ಕುಣಿತ ಒಡಬು ಕಥೆಗಳನ್ನು ಹಾಡುತ್ತಾರೆ. ದಟ್ಟಿಕುಣಿತದ ಕಲಾವಿದ ಸಂಭ್ರಮ ಉತ್ಸಾಹ ಕುಣಿತದ ವಿನ್ಯಾಸ ಹಾಗೂ ಚಮತ್ಕಾರಗಳು ನೋಡುವವರನ್ನು ಆಕರ್ಷಿಸುತ್ತದೆ. ದಟ್ಟಿ ಕುಣಿತದಲ್ಲಿ ಸುಮಾರು ೮ ರಿಂದ ೧೫ ಮಂದಿ ಕಲಾವಿದರಿರುತ್ತಾರೆ. ನಾಲ್ಕರಿಂದ ಆರು ಮಂದಿ ಹಿಮ್ಮೇಳದವರಿರುತ್ತಾರೆ. ಡೊಳ್ಳು ಕೈಪಟ್ಟು, ತಾಳ ಮತ್ತು ಗುಮಿಕೆಗಳು ಈ ಮೇಳಕ್ಕೆ

ಬಳಸುವ ವಾದ್ಯ ವಿಶೇಷಗಳು. ಕೆಲವೊಮ್ಮೆ ಇದರೊಂದಿಗೆ ಶೃತಿಯಾಗಿ ಸನಾದಿಕೂಡ ನುಡಿಸುವುದುಂಟು.

ಇವರ ವೇಷಭೂಷಣಗಳು ಕೂಡ ಅಷ್ಟೇ ಆಕರ್ಷಕ. ಇವರು ಧರಿಸುವ ಕಡು ಕೆಂಪಿನ ಉಡುಗೆಗಳು ರೌದ್ರದ ಸಂಕೇತ. ದಟ್ಟಿ ಕುಣಿತದ ಕಲಾವಿದರು ಧರಿಸುವುದು, ಕೆಂಪು ನಿಲುವಂಗಿ ಮತ್ತು ಪಾಯಿಜಾಮ ವನ್ನು ನಿಲುವಂಗಿಗೆ ಬಣ್ಣ ಬಣ್ಣದ ಬಟ್ಟೆಗಳನ್ನಿಟ್ಟು ಹೊಲೆದಿರುತ್ತಾರೆ. ಈ ನಿಲುವಂಗಿಯು ಅತ್ಯಾಕರ್ಷಕ ವಾಗಿರುತ್ತದೆ. ತಲೆಗೆ ರುಮಾಲು ನಡಕಟ್ಟು-ಮುಖ, ಹಣೆ, ಗಲ್ಲಕ್ಕೆಲ್ಲಾ ಅರಿಶಿಣ ಬಳಿದುಕೊಂಡಿರುತ್ತಾರೆ. ಹಿಮ್ಮೇಳದಲ್ಲಿ ಡೊಳ್ಳು ಮತ್ತು ತಾಳವಿರುತ್ತದೆ. ದಟ್ಟಿಕುಣಿತದಲ್ಲಿ ಹಿಮ್ಮೇಳಗಳೇ ಅದಕ್ಕೂ ಸ್ಫೂರ್ತಿ ಮತ್ತು ಶಕ್ತಿ.

ಸಾಂಸ್ಕೃತಿಕವಾಗಿ :

ವೇಷತೊಟ್ಟು ಸಿದ್ಧರಾದ ಕಲಾವಿದರು ಮೊದಲು ಊರಗುಡಿಯ ಮುಂದೆ ಪೂಜೆ ಸಲ್ಲಿಸುತ್ತಾರೆ. ನಂತರ ಅವರ ಗಾಯನ ಸೇವೆ ಆರಂಭವಾಗುತ್ತದೆ. ನಂತರ ನಿಧಾನವಾಗಿ ಆ ಗುಡಿಯ ಮುಂಭಾಗದಲ್ಲೇ ದಟ್ಟಿ ಕುಣಿತವನ್ನು ಆರಂಭಿಸುತ್ತಾರೆ. ಹಿಮ್ಮೇಳದ ಡೊಳ್ಳು-ತಾಳಗಳ ಮಟ್ಟುಗಳನ್ನು ಅನುಸರಿಸುತ್ತಾ ಸಮವಸ್ತ್ರ ತೊಟ್ಟು ಸಾಲಾಗಿ ನಿಂತು ಏಕ ಪ್ರಕಾರವಾಗಿ ವಿಭಿನ್ನ ಭಂಗಿಯಲ್ಲಿ, ವಿವಿಧ ಪ್ರಮಾಣದಲ್ಲಿ ಹೆಜ್ಜೆ ಇಡುತ್ತಾ, ಹಾರಿ ಹಾರಿ ಹೆಜ್ಜೆಯ ಗತಿಯೊಂದಿಗೆ ಕುಣಿಯುತ್ತಾ, ಬಾಗುತ್ತಾ, ಬೀಗುತ್ತಾ ಕುಣಿಯುವ ಗತ್ತು ರಮಣೀಯ. ಹಂತ ಹಂತವಾಗಿ ಶುರುವಾದ ಹೆಜ್ಜೆ ಮಟ್ಟುಗಳು ತೀವ್ರಗೊಳ್ಳುತ್ತಿರುವಂತೆ ಕುಣಿತದ ಗತಿ ಚುರುಕುಗೊಳ್ಳುವುದು. ಆಕರ್ಷಕ ವೇಷಭೂಷಣ ತೊಟ್ಟ ಈ ಕಲಾವಿದರ ಕುಣಿತ ನಿಜಕ್ಕೂ ರುದ್ರರಮಣೀಯ. ಎಲ್ಲಿಯೂ ತಾಳ ತಪ್ಪದಂತೆ ಏಕ ಪ್ರಕಾರವಾಗಿ, ಕುಣಿಯುವ ಇವರ ಜಾಣ್ಮೆಗೆ ತಲೆದೂಗಲೇ ಬೇಕು.

ದಟ್ಟಿ ಕುಣಿತ ಕಲೆಯು ಕ್ರಿ.ಶ. ೧೪-೧೫ನೇ ಶತಮಾನಗಳಲ್ಲಿ ಶ್ರೀ ದೇವಿಯ ಪೂಜಾರಿಗಳು ಆಳು ಮಕ್ಕಳು ಮತ್ತು ಭಕ್ತರ ಕುಣಿತವಾಗಿತ್ತು. ಮೂಲ ದ್ರಾವಿಡ ಸಂಪ್ರದಾಯದ ದಟ್ಟಿಕುಣಿತ ಜನರ ನಡುವೆ ಬೆಳೆದ ವಿಶಿಷ್ಟ ಜನಪದ ಕಲೆ. ಜಾನಪದ ವಿದ್ವಾಂಸರು ಕೂಡಾ ದಟ್ಟಿಕುಣಿತವನ್ನು ಶ್ರೀಮಂತ ಕಲೆಯೆಂದು ಬಣ್ಣಿಸಿದ್ದಾರೆ. ದಟ್ಟಿ ಎಂದರೆ ಬಾಲಕಿಯರು ಉಡುವ ಸಣ್ಣ ಸೀರೆ. ಕೆಲವರು ಅಂತಹ ದಟ್ಟಿಗಳನ್ನು ಸೊಂಟಕ್ಕೆ ಸುತ್ತಿಕೊಂಡಿರುತ್ತಾರೆ. ಇದು ಆದಿಶಕ್ತಿಯ ನೆನಪು ತಂದುಕೊಡುತ್ತದೆ. ಇದಕ್ಕೆ ಪುಷ್ಟೀ ಎಂಬಂತೆ, ಆದಿಶಕ್ತಿ ನಾಂದಿಯೊಂದಿಗೆ ಕುಣಿತ ಆರಂಭವಾಗುತ್ತದೆ. ಅದರಲ್ಲಿ ಮುಖ್ಯ ನರ್ತಕ ಶಕ್ತಿಮಾತೆಯ ಬಗ್ಗೆ ತಿಳಿಸಿಕೊಡುತ್ತಾನೆ. ಈ ದಟ್ಟಿ ಕುಣಿತದಲ್ಲಿ ವಾದ್ಯಗಳಾದ ಡೊಳ್ಳಿನ ಕೈಪೆಟ್ಟು, ಸನಾದಿ, ತಾಳಗಳನ್ನು ಪಕ್ಕವಾದ್ಯಗಳಾಗಿ ನುಡಿಸುತ್ತಾರೆ.

ಕುಣಿತವು ಆದಿಶಕ್ತಿಯ ಅವತಾರಗಳನ್ನು ಹೇಳುತ್ತಾ, ತಂಡದಲ್ಲಿ ಮುಖ್ಯ ನರ್ತಕರು ಶಕ್ತಿದೇವಿಯ ಒಡಪು ಹೇಳುತ್ತಾರೆ. ಅವನ ಒಡಪುಗಳಿಗೆ ಕೈಪೆಟ್ಟು, ಸನಾದಿ ಹಾಗೂ ಕಾಲ್ಗೆಜ್ಜೆಗಳು ಹಿನ್ನಲೆ ಸಂಗೀತ ಒದಗಿಸುತ್ತವೆ. ಆದಿಶಕ್ತಿಯ ಅವತಾರಗಳನ್ನು ಹೇಳುತ್ತಾ, ರುದ್ರಾವೇಷಕ್ಕೆ ಏರಿ, ಆಮೇಲೆ ನಿಧಾನವಾಗಿ ಶಾಂತಗೊಂಡು ದಟ್ಟಿಕುಣಿತ ಮುಕ್ತಾಯವಾಗುತ್ತದೆ. ಈ ಕಲೆಯು ವಾಲ್ಮೀಕಿ ಜನಾಂಗದ ಕಲೆಯಾಗಿತ್ತು. ಉದ್ದಮ್ಮ ದೇವಿಯ ಪ್ರಿತ್ಯರ್ಥವಾಗಿ ಆರಾಧನೆಯ ರೂಪದಲ್ಲಿ ದಟ್ಟಿಕುಣಿತ ನಡೆಯುತ್ತಿತ್ತು. ಶಿವ-ಪಾರ್ವತಿ ಇಬ್ಬರ ಸಂಗಮವೇ ದಟ್ಟಿಕುಣಿತ ಎಂದು ಕಲಾವಿದರು ಹೇಳುತ್ತಾರೆ. ಕಾಲಾನಂತರದಲ್ಲಿ ಈ ದಟ್ಟಿಕುಣಿತವನ್ನು ನೋಡಿದ ಕುರುಬರು, ಲಿಂಗಾಯಿತರು, ಇನ್ನು ಮುಂತಾದವರು ದಟ್ಟಿ ಕುಣಿತವನ್ನು ಕಲಿಯಲು ಆರಂಭಿಸಿದರು. ಉತ್ತರ ಕರ್ನಾಟಕದ ಕಡೆ ಯುಗಾದಿ ಹಬ್ಬದ ದಿನ ಉದ್ದಮ್ಮದೇವಿಯ ಜಾತ್ರೆಯನ್ನು ಮಾಡುತ್ತಾರೆ. ಆ ದಿನ ಬೆಳಿಗ್ಗೆ ೩ ಗಂಟೆಗೆ ದೇವಿಯ ಪೂಜೆ ಮಾಡುತ್ತಾರೆ. ನಂತರ ಪೂಜಾರಿಗಳು ಮೂರುವರೆ ಗಂಟೆಗೆ ದಟ್ಟಿಕುಣಿತದ ಪೋಷಾಕನ್ನು ಧರಿಸಿ, ಉದ್ದಮ್ಮ ದೇವಿಗೆ ಸೇವೆಯ ಮನೋಭಾವದಿಂದ ಆರಾಧನೆಯ ಅಂಗವಾಗಿ ದೇವಸ್ಥಾನದ ಪ್ರಾಂಗಣದಲ್ಲಿ ದಟ್ಟಿಕುಣಿತವನ್ನು ಆರಂಭಿಸುತ್ತಾರೆ.

ದೇವಿಯ ಪಲ್ಲಕ್ಕಿ ಉತ್ಸವವನ್ನು ಮಾಡಿದ ನಂತರ, ಊರ ಮೆರವಣಿಗೆ ಹೊರಟಾಗ, ದೇವಿ ಮುಂದೆ ನಡೆದರೆ, ಅದರ ಹಿಂದೆ ದಟ್ಟಿಕುಣಿತ, ಡೊಳ್ಳು ಕುಣಿತ, ಕರಡಿ ಮಜಲು, ಕೀಲುಕುದುರೆ ಮುಂತಾದ ಅನೇಕ ಕಲೆಗಳು ಸೇರಿಕೊಳ್ಳುತ್ತವೆ. ಊರಿಗೆ ಪ್ರದಕ್ಷಿಣೆ ಬಂದ ದೇವಿಯು ಪುನಃ ದೇವಸ್ಥಾನವನ್ನು ಸೇರಿ, ತನ್ನ ಜಾಗವನ್ನು ಆಕ್ರಮಿಸುತ್ತಾಳೆ. ಆಗ ಪೂಜಾರಿಗಳು ಇನ್ನೊಮ್ಮೆ ಪೂಜೆಯನ್ನು ಮಾಡಿ, ಭಕ್ತರಿಗೆ ಪ್ರಸಾದವನ್ನು ನೀಡುತ್ತಾರೆ. ಮೆರವಣಿಗೆಯಲ್ಲಿ ಬಂದ ಎಲ್ಲಾ ಕಲಾವಿದರು ಒಟ್ಟಾಗಿ ತಮ್ಮ ಕಲೆಯ ಪ್ರದರ್ಶನವನ್ನು ನೀಡಿ ಜನರನ್ನು ರಂಜಿಸುತ್ತಾರೆ. ಸಾಧಾರಣವಾಗಿ ದಟ್ಟಿಕುಣಿತವನ್ನು ನವರಾತ್ರಿ, ದೀಪಾವಳಿ, ಯುಗಾದಿ, ಕನ್ನಡ ರಾಜ್ಯೋತ್ಸವ ಮುಂತಾದ ಸಂದರ್ಭಗಳಲ್ಲಿ ಇಂದೂ ಕೂಡಾ ಉತ್ತರ ಕರ್ನಾಟಕದಲ್ಲಿ ನಡೆಸುತ್ತಾರೆ.

ದಟ್ಟಿ ಕುಣಿತ : ಕಲಾವಿದ ಮುತ್ತಪ್ಪ ಸಿದ್ಧರಾಯ ಕಮತಿ

ದಟ್ಟಿ ಕುಣಿತವೆಂದರೆ ನಮಗೆ ನೆನಪಾಗುವುದು ಮುತ್ತಪ್ಪ ಸಿದ್ದರಾಯ ಕಮತಿ. ಏಕೆಂದರೆ ಈ ಕಲೆಯನ್ನು ಮಾಡಲು ದೈಹಿಕ ಸಾಮರ್ಥ್ಯ ಹೆಚ್ಚಾಗಿರಬೇಕು, ಹಾಗೂ ಜ್ಞಾಪಕಶಕ್ತಿಯೂ ಬೇಕು. ಅಂತಹ ಕಸುವುಳ್ಳ ಒಂದು ತಂಡವನ್ನು ಕಟ್ಟಿದವರು ಮುತ್ತಪ್ಪ ಸಿದ್ದರಾಯ ಕಮತಿ; ಹಾಗಾಗಿ ಕಸುವುಳ್ಳ ಈ ಕಲೆಯ ಪ್ರದರ್ಶನ ಮಾಡಬೇಕೆಂದರೆ ನಮಗೆ ಈ ಕಲಾವಿದನಿಂದಲೇ ಮಾಡಿಸಬೇಕು ಎನ್ನುವ ಪ್ರತೀತಿಯನ್ನು ಹೊಂದಿದ್ದಾರೆ ಸಿದ್ಧರಾಯ ಕಮತಿಯವರು.

ಸಾಮಾಜಿಕವಾಗಿ :

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಕಡಹಟ್ಟಿ ಗ್ರಾಮದ ಮುತ್ತಪ್ಪ ಸಿದ್ಧರಾಯ ಕಮತಿ ಅವರು ದಟ್ಟಿಕುಣಿತಕ್ಕೆ ಹೆಸರುವಾಸಿ. ಜನಪದ ಕಲೆಗಳ ಬಗ್ಗೆ ಇವರಿಗಿರುವ ಆಸಕ್ತಿ, ಅಭಿಮಾನ ಮೂಡಿಸುವಂಥದ್ದು. ಇವರ ತಂದೆ ಡೊಳ್ಳು ಕುಣಿತದ ಹಿರಿಯ ಕಲಾವಿದರು. ತಂದೆಯು ತಂಡದವರಿಗೆ ಡೊಳ್ಳು ಬಡಿಯುವುದನ್ನು ಕಲಿಸುವಾಗ, ೮ ವರ್ಷದ ಬಾಲಕ ಮುತ್ತಪ್ಪನವರು ತಾವು ಕಲಿಯುತ್ತಿದ್ದರಂತೆ. ಆಟವಾಡಲೂ ಹೋಗದೇ ಮಗ ಕಲಿಯುವುದನ್ನು ಕಂಡು, ತಂದೆಯು ಇವರಿಗೂ ಕಲಿಸಿದರಂತೆ. ಸಿದ್ಧರಾಯ ಕಮತಿಯವರಿಗೆ ಜನಪದ ಕಲೆಗಳ ಬಗೆಗೆ ಅದೇನೊ ಒಂದು ರೀತಿಯ ಸೆಳೆತ. ಯಾರಾದರೂ ರೋಮಾಂಚನಾಕಾರಿಯಾದ ವಿಶೇಷ ಕಲೆಯನ್ನು ಪ್ರದರ್ಶಿಸಿದರೆ, ಅದನ್ನು ತಾನು ಕೂಡ ಕಲಿಯಬೇಕೆಂಬ ಹಂಬಲ ಮತ್ತು ಛಲ, ಈ ಛಲವೇ ಇವರನ್ನು ಇಂದು ಪ್ರತಿಭಾನ್ವಿತ ಕಲಾವಿದರನ್ನಾಗಿ ಬೆಳೆಸಿದೆ. ಒಂದು ಕಲೆಯನ್ನು ಕಲಿತ ಮೇಲೆ ಮತ್ತೊಂದು ಕಲೆ, ನಂತರ ಮಗದೊಂದು–ಹೀಗೆ ಕಲೆಯ ಬೆನ್ನು ಹತ್ತಿ ಉತ್ತರ ಕರ್ನಾಟಕದ ಅನೇಕ ಕಲೆಗಳನ್ನು ಕರಗತ ಮಾಡಿಕೊಂಡಿದ್ದಾರೆ ಮುತ್ತಪ್ಪನವರು. ಡೊಳ್ಳಿನ ಪದ, ಕುದುರೆ ಕುಣಿತವೂ ಸೇರಿದಂತೆ ಹತ್ತಾರು ಕಲೆಗಳಲ್ಲಿ ಅವರು ಪರಿಣಿತರು.

ತಮ್ಮ ತಂಡದಲ್ಲಿರುವವರಿಗೆ, ಉತ್ತಮ ತರಬೇತಿ ನೀಡಿ, ದಟ್ಟಿಕುಣಿತವನ್ನು ಉಳಿಸಲು ಶ್ರಮಿಸುತ್ತಿದ್ದಾರೆ. ದಟ್ಟಿಕುಣಿತದಲ್ಲಿ ಲಾಗಹಾಕುವುದು, ಪಲ್ಟಿ ಹೊಡೆಯುವುದನ್ನು ಮಾಡಲು ಹೊಳೆ ಅಥವಾ ನದಿಯ ತಟದ ಉಸುಕಿನಲ್ಲಿ, ಮಕ್ಕಳಿಗೆ ಬೆಳಿಗ್ಗೆಯ ಮತ್ತು ಸಂಜೆಯ ಹೊತ್ತು ತರಬೇತಿ ನೀಡುತ್ತಾರೆ. ದೊಡ್ಡವರಿಗೆ ಸಾಯಂಕಾಲದ ಸಮಯದಲ್ಲಿ ಊರ ಮುಂದಿನ ಗುಡಿಯಲ್ಲಿ ತಾಲೀಮು ಕೊಡುತ್ತಾರೆ. ಶ್ರದ್ಧೆಯಿಂದ, ಪ್ರೀತಿಯಿಂದ ಅವರು ಕಲಿತ ದಟ್ಟಿಕುಣಿತವನ್ನು ಕಲಿಯಲು ಇಂದು ಜನ ಮುಂದೆ ಬರುತ್ತಿಲ್ಲ. ಇದನ್ನು ನಂಬಿ ಬದುಕಲು ಹಳ್ಳಿಯಲ್ಲೂ ಯಾರೂ ಸಿದ್ಧರಿಲ್ಲ. ನಮ್ಮ ನಂತರದ ದಟ್ಟಿ ಕುಣಿತದ ಗತಿ ಏನಾಗುವುದೋ ಎಂಬ ಆತಂಕ ಇವರಿಗೆ. ಆಧುನೀಕತೆ ಹೆಚ್ಚಿದಂತೆ ದಟ್ಟಿಕುಣಿತವನ್ನು ಸೂಕ್ತವಾಗಿ ಬದಲಾಯಿಸಬೇಕು. ಜನ ಇಷ್ಟಪಟ್ಟು ನೋಡುವಂತೆ ಆಕರ್ಷಣೀಯವಾಗಿ ಮಾಡಬೇಕೆಂದು ಹಲವಾರು ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ದಟ್ಟಿ ಕುಣಿತವನ್ನು ಉಸಿರಾಗಿಸಿಕೊಂಡಿರುವ ಸಿದ್ಧರಾಯ ಕಮತಿ ಅವರಿಗೆ ಇಂಥ ಕಲೆಗಳನ್ನು ಬಿಟ್ಟು ಬೇರೇನೂ ಗೊತ್ತಿಲ್ಲ.

ಊರೂರು ತಿರುಗಿ ಅನೇಕ ಸಮಾರಂಭಗಳಲ್ಲಿ ದಟ್ಟಿಕುಣಿತದ ಪ್ರದರ್ಶನವನ್ನು ನೀಡಿದ್ದಾರೆ. ಕದಂಬ ಉತ್ಸವ, ಹಂಪಿ ಉತ್ಸವ, ರಾಜ್ಯೋತ್ಸವ ದಸರ ಉತ್ಸವ ಜಾನಪದ ಜಾತ್ರೆ, ಮುಂತಾದ ಉತ್ಸವಗಳಲ್ಲಿ ಭಾಗವಹಿಸಿದ್ದಾರೆ.

ಆರ್ಥಿಕವಾಗಿ :

ಇಂದು ಅವರು ಅಷ್ಟೊಂದು ಪ್ರೀತಿಸಿದ ಕಲೆ ಅವರ ತುತ್ತಿನ ಚೀಲ ತುಂಬಿಸಲು ನೆರವಾಗುತ್ತಿಲ್ಲ. ಹೀಗಿದ್ದರೂ ಮುತ್ತಪ್ಪನವರು ದಟ್ಟಿ ಕುಣಿತದ ನಂಟನ್ನು ಬಿಡಲು ಸಿದ್ಧರಿಲ್ಲ. ತನ್ನ ನಂತರ ಗತಿ ಏನಾಗುವುದೋ ಎಂಬ ಆತಂಕ ಅವರಿಗೆ. ಮುಂದಾದರೂ ಒಳ್ಳೆಯ ದಿನಗಳು ಬಂದಾವು ಎಂಬ ದೂರದ ಕನಸು ಇವರ ಕಣ್ಣಲ್ಲಿದೆ. ಮುತ್ತಪ್ಪ ಕಮತಿಯವರು ಹಲವಾರು ಕಲೆಗಳ ಸಂಗಮವಾಗಿದ್ದರೂ, ಇವರ ಜೀವನ ಬಂಡಿ ಸಾಗುತ್ತಿರುವುದು ಗುಡಿಸಲಿನಲ್ಲಿ. ತಮಗೆ ಬಂದ ದುಃಸ್ಥಿತಿ ಮಕ್ಕಳಿಗೆ ಬರಬಾರದೆಂಬ ಹಂಬಲದಿಂದ. ಅವರನ್ನು ಓದಿಸಲು ಯತ್ನಿಸುತ್ತಿದ್ದಾರೆ. ಹೀಗಾಗಿ ಮನೆಯವರೆಲ್ಲರ ತುತ್ತಿನಚೀಲ ತುಂಬಿಸುವ ಜವಾಬ್ದಾರಿಯಲ್ಲದೇ, ಮಕ್ಕಳ ವಿದ್ಯಾಭ್ಯಾಸದ ಚಿಂತೆಯೂ ಇವರನ್ನು ಕಾಡುತ್ತಿದೆ. ಇಂದಲ್ಲದಿದ್ದರೂ ಮುಂದೆಯಾದರೂ ಕಲೆಗೆ ಬೆಲೆ ದೊರೆಯಬಹುದೆನ್ನುವ ಅವರ ಆಸೆ ಎಲ್ಲಾ ನೋವನ್ನು ಮರೆಸುತ್ತಿದೆ. ಬಂದೇ ಬರುತಾವ ಕಾಲ ಎಂಬ ಭರವಸೆ ಕುಣಿತಕ್ಕೆ ಶಕ್ತಿ ತುಂಬುತ್ತಿವೆ. ದಟ್ಟಿಕುಣಿತ ಹೊಟ್ಟೆ ತುಂಬಿಸುವುದಿಲ್ಲ ಎಂದು ಅರಿತಿರುವ ಯುವ ಜನಾಂಗ ಈ ಕಲೆಯನ್ನು ಕಲಿಯಲು ಹಿಂದೇಟು ಹಾಕುತ್ತಿದ್ದಾರೆ. ಇದು ಸಿದ್ಧಪ್ಪ ಕಮತಿಯವರಿಗೆ ತೀರಾ ನೋವುಂಟು ಮಾಡಿರುವ ಸಂಗತಿ. ಅವರ ಕುಟುಂಬ ಕಾರ್ಯಕ್ರಮವಿಲ್ಲದಿದ್ದಾಗ ಕೂಲಿ ಮಾಡಿಕೊಂಡು ಬದುಕನ್ನು ಸಾಗಿಸುತ್ತಿದ್ದಾರೆ. ಸರಿಯಾಗಿ ಗಾಳಿ ಬೆಳಕಿನ ವ್ಯವಸ್ಥೆ ಇಲ್ಲದ ಮುರುಕು ಜೋಪಡಿಯಲ್ಲಿ ಈ ಕಲಾವಿದನ ಕುಟುಂಬ ವಾಸಿಸುತ್ತಿದೆ. ಮಳೆ ಬಂದರೆ ಎಲ್ಲೆಂದರಲ್ಲಿ ಸೋರುವ ಈ ಸೂರಿನಡಿ ಹೆಂಡತಿ ಮಕ್ಕಳೊಂದಿಗೆ ಕಲೆಯನ್ನು ನಂಬಿ ಬಡತನವನ್ನೇ ಉಂಡು-ಉಟ್ಟು ಬದುಕುತ್ತಿದ್ದಾರೆ ಮುತ್ತಪ್ಪ ಕಮತಿ.

ಜಾಗತೀಕರಣ ಹಾಗೂ ಆಧುನೀಕತೆಯೆಂಬ ಓಡುವ ಕುದುರೆಯನ್ನು ಹತ್ತಿರುವ ನಮ್ಮ ಸಮಾಜ ಪಾರಂಪರಿಕ ಕಲೆಗಳ ಬಗ್ಗೆ ನಿರ್ಲಕ್ಷ ಮನೋಭಾವನೆಯನ್ನು ಹೊಂದಿದೆ. ಇದರಿಂದಾಗಿ ನಮ್ಮ ಸಂಸ್ಕೃತಿಯ ಪ್ರತೀಕವೆನಿಸಿರುವ ದಟ್ಟಿಕುಣಿತ ಕೂಡ ಅವಸಾನದ ಅಂಚಿನಲ್ಲಿದೆ. ಈ ಕಲೆಯನ್ನು ನೆಚ್ಚಿಕೊಂಡಿರುವ ಕುಟುಂಬಗಳಿಗೆ ಸರಕಾರದಿಂದ ಹೆಚ್ಚಿನ ನೆರವೇನೂ ಸಿಗುತ್ತಿಲ್ಲ. ಅಷ್ಟೇ ಅಲ್ಲ ಉತ್ತರ ಕರ್ನಾಟಕದ ಕಲಾವಿದರಿಗೆ ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿಯೇ ಇಲ್ಲ ಹಾಗಾಗಿ ಅಧಿಕಾರಿಗಳು ಕಲಾವಿದರಿಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳ ಬಗ್ಗೆ ಕುರಿತಾದ ಮಾಹಿತಿ ನೀಡಿ ಸಹಕರಿಸಬೇಕಾಗಿದೆ. ಆರ್ಥಿಕ ಸಂಕಷ್ಟದಿಂದ ಕಲಾವಿದರು ಪಾರಾದರೆ ಕಲೆ ತಾನೇ ತಾನಾಗಿ ಉಳಿಯುತ್ತದೆ, ಬೆಳೆಯುತ್ತದೆ. ತುಂಬಾ ಕಷ್ಟದಲ್ಲಿರುವ ಜನಪದ ಕಲಾವಿದರ ಮಕ್ಕಳಿಗೆ ಸರ್ಕಾರ ಓದಿಸುವ ವ್ಯವಸ್ಥೆಯನ್ನಾದರೂ ಮಾಡಬೇಕು ಎನ್ನುತ್ತಾರೆ.

ದಟ್ಟಿ ಕುಣಿತದಲ್ಲಿ ಇಷ್ಟೇ ಜನರಿರಬೇಕು ಎನ್ನುವ ನಿಯಮವಿದೆ. ಆದರೆ ಕಾರ್ಯಕ್ರಮ ನೀಡಲು ಕಲಾವಿದರನ್ನು ಊರಿಂದೂರಿಗೆ ಕರೆದೊಯ್ಯುವಾಗ ಅವರ ಸಂಭಾವನೆ, ಪ್ರಯಾಣದ ವೆಚ್ಚವನ್ನು ಭರಿಸುವ ಶಕ್ತಿ ಇಲ್ಲದೇ ತಮ್ಮ ಅನುಕೂಲಕ್ಕೆ ತಕ್ಕಂತೆ ಕಡಿಮೆ ಜನರನ್ನು ಆರಿಸಿಕೊಂಡು ಕಾರ್ಯಕ್ರಮ ಮುಗಿಸುತ್ತಾರೆ. ದಟ್ಟಿ ಕುಣಿತಕ್ಕೆ ಇಂದು ಕಲಾವಿದರ ಕೊರತೆ ಇದೆ. ಕಲಾವಿದರು ಇದರಿಂದ ಒಪ್ಪತ್ತಿನ ಊಟವೂ ದೊರೆಯುತ್ತಿಲ್ಲ ಎನ್ನುವ ಮನೋಭಾವದಲ್ಲಿದ್ದಾರೆ. ಸುಮಾರು ದಟ್ಟಿಕುಣಿತದ ಐದು ತಂಡಗಳಿವೆ. ಎರಡು ತಂಡಗಳು ಬಹಳ ಕ್ರಿಯಾಶೀಲವಾಗಿ ದುಡಿಯುತ್ತಿವೆ. ದಟ್ಟಿಕುಣಿತದಲ್ಲಿ ಹೆಣ್ಣು ಮಕ್ಕಳ ತಂಡವಿದೆ. ಅದು ಗೋಕಾಕ್‌ನಲ್ಲಿದೆ. ದಟ್ಟಿ ಕುಣಿತ ದೈಹಿಕ ಸಾಮರ್ಥ್ಯ ಜೊತೆಜೊತೆಗೆ ಜ್ಞಾಪಕ ಶಕ್ತಿಯು ಇರಬೇಕಾಗುತ್ತದೆ. ಕಸುವುಳ್ಳ ಪುರುಷರು ಇದನ್ನು ತುಂಬಾ ಲೀಲಾಜಾಲವಾಗಿ ಮಾಡುತ್ತಾರೆ. ದಟ್ಟಿ ಕುಣಿತದಲ್ಲಿ ಹೆಣ್ಣು ಮಕ್ಕಳ ಪಾಲ್ಗೊಳ್ಳುವಿಕೆ ನಿಜಕ್ಕೂ ಸ್ವಾಗತಾರ್ಹ.

ದೃಶ್ಯಮಾಧ್ಯಮದಲ್ಲಿ ದಟ್ಟಿ ಕುಣಿತ

ಬಹು ಶಕ್ತಿ ಸಾಮರ್ಥ್ಯವನ್ನು ಬೇಡುವ ದಟ್ಟಿಕುಣಿತವು ದೃಶ್ಯಮಾಧ್ಯಮಕ್ಕೆ ಹೇಳಿಮಾಡಿಸಿದಂತಹ ಕಲೆ. ವೀಕ್ಷಕರು ಚಮತ್ಕಾರಿಕವಾಗಿ ಪಲ್ಟಿಹೊಡೆಯುವುದು. ಭಾರ ಹೊರುವುದು, ಪಿರಮಿಡ್ಡಿನಲ್ಲಿ ಕಲಾವಿದ ತನ್ನನ್ನು ತಾನೇ ತೊಡಗಿಸಿಕೊಳ್ಳುವುದನ್ನು ನೋಡಲು ಹಾತೊರೆಯುತ್ತಾರೆ. ಇಂದು ದೃಶ್ಯಮಾಧ್ಯಮದಿಂದ ವೀಕ್ಷಕ ಬೇರೆಯವರಿಗೆ ತೊಂದರೆಯಾದರೆ ತಾನು ಆನಂದಿಸುತ್ತಾನೆ. ಭಾರವಿರುವ ಡೊಳ್ಳನ್ನು ಪಿರಿಮಿಡ್ಡಿನ ತುದಿಗೆ ಹೋಗಿ ಕಲಾವಿದ ಹೊಡೆಯುವುದು ನಿಜಕ್ಕೂ ಅಪಾಯಕಾರಿ. ಆದರೆ ಈ ಚಮತ್ಕಾರವನ್ನು ದೃಶ್ಯ ಮಾಧ್ಯಮದ ಮೂಲಕ ಜನ ನೋಡಿ ಸಂತೋಷಿಸುತ್ತಾರೆ. ಇದರಿಂದ ಕಲಾವಿದರಿಗೆ ಪ್ರಚಾರವೂ ದೊರೆಯುತ್ತದೆ. ಕಾರ್ಯಕ್ರಮಗಳು ಸಿಗುತ್ತವೆ. ಕೆಲವು ಚಮತ್ಕಾರಗಳು ಹೇಗಿರುತ್ತವೆಂದರೆ ಪ್ರೇಕ್ಷಕ ಕುರ್ಚಿಯ ತುದಿಯಲ್ಲಿ ಕುಳಿತು ನೋಡುವಂತೆ ಮನರಂಜಕವಾಗಿ ದಟ್ಟಿ ಕುಣಿತದ ಮುಖ್ಯಸ್ಥನು ನಿಭಾಯಿಸುತ್ತಾನೆ. ಹೀಗಾಗಿ ಕರ್ನಾಟಕದ ಯಾವುದೋ ಮೂಲೆಯಲ್ಲಿರುವ ಒಂದು ಕಲೆ ದೃಶ್ಯಮಾಧ್ಯಮದ ತೆಕ್ಕೆಗೆ ಸಿಕ್ಕಿ ಪ್ರಸಾರ, ಪ್ರಚಾರಗೊಳ್ಳುವುದು ನಿಜಕ್ಕೂ ಶ್ಲಾಘನೀಯ.

ಹೊಸ ಪ್ರಯೋಗಗಳ ಅನ್ವೇಷಣೆಯಲ್ಲಿ ತೊಡಗಿರುವ ಮುತ್ತಪ್ಪ ಕಮತಿಯವರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ಕಲಾವಿದ. ಅಡಗಿ ಕುಳಿತಿರುವವರನ್ನು ಹಿಡಿಯುವ ರೀತಿ ನಿಜಕ್ಕೂ ಅಚ್ಚರಿ ಎನಿಸುತ್ತದೆ. ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿರುವ ಕಲಾವಿದ. ಡೊಳ್ಳಿನ ಸದ್ದಿನಲ್ಲಿ ಸೂಚನೆ ಪಾಲಿಸಿ ಹಿಡಿಯುವ ರೀತಿ ನಿಜಕ್ಕೂ ಅಚ್ಚರಿ ಎನಿಸುತ್ತದೆ. ದಟ್ಟಿ ಕುಣಿತದ ಕಲಾವಿದರು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು, ಕೆಲವು ಸಂಜ್ಞೆ (ಕೋಡ್‌ವರ್ಡ್)

ಗಳನ್ನು ಅನುಸರಿಸಿ ಕಣ್ಣಾಮುಚ್ಚೆ ಕಾಡೇಗೂಡೆ ಆಡುತ್ತಾರೆ. ಈ ಸಂಜ್ಞೆಯನ್ನು ಹೇಳುವ ವಿಧ ಹಿನ್ನಲೆ ಸಂಗೀತದ ವಾದ್ಯಗಳಾದ ತಾಳ, ಕೈಪೆಟ್ಟು, ಶಯನಾಯಿ, ಶೃತಿ ಇವುಗಳಿರುತ್ತವೆ. ದಿಂಗ್ ದಾಂಗ್ ದಿಂಗ್ ಕೈಪೆಟ್ಟುವಿನಲ್ಲಿ ಬಾರಿಸುತ್ತಾರೆ. ದಿಂಗ್ ದಾಂಗ್ ದಿಂಗ್ ಎಂದರೆ ಪೂರ್ವ ದಿಂಗ್ ದಾಂಗ್ ಡುಂ ಎಂದರೆ ಪಶ್ಚಿಮ, ಕಡ-ಕಡ-ಕಡ ಎಂದರೆ ಉತ್ತರ, ಆಹಾಹಾ...ಸಾಲ್...ಬಂದ ಎಂದರೆ ದಕ್ಷಿಣಕ್ಕೆ. ಹೀಗೆ ಕಣ್ಣಾಮುಚ್ಚೆ ಆಟವಂತೂ ತೀರಾ ಇತ್ತೀಚಿನದ್ದಾಗಿದ್ದು, ಸಭಿಕರಿಗೆ, ನೋಡುವ ಎಲ್ಲಾ ಜನವರ್ಗಕ್ಕೂ ವಿಶೇಷದ್ದಾಗಿ ಕಾಣುತ್ತದೆ. ದಟ್ಟಿ ಕುಣಿತದಲ್ಲಿ ಒಂದಿಷ್ಟು, ತಿಗಡಿ-ಬಗಡಿ ಲಾಟ್ರಿ, ಪುಗಡಿ ಹೆಚ್ಚು ಹೀಗೆ ಅನೇಕ ವಿಧಗಳಿವೆ. ಇದೆಲ್ಲವೂ ಒಂದಕ್ಕಿಂತ ಒಂದು ಆಕರ್ಷಕ.

೩.೩.೧೧ ಕಂಗೀಲು ಕುಣಿತ

ದಕ್ಷಿಣ ಕನ್ನಡ ಜಿಲ್ಲೆಯು ತನ್ನ ಒಡಲಲ್ಲಿ ಅನೇಕ ಕಲೆಗಳನ್ನು ಹುದುಗಿಸಿಕೊಂಡಿದೆ. ಸಾಧಾರಣವಾಗಿ ಜನಪದ ಕಲೆಗಳೆಲ್ಲವೂ ಆರಾಧನೆಯ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡವು. ಮಾರಮ್ಮನ ಪ್ರೀತ್ಯರ್ಥವಾಗಿ ಅನೇಕ ಕಲೆಗಳು ಆಚರಣೆಗಳು, ಇಂದಿಗೂ ದಕ್ಷಿಣ ಕನ್ನಡದಲ್ಲಿ ನಡೆಯುತ್ತಿದೆ. ಅದರಲ್ಲಿ ಕಂಗೀಲು ಕುಣಿತವೂ ಒಂದು. ಗ್ರಾಮದಲ್ಲಿರುವ ರೋಗರುಜಿನಗಳನ್ನು ಹೊಡೆದೋಡಿಸುವ, ಆಚರಣೆಯೇ ಕಂಗೀಲು ಕುಣಿತದ ರೂಪದಲ್ಲಿ ಹೊರಹೊಮ್ಮಿದೆ. ಊರ ಮಾರಿಯನ್ನು ಹೊರಗೆ ಹಾಕುವುದು ಈ ಕುಣಿತದ ಉದ್ದೇಶ. ಈ ಕುಣಿತದ ಮಧ್ಯೆ ತುಳು ಮಾತಿನಲ್ಲಿ ಬರುತ್ತದೆ. ಒಂಜಿ ತಾರೆದ ತಿರಿ, ಬಕ್ಕ ಒಂದು ಕೋರಿದ ತಲೆ ದಿಟ್, ಊರದ ಮಾರಿ ಪಿದಾಯಿ ಪಾಡಡು ಅಂದರೆ ಒಂದು ತೆಂಗಿನ ಎಳೆಗರಿ ಒಂದು ಕೋಳಿಯ ತಲೆ ಅಥವಾ ಕೋಳಿಯ ಬಲಿ ಮೂಲಕ ಊರಿನ ಮಾರಿಯನ್ನು ಹೊರಗೆ ಹಾಕುವುದು, ಊರಿಗೆ ಸುಭಿಕ್ಷೆ ತರಬೇಕು ಎನ್ನುವುದು ಈ ಕುಣಿತಗಳ ಮೂಲಕ ಎನ್ನುವುದು ಮುಖ್ಯ ಉದ್ದೇಶ.

ಕಂಗೀಲು ಕುಣಿತ ಕಲಾವಿದ ಸುಂದರ ಪುಲಿಪು



ಕಂಗೀಲು ಕುಣಿತ

ಕಂಗೀಲು ಕುಣಿತ ಒಂದು ವಿಶೇಷವಾದ ಬುಡಕಟ್ಟಿನ ಕುಣಿತ. ಇಂದು ಕಣ್ಮರೆಯ ಅಂಚಿನಲ್ಲಿರುವ ಈ ಕುಣಿತಕ್ಕೆ ಕಾಯಕಲ್ಪವನ್ನು ನೀಡಿ, ಇಂದು ನಮ್ಮ ಕಣ್ಣೆದುರಿಗಿರಿಸಿದ್ದಾರೆ. ಕಲಾವಿದೆ ಸುಂದರ ಪುಲಿಪು. ತಮ್ಮ ನಂತರ ಈ ಕಲೆ ತಮ್ಮ ಮಗ ಮುಂದುವರಿಸಬೇಕೆಂದು ಅವನನ್ನು ಕೂಡಾ ಕಂಗೀಲು ಕುಣಿತದಲ್ಲಿ ತಯಾರಿ ಮಾಡಿದ್ದಾರೆ. ಸರ್ಕಾರಿ ಉದ್ಯೋಗದಲ್ಲಿದ್ದರೂ ತಮ್ಮ ಕಲೆಯಾದ ಕಂಗೀಲು ಕುಣಿತ ಮುಂದುವರೆಯಬೇಕೆಂಬ ಹೆಬ್ಬಯಕೆ ಅವರದು.

ಸಾಮಾಜಿಕವಾಗಿ :

ಉಡುಪಿ ಜಿಲ್ಲೆಯ ಕಾಪು ಪಡು ಗ್ರಾಮದ ಪಿ. ಸುಂದರ ಪುಲಿಪು ಅವರು ಕಂಗೀಲು ಕುಣಿತದ ಕಲಾವಿದ. ಇವರಿಗೆ ತಮ್ಮ ಆಚಾರ ವಿಚಾರಗಳ ಮೇಲೆ ಅಪಾರ ನಂಬಿಕೆ ಮತ್ತು ನಿಷ್ಠೆ. ತಮ್ಮ ಕಲೆಯನ್ನು ಉಳಿಸಲು ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಕಲೆಯ ಉಳಿವಿಗಾಗಿ ಸಂಘವನ್ನು ಕಟ್ಟಿ ಕಲಾವಿದರನ್ನೆಲ್ಲಾ ಒಗ್ಗೂಡಿಸಿ, ಆರಾಧನಾತ್ಮಕ ಕಲೆಯಾದ ಕಂಗೀಲು ಕುಣಿತವನ್ನು ಉಳಿಸಲು ಸತತವಾಗಿ ಪರಿಶ್ರಮ ಪಟ್ಟಿದ್ದಾರೆ. ಊರ ಮಾರಿಯನ್ನು ಹೊಡೆದೋಡಿಸಲು ಹಳ್ಳಿಯ ಹಿತದೃಷ್ಟಿಯಿಂದ ಎಲ್ಲರೂ, ಎಲ್ಲವೂ ಸುಭಿಕ್ಷವಾಗಿರಲೆಂದು ದೇವರಲ್ಲಿ ಮೊರೆ ಹೋಗುವ ಆಚರಣೆಯಾಗಿದೆ.

ಕಾಪುವಿನಲ್ಲಿ ತಹಶೀಲ್ದಾರರಾದ ಇವರು ನಮ್ಮ ಕಲೆ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಗೌರವ. ಇವರ ಮುಂಡಾಲ ಜನಾಂಗಕ್ಕೆ ಸೇರಿದವರು. ಮಾರಗುರಿಕಾರ(ಮುಖಂಡ)ರಾಗಿರುವುದರಿಂದ ವರ್ಷಕ್ಕೊಂದಾವರ್ತಿ ಈ ಕಂಗೀಲು ಕುಣಿತವನ್ನು ಆಚರಿಸಬೇಕೆಂಬ ನಿಯಮವಿದೆ. ಇದಕ್ಕೆ ಬದ್ಧರಾಗಿ ಇವರು ಈ ಕುಣಿತವನ್ನು ಏರ್ಪಡಿಸುತ್ತಾರೆ. ಕಲಾವಿದರಿಗೆ ಇಂದು ಈ ಕುಣಿತದ ಮೇಲೆ ಅಪೇಕ್ಷೆಯಿಲ್ಲದೆ ಬರುವುದಿಲ್ಲ. ಆದರೂ ಇವರು ಬೇರೆ ಕಲಾವಿದರನ್ನು ಕರೆದು, ತಂಡವನ್ನು ಕಟ್ಟಿಕೊಂಡು ಈ ಕಲೆಯ ಉಳುವಿಗಾಗಿ ಶ್ರಮಿಸುತ್ತಿದ್ದಾರೆ. ಕಲಾವಿದರಿಂದ ತೊಂದರೆ ಅನುಭವಿಸಿದ ಇವರು ನಂತರ ತಮ್ಮ ಮಗನಿಗೆ ಕೊರಗಜ್ಜನ ವೇಷವನ್ನು ಹಾಕುವಂತೆ ತಾಲೀಮುಮಾಡಿ, ಈಗ ಇವರ ಮಗನೇ ಕಂಗೀಲು ಕುಣಿತ ತಂಡದ ನೇತೃತ್ವವನ್ನು ವಹಿಸಿಕೊಂಡಿದ್ದಾನೆ. ನಿತ್ಯಶ್ರೀ ತಂಡವನ್ನು ಕಟ್ಟಿದ್ದಾರೆ. ಈ ತಂಡದ ಕಲಾವಿದರೆಲ್ಲರೂ ಈಗ ವರ್ಷಕ್ಕೊಂದಾವರ್ತಿ ಸಂತಸ ಸಂಭ್ರಮಗಳಿಂದಲೇ ಕಂಗೀಲು ಕುಣಿತವನ್ನು ಮಾಡುತ್ತಾರೆ.

ಸುಂದರ ಪುಲಿಪು ಅವರ ಮಗ ಗುರುಚರಣ್ ಇಂದು ಅಪ್ಪನ ನಂತರ ಇದನ್ನು ಮುಂದುವರೆಸಿ ಕೊಂಡು ಹೋಗುತ್ತಿದ್ದಾರೆ. ಎಷ್ಟೇ ಕಷ್ಟವಿದ್ದರೂ ತಮ್ಮದೇ ಸ್ವಂತ ಖರ್ಚಿನಲ್ಲಿ ಈ ಕಲೆಯನ್ನು ರೂಢಿಸಿಕೊಂಡು ನಡೆಸುತ್ತಿದ್ದಾರೆ. ತಂಡದ ಸಹಕಲಾವಿದರಿಗೆ ಉತ್ತಮ ರೀತಿಯಲ್ಲಿ ಗೌರವ ಸಂಭಾವನೆಯನ್ನು ನೀಡಿ, ಊರೂರು ತಿರುಗಿದಾಗ

ಕಾಣಿಕೆ ರೂಪದಲ್ಲಿ ಬಂದ ದವಸ-ಧಾನ್ಯ, ಹಣವನ್ನು ಸಹ ಕಲಾವಿದರಿಗೆ ನೀಡಿ, ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಹೀಗಾಗಿ ಗುರುಚರಣ್ ಕರೆದರೆಂದರೆ ಕಾಪುವಿನ ಬಳಿ ಇರುವ ಕಂಗೀಲು ನೃತ್ಯದ ಕಲಾವಿದರು ಎಷ್ಟೇ ರಾತ್ರಿಯಾಗಲೀ ಇವರಿಗೆ ಸಹಕರಿಸುತ್ತಾರೆ.

ಆರ್ಥಿಕವಾಗಿ :

ಮುಂಡಾಲ ಜನಾಂಗಕ್ಕೆ ಸೇರಿದ ಸುಂದರ ಪುಲಿಪು ಅವರು, ತಮ್ಮ ವಿದ್ಯಾಭ್ಯಾಸ ನಂತರ ಅವರ ತಂದೆಯಿಂದ ಬಳುವಳಿಯಾಗಿ ಬಂದ ಷಹನಾಯಿ ನುಡಿಸುವ ವೃತ್ತಿಯನ್ನು ಮಾಡುತ್ತಿದ್ದರು. ತಂದೆಯು ಹೆಣ್ಣು ಮಕ್ಕಳ ಮದುವೆ ಮಾಡಿಸುವುದರೊಂದಿಗೆ, ಮಗನ ಓದಿನ ಕಡೆಗೂ ಗಮನಕೊಟ್ಟಿದ್ದರು. ತಂದೆ ಗುರಿಕಾರ ಆಗಿದ್ದರಿಂದ ಕಂಗೀಲು ಕುಣಿತ ಮಾಡಲೇಬೇಕೆಂಬ ಅನಿವಾರ್ಯತೆಯು ಇತ್ತು. ತಂದೆಯ ಕಾಲಾನಂತರ ಗುರಿಕಾರ ಪಟ್ಟವು ಅವರ ಮಗನಾದ ಸುಂದರ ಪುಲಿಪು ಅವರಿಗೆ ದೊರೆಯಿತು. ಈ ಸಮಯದಲ್ಲಿ ಕುಂದಾಪುರ ತಾಲ್ಲೂಕಿನಲ್ಲಿ ಅವರಿಗೆ ಉಪ ತಹಶೀಲ್ದಾರ್ ಹುದ್ದೆ ಸಿಕ್ಕಿತು. ನಂತರ ಇವರು ಶೋಭಾ ಎನ್ನುವ ಸರ್ಕಾರಿ ನೌಕರಿಯಲ್ಲಿರುವವರೊಂದಿಗೆ ಮದುವೆಯಾದರು. ಅವರಿಗೆ ಮೂರು ಜನ ಮಕ್ಕಳು. ಒಬ್ಬ ಮಗಳು ಅಕ್ಕ ಪಂಚಾಯತ್ ಡೆವಲಪ್‌ಮೆಂಟ್ ಆಫೀಸರ್ ಆಗಿದ್ದಾರೆ. ಇನ್ನೊಬ್ಬ ಮಗಳು ಲ್ಯಾಬ್ ಟೆಕ್ನಿಶಿಯನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕುಟುಂಬದವರೆಲ್ಲರೂ ಈ ಕಲೆಗೆ ತಮ್ಮ ಕೈಲಾದ ಪ್ರೋತ್ಸಾಹ ನೀಡುತ್ತಿದ್ದಾರೆ. ಈಗ ತಮ್ಮ ಮನೆತನಕ್ಕೆ ಬಂದಿರುವ ಕಲೆಯನ್ನು ಬಿಡಬಾರದೆಂದು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಕಲೆಯ ಕುರಿತು ಆಸಕ್ತಿ ಬೆಳೆಸಿದರು ಪುಲಿಪು ಅವರು.

ವರ್ಷಕ್ಕೊಂದಾವರ್ತಿ ಮೂರುದಿನ ಅಥವಾ ಒಂದು ವಾರದ ತನಕ ಕಂಗೀಲು ಕುಣಿತವನ್ನು ಮಾಡಿ ಅವರು ಕೊಡುವ ದವಸಧಾನ್ಯಗಳನ್ನು ತಂಡದಲ್ಲಿರುವವರೆಲ್ಲರೂ ಹಂಚಿಕೊಳ್ಳುತ್ತಾರೆ. ಹಿಂದೆ ವ್ಯವಸಾಯವನ್ನು ನಂಬಿ ಬದುಕುತ್ತಿದ್ದರು. ವರ್ಷಕ್ಕೊಂದಾವರ್ತಿ ಮೇ ತಿಂಗಳಲ್ಲಿ ಊರಿನ ಮತ್ತು ಸುತ್ತ-ಮುತ್ತಲಿನ ಊರುಗಳಿಗೆ ಕಂಗೀಲು ಕುಣಿತ ಕುಣಿದು ಬಂದರೆ ವರ್ಷಕ್ಕಾಗುವಷ್ಟು ದವಸ ಧಾನ್ಯಗಳು ದೊರೆಯುತ್ತಿದ್ದವು. ಈಗ ಹಾಗಿಲ್ಲ, ಓದಿದವರೆಲ್ಲ ಪಟ್ಟಣ ಸೇರಿ ಕೃಷಿ ಮಾಡದೆ ನೆಲವೆಲ್ಲ ಬೀಳು ಬಿದ್ದು ಕಾಣಿಕೆಯಾಗಿ ದವಸ ಧಾನ್ಯಗಳನ್ನು ಕೊಡುವುದಿಲ್ಲ. ಕೊಟ್ಟರೂ ಮನಸಚ್ಚೇ ಕೊಡುವುದಿಲ್ಲ. ಅದರ ಬದಲು ಹಣವನ್ನು ನೀಡುತ್ತಾರೆ. ಹಾಗಾಗಿ ಕಲಾವಿದರು ಇದನ್ನೇ ನಂಬಿ ಕೂರಲು ಆಗುವುದಿಲ್ಲ. ಮೀನುಗಾರಿಕೆ, ಕೂಲಿ, ಕಲೆ, ಇವುಗಳ ನಡುವೆ ಸಮನ್ವಯ ಸಾಧಿಸಲಾಗುತ್ತಿಲ್ಲ. ಹಾಗಾಗಿ ಜೀವನ ಸಾಗಿಸಲಾಗದೆ ಈ ಜನರು ತಾವು ಈ ಕಲೆಯನ್ನು ಮಾಡುವುದು ಬೇಡವೆಂದು ಬಿಟ್ಟು ಬಿಟ್ಟಿದ್ದಾರೆ.

ಆರಾಧನೆಗೆ ಮಾತ್ರ ಸೀಮಿತವಾಗಿದ್ದ ಈ ಕಲೆ ಕಲಾವಿದರ ಹೊಟ್ಟೆಯನ್ನು ತುಂಬಿಸುತ್ತಿಲ್ಲವಾದ್ದರಿಂದ ಅದನ್ನು ಮಾಡಲು ಯಾರೊಬ್ಬರು ಮುಂದೆ ಬರುತ್ತಿಲ್ಲವಾದ್ದರಿಂದ ತಮ್ಮ ಮಗನಿಗೆ ವೇದಿಕೆಯ ಕಾರ್ಯಕ್ರಮವಾಗಿ ಕಂಗೀಲು ಕುಣಿತವನ್ನು ಮಾಡಲು ಆದೇಶಿಸಿದರು. ಇಂದು ವೇದಿಕೆ ಕಾರ್ಯಕ್ರಮ ಮುಗಿಸಿ ಬಂದ ಮೇಲೆ ದೈವಕ್ಕೆ ೧೦೧ ರೂಪಾಯಿ ಕಾಣಿಕೆಯನ್ನು, ಸಾರಾಯಿಯ ಕೊಟ್ಟೆಯನ್ನು, ಎಲೆ ಅಡಿಕೆಯನ್ನು ತಪ್ಪು ದಂಡವಾಗಿ ನೀಡಿ, ಈ ಆರಾಧನಾತ್ಮಕ ಕಲೆಯನ್ನು ವೇದಿಕೆಯ ಕಲೆಯ ಮೂಲಕ ಎಲ್ಲರಿಗೂ ನೋಡಲು ಸಿಗುವಂತೆ ಮಾಡಿದ್ದಾರೆ.

ಯುವ ಪೀಳಿಗೆಯ ಕಲಾವಿದ ಗುರುಚರಣ್ ಪುಲಿಪು :

ಗುರುಚರಣ್ ಪುಲಿಪು ಅವರ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೂ ಅಕ್ಕಂದಿರು ತಮ್ಮನ ಜೊತೆಯಾಗುತ್ತಾರೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವೇಷಭೂಷಣಗಳ ಜವಾಬ್ದಾರಿ ನೋಡಿಕೊಳ್ಳುತ್ತಾರೆ. ಗುರುಚರಣ್ ಪುಲಿಪು ಅವರು ತಮ್ಮದೇ ಆದ ನಿತ್ಯಶ್ರೀ ಎಂಬ ಜನಪದ ಕಲಾತಂಡವನ್ನು ಕಟ್ಟಿಕೊಂಡು ಜನಪದ ಸಿರಿಯನ್ನು ನಾಡಿಗೆ ಪಸರಿಸುತ್ತಿದ್ದಾರೆ. ಗುರುಚರಣ್ ಅವರು ಕಂಗೀಲುಕುಣಿತದೊಂದಿಗೆ ಇತರೆ ಕಲಾಪ್ರಕಾರಗಳಾದ ಕರಗ ಕೋಲಾಟ, ಚೆನ್ನು ಕುಣಿತ, ದಶಾವತಾರ, ಬೆಸ್ತನೃತ್ಯ, ವೀರಗಾಸೆ, ಪಟಕುಣಿತ, ಬೇಡರ ನೃತ್ಯ, ಹಾಲಕ್ಕಿ ಕುಣಿತ, ಸುಗ್ಗಿ ಕುಣಿತ, ಕರಗ ಕುಣಿತ ಸೇರಿದಂತೆ ವಿವಿಧ ಕುಣಿತಗಳನ್ನು ಕರಗತ ಮಾಡಿಕೊಂಡಿದ್ದಾರೆ. ಈಗಾಗಲೇ ಜಿಲ್ಲಾ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ರಾಜ್ಯ ಮಟ್ಟದ ಪ್ರತಿಭಾ ಉತ್ಸವಗಳಲ್ಲಿ ಇವರ ನಿತ್ಯಶ್ರೀ ತಂಡವು ಅದೆಷ್ಟೋ ಬಹುಮಾನಗಳನ್ನು ಪಡೆದುಕೊಂಡಿದೆ.



ಕಂಗೀಲು ಕುಣಿತ

ಕರ್ನಾಟಕದ ಪ್ರತಿಷ್ಠಿತ ವೇದಿಕೆ ಜನಪದ ಜಾತ್ರೆಯಲ್ಲಿ ಹಲವು ಕಾರ್ಯಕ್ರಮಗಳಿಗೆ ನೃತ್ಯ ಪ್ರದರ್ಶನ ನೀಡಿದ್ದಾರೆ. ಹಂಪಿ ಉತ್ಸವ, ಮೈಸೂರು ದಸರಾ ಮೆರವಣಿಗೆ, ಹಾಸನ ಆದಿಚುಂಚನಗಿರಿ ಮಠ, ಕೇರಳ ಉದ್ಯಮ ಕ್ಷೇತ್ರ, ಬೆಂಗಳೂರು ಹಬ್ಬ, ವಿಶ್ವ ತುಳು ಸಮ್ಮೇಳನ, ಬೆಂಗಳೂರಿನ ಸುವರ್ಣ ಕರ್ನಾಟಕ ಉತ್ಸವ, ಆಳ್ವಾಸ್ ನುಡಿಸಿರಿಗಳಲ್ಲೂ ಕಾರ್ಯಕ್ರಮ ಸಂಯೋಜಿಸಿದ್ದಾರೆ. ಪುಲಿಪು ಸಂಗಮ ಜಾನಪದ ಕಲಾಮೇಳ ಮತ್ತು ನಿತ್ಯಶ್ರೀ ಜನಪದ ಕಲಾತಂಡದ ಮೂಲಕ ಒಟ್ಟು ಒಂದು ಸಾವಿರ ಜಾನಪದ ನೃತ್ಯ ಕಾರ್ಯಕ್ರಮಗಳನ್ನು ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ವಿವಿಧ ಶಾಲಾ-ಕಾಲೇಜುಗಳಿಗೆ ನೃತ್ಯ ತರಬೇತಿಯನ್ನು ನೀಡುತ್ತಾರೆ. ಅಲ್ಲದೇ ಮರಳು ಶಿಲ್ಪ ರಚನೆಯಲ್ಲೂ ತೊಡಗಿಸಿಕೊಂಡು ವಿವಿಧ ಕಲಾ ಪ್ರಕಾರಗಳಲ್ಲಿ ದುಡಿಯುತ್ತಿದ್ದಾರೆ. ಬೆಂಗಳೂರು ಕಲಾ ಗ್ರಾಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ನಡೆದ ರಾಜ್ಯ ಮಟ್ಟದ ಜನಪದ ಕಲಾವಿದರ ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯ ತರಬೇತುದಾರರಾಗಿ ಭಾಗವಹಿಸಿದ್ದಾರೆ.

ಇಂದಿನ ದಿನಮಾನಗಳಲ್ಲಿ ಈ ಸಂಪ್ರದಾಯ ಆಚರಣೆ ಇಲ್ಲದಿದ್ದರೂ ಕಾರ್ಯಕ್ರಮದ ರೂಪದಲ್ಲಿ ಹಲವಾರು ಕಡೆ ಈ ಕಂಗೀಲು ಕುಣಿತವನ್ನು ಕೊಂಡೊಯ್ದು ಜನತೆಗೆ ಪರಿಚಯ ಮಾಡಿಕೊಟ್ಟಿದ್ದಾರೆ. ತಾನೊಬ್ಬ ಕಲಾವಿದನಾಗಿದ್ದು, ಕಲೆಯನ್ನು ಉಳಿಸಿ ಬೆಳೆಸಲು ತಂಡವನ್ನು ಕಟ್ಟಿಕೊಂಡು, ಆಸಕ್ತರಿಗೆ ಕಲೆಯನ್ನು ಕಲಿಸುವ ಕಾಯಕದಲ್ಲಿರುವವರಿಗೆ, ಜನರು ಪ್ರೋತ್ಸಾಹ ಕೊಡುವುದನ್ನು ಬಿಟ್ಟು ಅಸಡ್ಡೆ ಮಾಡುವುದನ್ನು ಕಂಡು ತೀವ್ರವಾದ ಬೇಸರವಿದೆ. ಬರೀ ಕಂಗೀಲು ಕುಣಿತವನ್ನು ನಂಬಿ ಮನೆ ಜವಾಬ್ದಾರಿಯನ್ನು ನಿಭಾಯಿಸುವುದು ಕಷ್ಟವಾಗ್ತಿದೆ. ಕಲೆಯನ್ನು ನಂಬಿ ಬದುಕುವಂತಹ ಪರಿಸ್ಥಿತಿಯಲ್ಲಿ ಕಲಾವಿದರು ಯಾರೂ ಇಲ್ಲ. ಈ ಕಲೆಯನ್ನೇ ನಂಬಿದರೆ ಜೀವನ ನಿರ್ವಹಣೆಗೆ ದಾರಿ ಏನು ಎಂಬುದು ಪ್ರಶ್ನೆಯಾಗಿ ಕಾಡುತ್ತಿದೆ ಕಲಾವಿದರಿಗೆ. ತಮ್ಮಲ್ಲಿರುವ ಕಲೆ ಇವರ ಜನಾಂಗಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಇದನ್ನು ಉಳಿಸಬೇಕೆಂಬ ಹಠ ತೊಟ್ಟಿದ್ದಾರೆ ಗುರುಚರಣ್ ಪುಲಿಪು, ಅದಕ್ಕಾಗಿ ಶ್ರಮಿಸುತ್ತಿದ್ದಾರೆ. ಮುಂದಿನ ತಲೆಮಾರಿಗೆ ಉಳಿಯಲೆಂದು ಇವರು ಆಸಕ್ತ ಯುವಕರಿಗೆ ತರಬೇತಿ ನೀಡುತ್ತಿದ್ದಾರೆ. ಈ ಕುಣಿತವನ್ನು ಎಲ್ಲರೂ ಮಾಡುವಂತಿಲ್ಲ. ನಿರ್ದಿಷ್ಟ ಜನಾಂಗದವರು ಮಾತ್ರ ಮಾಡಬೇಕು. ಅವರಿಗೆ ಹಿರಿಯರು ಮುಖ್ಯಸ್ಥರನ್ನಾಗಿ ಅಂದರೆ ಮಾರಗುರಿಕಾರನನ್ನು ನೇಮಿಸಿದ ನಂತರವೇ ಈ ಕಲೆ ಅವರಿಗೆ ವರ್ಗಾಯಿಸಲ್ಪಡುತ್ತದೆ, ಹಾಗೂ ಮುಂದಿನ ತಲೆಮಾರಿಗೆ ಈ ಕಲೆ ವರ್ಗಾಯಿಸುವ ಜವಾಬ್ದಾರಿ ಇವರ ಮೇಲಿರುತ್ತದೆ. ಕಲಾವಿದರಿಗೆ ಕಂಗೀಲು ಕುಣಿತವನ್ನು ಉಳಿಸುವುದು ಇಂದು ದುಸ್ತರವಾಗಿದೆ. ಕುಣಿತವನ್ನು ಮಾಡಿ ಮನೆ ಜವಾಬ್ದಾರಿ ಹೊರುವುದು ಇದರಿಂದ ಸಾಧ್ಯವಾಗುತ್ತಿಲ್ಲ. ಹೀಗಾಗಿ ಈ ಕಲಾವಿದರು ಸಂಕಷ್ಟದಲ್ಲಿದ್ದಾರೆ. ಸಾಧಾರಣವಾಗಿ ಮೇ ತಿಂಗಳಲ್ಲಿ ಮಾತ್ರ ಕುಣಿಯುವ ಕುಣಿತದಿಂದ, ಯಾವೊಬ್ಬ

ಕಲಾವಿದನು ಸಂತುಷ್ಟನಾಗಿಲ್ಲ. ಇವರಿಗೆ ಬೇರೆ ಕಡೆಯಿಂದ ಕಾರ್ಯಕ್ರಮಗಳು ಬರದೇ ಇರುವುದರಿಂದ ಇದನ್ನೇ ನಂಬಿ ಬದುಕಲು ಆಗುತ್ತಿಲ್ಲ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಪರದಾಡಬೇಕಾದ ಪರಸ್ಥಿತಿ ಬಂದಿದ್ದರಿಂದ ಊರ ಜನ ಸಭೆ ನಡೆಸಿ, ಕಂಗೀಲು ಕುಣಿತ ನಿಲ್ಲಿಸುವ ನಿರ್ಣಯ ತೆಗೆದುಕೊಂಡಿದ್ದಾರೆ. ಈ ಕುರಿತು ಹಿರಿಯರು ಹೇಳುವಾಗ ನಿಜಕ್ಕೂ ಬೇಸರವಾಗುತ್ತದೆ.

ಇಂದು ಜಾಗತೀಕರಣ ಹಳ್ಳಿಯ ಮೂಲೆ ಮೂಲೆ ತಲುಪಿದೆ. ಹಿಂದೆ ಕೃಷಿ ಕೆಲಸ ಚೆನ್ನಾಗಿ ನಡೆಯುತ್ತಿದ್ದ ಕಾಲದಲ್ಲಿ, ಮನೆಗೆ ಸಾಕಾಗುವಷ್ಟು ಕಾಣಿಕೆಗಳನ್ನು ಧವಸ ಧಾನ್ಯಗಳ ರೂಪದಲ್ಲಿ ನೀಡುತ್ತಿದ್ದರು. ಇಂದು ಕಾಲ ಬದಲಾಗಿದೆ, ಮನೆಯ ಹಿರಿಯರ ಸ್ಥಾನಕ್ಕೆ ಬೇರೊಬ್ಬರು ಬಂದಿರುತ್ತಾರೆ. ಗ್ರಾಮದ ಕೃಷಿಕರ ಮಕ್ಕಳೆಲ್ಲ ಪೇಟೆ ಸೇರಿ ಕೃಷಿ ಕೆಲಸ ಮಾಡುವವರಿಲ್ಲದೇ, ಇಳುವರಿ ಇಲ್ಲವಾಗಿ ಇವರಿಗೆ ಕಾಣಿಕೆ ದೊರಕುವುದೇ ಕಷ್ಟವಾಗಿದೆ. ಇಂದಿನ ಯುವಕರಿಗೆ ಇದು ಯಾಕಾಗಿ ಬೇಕು? ಎನ್ನುವ ಧೋರಣೆ ಕೂಡ ಸೇರಿಕೊಂಡು ಇಂದು ವಿನಾಶದ ಅಂಚಿಗೆ ಬಂದಿದೆ. ಈ ಕಲೆಯ ಉಳಿವಿಗಾಗಿ ಸಂಘ ಸಂಸ್ಥೆಗಳು ಸರ್ಕಾರ ಕನ್ನಡ ಸಂಸ್ಕೃತಿ ಇಲಾಖೆ ಕಲಾವಿದರಿಗೆ ಮೂಲ ಸೌಕರ್ಯಗಳನ್ನು ನೀಡಿ ಅವರನ್ನು ಉಳಿಸಬೇಕಿದೆ, ಬೆಳೆಸಬೇಕಿದೆ. ಕಲೆಗೆ ತನ್ನದೇ ಆದ ಪಾವಿತ್ರ್ಯತೆ ಇರುವುದರಿಂದ ಆಸಕ್ತರ್‍ಯಾರೇ ಬರಲಿ, ಯಾವುದೇ ಶಾಲಾ ಕಾಲೇಜು ಇರಲಿ, ಈ ಕಲೆಯ ಬಗ್ಗೆ ಚೆನ್ನಾಗಿ ಅರಿತು ಅದನ್ನು ಕರಗತ ಮಾಡಿಕೊಂಡು ನಂತರ ಕಾರ್ಯಕ್ರಮಗಳನ್ನು ನೀಡಿ ಎನ್ನುತ್ತಾರೆ ಕಲಾವಿದ ಗುರುಚರಣ್. ಏನೇ ಆದರೂ ತಮ್ಮ ಮೂಲದಿಂದ ಬಂದಿರುವ ಜನಪದ ಕಲೆ, ಕಂಗೀಲು ಕುಣಿತವನ್ನು ಎಷ್ಟೇ ಕಷ್ಟ ಬಂದರೂ ಬಿಡದೇ, ಮುಂದುವರೆಸಿಕೊಂಡು ಹೋಗುತ್ತೇನೆ ಎನ್ನುತ್ತಾರೆ. ಅದಕ್ಕಾಗಿಯೇ ಬೇರೆ ಬೇರೆ ಕಲಾಪ್ರಕಾರಗಳನ್ನು, ತಾವು ಕಲಿತು ಜೀವನ ನಿರ್ವಹಣೆಯನ್ನು ಮಾಡಿಕೊಳ್ಳುತ್ತಿದ್ದಾರೆ.

ದಕ್ಷಿಣ ಕನ್ನಡದಲ್ಲಿ ದೈವಾರಾಧನೆ ಹೆಚ್ಚು ಪ್ರಚಲಿತವಿರುವ ಕಾರಣ, ಎಲ್ಲೆಂದರಲ್ಲಿ ಹೇಗೆಂದರಲ್ಲಿ ಕಂಗೀಲು ಕುಣಿತ ಮಾಡಲು ಕಲಾವಿದರು ಹೆದರುತ್ತಾರೆ. ಹಾಗಾಗಿಯೇ ಇರಬೇಕು ದಕ್ಷಿಣ ಕನ್ನಡದಲ್ಲೇ ಕಂಗೀಲು ಕುಣಿತದ ಎರಡು ತಂಡವಿದೆ. ನಿತ್ಯಶ್ರೀ ಗುರುಚರಣ್ ತಂಡ ಒಂದಾದರೆ, ವಿನೋಧರ ಅವರ ಮಲ್ಪೆಯ ಸರಸ್ವತಿ ಜಾನಪದ ಕಲಾತಂಡವೊಂದಿದೆ. ಇಂದು ಅಳಿವಿನಂಚಿನಲ್ಲಿರುವುದರಿಂದ ಗುರುಚರಣ್ ಪುಲಿಪು ಅವರು ಶಾಲಾ–ಕಾಲೇಜುಗಳಿಗೆ ಹೋಗಿ ತರಬೇತಿ ನೀಡುತ್ತಿದ್ದಾರೆ. ಇದನ್ನು ಉಳಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಆರಾಧನಾತ್ಮಕವಾಗಿ ಬಂದಿರುವ ಕೆಲವು ಕಲೆಗಳನ್ನು ತುಂಬಾ ಆಧುನೀಕತೆಗೆ ತರಲು ಆಗುವುದಿಲ್ಲ. ಆದರೂ ಕೊರಗಜ್ಜನ ಪಾತ್ರವು ಸರ್ವಕಾಲಕ್ಕೂ ಸಲ್ಲುವ ಪಾತ್ರವಾಗಿದೆ ಮತ್ತು ಕೊರಗಜ್ಜನ ವೇಷಭೂಷಣ ಮನಸ್ಸಿನಲ್ಲಿ ಅಚ್ಚಳಿಯದೇ

ನಿಲ್ಲುತ್ತದೆ. ಈ ಕುಣಿತ ಇಂದು ಜಾನಪದ ಜಾತ್ರೆ, ಜಾನಪದ ಹಬ್ಬ, ದಸರಾ ಹಬ್ಬ ಮುಂತಾದ ಸಂದರ್ಭಗಳಲ್ಲಿ ಪ್ರದರ್ಶನಗೊಂಡಾಗ ಕಲಾವಿದರು, ತಮ್ಮ ಊರಿಗೆ ಬಂದ ಮೇಲೆ ದೈವದ ಮನೆಗೆ ಹೋಗಿ ೧೦೧ ರೂಪಾಯಿ ಒಂದು ಸಾರಾಯಿ ಕೊಟ್ಟೆ, ಒಂದು ಬೀಡಿಯ ಕಟ್ಟು, ಎಲೆ ಅಡಿಕೆಯನ್ನಿಟ್ಟು ದೈವಕ್ಕೆ ತಪ್ಪುದಂಡವನ್ನು ಕಾಣಿಕೆಯಾಗಿ ನೀಡುವ ಪರಿಪಾಠವನ್ನು ರೂಢಿಸಿಕೊಂಡು ಬಂದಿದ್ದಾರೆ. ಅಲ್ಲದೇ ಮುಂಡಾಲ ಮತ್ತು ಗೊಡ್ಡ ಜನಾಂಗದವರು ಮಾತ್ರ ವೇಷಕಟ್ಟಬೇಕಾಗಿರುವುದರಿಂದ, ಎಲ್ಲರೂ ಕೊರಗಜ್ಜನ ವೇಷ ಧರಿಸಲು ಹೆದರುತ್ತಾರೆ. ಈ ಭಾಗದವರು ದೈವಗಳನ್ನು ದೇವರೆಂದೇ ಪೂಜಿಸುವುದರಿಂದ ಕೊರಗಜ್ಜನ ವೇಷ ಮಾತ್ರ ಈ ಜನಾಂಗದವರೇ ಹಾಕಬೇಕೆನ್ನುತ್ತಾರೆ. ಮುಂದಿನ ಪೀಳಿಗೆಯಲ್ಲೂ ಕೂಡಾ ಕೊರಗಜ್ಜನ ವೇಷವನ್ನು ಮುಂಡಾಲ ಮತ್ತು ಗೊಡ್ಡ ಜನಾಂಗದವರೇ ಧರಿಸಬೇಕು. ಅದು ಸರ್ವವಿಧಿತ ಎನ್ನುತ್ತಾರೆ. ಕಂಗೀಲು ಕುಣಿತವು ಆಚರಣಾತ್ಮಕ ಸಂದರ್ಭದಲ್ಲಿ ದೂರವಾದರೂ, ಇದನ್ನು ಜನರ ಕುಣಿತವಾಗಿ ಮಾಡಿದಾಗ ಈ ಕುಣಿತ ಉಳಿಯಲಿಕ್ಕೆ ಸಾಧ್ಯ. ಅಲ್ಲದೇ, ಇವುಗಳಿಗೆ ಬೇರೆ ಬೇರೆ ರೀತಿಯಲ್ಲಿ ವೇದಿಕೆಗಳನ್ನು ಒದಗಿಸಿಕೊಟ್ಟಾಗ ಮಾತ್ರ ಈ ಕಲೆ ಉಳಿಯಬಹುದೆನ್ನುವುದು ವಿದ್ವಾಂಸರ ಅಭಿಪ್ರಾಯ.

ಸಾಂಸ್ಕೃತಿಕವಾಗಿ :

ಕಂಗೀಲು ಕುಣಿತ ಮತ್ತು ಆರಾಧನಾ ಪದ್ಧತಿಯನ್ನು ಮೂರು ಹಗಲು, ಮೂರು ರಾತ್ರಿ ನಡೆಸುವರು. ಮುಖ್ಯವಾಗಿ ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿರುವ ಜನವರ್ಗ ಗೊಡ್ಡ ಮತ್ತು ಮುಂಡಾಲ ಜನಾಂಗದವರು. ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಈ ಜನಾಂಗದವರ ಸಂಖ್ಯೆ ಅತ್ಯಂತ ವಿರಳ. 'ಗೊಡ್ಡ ಮತ್ತು ಮುಂಡಾಲ' ಜನಾಂಗದವರು ತಮ್ಮ ಮಾತೃಭಾಷೆಯಾಗಿ ತುಳು ಮಾತನಾಡಿದರೂ, ಪರಂಪರೆಯ ಕಥೆಯ ಪ್ರಕಾರ ಈ ಜನವರ್ಗದವರು 'ತುಳುನಾಡಿಗೆ' ಪ್ರವೇಶಿಸಿದ್ದು ಹೊರಗಿನಿಂದ ಎಂಬ ಅಭಿಪ್ರಾಯವಿದೆ. ಹೊಯ್ಸಳರ ಕಾಲದಲ್ಲಿ ಇವರು ದೇವಳದ ಸೇವೆಯಲ್ಲಿದ್ದರೆಂದೂ ಮತ್ತು ಕ್ರಮೇಣ ಯುದ್ಧ ಕೌಶಲ್ಯವನ್ನು ತಿಳಿದವರಾಗಿದ್ದರೆಂಬ ಅಭಿಮತವಿದೆ. ಆರಂಭದಲ್ಲಿ ಕಟ್ಟಿಂಗೇರಿಯಲ್ಲಿ ಈ ಜನವರ್ಗದವರ ಮೂಲ ಸಂತತಿ ಇದ್ದುದಾಗಿಯೂ ಕ್ರಮೇಣ ಉತ್ತರಭಾಗವಾದ 'ಕಾಪು' ಉಡುಪಿ ಪ್ರದೇಶಗಳಲ್ಲಿ ದೈವಾರಾಧನೆಯ ಕೈಂಕರ್ಯ ನಡೆಸುವಲ್ಲಿ ಪಾಲ್ಗೊಂಡರು ಎನ್ನುವ ಪ್ರತೀತಿ ಇದೆ. ಇದಕ್ಕೆ ಉದಾಹರಣೆ ಎನ್ನುವಂತೆ ಕಾಪು ಹಳೇ ಮಾರಿಗುಂಡಿಯ ಸಮೀಪದಲ್ಲಿ ಇರುವ ದೇವಸ್ಥಾನದಲ್ಲಿ ನಡೆಸುವ ಪಿಲಿಕೋಲ, ಗುಳಿಗ ಆರಾಧನೆ, ಬೆರ್ಮರು ಆರಾಧನೆ ನಡೆಸುವ ಯಜಮಾನಿಕೆ ಈ ವರ್ಗದ ಜನರಿಗೆ ಇಂದಿಗೂ ಇರುವುದಕ್ಕೆ ಸಾಕ್ಷಿಯಾಗಿದೆ.

ಈ ಆರಾಧನೆಯ ಹಿನ್ನೆಲೆಯಲ್ಲಿ ನಡೆಯುವ ಕ್ರಿಯೆಗಳನ್ನು ಗಮನಿಸಿದಾಗ ಈ ಜನವರ್ಗದವರು ಕ್ಷಾತ್ರಧರ್ಮವನ್ನು ಮೈಗೂಡಿಸಿಕೊಂಡಿದ್ದರೆನ್ನುವುದನ್ನು ಇನ್ನಷ್ಟು ಸ್ಪಷ್ಟಪಡಿಸಬಲ್ಲದು. ಗೊಡ್ಡ ಜನಾಂಗದವರು ನಡೆಸುವ ಬೆಳದಿಂಗಳ ಆರಾಧನಾ ಪದ್ಧತಿ ಮತ್ತು ಕುಣಿತ ಪುರುಷ ಪ್ರಾಧಾನವಾದುದು. ಈ ಕುಣಿತವನ್ನು ಗಮನಿಸಿದಾಗ ಆರಾಧನಾ ಪಾತ್ರಧಾರಿಗಳು ತಮ್ಮ ಉಡುಪು ಮತ್ತು ಶಿರಸ್ತ್ರಾಣಕ್ಕಾಗಿ ಪ್ರಾದೇಶಿಕವಾಗಿ ದೊರಕುವ ತೆಂಗಿನ ಗರಿಗಳನ್ನು ಬಳಸುತ್ತಾರೆ. ಡೋಲು–ಚಂಡೆಯ ನಿನಾದಕ್ಕೆ ತಕ್ಕನಾಗಿ ಕುಣಿಯುವವರು ದೇವಸ್ಥಾನದಲ್ಲಿ ಆರಂಭವಾಗುವ ಕಂಗೀಲು ಕುಣಿತದ ತಿರುಗಾಟ ಮೂರು ರಾತ್ರಿ ಮೂರು ಹಗಲು ನಡೆಯುವುದು. ತಿರುಗಾಟದ ಸಂದರ್ಭದಲ್ಲಿ ಕಂಗೀಲು ಕುಣಿತದ ವೇಷಧಾರಿಗಳು ತೆಂಗಿನ ಗರಿಗಳನ್ನು ತೊಡುವುದರಿಂದ ಇವರನ್ನು ಸಿರಿಯ ಮಕ್ಕಳೆಂದು ಕರೆಯುವರು. (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿರಿ ಆಚರಣೆ ಅಥವಾ ಸಾಮೂಹಿಕ ದೈವಾವೇಷ ಬರುವ ಸಿರಿ ಆಚರಣೆಗೂ, ಈ ಆಚರಣೆಗೂ ಸಂಬಂಧವಿಲ್ಲ). ಕಂಗೀಲು ಪಾತ್ರಧಾರಿಗಳು ತೆಂಗಿನ ಗರಿಗಳ ಲಂಗವನ್ನು ಧರಿಸುವುದರಿಂದ ಸಿರಿಯ ಮಕ್ಕಳು ಎಂದು ಮನ್ನಣೆ ಕೊಡಲಾಗಿದೆ. ಸಿರಿಯ ಮಕ್ಕಳೆಂದರೆ ಫಲವಂತಿಕೆಯನ್ನು ತಂದು ಅನಿಷ್ಟವನ್ನು ಹೊಡೆದೋಡಿಸುವ ಮಕ್ಕಳೆಂಬುದು ಈ ಆರಾಧನಾ ಪದ್ಧತಿಯಿಂದ ತಿಳಿದು ಬರುತ್ತದೆ.

ಈ ಕುಣಿತವನ್ನು ಸಾಧಾರಣವಾಗಿ ಮೇ ತಿಂಗಳ ಹುಣ್ಣಿಮೆಯಿಂದ ಹಗಲು ರಾತ್ರಿ ನಿರಂತರವಾಗಿ ಕೆಲವು ದಿವಸಗಳವರೆಗೂ ನಡೆಸುತ್ತಾರೆ. ಸಸ್ಯ ಸಮೃದ್ಧಿ ಹಾಗೂ ರೋಗರುಜಿನಗಳ ಪರಿಹಾರದ ಮಿಶ್ರ ಆಶಯುಗಳನ್ನು ನಾವು ಕುಣಿತದಲ್ಲಿ ಗಮನಿಸಬಹುದಾಗಿದೆ. ಇದೊಂದು ಆರಾಧನಾತ್ಮಕ ಕುಣಿತ. ಕಂಗ್ ಎಂದರೆ ತುಳುವಿನಲ್ಲಿ ಅಡಿಕೆ ಮರ ಎಂದರ್ಥ. ಅಡಿಕೆ ಮರದ ನಾರು ಮತ್ತು ಹಾಳೆಗಳ ವೇಷಭೂಷಣ ಧರಿಸಿ ಕುಣಿಯುವುದರಿಂದ ಈ ಕುಣಿತಕ್ಕೆ ಕಂಗೀಲು ಕುಣಿತ ಎನ್ನುವ ಹೆಸರು ಬಂದಿದೆ. ತಮ್ಮ ಕುಲದೈವವಾದ ಕಡಗೇಶ್ವರಿ ಅಥವಾ ಮಾರಮ್ಮನಿಗೆ ಪೂಜೆ ಸಲ್ಲಿಸಿ ನಂತರ ಕಲಾವಿದರೆಲ್ಲರೂ ವೇಷಭೂಷಣ ಧರಿಸುತ್ತಾರೆ. ಸಾಮಾನ್ಯವಾಗಿ ಇದರಲ್ಲಿ ಐದು ಜನರಿಂದ ಹದಿನಾಲ್ಕು ಜನ ಕಲಾವಿದರಿರುತ್ತಾರೆ. ಬಿಳಿ ಪಂಚೆ, ಹಳದಿ ಬಣ್ಣದ ನಿಲುವಂಗಿ ಕಲಾವಿದರೆಲ್ಲರೂ ಸಿರಿಯ ಗರಿಯನ್ನು ಮೈಗೆ ಸುತ್ತಿಕೊಳ್ಳುತ್ತಾರೆ. ನಂತರ ತಲೆಗೆ ಮುಂಡಾಸು ಕಟ್ಟಿಕೊಂಡು, ಮಣಿಸರಗಳನ್ನು ಧರಿಸಿ ಅಲಂಕೃತಗೊಳ್ಳುತ್ತಾರೆ. ಕೆಲವೊಮ್ಮೆ ತೆಂಗಿನ ಗರಿಯ ಜಾಲರಿಯನ್ನು ತಲೆಯ ಸುತ್ತ ಇಳಿಬಿಟ್ಟಿರುವುದು ಉಂಟು. ಕಲಾವಿದರ ಮಧ್ಯೆ ಕೊರಗಜ್ಜನ ವೇಷವಿರುತ್ತದೆ. ಕೊರಗಜ್ಜನ ವೇಷವು ವಿಶೇಷ ಮತ್ತು ವಿಶಿಷ್ಟ ಕೊರಗ ಪಾತ್ರಧಾರಿಗೆ, ಸೀಮೆ ಮಸಿಯ ಕಪ್ಪಿಗೆ ಕೊಬ್ಬರಿ ಎಣ್ಣೆಯನ್ನು ಮಿಶ್ರಮಾಡಿ, ಮುಖ, ಕುತ್ತಿಗೆ, ಕೈ, ಕಾಲುಗಳಿಗೆ ಕಪ್ಪು ಬಣ್ಣವನ್ನು ಹಚ್ಚುತ್ತಾರೆ. ನಂತರ ಬಿಳಿಯ

ಬಣ್ಣದ ಜಿಂಕ್ ಪೌಡರನ್ನು ಹಣೆಯ ಮೇಲೆ ಹುಬ್ಬಿನ ಆಕಾರದಂತೆ ಬರೆಯುತ್ತಾರೆ. ಕಣ್ಣಿನ ಕೆಳಭಾಗದಲ್ಲೂ ಕೂಡ ಹಚ್ಚುತ್ತಾರೆ. ನಂತರ ಬಿಳಿ ಬಣ್ಣದ ಜಿಂಕ್‌ನಿಂದ ಮೀಸೆ ಬರೆದು ಬಣ್ಣ ತುಂಬುತ್ತಾರೆ. ನಂತರ ಇನ್ನುಳಿದ ಭಾಗ ತಿದ್ದಿ ತೀಡಿ ಎಲ್ಲಾ ಮುಗಿದ ಬಳಿಕ ತಲೆಗೆ ಬಿಳಿ ಬಣ್ಣವನ್ನು ಹಚ್ಚುತ್ತಾರೆ. ಹೀಗೆ ಎಲ್ಲಾ ಕಲಾವಿದರು ಸಿದ್ಧರಾಗುತ್ತಾರೆ. ಸಿದ್ಧರಾದ ಕಲಾವಿದರಲ್ಲಿ ಕೊರಗಜ್ಜರಿಗೆ ಅವರ ಸಂಪ್ರದಾಯದಂತೆ ತಂಡದ ಹಿರಿಯ ನಾಯಕ ಮಾರಗುರಿಕಾರ ಬಂದು ಮುತ್ತಿನ ಸರವನ್ನು ಹಾಕಿ ಕೈಗೆ ದಾರವನ್ನು ಕಟ್ಟಿ ಹೂವಿನ ಮಾಲೆಯನ್ನು ಕೊರಳಿಗೆ ಹಾಕುತ್ತಾನೆ. ನಂತರ ಅಡಿಕೆ ಮರದಿಂದ ತಯಾರಿಸಿದ ಅಜೆ ಕುರುವೆ ಅಂದರೆ ಬುಟ್ಟಿಯನ್ನು ಮತ್ತು ಜ್ಯೋತಿಯ ಕೋಲನ್ನು ಹಿರಿಯ ನಾಯಕ ಮಾರಗುರಿಕಾರ ಕೊರಗಜ್ಜನಿಗೆ ನೀಡಿ ದೈವದ ಮನೆಗೆ ಕರೆದೊಯ್ಯುತ್ತಾನೆ. ಕಲಾವಿದರೆಲ್ಲರೂ ದೈವದ ಮನೆ ಮುಂದೆ ನಿಂತು ಒಪ್ಪಿಗೆ ಪಡೆಯಲು ಎಲ್ಲರೂ ಒಗ್ಗಟ್ಟಾಗಿ ಪ್ರಾರ್ಥಿಸುತ್ತಾರೆ. ದೈವದ ಅಪ್ಪಣೆ ಪಡೆದು ಕುಣಿತವನ್ನು ಆರಂಭಿಸುತ್ತಾರೆ.

ಕಲಾವಿದರೆಲ್ಲರೂ ವರ್ತುಲಾಕಾರದಲ್ಲಿ ನಿಂತು ತಾಸೆ ಅಥವಾ ಡೋಲಿನ ಬಡಿತಕ್ಕನುಗುಣವಾಗಿ ಕುಣಿಯಲಾರಂಭಿಸುತ್ತಾರೆ. ಕಲಾವಿದರು ಒಂದ್ಹೆಜ್ಜೆ, ಎರಡ್ಹೆಜ್ಜೆ ಗತಿಗಳನ್ನು ಹಾಕುತ್ತಾ ಲಯಬದ್ಧವಾಗಿ ಕುಣಿಯುತ್ತಾರೆ. ನಂತರ ಊರಲ್ಲಿರುವ ಪ್ರತಿಯೊಂದು ಮನೆಗೂ ಹೋಗಿ ಅಲ್ಲಿ ಕುಣಿತವನ್ನು ಮಾಡಿ ಅವರ ಮನೆಯ ಪೈರು, ಪಚ್ಚೆ ಜಾನುವಾರುಗಳ ಅನಿಷ್ಟ ತೊಲಗಲೆಂದು, ಮನೆಯ ಮಕ್ಕಳಿಗೆ ಉತ್ತಮ ಆರೋಗ್ಯವನ್ನು ಕರುಣಿಸೆಂದು ಹಾರೈಸಿ ಅವರಿಂದ ಕಾಣಿಕೆ ಪಡೆದು ನಂತರ ಮುಂದಿನ ಮನೆಗೆ ಹೊರಡುತ್ತಾರೆ. ಹೀಗೆ ಹಳ್ಳಿಗೆ ಬಂದಿರುವ ಅನಿಷ್ಟಗಳೆಲ್ಲ ತೊಲಗಲೆಂದು ತುಂಬು ಹೃದಯದಿಂದ ಪ್ರಾರ್ಥಿಸುತ್ತಾರೆ. ಮತ್ತು ಮನೆಯವರು ನೀಡಿದ ದವಸ-ಧಾನ್ಯಗಳನ್ನು ಕಾಣಿಕೆಯ ರೂಪದಲ್ಲಿ ಪಡೆದು ಮತ್ತೆ ಮುಂದಿನ ಮನೆಯ ದಾರಿ ಹಿಡಿಯುತ್ತಾರೆ. ಸಾಧಾರಣವಾಗಿ ಕಂಗೀಲು ಕುಣಿತವನ್ನು ಎಲ್ಲರೂ ಮಾಡುವಂತಿಲ್ಲ. ನಿರ್ದಿಷ್ಟ ಮನೆಯ ವ್ಯಕ್ತಿಗಳೇ ಅದನ್ನು ಮುಂದುವರೆಸಿಕೊಂಡು ಬರಬೇಕೆಂಬ ವಾಡಿಕೆ ಇದೆ. ಹಾಗಾಗಿಯೇ ಇರಬೇಕು ಕಂಗೀಲು ಕುಣಿತದ ವೇಷವನ್ನು ಎಲ್ಲರೂ ಕಟ್ಟುವುದಿಲ್ಲ.

ದೃಶ್ಯಮಾಧ್ಯಮದಲ್ಲಿ ಕಂಗೀಲು ಕುಣಿತ

ಕಂಗೀಲು ಕುಣಿತ ಒಂದು ಆಚರಣಾತ್ಮಕ ಕಲೆ. ಈ ಕಲೆ ಎಲ್ಲಿಯೂ ಮಾಡುವಂತಿಲ್ಲ. ನಿರ್ಧಿಷ್ಟವಾದ ಸಮಯದಲ್ಲಿ ಮಾಡಬೇಕೆಂಬ ನಿಯಮವಿದೆ. ಆದರೆ ಇಂದು ಕಲಾವಿದರು ಕಲೆಯಿಂದ ಬದುಕಲಾಗದೆ ನಿರ್ಧಿಷ್ಟ ಸಮಯವನ್ನು ಬಿಟ್ಟು ವೇದಿಕೆ ಕಾರ್ಯಕ್ರಮಗಳನ್ನಾಗಿ, ಕಂಗೀಲು ಕುಣಿತವನ್ನು ಮಾಡುತ್ತಿದ್ದಾರೆ. ಕಂಗೀಲು ಕುಣಿತವು ತನ್ನದೇ ಆದ ವಿಧಿವಿಧಾನವನ್ನು ಹೊಂದಿದೆ. ದೃಶ್ಯಮಾಧ್ಯಮಕ್ಕೆ ಅಳವಡಿಸುವಾಗ ಪ್ರತಿಯೊಂದನ್ನೂ

ಬಿಡದೇ ತೃಪ್ತಿಕರವಾಗಿ ತಾಳ್ಮೆಯಿಂದ ಚಿತ್ರೀಕರಿಸಬೇಕಾಗಿದೆ. ಏಕೆಂದರೆ ಕಂಗೀಲು ಕುಣಿತವನ್ನು ಗೊತ್ತಿರುವ ಅಥವಾ ಪರಂಪರೆಯಿಂದ ಮಾಡಿಕೊಂಡು ಬಂದಿರುವ, ಇನ್ಯಾವ ತಂಡವೂ ಇಲ್ಲ. ಹಾಗಾಗಿ ೧೦ ಜನ ಕಲಾವಿದರಿರುವ ಈ ಕಲೆ ತುಂಬಾ ಮಹತ್ವಪೂರ್ಣದ್ದಾಗಿದೆ. ಮೈತುಂಬಾ ಮಸಿ ಬಳಿದುಕೊಂಡಿರುವ ಕೊರಗಜ್ಜನ ಪಾತ್ರವಂತೂ ಪದೇ ಪದೇ ನಮ್ಮನ್ನು ನೋಡುವಂತೆ ಮಾಡುತ್ತದೆ. ವೇಷಧಾರಿಯ ಆಂಗಿಕ ಚಲನವಲನ, ಹಿಮ್ಮೇಳದ ಸಂಗೀತಕ್ಕನುಗುಣವಾಗಿ ಹಿತಮಿತವಾಗಿರುತ್ತದೆ. ಅಲ್ಲದೇ ಕೊರಗಜ್ಜನ ಸುತ್ತಲೂ ಸುತ್ತುತ್ತಿರುವ ಪಾತ್ರಧಾರಿಗಳು, ಎಳೆ ತೆಂಗಿನಗರಿಗಳ ಲಂಗವನ್ನು ತೊಟ್ಟು ನರ್ತನ ಮಾಡುವುದು, ಈ ಕುಣಿತಕ್ಕೆ ಇನ್ನಷ್ಟು ಮೆರಗನ್ನು ನೀಡುತ್ತದೆ. ಪ್ರತಿಯೊಬ್ಬ ಕಲಾವಿದರು ತನ್ಮಯರಾಗಿ ಕಂಗೀಲು ಕುಣಿತವನ್ನು ಮಾಡುತ್ತಾರೆ. ಸಂಗೀತಕ್ಕನುಗುಣವಾಗಿ ನರ್ತಿಸಿ, ಮನೆಯವರು ಕೊಟ್ಟ ಕಾಣಿಕೆಯನ್ನು ಪಡೆದು, ಮುಂದಿನ ಮನೆಗೆ ಹೋಗುವುದು ವಾಡಿಕೆ. ದಕ್ಷಿಣ ಕನ್ನಡದಲ್ಲಿ ಮಾತ್ರ ಇರುವ ಈ ಕಂಗೀಲು ಕುಣಿತ ದೃಶ್ಯಮಾಧ್ಯಮಕ್ಕಾಗಿ ಯಾವುದೇ ರೀತಿಯ ಸೇರ್ಪಡೆಯನ್ನು ಮಾಡಿಕೊಂಡಿಲ್ಲ. ಆದರೂ ಇಂದೂ ಕೂಡಾ ದೃಶ್ಯಮಾಧ್ಯಮದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ.

೩.೩.೧೨ ಹುಲಿವೇಷ ಕುಣಿತ

ಸಾಧಾರಣವಾಗಿ ಹುಲಿವೇಷವನ್ನು ಹಾಕುವುದು ಕರ್ನಾಟಕದ ತುಂಬೆಲ್ಲಾ ಕಂಡು ಬರುತ್ತದೆ. ಹಿಂದೆ ಹುಲಿವೇಷ ಹಾಕುವುದು ವಾಡಿಕೆಯಾಗಿತ್ತು. ಹುಲಿವೇಷ ಎಲ್ಲಾ ಊರಿನಲ್ಲಿ ಕಂಡು ಬಂದರೂ, ಅದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದನ್ನು ಕಾಣುತ್ತೇವೆ.



ಹುಲಿವೇಷ ಕುಣಿತ

ಸೀಮಿತವಾಗಿದ್ದಾರೆ. ಆದರೂ ಕೂಡಾ ಕಲಾವಿದರು ಆಸಕ್ತಿಯನ್ನು ಕಳೆದುಕೊಳ್ಳದೇ ತಮ್ಮಿಂದಾದ ರೀತಿಯಲ್ಲಿ ಈ ಕಲೆಗೆ ಕಾಯಕಲ್ಪ ನೀಡಿ ಇನ್ನೂ ಹೆಚ್ಚಿನ ರೀತಿಯಲ್ಲಿ ಜನಮಾನಸದಲ್ಲಿ ನಿಲ್ಲುವಂತೆ ಮಾಡಲು ಶ್ರಮಿಸುತ್ತಿದ್ದಾರೆ. ಜನಪದ ಕಲೆ ಅವನತಿ ಹೊಂದಿದರೆ ನಮ್ಮ ಸಂಸ್ಕೃತಿಯ ಕೊಂಡಿ ಕಳಚಿದಂತೆಯೇ ಸರಿ.



ಹುಲಿವೇಷ

ಹುಲಿವೇಷ-ಕಲಾವಿದ ಜಯಣ್ಣ

ಪಡುಬಿದ್ರಿಯ ಜಯಣ್ಣನವರು ಹುಲಿವೇಷದಲ್ಲಿ ಹೆಸರುವಾಸಿ. ಹುಲಿವೇಷದ ಬಗೆ ಅವರಿಗೆ ಅದೇನೋ ಸೆಳೆತ. ಇವರ ಹತ್ತಿರ ಕಲಿಯಲು ಬರುವ ವಿದ್ಯಾರ್ಥಿಗಳ ದೊಡ್ಡ ತಂಡವೇ ಇವೆ. ಮಕ್ಕಳಿಗೆ ತರಬೇತಿ ನೀಡುತ್ತಾ ಕಲೆಯ ಉಳುವಿಗೆ ಶ್ರಮಿಸುತ್ತಿದ್ದಾರೆ. ಇವರಲ್ಲಿ ಬರುವ ಕಲಾವಿದರೆಲ್ಲಾ ಶಾಲಾ-ಕಾಲೇಜುಗಳಲ್ಲಿ ಓದುತ್ತಿದ್ದರೂ ಕೂಡ ಕಲೆಯ ಉಳುವಿಗಾಗಿ ತಮ್ಮ ಹಸ್ತವನ್ನು ನೀಡಿ, ಬೆಂಬಲಿಸುತ್ತಿದ್ದಾರೆ. ಅನೇಕ ಚಮತ್ಕಾರಗಳನ್ನು ಹುಲಿವೇಷದಲ್ಲಿ ಮಾಡುವುದರಲ್ಲಿ ಈ ಕಲಾವಿದ ಸಿದ್ಧಹಸ್ತರು. ಹಾಗಾಗಿಯೇ ದಕ್ಷಿಣ ಕನ್ನಡದ ಜನತೆಗೆ ಹುಲಿವೇಷದ ಜಯಣ್ಣನವರು ಎಲ್ಲಾ ಕಾರ್ಯಕ್ರಮಗಳಿಗೂ ಬೇಕು.

ಸಾಮಾಜಿಕವಾಗಿ :

ಪಡುಬಿದ್ರಿಯಲ್ಲಿರುವ ಪಿಜಿನಬಂಗೇರ ಮತ್ತು ತುಂಬೆ ದಂಪತಿಗಳಿಗೆ ಐದುಜನ ಮಕ್ಕಳು. ಆ ಐದು ಜನರಲ್ಲೇ ಒಬ್ಬರು ಹುಲಿವೇಷದ ಕಲಾವಿದ ಜಯಣ್ಣ. ತಂದೆ ಪಿಜಿನಬಂಗೇರ ಉತ್ತಮ ಕಲಾವಿದರು. ತುಂಬು ಕುಟುಂಬದಲ್ಲಿ ಹುಟ್ಟಿದ ಜಯಣ್ಣ ಅವರದು ಬಡತನದ ಸಂಸಾರ. ತಂದೆ ಕಾರ್ಯಕ್ರಮಗಳಿದ್ದಾಗ ಕಲಾವಿದರಾಗಿ

ಸಾಮಾನ್ಯವಾಗಿ ಹುಲಿವೇಷವನ್ನು ಜಾತ್ರೆ, ಉತ್ಸವ, ಹೋಳಿ, ಮೊಹರಂ, ದಸರಾ, ಕೃಷ್ಣ ಜನ್ಮಾಷ್ಟಮಿಯಂದು ಮಾಡ್ತಾರೆ. ಕಸುವುಳ್ಳ ೧೫ ರಿಂದ ೨೦ ವರ್ಷ ವಯಸ್ಸಿನ ಯುವಕರು ಯಾರಾದರೂ ಹುಲಿವೇಷವನ್ನು ಮಾಡಬಹುದು. ದೊಡ್ಡ ಹುಲಿಗಳೊಡನೆ ಮರಿ ಹುಲಿಗಳೂ ಇರುತ್ತವೆ. ಹುಲಿವೇಷದವರು ಆಯಿಲ್ ಪೇಂಟ್‌ನಿಂದ ಕೆಂಪು ಮತ್ತು ಹಳದಿ ಬಣ್ಣದ ಪಟ್ಟೆಯನ್ನು ಹುಲಿಯ ಮೈಮೇಲೆ ಇರುವಂತೆಯೇ ಕಲಾತ್ಮಕವಾಗಿ ಕಲಾವಿದರಿಗೆ ಹಚ್ಚುತ್ತಾರೆ. ತಂಡದಲ್ಲಿ ೧೦ ರಿಂದ ೧೫ ಜನರಿಗೆ ಹಚ್ಚುವಾಗ ಸಮಯ ತೆಗೆದುಕೊಳ್ಳುತ್ತದೆ. ಮಕ್ಕಳಿಗೆ ಆಯಿಲ್ ಪೇಂಟ್‌ನ ಬದಲಾಗಿ ವಾಟರ್ ಪೇಯಿಂಟನ್ನು ಹಚ್ಚುತ್ತಾರೆ. ಕಲಾವಿದರು ಚಡ್ಡಿಯನ್ನು ಮಾತ್ರ ಧರಿಸಿರುತ್ತಾರೆ. ತಲೆಗೆ ಬಿಗಿಯಾದ ಹುಲಿಯ ಮುಖವಾಡವನ್ನು ಹಾಕಿರುತ್ತಾರೆ. ಬಟ್ಟೆಯಿಂದ ಮಾಡಿದ ಬಾಲವನ್ನು ಚಡ್ಡಿಗೆ ಕಟ್ಟಿಕೊಂಡಿರುತ್ತಾರೆ.

ದಕ್ಷಿಣ ಕನ್ನಡದಲ್ಲಿ ಹಿಂದೆಲ್ಲಾ ಕೆಳವರ್ಗದ ಜನರಾದ ಮೇರ, ಮುಂಡಾಲ ಜನಾಂಗದವರು ದುಡಿ ಎಂಬ ವಾದ್ಯದೊಂದಿಗೆ ಮಾಡುತ್ತಾರೆ. ನಂತರ ಪಟ್ಟೆಹುಲಿಗಳು ಕಂಡು ಬಂದವು. ತಾಸೆ ಮೌರಿ, ಸಡ್ಡೆ ಈ ರೀತಿಯ ವಾದ್ಯಗಳನ್ನೊಳಗೊಂಡ ಹುಲಿವೇಷ ಜನಪ್ರಿಯವಾಯಿತು. ಆನಂತರ ಬಂದದ್ದೆ ಸೌಖ್ಯವಿಲ್ಲದಿದ್ದಾಗ ದೇವರಿಗೆ ಹರಕೆ ಹೊತ್ತು ಕುಣಿಯುವ ಹುಲಿವೇಷ ಇಂದು ಹರಕೆ ಹೊತ್ತವರು ಮತ್ತು ಬೆರಳೆಣಿಕೆಯಷ್ಟಿರುವ ಕಲಾವಿದರು ಮಾತ್ರ ಈ ವೇಷ ಹಾಕುತ್ತಾರೆ. ಹುಲಿವೇಷ ಮಾಡುವವರು ಬೆಳಿಗ್ಗೆ ಮತ್ತು ಸಾಯಂಕಾಲ ಪ್ರದರ್ಶನ ನೀಡುತ್ತಾರೆ. ಹುಲಿವೇಷದವರು ಎರಡ್ಹೆಜ್ಜೆ, ಮೂರ್ಹೆಜ್ಜೆಯನ್ನು ಹಿನ್ನಲೆ ಸಂಗೀತಕ್ಕನುಗುಣವಾಗಿ ತಮಟೆ ವಾದ್ಯಗಳ ಗತ್ತಿಗೆ ಕಲಾವಿದರು ಕುಣಿಯುತ್ತಾರೆ. ಬಿರುಸಿನ ಕುಣಿತವಿಲ್ಲದಿದ್ದರೆ ರಂಗೇರುವುದಿಲ್ಲ. ಮರಿ ಹುಲಿಗಳಿದ್ದರಂತೂ ಹುಲಿವೇಷವು ಕಳೆಗಟ್ಟುತ್ತದೆ. ದಕ್ಷಿಣ ಕನ್ನಡದಲ್ಲಿ ತುಳುವಿನಲ್ಲಿ ಈ ಕುಣಿತಕ್ಕೆ ಪಿಲಿಪಂಜಿ ಉರೆದೊರೆ ಕುಣಿತ ಎಂದು ಕರೆಯುತ್ತಾರೆ. ಹುಲಿಯ ವೇಷ ಧರಿಸಿದ ಕಲಾಪದರು ದೇವರ ಪೂಜೆಯಾದ ನಂತರ ಒಂದೆಡೆ ನಿಂತು ಚಮತ್ಕಾರಿಕವಾಗಿ ಕುಣಿಯತ್ತವೆ. ಹುಲಿಯು ತನ್ನ ಮರಿಗಳಿಗೆ ಹಾಲುಣಿಸುವುದು, ಪಲ್ಟಿ ಹೊಡೆಯುವುದು ನಿಂತು–ಕುಳಿತು ಅನೇಕ ಭಾವ ಭಂಗಿಯಲ್ಲಿ ಕುಣಿಯುವುವು. ತಲೆಯಿಂದ ಲಿಂಬೆಹಣ್ಣನ್ನು ಹೋಳು ಮಾಡುವುದು, ಲಾಗ ಹೊಡೆಯುವುದು ಇತ್ಯಾದಿಗಳನ್ನು ಮಾಡಿ ಗ್ರಾಮದ ಜನರನ್ನು ರಂಜಿಸುತ್ತಾರೆ.

ಇಂದು ಈ ಕಲೆ ವಿನಾಶದ ಅಂಚಿನಲ್ಲಿದೆ. ಜನರು ಈ ಕಲೆಯನ್ನು ಪ್ರೋತ್ಸಾಹಿಸಿ, ಉಳಿಸಬೇಕಿದೆ. ಮುಂದಿನ ಪೀಳಿಗೆಯವರಿಗೆ ಇಂಥದೊಂದು ಕಲೆ ಇದೆ ಎನ್ನುವ ನೆನಪಾದರೂ ಬೇಕಲ್ಲವೇ? ಒಂದಿಲ್ಲೊಂದು ಕಾರಣದಿಂದ ಕಲೆ ಕಣ್ಮರೆಯಾಗಲು ಹೆಚ್ಚು ದಿನ ಬೇಕಾಗಿಲ್ಲ ಹಾಗಾಗಿ ಈ ಕಲೆ ಉಳಿಸಬೇಕಾದ ಅನಿವಾರ್ಯತೆ ನಮಗಿದೆ. ಎಲ್ಲರು ಜಾನಪದ ಜಾತ್ರೆ, ದಸರಾ ಮೆರವಣಿಗೆ, ಸಭೆ ಸಮಾರಂಭಗಳ ಮೆರವಣಿಗೆಗೆ ಮಾತ್ರ

ಹೋಗುತ್ತಿದ್ದರು. ಇಲ್ಲದಿದ್ದಾಗ ಇವರೆಲ್ಲರೂ ಮೀನು ಹಿಡಿಯಲು ಸಮುದ್ರವನ್ನು ಸೇರುತ್ತಿದ್ದರು. ಮೀನು ಹಿಡಿಯುವುದನ್ನು ವೃತ್ತಿಯಾಗಿಯೂ, ಕಲೆಯನ್ನು ಪ್ರವೃತ್ತಿಯಾಗಿ ತೆಗೆದುಕೊಂಡಿದ್ದರು ಎನ್ನಬಹುದು. ಸಣ್ಣವರಿದ್ದಾಗ ತಂದೆಯಿಂದ ಅನೇಕ ಕಾರ್ಯಕ್ರಮಗಳಿಗೆ ಹೋಗಿ, ಬೇರೆ ಬೇರೆ ರೀತಿಯ ಕಲೆಯನ್ನು ನೋಡಿ ತಂದೆಯಿಂದ ಕಲೆಯನ್ನು ಕಲಿತರು. ಅದರಲ್ಲಿ ಹುಲಿವೇಷವೂ ಒಂದು. ತಂದೆಯ ಕಾಲಾನಂತರ ಮನೆಯ ಜವಾಬ್ದಾರಿ ಇವರ ಹೆಗಲೇರಿತು. ತಮ್ಮಂದಿರು ಅಲ್ಪ-ಸ್ವಲ್ಪ ಕಲಿತು, ಕೂಲಿ-ನಾಲಿಮಾಡಿ ಬದುಕುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಮದುವೆ ಮಾಡಿದ ನಂತರ ಇಂದು ತಾಯಿ ಮತ್ತು ಹೆಂಡತಿಯೊಂದಿಗೆ ಪುಟ್ಟ ಸಂಸಾರದೊಂದಿಗೆ ಬಾಳುತ್ತಿದ್ದಾರೆ. ಇವರಿಗೆ ಎರಡು ಜನ ಮಕ್ಕಳು. ಹೆಣ್ಣು ಮಗು ಐದನೇ ತರಗತಿ ಓದುತ್ತಿದ್ದರೆ, ಒಬ್ಬ ಮಗ ಹತ್ತನೇ ತರಗತಿಯಲ್ಲಿ ಓದುತ್ತಿದ್ದಾನೆ. ಹುಲಿವೇಷದ ತಂಡವನ್ನು ಕಟ್ಟಿರುವ ಇವರು ಅದರಿಂದ ಜೀವನ ನಿರ್ವಹಣೆ ದುಸ್ತರವಾಗಿದೆ ಎನ್ನುತ್ತಾರೆ. ಹುಲಿವೇಷದಲ್ಲಿಯೇ ಅನೇಕ ಚಮತ್ಕಾರಗಳನ್ನು ಮಾಡುವುದರಿಂದ ಇವರನ್ನು ದಕ್ಷಿಣ ಕನ್ನಡದಲ್ಲಿ ಒಳ್ಳೆಯ ಕಲಾವಿದರೆಂದು ಗುರುತಿಸಿದ್ದಾರೆ.

ಸಾಂಸ್ಕೃತಿಕವಾಗಿ :

ನವರಾತ್ರಿಯ ಸಂದರ್ಭದಲ್ಲಿ ದುರ್ಗಾದೇವಿಯ ಪೂಜೆಯಲ್ಲಿ ೯ ದಿನವೂ ಹುಲಿವೇಷವನ್ನು ಹಾಕಿಕೊಂಡು ಕುಣಿಯುತ್ತಾರೆ. ಚೌತಿಯ ಎರಡು ದಿವಸವೂ ಹುಲಿವೇಷವನ್ನು ಮಾಡುತ್ತಾರೆ. ಇದು ದಕ್ಷಿಣ ಕನ್ನಡದ ಸಂಪ್ರದಾಯ. ಇಲ್ಲಿ ಮೂಲ ಕಲಾವಿದರು ಮತ್ತು ದೇವರಿಗೆ ಹರಕೆ ಹೊತ್ತ ಕಲಾವಿದರು ಸೇರಿರುತ್ತಾರೆ. ಮನೆಯಲ್ಲಿ ಮಕ್ಕಳಿಗೆ ಸೌಖ್ಯವಿಲ್ಲದಿದ್ದಾಗ ತಾಯಿ ಅಥವಾ ತಂದೆ ಮಗುವು ಸೌಖ್ಯವಾದರೆ ಹುಲಿಯವೇಷ ಹಾಕಿಸುತ್ತೇನೆಂದು ಹರಕೆ ಹೊರುತ್ತಾರೆ. ಹಾಗೆ ಬಂದ ಹುಲಿವೇಷದ ಕಲಾವಿದರಿಗೆ ದೇವರಿಗೆ ಹರಕೆ ಹೊತ್ತ ಕಲಾವಿದರೆಂದು ಕರೆಯುತ್ತಾರೆ. ನವರಾತ್ರಿ ಆರಂಭವಾಗುವುದಕ್ಕಿಂತ ಮೊದಲು ಕಲಾವಿದರೆಲ್ಲರೂ ಒಂದೆಡೆ ಸೇರಿ ತಮ್ಮ ಗುಂಪಿನ ನಾಯಕನಿಂದ ತಾಲೀಮು ಪಡೆಯುತ್ತಾರೆ. ಹಬ್ಬ ಬರುವುದಕ್ಕೆ ಮುಂಚಿತವಾಗಿ ಕುಣಿತವನ್ನು ಚೆನ್ನಾಗಿ ಕಲಿತು ಸಹ ಕಲಾವಿದರಿಗೆ ಪಕ್ವತೆ ಬಂದ ಮೇಲೆಯೇ ದಿನ ನಿಗಧಿಪಡಿಸಿ ವೇಷಹಾಕಲು ಆರಂಭಿಸುತ್ತಾರೆ. ನಿಗದಿತ ವೇಳೆಯಲ್ಲಿ ಎಲ್ಲಾ ಕಲಾವಿದರು ಒಟ್ಟಾಗಿ ಸೇರಿ ಬಣ್ಣ ಹಚ್ಚಿಸಿಕೊಳ್ಳುತ್ತಾರೆ. ತಂಡದಲ್ಲಿರುವ ಹಿರಿಯ ಕಲಾವಿದರಿಗೆ ಬಣ್ಣ ಹಚ್ಚುವುದು ತಿಳಿದಿರುತ್ತದೆ. ಹಾಗಾಗಿ ಒಬ್ಬರಿಗೊಬ್ಬರು ಸಹಕರಿಸಿಕೊಂಡು ಬಣ್ಣ ಹಚ್ಚಿಕೊಳ್ಳುತ್ತಾರೆ. ವೇಷಗಾರರು ಕೆಂಪುಮಿಶ್ರಿತ ಹಳದಿ ಬಣ್ಣವನ್ನು ಹಚ್ಚಿಕೊಂಡು ಚಡ್ಡಿಯನ್ನು ಮಾತ್ರ ಧರಿಸಿರುತ್ತಾರೆ. ಚಿಕ್ಕ ಮಕ್ಕಳಿಗೆ ಆಯಿಲ್ ಪೇಂಟ್‌ನ ಬದಲಾಗಿ ವಾಟರ್ ಪೇಯಿಂಟನ್ನು ಹಚ್ಚುತ್ತಾರೆ. ಬಣ್ಣ ಹಚ್ಚಿದ ಮೇಲೆ ಕಲಾವಿದರೆಲ್ಲರೂ ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಪೂಜಾ ಸಾಮಾಗ್ರಿಯೊಂದಿಗೆ

ಬಣ್ಣದ ಡಬ್ಬಗಳು, ಹುಲಿಯ ಮುಖವಾಡವು ಇರುತ್ತೆ. ಇವುಗಳಿಗೂ ಪೂಜೆಮಾಡಿ ನಂತರ ಗುರುಗಳು ವೇಷಧಾರಿ ಹುಲಿಗೆ ತಿಲಕವನ್ನಿಡುತ್ತಾರೆ. ಹುಲಿಯ ಮುಖವಾಡವನ್ನು ಪ್ರಧಾನ ಕಲಾವಿದನಿಗೆ ಹಾಕುತ್ತಾರೆ. ನಂತರ ದೊಡ್ಡ ಹುಲಿಯ ಹಿಂದೆ ಬೇರೆ ಬೇರೆ ಹುಲಿಗಳು ಸಾಲಾಗಿ ಅದನ್ನು ಅನುಕರಿಸುತ್ತವೆ.

ಹೀಗೆ ಒಮ್ಮೆ ಬಣ್ಣಹಚ್ಚಿದ ಕಲಾವಿದ ೯ ದಿನವೂ ಊರೂರು ಸುತ್ತುತ್ತಾ ಮನೆಮನೆಗಳ ಮುಂದೆ ಕಲೆಯನ್ನು ಪ್ರದರ್ಶಿಸುತ್ತಾರೆ. ರಾತ್ರಿ ಬಣ್ಣಹಚ್ಚಿದ ಕಲಾವಿದರು ಉದ್ದನೆಯ ಬಾಳೆ ಎಲೆಯ ಮೇಲೆ ಮಲಗುತ್ತಾರೆ. ಅವರು ನೀಡಿದ ದವಸಧಾನ್ಯಗಳನ್ನು, ಹಣವನ್ನು ಕಾಣಿಕೆ ರೂಪವಾಗಿ ಪಡೆದು, ಸಹಕಲಾವಿದರೆಲ್ಲರೂ ಹಂಚಿಕೊಳ್ಳುತ್ತಾರೆ. ೯ ದಿನಗಳ ನಂತರ ಮತ್ತೆ ತಾವು ಹೊರಟಿದ್ದ ಸ್ಥಳಕ್ಕೆ ಬಂದು ದೇವರಿಗೆ ಪೂಜೆಯನ್ನು ಮಾಡಿ, ಮಂಗಳಾರತಿಯನ್ನು ತೆಗೆದುಕೊಂಡ ಮೇಲೆ ಬಣ್ಣವನ್ನು ತೆಗೆಯುತ್ತಾರೆ. ಬಣ್ಣವನ್ನು ತೆಗೆಯುವುದು ಕೂಡಾ ಹಿಂಸೆಯೇ. ಸೀಮೆಎಣ್ಣೆ ಹಾಕಿ ಎರಡು–ಮೂರು ದಿನ ತಿಕ್ಕಿದ ಮೇಲೆಯೇ ಬಣ್ಣ ಹೋಗುವುದು. ಕಲಾವಿದರು ಒಂದು ವಾರ ಮನೆಯಿಂದ ಎಲ್ಲೂ ಹೊರಗೆ ಬರುವುದಿಲ್ಲ.

ಆರ್ಥಿಕವಾಗಿ :

ಸಮುದ್ರದಲ್ಲಿ ಮೀನುಗಾರಿಕೆಯನ್ನು ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಮಳೆಗಾಲದ ಸಂದರ್ಭದಲ್ಲಿ ಕಡಲಿಗೆ ಹೋಗಲು ಆಗುವುದೇ ಇಲ್ಲ. ಆಗ ಇವರು ಕೂಲಿ–ನಾಲಿ ಮಾಡಿ ಸಂಸಾರವನ್ನು ತೂಗಿಸುತ್ತಾರೆ. ಇಷ್ಟೆಲ್ಲ ಕಷ್ಟಗಳ ನಡುವೆಯೂ ವೇಷವನ್ನು ಹಾಕಿ ಸಂತಸ ಪಡುತ್ತಾರೆ. ಮತ್ತೆ ಕೆಲವರು ಹುಲಿವೇಷ ಕಲೆಯ ಮೇಲಿನ ಪ್ರೀತಿಯಿಂದ ತಾವು ಕಲಿಯಲೇಬೇಕೆಂಬ ಅತ್ಯುತ್ಸಾಹದಿಂದ ವೇಷ ಹಾಕಿಕೊಳ್ಳುವವರೂ ಇದ್ದಾರೆ. ಇವರು ಈ ಕಲೆಯಿಂದ ಆರಕ್ಕೇರದೆ–ಮೂರಕ್ಕಿಳಿಯದೆ ಸಂಸಾರ ನಿರ್ವಹಿಸುತ್ತಿದ್ದಾರೆ. ಕಲಾವಿದರು ಕಂಪ್ರೆಸರ್‌ನಿಂದ ಬಣ್ಣಹಚ್ಚಿದರೆ ಒಬ್ಬ ಕಲಾವಿದನಿಗೆ ೨೦೦೦ ರೂ. ಆಗುತ್ತದೆ. ಅದೇ ಬ್ರಷನ್ನು ಹಿಡಿದು ಹಚ್ಚಿದರೆ ಕಡಿಮೆ ಹಣವಾಗುತ್ತದೆ. ಕಂಪ್ರೆಸರ್‌ನಿಂದ ಬಳಿದ ಬಣ್ಣ ಬಾಳಿಕೆ ಹೆಚ್ಚು. ಆದರೆ ಅಷ್ಟು ಮೊತ್ತವನ್ನು ಕಲಾವಿದರು ಕೊಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ಒಬ್ಬೊಬ್ಬ ಕಲಾವಿದರು ಇನ್ನೊಬ್ಬರಿಂದ ಬಣ್ಣವನ್ನು ಬಳಿಸಿಕೊಳ್ಳುತ್ತಾರೆ. ಇವರ ಪರಿಶ್ರಮಕ್ಕೆ ತಕ್ಕಂತೆ ಪಡುಬಿದ್ರಿಯ ಹುಲಿವೇಷದ ತಂಡವು ಇಂದು ತನ್ನದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿದೆ. ನವರಾತ್ರಿಯ ದಿನ ವೇಷಧರಿಸಿದ ಕಲಾವಿದರೆಲ್ಲರೂ ಗ್ರಾಮದ ಎಲ್ಲಾ ಮನೆಗಳಿಗೂ ಹೋಗಿ ಅಲ್ಲಿ ಹಾಡಿ ಕುಣಿದು, ಕುಪ್ಪಳಿಸಿ ಅವರ ಮನತಣಿಸಿ ಅವರು ನೀಡಿದ ದವಸ–ಧಾನ್ಯಗಳನ್ನು ಕಾಣಿಕೆಯ ರೂಪದಲ್ಲಿ ಪಡೆಯುತ್ತಿದ್ದರು. ಅವರು ನೀಡುತ್ತಿದ್ದ ಕಾಣಿಕೆಗಳು ಮುಂದಿನ ಮೂರು

ಅಥವಾ ಆರು ತಿಂಗಳ ತನಕ ಇವರಿಗೆ ಸಾಕಾಗುತ್ತಿತ್ತು. ಇಂದು ಕಾಲ ಬದಲಾಗಿದೆ. ಹಿಂದೆ ನೀಡುತ್ತಿದ್ದ ಕಾಣಿಕೆ ರೂಪದ ಸಂಭಾವನೆ ಕಡಿಮೆಯಾಗಿ ಇವರ ಜೀವನ ನಿರ್ವಹಣೆ ದುಸ್ತರವಾಗಿದೆ. ಅಲ್ಲದೇ ಇಂದು ಅವರು ಕೊಡುವ ಕಾಣಿಕೆ ಹುಲಿವೇಷ ಹಾಕುವವರಿಗೆ ಬಣ್ಣಕ್ಕೂ ಸಾಲದು ಎಂದು ಹೇಳುವಾಗಿ ನೊಂದುಕೊಳ್ಳುತ್ತಾರೆ ಜಯಣ್ಣನವರು.

ಪಡುಬಿದ್ರಿಯ ಹುಲಿವೇಷ ಕಲಾವಿದರಾದ ಜಯಣ್ಣ ಹೇಳುವಂತೆ ಅವರು ಸಣ್ಣವರಿದ್ದಾಗ ಜೇಡಿಮಣ್ಣು ಮತ್ತು ಅಡಿಕೆಹಾಳೆಯ ಮುಖವಾಡ ಹಾಕಿಕೊಂಡು ಕಲಾವಿದರು ಕುಣಿಯುತ್ತಿದ್ದರಂತೆ. ಪರಿಸರ ಸ್ನೇಹಿ ವಸ್ತುಗಳಾದ್ದರಿಂದ ಕಲಾವಿದರಿಗೆ ಯಾವುದೇ ರೀತಿಯ ಹಾನಿಯಾಗುತ್ತಿರಲಿಲ್ಲ. ಆದರೆ ಇಂದು ಆಯಿಲ್ ಪೇಂಟ್‌ನ ಕಟುವಾಸನೆಯಿಂದ ಕಲಾವಿದರಿಗೆ ತಲೆಸುತ್ತುವುದು, ಹೊಟ್ಟೆ ತೊಳೆಸುವುದು, ಬಣ್ಣ ಬಳಿದ ಮೇಲೆ ಕೂರಲು-ನಿಲ್ಲಲು ಆಗದ ಕಲಾವಿದರ ಸ್ಥಿತಿ ಶೋಚನೀಯ. ಅಲ್ಲದೇ, ಮೂರು ದಿನಗಳಲ್ಲಿ ಹುಲಿವೇಷ, ದೇವರು ಮನೆಯಿಂದ ಮನೆಗೆ ಹೋಗಬೇಕಾದ್ದರಿಂದ ಇವರು ಮೂರು ದಿನವೂ ಬಣ್ಣದೊಂದಿಗೆ ಇರಬೇಕು. ಬಣ್ಣದ ಹಚ್ಚಿದ ಮೇಲೆ ಕಲಾವಿದರಿಗೆ ನಿದ್ರೆಮಾಡಲು, ಊಟ ಮಾಡಲು ಕೂಡ ಆಗುವುದಿಲ್ಲ. ದೇಹ ಉರಿಯಲು ಆರಂಭಿಸುತ್ತದೆ. ಇವರು ಎರಡು ರಾತ್ರಿ ಮಲಗಬೇಕಾದರೆ ಬಾಳೆ ಎಲೆಯ ಮೇಲೆ ಮಲಗುತ್ತಾರೆ. ಮೈಮೇಲೆ ಬಣ್ಣ ಇರುವಾಗ ಈ ಕಥೆಯಾದರೆ, ಬಣ್ಣ ತೆಗೆಯುವಾಗಿನ ಕಥೆಯೂ ಅಷ್ಟೇ ಕಷ್ಟಕರವಾದದ್ದು. ಪ್ರತಿಯೊಬ್ಬ ಕಲಾವಿದನಿಗೂ ಕೂಡ ಸೀಮೆಎಣ್ಣೆಯನ್ನು ಹಚ್ಚಿ ಚೆನ್ನಾಗಿ ಬರೆಸಿ ಬಣ್ಣವನ್ನು ತೆಗೆಯಬೇಕಾಗುತ್ತದೆ. ಆದರೂ ಒಂದೇ ಸಲ ಬಣ್ಣ ಹೋಗುವುದಿಲ್ಲ. ಕೆಲವೊಮ್ಮೆ ಚರ್ಮವನ್ನು ಕೆರೆದು ಸ್ವಚ್ಛ ಮಾಡಬೇಕಾಗುತ್ತದೆ. ಅದರೂ ಅಲ್ಲದೇ ಬಣ್ಣ ಹೋಗುವತನಕ ಮನೆಯಿಂದ ಹೊರಗೆ ಹೋಗುವ ಹಾಗಿಲ್ಲ. ಈ ರೀತಿಯ ಪಾಡು ಪಡುತ್ತಾರೆ ಕಲಾವಿದರು.

ಹುಲಿವೇಷದ ಕಲಾವಿದರ ತಂಡಕ್ಕೆ ವೇಷ ಹಾಕುವುದೆಂದರೆ ಎಲ್ಲಿಲ್ಲದ ಖುಷಿ. ಈ ವೇಷವನ್ನು ಧರಿಸಿದಾಗ ತಾವು ಹುಲಿಯೆಂದೇ ಭಾವಿಸಿ ಕುಣಿದು ಮನರಂಜಿಸುವ ಈ ಕಲಾವಿದರು ತಾವು ಎಷ್ಟೇ ಕಷ್ಟಬಂದರೂ ಈ ಕಲೆಯನ್ನು ಬಿಡಲಾರೆವು ಎನ್ನುತ್ತಾರೆ. ಹುಲಿವೇಷದ ಜಯಣ್ಣನವರೇನು ಅಂದಿನಿಂದ ಇಂದಿನತನಕ ಹುಲಿವೇಷವನ್ನು ಮಾಡಿ ಅಂತಹದ್ದೇನು ಸುಸ್ಥಿತಿಯಲ್ಲಿಲ್ಲ. ವಿಟ್ಲಪಿಂಡಿ, ಕೃಷ್ಣಜನ್ಮಷ್ಟಮಿ ಮಾರ್ನಮಿ ಹಬ್ಬದಂದು ಇವರ ತಂಡವು ಹುಲಿವೇಷವನ್ನು ಹಾಕುತ್ತಾರೆ. ಯಾವುದೇ ಕಾರಣಕ್ಕೂ ಎಷ್ಟೇ ಕಷ್ಟಬಂದರೂ ಈ ಕಲೆಯನ್ನು ಬಿಡಬಾರದೆಂಬ ಉದ್ದೇಶದಿಂದ ಇದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮುಂದಿನ ತಲೆಮಾರಿಗೆ ಈ ಕುಣಿತವು ಇರಬೇಕೆನ್ನುವುದು ಜಯಣ್ಣ ಅವರ ಅಭಿಮತ.

ಇಂದು ಹುಲಿವೇಷ ಕಟ್ಟುವವರ ಸಂಖ್ಯೆ ವಿರಳವಾಗಿದೆ. ಹುಲಿವೇಷ ಕಟ್ಟುವಾಗ ಬಣ್ಣದ ಖರ್ಚು ಹೆಚ್ಚಾಗುತ್ತದೆ. ಪ್ರದರ್ಶನ ನೀಡಿದ ನಂತರ ಎಲ್ಲಾ ಮನೆಯವರು ಕೊಟ್ಟ ಕಾಣಿಕೆ ಸೇರಿಸಿದರೂ ಕೂಡ ಹುಲಿವೇಷದ ಬಣ್ಣದ ಖರ್ಚು ಹುಟ್ಟುವುದಿಲ್ಲ. ಅಲ್ಲದೇ, ಸಾಧಾರಣವಾಗಿ ಹುಲಿವೇಷವನ್ನು ಚಮತ್ಕಾರಿಕ ಕಸರತ್ತುಗಳನ್ನು ಮಾಡುತ್ತಾರೆ. ಇವರು ಅಭ್ಯಾಸ ನಿರತರಾದಾಗ ಮತ್ತು ಪ್ರದರ್ಶನ ನೀಡುವಾಗ ಕಸರತ್ತುಗಳಿಂದ ಮೂಳೆ ಮುರಿತದ ಸಂಭವ ಹೆಚ್ಚು. ಹಾಗಾದಾಗ ಅವರು ಕೈಯಲ್ಲಿ ಕೆಲಸವಿಲ್ಲದೇ ಮನೆಯಲ್ಲಿ ಕೂರುತ್ತಾರೆ. ಆಗ ಮನೆ ನಡೆಯುವುದಾದ್ರೂ ಹೇಗೆ ? ಹೀಗಾಗಿ ಹುಲಿವೇಷಕ್ಕೂ ಕಲಾವಿದರು ಬರಲು ಹೆದರುತ್ತಾರೆ.

ದೃಶ್ಯಮಾಧ್ಯಮದಲ್ಲಿ ಹುಲಿವೇಷ :

ಮಕ್ಕಳಿಂದ ಹಿಡಿದು, ದೊಡ್ಡವರಾದಿಯಾಗಿ ಹುಲಿವೇಷವನ್ನು ನೋಡಿ ಸಂತಸಪಡುತ್ತಾರೆ. ಅದರಲ್ಲಂತೂ ತಮಟೆಯ ಸದ್ದಿಗೆ ಮರಿಹುಲಿಗಳು ಲಾಗಹಾಕುವುದು, ಲಿಂಬೆಹಣ್ಣು ಎತ್ತುವುದು, ಜನಗಳ ಮೇಲೆ ಎಗರುವುದು, ಇವೆಲ್ಲವೂ ನೋಡಲು ಬಲುಚಂದ. ಕೆಂಪು ಮತ್ತು ಹಳದಿ ಬಣ್ಣದ ಪಟ್ಟೆಯನ್ನು ಬಳಿದುಕೊಂಡು ಎಗರಾಡುವ ದೃಶ್ಯ ನಯನಮನೋಹರವಾಗಿರುತ್ತದೆ. ಬಣ್ಣದ ಪಟ್ಟೆಯನ್ನು ಬಳಿದುಕೊಂಡಿರುವುದರಿಂದ ಇದು ದೃಶ್ಯಮಾಧ್ಯಮಕ್ಕೆ ಅಳವಡಿಸಿದಾಗ ಅಂದವಾಗಿ, ವರ್ಣರಂಜಿತವಾಗಿ ಕಾಣುತ್ತದೆ. ತಮಟೆಯ ಸದ್ದಿಗೆ ದೊಡ್ಡಹುಲಿ, ಮರಿಹುಲಿಗಳು ಲಘುವಾಗಿ, ಜೋರಾಗಿ ನರ್ತನ ಮಾಡುವ ರೀತಿಗೆ ಎಂಥವರೂ ತಲೆದೂಗಲೇ ಬೇಕು. ಒಟ್ಟಿನಲ್ಲಿ ದೃಶ್ಯಮಾಧ್ಯಮದಲ್ಲಿ ಚಿತ್ರೀಕರಿಸುವಾಗ ಈ ಕಲೆ ತುಂಬಾ ಸೊಗಸಾಗಿ ಮೂಡಿ ಬರುತ್ತದೆ. ಹಿನ್ನಲೆಯಲ್ಲಿ ಸಮುದ್ರವಿರಬಹುದು. ಗಿಡಮರಗಳಿರಬಹುದು, ಹಸಿರಿನ ಮಧ್ಯೆಯೂ ವರ್ಣರಂಜಿತವಾಗಿ ಕಂಗೊಳಿಸುತ್ತದೆ. ಹುಲಿ ಮಾಡುವ ಚಮತ್ಕಾರಗಳು ಕೂಡಾ ಪ್ರೇಕ್ಷಕರ ಮನಸೆಳೆಯುತ್ತವೆ. ಕುಣಿಯುತ್ತಾ, ಕುಣಿಯುತ್ತಾ ನಿಂಬೆಹಣ್ಣನ್ನು ಬಾಯಲ್ಲಿ ಎತ್ತುವುದು, ಲಿಂಬೆಹಣ್ಣನ್ನು ಮಧ್ಯದಲ್ಲಿಟ್ಟು, ಎರಡೂ ಹುಲಿಗಳು ಕುಣಿಯುತ್ತಾ, ಲಿಂಬೆಹಣ್ಣನ್ನು ತೆಗೆದುಕೊಳ್ಳಲು ಹಣಾಹಣಿ ಮಾಡುವುದು ಅತ್ಯದ್ಭುತ. ಏಕೆಂದರೆ ಲಾಗಾ ಹಾಕುವುದು, ಪಲ್ಟಿ ಹೊಡೆಯುವುದು, ಒಬ್ಬರ ಮೇಲೊಬ್ಬರು ಬಿದ್ದು, ಸೆಣಸಾಡಿ ಲಿಂಬೆಹಣ್ಣನ್ನು ಹಿಡಿಯುವುದು ಪ್ರೇಕ್ಷಕರಿಗೆ ಮನರಂಜನೆ ಒದಗಿಸುತ್ತದೆ.

೩.೩.೧೩ ವೀರಗಾಸೆ

ಜಗದೀಶ, ಸರ್ವೇಶ, ಮಲ್ಲೇಶ, ಗೌರೀಶ ಎಂಬೆಲ್ಲಾ ಹೆಸರುಗಳಿಂದ ಕರೆಸಿಕೊಳ್ಳುವ ದೈವ ಎಂದರೆ ಶಿವ. ಗಂಗೆಯನ್ನು ಧರಿಸಿದಾಗ ಆತ ಗಂಗಾಧರನೆಂದು, ವಿಷ ಕುಡಿದಾಗ ವಿಷಕಂಠನೆಂದು ಕರೆಯುತ್ತಾರೆ. ಈ ಹರಪುರಾಣದ ಹಿನ್ನಲೆಯಲ್ಲಿ ಹುಟ್ಟಿಬಂದ

ಜನಪದ ಕಲೆಗಳಲ್ಲಿ ವೀರಗಾಸೆಯು ಒಂದು. ವೀರಗಾಸೆಯು ಶೈವ ಸಂಪ್ರದಾಯಕ್ಕೆ ಸೇರಿದ ಕಲೆ. ಇತರ ಕಲೆಗಳಿಗಿರುವಂತೆ ಇದಕ್ಕೂ ಪೌರಾಣಿಕ ಹಿನ್ನಲೆ ಇದೆ.



ವೀರಗಾಸೆ ಕುಣಿತ

ಪುರಾಣಗಳಲ್ಲಿ ವೀರಗಾಸೆ

ದಕ್ಷಬಹ್ರನು ತಾನು ಮಾಡುತ್ತಿರುವ ಯಜ್ಞಕ್ಕೆ ಗೌರಿಯನ್ನು ಕರೆದಿರುವುದಿಲ್ಲ. ಆದರೂ ಗೌರಿಯು ಶಿವನು ಬೇಡವೆಂದರೂ ಕೇಳದೆ, ನಂದೀಕೇಶ್ವರನೊಡನೆ ತಂದೆಯ ಯಜ್ಞಕ್ಕೆ ಬರುತ್ತಾಳೆ. ಅವಳು ಬಂದಾಗ ತಾಯಿ, ಅಕ್ಕಂದಿರು ಮಾತನಾಡುವುದಿಲ್ಲ. ತಂದೆಯು ಕೂಡ ಎಡಗಾಲಿನಿಂದ ಆಕೆಯನ್ನು ಒದ್ದು ಶಿವನನ್ನು ಹೀನಾಮಾನವಾಗಿ ಬಯ್ಯುತ್ತಾನೆ. ಇದನ್ನು ಕಂಡು ಮನನೊಂದ ಗೌರಿಯು ಯಜ್ಞ ಕುಂಡಕ್ಕೆ ಹಾರಿ ಪ್ರಾಣಾರ್ಪಣೆ ಮಾಡುತ್ತಾಳೆ. ಈ ವಿಷಯವನ್ನು ನಂದೀಕೇಶ್ವರನು ಶಿವನಿಗೆ ತಿಳಿಸುತ್ತಾನೆ. ಶಿವನು ಕೋಪದಿಂದ ತನ್ನ ಮೂರನೇ ಕಣ್ಣನ್ನು ತೆರೆದಾಗ ವೀರಭದ್ರನು ಜನಿಸುತ್ತಾನೆ. ಆತನ ರೌದ್ರಾವತಾರವನ್ನು ತಾಳಲಾರದೆ ಶಿವನು ತನ್ನ ಹಣೆಯ ಬೆವರನ್ನು ಭೂಮಿಗೆ ಹೊಡೆದಾಗ ಭದ್ರಕಾಳಿ ಜನಿಸುತ್ತಾಳೆ. ಶಿವನು ಅವರಿಬ್ಬರನ್ನು ಮದುವೆ ಮಾಡಿಸಿ, ಅವನು ಶಾಂತನಾದ ಮೇಲೆ ಅವನನ್ನು ಕರೆಸಿ ಕಾರಣವನ್ನು ಹೇಳುತ್ತಾನೆ. ದಕ್ಷನ ಯಜ್ಞದಲ್ಲಿ ಅರ್ಧಭಾಗವನ್ನು ಕೊಡುವಂತೆಯೂ, ಇಲ್ಲದಿದ್ದರೆ ಅವನ ಶಿರಸ್ಸನ್ನು ಕತ್ತರಿಸುವಂತೆ ಆಜ್ಞಾಪಿಸುತ್ತಾನೆ. ಹೀಗೆ ವೀರಭದ್ರನು ದಕ್ಷನ ಯಾಗಕ್ಕೆ ಬರುತ್ತಾನೆ. ಆದರೆ ದಕ್ಷಬ್ರಹ್ಮನು ವೀರಭದ್ರನ ಯಾವುದೇ ಮಾತಿಗೂ ಮಣಿಯುವುದಿಲ್ಲ. ವೀರಭದ್ರನು ಅವನ ಶಿರವನ್ನು ಕಡಿಯುತ್ತಾನೆ. ಆನಂತರ ದಕ್ಷನ ಹೆಂಡತಿ ಮಾಂಗಲ್ಯ ಭಾಗ್ಯವನ್ನು ಬೇಡಿಕೊಂಡದ್ದಕ್ಕಾಗಿ ಕುರಿತಲೆಯನ್ನು ಜೋಡಿಸಿ ಕೈಲಾಸಕ್ಕೆ ಹೊರಟು ಹೋಗುತ್ತಾನೆ. ಅಚ್ಚ ಕೆಂಪಿನ ಜುಬ್ಬಾ, ಹಸಿರು ಬಣ್ಣದ ಕಚ್ಚೆ, ಕಾಲಲ್ಲಿ ಗೆಜ್ಜೆ, ಮುಂಗಾಲಲ್ಲಿ ಜಂಗು, ಸೊಂಟದಲ್ಲಿ ರುಂಡಮಾಲೆ, ಓಂಕಾರ

ನಾದದ ಗಂಟೆ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ, ತಲೆಯಲ್ಲಿ ನಾಗಾಭರಣ, ಬಿಳಿಯ ಚವಲಿ, ಕಿವಿಯಲ್ಲಿ ಕುಂಡಲ, ಎದೆಯ ಮೇಲೆ ವೀರಭದ್ರನ ಹಲಗೆ, ನಾಗರ ತೋಳಬಂದಿ, ಹೊಳೆವ ಕೆಂಜಡೆ, ಕಸ್ತೂರಿ ತಿಲಕ, ಕರದಲ್ಲಿ ಖಡ್ಗ, ಎಡಗೈಯಲ್ಲಿ ಹಲಗೆ–ಹೀಗೆ ಹತ್ತಾರು ಬಗೆಯ ವಸ್ತ್ರಾಭರಣಗಳನ್ನು ಧರಿಸಿ ಕಲಾವಿದರು ಸಿದ್ಧರಾಗುತ್ತಾರೆ. ಈ ವೇಷಭೂಷಣಗಳು ಭಾರದಿಂದ ಕೂಡಿರುತ್ತವೆ.

ವೀರಗಾಸೆ ಕಲಾವಿದ ಮಹೇಶ

ಮೈಸೂರಿನ ಕಿರಾಳು ಗ್ರಾಮದ ಮಹೇಶ್ ವೀರಗಾಸೆ ಕುಣಿತಕ್ಕೆ ಹೆಸರುವಾಸಿ. ರಾಜ್ಯ ಮತ್ತು ಹೊರರಾಜ್ಯದ ಯಾವುದೇ ಭಾಗದಲ್ಲಾಗಲೀ, ವಿಶೇಷ ಆಹ್ವಾನದ ಮೇರೆಗೆ ತಮ್ಮ ತಂಡವನ್ನು ಕೊಂಡೊಯ್ದು ಜನರನ್ನು ಮನರಂಜಿಸುತ್ತಾರೆ.

ಸಾಮಾಜಿಕವಾಗಿ :

ಕಲಾವಿದ ಮಹೇಶ ಸುಮಾರು ಹತ್ತು ವರ್ಷದವನಿರುವಾಗ ತನ್ನ ತಾತ ಚಿಕ್ಕನರಸಯ್ಯನಿಂದ ಈ ಕುಣಿತವನ್ನು ಕಲಿತು, ಅದನ್ನೇ ಕಾಯಕವನ್ನಾಗಿ ಮಾಡಿಕೊಂಡಿದ್ದಾರೆ. ಅವರ ತಾತನಂತೆಯೇ ತಾನು ಹೆಸರುಗಳಿಸಬೇಕೆಂಬ ಅದಮ್ಯ ಬಯಕೆಯಿಂದ ಕುಣಿತದ ಗತಿಗೆ ಹೆಜ್ಜೆ ಹಾಕುತ್ತಿದ್ದಾರೆ. ಮಹೇಶ ಚಿಕ್ಕವರಿರುವಾಗಲೇ ಅರಳು ಹುರಿದಂತೆ ತೊದಲು ಭಾಷೆಯಲ್ಲಿ ಒಡಪು ಹೇಳಿ ಖಡ್ಗವನ್ನು ಜಳಪಿಸುವುದನ್ನು ಕಂಡು ಇವರ ತಂದೆಯವರು ಮಹೇಶ್ ಅವರ ಕಲೆಗೆ ನೀರೆರೆದು ಪೋಷಿಸಿದರು. ತಾವು ಕಾರ್ಯಕ್ರಮಗಳಿಗೆ ಹೋದಲ್ಲೆಲ್ಲಾ ಮಗ ಮಹೇಶನನ್ನು ಒಟ್ಟಿಗೆ ಕರೆದೊಯ್ದು ಖಡ್ಗ ಹಿಡಿಸಿದರು. ಮೈಗೆ ವಸ್ತ್ರಾಭರಣಗಳನ್ನು ತೊಡಿಸಿದರು. ಮಹೇಶನ ತಾತ ವೀರಗಾಸೆ ಕಲಾವಿದ ಚಿಕ್ಕನರಸಯ್ಯ, ಅವರದು ಈ ಕಲೆಯಲ್ಲಿ ದೊಡ್ಡ ಹೆಸರು. ಇವರ ಕಲೆಯನ್ನು ನೋಡಿದ ಮೈಸೂರಿನ ಆಗಿನ ಅರಸರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಶ್ರೀಕಂಠದತ್ತ ಒಡೆಯರು ವೀರಗಾಸೆಯವರನ್ನು ದಸರ ಉತ್ಸವಕ್ಕೆ ಮುಂಚಿನಿಂದಲೂ ಕರೆಸುತ್ತಿದ್ದರು. ನಾಲ್ವಡಿ ಕೃಷ್ಣರಾಜರಿದ್ದಾಗ, ಜನಪದ ಕಲಾ ತಂಡಗಳು ಮೆರವಣಿಗೆ ಹೊರಡುವಾಗ ಸಾಂಪ್ರದಾಯಿಕವಾಗಿ ನಂದಿಧ್ವಜದೊಂದಿಗೆ ವೀರಗಾಸೆ ಇರಲೇಬೇಕು. ತಾತ ಮತ್ತು ತಂದೆಯಿಂದ ಕೇಳಿ ತಿಳಿದ ಜನಪದ ಕಲೆಗಳ ದಸರ ಮೆರವಣಿಗೆಯ ಗತವೈಭವವನ್ನು ಬೇರೆಯವರಿಗೆ ಹೇಳುವುದೆಂದರೆ ತುಂಬಾ ಖುಷಿ.

ಅಂದಿನ ಕಾಲ ಇಂದಿಲ್ಲ. ಕಾಲ ಬದಲಾಗಿದೆ. ಕಾಲದೊಂದಿಗೆ ಜನಪದ ಕಲೆಗಳನ್ನು ಕೊಂಡೊಯ್ಯುವ ಛಾತಿ ಮಹೇಶ್ ಅವರಿಗಿದೆ. ಸುಮಾರು ೩೦ ವರ್ಷಗಳಿಂದ ಕಲಾ ಸೇವೆಯನ್ನು ಮಾಡುತ್ತಿರುವ ಮಹೇಶ್ ಅವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ಜಾನಪದ ಜಾತ್ರೆ, ಉತ್ಸವ, ಹಬ್ಬ, ಮೆರವಣಿಗೆ, ತೇರು, ಜಾತ್ರೆ ಮುಂತಾದ ಸಂದರ್ಭಗಳಲ್ಲಿ

ವೀರಗಾಸೆ ಕುಣಿತ ಇರಲೇಬೇಕು. ಮೈಸೂರಿನ ಸುತ್ತಮುತ್ತಲಿರುವ ಎಲ್ಲಾ ಜಾನಪದ ವಿದ್ವಾಂಸರಿಗೂ ವೀರಗಾಸೆಯ ಮಹೇಶ್ ಮತ್ತು ಅವರ ಕುಟುಂಬದವರು ಚೆನ್ನಾಗಿಯೇ ಗೊತ್ತು. ವೀರಗಾಸೆಗೆ ಹೊಸ ಚಮತ್ಕಾರಗಳನ್ನು ಸೇರಿಸುವಾಗ, ಮಹೇಶ ಅವರು ವಿದ್ವಾಂಸರು ಮತ್ತು ತಜ್ಞರ ಅಭಿಪ್ರಾಯದ ಮೇರೆಗೆ ಸೇರಿಸುತ್ತಾರೆ. ಕುಣಿತಕ್ಕೆ ಮೂಲಧಾಟಿಗೆ ಭಂಗ ಬರದಂತೆ ವೀರಗಾಸೆಯನ್ನು ಜತನವಾಗಿ ಕಾಪಾಡಿಕೊಂಡು ಬಂದಿದ್ದಾರೆ.

ಆರ್ಥಿಕವಾಗಿ :

ಇಷ್ಟೆಲ್ಲಾ ಸಾಧನೆ ಮಾಡಿದರೂ, ನಮ್ಮ ಕಲಾವಿದರು ಇಂದಿಗೂ ದುಃಸ್ಥಿತಿಯಲ್ಲಿದ್ದಾರೆ. ಕಲೆಯನ್ನು ನಂಬಿ ಬದುಕುತ್ತಿರುವವರ ಪಾಡು ಶೋಚನೀಯವಾಗಿದೆ. ಪುಟ್ಟದಾದ ಇಕ್ಕಟ್ಟಾದ ಅಡುಗೆ ಮನೆ, ಮಳೆ ಬಂದರೆ ಎಲ್ಲೆಂದರಲ್ಲಿ ಸೋರುವ ನೀರು, ಕಿರಿದಾದ ಕೋಣೆ, ಕಿತ್ತು ತಿನ್ನುವ ಬಡತನ–ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅರಸರ ಕಾಲದಿಂದಲೂ ಗುರುತಿಸಿಕೊಂಡು ಬಂದ ಈ ಕಲಾವಿದರ ಕುಟುಂಬ ಇಂದು ಕೂಡ ಅದೇ ಸ್ಥಿತಿಯಲ್ಲಿ ಇರುವುದು ಕಲೆಗೆ ಬೆಲೆ ಇಲ್ಲದಿರುವುದೇ ಸಾಕ್ಷಿ ಎನ್ನುತ್ತಾರೆ. ಕಲೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ ಮಹೇಶನಂತಹ ಕಲಾವಿದರು ಈಗ ನಿರಾಶೆಯಲ್ಲಿದ್ದಾರೆ. ಸತತವಾಗಿ ಕುಣಿದ ದೇಹದಲ್ಲಿ ಮೊದಲಿನ ಶಕ್ತಿ ಉಳಿದಿಲ್ಲ. ಸರ್ಕಾರವೂ ಕೂಡ ಕಲಾವಿದರಿಗೆ ಮಾಸಾಶನ ನೀಡಲು ಅನೇಕ ಮಾನದಂಡಗಳನ್ನು ಹಾಕಿಕೊಂಡಿದ್ದರು. ನಿಜವಾದ ಕಲಾವಿದರಿಗೆ ಮಾಸಾಶನ ನೀಡುವಲ್ಲಿ ವಿಫಲವಾಗುತ್ತಿದೆ. ಅನೇಕ ತರದ ಚಮತ್ಕಾರಗಳನ್ನು ವೀರಗಾಸೆಯಲ್ಲಿ ತಂದ ಮೊದಲಿಗರು ಇವರು. ತಮ್ಮ ನಂತರ ತಮ್ಮ ಕಲೆ ನಶಿಸಿ ಹೋಗಬಾರದೆಂದು ಈ ಕಲಾವಿದ ಅನೇಕ ಕಡೆ ಆಸಕ್ತರಿಗೆ ತರಬೇತಿಯನ್ನು ನೀಡುತ್ತಿದ್ದಾರೆ. ಇವರ ಮಗ ಯೋಗೇಶ್ ಕೂಡ ವೀರಗಾಸೆ ಕಲಾವಿದರಾಗಿ ರೂಪುಗೊಂಡಿದ್ದಾರೆ. ರಾಜ್ಯದೆಲ್ಲೆಡೆ ಇವರು ಕಾರ್ಯಕ್ರಮವನ್ನು ನೀಡಿದ್ದಾರೆ. ಕೆಲವೊಮ್ಮೆ ಕೆಲವು ಸಂಘ–ಸಂಸ್ಥೆಗಳು ಕೊಟ್ಟಿರುವ ಚೆಕ್‌ಗಳು ಕೈಕೊಟ್ಟಿವೆ. ತಿರುಗಿ ಅವರನ್ನು ಸಂಪರ್ಕಿಸಿದರೆ ಸಂಭಾವನೆ ನೀಡುವುದಿಲ್ಲ. ಇವೆಲ್ಲ ಸಂಗತಿಗಳು ಬೇಸರ ಹುಟ್ಟಿಸಿವೆ. ಇಂದೂ ಕೂಡಾ ಮಹೇಶ ಆರ್ಥಿಕವಾಗಿ ಸದೃಢನಾಗಿಲ್ಲ. ಹೆಂಡತಿ ಮಕ್ಕಳ ಪುಟ್ಟ ಸಂಸಾರದ ಜವಾಬ್ದಾರಿಯನ್ನು ಹೊರಲಾಗುತ್ತಿಲ್ಲ. ಕುಣಿದು ಕುಣಿದು ದಣಿದ ಕಾಲುಗಳು ಈಗ ಎತ್ತಲಿಕ್ಕೂ ಬಾರದಂತಾಗಿದೆ. ಇಡೀ ದೇಹವೇ ಕಾಯಿಲೆಗಳ ಗೂಡಾಗಿದೆ. ಹಾಗಾಗಿ ಬರುವ ಆದಾಯವೆಲ್ಲವೂ ಔಷಧಿಗೆ ಖರ್ಚಾಗುತ್ತದೆ. ಮಕ್ಕಳ ವಿದ್ಯಾಭ್ಯಾಸ, ಸಂಸಾರ ನಿರ್ವಹಣೆ ಎಲ್ಲವನ್ನೂ ಇವರ ಶ್ರೀಮತಿಯವರೇ ನೋಡಿಕೊಳ್ಳುತ್ತಾರೆ. ಆದರೂ ಗಂಡನ ಬಗ್ಗೆ ಅಪರಿಮಿತ ಕಾಳಜಿಯನ್ನು ವಹಿಸುವ ಈಕೆ ಮಹೇಶನಿಗೆ ತಕ್ಕ ಪತ್ನಿಯಾಗಿದ್ದಾಳೆ. ಜನಪದ ಕಲಾವಿದರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ವಿಶೇಷ ಸೌಲಭ್ಯ ಕೊಡಬೇಕೆಂದು ತಮ್ಮ ಮನದಾಳದ ಮಾತನ್ನು ಹೇಳುತ್ತಾರೆ.

ಇಂದು ಉದ್ಯೋಗ, ವಿದ್ಯಾಭ್ಯಾಸ ಹೀಗೆ ಹಲವಾರು ಕಾರಣಗಳಿಂದಾಗಿ ಕಲೆಯನ್ನೇ ನೆಚ್ಚಿಕೊಂಡಿದ್ದ ಕುಟುಂಬಗಳು ಪಟ್ಟಣಕ್ಕೆ ವಲಸೆ ಹೊರಟಿವೆ. ಇಂತಹ ಕಲಾವಿದರಿಗೆ ಸರಕಾರದಿಂದ ಹೆಚ್ಚೇನೂ ನೆರವು ಸಿಗುತ್ತಿಲ್ಲ. ಸಿಗುವ ಅಲ್ಪಸ್ವಲ್ಪ ಮಾಸಾಶನ, ಪ್ರಶಸ್ತಿಗಳು ಜಾನಪದ ಜಾತ್ರೆಯಂತಹ ಕಾರ್ಯಕ್ರಮಗಳು ಕಲಾವಿದರ ಹೊಟ್ಟೆ ತುಂಬಿಸುತ್ತಿಲ್ಲ. ಹೊಟ್ಟೆ ತುಂಬಿದರೆ ಕಲೆ, ಕಲಾವಿದ ಎಲ್ಲವೂ ಎನ್ನುವ ವಾಸ್ತವದ ಹಿನ್ನಲೆಯಲ್ಲಿ ವೀರಗಾಸೆ ತನ್ನತನ ಕಳೆದುಕೊಳ್ಳುತ್ತಿದೆ. ಹೀಗಿರುವಾಗ ವೀರಗಾಸೆ ಕುಣಿತಕ್ಕೆ ಮಹಿಳೆಯರು ಕಲಿತು ತಾವೂ ಪುರುಷರಿಗೇನೂ ಕಡಿಮೆ ಇಲ್ಲ ಎನ್ನುವಂತೆ ಕಾರ್ಯಕ್ರಮಗಳನ್ನು ನೀಡಿ ಬೇಷ್ ಎನಿಸಿಕೊಳ್ಳುತ್ತಿದ್ದಾರೆ.

ಸಾಂಸ್ಕೃತಿಕವಾಗಿ :

ವೀರಗಾಸೆ ಆರಂಭ ಮಾಡುವ ಮುನ್ನ ವೇಷಭೂಷಣ ಧರಿಸಿದ ಕಲಾವಿದರು ಮೊದಲು ದೇವರಿಗೆ ವಂದಿಸಿ, ನಂತರ ಊರಿನ ಪ್ರಮುಖ ಬೀದಿಗಳನ್ನು ಸುತ್ತುತ್ತಾರೆ. ಜನರು ಇವರ ಬರುವಿಕೆಯನ್ನು ಗಮನಿಸಿ, ರಸ್ತೆ ಸಾರಿಸಿ, ರಂಗೋಲಿ ಇಟ್ಟು ಬರಮಾಡಿಕೊಳ್ಳುತ್ತಾರೆ. ವೀರರಸ ಪ್ರಧಾನವಾದ ಈ ಜನಪದ ಕಲೆ ಧಾರ್ಮಿಕ ಮಹತ್ವ ಪಡೆದುಕೊಂಡಿದೆ. ಜನರು, ಕಲಾವಿದರಿಗೆ ಭಾವಪೂರ್ಣ ಪೂಜೆಸಲ್ಲಿಸಿ ಆಶೀರ್ವಾದ ಪಡೆಯುತ್ತಾರೆ. ದೇವರ ಪ್ರಾರ್ಥನೆಯೊಂದಿಗೆ ಆರಂಭವಾದ ಕುಣಿತ ಕರಡೆ, ಸಮಾಳ ವಾದ್ಯಗಳ ಗತ್ತಿಗೆ ಆಹಹಹಾ ರುದ್ರ....ಅಹಹಹಾ ದೇವಾ...ಎಂದು ಆರ್ಭಟಿಸುತ್ತಾ ಒಡುಪುಗಳನ್ನು ಹೇಳುತ್ತಾ, ವಾದ್ಯಗಳ ಲಯಕ್ಕನುಗುಣವಾಗಿ ವೀರಹೆಜ್ಜೆ ಹಾಕುತ್ತಾರೆ. ಹಾಗೂ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ. ನರ್ತನ ಗತಿಗೆ ತಕ್ಕಂತೆ ಕರಡಿ, ಸಮಾಳ, ಓಲಗ, ತಾಳ, ನಗಾರಿ, ಬಾರಿಸುವ ವಾದ್ಯಮೇಳದವರು ವಿಶಿಷ್ಟ ಗತ್ತಿನೊಂದಿಗೆ ದನಿಗೂಡುತ್ತಾರೆ. ಖಡ್ಗ ಮುಗಿದೊಡನೆ ಕುಣಿತ, ನಂತರ ಖಡ್ಗ ಸಾರುವುದು ಮತ್ತೆ ಕುಣಿತ ಹೀಗೆ ಇಡೀ ರಾತ್ರಿ ವೀರಭದ್ರನ ಪವಾಡ ಹೇಳುತ್ತಾ ಆವೇಶದಿಂದ ಕುಣಿಯುತ್ತಾರೆ.

ಸಾಧಾರಣವಾಗಿ ವೀರಭದ್ರ ದೇವರ ಒಕ್ಕಲಿನವರು, ತಮ್ಮ ಹಿರಿಯ ಅಥವಾ ಕಿರಿಯ ಮಗನ ಮದುವೆಗೆ ವೀರಗಾಸೆಯನ್ನು ಮಾಡಿಸುವುದು ಸಂಪ್ರದಾಯ ಆ ದಿನ ಐದುಜನ ಮುತ್ತೈದೆಯರು ಮತ್ತು ಐದು ಜನ ಗಂಡಸರು ಉಪವಾಸವಿರುತ್ತಾರೆ. ಉಪವಾಸವಿದ್ದರಿಗೆ ಶಸ್ತ್ರಗಳನ್ನು ಹಾಕುತ್ತಾರೆ. ನಂತರ ಕೊಂಬಿ ದೇವರನ್ನು ಮುತ್ತೈದೆಯರು ಮತ್ತು ಮದುಮಗ ಹತ್ತಿರವಿರುವ ದೇವಸ್ಥಾನಕ್ಕೆ ತೆಗೆದುಕೊಂಡು ಹೋಗುತ್ತಾರೆ. ಹೋಗುವಾಗ ದಾರಿಯುದ್ದಕ್ಕೂ ವೀರಭದ್ರನ ಒಡಬುಗಳನ್ನು ಹೇಳುತ್ತಾರೆ. ದೇವಸ್ಥಾನದ ಮುಂದೆ ಗುಂಡಿಯನ್ನು ತೋಡಿ ಅತ್ತಿ, ಆಲ, ಗಂಧದ ಕಟ್ಟಿಗೆಗಳನ್ನು ಹಾಕಿ ವೀರಗಾಸೆಯವರಿಂದ ಬೆಂಕಿಯನ್ನು ಹಚ್ಚಿಸಿ, ಆ ಬೆಂಕಿಯಲ್ಲಿಯೇ ಹಾಲುಕ್ಕಿಸಿ ಎಡೆ ನೀಡುತ್ತಾರೆ. ಈ

ಆಚರಣೆಯಲ್ಲಿ ಕೊಂಬಿ ದೇವರು ಬಹುಮುಖ್ಯ ಪಾತ್ರವಹಿಸುತ್ತದೆ. ಸ್ವಾಮಿಗಳು ಮುತ್ತೈದೆಯರು. ಮದುಮಗ ಎಲ್ಲರೂ ಆ ಕುಂಡವನ್ನು ಹಾಯ್ದು ದೇವಸ್ಥಾನವನ್ನು ಪ್ರವೇಶಿಸುತ್ತಾರೆ. ವೀರಶೈವರಲ್ಲಿ ವೀರಭದ್ರನನ್ನು ಮನೆದೇವರಾಗಿ ನಂಬುವವರು ಮಾತ್ರ ವೀರಗಾಸೆಯನ್ನು ಮಾಡಿಸುತ್ತಾರೆ. ಇದಕ್ಕೆ ಅಡಣಿ ಎನ್ನುವ ಹೆಸರು ಇದೆ.

ವೀರಗಾಸೆ ಅಥವಾ ವೀರಭದ್ರ ಕುಣಿತದವರನ್ನು ಲಿಂಗದ ವೀರರು ಎಂದು ಕರೆಯುತ್ತಾರೆ. ರೌದ್ರ ನರ್ತನದಿಂದ ಪ್ರೇಕ್ಷಕರನ್ನು ತುಂದಿಗಾಲಲ್ಲಿ ನಿಲ್ಲಿಸಬಲ್ಲ ಇವರ ಕಾಲುಗಳಿಗೆ ಎಷ್ಟು ಕುಣಿದರೂ ದಣಿವಿಲ್ಲ. ಸಾಮಾನ್ಯವಾಗಿ ಜಾತ್ರೆ, ಮೆರವಣಿಗೆ, ಮದುವೆ, ಗೃಹಪ್ರವೇಶ, ದಸರ ಉತ್ಸವ, ಜಾನಪದ ಜಾತ್ರೆ, ಕದಂಬ ಉತ್ಸವ, ಹೊರನಾಡು ಉತ್ಸವ ಮುಂತಾದ ಸಂದರ್ಭಗಳಲ್ಲಿ ವೀರಗಾಸೆ ನಡೆಸುತ್ತಾರೆ. ವೀರರಸ ಪ್ರಧಾನವಾದ ಈ ಕುಣಿತವು ಧಾರ್ಮಿಕ–ಸಾಂಸ್ಕೃತಿಕ ಮಹತ್ವ ಪಡೆದುಕೊಂಡಿದೆ. ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಸಾಂಪ್ರದಾಯಿಕವಾಗಿ ಸಾಗುವ ನಂದಿಧ್ವಜದೊಂದಿಗೆ ಈ ವೀರಗಾಸೆ ಇರಲೇಬೇಕು.

ವೀರಗಾಸೆ ಮಹಿಳಾ ಕಲಾವಿದೆ ಶ್ವೇತಾ ಎಲ್.ಎಂ.

ವೀರಗಾಸೆಯ ಮಹಿಳಾ ಸ್ಫೂರ್ತಿ ಮಹಿಳಾ ತಂಡ ನಾಡಿನೆಲ್ಲೆಡೆ ಹೆಸರುವಾಸಿ. ಈ ತಂಡದ ನಾಯಕಿ ಶ್ವೇತಾ ಪ್ರಗತಿಪರರು, ಉತ್ತಮ ಕಲಾವಿದರೂ ಆಗಿದ್ದಾರೆ. ಆಹಾಹಾ...ರುದ್ರಾ... ಎಂದು ಖಡ್ಗವನ್ನು ಝಳಪಿಸುತ್ತಾ, ಒಡಪುಗಳನ್ನು ಹೇಳಿದರೆ ಪ್ರೇಕ್ಷಕವರ್ಗವೇ ಕರತಾಡನ ಗೈಯ್ಯುತ್ತದೆ. ಅಷ್ಟು ಜನಪ್ರಿಯತೆಯನ್ನು ಶ್ವೇತಾ ಪಡೆದುಕೊಂಡಿದ್ದಾರೆ.

ಸಾಮಾಜಿಕವಾಗಿ :

ಚಿಕ್ಕಮಗಳೂರಿನ ಮಂಜುನಾಥ ಮತ್ತು ಸುಶೀಲ ಅವರ ೩ ಮಕ್ಕಳಲ್ಲಿ ಎರಡನೆಯವರು ಈಕೆ. ಅತಿ ಬಡತನದ ಕುಟುಂಬದಲ್ಲಿ ಜನಿಸಿದ ಇವರ ಮನೆಯಲ್ಲಿ ಎಲ್ಲರೂ ಕಲಾವಿದರೇ. ಆದರೆ ಈಕೆ ಮಾತ್ರ ವೀರಗಾಸೆ ಕುಣಿತಕ್ಕೆ ಬಂದದ್ದು ಆಶ್ಚರ್ಯವೇ ಸರಿ. ಸುಮಾರು ೬ನೇ ತರಗತಿಯಲ್ಲಿದ್ದಾಗ ಪಕ್ಕದ ಕ್ಲಾಸಿನವರಿಗೆ ವೀರಗಾಸೆ ಕಲಿಸಲು ಬಂದ ಗುರುಗಳು ಏನೇನು ಕಲಿಸುತ್ತಾರೆಂದು ಬಾಗಿಲು ಕಿಂಡಿಯಿಂದ ನೋಡಿ, ಬಾಗಿಲ ಹೊರಗೆ ತಾನು ದಿನವೂ ಅವರ ಹೇಳಿ ಕೊಡುತ್ತಿದ್ದ ರೀತಿಯೇ ಮಾಡುತ್ತಿದ್ದೆ. ಶಾಲೆಯಿಂದ ಮನೆಗೆ ಹೋದರೂ ಆಟ ಆಡುವ ಸಮಯದಲ್ಲಿ ಮತ್ತೆ ಮನೆಯಲ್ಲಿ ಕಲಿಯುತ್ತಿದ್ದರಂತೆ. ಹೀಗೆ ವೀರಗಾಸೆ ಕಲಿಯಲೇಬೇಕೆಂಬ ಆಸಕ್ತಿಯಿಂದ ಕಲೆಯನ್ನು ಕಲಿತರು. ಗುರುವಿಲ್ಲದೇ ಕಲಿತ ವಿದ್ಯೆ ಎನ್ನುತ್ತಾರೆ. ಮನೆಯ ಬಡತನದಿಂದ ದ್ವಿತೀಯ ಪಿಯುಸಿಗೆ ಓದಿಗೆ

ತಿಲಾಂಜಲಿ ಇತ್ತು. ತಮ್ಮ ಊರಿನ ಹಿರಿಯ ಕಲಾವಿದರಾದ ಬಸಪ್ಪನವರ ತಂಡ ಸೇರಿ, ಬೇರೆ ಬೇರೆ ಕಡೆ ಕಾರ್ಯಕ್ರಮ ನೀಡಲು ಮುಂದಾದರು. ಆಗ ಅವರು ಕೊಡುತ್ತಿದ್ದ ಗೌರವ, ಸಂಭಾವನೆ ೧೦ ರೂಪಾಯಿಗಳು. ನಂತರದಲ್ಲಿ ೧೫ ರಿಂದ ೨೦ ರೂಪಾಯಿಗಳನ್ನು ಮಾಡಿದರು. ಮನೆಯ ಬಡತನ, ಉಪವಾಸ-ವನವಾಸ ಜೊತೆಗೆ ತಮ್ಮ-ತಂಗಿಯರ ಓದಿನ ಜವಾಬ್ದಾರಿ ಇದೆಲ್ಲವನ್ನು ಕಂಡು, ನಾನೇ ಏಕೆ ತಂಡ ರಚಿಸಬಾರದೆಂದು ತೀರ್ಮಾನಿಸಿ ಸ್ಫೂರ್ತಿ ಮಹಿಳಾ ತಂಡವನ್ನು ರಚಿಸಿದೆ ಎನ್ನುತ್ತಾರೆ. ಮೊದಲಿಗೆ ಇವರ ತಂಡದಲ್ಲಿ ೧೨ ಜನ ಸದಸ್ಯರು ಇದ್ದರು. ಈಗ ೩೦ ಜನ ಜನರಿದ್ದಾರೆ. ಅವರಿಗೆ ವೀರಗಾಸೆಯನ್ನು ಕಲಿಸಿ, ಕಾರ್ಯಕ್ರಮಗಳಿಗೆ ಹೋದಾಗ ಅವರಿಗೆ ವೀರಗಾಸೆಯ ವೇಷಭೂಷಣಗಳನ್ನು ಇವರೇ ಕೊಡುತ್ತಾರೆ. ಮತ್ತು ಮಹಿಳಾ ಕಲಾವಿದರಿಗೆ ಪ್ರಯಾಣ ಭತ್ಯೆಯನ್ನು ದಿನಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅಲ್ಲದೇ ಶಾಲಾ-ಕಾಲೇಜುಗಳಿಗೆ ಹೋಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವೀರಗಾಸೆಯನ್ನು ಕಲಿಸಿಕೊಡುತ್ತಾರೆ.

ವೀರಗಾಸೆಯನ್ನು ಲಿಂಗಾಯಿತರೇ ಮಾಡಬೇಕೆನ್ನುವ ಪರಿಪಾಠವಿದೆ. ಆದಿ ದ್ರಾವಿಡ ಜಾತಿಗೆ ಸೇರಿದ ನಾನು ವೀರಗಾಸೆಯನ್ನು ಮಾಡುತ್ತಿದ್ದೇನೆ. ಆ ಮೂಢನಂಬಿಕೆಗಳೆಲ್ಲಾ ಸುಳ್ಳು ಎಂದು ಹೇಳುವ ಶ್ವೇತಾ ಅವರು ಪ್ರಗತಿಪರರು. ತಂದೆ-ತಾಯಿಯರ ಪ್ರೋತ್ಸಾಹದಿಂದ ಮತ್ತು ಪರಿಶ್ರಮದಿಂದ ಮೇಲೆ ಬಂದ ಇವರಿಗೆ ತನ್ನ ಕುಟುಂಬದ ಬಗ್ಗೆ ಅಪಾರ ಅಭಿಮಾನ. ಇಂದು ತಮ್ಮ ತಂಗಿಯರು ಡಿಗ್ರಿಯನ್ನು ಮುಗಿಸಿದ್ದಾರೆ. ಇವರ ಜೊತೆ ವೀರಗಾಸೆಯನ್ನು ಕಲಿತು ಕಾರ್ಯಕ್ರಮ ನೀಡಲು ಹೋಗುತ್ತಾರೆ. ಇವರಿಗೆ ಸೌಖ್ಯವಿಲ್ಲದಿದ್ದಾಗ ತಂಡವನ್ನು ಕರೆದುಕೊಂಡು ಹೋಗಿ ಕಾರ್ಯಕ್ರಮವನ್ನು ಯಶಸ್ವಿಮಾಡುವ ಮಟ್ಟಿಗೆ ಪರಿಣತಿ ಪಡೆದಿದ್ದಾರೆ. ಎರಡು ವರ್ಷಗಳ ಹಿಂದೆ ವೀರಗಾಸೆಗೆ ಬೆನ್ನ ಹಿಂದೆ ಇದ್ದು ಪ್ರೋತ್ಸಾಹಿಸಿದ ಎಲ್.ಎನ್. ಅರುಣ್ ಅವರನ್ನು ಮದುವೆಯಾಗಿದ್ದಾರೆ. ಅವರು ಇಂದು ಕೂಡ ಇವರ ಕಲೆಯನ್ನು ಪ್ರೋತ್ಸಾಹಿಸುತ್ತಿದ್ದಾರೆ. ಈಗ ಇವರು ವೀರಗಾಸೆಯೊಡನೆ ಜನಪದದ ಬೇರೆ ಬೇರೆ ಕುಣಿತಗಳನ್ನು ತಮ್ಮ ತಂಡದವರಿಗೆ ಕಲಿಸುತ್ತಿದ್ದಾರೆ. ಇಂದು ಈಕೆಯ ಸ್ಫೂರ್ತಿ ಕಲಾ ತಂಡವು ಚಿಕ್ಕಮಗಳೂರು ಜಿಲ್ಲೆಯಲ್ಲಿ ತುಂಬಾ ಹೆಸರುವಾಸಿ.

ಆರ್ಥಿಕವಾಗಿ :

ಕಡು ಬಡತನದಲ್ಲೇ ಹುಟ್ಟಿದ ಶ್ವೇತಾ ಅವರದ್ದು ಹೋರಾಟದ ಬದುಕು. ಸ್ಫೂರ್ತಿ ಮಹಿಳಾ ತಂಡವನ್ನು ಕಟ್ಟಿದ ಮೇಲೆ ಒಂದು ರೀತಿಯಲ್ಲಿ ಸಂಸಾರದಲ್ಲಿ ಸಮಾಧಾನ ನೆಮ್ಮದಿ ಕಂಡುಕೊಂಡಿದ್ದಾರೆ. ಎಲ್ಲಾ ರೀತಿಯ ಸಮಸ್ಯೆಗಳು ಬಗೆಹರಿದವು ಎನ್ನುವಷ್ಟರಲ್ಲಿಯೇ ಇನ್ನೊಂದು ಅಘಾತ ಅವರಿಗಾಗಿ ಕಾದಿತ್ತು. ಸಂಸ ರಂಗಮಂದಿರದಲ್ಲಿ ಕರ್ನಾಟಕ


ಜಾನಪದ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ಗೊರೂರು ಚೆನ್ನಬಸಪ್ಪನವರ ಸನ್ಮಾನದಂದು ರಂಗಮಂದಿರದಲ್ಲಿ ಕಾರ್ಯಕ್ರಮ ನೀಡುವಾಗ ಕಾಲಿನ ಮೂಳೆ ಮುರಿಯಿತು. ಡಾಕ್ಟರ್ ಕಾಲಿಗೆ ರಾಡನ್ನು ಹಾಕಿ ನಡೆಯುವಂತೆ ಮಾಡಿದರು. ಆರೇಳು ತಿಂಗಳಾದ ನಂತರ ಮತ್ತೆ ನಾನು ವೇದಿಕೆಯ ಮೇಲೆ ಕುಣಿಯಲು ಆರಂಭಿಸಿದೆ ಎನ್ನುವಾಗ ಕಣ್ಣಂಚನ್ನು ಒರೆಸಿಕೊಳ್ಳುತ್ತಾರೆ. ಕಾಲನ್ನು ಊರದ ಸ್ಥಿತಿಯಲ್ಲಿದ್ದ ಶ್ವೇತಾ ಮಾನಸಿಕ ಧೈರ್ಯವನ್ನು ತಂದುಕೊಂಡು ಮತ್ತೆ ವೇದಿಕೆಗೆ ಬಂದು ಆಹಾಹಾ...ರುದ್ರಾ... ಎಂದು ಖಡ್ಗ ಝಳಪಿಸುತ್ತಾರೆ, ಪ್ರೇಕ್ಷಕರಲ್ಲಿ ಸಂಚಲನವನ್ನು ಮೂಡಿಸುತ್ತಿದ್ದಾರೆ. ಅಪಘಾತವಾದಾಗ ಒಂದು ವರ್ಷ ಇವರು ಕಾರ್ಯಕ್ರಮ ನೀಡಲು ಆಗಲೇ ಇಲ್ಲ. ಇರುವ ಹಣವೆಲ್ಲವೂ ಕಾಲಿನ ಆಪರೇಷನ್ನಿಗೆ ಖರ್ಚಾಗಿತ್ತು. ಆಗ ಇವರ ಸಂಸಾರ ನಿರ್ವಹಣೆ ದುಸ್ತರವಾಗಿತ್ತು. ಮತ್ತೆ ಒಂದಾದ ಮೇಲೆ ಒಂದರಂತೆ ಕಾರ್ಯಕ್ರಮವನ್ನು ನೀಡಿ, ಸಂಸಾರದ ನೊಗಹೊತ್ತ ಇವರು ಅದನ್ನು ಒಂದು ಹಂತಕ್ಕೆ ತಂದು ನಿಲ್ಲಿಸಿದ್ದಾರೆ. ವಿದ್ಯಾಭ್ಯಾಸವನ್ನು ಮುಗಿಸಿರುವ ತಮ್ಮಂದಿರು, ಕೆಲಸದಲ್ಲಿದ್ದಾರೆ. ತಂಗಿ ವೀರಗಾಸೆ ಕುಣಿತವನ್ನೇ ಮುಂದುವರಿಸಿದ್ದಾಳೆ. ಇವರ ಪತಿ ಕೂಡಾ ಇವರಿಗೆ ಹೆಗಲಾಗಿ ಸಂಸಾರದ ಎಲ್ಲಾ ಜವಾಬ್ದಾರಿಯನ್ನು, ಅವರ ತಂದೆ–ತಾಯಿಯರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾಗಿರುವ ಇವರು, ಅನೇಕ ಪ್ರಶಸ್ತಿಗಳನ್ನು ಕೂಡ ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಸಿಂಗಾಪೂರ್‌ನಲ್ಲಿ ಸಿಂಗಾರಿ, ಕನ್ನಡ ಸಂಸ್ಕೃತಿ ಉತ್ಸವದಲ್ಲಿ ಕೂಡ ಭಾಗಿಯಾಗಿದ್ದಾರೆ. ಜಾನಪದ ಜಾತ್ರೆ, ಊರಹಬ್ಬ, ದಸರಾ ಉತ್ಸವ ಅನೇಕ ಸಂಘ–ಸಂಸ್ಥೆಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ತಂಡವನ್ನು ಕಟ್ಟುವಲ್ಲಿ ಅವಿರತವಾಗಿ ಶ್ರಮಿಸಿದ್ದಾರೆ.

ದೃಶ್ಯಮಾಧ್ಯಮದಲ್ಲಿ ವೀರಗಾಸೆ ಕುಣಿತ

ಆಹಾಹಾ ರುದ್ರ...ಎಂದು ವೀರಾವೇಷದಿಂದ ಕುಣಿಯುವ ವೀರಗಾಸೆ ಕುಣಿತ ರಂಜನೀಯವಾದ ವೇಷಭೂಷಣಗಳಿಂದ, ಗಡಸುತನದಿಂದ ವೀಕ್ಷಕರ ಮನಸೂರೆಗೊಳ್ಳುತ್ತದೆ. ಧಾರ್ಮಿಕ ಆಚರಣೆಯ ಹಿನ್ನೆಲೆಯಲ್ಲಿ ಬಂದಿರುವ ಕಲೆಯನ್ನು ಹೆಚ್ಚು ಆಧುನೀಕತೆಯನ್ನು ಅಳವಡಿಸಿಕೊಂಡಿಲ್ಲ. ದೃಶ್ಯಮಾಧ್ಯಮದಲ್ಲಿ ನಿರಂತರವಾಗಿ ಉಳಿಯಲು ಕೆಲವು ಚಮತ್ಕಾರಗಳನ್ನು ಕುಣಿತದಲ್ಲಿ ಅಳವಡಿಸಿಕೊಂಡಿದ್ದಾರೆ. ಗಂಡಸರು ಮಾಡುವ ಕುಣಿತ ಬಿರುಸಾಗಿ ವೀರಾವೇಶದಿಂದ ಕೂಡಿದ್ದಾರೆ. ಹೆಣ್ಣು ಮಕ್ಕಳು ಮಾಡುವ ಕುಣಿತ ವೀರರಸವನ್ನು ಹೊಂದಿದ್ದರು. ಲಾಲಿತ್ಯಪೂರ್ಣವಾಗಿಯೇ ಕಾಣುವುದು. ಖಡ್ಗವನ್ನು ಜಳಪಿಸುತ್ತಾ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಹಿಮ್ಮೇಳದ ಸಂಗೀತಕ್ಕನುಗುಣವಾಗಿ ನರ್ತಿಸುತ್ತಾರೆ. ಧಾರ್ಮಿಕ ಭಾವನೆ ಬಿಂಬಿಸುವ ಈ ಕುಣಿತ ದೃಶ್ಯಮಾಧ್ಯಮದಲ್ಲಿ ಒಂದು ಆಚರಣೆಯಾಗಿ ಮೂಡಿ ಬರುತ್ತದೆ.

೩.೩.೧೪ ಜಗ್ಗಲಿಗೆ ಮೇಳ

ಜಗ್ಗಲಿಗೆ ಒಂದು ದೊಡ್ಡ ಚರ್ಮವಾದ್ಯ. ಇದನ್ನು ರಣಹಲಗೆ ಎಂದು ಕರೆಯುತ್ತಾರೆ. ಹುಬ್ಬಳ್ಳಿ, ಧಾರವಾಡಗಳಲ್ಲಿ ಮಾತ್ರ ಈ ಕಲೆ ಕಂಡು ಬರುತ್ತದೆ. ಇದು ತನ್ನ ಪ್ರಾದೇಶಿಕ ಸೊಗಡಿನಿಂದ ವಿಶಿಷ್ಟತೆಯನ್ನು ಕಾಪಾಡಿಕೊಂಡಿದೆ. ಜಗ್ಗಲಿಗೆ ಸುಮಾರು ೫ ಅಡಿ ಎತ್ತರದ ವೃತ್ತಾಕಾರದ ಚರ್ಮವಾದ್ಯ. ಎತ್ತಿನಗಾಡಿಯ ಚಕ್ರದ ಕಬ್ಬಿಣದ ದುಂಡಾದ ಪಟ್ಟಿಗೆ ಹದಗೊಳಿಸಿದ, ಎತ್ತು, ಎಮ್ಮೆ, ಕೋಣ ಚರ್ಮವನ್ನು ಬಳಸಿ, ಚರ್ಮದ ದಾರದಿಂದಲೇ ಅದನ್ನು ಬಿಗಿದು ಕಟ್ಟುತ್ತಾರೆ. ಹಲಗೆಯ ವಿವಿಧಾಕಾರದಲ್ಲಿ ವಿವಿಧ ಬಣ್ಣಗಳಿಂದ ವೈವಿಧ್ಯಮಯ ಚಿತ್ರಗಳನ್ನು ಬಿಡಿಸಿರುತ್ತಾರೆ. ಜಗ್ಗಲಿಗೆ ಶಬ್ಧವು ಚೆನ್ನಾಗಿ ಮೂಡಿ ಬರಬೇಕೆಂದರೆ ಅದರ ಚರ್ಮವನ್ನು ಕಾಯಿಸಿ ಬಡಿಯುತ್ತಾರೆ. ಸಾಧಾರಣವಾಗಿ ಕಲಾವಿದರು ತಲೆಗೆ ರುಮಾಲು ಸುತ್ತಿರುತ್ತಾರೆ. ಜುಬ್ಬಾ, ಕಚ್ಚೆಪಂಚೆ, ಸೊಂಟದ ಮಧ್ಯಕ್ಕೆ ಬಟ್ಟೆಯನ್ನು ಬಿಗಿದಿರುತ್ತಾರೆ. ತಂಡದ ಮುಖ್ಯಸ್ಥರು ಸಣ್ಣದಾದ ಕಣಿವಾದ್ಯವನ್ನು ನುಡಿಸುತ್ತಾನೆ. ಮುಖ್ಯಸ್ಥನು ಕಣಿಯನ್ನು ಬಾರಿಸುವಾಗ ಯಾವ ತಾಳಗಳನ್ನು ಅನುಕರಿಸುತ್ತಾನೋ ಅದೇ ತಾಳಗಳನ್ನು ಜಗ್ಗಲಿಗೆ ಬಡಿಯುವವರೂ ಅನುಸರಿಸುತ್ತಾರೆ. ಈ ಮೇಳದಲ್ಲಿ ಜಗ್ಗಲಿಗೆಯ ಜೊತೆಗೆ ಚೌಗಡ, ಕಣಿ, ತಾಳ ಮೊದಲಾದ ವಾದ್ಯಗಳೂ ಕೂಡಾ ಇರುತ್ತವೆ. ಇದರ ಜೊತೆಗೆ ಮೋಜಿಗಾಗಿ ಕೀಲುಕುದುರೆ, ನವಿಲು, ಕೀಲು ಗೊಂಬೆಗಳನ್ನು ಕೂಡ ತಮ್ಮ ಕುಣಿತಕ್ಕೆ ಬಳಸುತ್ತಾರೆ.



ಜಗ್ಗಲಿಗೆ ಮೇಳ

ಸಾಧಾರಣವಾಗಿ ಜಗ್ಗಲಿಗೆ ಮೇಳವನ್ನು ಮುಖ್ಯವಾಗಿ ಹೋಳಿಹಬ್ಬದ ಸಂದರ್ಭದಲ್ಲಿ ನಡೆಸುತ್ತಾರೆ. ಇದಲ್ಲದೆ ಅಡ್ಡ ಪಲ್ಲಕ್ಕಿ ಉತ್ಸವ, ಸಾರ್ವಜನಿಕ ಮೆರವಣಿಗೆ, ದಸರಾ ಮೊದಲಾದ ಸಂದರ್ಭದಲ್ಲಿ ಈ ಕಲೆಗೂ ಅವಕಾಶ ನೀಡಲಾಗುತ್ತಿದೆ.

ಜಗ್ಗಲಿಗೆ ಮೇಳದಲ್ಲಿ ಸುಮಾರು ೧೫ ರಿಂದ ೩೫ ಮಂದಿ ಕಲಾವಿದರು ಪಾಲ್ಗೊಳ್ಳುತ್ತಾರೆ. ತಮ್ಮ ಕುಣಿತ ಪ್ರಾರಂಭಿಸುವುದಕ್ಕೂ, ಮೊದಲು ದೇವರಿಗೆ ಪ್ರಾರ್ಥನೆ ಸಲ್ಲಿಸಿ ಆಶೀರ್ವಾದ ಪಡೆಯುತ್ತಾರೆ. ಜಗ್ಗಲಿಗೆ ಮೇಳದಲ್ಲಿ ಕಲಾವಿದರ ಕುಣಿತದ ಹೆಜ್ಜೆ, ಗತ್ತು, ಹಲಗೆಯ ಸಾಮೂಹಿಕ ಬಡಿತ ಕೇಳುಗರಲ್ಲಿ ರೋಮಾಂಚನವುಂಟು ಮಾಡುತ್ತದೆ. ಜಗ್ಗಲಿಗೆಗೆ ಜಾತಿಯ ಭೇದಭಾವವಿಲ್ಲ. ಮುಖ್ಯಸ್ಥನಿಗೆ ಜಗ್ಗಲಿಗೆ ಬಡಿಯುವ ಅನುಭವವಿರಬೇಕು ಮತ್ತು ಅವರಿಗೆ ಮಾರ್ಗದರ್ಶನ ಮಾಡಿ ಕಲಾವಿದರನ್ನು ಸಂಘಟಿಸುವ ಶಕ್ತಿ ಇದ್ದರೆ ಸಾಕು.

ಜಗ್ಗಲಿಗೆ ಕಲಾವಿದ ವೆಂಕಟ ಪುಲಿ

ಜಗ್ಗಲಿಗೆಯ ಶ್ರೇಷ್ಠ ಕಲಾವಿದ ವೆಂಕಪ್ಪ ಹುಲಿ ತಮ್ಮ ವಿಶಿಷ್ಟ ಹಾಗೂ ಅದ್ಭುತ ಪ್ರತಿಭೆಯಿಂದಾಗಿ ಜಾನಪದ ಹುಲಿ ಎನ್ನುವ ಹೆಸರು ಪಡೆದವರು. ಜನ ಇವರನ್ನು ಮಜಲಿನ ವೆಂಕಪ್ಪ ಎಂದು ಕರೆಯುತ್ತಾರೆ.

ಸಾಮಾಜಿಕವಾಗಿ :

ಧಾರಾವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಗಿರಿಯಾಲ ಗ್ರಾಮದ, ವೆಂಕಪ್ಪ ಪುಲಿಯವರು ಕಲಾವಿದರ ಕುಟುಂಬದಲ್ಲೇ ಹುಟ್ಟಿ ಬೆಳೆದವರು. ಹಾಗಾಗಿ ಇವರಿಗೆ ಕಲೆಗಳತ್ತ ವಿಶೇಷ ಆಕರ್ಷಣೆ. ಮನೆಯ ಬಡತನದಿಂದಾಗಿ ಹೆಚ್ಚು ವಿದ್ಯಾಭ್ಯಾಸಗಳಿಸಲು ಇವರಿಗೆ ಸಾಧ್ಯವಾಗಿರಲಿಲ್ಲ. ಆದರೆ ತಮ್ಮ ೧೩ನೇ ವಯಸ್ಸಿನಲ್ಲಿಯೇ ಜನಪದ ಕಲೆಗಳಿಗೆ ಮಾರುಹೋಗಿ ಅವುಗಳ್ನು ಕರಗತಮಾಡಿಕೊಂಡವರು ಇವರು. ತನ್ನ ತಂದೆಯಿಂದ ಬಂದಿರುವ ಕಲೆ ರಕ್ತಗತವಾಗಿ, ಮೈಯಲ್ಲಿ ಹರಿದಿರುವ ಇವರು ಅಪ್ರತಿಮ ಪ್ರತಿಭಾನ್ವಿತ. ತಂದೆಯವರು. ಕಲಾವಿದರಿಗೆ ಜಗ್ಗಲಿಗೆ ಕಲಿಸಿಕೊಡುವಾಗ ತಾನೂ ಕಲಿತು, ತಾಳದಲ್ಲಿ ಅಪಾರ ಜ್ಞಾನ ಹೊಂದಿದ್ದಾರೆ. ಜಗ್ಗಲಿಗೆಗೆ ಶಾಸ್ತ್ರೋಕ್ತ ತಾಳಗಳನ್ನು ಬಾರಿಸುವುದು ಇವರ ವಿಶೇಷತೆ. ತಾಳಗಳ ಕುರಿತಾದ ತಾಳ-ದರ್ಪಣ ಎನ್ನುವ ಕೃತಿಯನ್ನು ಹೊರ ತಂದಿದ್ದಾರೆ. ಇದಕ್ಕಾಗಿ ತಮ್ಮಲ್ಲಿದ್ದ ತುಂಡು ಹೊಲವನ್ನು ಮಾರಿ, ತಮ್ಮ ಪುಸ್ತಕಗಳನ್ನು ಹತ್ತಾರು ಜನರಿಗೆ ಉಚಿತವಾಗಿ ಹಂಚಿದ್ದಾರೆ. ಇವರು ಬರೆದಿರುವ ಕೃತಿಯ ಕುರಿತು ಪುಟ್ಟರಾಜ ಗವಾಯಿಗಳು ಕೂಡ ಪ್ರಶಂಸೆ ಮಾಡಿದ್ದಾರೆ ಎಂದು ಹೇಳುವಾಗ ಅವರ ಬಗ್ಗೆ ಹೆಮ್ಮೆ ಎನಿಸುತ್ತದೆ.

ಕಲಿತ ವಿದ್ಯೆಯನ್ನು ಹತ್ತು ಮಂದಿಗೆ ಹಂಚಿದರೆ ಅದರ ಬೆಲೆ ಹೆಚ್ಚುತ್ತದೆ ಎನ್ನುವ ಭಾವನೆಯಿಂದ ಇವರು ಕಲಿಯುವ ಆಸಕ್ತಿ ಇರುವವರಿಗೆ ವಿದ್ಯೆಯನ್ನು ನಿರ್ವಂಚನೆಯಿಂದ ಧಾರೆ ಎರೆದಿದ್ದಾರೆ. ಅನೇಕ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಇವರ ಶಿಷ್ಯ ಬಳಗವು ಬಹಳಷ್ಟು ದೊಡ್ಡದು. ಕಲಘಟಗಿ ತಾಲ್ಲೂಕಿನ ಸೂರಶೆಟ್ಟಿಕೊಪ್ಪದಲ್ಲಿ

ಶ್ರೀ ಮಾರುತಿ ಜಗ್ಗಲಿಗೆ ಮೇಳವನ್ನು ಹುಟ್ಟುಹಾಕಿರುವ ಇವರು ತಮ್ಮ ಶಿಷ್ಯರೊಡಗೂಡಿ ನಾನಾ ಕಡೆ ಕಲಾ ಪ್ರದರ್ಶನ ನೀಡಿದ್ದಾರೆ. ಜಗ್ಗಲಿಗೆ, ಕರಡಿ ಮಜಲಿನಲ್ಲೂ ಪ್ರಸಿದ್ಧರಾದ ಇವರು ಈ ಕಲೆಯನ್ನು ದೆಹಲಿಗೂ ಕೊಂಡೊಯ್ದಿದ್ದಾರೆ. ಜಾನಪದ ಲೋಕ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಅಕಾಡೆಮಿ ಪ್ರಶಸ್ತಿ ಪಡೆದ ಇವರ ಕುರಿತು ಹತ್ತಾರು ಪತ್ರಿಕೆಗಳಲ್ಲೂ ಲೇಖನಗಳು ಪ್ರಕಟವಾಗಿದೆ. ಎಲ್ಲಾ ಪ್ರಶಸ್ತಿಗಳಿಗಿಂತಲೂ ಜನರ ಅಭಿಮಾನವೇ ಹೆಚ್ಚಿನದು ಎನ್ನುವ ದೊಡ್ಡ ಗುಣ ಇವರದು. ಜಾನಪದ ವಿದ್ವಾಂಸರಿಗಂತೂ ಇವರೊಂದು ಅಮೂಲ್ಯನಿಧಿ ಇದ್ದಂತೆ. ಈ ಕಲೋಪಾಸಕನ ಬಗೆಗೆ ಎಲ್ಲರಿಗೂ ತುಂಬು ಅಭಿಮಾನ.

ಸಾಂಸ್ಕೃತಿಕವಾಗಿ :

ಸಾಮಾನ್ಯವಾಗಿ ಜಗ್ಗಲಿಗೆಯನ್ನು ಯುಗಾದಿ ಮತ್ತು ಹೋಳಿಹುಣ್ಣಿಮೆಯಂದು ಮಾಡುತ್ತಾರೆ. ಹೋಳಿಹುಣ್ಣಿಮೆ ಹಬ್ಬ ಬರುವ ೧೫ ದಿನ ಮುಂಚಿತವಾಗಿ, ಊರ ಮುಖಂಡನು ಪ್ರತೀ ಮನೆಯ ಹಿರಿಯ ಸದಸ್ಯರನ್ನು ಸಭೆಗೆ ಕರೆಯುತ್ತಾನೆ. ಅಲ್ಲಿ ಹೋಳಿಹುಣ್ಣಿಮೆಯ ಹಬ್ಬದ ತಯಾರಿಯ ಕುರಿತು ಮಾತನಾಡುತ್ತಾರೆ. ವಂಶಪಾರಂಪರ್ಯವಾಗಿ ಮತ್ತು ಮನೆತನಗಳಿಂದ ಬಂದ ಮನೆಯವರೆಲ್ಲರೂ ಹಬ್ಬದ ದಿನ ಊರ ಮುಂದಿನ ಶಂಕರಲಿಂಗನ ಗುಡಿ ಅಥವಾ ಮಾದೇವನಗುಡಿಯ ಮುಂದೆ ಸೇರುತ್ತಾರೆ. ಮುತ್ತೈದೆಯರು ಮತ್ತು ಹೆಣ್ಣುಮಕ್ಕಳು ಕಳಸ ಗಿಂಡಿಯನ್ನು ಹೊತ್ತಿರುತ್ತಾರೆ. ಈ ಕಳಸದ ಗಿಂಡಿಗೆ ಕರಿಗಳಗ ಎಂದು ಕರೆಯುತ್ತಾರೆ. ಕರಿಗಳಗ ಎಂದರೆ ಬೆತ್ತದ ಬಡಿಗೆಗೆ ಹಿತ್ತಾಳೆ ಚರಿಗೆಯನ್ನು ಕವುಚಿಹಾಕಿ, ಅದರೊಳಗೆ ಬೇವಿನ ಸೊಪ್ಪನ್ನು ಇಟ್ಟು, ಕೇಸರಿ ವಸ್ತ್ರವನ್ನು ಬಡಿಗೆಗೆ ಕಟ್ಟುತ್ತಾರೆ. ಅದನ್ನು ಮುಂಜಾನೆಯೇ ಎದ್ದು ತಾವು ಶುಚಿರ್ಭೂತರಾಗಿ ಮನೆಯ ದೇವರಿಗೆ ಪೂಜೆಮಾಡಿ, ಕಳಸದ ಗಿಂಡಿಯನ್ನು ಗುಡಿಗೆ ತರುತ್ತಾರೆ. ಸುಮಾರು ೬ ಗಂಟೆಗೆ ಎಲ್ಲಾ ಕಳಸದ ಗಿಂಡಿಗಳಿಗೂ ಪೂಜಾರಿ ಪೂಜೆಯನ್ನು ಮಾಡಿ, ದೇವರಿಗೆ ಮಂಗಳಾರತಿಯನ್ನು ಮಾಡಿ, ಊರ ಮೆರವಣಿಗೆಗೆ ಹೊರಡುತ್ತಾರೆ. ಅಷ್ಟರಲ್ಲಿಯೇ ಜಗ್ಗಲಿಗೆಯ ಕಲಾವಿದರೆಲ್ಲರೂ ಊರ ಮುಂದಿನ ಗುಡಿಗೆ ಬಂದು ತಾವೂ ತಯಾರಾಗುತ್ತಾರೆ.

ಕಳಸವನ್ನು ಹೊತ್ತ ಹೆಣ್ಣುಮಕ್ಕಳು ಮೆರವಣಿಗೆ ಹೊರಟಾಗ, ಅವರ ಹಿಂದೆ ಜಗ್ಗಲಿಗೆ ಮೇಳದವರು ತಾವೂ ಕೂಡಿಕೊಳ್ಳುತ್ತಾರೆ. ಜಗ್ಗಲಿಗೆಯನ್ನು ಗಾಲಿಯಂತೆ ಉರುಳಿಸಿ, ಬಡಿಯುವ ಕಲಾವಿದರು ಕಚ್ಚೆಪಂಚೆ, ಜುಬ್ಬ, ಸೊಂಟಕ್ಕೆ ಬಟ್ಟೆಯನ್ನು ಬಿಗಿದಿರುತ್ತಾರೆ. ತಲೆಗೆ ರುಮಾಲನ್ನು ಸುತ್ತಿರುತ್ತಾರೆ. ಒಂದೇ ರೀತಿಯ ವೇಷಭೂಷಣ ತೊಟ್ಟ ಕಲಾವಿದರು ಜಗ್ಗಲಿಗೆಯನ್ನು ಬಡಿಯುವುದು ನೋಡಲು ಮನಮೋಹಕವಾಗಿರುತ್ತದೆ. ಮೆರವಣಿಗೆ ಸಾಗುತ್ತಿದ್ದಂತೆ ಊರುಗಳ ಚೌಕಿ ಅಥವಾ ವೃತ್ತಗಳಲ್ಲಿ ನಿಂತು ಕಲಾವಿದರು

ಜಗ್ಗಲಿಗೆಯಿಂದ ಇನ್ನಷ್ಟು ಚಮತ್ಕಾರಗಳನ್ನು ನೀಡಿ, ಜನರ ಮನರಂಜಿಸುತ್ತಾರೆ. ಇವರನ್ನು ನೋಡಲೆಂದೇ ಜನರು ಮನೆಯ ಮಹಡಿ, ಮರಗಳ ಮೇಲೆ ಕುಳಿತು ಮೆರವಣಿಗೆಯನ್ನು ನೋಡಿ, ಸಂತಸ ಪಡುತ್ತಾರೆ. ಜನಸಾಗರವನ್ನು ನೋಡಿದ ಕಲಾವಿದರು ಸ್ಪೂರ್ತಿಯಿಂದ ನಿಧಾನಗತಿಯಿಂದ ಬಡಿಯುತ್ತಾ, ಜಗ್ಗಲಿಗೆಯ ಲಯಕ್ಕನುಗುಣವಾಗಿ ಕುಣಿಯುತ್ತಾರೆ. ಅದರಲ್ಲಿ ಅನೇಕ ರೀತಿಯ ಚಮತ್ಕಾರಗಳನ್ನು ಮಾಡುತ್ತಾರೆ. ಅವರು ಮಾಡುವ ಚಮತ್ಕಾರಗಳಲ್ಲಿ ಸ್ವಲ್ಪ ಆಯಾ ತಪ್ಪಿದರೂ ಅಪಾಯ ತಪ್ಪಿದ್ದಲ್ಲ. ಆದರೂ ಕಲಾವಿದರು ತಮ್ಮ ಜೀವದ ಹಂಗುತೊರೆದು ಜನಸಾಗರವನ್ನು ರಂಜಿಸಲು ಚಮತ್ಕಾರಗಳನ್ನು ಮಾಡುತ್ತಾರೆ.

ಆನಂತರ ಅಲ್ಲಿಂದ ಮೆರವಣಿಗೆಯೂ ಪ್ರತೀ ಚೌಕದಲ್ಲಿಯೂ ಪ್ರದರ್ಶನವನ್ನು ನೀಡಿ, ಮುಂದೆ ಸಾಗಿ ದೇವಸ್ಥಾನವನ್ನು ಸೇರುತ್ತದೆ. ಅಲ್ಲಿ ಪೂಜಾರಿಯು ಮತ್ತೊಮ್ಮೆ ಕಳಸದ ಗಿಂಡಿಗೆ ಪೂಜೆಮಾಡಿ, ಅದನ್ನು ವಿಸರ್ಜಿಸುತ್ತಾನೆ. ಅಲ್ಲಿಗೆ ಅಂದಿನ ಮೆರವಣಿಗೆ ಮುಕ್ತಾಯವಾಗುತ್ತದೆ ಮುತ್ತೈದೆಯರು ಹೆಣ್ಣು ಮಕ್ಕಳು, ಕಲಾವಿದರು, ಊರು ಜನರು ಎಲ್ಲರೂ ತಮ್ಮ ತಮ್ಮ ಮನೆಗೆ ಹಿಂದಿರುಗುತ್ತಾರೆ.

ಆರ್ಥಿಕವಾಗಿ :

ಕಡು ಬಡತನದಲ್ಲಿಯೇ ಹುಟ್ಟಿದ ಇವರಿಗೆ ಬಡತನವೇನೂ ಹೊಸದಲ್ಲ. ತಾವು ಇಷ್ಟು ಬೆಳೆಯಬೇಕೆಂದರೆ ತಮ್ಮ ಮನೆಯವರೇ ಕಾರಣವೆಂದು ಹೇಳುತ್ತಾರೆ. ತಾವು ಚಿಕ್ಕವರಿದ್ದಾಗ ಮನೆಯವರಲ್ಲಾ ಉಪವಾಸವಿದ್ದು ತನಗೆ ಮಾತ್ರ ಉಣಿಸುತ್ತಿದ್ದ, ರೀತಿಯನ್ನು ಹೇಳುವಾಗ ಇವರ ಕಣ್ಣಂಚು ಒದ್ದೆಯಾಗುತ್ತದೆ. ಮಾತು ಗದ್ಗದಿತವಾಗುತ್ತದೆ. ಪುಟ್ಟದಾದ ಹಳೆಯ ಕಾಲದ ಮನೆ, ಗ್ಯಾಂಗ್ರಿಂಗ್‌ನಿಂದ ಕಾಲು ಕಳೆದುಕೊಂಡ ಪತ್ನಿ, ಹೊಟ್ಟೆಯ ಹಸಿವನ್ನು ಸಹಿಸಿ ಕಲಾವಿದನನ್ನು ಬೆಳೆಸಿದ ತುಂಬು ಕುಟುಂಬ, ಮಕ್ಕಳು, ಒಟ್ಟಿನಲ್ಲಿ ಕತ್ತಲು ಆವರಿಸಿದ ಬದುಕು. ಬೆಟ್ಟದಷ್ಟು ಕಷ್ಟಗಳಿದ್ದರೂ, ದಿಟ್ಟತನದಿಂದ ಎದುರಿಸಿ ಕಲೆಗಾಗಿ ಜೀವ ತೇಯುತ್ತಿರುವ ಈ ಕಲಾವಿದ ನಾಡೇ ಹೆಮ್ಮೆ ಪಡುವಂತಹ ಕಲಾತಂಡವನ್ನು ಕಟ್ಟಿದ್ದಾರೆ.

ಇಂದು ಮೊದಲಿನ ಪರಿಸ್ಥಿತಿ ಇಲ್ಲ. ಕಲಾವಿದರು ಇಂದು ಅನೇಕ ಕಡೆ ಕಾರ್ಯಕ್ರಮಗಳನ್ನು ನೀಡಿ, ಉತ್ತಮ ಮಟ್ಟದ ಜೀವನ ನಡೆಸುತ್ತಿದ್ದಾರೆ. ಮಕ್ಕಳು ವಿದ್ಯಾವಂತರಾಗಿದ್ದಾರೆ. ಕಲೆಗಾಗಿ ತಮ್ಮ ಜೀವನವನ್ನು ಮುಡಿಪಿಟ್ಟಿದ್ದಾರೆ. ಜಗ್ಗಲಿಗೆ ಮೇಳದ ಕಲಾವಿದರು ವೀರಾವೇಶದಿಂದ ರಣ ಹಲಗೆಯನ್ನು ಬಡಿಯುತ್ತಾ ಕುಣಿಯುತ್ತಾರೆ. ಹಾಡು, ಕಣಿಯ ಲಯಕ್ಕೆ ತಕ್ಕಂತೆ ವಿವಿಧ ವಿನ್ಯಾಸಗಳನ್ನು ಕುಣಿತದಲ್ಲಿ ಪ್ರದರ್ಶಿಸುತ್ತಾರೆ. ಈ ಹಲಗೆಯನ್ನು ಕೈಯಲ್ಲಿ ಎತ್ತಿಹಿಡಿದು ಬಾರಿಸುವುದು ಕಷ್ಟವಾದರೂ ಕೂಡ ಕಲಾವಿದರು ಆ ಪ್ರಯತ್ನವನ್ನು ಮಾಡಿದ್ದಾರೆ. ಬೇರೆ ಕಡೆ ಕಾರ್ಯಕ್ರಮಗಳಿಗೆ ಹೋಗುವಾಗ ಜಗ್ಗಲಿಗೆ

ಸಾಗಿಸಿಕೊಂಡು ಹೋಗುವುದು ತುಂಬಾ ಕಷ್ಟಕರ. ಹೊರಡುವ ಮುನ್ನ ಕಾರ್ಯಕ್ರಮದ ಆ ದಾರಿಯಲ್ಲಿ ಹೋಗುವ ಲಾರಿ ಡ್ರೈವರ್‌ನೊಂದಿಗೆ ಮಾತಾಡಿ ಲಾರಿಯಲ್ಲಿ ಜಗ್ಗಲಿಗೆ ಹಾಕಿಕೊಂಡು ಕಾರ್ಯಕ್ರಮದ ಸ್ಥಳ ತಲುಪುತ್ತಾರೆ. ಇಷ್ಟೇಲ್ಲಾ ಕಷ್ಟಬಿದ್ದು ಕಾರ್ಯಕ್ರಮದ ಸ್ಥಳ ತಲುಪಿದಾಗ, ಸಂಘಟಕರು ಸಾಗಾಣಿಕಾ ವೆಚ್ಚವನ್ನು ಕೊಡದಿರುವುದರ ಬಗ್ಗೆ ಇವರಿಗೆ ಅತೀವ ಬೇಸರವಿದೆ. ಗೌರವ ಸಂಭಾವನೆಯನ್ನು ಕೊಡುವಾಗಲೂ ಕೂಡ ಅವರಿಗೆ ಮಾತಿಗೆ ತಪ್ಪುತ್ತಾರೆ ಎನ್ನುತ್ತಾರೆ. ಇಷ್ಟೇಲ್ಲಾ ಸಂಕಷ್ಟಗಳ ನಡುವೆಯೂ ಈ ಕಲೆಯನ್ನು ತೂಗಿಸಿಕೊಂಡು ಹೋಗುತ್ತಿದ್ದಾರೆ.

ದೃಶ್ಯಮಾಧ್ಯಮದಲ್ಲಿ ಜಗ್ಗಲಿಗೆ ಮೇಳ

ದೃಶ್ಯಮಾಧ್ಯಮದಲ್ಲಿ ಜಗ್ಗಲಿಗೆ ಮೇಳವನ್ನು ಚಿತ್ರೀಕರಿಸಲು ನಿರ್ದೇಶಕನು ಮುಂಚಿತವಾಗಿಯೇ ಜಗ್ಗಲಿಗೆ ಮುಖಂಡನ ಜೊತೆ ಅವನು ತೋರಿಸುವ ಚಮತ್ಕಾರಗಳ ಕುರಿತು ಮಾತನಾಡಬೇಕು. ಏಕೆಂದರೆ ಜಗ್ಗಲಿಗೆ ಒಂದು ದೊಡ್ಡದಾದ ಚರ್ಮವಾದ್ಯ. ನೋಡಲು ಚಕ್ರದಂತೆ ಕಂಡರೂ, ನುಡಿಸಿದರೆ ಮಾಧುರ್ಯವನ್ನು ಹೊರಹೊಮ್ಮಿಸುತ್ತದೆ. ಕಲಾವಿದರು ಇದರಲ್ಲಿ ಚಮತ್ಕಾರವನ್ನು ತೋರಿಸುವುದು ಕಷ್ಟಸಾಧ್ಯ. ಆದರೂ ಕೂಡ ನಮ್ಮ ಕರ್ನಾಟಕದ ಕಲಾವಿದರು ಅನೇಕ ಚಮತ್ಕಾರಗಳನ್ನು ಅದರಲ್ಲಿ ಕಂಡುಕೊಂಡಿದ್ದಾರೆ. ಜಗ್ಗಲಿಗೆಯನ್ನು ಒಬ್ಬ ಕಲಾವಿದ ಎತ್ತಿಹಿಡಿಯುತ್ತಾನೆ. ಅದರ ಮೇಲೆ ಇನ್ನೊಬ್ಬ ಕಲಾವಿದ ಹತ್ತಿ ತಾಳವನ್ನು ಹಾಕುತ್ತಾ ಕುಣಿಯುತ್ತಾನೆ. ಕೆಲವೊಮ್ಮೆ ಮಕ್ಕಳನ್ನು ತಮ್ಮ ಭುಜದ ಮೇಲೆ ಕೂರಿಸಿಕೊಂಡು ತಾಳ ಬಡಿಯುವುದುಂಟು. ಹೀಗೆ ಎಲ್ಲಾ ಕಲಾವಿದರು ಹಿಮ್ಮೇಳದ ಸದ್ದಿಗೆ ತಮ್ಮ ಕೈಯಲ್ಲಿರುವ ಜಗ್ಗಲಿಗೆಯನ್ನು ಹಿಂದಕ್ಕೆ–ಮುಂದಕ್ಕೆ, ಮೇಲಕ್ಕೆ–ಕೆಳಕ್ಕೆ ಆಡಿಸುವ ರೀತಿಯಂತೂ ಅದ್ಭುತವಾಗಿರುತ್ತದೆ. ಮೇಲಿನಿಂದ ನೋಡುವವರಿಗೆ ಇದು ಕಮಲದ ಹೂ ಅರಳಿದಂತೆ ಕಾಣುತ್ತದೆ. ದೃಶ್ಯಮಾಧ್ಯಮದಲ್ಲಿ ಇದು ಅದ್ಭುತ ಕಲೆಯಾಗಿ ಮೂಡಿ ಬರುತ್ತದೆ. ಜಗ್ಗಲಿಗೆಯೂ ತುಂಬಾ ದೊಡ್ಡ ವಾದ್ಯವಾಗಿರುವುದರಿಂದ ಪ್ರೇಕ್ಷಕವರ್ಗಕ್ಕೆ ಹೊಸತೆನಿಸಿ ಕಾರ್ಯಕ್ರಮವನ್ನು ನೋಡುವಂತೆ ಮಾಡುತ್ತದೆ.

ಜಗ್ಗಲಿಗೆ ಮೇಳದ ಕಲಾವಿದರು ಸಾಲುಗಳಲ್ಲಿ ನಿಂತು ಹಲಗೆ ಬಡಿಯುತ್ತಾ ಕುಣಿಯುತ್ತಾರೆ. ಹಾಡು, ಅದಕ್ಕೆ ತಕ್ಕಂತೆ ವಿವಿಧ ವಿನ್ಯಾಸಗಳನ್ನು ಕುಣಿತದಲ್ಲಿ ಪ್ರದರ್ಶಿಸುತ್ತಿದೆ. ಜಗ್ಗಲಿಗೆಯನ್ನು ವೃತ್ತಾಕಾರವಾಗಿ ಎಡಗೈಯಿಂದ ಉರುಳಿಸುತ್ತಾ, ಬಲಗೈಯಿಂದ ವಿವಿಧ ಗತ್ತುಗಳಿಗೆ ಅನುಗುಣವಾಗಿ ಬಡಿಯುತ್ತಾರೆ. ಜಗ್ಗಲಿಗೆ ಬಾರಿಸುವಾಗ ಎಡಗೈ ಮತ್ತು ಬಲಗೈ ಎರಡು ಕ್ರಮಬದ್ಧವಾಗಿ ಚಲಿಸಬೇಕಾಗುತ್ತದೆ. ಕ್ರಮ ತಪ್ಪಿದರೆ ಹಲಗೆ ಉರುಳಿ ಹೋಗುತ್ತದೆ. ಇಲ್ಲವೇ ತಾಳ ತಪ್ಪುತ್ತದೆ. ಸ್ವಲ್ಪ ತಾಳ ತಪ್ಪಿದರೂ ಅಪಾಯ ಕಟ್ಟಿಟ್ಟ ಬುತ್ತಿ. ಆದರೂ ಕಲಾವಿದರು ಜೀವದ ಹಂಗುತೊರೆದು, ಈ ಕಲೆಯನ್ನು ಮಾಡುತ್ತಾರೆ.

೩.೪ ಜನಪದರು ಮತ್ತು ಕಲೆಗಳ ಅವಿನಾಭಾವ ಸಂಬಂಧ

ಜನಪದ ಕಲೆಗಳ ಹುಟ್ಟಿಗೂ ಮನುಷ್ಯನ ಇತಿಹಾಸಕ್ಕೂ ಬಿಡಿಸಲಾಗದ ನಂಟು ಸಂಸ್ಕೃತಿಯ ವಿಕಾಸಗೊಂಡಂತೆಲ್ಲಾ ಮನುಷ್ಯನ ಬದುಕು ವಿಕಸನಗೊಳ್ಳುತ್ತಾ ಬಂದಿತು. ಸಮುದಾಯವು ತನ್ನ ಜೀವನಾನುಭವಗಳಿಗೆ ಅಭಿವ್ಯಕ್ತಿಯ ರೂಪ ನೀಡಲು ಹವಣಿಸಿದಾಗ ಹಲವು ಬಣ್ಣಗಳು ಹುಟ್ಟಿಕೊಂಡವು. ನಿಸರ್ಗವನ್ನು ಮಣಿಸುವ ಸಲುವಾಗಿ ಮನುಷ್ಯನು ತಾನು ಕಲಿತ ಮಾಂತ್ರಿಕತೆಯನ್ನು ಪ್ರಯೋಗಿಸುವುದರೊಂದಿಗೆ ಆರಾಧನೆಯ ಸ್ವರೂಪವೂ ಬೆರೆತುಕೊಂಡಾಗ ಆತನ ಸೃಜನಶೀಲತೆ ವೈವಿಧ್ಯತೆಯನ್ನು ಸಾಧಿಸಿತು. ಹಾಡು, ಕುಣಿತ, ಅಭಿನಯಗಳೊಂದಿಗೆ ಕಥನ ನಿರೂಪಣೆ ಮತ್ತು ವರ್ಣರಂಜಿತ ವೇಷಭೂಷಣಗಳು ಬೆಳೆದು ಬಂದವು. ಜನರನ್ನು ರಂಜಿಸುವ ಮತ್ತು ಜನರಲ್ಲಿ ಧಾರ್ಮಿಕತೆಯನ್ನು ಪ್ರಚೋದಿಸುವ ಕಲಾರೂಪಗಳು ಆವಿಷ್ಕಾರಗೊಂಡವು. ಈ ಕಲಾ ರೂಪಗಳಲ್ಲಿ ಜನಪದರ ಶ್ರದ್ಧೆ ಉತ್ಸಾಹ, ಉಲ್ಲಾಸ, ಭಕ್ತಿ ಮನೆ ಮೂಡಿದವು.

ಹಾಲ್ದೆನೆ ಗದ್ದೆಗೆ ಇಳಿದಂತೆ ಗಿಳಿವಿಂಡು
ಕಾಲಿನ ತುಂಬ ಕಿರುಗೆಜ್ಜೆ । ಕಟ್ಟಿಕೊಂಡು
ಮಲ್ಲರಾಡ್ತಾರೆ ನವುಲಾಟ ।

ಕುಣಿತ ಜನಪದರ ಬದುಕಿನ ಸಂತಸದ ಭಾವಗಳು, ಕುಣಿತದಲ್ಲಿ ದಿನದ ದಣಿವನ್ನು ಮರೆಯುವ ಈ ಕಲೆಗಳು ಜನಪದರ ಆನಂದದ ಬುಗ್ಗೆ.

ನಮ್ಮ ಜನಪದ ಸಮಾಜವು ಪ್ರಧಾನವಾಗಿ ಗ್ರಾಮೀಣ ಸಮಾಜವಾಗಿದೆ. ಇದು ಪಟ್ಟಣಗಳ ನಾಗರೀಕ ಸಮಾಜದಿಂದ ಭಿನ್ನವಾಗಿವೆ. ಜನಪದರು ಎಂದರೆ ಬಹುಪಾಲು ಅನಕ್ಷರಸ್ಥ ಆಧುನಿಕ ಸಮಾಜದಿಂದ ಇವರು ಭಿನ್ನವಾಗಿ ಕಾಣಿಸುತ್ತಾರೆ. ಪಾರಂಪರಿಕವಾದ ಜೀವನ ಪದ್ಧತಿ, ಆಚಾರ-ವಿಚಾರ, ನಂಬಿಕೆ ಮತ್ತು ಸಂಪ್ರದಾಯಗಳಲ್ಲಿ ಇವರಿಗೆ ಶ್ರದ್ಧೆ ಹೆಚ್ಚು. ಭಾಷೆಗೆ ಲಿಪಿ ಕಾಣಿಸಿಕೊಳ್ಳುವ ಪೂರ್ವದಲ್ಲಿಯೇ ಜನಪದರಿಂದ ಸಾಹಿತ್ಯ ಸೃಷ್ಟಿಯಾಗಿದೆ. ಇಂದೂಕೂಡ ಜನಪದ ಎಲ್ಲರ ನಡುವೆ ಬಾಳಿ ಬದುಕಿದೆ. ನಮ್ಮ ಜನಪದ ಕಲೆಗಳು ಕೂಡ ಆರಾಧನೆಯ ಅಂಗವಾಗಿಯೇ ಹುಟ್ಟಿಕೊಂಡವು. ಹಬ್ಬ ಹರಿದಿನ ಜಾತ್ರೆ ಉತ್ಸವ ಮುಂತಾದ ಸಂದರ್ಭಗಳಲ್ಲಿ ಕಲೆಗಳು ವಿಜೃಂಭಿಸುತ್ತವೆ. ಪ್ರಕೃತಿ ಆರಾಧನೆಯೇ ನಮ್ಮ ಜನಪದ ಧರ್ಮದ ಮೂಲ ಆಶಯವಾಗಿದೆ. ಪ್ರಕೃತಿ ಪೂಜೆಯ ಹಿಂದೆ ಕೃತಜ್ಞತೆಯ ಭಾವನೆ ಇದೆ. ಇಂಥ ಪೂಜಾ ಸಂದರ್ಭದಲ್ಲಿಯೇ ಅನೇಕ ಕಲೆಗಳು ಹುಟ್ಟಿಕೊಂಡವು. ನಮ್ಮ ಜನಪದದ ಯಾವುದೇ ಕಲೆಯಾಗಿರಬಹುದು, ಇವೆಲ್ಲವೂ ಧಾರ್ಮಿಕ ಚೌಕಟ್ಟಿನಲ್ಲಿಯೇ ಜನ್ಮ ತಳೆದಿವೆ ಎಂದರೆ ತಪ್ಪಾಗಲಾರದು.

ಜನಪದರ ಬದುಕಿನ ಭಾಗವಾಗಿ ಜರುಗುವ ಆಚರಣೆ, ಸಂಪ್ರದಾಯ ಯಾವುದೇ ಆಗಿರಲಿ ಅದು ಜನಪದರ ಬದುಕಿನ ರೀತಿ, ನೀತಿಯನ್ನು ಅವುಗಳ ಬಗ್ಗೆ ಅವರ ಮನಸ್ಥಿತಿಯನ್ನು ತಿಳಿಸುತ್ತದೆ. ಅವುಗಳ ಬಗ್ಗೆ ಪ್ರಜ್ಞಾಪೂರ್ವಕ ತಿಳುವಳಿಕೆ ಇಲ್ಲವಾದರೂ ತಮ್ಮನ್ನು ರಕ್ಷಿಸುವ ಅಲೌಕಿಕ ಶಕ್ತಿಯೊಂದು ತಮ್ಮ ಸುತ್ತ ಇದೆ ಎಂಬ ಕಲ್ಪನೆ ಮಾತ್ರ ಅವರಿಗಿದೆ. ಹೀಗಾಗಿ ಮರ, ನದಿ, ಬೆಟ್ಟ, ಕಾಡು, ಕಣಿವೆ, ಮಳೆ ಮುಂತಾದ ಪ್ರಾಕೃತಿಕ ಸಂಪತ್ತನ್ನು ಭಕ್ತಿಯಿಂದ ಕಾಣುತ್ತಾರೆ. ಗೌರವಿಸುತ್ತಾರೆ. ಚರಾಚರ ವಸ್ತುಗಳಿಗೆಲ್ಲ ದೈವತ್ವವನ್ನು ಆರೋಪಿಸಿಬಿಡುತ್ತಾರೆ. ಹಾಗೆಯೇ ಆ ಸ್ಥಳಗಳ ಬಗ್ಗೆ ಪ್ರದೇಶಗಳ ಬಗ್ಗೆ ಪುರಾಣವನ್ನು ಕೂಡ ಸೃಷ್ಟಿಸಿಬಿಡುತ್ತಾರೆ. ತಮ್ಮ ಸೃಜನಶೀಲ ಪ್ರತಿಭೆಯಲ್ಲಿ ಅವುಗಳನ್ನೆಲ್ಲ ಕಾವ್ಯವಾಗಿ, ಕಥೆಯಾಗಿ, ಕಲೆಗಳಾಗಿ ಅರಳಿಸಿಬಿಡುತ್ತಾರೆ. ನಿಸರ್ಗರಾಧನೆ ಜನಪದ ಧರ್ಮದ ಪ್ರಮುಖ ಲಕ್ಷಣವೆನ್ನಬಹುದು. ಬದುಕಿಗೆ ಪೂರಕವಾದ ಅನ್ನ ನೀಡುವ ಪ್ರತಿಯೊಂದು ಆರಾಧ್ಯ ವಸ್ತುವಾಗಿ ಬಿಡುತ್ತದೆ. ಭೂಮಿ, ಆಕಾಶ, ಸಮುದ್ರ, ಮುಂತಾದವು, ಮಳೆ ಬಾರದೆ ಹೋದಾಗ ತಿಂಗಳ ಮಾವನ ಪೂಜೆ, ಮಾರಿ ಆರಾಧನೆ, ತೊಗಲುಗೊಂಬೆ ಆಡಿಸುವುದು, ಹಸು,ಕೋಣ, ಎತ್ತುಗಳನ್ನು ದೇವರ ವಾಹನವೆಂದು ಪೂಜಿಸುವುದು ರೂಢಿಯಲ್ಲಿದೆ. ಸರ್ಪಾರಾಧನೆ ಜಗತ್ತಿನಾದ್ಯಂತ ಪ್ರಚಲಿತವಿರುವ ವಿದ್ಯಮಾನ. ನಾಗರಪಂಚಮಿಯಂದು ನಾಗರ ಕಲ್ಲುಗಳಿಗೆ ಹಾಲೆರೆಯುವ ಸಂಪ್ರದಾಯ ನಮ್ಮಲ್ಲಿದೆ. ಹೀಗೆ ಯಾವುದಾದರೊಂದು ಸಂಪ್ರದಾಯ, ಆಚರಣೆಗಳ ಹಿನ್ನೆಲೆಯಲ್ಲಿಯೇ ನಮ್ಮ ಜನಪದ ಕಲೆಗಳು ಮೂಡಿಬಂದಿವೆ. ಹೀಗಾಗಿಯೇ ಜನಪದರಿಗೂ ಮತ್ತು ಕಲೆಗಳಿಗೂ ಅವಿನಾಭಾವ ಸಂಬಂಧವಿದೆ.

ನಮ್ಮಲ್ಲಿ ರೂಢಿಯಲ್ಲಿರುವ ಗ್ರಾಮದೇವತಾರಾಧನೆ, ಕೃಷಿ ಸಂದರ್ಭದ ಆಚರಣೆಗಳು, ವಿವಿಧ ಆರಾಧನೆಗಳಿಗೆ ಕಾರಣವಾಗುತ್ತ ತಮ್ಮದೇ ಆದ ತತ್ವ ಪರಂಪರೆಯನ್ನು ಜನಪದರು ಮೌಖಿಕ ಸಂಪ್ರದಾಯದಲ್ಲಿ ರೂಢರಿಸಿಕೊಂಡು ಬಂದಿರುವುದನ್ನು ಗುರುತಿಸಬಹುದು. ನಮ್ಮ ಬದುಕಿಗೆ ಚೈತನ್ಯ ನೀಡುವ ನೆಲ, ನೀರು, ಗಾಳಿ ಮುಂತಾದ ವಾತಾವರಣದ ಶಕ್ತಿಗಳಾಗಲೀ ಬದುಕಿಗೆ ಉಪಯೋಗವಾಗುವ ಪ್ರತಿಯೊಂದರ ನಿರೂಪಣೆಯಾಗಿ ಜಾನಪದ ಮೈದಾಳಿದೆ. ಹುಟ್ಟಿನಿಂದ ಸಾವಿನವರೆಗೂ ಇರುವ ಎಲ್ಲರನ್ನೂ ಜನಪದ ಸಂಸ್ಕೃತಿ ಅಭಿವ್ಯಕ್ತಿಸುತ್ತಲೇ ಬಂದಿದೆ. ನಾವು ತುಳಿಯುವ ಭೂಮಿ, ಕುಡಿಯುವ ನೀರು, ಸೇವಿಸುವ ಗಾಳಿ ಎಲ್ಲವೂ ಮನುಷ್ಯನ ಜೀವನದ ಭಾಗವಾಗಿಯೇ ಇವೆ. ಹಾಗಾಗಿ ಇವುಗಳ ಬಗ್ಗೆ ಎಲ್ಲಿಲ್ಲದ ಗೌರವ. ಭೂಮಿಪೂಜೆ ನಮ್ಮಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರ ಹಿನ್ನೆಲೆಯಾಗಿ ಒಂದೊಂದು ಸಂಪ್ರದಾಯ ಆಚರಣೆಗಳ ಹಿನ್ನೆಲೆಯಲ್ಲಿ ಕಲೆಗಳು ರೂಪುತಾಳಿವೆ. ಭೂಮಿಯನ್ನು ಪೂಜಿಸುವ ಆಚರಣೆಯಂತೆ ಮಳೆದೇವನ ಆರಾಧನೆಗೂ ಸಂಬಂಧಿಸಿ ಮಳೆದೇವನನ್ನು ಆರಾಧಿಸುವ ಆಚರಣೆ, ವ್ಯವಸಾಯದ ಹಿನ್ನೆಲೆಯಲ್ಲಿ ದೇವರುಗಳನ್ನು

ಜನಪದರು ಪೂಜಿಸುತ್ತಾರೆ. ಹೀಗೆ ನಾಟಿ ಮಾಡುವಾಗ, ಪೈರು ಕೀಳುವಾಗ, ಕಣ ಮಾಡುವಾಗ, ಸುಗ್ಗಿ ಹಬ್ಬದ ಸಂದರ್ಭದಲ್ಲಿ ಹೀಗೆ ಆಯಾ ಋತುಮಾನಕ್ಕನುಗುಣವಾಗಿ ಆಚರಣೆಗಳೊಂದಿಗೆ ಕಲೆಗಳೂ ರೂಪತಾಳಿವೆ. ಆರಾಧನಾತ್ಮಕ ಕಲೆಗಳೆಲ್ಲವೂ ಕಾಲಾನಂತರದಲ್ಲಿ ಪ್ರದರ್ಶನಾತ್ಮಕ ಕಲೆಗಳಾಗಿ ರೂಪುಗೊಂಡಿವೆ.

ಜನಪದ ಸಾಹಿತ್ಯವು ಒಂದು ನಾಡಿನ ಶಕ್ತಿ ಜನಪದರ ಬದುಕಿನ ಪ್ರತಿಬಿಂಬ ಜನಪದ ಸಂಸ್ಕೃತಿಯ ವಾಹಿನಿ ಅನೇಕ ವರ್ಷಗಳಿಂದ ತಲೆಮಾರಿನಿಂದ, ತಲೆಮಾರಿಗೆ, ಮೌಖಿಕವಾಗಿ ಸಾಗಿ ಬರುವಂಥದ್ದು ಅದು ಹುಟ್ಟಿದ ಸಮುದಾಯದ ಚಿಂತನೆ, ಅನುಭವ, ಕಲ್ಪನೆ ಮನೋಧರ್ಮಗಳ ಸಾರ, ಜನಪದರ ಭೌದ್ಧಿಕ ವಿಚಾರಗಳ ಮಡು. ಈ ಎಲ್ಲಾ ಲಕ್ಷಣಗಳನ್ನು ಜನಪದ ಸಾಹಿತ್ಯ ಮತ್ತು ಕಲೆಗಳು ತುಂಬಿಕೊಂಡಿವೆ. ನ ´ ವ ´) ೃ ಜನಪದರ ಬದುಕು ಸಾಹಿತ್ಯದಿಂದಲೇ ಪ್ರಾರಂಭವಾಗಿ ದಿನವಿಡೀ ಸಾಹಿತ್ಯದಲ್ಲಿಯೇ ವಿಜೃಂಭಿಸಿ ಸಾಹಿತ್ಯದಲ್ಲಿ ಮುಕ್ತಾಯಗೊಳ್ಳುತ್ತದೆ. ಹೊತ್ತು ಮೂಡುವ ಮುನ್ನ ರಾಗಿ ಬೀಸುವ, ಹೆಣ್ಣು, ಬೀಸಲು ಕಲ್ಲನ್ನು ಹಿಡಿಯುವಾಗ, ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಲೇ ಎಂದು ಹಾಡುತ್ತಾ ಪ್ರಾರ್ಥಿಸುತ್ತಾಳೆ. ಮಹಿಳೆಯರ ಕಾಯಕ ಜನಪದ ಸಾಹಿತ್ಯವು, ಈ ನೆಲಕ್ಕೂ ಮತ್ತು ಬದುಕಿಗೆ ಸಂಬಂಧಿಸಿದ್ದು. ಜನಪದರ ಸುಖ–ದುಃಖ, ದೈನಂದಿನ ಹಾಡು ಪಾಡು ಮಾನವೀಯ ಸಂಬಂಧ, ಪಶು–ಪಕ್ಷಿ, ಗಿಡ–ಮರ ಬೆಳೆಗಳ ಕುರಿತು ಸಾಹಿತ್ಯ ಜೀವಪರವಾದ, ಇರುವುದನ್ನು ಒಪ್ಪಿಕೊಂಡು ಇಲ್ಲದ್ದನ್ನು ಯೋಚಿಸದೇ ಬದುಕುವ ಕಲೆ, ಪ್ರೀತಿ ನೆಮ್ಮದಿ ಸಂತೃಪ್ತಿಯನ್ನು ಜೀವಪರ ನಿಷ್ಠೆಯನ್ನು, ಜನಪದ ಕಲೆ ಸಾಹಿತ್ಯದಲ್ಲಿ ಕಾಣುತ್ತೇವೆ.

ಜನಪದರ ಕಾಯಕ ನಿಷ್ಟೆ ನಿಲುವು, ಈ ನಾಡಿನ ಸಂಸ್ಕೃತಿಯ, ಯಾವ ವಲಯಕ್ಕೂ ಸೇರುತ್ತದೆ. ಜನ ಸಾಮಾನ್ಯರ ಕೃಷಿ ಮೂಲ ಸಂಸ್ಕೃತಿ. ಕುಶಲಗಾರರ ಸಂಸ್ಕೃತಿ ಇದರ ಸಾಂಸ್ಕೃತಿಕ ನೆಲೆಗಟ್ಟು, ಸರಳ ಅಡಿಪಾಯದ ಮೇಲೆ ನಿಂತಿದೆ. ಸುತ್ತಲಿನ ನಿಸರ್ಗ. ಪ್ರಾಣಿ ಪಕ್ಷಿ ಭೂಮಿ ಆಕಾಶಗಳೊಂದಿಗೆ ಬೆಸೆದು ಕೊಂಡಿದೆ. ಕಾಯಕವೇ ಕೈಲಾಸವೆಂದು ನಂಬ ನಿಷ್ಠೆಯಿಂದ ದುಡಿದು ಕಷ್ಟ ಬೀಳುವ ನಮ್ಮ ರೈತಾಪಿಗಳ ನಿರಂತರ ಶ್ರಮಕ್ಕೆ ಅದೊಂದು ಕಸುಬಲ್ಲ. ಅದೊಂದು ಪರಂಪರೆ ಈ ಶ್ರಮ ಸಂಸ್ಕತಿಯಲ್ಲಿ ದುಡಿಯುವವನು ಎಲ್ಲರಿಗೂ ನಂಟ. ತನಗಿಲ್ಲದಿದ್ದರೂ ಉಳಿದವರಿಗೆ ಹಂಚುವ ಧಾರಾಳಿ. ನಿತ್ಯದ ದುಡಿಮೆಯಲಿ ನೆರವಾಗುವ ಪ್ರತಿಯೊಂದು ಅವನಿಗೆ ಮೂರ್ತವೇ ಸರಿ. ಕೃಷಿ ಸಲಕರಣೆಗಳು ಪ್ರಾಣಿ ಭೂಮಿ ಎಲ್ಲವೂ ಪೂಜ್ಯ. ತನ್ನನ್ನು ಹೆತ್ತು ಸಾಕಿಸಲುಹಿದ ಭೂಮಿ ತಾಯಿಯ ಮೇಲಂತೂ ಅತೀವವಾದ ಭಕ್ತಿ ಕಾಯಕದಲ್ಲಿ ತೊಡಗಿರುವಾಗ, ಅಂದರೆ ಕಳೆ ಕೀಳುವಾಗ, ನೆಟ್ಟಿ ಹಚ್ಚುವಾಗಲೆಲ್ಲ ಜನಪದ ಸಾಹಿತ್ಯ ಅವರ ನಾಲಿಗೆಯ ಮೇಲೆ ನಲಿದಾಡುತ್ತದೆ. ಕಾಯಕದಿಂದ ಮನೆಗೆ ಹಿಂದಿರುಗಿ ಉಂಡು ಮಲಗುವಾಗ ಮಕ್ಕಳು ಮರಿಗಳಿಗೆ ಕಥೆ

ಹೇಳಿ ನಿದ್ರೆ ಹೋಗುತ್ತಾರೆ. ಹೀಗೆ ಜನಪದ ಸಾಹಿತ್ಯ ಮತ್ತು ಕಲೆಗಳು ಅವರ ಭಕ್ತಿಯ ಅಭಿವ್ಯಕ್ತಿಯಾಗಿ ಆಯಾಸ ಪರಿಹಾರಕವಾಗಿ, ಮನರಂಜನೆಯ ಸಾಧನವಾಗಿ ಜನಪದರ ಇಡೀ ಬದುಕನ್ನೇ ಅವರಿಸುತ್ತವೆ.

ಬದುಕಿನ ನಾದಲಯ ನಲಿವು ಸುಖ ದುಃಖಗಳನ್ನು ತಮ್ಮಲ್ಲಿ ಗರ್ಭೀಕರಿಸಿಕೊಂಡು ಮನುಷ್ಯ ಇತಿಹಾಸಕ್ಕೆ ಭಾಷ್ಯ ಬರೆಯಲು ಹೊರಟ, ಜನಪದ ಕಲೆಗಳು ಸಮುದಾಯ ಸಂಸ್ಕೃತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡು, ಕಲಾಪರಿಣತಿಗೆ ಹೆಸರಾದವು. ಸಮಷ್ಟಿ ಬದುಕಿನ ಚುಟವಟಿಕೆಗಳಿಂದಾಗಿ ಜನಪದರ ಸಂಘಟನೆಗೆ ನೆರವಾದವು. ಹಾಗೂ ಸಂವಹನಕ್ಕೆ ಆಧಾರವಾದವು. ಜನರಿಂದ ಜನರಿಗಾಗಿ ಹುಟ್ಟಿಕೊಂಡ ಜನಪದ ಕಲೆಗಳು, ಜನಪದರ ಕಲಾತ್ಮಕ ಆಬಿವ್ಯಕ್ತಿ, ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ ಹಾಡುಗಾರಿಕೆ ಕುಣಿತ ಅಭಿನಯ ಚಮತ್ಕಾರ ಮೊದಲಾದ ಅಂಶಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಜನಪದ ಕಲೆಗಳು ಸಮುದಾಯ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು. ಜನಪದ ಕಲೆ ಜನಪದ ಸಾಹಿತ್ಯವಿಲ್ಲದೆ ನಾವು ಜನಪದರನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅಷ್ಟು ಜನಪದವು ಇವರ ಬದುಕಿನೊಂದಿಗೆ ಹಾಸು ಹೊಕ್ಕಿವೆ.

ಜನಪದ ಕುಣಿತವೆಂದರೆ ಹಾಡು, ವಾದ್ಯಗಳಿರಲೇಬೇಕು. ಹಬ್ಬ-ಹರಿದಿನಗಳಲ್ಲಿ ಸುಗ್ಗಿಯಲ್ಲಿ ಜನಪದರು ಕುಣಿದು ಕುಪ್ಪಳಿಸಿ ಸಂತೋಷ ಪಡುತ್ತಾರೆ. ಕುಣಿತ ಹಾಗೂ ಸಂಗೀತಗಳ ಮೂಲಕ ಪ್ರಕೃತಿಯ ಶಕ್ತಿಗಳನ್ನು ಮೆಚ್ಚಿಸಬಹುದೆಂಬ ಭಾವನೆ ಜನಪದರದ್ದು ನಮ್ಮ ಜನಪದರಲ್ಲಿ ಸೋಬಾನೆ ಪದಗಳಿಲ್ಲದೇ ಮದುವೆ ನಡೆಯುವುದಿಲ್ಲ. ಶಾಸ್ತ್ರದ ಹಾಡುಗಳು ಹೇರಳವಾಗಿವೆ. ಶಾಸ್ತ್ರದ ಹಾಡುಗಳಲ್ಲಿ ಪ್ರಮುಖವಾದುವು ಮದುವೆ ಹಾಡುಗಳು. ಮದುವೆ ಪ್ರಾರಂಭದಿಂದ ಕೊನೆಯ ಶಾಸ್ತ್ರದವರೆಗೂ ಈ ಹಾಡುಗಳು ಬಳಕೆಯಾಗುತ್ತವೆ ಒಂದೊಂದು ಹಬ್ಬದಲ್ಲಿ ಬಳಸುವ ಹಾಡುಗಳ ಸಂಖ್ಯೆ ಅಗಣಿತವಾಗಿವೆ ಕಾಯಕಗಳ ಜೊತೆ-ಜೊತೆಗೆ ಗೀತೆಗಳು ಬೆಳೆದು ಬಂದಿವೆ.ಈ ಗೀತೆಗಳು ಕಾಯಕದ ಆಯಾಸವನ್ನು ಕಡಿಮೆ ಮಾಡಿ ಕಾಲದ ಪರಿವೆಯಿಲ್ಲದೆ ಕಾಯಕದಲ್ಲಿ ತೊಡಗಿಕೊಳ್ಳಲು ಸಹಕಾರಿಯಾಗಿವೆ. ಸಂಸಾರದ ಗೀತೆಗಳು ಪ್ರೇಮ ವಿರಸಗಳು ಗಂಡ ಹೆಂಡಿರ ನಡುವಿನ ನವಿರಾದ ಭಾವನೆಗಳನ್ನು ತೆರೆದಿಡುತ್ತದೆ. ಶಿಶುಗೀತೆಗಳು, ತತ್ವಪದಗಳು ನೀತಿ ಮೀರಿದ ಬದುಕು ಸಮಾಜ ಕಂಟಕವಾಗುತ್ತದೆ. ಜನಪದ ಕುಣಿತಗಳು ತೀರಾ ಸರಳವೂ, ನೇರವೂ ಆಕರ್ಷಣೀಯವೂ ಆದ ಗುಣವನ್ನು ಹೊಂದಿರುವ ನೃತ್ಯಗಳು ಮುದುಕರಿಂದ ಹಿಡಿದು ಮಕ್ಕಳಾದಿಯವರೆಗೆ ಮುದ ನೀಡುತ್ತದೆ. ಪ್ರತಿಯೊಂದು ಜನಾಂಗಗಳ ಸಾಂಸ್ಕೃತಿಕ ಜನಪದ ಸಂಸ್ಕೃತಿಯ ಸಮಗ್ರ ಚಿತ್ರವನ್ನು ಕೃಷಿಗೆ ಸಂಬಂಧ ಪಟ್ಟ ಗೀತೆಗಳು ಅನಾವರಣಗೊಳಿಸುತ್ತವೆ. ದುಡಿಮೆಯೊಂದಿಗೆ ಹುಟ್ಟಿದ ಹಾಡುಗಳು ಅದಮ್ಯ ಜೀವನ

ಪ್ರೀತಿಯನ್ನು ಪರಿಚಯಿಸುತ್ತದೆ. ಎಲ್ಲಾ ಸಂಸ್ಕೃತಿಗಳಿಗೂ ಮೂಲ ಸೆಲೆಯಾದ ಕೃಷಿಯು ಕ್ರಮೇಣ ಯಜಮಾನ ಸಂಸ್ಕೃತಿಯ ಶೋಷಣೆಗೆ ಒಳಗಾದಾಗ ಉತ್ಪಾದಕರಾದ ರೈತಾಪಿ ವರ್ಗವು ಮೂಲೆಗುಂಪಾಗಿ ತಾವೇ ದುಡಿಮೆಗೆ ಎರವಾದದ್ದು ವಿಪರ್ಯಾಸದ ಸಂಗತಿ.

ಜನಪದರ ಬದುಕು ರಾಜಶಕ್ತಿಗಿಂತ ಹೆಚ್ಚಾಗಿ ಧರ್ಮ ಶಕ್ತಿಯನ್ನು ಆಧರಿಸಿದ್ದು, ತಮ್ಮ ಜಾಯಮಾನಕ್ಕೆ ಒಗ್ಗುವ ರೀತಿಯಲ್ಲಿ, ಮಾನವೀಯ ಮೌಲ್ಯಗಳಿಂದ ಕೂಡಿದ ಧರ್ಮವೊಂದನ್ನು ರೂಪಿಸಿಕೊಂಡರು. ಜನಪದರ ಕಲ್ಪನೆಯ ದೇವರುಗಳು, ಇತರೆ ದೇವರುಗಳಿಗಿಂತ ಭಿನ್ನವಾದುದು. ಸಸ್ಯ, ಜನ, ಪ್ರಾಣಿ, ಪಕ್ಷಿ ವರ್ಗಗಳ ಸಮೃದ್ಧಿಯನ್ನು ಆರಾಧನೆಯ ಆಶಯವನ್ನಾಗುಳ್ಳದ್ದರ ಫಲವಾಗಿ ಜೀವ ಜಗತ್ತು, ಸಸ್ಯ ಜಗತ್ತು , ಪ್ರಾಣಿ ಜಗತ್ತಿನ ಬಗ್ಗೆ ಅತೀವವಾದ ಪ್ರೀತಿ ಭಕ್ತಿಗಳನ್ನು ಕಾಣುತ್ತೇವೆ. ತಮ್ಮ ಬದುಕಿಗೆ ಹತ್ತಿರವಾದ ಪ್ರತಿಯೊಂದು ವಸ್ತುವಿನಲ್ಲೂ ದೈವತ್ವವನ್ನು ಕಾಣುತ್ತಾರೆ. ನಮ್ಮ ಜನಪದರಿಗೆ ಊರೆಲ್ಲಾ ದೇವರು, ಚಾಮುಂಡಿ, ಚೌಡಮ್ಮ, ಎಲ್ಲಮ್ಮ, ಮಾರಮ್ಮ, ಮಾಳಮ್ಮ, ಕಬ್ಬಾಳಮ್ಮ, ಮೂಗೂರಮ್ಮ, ನಂಜುಂಡ, ಮಂಟೇಸ್ವಾಮಿ, ಮಾದಪ್ಪ, ಮೈಲಾರಲಿಂಗ ಇನ್ನು ಮುಂತಾದವು ದೇವರುಗಳು ಕೂಡ ಚಿರಪರಿಚಿತರು. ಈ ದೇವರುಗಳ ಬಳಿ ಅತಿ ಸಲುಗೆಯಿಂದ ತಮ್ಮ ಸಮಸ್ಯೆಯನ್ನೆಲ್ಲಾ ದೇವರಿಗೆ ಹೊರಿಸಿ, ಪಟ್ಟು ಹಿಡಿದು ತಮ್ಮ ಕಷ್ಟ ಸುಖಗಳನ್ನು ತೋಡಿಕೊಳ್ಳುತ್ತಾರೆ ತಾವು ಉಣ್ಣುವ ಊಟವನ್ನು ದೇವರುಗಳಿಗೂ ಬಡಿಸಿ ಸಂತಸಪಡುತ್ತಾರೆ.

"ಜನಪದರು ತಮ್ಮ ಇಷ್ಟಗಳ ಈಡೇರಿಕೆಗಾಗಿ ಒತ್ತಾಯಿಸುತ್ತಾರೆ. ದೇವರು ಅದನ್ನು ಮೀರಿದರೆ ಅವನನ್ನು ಶಿಕ್ಷಿಸುತ್ತಾರೆ ಕೂಡ, ಒಣ ಮೆಣಸಿನಕಾಯಿ ಅರೆದು ಕಾರವನ್ನು ದೇವರ ವಿಗ್ರಹಕ್ಕೆ ಬಳಿದು ಊರಾಚೆ ಮುಖ ಅಡಿಯಾಗಿ ಬಿಸಾಡುವುದನ್ನು ಜನಪದ ಸಂಸ್ಕೃತಿಯಲ್ಲಿ ಮಾತ್ರಕಾಣಲು ಸಾಧ್ಯ. ಸಮಷ್ಠಿಯ ಒಳಿತನ್ನು ನಿರ್ಲಕ್ಷಿಸಿದಾಗ ದೇವರನ್ನು ಹಿಂಸಿಸುವ, ಶಿಕ್ಷಿಸುವ, ಈ ಬಗೆಯ ವರ್ತನೆಗಳು ಕನ್ನಡ ನಾಡಿನ ಅನೇಕ ಗ್ರಾಮಗಳಲ್ಲಿ ಕಂಡು ಬರುತ್ತವೆ ಎಂಬುದು ವೈಶಿಷ್ಟ ಪೂರ್ಣ ಸಂಗತಿ"[೭] ಎಂದು ಡಾ. ಚಕ್ಕೆರೆ ಶಿವಶಂಕರ್ ಹೇಳುತ್ತಾರೆ. ಪ್ರತಿಯೊಂದು ಜನಾಂಗಗಳ ಸಾಂಸ್ಕೃತಿಕ ವಾಹಕಗಳಾದ ಈ ಕುಣಿತಗಳು ತಲೆಮಾರುಗಳ ಸಾಧನೆಯ ಸಾಕ್ಷ್ಯವಾಗಿ ಉಳಿದು ಬಂದಿದೆ. ಆರಾಧನೆಯ ಅಂಗವಾಗಿ ಧಾರ್ಮಿಕ ಪ್ರಸಾರಕ್ಕಾಗಿ ಹುಟ್ಟಿಕೊಂಡ ಜನಪದ ಕುಣಿತಗಳು ಕ್ರಮೇಣ ವೃತ್ತಿಪರತೆಗೆ ದಾರಿಮಾಡಿಕೊಟ್ಟವು. ಇಂದಿಗೂ ಕೂಡ ಜನಪದ ಕಲೆಗಳಲ್ಲಿ ಧಾರ್ಮಿಕ ಬದ್ಧತೆ ಕಾಣಬಹುದು. ಪ್ರೇಕ್ಷಕರು ಮತ್ತು ಕಲಾವಿದರಿಬ್ಬರು ಕುಣಿತಗಳ ಪ್ರದರ್ಶನದಲ್ಲಿ ಒಟ್ಟಾಗಿ ಸಂತೃಪ್ತಿ, ಸಮಾಧಾನಗಳನ್ನು ಕಾಣುವ ಮೂಲಕ ಮಾನಸಿಕ ಉನ್ನತಿ ಸಾಧಿಸುತ್ತಾರೆ. ಹೀಗಾಗಿಯೇ ಇಂದು ಕಲೆಗಳು ಜಾತಿ ಮತಗಳ, ಮೇಲು-ಕೀಳುಗಳ ಅಂತರವನ್ನು ಮೀರಿ ನಿಂತಿವೆ.

ಜನಪದ ಸಮಾಜವು ಸಮಷ್ಠಿಕೃತ ಸಮಾಜ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಜೀವನ ಚಕ್ರದ ಎಲ್ಲಾ ಘಟ್ಟಗಳು ವಿಶಿಷ್ಟವಾದುವುಗಳು ಹುಟ್ಟು, ಸಾವು, ದಾಂಪತ್ಯ, ಮುತ್ತೈದೆತನ ತಾಯ್ತನ, ಮೌಲ್ಯಗಳನ್ನು ಹೊಂದಿರುವ ಜನಪದರು ತಮ್ಮ ಬದುಕಿನುದ್ದಕ್ಕೂ ಬಹಳ ನಿಷ್ಠರಾಗಿಯೆ ಬಾಳಿಕೊಂಡು ಬಂದಿದ್ದಾರೆ. ಮಗು ಹುಟ್ಟುವಾಗ, ಆಚರಿಸುವ ಆಚರಣೆಯಿಂದ ಹಿಡಿದು ಸತ್ತವರ ತಿಥಿ ಮಾಡುವವರೆಗೂ ಬರುವ ವೈವಿಧ್ಯಮಯ ಆಚರಣೆಗಳು ಇವುಗಳೆಲ್ಲವೂ ಸಂಪ್ರದಾಯ ಆಚರಣೆಯ ಬೆಳವಣಿಗೆ ಆಗಿದೆ. ಜನಪದರು ಪ್ರೀತಿಗೆ ತಮ್ಮನ್ನು ಒಡ್ಡಿಕೊಂಡವರು. ಸಾಮಾಜಿಕ ಬಾಂಧವ್ಯಗಳ ಸಹಬಾಳ್ವೆ, ಸಹಕಾರಗಳ ಬುನಾದಿಯ ಮೇಲೆಯೇ ಜನಪದ ಸಮಾಜವು ನಿಂತಿದೆ. ಇದು ತನ್ನ ಸಾಹಿತ್ಯ ಸಮಷ್ಟಿಯಲ್ಲಿ ಜನಪದ ಸಮಾಜವನ್ನು ನೀತಿಯುತವಾಗಿ ಸತ್ವಯುತವಾಗಿ, ಮೌಲ್ಯಯುತವಾಗಿ ನಿರಂತರವಾಗಿ ಹರಿಯುವ ನೀರಿನಂತೆ ಸಾಗಿಸಿದೆ.

ಮುಕ್ತ ಪ್ರಣಯ ವ್ಯವಹಾರಕ್ಕೆ ಅವಕಾಶವನ್ನೀಯದೆ, ಒಪ್ಪಿತ ಮೌಲ್ಯವನ್ನು ತಿರಸ್ಕರಿಸಿದ ಪ್ರೀತಿಯನ್ನು ನಿಷಿದ್ಧವೆಂದು ಸಾರಿದ ಸಾಮಾಜಿಕ ವ್ಯವಸ್ಥೆ, ಪ್ರೀತಿಸುವ ಜೀವಗಳು ಎದೆಗುಂದದೆ ತಮ್ಮ ಕನಸುಗಳ ಸಾಕಾರಕ್ಕೆ ಕಾಯುತ್ತಾ ಕೂರುವುದನ್ನೂ ಕೂಡ ಕಾಯಕ ಸಂಸ್ಕೃತಿ ವ್ಯಕ್ತಪಡಿಸುತ್ತದೆ. ಮೇಲು ಜಾತಿ, ಕೀಳು ಜಾತಿ, ಹಿಂದೂ ಮುಸಲ್ಮಾನ ಎಂಬ ಬೇಧ ಭಾವವಿಲ್ಲದೆ ಎಲ್ಲರೂ ಸಮನಾಗಿ ಬೆರೆಯುವ ಬದುಕು ನಡೆಸುವ ಬಗೆಯನ್ನು ಜನಪದರಲ್ಲಿ ಕಾಣುತ್ತೇವೆ. ಕರ್ಬಲ ಪದಗಳೆಂದು ಹೆಸರಾದ ಮೊಹರಂ ಹಾಡುಗಳು, ಹಜರತ್ ಹುಸೇನ ಮತ್ತು ಹಸನ್ನರ ಬಲಿದಾನದಕತೆ ಹಾಗೂ ದರ್ಗಾಗಳಿಗೆ ಸಕ್ಕರೆ ಕೊಟ್ಟ ಬರುವ ಹಿಂದೂಗಳು, ದೇವಸ್ಥಾನಗಳಲ್ಲಿ ಪೂಜೆ ಕೈಗೊಳ್ಳುವ ಮುಸಲ್ಮಾನರು ಸ್ನೇಹ ಸೌಹಾರ್ದಾತೆಗಳ ಮೇಲೆ ತಮ್ಮ ಬದುಕನ್ನು ರೂಪಿಸಿಕೊಂಡಿದ್ದಾರೆ. ಅಲಾವಿ ಉರುಸುಗಳು, ದೀವಳಿಗೆ ದಂಡು ಊರಾಡುವುದು, ಅಂಟಿಗೆ ಪಂಟಿಗೆ ಇವುಗಳೆಲ್ಲವೂ ಕೂಡ ಕಲೆಗಳು ಜನಪದರೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವುದನ್ನು ಸೂಚಿಸುತ್ತದೆ. ಸಮಾಜದ ಲೋಪದೋಷಗಳನ್ನು ತಿದ್ದಲು, ಜನರನ್ನು ಮಾರ್ಮಿಕವಾಗಿ ಎಚ್ಚರಿಸಲು, ಅವರನ್ನು ನೈತಿಕ ಮಾರ್ಗದಲ್ಲಿ ಮುನ್ನಡೆಸಲು ಲಾವಣಿ, ಕಥನ ಗೀತೆ ಮುಂತಾದುವುಗಳನ್ನು ಹಾಡುತ್ತಿದ್ದರು.

ಜನಪದರದ್ದು ಕೂಡ ಗೋಳಿನ ಬದುಕೆ, ದುಃಖಮೂಲವಾದ ಯಾರನ್ನು ದೂಷಿಸದ, ಅತ್ಯಂತ ತಣ್ಣನೆಯ ನೋವು ಪದೇ ಪದೇ ಹತ್ತಿಕಲ್ಪಟ್ಟು, ಸೋಲನ್ನೇ ಉಂಡುಟ್ಟು ಹೊದೆಯ ಬೇಕಾದ ಹೀನಾಯ ಸ್ಥಿತಿಯನ್ನು ಜನಪದ ಸಾಹಿತ್ಯವು ಬಿಂಬಿಸುತ್ತಿದೆ. ಕೀಳರಿಮೆ, ವಿಧಿವಾದ, ಮೌಢ್ಯ ಜಾತೀಯತೆಯಿಂದ ನರಳುತ್ತಿದ್ದ ಕಾಲವನ್ನು ತಮ್ಮ ಸಾಹಿತ್ಯದಲ್ಲಿ ಯಥಾವತ್ತಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವುದನ್ನು ಕಾಣಬಹುದು. ಪ್ರಾಣಿಗಳನ್ನು ಮತ್ತು ಸಸ್ಯಗಳನ್ನು ಕುರಿತಾದಂತೆ ನಿರ್ಧಿಷ್ಟವಾದ ಸಂದರ್ಭದಲ್ಲಿ ವಿಶೇಷ

ಆಚರಣೆ ಕೈಗೊಳ್ಳುವ ಗ್ರಾಮೀಣರು ಅವುಗಳಲ್ಲಿ ಚೇತನವನ್ನು ಕಾಣುತ್ತಾರೆ. ಸುತ್ತಲಿನ ಪರಿಸರದ ಬಗ್ಗೆ ಅವರ ಪ್ರೀತಿ ಮತ್ತು ಭಕ್ತಿ ಜನಪದ ಸಂಸ್ಕೃತಿಗೆ ಅಹಿಂಸಾತ್ಮಕ ರೂಪವನ್ನು ದೊರಕಿಸಿ ಕೊಡುತ್ತದೆ. ಈ ಪ್ರಾಣಿ ಪ್ರೇಮ ಮತ್ತು ಪ್ರಕೃತಿ ಧಾರ್ಮಿಕ ಭಾವನೆಯಿಂದ ಜಾಗೃತವಾದದ್ದು.

ನಮ್ಮ ಜನಪದರ ದೈನಂದಿನ ಬದುಕಿಗೆ ನೆರವಾಗುವ ಮಳೆ,ಬೆಳೆ,ಪ್ರಾಣಿ, ಸಮೃದ್ಧಿ ಇತ್ಯಾದಿಗಳ ಸುತ್ತಲೂ, ಹರಡಿರುವ ಹಬ್ಬಗಳು ಅದರ ಸುತ್ತಲೂ ಆಚರಿಸುವ ಆಚರಣೆಗಳು ಸಂಪ್ರದಾಯಗಳು ನಂಬಿಕೆಗಳು ಜನಪದ ಸಂಸ್ಕೃತಿಯ ಅಂಗಗಳಾಗಿವೆ. ನಮ್ಮ ಜನಪದರು ದೈವಗಳಲ್ಲಿ ಅಚಲವಾದ ಶ್ರದ್ಧಾ ಭಕ್ತಿಯುಳ್ಳವರು ದೇವರನ್ನು ನೆನೆಯದೆ ಯಾವ ಕೆಲಸವನ್ನು ಮಾಡುವುದಿಲ್ಲ. ನಿಸರ್ಗದಲ್ಲಿರುವ ನೆಲ, ಮುಗಿಲು, ಮಳೆ, ಮರ, ಗುಡ್ಡ ಬೆಟ್ಟ, ಕಲ್ಲು, ಗಿಡ ಎಲ್ಲವೂ ಅವರ ಪಾಲಿಗೇ ದೇವರೆ ಋತುಮಾನಕ್ಕನುಗುಣವಾಗಿ ಹಬ್ಬನ್ನು ಆಚರಿಸುತ್ತಾ ಬಂದಿದ್ದಾರೆ. ಹಾಗೂ ತಮ್ಮ ಸುಖ ಸಂತೋಷವನ್ನು ವ್ಯಕ್ತ ಪಡಿಸುತ್ತಾ ಬಂದಿದ್ದಾರೆ. ಇವು ಅವರ ಸಂಸ್ಕೃತಿಯ ಮನರಂಜನೆಯ ಸಾಧನಗಳು ಇಂತಹ ಹಬ್ಬ ಹರಿದಿನಗಳಿಂದಲೆ ಜನಪದ ಸಂಸ್ಕೃತಿಯು ಮಹೋನ್ನತಿ ಸಾಧಿಸಿದೆ ಎಂದು ಹೇಳಬಹುದು. ಸಂಸ್ಕೃತಿಯ ಮೂಲರೂಪದಲ್ಲಿ ಅಡಕವಾಗಿರುವ ನಂಬಿಕೆಗಳನ್ನು ವಿಧಿವತ್ತಾಗಿ ಆಚರಿಸುವ ಪ್ರತಿಯೊಂದು ಹಬ್ಬಗಳು ಆಯಾ ಜನಾಂಗದ ಸಂಸ್ಕೃತಿಯ ರೂಪರೇಖೆಗಳನ್ನು ಪ್ರದರ್ಶಿಸುತ್ತವೆ. ನೆರೆ–ಹೊರೆ ಬಂಧು–ಬಳಗವನ್ನೆಲ್ಲಾ ಸೇರಿ ಅಚರಿಸುವುದರಿಂದ ಸಾಮಾಜಿಕ ಐಕ್ಯತೆ ಮತ್ತು ಬಾಂಧವ್ಯದ ಬೆಸುಗೆಯನ್ನು ಭದ್ರಪಡಿಸುವ ಸಾಮರಸ್ಯ ಬೆಳೆಸುವ ಮಾರ್ಗವಾಗಿದೆ. ಮಾನವನು ದೇವರಲ್ಲಿದ್ದ ಭಯ, ಭಕ್ತಿ, ನಂಬಿಕೆ, ಶ್ರದ್ಧೆ, ಧರ್ಮ, ಕರ್ಮ, ಸ್ವರ್ಗ ನರಕ ಮುಂತಾದ ಧಾರ್ಮಿಕ ಮೌಲ್ಯಗಳೇ ಜನಪದ ಸಂಸ್ಕೃತಿಯ ಮೈಲಿಗಲ್ಲು ಇವು ಜೀವನದ ಪ್ರತಿ ಹಂತದಲ್ಲಿಯೂ ಮಹತ್ತರವಾದ ಪರಿಣಾಮವನ್ನುಂಟು ಮಾಡಿವೆ. ಜನಪದರು ಕರ್ಮ ಜೀವಿಗಳು, ಹೊತ್ತು ಹುಟ್ಟಿದಾಗಿನಿಂದ ಹಿಡಿದು ಮುಳುಗುವವರೆಗೆ ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದುಡಿಯುವುದೇ ಮುಖ್ಯ ಗುರಿ. ಹಗಳಿರುಳು ದುಡಿದ ಜೀವಕ್ಕೆ ತೃಪ್ತಿ ತಂದುಕೊಳ್ಳಲು ಮನರಂಜನೆಯನ್ನು ಪಡೆಯಲು ಸಹಬಾಳ್ವೆಯನ್ನು ನಡೆಸಲು ಹಬ್ಬಗಳನ್ನು ಸೃಷ್ಟಿಸಿ ಕೊಂಡಿದ್ದಾರೆ. ವೈಯಕ್ತಿಕವಾಗಿ ಆಚರಿಸುವ ಹಬ್ಬಗಳು ಅವರವರ ಜಾತಿ ಮತ ಪರಂಪರೆಗಳಿಗನುಗುಣವಾಗಿ ನಿರ್ಧಿಷ್ಟವಾದ ದಿನಗಳಲ್ಲಿ ಇಷ್ಟ ಬಂದಾಗ ಆಚರಿಸಲ್ಪಡುವ ಸೀಮಿತ ವಲಯವನ್ನೊಳಗೊಂಡಿರುತ್ತದೆ. ಊರಿಗೆ ಊರೇ ಸೇರಿಕೊಂಡು ಜಾತಿಮತ, ಕುಲಗೋತ್ರ, ಬಡವರು, ಶ್ರೀಮಂತರು, ಗಂಡಸರು, ಹೆಂಗಸರು ಎಲ್ಲರೂ ಸೇರಿ ಆಚರಿಸುವ ಹಬ್ಬ ಇದು ಸಮೂಹ ಹಿತವನ್ನೂ ಕ್ಷೇಮವನ್ನೂ ಒಳಗೊಂಡಿರುತ್ತದೆ. ಸಂಕ್ರಾಂತಿ ಹಬ್ಬವನ್ನು ಸಾಧಾರಣವಾಗಿ ಅವರವರ ಮನೆಯಲ್ಲಿ ಮತ್ತು ಸಾಮೂಹಿಕವಾಗಿ ನಡೆಸುವಂಥದ್ದು.

ಹಾಗೆಯೇ ಜಾತ್ರೆಗಳು ಕೂಡ ಧಾರ್ಮಿಕ ಉದ್ದೇಶಗಳಿಗಾಗಿ ಕಲೆತ ಜನರನ್ನು ಸೂಚಿಸುತ್ತದೆ. ಜಾತ್ರೆಯನ್ನು ಪರಿಷೆ ಎಂದು ಕೂಡ ಕರೆಯುತ್ತಾರೆ. ಸಾಮಾನ್ಯವಾಗಿ ಸುಗ್ಗಿಯ ದಿನಗಳು ಕಳೆದ ಮೇಲೆ ತಮ್ಮ ಮನೆ ದೇವರ ಜಾತ್ರೆಗೆ ಹೊರಡಲು ಅಣಿಯಾಗುತ್ತಾರೆ. ದೇವರ ಕ್ಷೇತ್ರ ದೂರವೂ ಇರಬಹುದು. ಹತ್ತಿರವೂ ಇರಬಹುದು ತನ್ನ ಕುಟುಂಬದ ಸದಸ್ಯರೊಡನೆ ಗಾಡಿಯನ್ನು ಕಟ್ಟಿಕೊಂಡು ಕ್ಷೇತ್ರದತ್ತ ಸಾಗುತ್ತಾರೆ. ದಾರಿಯುದ್ದಕ್ಕೂ ದೇವರ ಮಹಿಮೆಗಳನ್ನು ಹಾಡುತ್ತಾ ಮುಂದೆ ಸಾಗುತ್ತಾರೆ. ಪ್ರತಿ ಊರಿನಲ್ಲಿಯೂ ಇವರಿಗೆ ಭವ್ಯವಾದ ಸ್ವಾಗತ ಸಿಗುತ್ತದೆ. ಭಕ್ತರ ಮನೆಯ ಭಿನ್ನವನ್ನು ಸ್ವೀಕರಿಸಿ ತಂದ ಪ್ರಸಾದವನ್ನು ಅವರಿಗೆ ನೀಡಿ, ಇವರು ಊರಿಗೆ ಹಿಂತಿರುಗುತ್ತಾರೆ. ಎಲ್ಲಾ ಜಾತ್ರೆಗಳಿಗೂ ಹೀಗೆ ತಂಡೋಪತಂಡವಾಗಿ ಜನಪದರು ಬರುತ್ತಾರೆ. ಜಾತ್ರೆಗಳಿಗೆ ದೂರದೂರದ ಪ್ರದೇಶಗಳಿಂದ ಎಲ್ಲಾ ಬಗೆಯ ವೃತ್ತಿಗಾಯಕರು, ವೃತ್ತಿಕಾರರು ಹೆಳವರು, ದೊಂಬಿದಾಸರು, ಕಂಸಾಳೆಯವರು, ನೀಲಗಾರರು ಹೀಗೆ ಅನೇಕ ಪ್ರದರ್ಶನಾತ್ಮಕ ಕಲೆಗಾರರು ತಮ್ಮ ಡೊಳ್ಳು ಕುಣಿತ, ವೀರಗಾಸೆ ತಮ್ಮ ಮೇಳದೊಂದಿಗೆ ಕಾಣಿಸಿಕೊಳ್ಳುತ್ತಾರೆ. ಇಂದೂ ಕೂಡ ಜಾತ್ರೆಗಳಲ್ಲಿ ಜನಪದ ಕಲೆಗಳ ವೈಶಿಷ್ಟತೆಯನ್ನು ಕಾಣಬಹುದಾಗಿದೆ. ಪ್ರತಿ ಜನಪದ ಕಲೆ ಆಯಾ ಜನಾಂಗದ ಆಚಾರ, ಪದ್ಧತಿ, ಅಥವಾ ಸಂಪ್ರದಾಯದ ಅಭಿವ್ಯಕ್ತಿ ಮಾಧ್ಯಮ. ಇಂಥ ಪ್ರತಿ ಕಲೆಯನ್ನು ಉಳಿಸಬೇಕಾದಲ್ಲಿ ಅವುಗಳ ನಿಷ್ಪನ್ನಗೊಂಡ ಸಂಪ್ರದಾಯ ಉತ್ಪತ್ತಿ ಕೇಂದ್ರಗಳಾದ ಜನಪದಗಳನ್ನು ಉಳಿಸಿಕೊಳ್ಳಬೇಕು.

ಯಾವುದೇ ಒಂದು ನಿಗದಿಯಾದ ದಿನದಂದು ಜಾತ್ರೆ ನಡೆಯುತ್ತದೆ. ಜನರೆಲ್ಲಾ ಸೇರಿ ದೇವರನ್ನು ಆರಾಧಿಸುತ್ತಾರೆ. ಜಾತ್ರೆಯ ದಿನವನ್ನು ಊರ ಜನರೇ ಪಂಚಾಯ್ತಿ ಕಟ್ಟೆಯಲ್ಲಿ ಕುಳಿತು ಹಿರಿಯರ ಸಮ್ಮುಖದಲ್ಲೇ ದಿನವನ್ನು ನಿರ್ಧರಿಸುತ್ತಾರೆ. ಇಂದು ಕೂಡ ಹಬ್ಬ ಜಾತ್ರೆಗಳನ್ನು ಕಾಣಬಹುದು. ತಲೆಮಾರಿನಿಂದ ತಲೆಮಾರಿಗೆ ಪರಂಪರಾಗತವಾಗಿ ಹರಿದು ಬಂದಿರುವುದು ಅವುಗಳಲ್ಲಿರುವ ಸತ್ವಕ್ಕೆ ಸಾಕ್ಷಿಯಾಗಿದೆ. ಕೃಷಿ ಜೀವನ ಸಾಗಿಸುವ ಜನರಿಗೆ ಆಸರಿಕೆ ಬೇಸರಿಕೆ ನೀಗಲು ನೆಮ್ಮದಿ ಪಡೆಯಲು ಬಂಧು ಬಾಂಧವರೊಂದಿಗೆ ಹಂಚುಣ್ಣಲು ಇಂತಹ ಜಾತ್ರೆಗಳು ಅವಶ್ಯಕ. ಬಗೆಬಗೆಯ ಹಾಡು ಕುಣಿತ ದೇವತೆಗಳ ಮುಖವಾಡಗಳು ಮನಸ್ಸಿಗೆ ಮುದಕೊಡುತ್ತವೆ. ಜಾತ್ರೆಗಳಿಗೆ ಬಂದ ಜನಪದರು ಮನೆಗೆ ಮರಳುವಾಗ ದೈವಕೃಪೆಗೆ ಪಾತ್ರವಾದ ಸಾರ್ಥಕ ಭಾವವನ್ನು ಹೊಂದುತ್ತಾರೆ.

ಜಾತ್ರೆಯ ಸಂದರ್ಭದಲ್ಲಿ ದೇವರಿಗೆ ಬಳಸುವ ವಸ್ತುಗಳೂ ಕೂಡ ಪ್ರಾದೇಶಿಕವಾಗಿ ಲಭ್ಯವಾಗುವಂತಹವುಗಳೇ ಆಹಾರ ಧಾನ್ಯಗಳು, ಹಣ,ಹಣ್ಣು,ಎಲೆ, ಮರಮಟ್ಟುಗಳು ಜನಪದ ವಾದ್ಯ ವಿಶೇಷಗಳು ಕರಕುಶಲ ವಸ್ತುಗಳು ಹೀಗೆ ಎಲ್ಲವನ್ನೂ ಕೂಡ ಜನಪದರು ಕಲಾತ್ಮಕವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಕಾಲಾನಂತರ ನಾಗರೀಕತೆ ಬೆಳೆದಂತೆ ದೇವರ ಜಾತ್ರೆಗೆ ಬಂದವರು ತಮ್ಮ ಕುಟುಂಬಕ್ಕೆ ಬೇಕಾದಂತಹ

ಅತ್ಯವಶ್ಯಕ ಸಾಮಾಗ್ರಿಗಳನ್ನು ಕೊಂಡೊಯ್ಯುಲು ಆರಂಭಿಸಿದರು. ಜಾತ್ರೆಗಳಲ್ಲೂ ಕೂಡ ಅಲ್ಪಸ್ವಲ್ಪ ಬದಲಾವಣೆ ಕಾಣುತ್ತಾ ಬಂದವು. ಪ್ರದರ್ಶನಾತ್ಮಕ ಕಲೆಗಳು ಕೂಡ ಏಕತಾನತೆಗಿಂತ ವೈವಿದ್ಯಮಯವಾಗಿ ಕುಣಿಯುವುದನ್ನು ಮಾರ್ಪಾಡು ಮಾಡಿಕೊಂಡ ಕಾಲಮಿತಿಗನುಗುಣವಾಗಿ ಕಲಾವಿದರು ಕುಣಿಯುವುದನ್ನು ಕಲಿತರು.

ಅಡಿ ಟಿಪ್ಪಣಿ

೧. ಹಾ.ಮಾ.ನಾಯಕ., ಜಾನಪದ ಸಮಾರೋಪ, ಪು.ಸಂ-೪೦

೨. ಪರಮಶಿವಯ್ಯ.ಜೀ.ಶಂ., ಜನಪದ ಕಲಾವಿಹಾರ, ಪು.ಸಂ-೬

೩. ದೇ.ಜ.ಗೌ., ಜಾನಪದ ವಾಹಿನಿ, ಪು.ಸಂ-೪೮

೪. ಪರಮಶಿವಯ್ಯ.ಜೀ.ಶಂ., ವೈಜ್ಞಾನಿಕ ಕನ್ನಡ, ಪು.ಸಂ-೬೬

೫. ಬೋರಲಿಂಗಯ್ಯ.ಹಿ.ಚಿ., ಕರ್ನಾಟಕದ ಜನಪದ ಕಲೆಗಳ ಕೋಶ,

೬. ತಿಪ್ಪೇಸ್ವಾಮಿ.ಎನ್.ಡಿ., ಕಲಾಧೀಮಂತ, ಪು.ಸಂ-೫೨

೭. ಚಕ್ಕರೆ ಶಿವಶಂಕರ್, ಜನಪದ ಕಲಾಪ್ರಪಂಚ, ಪು.ಸಂ-೪೦

ಅಧ್ಯಾಯ ನಾಲ್ಕು

ದೃಶ್ಯಮಾಧ್ಯಮ ಮತ್ತು ಆಧುನಿಕತೆಯ ನೆಲೆಗಳು

೪.೧ ದೃಶ್ಯ ಮಾಧ್ಯಮ ಮತ್ತು ಜಾಗತೀಕರಣ

ಆದಿ ಮಾನವನಿಂದ ಆರಂಭಗೊಂಡ ಕಲೆಗಳು ಆಧುನಿಕ ಮಾನವನವರೆಗೂ ಅನೇಕ ರೂಪಗಳನ್ನು ಪಡೆದುಕೊಂಡಿದೆ. ಸಾಧಾರಣವಾಗಿ ಕಲೆಗಳೆಲ್ಲವೂ ಕೂಡ ದೇಶ, ಪ್ರಾಂತ್ಯ, ಕಾಲಘಟ್ಟಗಳಲ್ಲಿ ಅನೇಕ ಹೊಸ ಪ್ರಯೋಗಗಳನ್ನು ಮಾಡಿಕೊಂಡಿತು. ಸಮಕಾಲೀನ ಮತ್ತು ಜಾಗತಿಕ ಕಲೆಗಳ ಪ್ರಯೋಗಶೀಲ, ಸೃಜನಶೀಲ, ಸಂವಹನಶೀಲ ಮತ್ತು ಸಂವೇದನಾಶೀಲವಾಗಿ ತನ್ನ ಅಸ್ತಿತ್ವವನ್ನು ಅಥವಾ ಜೀವಂತಿಕೆಯುನ್ನು ಅನಾವರಣಗೊಳಿಸುತ್ತಿದೆ. ಇದಕ್ಕೆ ಕಾರಣ ಜಾಗತೀಕರಣ ಮತ್ತು ಸ್ಪರ್ಧಾತ್ಮಕ ಅಥವಾ ಪ್ರಯೋಗಶೀಲ ಮನೋಭಾವನೆಯೂ ಇಂದಿನ ದೃಶ್ಯಕಲೆಗೆ ಹೊಸ ಮಾಧ್ಯಮದ ಮೂಲಕ ಹೊಸ ಸಾಧ್ಯತೆ ಕಂಡುಕೊಳ್ಳಲು ಪ್ರೇರೇಪಿಸುತ್ತಿವೆ.

ಜನಪದ ಕಲೆಯ ಪ್ರದರ್ಶನಗಳು ಆತ್ಮಾನಂದದ ಜೊತೆಗೆ ನೇತ್ರಾನಂದ ಮತ್ತು ಕರ್ಣಾನಂದ ಇವುಗಳನ್ನು ಒಳಗೊಂಡಿರುತ್ತವೆ. ಯಾವುದನ್ನು ಕಣ್ಣಿನಿಂದ ನೋಡುತ್ತವೆಯೇ ಯಾವುದನ್ನು ಕಿವಿಯಿಂದ ಅದು ದೃಶ್ಯ ಮತ್ತು ಶ್ರವ್ಯ ಕಾವ್ಯವೆನಿಸಿಕೊಳ್ಳುತ್ತದೆ. ಕಲಾ ಅಭಿವ್ಯಕ್ತಿಯು ಈ ದೃಶ್ಯ ಮಾಧ್ಯಮದ ಸಂಯೋಗದಿಂದ ಸವಿಯಲ್ಪಡುತ್ತದೆ. ಪ್ರತ್ಯಕ್ಷ ದರ್ಶನ, ಪರೋಕ್ಷ ದರ್ಶನ ಪ್ರಧಾನ ದೃಶ್ಯಮಾಧ್ಯಮ. ನೇರವಾಗಿ ರಂಗಮಂಚದಲ್ಲಿ ಅಭಿನಯಿಸುವ ಅಭಿನಯವನ್ನು ಸಾಕ್ಷಾತ್ ಕಂಡಾಗ ಅದು ಪ್ರತ್ಯಕ್ಷವೆನಿಸಿಕೊಳ್ಳುತ್ತದೆ. ಅಲ್ಲಿ ಕಲಾವಿದನಿಗೂ, ನಡೆಯುವ ಸನ್ನಿವೇಶಕ್ಕೂ ಅಭಿನಯಕ್ಕೂ ಪ್ರೇಕ್ಷಕನಿಗೂ ವಿಷಯ

ಸಂಬಂಧ ಪ್ರತ್ಯಕ್ಷವಾಗಿರುತ್ತದೆ. ಪರಿಹಾರವೂ ಅಷ್ಟೇ ಸಮಯ ನಿಷ್ಠವಾಗಿರುತ್ತದೆ. ಇದನ್ನೇ ನಾವು ಪರೋಕ್ಷವಾಗಿ ಚಿತ್ರೀಕರಣದ ಮೂಲಕ ಅಥವಾ ಧ್ವನಿಮುದ್ರಿಕೆಯ ಮೂಲಕ ಅಥವಾ ನೆರಳಿನಾಟದ ಹಾಗೂ ಗೊಂಬೆಯಾಟಗಳ ಮೂಲಕ ಪರೋಕ್ಷ ಕಲಾ ಆಸ್ವಾದನೆಯನ್ನು ಮಾಡುತ್ತವೆ. ಇಲ್ಲಿ ರಸಸ್ವಾದನೆ ನ್ಯೂನವೆನಿಸುತ್ತದೆ.

ಈ ಎಲ್ಲಾ ಮಾಧ್ಯಮಗಳ ಮೂಲಕ ಜನಪದ ಕಲಾಲೋಕವು ವೃದ್ಧಿಸಿದರು ಪ್ರಯೋಜನದಲ್ಲಿ ಗೆಲ್ಲುತ್ತದೆ. ಪರಿಣಾಮದಲ್ಲಿ ಸೋಲುತ್ತದೆ. ಪರಿಣಾಮ ಎಂದರೆ ಸಾಕ್ಷಾತ್ ಕಲಾರಸಸ್ವಾದನೆ ಎಂದರ್ಥ. ಜನಪದರ ದೈನಂದಿಕ ಜೀವನದಲ್ಲಿ ಜನಪದ ಕಲೆಗಳೂ ಉಸಿರಿನಂತೆ ಬದುಕಿನಲ್ಲಿ ಸೇರಿಕೊಂಡಿದೆ. ಅದು ಎಷ್ಟು ಗಾಢವಾದ ಪರಿಣಾಮವನ್ನು ಬೀರಿದೆ ಎಂದರೆ ಒಂದು ನಾಣ್ಯದ ಎರಡು ಮುಖಗಳಂತೆ ಉಸಿರೆ ಕಲೆ, ಕಲೆಯೇ ಉಸಿರು ಎನ್ನುವಷ್ಟು ತೀವ್ರವಾಗಿ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಈ ಜಾನಪದ ಕಲೆಗಳ ಅಂತಃಸತ್ವವೇ ಹಾಗೆ. ಒಂದು ಕಲೆಯ ಅವಿನಾಭಾವ ಸಂಬಂಧ ಮತ್ತು ಅದರ ಸಾಕಾರ ಎಷ್ಟು ಪರಿಣಾಮಕಾರಿಯಾಗಿರುತ್ತದೆ ಎಂದರೆ ಕಲಾವಿದನಾದವನು ತನ್ನ ಜೀವನದ ಗಳಿಕೆಯ ಕ್ಷಣವನ್ನು ಲೆಕ್ಕಿಸದೇ ಕಲೆಯನ್ನು ಆರಾಧಿಸುತ್ತಾನೆ. ಈ ರೀತಿಯ ತೀವ್ರತರವಾದ ಆಸಕ್ತಿ ಮತ್ತು ರೀತಿಯ ಕಲೆಯ ಬೆಳವಣಿಗೆ ಮತ್ತು ಪ್ರಸಾರಕ್ಕೆ ಪ್ರಧಾನ ಕಾರಣ. ಈ ಕಾರಣದಿಂದಾಗಿಯೇ ಜನಪದ ಕಲೆಗಳು ಇವತ್ತಿಗೂ ತನ್ನ ಸತ್ವ ತತ್ವವನ್ನು ಕಾಯ್ದುಕೊಂಡಿದೆ. ಮತ್ತು ಜಾನಪದ ಕಲಾಕ್ಷೇತ್ರಕ್ಕೆ ತನ್ನ ಅನನ್ಯ ಕೊಡುಗೆಯನ್ನು ನೀಡಿದೆ.

ಎಲ್ಲೆಲ್ಲಿ ಮಾನವನ ಬದುಕು ನಡೆಯಿತೊ ಅಲ್ಲೆಲ್ಲಾ ಗುಹಾಂತರ ಚಿತ್ರಗಳು ಅವನಿಂದ ರೂಪುಗೊಂಡವು. ಸಾಮಾನ್ಯವಾಗಿ ಗುಹೆಯಲ್ಲಿರುವ ಚಿತ್ರಗಳು ಬೇಟೆಗಾರ ಮತ್ತು ಬೇಟೆಯಲ್ಲಿರುವ ಚಿತ್ರಗಳೇ ಆಗಿವೆ. ಆಗ ಅದೊಂದು ಸಿಮೀತವಾದ ಅವನ ಬಯಕೆಯನ್ನು ಪ್ರತಿನಿಧಿಸಿದೆ. ನಂತರದಲ್ಲಿ ಮಾನವನು ಹೆಚ್ಚು ಹೆಚ್ಚು ನಾಗರೀಕನಾದಂತೆ, ಚಿಂತನಶೀಲನಾದಂತೆ ಹಲವು ಹತ್ತು ರೀತಿಯ ದೃಶ್ಯ ಮಾಧ್ಯಮವನ್ನು ಬಳಸಿಕೊಳ್ಳುವತ್ತ ಸಾಗಿದೆ. ಬಂಡೆ, ಗೋಡೆ, ಬಳಪ, ಬಣ್ಣದ ಕಲ್ಲು, ಮಣ್ಣು, ಮರ, ಲೋಹ, ಇದ್ದಿಲು, ನೈಸರ್ಗಿಕ ಮತ್ತು ರಾಸಾಯನಿಕ ಪದಾರ್ಥದಿಂದ ತಯಾರಿಸಿದ ಬಣ್ಣಗಳನ್ನು ವಿವಿಧ ಮಾಧ್ಯಮಗಳ ಮೇಲೆ ರಚಿಸುವಲ್ಲಿ ಅವನು ಯಶಸ್ವಿಯಾದ ನಂತರ ಬಂದ ಆಧುನಿಕ ಮಾನವನ ಪರಿಕರಗಳೆಂದರೆ ಕಾಗದ, ಕ್ಯಾನ್ವಾಸ್, ಕ್ಯಾನ್ವಾಸ್ ಬೋರ್ಡ್ ಇತ್ಯಾದಿ ಮಾಧ್ಯಮಗಳು ಇವು ಆಯಾ ಕಾಲಘಟ್ಟದಲ್ಲಿ ಹೊಸ(ನವ) ಮಾಧ್ಯಮವೆಂದು ಕರೆಸಿಕೊಂಡವು ಮತ್ತು ಕಲಾವಿದರು ಈ ಮಾಧ್ಯಮಗಳನ್ನು ಚೆನ್ನಾಗಿಯೇ ಬಳಸಿಕೊಂಡಿದ್ದಾರೆಂಬುದನ್ನು ಇತಿಹಾಸ ಮತ್ತು ಸಂಶೋಧನ ಅಧ್ಯಯನಗಳಿಂದ ತಿಳಿದುಬರುತ್ತದೆ.

ಇಂದು ದೃಶ್ಯ ಕಲೆಯ ಎಲ್ಲಾ ವಿಭಾಗಗಳಲ್ಲೂ ಕಲಾವಿದರು ಶಿಷ್ಟ ವಿಧಾನವನ್ನು ನವ-ನವೀನ ಮಾರ್ಗವನ್ನು, ಪದ್ಧತಿ ಪ್ರಯೋಗವನ್ನು ಅನುಸರಿಸುತ್ತಿದ್ದಾರೆ. ಇಂದಿನ ಕಲಾಸಕ್ತರು ಕಲಾವಿಮರ್ಶಕರು ಕೂಡ ಇಂತಹ ಪ್ರಯೋಗವನ್ನು ಇಷ್ಟಪಡುತ್ತಿದ್ದಾರೆ. ಏಕೆಂದರೆ ಮಾನವನ ಚಿಂತನೆ ಅವನದಲ್ಲ ಅದು ಅವನ ಯಾವ ಸಾಮಾಜಿಕ ವರ್ಗದ ಭಾಗವಾಗಿರುವನೋ ಅದರ ಪ್ರತಿಫಲ ಮತ್ತು ಯಾವ ಕಾಲದಲ್ಲಿ ಜೀವಿಸುತ್ತಿದ್ದಾನೆ. ಅದರ ಪ್ರತಿಬಿಂಬ ಇಂದು ಮಾನವ ಎಲ್ಲವನ್ನು ಹೊಸ ಮಾಧ್ಯಮದ ಸಾಧ್ಯತೆಯ ನೆಲೆಯಲ್ಲಿ ನೋಡಬೇಕಾಗಿದೆ.

ಜಾಗತೀಕರಣದ ಹಿನ್ನಲೆಯಲ್ಲಿ ದೃಶ್ಯ ಮಾಧ್ಯಮವು ನೋಡುಗನ ಮೇಲೆ ಎಂತಹ ಪರಿಣಾಮಬೀರಬಲ್ಲದು ಎಂಬುದಕ್ಕೆ ೬೦ರ ದಶಕದಲ್ಲಿ ಕೆ.ಕೆ.ಹೆಬ್ಬಾರರು ನೀಡಿರುವ ಈ ಹೇಳಿಕೆ ಅರ್ಥಪೂರ್ಣವಾಗಿವೆ. "ಇಂದಿನ ನಂಬಿಕೆಯ ಪ್ರಕಾರ ಒಂದು ಚಿತ್ರವು ಹಜಾರದ ಗೋಡೆಯ ಮೇಲೆ ತೂಗಾಡುವ ಅಲಂಕರಣ ಸಾಮಗ್ರಿಯಲ್ಲ ಅದು ಕಥೆ ಹೇಳಬೇಕಾಗಿಲ್ಲ. ಭಾವನೆಗಳನ್ನು ತಟ್ಟುವುದು, ಉದ್ವೇಗಗಳನ್ನು ತಣಿಸುವುದು ಹಾಗೂ ಮನುಷ್ಯನನ್ನು ಉತ್ತರಿಸುವುದು ಇಂದಿನ ಕಲೆಯ ಉದ್ದೇಶ"[೧] ಈ ಹೇಳಿಕೆಯಲ್ಲಿ ಹೊಸ ಸಂವೇದನೆಯೊಂದರ ಸೂಚನೆಗಳನ್ನು ಗುರುತಿಸಬಹುದು. ಆ ಸಂವೇದನೆಯ ಅಭಿವ್ಯಕ್ತಿಗೆ ಹೊಸ ಮಾಧ್ಯಮಗಳ ಪ್ರಯೋಗದ ಕಡೆ ಕಲಾವಿದ ಪ್ರಯತ್ನಿಸುತ್ತಿರುವುದು ಇಲ್ಲಿ ಗಮನಿಸಬೇಕಾದ ವಿಚಾರವಾಗಿದೆ. ಜನಾಂಗದ ಜನಾಂಗಕ್ಕೆ ಸಂವೇದನೆಗಳು ಬದಲಾಗುತ್ತವೆ. ಪಾಶ್ಚಿಮಾತ್ಯ ದೃಶ್ಯ ಕಲೆಯ ಪದ್ಧತಿ, ಪರಂಪರೆ, ಪ್ರಯೋಗ ನಮ್ಮ ಯುವಕರಿಗೆ ಪರಿಚಯವಾಗುತ್ತಿವೆ. ಹಿಂದಿನ ತಲೆಮಾರಿನಲ್ಲಿ ಕಂಡುಬರದ ಕ್ರಿಯೆ-ಪ್ರತಿಕ್ರಿಯೆ ಈಗಿನ ಜಾಗತೀಕರಣದಿಂದ ಜನಪದ ಕಲಾವಿದರಲ್ಲಿ ಕಾಣಬಹುದು. ದೃಢವಾಗಿ ತುಂಬಿಕೊಂಡಿರುವ ಸಿದ್ಧಾಂತ, ಪಂಥ, ಮತ, ನಂಬಿಕೆ, ನಡವಳಿಕೆಗಳನ್ನು ದೃಶ್ಯಕಲೆಯ ಮಾಧ್ಯಮದ ಮೂಲಕ ತಾತ್ವಿಕ ಮತ್ತು ತಾಂತ್ರಿಕ ಬದಲಾವಣೆ ಹಿನ್ನಲೆಯಲ್ಲಿ ಕಲಾವಿದರು ಹೊಸಬಗೆಯನ್ನು ಪ್ರಶ್ನಿಸುವ ಧೈರ್ಯವನ್ನು ಮಾಡುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣ ಎಂಬ ಭೂತ ನಮ್ಮೆಲ್ಲರನ್ನೂ ಕಾಡುತ್ತಿದೆ. ಜಗತ್ತಿನ ಪ್ರಬಲ ರಾಷ್ಟ್ರಗಳ ಉದ್ಯಮ, ಉತ್ಪಾದನೆ, ಆಲೋಚನೆ, ರಾಜಕೀಯ ವ್ಯವಸ್ಥೆ, ಕಲೆ, ರಂಗಭೂಮಿ, ಸಾಹಿತ್ಯ, ಸಂಸ್ಕೃತಿ, ಬದುಕಿನ ವಿಧಾನ ಇವೆಲ್ಲ ಸಣ್ಣ-ಪುಟ್ಟ ದೇಶಗಳ ಮೇಲೆ ಪ್ರಭಾವ ಬೀರಿ ಸಣ್ಣ-ಪುಟ್ಟ ದೇಶಗಳ ಅಸ್ತಿತ್ವವೆಲ್ಲ ನಶಿಸಿಹೋಗುತ್ತಿವೆ ಎಂಬ ಭಯ ಭೂತವಾಗಿ ನಮ್ಮನ್ನು ಮೆಟ್ಟಿಕೊಂಡಿವೆ. ಇದರಿಂದಾಗಿ ಸ್ಥಳೀಯ ಜೀವನ ವಿಧಾನಗಳೆಲ್ಲ ಬೆಲೆ ಕಳೆದುಕೊಳ್ಳುತ್ತಿವೆ ಎನ್ನಿಸಿಬಿಟ್ಟಿವೆ. ಜಗತ್ತಿನ ಯಜಮಾನ ರಾಷ್ಟ್ರಗಳ ಯಜಮಾನಿಕೆ ಸಿಕ್ಕಿ ನಾವು ಅವುಗಳ ಗುಲಾಮರಾಗುತ್ತಿದ್ದೇವೆ ಎಂದು ಕೊಳ್ಳುತ್ತಿದ್ದೇವೆ. ಈ ಮನಸ್ಥಿತಿಯಿಂದಾಗಿ ಒಟ್ಟಾರೆಯಾಗಿ ಎರಡು ಅಲೆಗಳು ಕಂಡು ಬರುತ್ತಿವೆ. ಜಾಗತೀಕರಣ

ತುಂಬ ಅಪಾಯದ್ದು ಅದನ್ನು ಸಾರಾಸಗಟಾಗಿ ವಿರೋಧಿಸಿ ನಿರಾಕರಿಸಬೇಕೆನ್ನುವ ಧೋರಣೆ ಒಂದು ಕಡೆಗೆ, ಜಾಗತೀಕರಣ ಅನಿವಾರ್ಯ, ಶ್ರೇಷ್ಠವಾದುದನ್ನು ಬರಮಾಡಿಕೊಳ್ಳುವ ಅದೊಂದು ಸದಾವಕಾಶ, ಆದ್ದರಿಂದ ಅದನ್ನು ಗೌರವದಿಂದ ಬರಮಾಡಿಕೊಂಡು ಅಂಗೀಕರಿಸಬೇಕೆಂಬುದು ಇನ್ನೊಂದು ಮನೋಧರ್ಮ, ಎರಡೂ ಅತಿಯಾದು ದೆಂಬುದನ್ನು ಮರೆಯುವಂತಿಲ್ಲ.

ಹಾಗೆ ನೋಡಿದರೆ ಜಗತ್ತಿನ ಸರ್ವಶ್ರೇಷ್ಠವಾದುದಕ್ಕೆ ಮಾರುಹೋಗಿ ಅದನ್ನು ಸ್ವೀಕರಿಸುವುದು ಇಂದು ನಿನ್ನೆಯ ಕಾರ್ಯವಲ್ಲ. ಅಂಥ ಶ್ರೇಷ್ಠವಾದುದೆಂಬ ಭ್ರಮೆಗೆ ಒಳಗಾಗಿ ನಮ್ಮ ತನವನ್ನು ಕಳೆದುಕೊಂಡ ಉದಾಹರಣೆಗಳೂ ಇವೆ. ಅಂಥವನ್ನು ನೋಡಿ ನಮ್ಮದಾದದ್ದನ್ನು ಸುಧಾರಿಸಿಕೊಂಡ ಉದಾಹರಣೆಗಳೂ ಇವೆ. ಅಸ್ತಿತ್ವನಾಶವಾದುದೂ ಇದೆ. ಅಸ್ತಿತ್ವ ಬಲಶಾಲಿಯಾದ ಉದಾಹರಣೆಯೂ ಇದೆ. ಆದ್ದರಿಂದ ಜಾಗತೀಕರಣ ಎನ್ನುವುದನ್ನು ಪೂರ್ತಿ ಅಪಾಯಕಾರಿಯೆಂದು ನಿರಾಕರಿಸುವುದೂ ವಿಹಿತ ಅಲ್ಲ, ಅದೇ ಶ್ರೇಷ್ಠ ಎಂದು ಆಲಂಗಿಸಿಕೊಳ್ಳುವುದೂ ಸುರಕ್ಷಿತವಲ್ಲ. ಈ ವಿಷಯದಲ್ಲಿ ವಿವೇಚನಾ ಪೂರ್ಣವಾದ ಒಂದು ನಿಲುವು ಅತ್ಯಗತ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ.

ಜಾಗತೀಕರಣವೊಂದು ನೈಸರ್ಗಿಕ ಪ್ರಕ್ರಿಯೆ ಎಂದೇ ಇವತ್ತಿನ ಸಂದರ್ಭದಲ್ಲಿ ಭಾವಿಸೋಣ. ಒಂದು ಕಾಲದಲ್ಲಿ ಜಗತ್ತಿನ ಖಂಡ–ಖಂಡಗಳೆಲ್ಲ ಪರಸ್ಪರವಾಗಿ ನಿರಂತರ ಪ್ರತ್ಯೇಕ–ಪ್ರತ್ಯೇಕವಾಗಿದ್ದವು. ಇವುಗಳ ನಡುವೆ ಸಂಪರ್ಕಗಳು, ಸಾರಿಗೆಗಳು ಇಲ್ಲವಾಗಿದ್ದವು. ಒಂದರ ಪ್ರಭಾವ ಇನ್ನೊಂದರ ಮೇಲೆ ಉಂಟಾಗುವ ಸಂದರ್ಭವೇ ಇರಲಿಲ್ಲ. ಆದರೆ ಇಂದು ಹಾಗಲ್ಲ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಜಗತ್ತು ಸಣ್ಣದಾಗಿದೆ. ಸಾರಿಗೆ–ಸಂಪರ್ಕಗಳು ನಿರ್ಮಾಣಗೊಂಡಿವೆ. ಕೆಲವೇ ಕೆಲವು ಕ್ಷಣಗಳಲ್ಲಿ ಜಗತ್ತಿನ ಯಾವ ಮೂಲೆಯನ್ನಾದರೂ ಸಂಪರ್ಕಿಸಬಹುದು. ಮನುಷ್ಯ ಪ್ರವೇಶಿಸದ ಭೂಗೋಳ ಭಾಗ ಇಂದು ಇರಲಾರದು. ಖಂಡಗಳ ಸಂಪರ್ಕವಷ್ಟೇ ಅಲ್ಲ, ಗ್ರಹಗಳ ಸಂಪರ್ಕ–ಸಂಬಂಧವೂ ಇಂದು ಸಾಧ್ಯ ವಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಪರಸ್ಪರ ಪ್ರಭಾವ, ಪ್ರೇರಣೆ, ಮಾರ್ಗದರ್ಶನ, ಆಕರ್ಷಣೆ, ಕೊಂಡು ಕೊಳ್ಳುವಿಕೆ ತೀರ ಸಹಜ ಮತ್ತು ನೈಸರ್ಗಿಕ, ಆದರೆ ಆರ್ಥಿಕವಾಗಿ, ರಾಜಕೀಯವಾಗಿ, ವಿಜ್ಞಾನ ಮತ್ತು ತಂತ್ರಜ್ಞಾನ ದೃಷ್ಟಿಯಿಂದ ಜಾಗತಿಕವಾಗಿ ಬಲಶಾಲಿಯಾದ ರಾಷ್ಟ್ರ ತನ್ನ ಉತ್ಪಾದನೆ ಮತ್ತು ಆಲೋಚನೆಗಳೇ ಶ್ರೇಷ್ಠ ಎಂಬ ಭ್ರಮೆ ನಿರ್ಮಿಸಿ ಅವನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಹೇರುವುದು ಮಾತ್ರ ಅಮಾನವೀಯ ಮತ್ತು ಖಂಡನೀಯ. ಈ ವಿಷಯದಲ್ಲಿ ಎಚ್ಚರವಾಗಿರುವುದು ಅಗತ್ಯ. ಅದರಿಂದ ಜಾಗತೀಕರಣದ ಭಯ ಕೇವಲ ಭಾರತೀಯರಿಗೆ ಮಾತ್ರವಲ್ಲ; ಇಡೀ ಜಗತ್ತಿನ ಸಣ್ಣ–ಪುಟ್ಟ ರಾಷ್ಟ್ರದವರಿಗೂ ಇದೆ.

ಒಂದೆರಡು ನಿದರ್ಶನವನ್ನು ನೋಡಬಹುದು. ಇಂದು ಭಾರತೀಯ ಚಲನಚಿತ್ರ ಇಂದು ಹೆಚ್ಚು ಹೆಚ್ಚು ಜಾಗತೀಕರಣಗೊಂಡ ಕ್ಷೇತ್ರವಾಗಿದೆ. ಕ್ರೀಡಾ ಜಗತ್ತಿನಲ್ಲಿಯೂ ಹಾಗೇ, ಕ್ರಿಕೆಟ್‌ನಂಥ ಜಾಗತಿಕ ಕ್ರೀಡೆಗಳಿಗೆ ಮಾರುಹೋದ ನಾವು ಸ್ಥಳೀಯವಾದ ಅನೇಕ ಕ್ರೀಡೆಗಳನ್ನು ಸಾಯಿಸಿದ್ದೇವೆ. ನೃತ್ಯ, ಸಂಗೀತ ಕ್ಷೇತ್ರಗಳೂ ಇವಕ್ಕೆ ಹೊರತಲ್ಲ. ಈ ಎಲ್ಲ ವಿಷಯಗಳಲ್ಲಿ ಮಹಾತ್ಮಾಗಾಂಧೀಜಿಯವಂಥವರ ಆದರ್ಶ, ಚಳವಳಿ, ಉಪದೇಶ ನಮಗೆ ಪಥ್ಯವಾಗಿಲ್ಲ. ಅವು ಮಾಡಬೇಕಾದ ಪರಿಣಾಮ ಮಾಡಿಲ್ಲ. ಅವರ ದೇಶೀಯ ಕಲ್ಪನೆಗಳಿಗೆ ನಾವು ಮನ್ನಣೆ ಕೊಟ್ಟಿಲ್ಲ, ಬದಲು ವಿದೇಶದದ್ದೆಲ್ಲ ಒಳ್ಳೆಯದು, ಸ್ವದೇಶದದ್ದೆಲ್ಲ ಕನಿಷ್ಠ ಎಂಬ ಮನೋಧರ್ಮವನ್ನು ಬೆಳೆಸಿಕೊಂಡೆವು. ಇದರ ಪರಿಣಾಮವನ್ನು ಇಂದು ನಾವು ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅನುಭವಿಸುತ್ತಿದ್ದೇವೆ.

ಜಾಗತೀಕರಣಕ್ಕೆ ಬಲಿಯಾಗುವವರಲ್ಲಿ ಬಹುಷಃ ಭಾರತೀಯರಾದ ನಾವೇ ಮುಂದಾಗಿರಬಹುದು. ಇದಕ್ಕೆ ವಿವೇಚನಾ ರಹಿತವಾದ ನಮ್ಮ ಮನೋಧರ್ಮವೇ ಕಾರಣ. ನಮ್ಮ ಆತ್ಮವಿಶ್ವಾಸದ ಕೊರತೆ ಎದ್ದು ಕಾಣುತ್ತದೆ. ನಮ್ಮ ತನದಲ್ಲಿರುವ ಶ್ರೇಷ್ಠಗುಣಗಳನ್ನು ಗುರುತಿಸುವಲ್ಲಿ ಅನೇಕ ಸಲ ನಾವು ಸೋಲುತ್ತೇವೆ. ಸುಲಭವಾಗಿ ಅನ್ಯರ ಆಕರ್ಷಣೆಗೆ ಅನುಕರಣೆಗೆ ಒಳಗಾಗುತ್ತೇವೆ. ಇದರಿಂದಾಗಿ ನಾವು ದೇಶೀಯವಾದ ಅನೇಕ ಶ್ರೇಷ್ಠ ಸಂಗತಿಗಳಿಂದ ವಂಚಿತವಾದ ಸಂದರ್ಭಗಳಿವೆ. ಈ ವಿಷಯದಲ್ಲಿ ನಮ್ಮ ಜಾನಪದ ಕಲಾಪ್ರಕಾರಗಳೂ ಹೊರತಾಗಿಲ್ಲ. ಜಗತ್ತಿನ ಬಹುಮುಖ್ಯ ಖಂಡಗಳಲ್ಲಿ ಏಶಿಯಾಖಂಡ ಬಹಳ ಪ್ರಾಚೀನ ಕಾಲದಿಂದಲೇ ತನ್ನದೇ ಆದ ಜೀವನ ವಿಧಾನವನ್ನು ರೂಪಿಸಿಕೊಂಡು ಅನುಸರಿಸುತ್ತ ಬಂದಿದೆ. ಅನುಕ್ರಮಣಿಕೆಯಲ್ಲಿ ಭರತ ಖಂಡ ದೇಶದ ಎಲ್ಲಾ ರಾಜ್ಯಗಳು, ರಾಜ್ಯಗಳ ಪ್ರಾದೇಶಿಕ ಪ್ರಭೇದಗಳು ಎಲ್ಲವೂ ಸ್ಥಳೀಯವಾದ ಜೀವನ ವಿಧಾನವನ್ನೂ ಅದನ್ನು ಅನುಸರಿಸಿ ಬಂದ ಕಲಾಪ್ರಕಾರವನ್ನೂ ರೂಪಿಸಿಕೊಂಡು ಬಂದಿವೆ. ಖಂಡ ಒಂದು ತುದಿಯ ಘಟಕವಾದರೆ ಗ್ರಾಮ, ಮುಜರೆಗಳು ಇನ್ನೊಂದು ಘಟಕವಾಗಬಹುದು. ಇಂದು ಈ ಎಲ್ಲಾ ಮಟ್ಟದ ಜೀವನ ವಿಧಾನಗಳು ಜಾಗತೀಕರಣದ ಅಪಾಯಕ್ಕೆ ಸಿಲುಕಿ ನಾಶವಾಗಿಬಿಡಬಹುದಾದ ಸೂಚನೆಯನ್ನು ನೀಡುತ್ತಲಿವೆ.

ಜಾಗತೀಕರಣವೆನ್ನುವುದು ವಿಶ್ವಮಟ್ಟದ ಸ್ಪರ್ಧೆ, ಪೈಪೋಟಿ ಪ್ರಭಾವಕ್ಕೆ ಇನ್ನೊಂದು ಹೆಸರು. ಈ ಅರ್ಥದಲ್ಲಿ ಜಾಗತಿಕ ಮಟ್ಟದ ಸಂಗತಿಗಳೊಂದಿಗೆ ಸ್ಪರ್ಧೆ ಇರುವ ಹಾಗೆಯೇ ಸ್ಥಳೀಯವಾಗಿಯೂ ಬಲಶಾಲಿಗಳಾಗಿ ಬೆಳೆದ ಕಲಾಮಾಧ್ಯಮಗಳ ಜೊತೆಗೆ ನಮ್ಮ ಸ್ಪರ್ಧೆ ಇದೆ ಎಂಬುದನ್ನು ಮರೆಯಬಾರದು. ಇದನ್ನು ಪರಕೀಯ ಸ್ಪರ್ಧೆಯಾಗಿ ವಿರೋಧಿಸುವುದಲ್ಲ. ಇಂದು ಭಾರತೀಯವಾದ ಅಭಿಜಾತ ಕಲಾಪ್ರಕಾರಗಳು ಗುಣಾತ್ಮಕವಾಗಿ ಎದುರಿಸಬೇಕಾಗಿದೆ. ಇಂದು ಭಾರತೀಯವಾದ ಅಭಿಜಾತ ಕಲಾಪ್ರಕಾರಗಳೆರಡು, ಹೇಳಿಸಿಕೊಂಡ ಸಂಗೀತ, ನೃತ್ಯ, ವಾದನ ಮುಂತಾದವು ಜಾಗತಿಕ ಪೈಪೋಟಿಗೆ

ಸಿದ್ಧವಾಗುತ್ತಿವೆ. ಈ ಪೈಪೋಟಿಗೆ ಅವುಗಳ ಸಾಮರ್ಥ್ಯವೇ ಕಾರಣ. ಜಾನಪದ ಕಲಾಪ್ರಕಾರಗಳು ಇಂಥ ಶಕ್ತಿಯನ್ನು ವೃದ್ಧಿಸಿಕೊಳ್ಳಬೇಕಾಗಿದೆ. ಭಾರತೀಯವಾದ ಅಭಿಜಾತ ಕಲಾಪ್ರಕಾರಗಳ ನಡುವೆ ಜಾನಪದ ಕಲಾಪ್ರಕಾರಗಳು ನಮ್ಮ ಅಸ್ತಿತ್ವ ಮತ್ತು ಅಭಿವೃದ್ಧಿಗಾಗಿ ಹೋರಾಡಬೇಕಾಗಿವೆ.

ಜಾನಪದ ಕಲಾಪ್ರಕಾರಗಳೆಲ್ಲಾ ಆಯಾ ಪ್ರದೇಶದ ಜೀವನ ವಿಧಾನದ ಹಿನ್ನೆಲೆಯಲ್ಲಿ ಹುಟ್ಟಿವೆ ಎಂಬುದು ನಿಜ. ಈ ಕಾರಣಕ್ಕಾಗಿ ಅಂಥ ಕಲಾಪ್ರಕಾರವನ್ನು ಬದುಕಿಸಿಕೊಳ್ಳಲು ಅಂಥ ಜೀವನ ವಿಧಾನವನ್ನು ಕಾಪಾಡಿಕೊಳ್ಳಬೇಕೆಂಬ ವಾದವಿದೆ. ಜಾನಪದ ಕಲಾಪ್ರಕಾರವೊಂದರ ಹುಟ್ಟಿಗೆ ಕಾರಣವಾದ ಜೀವನಕ್ರಮ ನಶಿಸಿಬಿಟ್ಟರೆ ಅಂಥ ಜೀವನಕ್ರಮದಿಂದ ಉದ್ಭವವಾದ ಕಲಾಪ್ರಕಾರವೂ ನಶಿಸಿ ಹೋಗುತ್ತದೆಂಬ ತಿಳುವಳಿಕೆ ಇದೆ. ಈ ವಾದವನ್ನೇ ಅವಲಂಭಿಸಿದರೆ ಬದಲಾಗುತ್ತಿರುವ ಜೀವನಕ್ರಮದಲ್ಲಿ ಯಾವ ಜಾನಪದ ಕಲಾಪ್ರಕಾರವೂ ಉಳಿಯಲು ಸಾಧ್ಯವಿಲ್ಲ. ಆದರೆ ಜಾನಪದ ಕಲಾಪ್ರಕಾರವನ್ನು ಉಳಿಸಿ, ಬೆಳೆಸಿ, ಅಭಿಜಾತ ಕಲಾಪ್ರಕಾರಗಳ ಸ್ಪರ್ಧೆಗೆ ಎದುರಾಗುವ ಕ್ರಮ ಇದಲ್ಲ, ಜಾಗತೀಕರಣದ ವಿರುದ್ಧ ಹೋರಾಡುವ ರೀತಿಯೂ ಅಲ್ಲ. ಇದರ ಬದಲಿಗೆ ಆ ಆ ಜಾನಪದ ಕಲಾಪ್ರಕಾರಗಳನ್ನು ಅವುಗಳ ಹುಟ್ಟಿನ ಹಿನ್ನೆಲೆ ಮತ್ತು ಸಂದರ್ಭಗಳನ್ನು ಬೇರ್ಪಡಿಸಿ ಪೋಷಿಸಬೇಕಾಗುತ್ತದೆ. ಹೀಗೆ ಅವುಗಳನ್ನು ಬೇರ್ಪಡಿಸಿದಾಗ ಅವು ಬದುಕುವ ಲಕ್ಷಣಗಳನ್ನು ತೋರಿಸಿದರೆ ಸ್ವತಂತ್ರವಾಗಿ ಬದುಕುವ ಅಂಥವಕ್ಕೆ ಕಲಾಸಾಮಾರ್ಥ್ಯ ಇದೆ ಎಂದು ಅರ್ಥ, ಬೇರ್ಪಡಿಸಿದಾಗ ಸತ್ತುಹೋಗಿ ಬಿಟ್ಟರೆ ಸಾಯಲಿಕ್ಕೇ ಯೋಗ್ಯವಾದವು ಎಂದು ಅರ್ಥ. ಜೀವನದ ಸಂದರ್ಭ ಮತ್ತು ಹಿನ್ನೆಲೆಯಿಂದ ಹುಟ್ಟಿದ ಜಾನಪದ ಕಲಾಪ್ರಕಾರಗಳ ಗಾಯನಶಕ್ತಿ. ಲಯಶಕ್ತಿ, ಸಾಹಿತ್ಯಶಕ್ತಿ ಮುಂತಾದವುಗಳನ್ನು ಗುರುತಿಸಿ ಪ್ರತ್ಯೇಕಿಸಿ ಅಂಥ ಪ್ರಕಾರಗಳನ್ನು ಅಭಿವೃದ್ಧಿಪಡಿಸಿ, ಜಾಗತಿಕ ಪೈಪೋಟಿಗೆ ಸಜ್ಜುಗೊಳಿಸಬೇಕಾಗುತ್ತದೆ. ಅಭಿಜಾತವೆನಿಸಿಕೊಂಡ ಕಲಾಪ್ರಕಾರಗಳೆಲ್ಲ ಹೀಗೇ ಬೆಳೆದು ನಿಂತಿವೆ ಎಂಬುದು ನನ್ನ ನಂಬಿಗೆ.

ಜಾನಪದ ಕಲಾಪ್ರಕಾರಗಳ ಸದ್ಯದ ಸ್ಥಿತಿ ಇಂಥ ವಿಶಾಲವಾದ ಸ್ಪರ್ಧೆಗೆ ಸಶಕ್ತವಾದುದಲ್ಲ. ಹಾಗಾಗಿಯೇ ಇಂದು ಆ ಕಲಾ ಪ್ರಕಾರಗಳ ಅಸ್ತಿತ್ವದ ಬಗ್ಗೆ, ಭವಿಷ್ಯದ ಬಗ್ಗೆ ಅನುಮಾನಗಳು, ಆತಂಕಗಳು ಉಂಟಾಗುವುದು ಸಹಜ, ಎಲ್ಲರೂ ಜಾಗತೀಕರಣದ ಭೂತದ ಬಗ್ಗೆ ವೈಭವೀಕರಿಸಿ ಮಾತನಾಡುವಾಗ ಜಾನಪದ ಕಲೆಯನ್ನು ನೆಚ್ಚಿಕೊಂಡವರಿಗೆ ಭಯವಾಗುವುದೂ ಸಹಜವೇ. ಕೆಲವು ಸಲ ಜಾಗತೀಕರಣ ಎಂಬುದು ಒಂದು ನೆಪವಾಗಿಯೂ ಪರಿಣಮಿಸಬಹುದು. ಅದೇ ಕಾರಣವಾಗಿಯೂ ಒದಗಬಹುದು. ಆದ್ದರಿಂದ ಜಾಗತೀಕರಣವನ್ನು ಎದುರಿಸಲಿಕ್ಕಾಗಿ ಅಲ್ಲ; ತನ್ನನ್ನು ತಾನು ಬೆಳೆಯಬೇಕೆಂಬ ಸಂಕಲ್ಪ ಮುಖ್ಯವಾಗುತ್ತದೆ. ಜಾನಪದ ಕಲೆಯನ್ನು ಹಚ್ಚಿಕೊಂಡ, ನೆಚ್ಚಿಕೊಂಡ ಹಲವು

ನಮ್ಮ ಕಲಾವಿದರು ತಮ್ಮ ಬಡತನವನ್ನೂ ಅನಕ್ಷರತೆಯನ್ನೂ ನೆಪವಾಗಿ ಮುಂದೊಡ್ಡುವ ಸಂದರ್ಭಗಳಿಲ್ಲದೇ ಬೆಳೆಯಬೇಕಾಗಿದೆ.

ಅವಕೃಪೆಗೆ ಗುರಿಯಾದ ಸಮುದಾಯಗಳಿಂದ ಬಂದ ವಿದ್ಯಾವಂತರು ತಮ್ಮ ಜಾತಿಯ ಕಲೆಗಳ ಬಗ್ಗೆ ತಿರಸ್ಕಾರ ಹೊಂದುವುದಲ್ಲದೇ, ಮೇಲ್ಜಾತಿಗಳ ಕಲೆಗಳ ಬಗ್ಗೆ ಆಸಕ್ತಿ ಹೊಂದುತ್ತಾರೆ. ಆಧುನಿಕ ತಂತ್ರಜ್ಞಾನಕ್ಕೆ ಬಳುವಳಿ ಸಿನಿಮಾ, ಟಿ.ವಿ.ಗಳ ಕಡೆಗೆ ವಾಲಿ ಬಿಡುತ್ತಾರೆ. ಹಿರಿಯರಿಗೆ ತಮ್ಮ ಕುಲ ಕಸುಬುಗಳು ಪವಿತ್ರವಾಗಿ ಕಂಡರೆ, ಅವರ ಮಕ್ಕಳಿಗೆ ಅವಮಾನಿತ ಕಸುಬುಗಳಾಗಿ ಪೀಳಿಗೆ ಘರ್ಷಣೆ ಆರಂಭವಾಗುತ್ತದೆ. ಇವತ್ತಿನ ಶಿಕ್ಷಣ ಕ್ರಮದಲ್ಲೂ ಕುಲ ಕಸುಬುಗಳನ್ನು ಗೌರವದಿಂದ ನೋಡಬೇಕಾದ ಕಲೆಗಳ ಮಟ್ಟಕ್ಕೆ ಏರಿಸಿಲ್ಲ. ಆದ್ದರಿಂದ ಜನಪದ ಕಲೆಗಳು ಆಧುನಿಕತೆಯಿಂದ ನರಳುವ ಸ್ಥಿತಿ ಬಂದಿದೆ. ಇದರಿಂದಾಗಿಯೂ ನಮ್ಮ ಬಹಳಷ್ಟು ವೃತ್ತಿ ಗಾಯನ ಪರಂಪರೆಗಳು, ಸಂಬಂಧಿಸಿದ ಕಲೆಗಳು ಮೂಲೆ ಗುಂಪಾಗಿವೆ. ಕರಪಾಲ ಮೇಳದ ಬಗೆಗಿನ ಪ್ರಚಾರ ಹೆಳವರ ಕಲೆಗೆ, ಗೊರವರ ಕಲೆಗಿಲ್ಲ. ಕರಪಾಲ ಮೇಳಕ್ಕೆ ವೀರಶೈವರ ಪ್ರವೇಶದಿಂದಾಗಿ ಜೀವಂತಿಕೆ ಉಳಿಸಿಕೊಂಡಿದೆ. ತೊಗಲು ಗೊಂಬೆಯಾಟ ಕಿಳ್ಳೇಕ್ಯಾತರಿಗೆ ಸೇರಿದ್ದು, ಪ್ರೋತ್ಸಾಹವಿಲ್ಲದೇ ಅದರ ಕಲಾವಿದರು ಇಲ್ಲವಾಗಿದ್ದಾರೆ. ಮರದಲ್ಲಿ ಮಾಡಿದ ಗೊಂಬೆಗಳನ್ನು ಕುಣಿಸುವ ಕಲೆಯಾಗಿ ಕಾರ್ನಾಡರು, ಎ.ಎಸ್. ಮೂರ್ತಿ ಮಾಡಿದ್ದಾರೆ. ಶಿವರಾಮ ಕಾರಂತರು ಯಕ್ಷಗಾನ ಕಲಿತರು, ಕಲಿಸಿದರು, ಮೇಲ್ಜಾತಿಯ ಅತಿ ಬುದ್ಧಿವಂತರು ಮಾಡಿದ್ದರಿಂದ ಅದು ಶಿಕ್ಷಣದ ಮಟ್ಟಕ್ಕೇರಿತು, ಇಂದು ಏಕಮುಖವಾದ ಸಂಸ್ಕೃತಿಯ ಪ್ರಭಾವ ಬಹುರೂಪಿ ಸಂಸ್ಕೃತಿಗಳ ಮೇಲಾಗುತ್ತಿದೆ. ಜನಪದ ಪ್ರದರ್ಶಕ ಕಲೆಗೂ ಇದರ ಪ್ರಭಾವಕ್ಕೆ ಒಳಪಟ್ಟಿವೆ. ಪರಿಣಾಮದಿಂದ ಬಹಳಷ್ಟು ಕಲೆಗಳು ನಶಿಸುವ ಇಲ್ಲವೇ ಬೇರೆ ರೂಪಾಂತರ ಪಡೆದು ಮೂಲ ಸಂಸ್ಕೃತಿಯೇ ಅಳಿದು ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಕೋಲಾಟ, ಯಕ್ಷಗಾನ, ಬಯಲಾಟ, ಇವೆಲ್ಲವೂ ಏಕರೂಪ ಸಂಸ್ಕೃತಿಯಲ್ಲಿ ತನ್ನ ಸ್ವರೂಪವನ್ನು ಬದಲಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹೊಂದಿವೆ. ಯಕ್ಷಗಾನ, ಬಯಲಾಟ, ಜನಪದ ಕಲೆಯಾಗಿ ಒಂದೊಂದು ಸಂಸ್ಕೃತಿಯಲ್ಲಿ ಒಂದೊಂದು ರೀತಿಯಲ್ಲಿ ಪ್ರದರ್ಶನಗೊಳ್ಳುತ್ತದೆ. ಆದರೆ, ಜಾಗತೀಕರಣದಿಂದಾಗಿ ಇದರ ಸ್ವರೂಪವೇ ಬದಲಾಗುತ್ತದೆ. ಕುಟ್ಟಲು, ಬೀಸಲು, ಉಳುಮೆ ಮಾಡಲು, ಕಳೆ ಕೀಳಲು ಎಲ್ಲದಕ್ಕೂ ಯಂತ್ರಗಳೇ ಬಂದಿರುವುದರಿಂದ ಅವುಗಳ ಬಳಕೆ ಗೊತ್ತಿರುವುದರಿಂದ ಮನುಷ್ಯನಿಗೆ ದೈಹಿಕ ಶ್ರಮವೆಂಬುದಿಲ್ಲ. ಹಾಗಾಗಿ, ಕೃಷಿ ಸಂಸ್ಕೃತಿಯ ಭಾಗವಾಗಿ ಮೂಡಿ ಬರುತ್ತಿದ್ದ ಸುಗ್ಗಿ ಕುಣಿತ, ಕೋಲಾಟ, ಡೊಳ್ಳು ಕುಣಿತ ಮುಂತಾದ ಜನಪದ ಕಲೆಗಳನ್ನು ನೋಡಿ ಆನಂದಿಸಲು ಸಾಧ್ಯವಾಗುತ್ತಿಲ್ಲ. ಸದಾ ಟಿ.ವಿ. ಸೀರಿಯಲ್‌ಗಳ ಮುಂದೆ ಕುಳಿತುಕೊಳ್ಳುವುದರಿಂದ ಯಾವಾಗಲೂ ಮನರಂಜನೆಯ ಭಾಗ್ಯವೇ ಆಗುತ್ತಿದೆ. ಹಾಗಾಗಿ,

ಖುಷಿಗಾಗಿ, ಮನರಂಜನೆಗಾಗಿ ಪ್ರದರ್ಶನಗೊಳ್ಳುತ್ತಿದ್ದ ಸಾಹಿತ್ಯ ಮತ್ತು ಕಲೆಗಳು ಪ್ರದರ್ಶನಗೊಳ್ಳುತ್ತಿದ್ದ ಅವಕಾಶಗಳೇ ತಪ್ಪಿ ಹೋದಂತಾಯಿತು. ಆಧುನಿಕ ಮನುಷ್ಯನಿಗೆ ಯಾಂತ್ರಿಕ ದರ್ಶನಗಳಿಂದಾಗಿ ಮಾಯಾಲೋಕ ಇಷ್ಟವಾಯಿತೇ ಹೊರತು ವಾಸ್ತವಲೋಕ ಇಷ್ಟವಾಗುತ್ತಿಲ್ಲ. ಯಾಂತ್ರಿಕ ಸರಕುಗಳು ಆ ಮೂಲಕ ಬರುವ ಸಿನಿಮಾ, ದೂರದರ್ಶನ ಇತ್ಯಾದಿ ಮಾಧ್ಯಮಗಳ ಮುಂದೆ ಜನ ಕುಳಿತರೆ ಅದರ ತಾಂತ್ರಿಕ ಆಕರ್ಷಣೆಯಿಂದಾಗಿ ಕಲೆಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಂಡು ನೋಡುವುದಕ್ಕೂ ಇಲ್ಲದೇ ಹೋಗುತ್ತಿವೆ. ಡಿಸ್ಕೋ, ಕ್ಯಾಬರೆ ಬಂದದ್ದರಿಂದ, ಇಂಥ ಕಲೆಗಳನ್ನು ನೋಡಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಭಜನೆ, ಭೂತಾರಾಧನೆ ಡೊಳ್ಳು ಕುಣಿತ ಮುಂತಾದ ಕಲೆಗಳೂ ಸಹ ಇವುಗಳ ಪರಿಣಾಮವನ್ನು ಎದುರಿಸಬೇಕಾಗಿದೆ. ಯಾಂತ್ರಿಕ ಸಲಕರಣೆಗಳು ಬಂದು ಬೇರೊಂದು ರೂಪದಲ್ಲಿ ಅವನ್ನ ನಮಗೆ ನೋಡುವಂತೆ ಪ್ರೇರೇಪಿಸುತ್ತಿವೆ. ಹಳ್ಳಿಗಳಲ್ಲಿ ಹಬ್ಬದ ಸಂಭ್ರಮ ಇಲ್ಲವಾಗುತ್ತದೆ. ಅವೇ ಇಲ್ಲದಿರುವಾಗ ಪ್ರದರ್ಶಕ ಕಲೆಗಳ ಪರಿಸ್ಥಿತಿ ಏನು ? ಹಳ್ಳಿಗಳಲ್ಲಿ ಜನ ಅವನ್ನ ಪ್ರದರ್ಶಿಸಲೆತ್ನಿಸುವುದು ಕಡಿಮೆಯಾಗಿದೆ. ಪಟ್ಟಣಗಳಲ್ಲಿ ಅವುಗಳ ಪ್ರದರ್ಶನ ಬೇರೊಂದು ರೂಪದಲ್ಲಿ ಏರ್ಪಾಡಾಗುತ್ತಿದೆ. ಯಾಂತ್ರಿಕ ತಂತ್ರಜ್ಞಾನವನ್ನು ರೂಪಿಸಿ ಕೋರಿಯೋಗ್ರಫಿಯನ್ನು ಉಪಯೋಗಿಸಿಕೊಂಡು ಟಿಕೇಟ್‌ಗಳನ್ನು ಇಟ್ಟು ಹಣ ಸಂಪಾದನಾ ಮಾರ್ಗ ಹಿಡಿಯಲಾಗುತ್ತಿದೆ. ಕಲಾವಿದನ ಸಹಜ ಉಡುಪಿನಿಂದ ಬಿಡಿಸಿ ಕಾಸ್ಟೂಮ್ ಹಾಕಿಸಿದ್ದರಿಂದ ಅಸಲೀ ಜೀವನದ ಪರಿಚಯವಾಗದಂತೆ ಮಾಡಿದೆ. ಈ ಬದಲಾವಣೆ ಅನಿವಾರ್ಯ. ಹಿಂದೆ ಜೀರುಂಡೆ ರೆಕ್ಕೆಗಳನ್ನು ಬಳಸುತ್ತಿದ್ದರು. ಆದರೆ, ಈ ಝುಗಝುಗಿಸುವ ಲೈಟ್ ಬೆಳಕಿನಲ್ಲಿ ಈ ಉಡುಪು ಅನಿವಾರ್ಯ.

ಹಳ್ಳಿಗಳಲ್ಲಿ ಹಬ್ಬ-ಹರಿದಿನಗಳನ್ನು ಏರ್ಪಡಿಸುತ್ತಿದ್ದ ಜನ ಅದರ ಭಾಗವಾಗಿ ಕಲೆಗಳನ್ನು ಪ್ರದರ್ಶಿಸಿ ಒಗ್ಗಟ್ಟನ್ನು ಸೌಹಾರ್ದವನ್ನು ವ್ಯಕ್ತಗೊಳಿಸುತ್ತಿದ್ದರು. ಅಂಥ ಸಂದರ್ಭಗಳನ್ನು ಜಾಗತೀಕರಣ ಇಲ್ಲದಂತೆ ಮಾಡಿದೆ. ಮಾದೇಶ್ವರನ ಜಾತ್ರೆಯಲ್ಲಿ ಭಕ್ತಿ ಸಮೂಹದ ನಡುವೆ ಕಂಸಾಳೆ ನೃತ್ಯ ಪ್ರದರ್ಶನಗೊಂಡರೆ, ಅದು ಆರಾಧನಾ ಕಲೆ ಎನಿಸಿಕೊಳ್ಳುತ್ತದೆ. ನಗರಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಅದೇ ಕಲೆ ಪ್ರದರ್ಶನಗೊಂಡರೆ ಅದೊಂದು ಹವ್ಯಾಸಿ ಕಲೆ ಎನಿಸಿಬಿಡುತ್ತದೆ. ಬೆಟ್ಟದಲ್ಲಿ ಗಂಟೆಗಟ್ಟಲೇ ಪ್ರದರ್ಶನಗೊಳ್ಳುವ ಕಂಸಾಳೆ ಆರಾಧನಾ ಕಲೆಯಾಗಿ ಕಂಡರೆ, ನಗರದವರಿಗೆ ಬರೀ ಕಲೆಯಾಗಿ ಕಂಡು, ಸೀಮಿತ ಅವಧಿಯಲ್ಲಿ ಕೊನೆಗೊಳ್ಳುತ್ತದೆ. ಅಭಿವೃದ್ಧಿ ಹೊಂದಿದ ಜಾತಿ ಸಮುದಾಯಗಳಲ್ಲಿ ಇಂಥ ಪ್ರದರ್ಶಕ ಕಲೆಗಳಿಗೆ ಮರುಗುವ ಸ್ಥಿತಿ ಬರುವುದು. ಸಾಮಾಜಿಕವಾಗಿ ಮೇಲ್ಮಟ್ಟದಲ್ಲಿರುವ ಸಾಹಿತ್ಯ ಕಲೆಗಳಿಗೆ ಗೌರವ ಜಾಸ್ತಿ. ಪ್ರತಿಷ್ಠೆ, ಗೌರವಗಳಿರುವುದರಿಂದಲೇ ಆ ವರ್ಗದ ತರುಣರು ಅವನ್ನು ಅಭ್ಯಸಿಸಲು ಮುಂದಾಗುತ್ತಾರೆ.

ಇಂದಿನ ಜಾಗತೀಕರಣವೂ ಸಹ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಶವೇ ಆಗಿದೆ. ಸಂಸ್ಕೃತಿ ಎಂದರೆ, ಮಾನವ ನಿರ್ಮಿತ, ತನಗಾಗಿ ತನ್ನಿಂದ, ತನಗೋಸ್ಕರವಾಗಿ ವಿಶ್ವವನ್ನು ತಲುಪಬೇಕು. ಆದ್ದರಿಂದರ, ಜಾಗತೀಕರಣವನ್ನು ಒಂದು ಶಾಪವಾಗಿ ಪರಿಗಣಿಸಬಾರದು. ಹಾಗಾಗಿ, ತಂತ್ರಜ್ಞಾನದಿಂದ ಏನೆಲ್ಲಾ ಸಾಧಿಸಬಹುದು. ದೇಶೀಯತೆಯನ್ನು ಕೂಡ ಉಳಿಸಿಕೊಳ್ಳಬಹುದು. ಸಿನಿಮಾ ನಿರ್ದೇಶಕ ನಿಜಕ್ಕೂ ಚತುರನೇ ಸರಿ. ಆತನಿಗೆ ಜನರ ಅಭಿರುಚಿ ಯಾವುದರಲ್ಲದೆ ಎಂಬುದನ್ನು ಅರಿತು ತನ್ನ ಚಿತ್ರ ಬಾಕ್ಸ್ ಆಫೀಸಿನಿಂದ ಹಿಟ್ ಆಗಲೀ ಎಂದೇ ಕಲೆಯನ್ನು ಬಳಸುತ್ತಾನೆ. ಕೊನೆ ಪಕ್ಷ ಸಂಸ್ಕೃತಿಯ ವಾಹಕನಾಗಿದ್ದಾನೆ. ಕಣ್ಮರೆಯಾಗುತ್ತಿರುವ ಎಷ್ಟೋ ನಮ್ಮ ಸಂಸ್ಕೃತಿಯ ಕಲೆಗಳನ್ನು ಅಲ್ಪ ಸ್ವಲ್ಪ ಬಳಸಿಯೇ ಇದ್ದಾನೆ. ಜನರಿಗೆ ಹೇಗಾದರೂ ತಲುಪಿಸುವ ಕಲೆಯ ಅವಶ್ಯಕತೆ ಇಂದು ತುಂಬಾ ಅಗತ್ಯವಾಗಿದೆ. ಅದರ ದೇಶ, ನಾಡು, ನುಡಿ, ಕಲೆಗಳ ಬಗ್ಗೆ ಈ ಮೂಲಕ ಅರಿವು ಮೂಡಿಸುವುದು ಹಾಗೂ ಏಕ ಕಾಲದಲ್ಲಿ ಎಲ್ಲರಿಗೂ ತಲುಪಿಸುವ ಕಾರ್ಯ ಈ ಜಾಗತೀಕರಣದಿಂದಲೇ ಅಲ್ಲದೇ ಬೇರೆ ಅಲ್ಲ, ಕೂಡಲೇ ಫೋನಾಯಿಸುವವರು ಮೊಬೈಲ್‌ಗೆ ಶರಣಾಗುವವರು ಜಾಗತೀಕರಣದ ಬಗ್ಗೆ ಅಸಡ್ಡೆ ಏಕೆ? ನಮ್ಮ ಜನಪದರಿಗೆ ತಂತ್ರಜ್ಞಾನದ ಅರಿವು ಅಗತ್ಯ. ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿಯುವವರನ್ನು ಗುರುತಿಸಿ ಸಂಘಟಿಸುವ ಅವಶ್ಯಕತೆ ಇಂದು ಬೇಕಾಗಿದೆ.

ಪ್ರಪಂಚ ಇಂದು ತೀವ್ರವಾದ ಬದಲಾವಣೆಗಳಿಗೆ ಒಳಗಾಗುತ್ತಿದೆ. ಎಲ್ಲವನ್ನೂ ವ್ಯಾಪಾರೀ ಮನೋ ಭಾವದಿಂದ ಕಾಣುವ ಸಾಮಾನ್ಯ ಮನೋಧರ್ಮ ಜಾಗತೀಕರಣದ ಪ್ರಮುಖ ಸಂಗತಿ. ಒಂದು ಕಾಲಕ್ಕೆ ಸಂಸ್ಕೃತಿಯೇ ಬದುಕಿನ ಹಾಸು ಹೊಕ್ಕಾಗಿದ್ದಾಗ, ಮೌಖಿಕ ಪರಂಪರೆಯಲ್ಲಿ ಜನಪದ ಲಲಿತ ಕಲೆಗಳಿಗೆ ಪ್ರಾಧಾನ್ಯತೆ ಇತ್ತು. ಆದರೆ, ಈಗ ವಿಜ್ಞಾನ ಬದುಕಿನ ಹಾಸುಹೊಕ್ಕಾಗಿರುವಾಗ ಸೌಲಭ್ಯಗಳ ಆಕರ್ಷಣೆ ಎಲ್ಲ ಕಡೆ ಸಹಜವಾಗಿದೆ. ಅಡುಗೆ ಮನೆಯಲ್ಲಿ ಗ್ರೈಂಡರ್, ಊರಿನಲ್ಲಿ ಬೀಸುವ ಗಿರಣಿ, ಹೊಲದಲ್ಲಿ ರಾಶಿ ಮಾಡುವ ಯಂತ್ರಗಳು ಬಂದ ನಂತರ–ಖಂಡಿತವಾಗಿ ಮಹಿಳೆಯರಿಗೆ ಮತ್ತು ಒಕ್ಕಲಿಗರಿಗೆ ಅನುಕೂಲ ವಾಗಿದೆ. ಅವರ ಅನಂತ ಪರಿಶ್ರಮವನ್ನು ಈ ಯಂತ್ರಗಳು ದಕ್ಕಿಸಿಕೊಂಡಿವೆ. ಈ ಸೌಲಭ್ಯಗಳಿಂದ–ಬೀಸುವ, ಕುಟ್ಟುವ ಶ್ರಮದ ಕೆಲಸಗಳಿಂದ ವಿರಾಮ ದೊರೆಯಿತು. ಆದರೆ, ಅದರೊಂದಿಗೆ ಹುಟ್ಟುತ್ತಿದ್ದ, ಬಳಕೆಯಾಗುತ್ತಿದ್ದ ನಮ್ಮ ಸಂಸ್ಕೃತಿಯ ಬಹುದೊಡ್ಡ ಕೊಡುಗೆಗಳಾದ ಮೌಖಿಕ ಸಂಪ್ರದಾಯದ ಹಾಡುಗಳು ಅಷ್ಟೇ ಅಲ್ಲ, ಒರಳು, ಒನಕೆ, ಬೀಸುವ ಕಲ್ಲಿನ ಸುತ್ತ ಹುಟ್ಟಿಕೊಂಡಿದ್ದ ಅನೇಕ ಸಾಂಸ್ಕೃತಿಕ ಆಚರಣೆಗಳು ಬಹಳ ಸರಳವಾಗಿ ಮಾಯವಾದವು. ಒಂದು ಸಾಧಾರಣ ಯಂತ್ರದ ಪ್ರವೇಶದಿಂದ, ರೈತನ ಅಪಾರ ಪರಿಶ್ರಮಕ್ಕೆ ಸೌಲಭ್ಯ ದೊರೆಯಿತು ನಿಜ. ಅದರ ಜೊತೆಗೆ ಹಾಡುಗಳು ಬಳಕೆಯಿಂದ ದೂರ ಸರಿದವು; ಅಷ್ಟೇ ಅಲ್ಲ ಅವನ ಭತ್ತದ ರಾಶಿಯ ಜೊತೆಗೆ

ಒಕ್ಕಲಿಗನ ಬದುಕು ಕಟ್ಟಿಕೊಂಡಿದ್ದ ಸಂಪೂರ್ಣ ಸಂಸ್ಕೃತಿಯು ಬಹು ಸುಲಭವಾಗಿ ದೂರ ಸರಿಯಿತು.

ಈ ಒಂದೆರಡು ಉದಾಹರಣೆಗಳಿಂದ ನಮಗೆ ಭಾಸವಾಗುವುದೇನೆಂದರೆ, ಒಂದು ಪರಿಸರದಲ್ಲಿ ಸೃಷ್ಟಿಗೊಳ್ಳುವ ಸಂಸ್ಕೃತಿಯೆಂಬ ಜೀವಧಾರೆಯು ವಿಜ್ಞಾನವೊದಗಿಸುವ ಕನಿಷ್ಠ ಸೌಲಭ್ಯಗಳ ಮುಂದೆ ಬದುಕಬಲ್ಲ ಯಾವ ತಾಕತ್ತೂ ಇಲ್ಲದ್ದನ್ನು ಕಾಣುತ್ತೇವೆ. ಜೊತೆಗೆ, ಯಾವ ಹಳಹಳಿಯೂ ಇಲ್ಲದೇ ಅದನ್ನು ಬಳಸುವ ಜನವೇ ಬಿಟ್ಟು ಕೊಡುತ್ತದೆ ಎಂಬುದು ಗಮನಿಸತಕ್ಕ ಮಾತು. ಈಗಂತೂ ಎಮ್.ಎನ್.ಸಿ.ಗಳು ಒದಗಿಸುತ್ತಲಿರುವ ಹಲವು ಬಗೆಯ ಅನುಕೂಲತೆಗಳಿಂದಾಗಿ, ಜಾಗತೀಕರಣದ ಅನೇಕ ಒಡಂಬಡಿಕೆಗಳಿಂದಾಗಿ ಬದುಕಿನ ಬದಲಾವಣೆ ಸಾವಿರಪಟ್ಟು ತೀವ್ರಗೊಂಡು ಬದಲಾಗುತ್ತಿದೆ. ಇವೆಲ್ಲವುಗಳಿಂದ ಮನುಷ್ಯರ ಬದುಕಿಗೆ, ವಿಶೇಷವಾಗಿ ಭಾರತೀಯ ಗ್ರಾಮಾಂತರ ಪ್ರದೇಶದ–ಜನ ಸಮುದಾಯಕ್ಕೆ ಅನೇಕ ರೀತಿಯ ಅನುಕೂಲತೆಗಳು ಆಗಿವೆ. ಅವರ ಅಪಾರ ಪರಿಶ್ರಮ ಕಡಿಮೆಯಾಗಿ ಅವರಿಗೂ ವಿಶ್ರಾಂತಿ ಪಡೆಯಲು ಸಾಧ್ಯವಾಗುತ್ತಿದೆ. ಆರ್ಥಿಕ ಸ್ಥಿತಿ ಸುಧಾರಿಸಿ ಒಂದಿಷ್ಟು ಅನುಕೂಲತೆಗಳನ್ನು ಪಡೆಯುವಂತಾಗಿದೆ. ಇದರ ಜೊತೆಗೆ ಆಗುತ್ತಿರುವ ಅನಾಹುತವೆಂದರೆ, ಬದುಕು ನೂರಾರು ವರ್ಷಗಳ ಶೋಧನೆಗಳಿಂದಾಗಿ ಗುರುತಿಸಿಕೊಂಡ, ಸೃಷ್ಟಿಸಿಕೊಂಡ–ಸಂಸ್ಕೃತಿಯ ವೈವಿಧ್ಯಮಯವಾದ ಎಳೆಗಳು, ಬದುಕಿನ ಅನನ್ಯತೆಗಳು, ಜೀವಧಾರೆಗಳು ನಮ್ಮಿಂದ ದೂರವಾಗುತ್ತಿವೆ. ಇಂದಿನ ಜೀವನಕ್ಕೆ ಸೌಲಭ್ಯಗಳೇ ಬದುಕಿಗೆ ವಿಷವಾಗಿ ಪರಿಣಮಿಸುತ್ತಿವೆ. ಇಂತಹ ಸಮಯದಲ್ಲಿ ಅಮೂಲ್ಯವಾದುದನ್ನು ಬದುಕಿಗಾಗಿ ಉಳಿಸಿಕೊಳ್ಳುವ ಆಲೋಚನೆ ಬರುವುದು ಸಹಜ.

ಬದುಕು ನಿಸರ್ಗಕ್ಕೆ ಹೆಚ್ಚು ಹತ್ತಿರವಾಗಿದ್ದಾಗ, ಸಾವಧಾನವಾದ ಬದುಕಿನ ಗತಿಯಲ್ಲಿ ನೈಸರ್ಗಿಕ ಸ್ವಭಾವದ ಕಲೆಗಳು ಹುಟ್ಟಿಕೊಂಡವು. ಹೀಗಾಗಿ ಮನುಷ್ಯನ ಬದುಕಿಗೆ ಇವೆಲ್ಲ ಪೂರಕವಾಗಿಯೇ ಬೆಳದವು. ಮನುಷ್ಯ ಕೆಲಸದಲ್ಲಿ ನಿರತನಾಗಿರಲಿ, ಬಿಡುವಿನ ವೇಳೆಯಲ್ಲಿ ಸಂಭ್ರಮದ ಸಾಂಸ್ಕೃತಿಕ ಸಂದರ್ಭದಲ್ಲಿರಲಿ–ಅಲ್ಲೆಲ್ಲ ಅವನ ಕೆಲಸಕ್ಕೆ, ಆಚರಣೆಗೆ ಅಡ್ಡಿಯಾಗದಂತೆ, ಬದಲಾಗಿ ಸಹಾಯವಾಗುವಂತೆ ಅಲ್ಲಿಯ ನೈಸರ್ಗಿಕ ಗತಿಗೆ ತಕ್ಕಂತೆ ಕಲೆಗಳು ಸೃಷ್ಟಿಗೊಂಡವು. ಹಂತಿಯ ಗತಿ, ಬೀಸುವ ಗತಿ, ಮಟ್ಟೆ ಎಳೆಯುವ ಗತಿ, ಕೋಲಾಟದ ಕುಣಿತದ ಗತಿ, ಮದುಮಕ್ಕಳಿಗೆ ಎಣ್ಣೆ ಹಚ್ಚುವ ಗತಿ, ಇವೆಲ್ಲ ಸಹಜವಾದ ನೈಸರ್ಗಿಕ ಗತಿಗಳೇ; ಒಂದು ಅರ್ಥದಲ್ಲಿ ನೈಸರ್ಗಿಕ ಆಚರಣೆಗಳೇ. ಈಗ ಮೌಖಿಕ ಪರಂಪರೆಯ ಜೊತೆಗೆ ಲಿಖಿತ ಶಿಕ್ಷಣದ ಪರಂಪರೆ–ವ್ಯಾಪಕವಾಗಿ ಜಾರಿಗೆ ಬರುತ್ತಿದೆ. ಮೌಖಿಕ ಪರಂಪರೆಯ ಎಲ್ಲಾ ತಿಳುವಳಿಕೆ ಮತ್ತು ಬದುಕಿನ ಅರ್ಥಗಳಿಗಿಂತ ಲಿಖಿತ ಶಿಕ್ಷಣದ ತಿಳುವಳಿಕೆ ಮತ್ತು ಬದುಕಿನ ಅರ್ಥಗಳು ಸಂಪೂರ್ಣವಾಗಿ ಭಿನ್ನವಾಗಿವೆ. ಲಿಖಿತ ಪರಂಪರೆ ಎಷ್ಟು ಪ್ರಬಲವಾಗಿದೆ ಎಂದರೆ–ಮೌಖಿಕ ಪರಂಪರೆ ಹುಟ್ಟು ಹಾಕಿರುವ

ಸಂಪೂರ್ಣ ಸಂಸ್ಕೃತಿಯನ್ನು ಬದಿಗೆ ಸರಿಸಿ, ವ್ಯಾಪಕವಾಗಿ ತಾನೇ ವ್ಯಾಪಿಸುವ ಸಾಮರ್ಥ್ಯ ಹೊಂದಿದೆ. ಇಲ್ಲಿಯ ಸೌಲಭ್ಯಗಳಿಂದ ಮಾನವನ ಬದುಕಿಗೆ ಅರಿವು, ಆರೋಗ್ಯ, ಅನ್ನ, ಅನುಕೂಲತೆಗಳೆಲ್ಲ ದಕ್ಕುತ್ತಿರುವುದರಿಂದ, ಸ್ವತಃ ಪ್ರಪಂಚದ ಅಧಿಕಾರಿಗಳೇ ಅವುಗಳ ಪ್ರವೇಶದ ಉಸ್ತುವಾರಿಯನ್ನು ಹೊಂದಿವೆ. ಹೀಗಾಗಿ ಅದನ್ನು ತಡೆಗಟ್ಟಲು ಮೌಖಿಕ ಪರಂಪರೆಯಲ್ಲಿ ತಾಕತ್ತು ಉಳಿದಿಲ್ಲ.

ಜನಪದ ಕಲೆಗಳ ಪ್ರದರ್ಶನಗಳು ಕೆಲಸ ಮತ್ತು ಸಂಭ್ರಮದ ಸಂಸ್ಕೃತಿಯ ಆಚರಣೆಗಳೊಂದಿಗೆ ನಡೆಯುವಂತಹವು. ಜನಪದರ ಈ ಕೆಲಸಗಳು, ಈ ಸಾಂಸ್ಕೃತಿಕ ಆಚರಣೆಗಳು–ನಿಸರ್ಗದ ಮಡಿಲಲ್ಲೆ ನಡೆಯುವಂಥವುಗಳು. ಅದಕ್ಕಾಗಿ, ಮೌಖಿಕ ಪರಂಪರೆಯ ಹಾಡು, ಕುಣಿತಗಳೆಲ್ಲ ನಿಸರ್ಗಕ್ಕೂ ಬಾಯಿ ತೆರೆದುಕೊಂಡಿರುತ್ತವೆ. ನಿಸರ್ಗದ ಬದುಕಿನ ಪ್ರಕ್ರಿಯೆಯಲ್ಲೇ ಅವೆಲ್ಲ ಬಂದು ಹೋಗುತ್ತವೆ. ಲಿಖಿತ ಪರಂಪರೆಯ ಕಲೆಗಳೆಲ್ಲ ಬೆಳೆದುದು ಒಳಾಂಗಣದ ಕಲೆಗಳಾಗಿಯೇ. ಅಲ್ಲಿಯ ನಾಟಕವಾಗಿರಬಹುದು, ಬೇರಾವುದೇ ಕಲೆಯಾಗಿರಬಹುದು–ನೃತ್ಯ, ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪ ಇವೆಲ್ಲವುಗಳ ಸೃಷ್ಟಿ ಮತ್ತು ಪ್ರದರ್ಶನಗಳು ನಡೆಯುವುದು ಒಳಾಂಗಣದಲ್ಲಿಯೇ. ಇವತ್ತು ಸಮಾಜದಲ್ಲಿ ಬಹು ಮರ್ಯಾದೆ ಇರುವುದು ಒಳಾಂಗಣದ ಕಲೆಗೆ. ಮತ್ತೇ ಬೀದಿಯ ಮೆರವಣಿಗೆಯಂತಹ, ಬಯಲಿಗೆ ತೆರೆದು ನಡೆಯುವ ಸಂಭ್ರಮದಲ್ಲೇ ದೇಸೀ ಕಲೆಗಳಿಗೆ ಅವಕಾಶವಾಗಿರುತ್ತದೆ. ಶಿಷ್ಟದ ಪ್ರಭಾವ ಈಗ ದಿನೇ ದಿನೇ ವ್ಯಾಪಕವಾಗುತ್ತಿದೆ. ಅಂತಲ್ಲೇ ಮದುವೆ, ಸೋಬಾನಗಳೆಲ್ಲ ತೆರೆದ ಅಂಗಳದಿಂದ, ರಂಗಮಂದಿರದ ಒಳಗೆ ಪಾದಾರ್ಪಣೆ ಮಾಡಿವೆ. ಆಧುನಿಕ ಶಿಕ್ಷಣಕ್ಕೆ ಒಳಪಟ್ಟ ಜನಪದ ಸಾಹಿತ್ಯ ಪಠ್ಯಗಳೆಲ್ಲವು ಅಕ್ಷರ ಮಾಧ್ಯಮ ಹುಟ್ಟು ಹಾಕಿದ ವರ್ಗಕೋಣೆಗಳನ್ನು ಸೇರಿವೆ. ಹೊಂದಿಕೊಂಡಿವೆ. ಹೀಗೆಯೇ ಬಯಲಿನಲ್ಲಿಯೇ ನಡೆಯುತ್ತಿದ್ದ ಜನಪದ ಬಯಲಾಟಗಳೆಲ್ಲ ಮುಚ್ಚಿದ ರಂಗಮಂದಿರಗಳನ್ನು ಸೇರಬೇಕಾದ ಬದಲಾವಣೆ ನಡೆದಿದೆ.

ವಿಜ್ಞಾನದ ಆಧುನಿಕ ವಿದ್ಯುನ್ಮಾನ ಕೊಡುಗೆಗಳಾದ ರೇಡಿಯೋ ಮತ್ತು ದೂರದರ್ಶನಗಳು ಸ್ವಭಾವತಃ ಮುಚ್ಚಿದ ಬಾಗಿಲಿನ ಅಂಗಣ ಹೊಂದಿದವುಗಳಾಗಿವೆ. ಆಕಾಶವಾಣಿಗಳು ಬಂದಾಗಿನಿಂದ ಜನಪದ ಕಲೆಗಳಿಗೆ ಅಷ್ಟಿಷ್ಟು ಪ್ರೋತ್ಸಾಹ ಕೊಡುವ ಉದ್ದೇಶವನ್ನು ಈ ಇಲೆಕ್ಟ್ರಾನಿಕ್ ಮಾಧ್ಯಮ ಹೊಂದಿದೆ. ಎಲ್ಲ ಕಲೆಗಳಂತೆ ಆಕಾಶವಾಣಿಯಲ್ಲಿ ಜನಪದ ಕಲಾವಿದರ ಧ್ವನಿಗಳನ್ನೂ ಆರ್ಭಟಗಳನ್ನೂ ಕೇಳುತ್ತಿದ್ದೇವೆ. ದೂರದರ್ಶನ ಬಂದ ನಂತರ ಕೇವಲ ನ್ಯಾಷನಲ್ ಚಾನಲ್‌ನವರು ಮಾತ್ರ ಅಷ್ಟಿಷ್ಟು ಜನಪದ ಕಲೆಗಳಿಗೆ ಪ್ರೋತ್ಸಾಹ ಕೊಡಲು ಮುಂದಾಗುತ್ತಿದ್ದು, ಉಳಿದ ಖಾಸಗಿ ಚಾನಲ್‌ನವರು ಈ ಬಗೆಗೆ ಯಾವ ಲಕ್ಷವನ್ನೂ ವಹಿಸಲಿಲ್ಲ. ಹೀಗೆ ಒಂದು ಬಗೆಯಲ್ಲಿ ಆಧುನಿಕ

ಶಿಕ್ಷಣ–ವಿಜ್ಞಾನ ಹುಟ್ಟುಹಾಕಿದ ಈ ಎರಡು ಪ್ರಭಾವಶಾಲಿ ಮಾಧ್ಯಮಗಳಿಂದ ಜನಪದ ಕಲೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹೊಡೆತ ಬಿದ್ದಿದೆ ಎಂಬ ಭಾವ ಸಾಮಾನ್ಯವಾಗಿ ತೋರುತ್ತಿದೆ. ಇದು ಒಂದಿಷ್ಟು ಸರಿ ಇರಬಹುದು. ಆದರೆ, ಮೂಲತಃ ಈ ಮಾಧ್ಯಮಗಳು ಈ ಕಲೆಗಳಿಗೆ ವಿರೋಧವೇನೂ ಆಗಿಲ್ಲ. ಈ ಮಾಧ್ಯಮಗಳನ್ನು ಬಳಸಿಕೊಂಡು ಜನಪದ ಕಲೆಗಳನ್ನು ಇನ್ನಷ್ಟು ಪ್ರಸಾರ ಮಾಡಬಹುದೇನೋ. ಆದರೆ, ಅಲ್ಲಿರುವ ಸಮಸ್ಯೆ ಇದಕ್ಕೂ ಭಿನ್ನವಾಗಿದೆ.

ಜನಪದ ಸಾಹಿತ್ಯ ಮತ್ತು ಕಲೆಗಳ–ಹುಟ್ಟು, ಬಳಕೆ ಮತ್ತು ಬೆಳವಣಿಗೆಗಳೆಲ್ಲ ಆದುದು ಗ್ರಾಮಾಂತರ ಪ್ರದೇಶದಲ್ಲಿ. ಮೌಖಿಕ ಪರಂಪರೆಯನ್ನು ಬದುಕುತ್ತಿರುವವರ ನಡುವೆ. ಇವರಲ್ಲಿ ಬದಲಾವಣೆ ಎನ್ನುವುದು ನೈಸರ್ಗಿಕವಾದುದು. ಬದುಕಿನೊಂದಿಗೆ ಒಂದು ಸಂಗತಿ ಬೆಳೆದು ಬಂದಿತೆಂದರೆ ಅದು ಅವರ ಸಂಸ್ಕೃತಿಯ ಒಂದು ಭಾಗವಾಗಿ ಹೋಗುತ್ತದೆ. ಹೀಗೆ ಅದರ ಬಳಕೆಯ ಒಂದು ಪರಂಪರೆಯೇ ನಿರ್ಮಾಣವಾಗುತ್ತದೆ. ಹೀಗೆ ಬಹುದಿನಗಳವರೆಗೆ ಅವರೊಂದಿಗೆ ಉಳಿದು, ಬದುಕಿನ ಭಾಗವಾಗುವ ಕಲೆ ಸಾಹಿತ್ಯಗಳು ಕೂಡ ತಮ್ಮಿಂದ ದೂರ ಸರಿಯುವಾಗ ಅವುಗಳ ಬಗೆಗೆ ಒಂದು ರೀತಿಯ ಅಗಲಿಕೆಯ ನೋವನ್ನು ಅಲ್ಲಿ ಕಾಣಬಹುದಾಗಿದೆ. ಅವು ನಮ್ಮನ್ನು ಬಿಟ್ಟು ಹೋಗುತ್ತಿರುವ ಸಂದರ್ಭದಲ್ಲಿ ಅದರ ನೋವನ್ನು ಅನುಭವಿಸುತ್ತಿರುವವರು ಹಳ್ಳಿಯಲ್ಲಿ ಹುಟ್ಟಿ ಅವುಗಳೊಂದಿಗೆ ಬದುಕಿದವರು ಎಂದು ತೋರುತ್ತದೆ. ಈ ವಿಚಾರ ಸಂಕಿರಣವನ್ನು ಆಯೋಜಿಸಿದವರು ಮತ್ತು ಭಾಗವಹಿಸಿದವರು ಅಂತಹ ಪರಿಸರದಿಂದಲೇ ಬಂದವರು ಎಂಬುದು ಗಮನಾರ್ಹ ಸಂಗತಿ. ಇನ್ನೊಂದು ತಲೆ ದಾಟಿದರೆ, ನಗರವಾಸಿಗಳಾಗಿ ಹೋಗುವ ತಲೆಮಾರುಗಳಲ್ಲಿ ಇಂತಹ ಕಳೆದುಕೊಳ್ಳುವ ನೋವು ಕಾಣಿಸಲು ಸಾಧ್ಯವಿಲ್ಲ ಎನಿಸುತ್ತದೆ.

ಕರ್ನಾಟಕ ಒಳಗೊಂಡಂತೆ ಭಾರತೀಯ ದೃಶ್ಯಕಲೆ ಹಳೆಯ–ಹೊಸದರ ಘರ್ಷಣೆಯೊಂದಿಗೆ ಮಾಡಿದ ಚಿಗುರು, ಚಿಂತನಗಳು ಇನ್ನೊಂದು ಕಡೆ. ಒಟ್ಟಿನಲ್ಲಿ ಚಿತ್ರಕಲೆ ಯಾವುದೇ ಸ್ವರೂಪದಲ್ಲಿರಲಿ ಅದು ಕಲ್ಪನೆಯ ಮತ್ತು ವಾಸ್ತವಾಂಶದ ಅಂಶವನ್ನು ಮಾದರಿಯಾಗಿಟ್ಟುಕೊಂಡಿರುತ್ತದೆ. ನಾವು ಇಂದು ಜಾಗತೀಕರಣವೆಂಬ ಮಾಯಾಲೋಕದ ಕಾಲಘಟ್ಟದಲ್ಲಿ ಜೀವಿಸುತ್ತಿದ್ದೇವೆ. ಕಲಾವಿದನ ಮನಸ್ಸಿನೊಳಗೆ ಬರುವ ಆಲೋಚನೆಗಳಲ್ಲಿ ಕಾರ್ಯರೂಪಕ್ಕಿಳಿಸುವ ಕಲಾಕೃತಿ ದೃಶ್ಯಕಲೆ. ದೃಶ್ಯಕಲೆಯ ವಿವಿಧ ಶಾಖೆ ಜನಪದ ಕಲೆ, ಚಿತ್ರಕಲೆ, ಶಿಲ್ಪಕಲೆ, ಅನ್ವಯಿಕ ಕಲೆ, ಛಾಯಾಚಿತ್ರ ಕಲೆ, ಮುದ್ರಣ ಕಲೆ, ಆಕಾಶವಾಣಿ, ದೂರದರ್ಶನ, ಚಲನಚಿತ್ರ, ಕಿರುತೆರೆ, ಕಂಪ್ಯೂಟರ್ ಗ್ರಾಫಿಕ್ಸ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಹೀಗೆ ಒಂದಕ್ಕಿಂತ ಒಂದು ಕಲಾಆಸ್ವಾದಕರಲ್ಲಿ ವಿಸ್ಮಯ ಮೂಡಿಸಿ ಅವುಗಳನ್ನು ಆಯ್ಕೆ ಮಾಡಿಕೊಂಡು ಕಲಿಯುವ ಬಯಕೆಯನ್ನು ಮೂಡಿಸುತ್ತಿವೆ.

ಇಂದಿನ ಕಾಲಘಟ್ಟದಲ್ಲಿ ತಮ್ಮಲ್ಲಿರುವ ಕುಂದುಕೊರತೆಗಳನ್ನು ತಿಳಿದು ಮತ್ತೊಂದರಲ್ಲಿ ಸುಧಾರಿಸಿಕೊಂಡು ಬಯಕೆಗಳನ್ನು ನೀಗಿಸಿಕೊಳ್ಳುವ ಆಧುನಿಕ ಕಾಲಘಟ್ಟದಲ್ಲಿ ಇಂದಿನ ಪೀಳಿಗೆಯವರು ಜೀವಿಸುತ್ತಿದ್ದಾರೆ. ನಮಗೆ ಗೊತ್ತಿಲ್ಲದ ಎಷ್ಟೆಲ್ಲ ಪ್ರಯೋಗಗಳು ಕ್ಷಣಾರ್ಧದಲ್ಲಿ ತಂತ್ರಜ್ಞಾನದ ಮೂಲಕ ನಡೆಯುತ್ತದೆ. ಇಂದಿನ ಯುವಕರು ತಂತ್ರಜ್ಞಾನವನ್ನು ಬದುಕಿನ ಎಲ್ಲಾ ಸ್ತರಗಳಲ್ಲಿಯೂ ಬಳಸಿಕೊಳ್ಳುತ್ತಿದ್ದಾರೆ. ಇವೆಲ್ಲವೂ ಸಾಧ್ಯವಾದದ್ದು ಜಾಗತೀಕರಣದ ಪರಿಕಲ್ಪನೆಯಿಂದ. ಈ ಪರಿಕಲ್ಪನೆಯನ್ನು ನೀಡಿದ ಮಹಾನುಭಾವ ಅಮೆರಿಕಾದ ಸಮಾಜ ವಿಜ್ಞಾನಿ ಮಾರ್ಸಲ್ ಮ್ಲೋಹನ್ "೧೯೬೦ರಲ್ಲಿ ಏಕ್ಸ್‌ಪ್ಲೋರೆಷನ್ ಇನ್ ಕಮ್ಯೂನಿಕೇಷನ್ ಎಂಬ ಗ್ರಂಥದಲ್ಲಿ ಮೊದಲ ಬಾರಿಗೆ 'Golbal Village' ಎಂಬ ಪದವನ್ನು ಬಳಸಿ ವಿವರಿಸಿದ ಮಾಹಿತಿ ತಂತ್ರಜ್ಞಾನದ ವೇಗ ಮತ್ತು ಅದರ ಸಂಪರ್ಕ ಶಕ್ತಿಯ ಹಿನ್ನಲೆಯಲ್ಲಿ ಜಗತ್ತಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೇಗೆಲ್ಲ ಸಮೀಪ ಸಾಧ್ಯವಾಗುತ್ತದೆ ಎಂಬ ಹಿನ್ನಲೆಯಲ್ಲಿ ಚರ್ಚಿಸಿದ ಜೊತೆಗೆ ಸಮೂಹ ಮಾಧ್ಯಮಗಳ ಸೇತುವೆಯೂ ಅದಾಗಲೇ ಜಗತ್ತಿಗೆ ನಿಕಟ ಸಂಬಂಧವನ್ನು ತಂದಿತ್ತು. ಮಾರ್ಸಲ್ ಮ್ಲೋಹನ್ ಮುಖ್ಯವಾಗಿ ಇಡೀ ಜಗತ್ತೇ ಒಂದು ವಿಶಾಲವಾದ ಹಳ್ಳಿ ಎಂದು ಕರೆಯುವ ಮೂಲಕ ಜಗತ್ತಿನ ಎಲ್ಲಾ ಮಾನವ ಸಂಪರ್ಕಗಳೂ ಅರ್ಥಪೂರ್ಣವಾಗಿ ವಿಕಾಸವಾಗುವುದರ ಅಗತ್ಯವನ್ನು ಪ್ರತಿಪಾದಿಸಿದೆ"[೨] ಎಂದು ಡಾ. ಮೊಗಳ್ಳಿ ಗಣೇಶ್‌ರವರ ಪ್ರತಿಪಾದನೆಯಾಗಿದೆ.

ಒಟ್ಟಾರೆ ಜಾಗತೀಕರಣ ಎನ್ನುವುದು ವಿಶ್ವ ಆರ್ಥಿಕ, ವಿಶ್ವ ರಾಜಕೀಯ ಸಂಪರ್ಕದಿಂದ ಹಳೆಯ ಜಗತ್ತಿನ ಹಿಂದುಳಿದ ಸಮುದಾಯಗಳ ಜೊತೆಗೆ ರೂಪಿಸಿಕೊಳ್ಳುತ್ತಿರುವ ಆಧುನಿಕ ಸಾಂಸ್ಕೃತಿಕ ರೂಪಾಂತರಗಳ ವಿಕಾಸವಾಗಿದೆ. ವಿಶ್ವ ಆರ್ಥಿಕ ಏಕೀಕರಣದ ಇದರ ಅಂತರಂಗದಲ್ಲಿ ತೃತೀಯ ಜಗತ್ತಿನ ಮೇಲೆ ಹಿಡಿತ ಸಾಧಿಸುವ ಆಕಾಂಕ್ಷೆಗಳಿದ್ದೂ ಅಂತದ್ದನ್ನು ಸಮರ್ಥವಾಗಿ ಎದುರಿಸುವ ಹಿಂದುಳಿದ ದೇಶಗಳು ಈ ಶತಮಾನದ ಕೊನೆಯಲ್ಲಿ ಪ್ರಯತ್ನಿಸುತ್ತಿರುವುದೂ ಇದೆ. ವ್ಯಾಪಾರ ವಹಿವಾಟುಗಳಿಗೆ ದೇಶ-ವಿದೇಶಗಳ ಗಡಿಗಳನ್ನು ಮೀರಿ ಇಡೀ ಜಗತ್ತನ್ನೇ ಏಕಘಟಕವಾಗಿ ಪರಿಗಣಿಸುವ ಜಾಗತೀಕರಣ ಪರಿಕಲ್ಪನೆಯು ನಮ್ಮ ಭಾರತದಲ್ಲಿ ೧೯೯೧ರಲ್ಲಿ ನೂತನ ಆರ್ಥಿಕ ನೀತಿಯ ಮೂಲಕ ಪಾದಾರ್ಪಣೆ ಮಾಡಿತು. ಆವರೆಗೆ ಸರ್ಕಾರಿ ಸ್ವಾಮ್ಯದಲ್ಲಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು, ಸೇವಾಕ್ಷೇತ್ರದ ಉದ್ದಿಮೆಗಳು ಎಲ್ಲವೂ ಖಾಸಗೀಕರಣದ ಪ್ರಕ್ರಿಯೆಗೆ ತುತ್ತಾಗಲಾರಂಭಿಸಿತು. ವಿದೇಶಿ ವಿನಿಮಯ ಹೂಡಿಕೆಗೆ ಇದ್ದ ಎಲ್ಲಾ ಬಿಗಿಯಾದ ನಿಯಮಗಳು ಸಡಿಲಗೊಂಡವು. ನೋಡ ನೋಡುತ್ತಲೇ ಕೆಲವೇ ವರ್ಷಗಳಲ್ಲಿ ಸರ್ಕಾರಿ ಸ್ವಾಮ್ಯದಲ್ಲೇ ನಡೆಯುತ್ತಾ ಬಂದಿದ್ದ ಅನೇಕ ಸಂಘ-ಸಂಸ್ಥೆಗಳು ನಷ್ಟ ಘೋಷಿಸಲಾರಂಭಿಸಿದವು. ಅದೇ ಹೊತ್ತಲ್ಲಿ ಅನೇಕ ವಿದೇಶಿ ಸಂಸ್ಥೆಗಳು ಮುಖ್ಯವಾಗಿ ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ಲಗ್ಗೆ ಇಡಲಾರಂಭಿಸಿದವು. ಜಾಗತೀಕರಣದ

ಮೂರು ಮುಖ್ಯ ಅಂಶಗಳಾದ ೧. ಉದಾರೀಕರಣ ೨. ಖಾಸಗೀಕರಣ ೩. ಗೋಳಿಕರಣ ಪ್ರಕ್ರಿಯೆಗಳು ಶರವೇಗ ಪಡೆದವು. ಇದರಿಂದಾಗಿ "ಈ ನಾಡಿನಲ್ಲಿ ಶತಮಾನಗಳಿಂದ ಬೆಳೆದುಬಂದ ವಿದೇಶಿ ತಂತ್ರಜ್ಞಾನ, ಜನರಲ್ಲಿ ಬೇರುಬಿಟ್ಟ ಗ್ರಾಮ್ಯ ಬದುಕು... ಎಲ್ಲಾ ಮಂಗಮಾಯವಾಗಿ ಇಂದು ಸರ್ಕಾರ ವಿದೇಶಿ ಬಂಡವಾಳಗಾರರನ್ನು ಆಹ್ವಾನಿಸಿದೆ. ಹಾಗಾಗಿ ವಿದೇಶಿ ಸರಕುಗಳಾದ ಪೆಪ್ಸಿ, ಕೋಕೋಕೋಲಾ... ಮುಂತಾದವುಗಳನ್ನು ಇಂದು ಎಲ್ಲಾ ಗ್ರಾಮಗಳಲ್ಲೂ ಕಾಣಬಹುದಾಗಿದೆ. ಕೊಳ್ಳಬಹುದಾಗಿದೆ. ಕೊಂಡು ಕುಡಿದು ಕ್ಷಣ ತೃಪ್ತಿಪಡಬಹುದಾಗಿದೆ ! ಇದನ್ನು ತೆರೆದ ಬಾಗಿಲು ಆರ್ಥಿಕ ವ್ಯವಸ್ಥೆ ಎನ್ನುವುದು."[೩] ಎನ್ನುತ್ತಾರೆ ಡಾ. ಡೋಮಿನಿಕ್ ಅವರು. ಜಾಗತೀಕಣರವೆನ್ನುವುದು ಕೇವಲ ವ್ಯಾಪಾರ ಹಣಕಾಸು ವಿಷಯಗಳಿಗೆ ಸಿಮೀತವಾಗಿರದೆ ಬದುಕಿನ ಪ್ರತಿಯೊಂದು ರಂಗಕ್ಕೂ ತನ್ನ ಯಜಮಾನಿಕೆಯನ್ನು ವಿಸ್ತರಿಸಿಕೊಂಡಿದೆ.

ಸುದ್ಧಿ ಮನರಂಜನೆ ಎಂಬುದು ತಿಳಿವಿನ ಸಂಸ್ಕೃತಿಯ ಭಾಗವಾಗುವ ಬದಲು ಮಾರಾಟದ ಸರಕಾಯಿತು. ಲಾಭಗಳಿಸುವ ವಸ್ತುವಾಯಿತು. ಮಾತ್ರವಲ್ಲದೇ ಭಾರತದಾದ್ಯಂತ ಒಂದು ಏಕರೂಪಿ ಸಾಂಸ್ಕೃತಿಕ ಹೇರಿಕೆ ಪ್ರಕ್ರಿಯೆ ಆರಂಭವಾಯಿತು. ಇಂದು ಪ್ರತಿಹಳ್ಳಿಯ ಯುವಕ-ಯುವತಿಯರಿಗೂ ದೃಶ್ಯಮಾಧ್ಯಮದ ಗುಂಗು ಹತ್ತಿದೆ. ಅವುಗಳ ಕಾರ್ಯಕ್ರಮಗಳು ಹೇಗೆ ಜನವಿರೋಧಿಯಾಗಿವೆ. ಹೇಗೆ ಮೌಢ್ಯ ಆಚರಣೆಗಳ ಮಹಾಪೋಷಕವಾಗಿವೆ. ಹೇಗೆ ಅಪರಾಧಿಗಳ ಸಂಖ್ಯೆಯನ್ನು, ಕ್ರೌರ್ಯವನ್ನು, ಲೈಂಗಿಕ ಅಪರಾಧಗಳನ್ನು ಉತ್ತೇಜಿಸುತ್ತಿವೆ ಎಂಬುದು ಯಾರಿಗೂ ತಿಳಿಯದಾಗಿದೆ. ಇತ್ತೀಚೆಗೆ ಹೆಚ್ಚುತ್ತಿರುವ ನ್ಯೂಸ್ ಚಾನೆಲ್‌ಗಳಂತೂ ತಾವೇ ಸುದ್ದಿಯ ಸೃಷ್ಟಿಕರ್ತರಾಗಿ, ವಿವಾದಗಳ ವಿಶ್ಲೇಷಕರಾಗಿ, ಕೊನೆಗೆ ತೀರ್ಪು ನೋಡುವ ನ್ಯಾಯಾಧೀಶರು ತಾವೇ ಆಗುತ್ತಿರುವುದು ಜಾಗತೀಕರಣವು ಮಾಧ್ಯಮ ಕ್ಷೇತ್ರಕ್ಕೆ ನೀಡಿರುವ ನವನವೀನ ಕೊಡಗೆಯೇ ಆಗಿದೆ. ಜೀವನೋತ್ಸಾಹದ ಜೀವಪರ ದೃಷ್ಟಿ ಇಲ್ಲದಿರುವುದರಿಂದ ಮನುಷ್ಯನಲ್ಲಿ ಜೀವನೋತ್ಸಾಹ ಕಡಿಮೆಯಾಗಿದೆ. ಕೃಷಿ ಕ್ಷೇತ್ರವು ಇಂದು ತಾತ್ಸರಕ್ಕೊಳಗಾಗುವುದರಿಂದ ಅದರ ಭಾಗವಾದ ಕೆಲ ಪ್ರಕಾರಗಳು ನಾಶವಾಗುತ್ತಿವೆ. ಸುಗ್ಗಿಕುಣಿತ, ಹಂತಿಪದ, ಕೋಲಾಟ, ಡೊಳ್ಳು ಕುಣಿತ, ದೊಡ್ಡಾಟ, ಯಕ್ಷಗಾನ ಮುಂತಾದ ಕಲೆಗಳೆಲ್ಲಾ ಶಿಥಿಲಗೊಳ್ಳುತ್ತಿವೆ. ಕಲೆಗಳು ವ್ಯಾಪಾರೀಕರಣಗೊಂಡು ಯಾಂತ್ರೀಕರಣವಾಗತೊಡಗಿವೆ.

"ಸಾಹಿತ್ಯದಲ್ಲಿ ದೇಶಿ ಎಂಬುದನ್ನು ಹಳ್ಳಿಗಾಡಿನ ಜ್ಞಾನ ಅಥವಾ ಪಾರಂಪರಿಕ ದ್ರಾವಿಡ ಮೂಲ ವಿಚಾರ ಇಲ್ಲವೇ ಜಾನಪದ ಪ್ರತಿಭೆಯ ಪರಂಪರೆ ಎಂದು ವ್ಯಾಖ್ಯಾನಿಸಲು ಸಾಧ್ಯವಿದೆ. ಹೀಗೆ ಗುರುತಿಸಿದರೆ ಅದು ತಂತಾನೆ ಒಂದು ಬಗೆಯಲ್ಲಿ ವೈದಿಕ ಇಲ್ಲವೇ

ಆಧುನಿಕ ವಿಚಾರ ಪರಂಪರೆಗೆ ವಿರುದ್ಧವಾದ ಜ್ಞಾನ ಎಂಬ ವರ್ಗೀಕರಣವನ್ನು ಮಾಡಿದಂತೆಯೇ ಆಗುತ್ತದೆ. ಇಲ್ಲಿ ಆ ಬಗೆಯ ವಿಭಜನೆಗೆ ತೊಡಗುತ್ತಿಲ್ಲ. ಒಟ್ಟು ನಮ್ಮ ಪರಂಪರೆಯ ಎಲ್ಲಾ ಪ್ರಾದೇಶಿಕ ಸಂಸ್ಕೃತಿಗಳ ವಿವೇಕದ ಸಾರವನ್ನು ದೇಶಿ ಎಂದು ಬಯಸುತ್ತೇವೆ. ವಿವಿಧ ಸಾಂಸ್ಕೃತಿಕ ಅನನ್ಯತೆಗಳ ಸಂಯೋಗವೇ ನಿಜವಾದ ದೇಶಿಕರಣ. ಇಂತಹ ದೇಶಿಯೊಳಗೆ ಜಾತಿ ಧರ್ಮ ಭಾಷೆ ಮತ್ತು ಭಾವಲೋಕದ ಅಪವಿತ್ರ್ಯತೆ ಇರುವುದಿಲ್ಲ. ಈ ಬಗೆಯ ಸಾಂಸ್ಕೃತಿಕ ಸಂಯೋಗ ಭಾರತೀಯ ಪರಂಪರೆಯ ಉದ್ದಕ್ಕೂ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಇಲ್ಲದಿದ್ದರೆ ಈ ಬಹುಬಗೆಯ ಸಾಂಸ್ಕೃತಿಕ ಸ್ಥಿತ್ಯಂತರಗಳು ನಮ್ಮಲ್ಲಿ ಘಟಿಸುತ್ತಲೇ ಇರಲಿಲ್ಲ. ಹೀಗೆ ಬಹುರೂಪಿ ಸಾಂಸ್ಕೃತಿಕ ಅನನ್ಯತೆಗಳ ವಿಕಾಸದಲ್ಲಿಯೇ ಜಗತ್ತಿನ ಸಂಬಂಧಗಳು ಪ್ರಾದೇಶಿಕ ಸಂಸ್ಕೃತಿಗಳಿಗೆ ಸಾಧ್ಯವಾಗಿದೆ. ವೈದಿಕ ಪರಂಪರೆಯ ಜೊತೆ ಮುಖಾಮುಖಿಯಾದ ಪ್ರಾದೇಶಿಕ ಪರಂಪರೆಗಳು ಬಹು ಹಿಂದಿನಿಂದಲೂ ದೇಶಿಕರಣಗಳಲ್ಲಿ ತೊಡಗಿವೆ. ಇದು ನೆನ್ನೆ ಮೊನ್ನೆ ಹುಟ್ಟಿಕೊಂಡದ್ದಲ್ಲ – ವೇದ ಮತ್ತು ಜಾನಪದಗಳೆರಡೂ ಮುಖಾಮುಖಿಯಾದಲೆಲ್ಲಾ ಇದು ಬೆಳೆದಿದೆ. ಅಂದರೆ ದೇಶೀಕರಣದ ಬೇರುಗಳು ಪರಂಪರೆಯು ಆಳದಿಂದ ಬಂದಿವೆ"[೪]

ದೃಶ್ಯ ಮಾಧ್ಯಮಗಳ ಸೆಳೆತ, ಹೊಸ ತಲೆಮಾರಿನ ಸಿನಿಮಾಗಳ ಆಕರ್ಷಣೆ, ಅಂತರ್ಜಾಲದ ಮೋಜು, ಸ್ಮಾರ್ಟ್ ಫೋನ್‌ಗಳ ಬಳಕೆ ಅವರನ್ನು ಭ್ರಮಾಲೋಕದ ಉತ್ತುಂಗದಲ್ಲಿ ನಿಲ್ಲಿಸಿವೆ. ವಾಸ್ತವ ಹೀಗಿರುವಾಗ ದೇಸಿ ಸಂಸ್ಕೃತಿ, ದೇಸಿ ಕಲೆಗಳು, ದೇಸಿ ಜೀವನ ಕ್ರಮಗಳು ದೇಸಿ ಆಹಾರ ಪದ್ಧತಿ, ದೇಸಿ ಉಡುಗೆ-ತೊಡುಗೆಗಳು ಜಾಗತೀಕರಣದ ಅಬ್ಬರದಲ್ಲಿ ಮಸುಕಾಗತೊಡಗಿವೆ. ಅದನ್ನು ಶ್ರದ್ಧೆಯಿಂದ, ಜತನದಿಂದ ಕಾಪಾಡುವವರಲ್ಲಿ ಅಸಾಧ್ಯ ಕೀಳಿರಿಮೆಯನ್ನು ಸೃಷ್ಟಿಸುತ್ತಿದೆ. "ದೇಶಿಯತೆಗೆ ಬೆಲೆ ಇಲ್ಲದೆ ಸಾಗಿ, ಜಾಗತೀಕರಂದೊಂದಿಗೆ ಸ್ಪರ್ಧೆ ಮಾಡಲು ಸಾಧ್ಯವಾಗದೆ ಸೋತು ಬಡವಾದ ಜನಪದರ ಬದುಕು ಬರಿದಾಗುತ್ತಾ ಸಾಗಿದೆ. ಜಾಗತೀಕರಣ ಅಂತರ್ಕರಣವಿಲ್ಲ. ಅದಕ್ಕೆ ಸ್ಪರ್ಧೆ ಮುಖ್ಯ ಲಾಭ ಮುಖ್ಯ"[೫]

ಜಾಗತೀಕರಣದಲ್ಲಿ ತುಂಬಾ ಉಪೇಕ್ಷೆಗೆ ಒಳಪಟ್ಟದ್ದು ಕೃಷಿ ಕ್ಷೇತ್ರ ಇಂದು ಕೃಷಿಯಾಧಾರಿತ ಭೂಮಿಗಳೆಲ್ಲಾ ಮಲ್ಟಿಸ್ಟೋರ್ ಬಿಲ್ಡಿಂಗ್, ಅಪಾರ್ಟ್‌ಮೆಂಟ್‌ಗಳಾಗಿ ರೂಪುತಳೆಯುತ್ತಿವೆ. ಹಳ್ಳಿಯ ಜನರು ನಗರ, ಪೇಟೆಗಳತ್ತ ಮುಖ ಮಾಡುತ್ತಿದ್ದಾರೆ. ಜನಪದ ಕಲೆಗಳು, ಶ್ರಮಸಂಸ್ಕೃತಿಯ ಭಾಗವಾಗಿರುವುದರಿಂದ ಕಾಯಕದೊಂದಿಗೆ ಸಾಹಿತ್ಯ ಸೃಷ್ಟಿಯಾಗುತ್ತಿತ್ತು. ಕೃಷಿ ಸಮೃದ್ಧವಾಗಿದ್ದ ಸಂದರ್ಭದಲ್ಲಿ ಜಾನಪದವೂ ಅಷ್ಟೇ ಸಮೃದ್ಧವಾಗಿತ್ತು. ಹಂತಿಪದ, ಕೋಲಾಟ, ಸುಗ್ಗಿಕುಣಿತ, ಡೊಳ್ಳು, ಜಾತ್ರೆ, ಉತ್ಸವ ಇವೆಲ್ಲವೂ ಇಂದು ಮರೀಚಿಕೆಯಾಗಿದೆ. ಆಧುನಿಕತೆ ಬೆಳೆದು ತಂತ್ರಜ್ಞಾನ ದಿನೇದಿನೇ

ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ ಮನುಷ್ಯ ಕೂಡ ಸರಕಾಗಿ ಬಿಟ್ಟ, ಮನುಷ್ಯನ ದುಡಿಮೆಯ ಜಾಗದಲ್ಲಿ ಯಂತ್ರಗಳ ದುಡಿಮೆ ಆರಂಭವಾಯಿತು. ಯಂತ್ರಗಳಿಗೆ ಮನುಷ್ಯನಿಗಿರುವಂತಹ ಮೆದುಳು ಮತ್ತು ಮನಸ್ಸು ಎರಡೂ ಇಲ್ಲದಿರುವ ಪ್ರಯುಕ್ತ ದುಡಿಮೆಯ ಜೊತೆ ಅಂತರ್ ಸಂಬಂಧ ಹೊಂದಿದ ಜನಪದ ಸಾಹಿತ್ಯ ಸೃಷ್ಟಿ ಕ್ರಿಯೆನಿಂತತಾಯಿತು.

ಭಾರತದ ಬೆನ್ನೆಲುಬಾಗಿದ್ದ ಹಳ್ಳಿಗಳು ಇವತ್ತು ಬೆನ್ನೆಲುಬನ್ನು ಕಳೆದು ಕೊಂಡಿದೆ. ಹಿಂದಿನಷ್ಟು ಸಮೃದ್ಧತೆ ಇಂದು ಹಳ್ಳಿಗಳಲ್ಲಿ ಕಾಣುತ್ತಿಲ್ಲ. ಹಳ್ಳಿಯ ಜನ ತಮ್ಮ ತಮ್ಮ ಅಭಿವೃದ್ಧಿಗಾಗಿ ನಗರದತ್ತ ಧಾವಿಸುತ್ತಿದ್ದಾರೆ. ರೈತನ ಏಕದೃಷ್ಟಿ ಮತ್ತು ಸಹನೆಗೆ ಕಾರಣವಾಗಿದ್ದ ವೃತ್ತಿಗಾಯಕರು ಇಲ್ಲವಾಗಿದ್ದಾರೆ. ಗ್ರಾಮ ಕಥನಕಾರರು ಕಣ್ಮರೆಯಾಗಿದ್ದಾರೆ. ನಾಟಕಗಳು, ಹರಿಕಥೆಗಳು, ಭಜನೆಗಳು ಮುಂತಾದವು ಜನರನ್ನು ಹಿಂದಿನಂತೆ ಆಕರ್ಷಿಸುತ್ತಿಲ್ಲ. ಕೈಗಾರೀಕರಣ, ಗಣಿಗಾರಿಕೆ, ವಿಮಾನ ನಿಲ್ದಾಣ, ಭೂಮಿಯ ಕಬಳಿಕೆ ಮುಂತಾದ ಕಾರಣಗಳಿಂದ ಭೂಮಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳನ್ನು ಹಳ್ಳಿಯ ರೈತರು ಅನುಭವಿಸಬೇಕಾಗಿದೆ. ಸೃಷ್ಟಿಕ್ರಿಯೆಗೆ ಆಪತ್ತು ಬಂದರೆ ಜೀವನ ಪುಷ್ಟಿಯಾದರೂ ಹೇಗಾದೀತು?

"ಸೃಷ್ಟಿಕ್ರಿಯೆ ಎಂಬುದೂ ಕೂಡ ಬದಲಾದ ಸನ್ನಿವೇಶಗಳನ್ನು ಅವಲಂಬಿಸಿಯೇ ನಡೆಯುವುಂಥದ್ದು ಬದಲಾದ ಇತಿಹಾಸ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಶ್ರದ್ಧೆಗಳಿಗನುಗುಣವಾಗಿ ನಡೆಯುವಂಥ ಒಂದು ಪ್ರಕ್ರಿಯೆ"[೬] ಉದಾರೀಕರಣ–ಖಾಸಗೀಕರಣ–ಜಾಗತೀಕರಣ, ಆಧುನಿಕರಣದಲ್ಲಿ ಪ್ರಪಂಚ ಇಂದು ಚಿಕ್ಕದಾಗಿದೆ. ಅಂದು ಬಹುದೂರವಿದ್ದ ಅಮೆರಿಕಾ, ಇಂಗ್ಲೆಂಡ್, ಜಪಾನ್ ಇಂದು ಬಹಳ ಹತ್ತಿರವಾಗಿದೆ. ಇಡೀ ಪ್ರಪಂಚವೇ ಒಂದು ಪುಟ್ಟ ಗ್ರಾಮವಾಗಿದೆ. ಇವುಗಳೆಲ್ಲವುಗಳಿಂದಲೂ ತೀರಾ ತೊಂದರೆಗೆ ಒಳಗಾದವರು ಗ್ರಾಮವಾಸಿಗಳು. ಜಾಗತೀಕರಣದ ಕರಾಳ ಛಾಯೆಯಿಂದ ಜನಪದರ ಬದುಕು ಬಡವಾಗುತ್ತಿವೆ ಮತ್ತು ಜನಪದರ ಜೀವನಶೈಲಿ ಅದಲು–ಬದಲಾಗಿದೆ.

ಜಾಗತೀಕರಣದ ಸಂದರ್ಭದಲ್ಲಿ ಹಳ್ಳಿಗಳು ಹಳ್ಳಿಯಾಗಿ ಉಳಿದಿಲ್ಲ. ನಗರಗಳು ನಗರಗಳಾಗಿ ಉಳಿದಿಲ್ಲ. ಅನೇಕ ಆಧುನಿಕ ಜೀವನಶೈಲಿಯ ಸೌಲಭ್ಯಗಳು ಹಳ್ಳಿಗಳಿಗೆ ತಲುಪಿವೆ. ಇದರಿಂದ ಜನಪದರ ಜೀವನಶೈಲಿ ಬದಲಾಯಿತು. ರೈತರು ಹೈನುಗಾರಿಕೆಯನ್ನು ಮರೆತು ಪಾಕೆಟ್ ಹಾಲಿಗೆ ಆಕರ್ಷಿತರಾದರು. ಮಜ್ಜಿಗೆ, ಎಳನೀರು ಸೇವಿಸುತ್ತಿದ್ದ ಅವರು ಪೆಪ್ಸಿ, ಕೋಲಾಗಳ ಆಕರ್ಷಣೆಗೆ ಸಿಲುಕಿದರು. ಜಾಗತೀಕರಣದ ಪ್ರಭಾವದಿಂದ ವಿದೇಶಿ ಸಂಸ್ಕೃತಿಗೆ ಮಾರು ಹೋಗಿದ್ದಾರೆ. ಮಡಿಕೆ, ಕುಡಿಕೆ ಉಪಯೋಗಿಸುತ್ತಿದ್ದ ಅವರು ಪ್ಲಾಸ್ಟಿಕ್ ಸಂಸ್ಕೃತಿಗೆ ಮಾರುಹೋಗಿ ಜನಪದ ಬದುಕಿಗೆ ಪೆಟ್ಟು ಕೊಟ್ಟುಕೊಂಡಿದ್ದಾರೆ. "ಸಾಂಸ್ಕೃತಿಕ ಏಕೀಕರಣದಿಂದ ಆಯಾ ಸಮುದಾಯಗಳು ಚರಿತ್ರೆಯ ಅನುಭವದಿಂದ

ಮತ್ತಷ್ಟು ಪುನರ್ಸೃಷ್ಟಿಗೆ ಒಳಗಾಗುತ್ತಾ ಬಲಿಷ್ಠವಾಗುತ್ತವೆ. ಆ ಮಟ್ಟಿಗೆ ಸಾಂಸ್ಕೃತಿಕ ಜಾಗತೀಕರಣ ಪ್ರಕ್ರಿಯೆಯಲ್ಲಿ ಯಾರು ಕಳೆದು ಹೋಗುವುದಿಲ್ಲ. ಸಮಾಜಗಳು ಸಮುದಾಯಗಳು ಕಾಲದಿಂದ ಕಾಲಕ್ಕೆ ಸಾಣೆ ಹಿಡಿಸಿಕೊಳ್ಳಬೇಕಾಗಿರುತ್ತದೆ. ಎಲ್ಲವೂ ನಮ್ಮ ಹಳೆಯ ಜಗತ್ತಿನ ಸಾಂಸ್ಕೃತಿಕ ಪರಿಕರಗಳಿಂದಲೇ ಪರಿಹಾರವಾಗಲಾರವು."[೭]

ಕೇವಲ ತಂತ್ರಜ್ಞಾನದಿಂದ ಒಂದು ಹೊಸ ಮಾಧ್ಯಮ ಹುಟ್ಟುವುದಿಲ್ಲ. ಆಯಾ ಕ್ಷೇತ್ರದಲ್ಲಿ ಒಂದು ಹೊಸದಾರಿಯಲ್ಲಿ ಮೊದಲಿಗರಾಗಲು, ಅನ್ವೇಷಕ ಪ್ರವೃತ್ತಿ, ಸಾಹಸ ಮನೋಭಾವವಿರುವ ಕಲಾವಿದರು ಬೇಕಾಗುತ್ತಾರೆ. ಇಂತಹ ಸಂದರ್ಭದಲ್ಲಿ ಹೊಸ ಹೊಸ ಮಾಧ್ಯಮದ ಸಾಧ್ಯತೆಗಳನ್ನು ಮೊದಲು ಬಳಸಿಕೊಳ್ಳಬೇಕು. ಉದಾ: ರೇಡಿಯೋ ಮಾಧ್ಯಮ ಜನರನ್ನು ತಲುಪಲು ದೀರ್ಘ ಕಾಲಾವಧಿ ತೆಗೆದುಕೊಂಡರೆ, ದೂರದರ್ಶನ ಅದಕ್ಕಿಂತಲೂ ಅಲ್ಪ ಅವಧಿ ತೆಗೆದುಕೊಂಡಿತು. ಆದರೆ ಗಣಕಯಂತ್ರ, ಇಂಟರ್‌ನೆಟ್, ಸಾಮಾಜಿಕ ಮಾಧ್ಯಮ ಮುಂತಾದವುಗಳು ಅತೀ ಶೀಘ್ರವಾಗಿಯೇ ಜನರಿಗೆ ಲಭ್ಯವಾಯಿತು. ಹೊಸ ಮಾಧ್ಯಮಗಳು ಜಾಗತಿಕ ಸಂದರ್ಭದಲ್ಲಿ ಎಷ್ಟು ಬೇಗ ಹರಡಿದವು ಎನ್ನುವುದು ಇಂದು ನಾವು ಅನುಭವಿಸುತ್ತಿರುವ ಜೀವನ ಶೈಲಿಯೇ ಸಾಕ್ಷಿ.

ಮಾಧ್ಯಮ ಬದಲಾದಂತೆ ಕಲಾವಿದನ ಕಲ್ಪನೆ-ವಿಚಾರ, ಚಿಂತನ-ಮಂಥನ ಮುಂತಾದವುಗಳ ಸ್ವರೂಪ ಮತ್ತು ವ್ಯಾಪ್ತಿ ವಿಸ್ತಾರವಾಗುತ್ತಾ ಹೋಗುತ್ತದೆ. ಅನಾದಿಕಾಲದಿಂದ ರಾಮಾಯಣ ಮತ್ತು ಮಹಾಭಾರತ ಕಥೆ, ಕೀರ್ತನೆ, ಭಜನೆ, ಪದ್ಯ, ಗದ್ಯ ಪ್ರಕಾರಗಳ ಮೂಲಕ ಜನಸಮೂಹಕ್ಕೆ ತಿಳಿಸುತ್ತಿದ್ದರು. ಆದರೆ ಇದೇ ರಾಮಾಯಣ ಮತ್ತು ಮಹಾಭಾರತ ೧೯೮೭-೧೯೮೮ರಲ್ಲಿ ದೃಶ್ಯ ಮಾಧ್ಯಮದಲ್ಲಿ ದೂರದರ್ಶನ ಮುಖಾಂತರ ಪ್ರಸಾರವಾದಾಗ ಈ ಕಥೆಗಳ ವ್ಯಾಪ್ತಿ ಹೆಚ್ಚಿಸಿತ್ತು. ಈ ಸಂದರ್ಭದಲ್ಲಿ ದೃಶ್ಯಮಾಧ್ಯಮದ ದೂರದರ್ಶನ ಜನಪ್ರಿಯತೆಯನ್ನು ಹೆಚ್ಚತೊಡಗಿತ್ತು. ವಿಷಯದಿಂದ ಮಾಧ್ಯಮ-ಮಾಧ್ಯಮದಿಂದ ವಿಷಯ ಇಲ್ಲಿ ಎರಡು ಜನಪ್ರಿಯತೆ ಹಾಗೂ ಮಹತ್ವ ಪಡೆದುಕೊಂಡವು.

ಕಲಾವಿದನಿಗೆ ಭೌತಿಕವಾಗಿ ಸಿಗುವ ಕಲಾಪರಿಕರಗಳೆಂದರೆ ಪೆನ್ಸಿಲ್, ದಾರ, ಕುಂಚ, ಬಣ್ಣಗಳು ವಿವಿಧ ಮಾದರಿಯಲ್ಲಿ ಮೈವಳಿಕೆ [ಟೆಕ್ಸ್ಚರ್]ಗೆ ಬಳಸಲು ಉಪಯೋಗಿಸುವ ಕಚ್ಚಾ ವಸ್ತುಗಳು, ರಸಾಯನಿಕಗಳು, ನಾನಾ ಮಾಧ್ಯಮಗಳಾದ ಚಾರಕೋಲ್, ಕಲರ್ ಪೆನ್ಸಿಲ್, ಇಂಡಿಯನ್ ಇಂಕ್, ಕಲರ್ ಇಂಕ್, ಕಲರ್ ಪೌಡರ್ಸ್, ಪೋಸ್ಟರ್ ಬಣ್ಣಗಳು, ಜಲವರ್ಣ, ದಟ್ಟವರ್ಣಗಳು, ತೈಲವರ್ಣಗಳು ಹೀಗೆ ಮುಂತಾದ ಅನೇಕ ಪರಿಕರಗಳನ್ನು ಬಳಸಿದಾಗ ಕ್ಯಾನ್ವಸ್ ಮೇಲೆ ಅವನ ಕಲ್ಪನೆಗಳು ರೂಪಗೊಳ್ಳುತ್ತವೆ. ಜಗತ್ತು ಆಧುನೀಕರಣದ ಕಡೆಗೆ ವಾಲುತ್ತಿದ್ದಂತೆ, ನವೀಕರಣಗೊಂಡಂತೆ ಅಕ್ರೆಲಿಕ್ ಬಣ್ಣಗಳು ಇನ್ನು ಮುಂತಾದ ಹೊಸ ಹೊಸ ಮಾಧ್ಯಮ ಸರಳವಾಗಿ, ಸುಲಭವಾಗಿ ಲಭ್ಯವಾದವು. ಈ ಎಲ್ಲ

ಮಾಧ್ಯಮದ ಸಾಮಾಗ್ರಿಗಳನ್ನೊಳಗೊಂಡ, ಸಾಮರ್ಥ್ಯವನ್ನೊಳಗೊಂಡ ಬೃಹತ್ ಮಾಧ್ಯಮ ಒಂದು ಜಗತ್ತಿಗೆ ಪರಿಚಯವಾಯಿತು. ಇದುವೆ ಗಣಕಯಂತ್ರ ಈ ಪರಿಕರವು ಕಲಾವಿದನನ್ನು ಹಾಗೂ ಅವನ ವಿಚಾರಗಳನ್ನು ತನ್ನದೆಯಾದ ವಿಶಿಷ್ಟ ಶೈಲಿಯಲ್ಲಿ ರಚಿಸುವಂತೆ ಪ್ರೇರೇಪಿಸಿತು. ಎಲ್ಲಾ ಪರಿಕರಗಳನ್ನು ಈ ಗಣಕಯಂತ್ರದ ಸಾಫ್ಟ್‌ವೇರ್‌ನಲ್ಲಿ ಅಳವಡಿಸಿ ಕೀಬೋರ್ಡ್ ಮತ್ತು ಮೌಸ್‌ಗಳ ಸಹಾಯದಿಂದ ಒಂದೇ ಒಂದು ಬೆರಳತುದಿಯ ಸ್ಪರ್ಶಕ್ಕೆ ಸಿಗುವಂತೆ ಮಾಡಿತು. ಇದರಲ್ಲಿ ಬಹಳ ಸರಳವಾಗಿ ತಯಾರಿಸಬಹುದಾದಂತಹ ಅನೇಕ ಸಾಫ್ಟ್‌ವೇರ್‌ಗಳಿವೆ. ಉದಾಹರಣೆಗೆ ಫೋಟೋಶಾಪ್ ಎನ್ನುವ ಸಾಫ್ಟ್‌ವೇರನ್ನು ಬಳಸಿದಾಗ ಕಲಾಕೃತಿಯಲ್ಲಿ ಮೋಹಕ ಮಾಧ್ಯರ್ಯತೆಯನ್ನು ಇದರದ್ದೇ ಆದ ವಿಶಿಷ್ಟತೆಯಲ್ಲಿ ಮಾಡಬಹುದು. ಒಟ್ಟಾರೆ ಅತಿವೇಗವಾಗಿ, ಶೀಘ್ರವಾಗಿ ಮನಸ್ಸಿನಲ್ಲಿ ಕ್ಷಣಾರ್ಧದಲ್ಲಿ ಮೂಡುವ ಮನಸ್ಸಿನ ಭಾವನೆಗಳನ್ನು ಕಲ್ಪನೆಗಳನ್ನು ಅತ್ಯಂತ ವೇಗವಾಗಿ ಸೆರೆಹಿಡಿಯಬಹುದು, ಈ ಪರಿಕರವು ಕಲಾವಿದನಿಗೆ ಅನೇಕ ಬಗೆಯ ಅವಕಾಶಗಳನ್ನು ನೀಡಿತೆಂಬುದನ್ನು ಕಾಣುತ್ತೇವೆ. ಯಾವುದೇ ಬಗೆಯ ಕಲಾಚಟುವಟಿಕೆಗಳನ್ನು ಈ ಯಂತ್ರದಲ್ಲಿ ಹೊರಹೊಮ್ಮಿಸಬಹುದು ರೇಖೆ, ಚಿತ್ರ, ಶಬ್ಧ, ಚಲನಸ್ಥಿತಿಯ ಚಿತ್ರಗಳನ್ನು ಈ ಯಂತ್ರದಿಂದ ಕಲಾ ಪರಿಕರವಾಗಿ ಪರಿವರ್ತಿಸಿಕೊಂಡು ತಯಾರಿಸಬಹುದು. ಅನೇಕ ಸಂಪ್ರದಾಯಿಕ ಶೈಲಿಗಳನ್ನು ಇದರಲ್ಲಿ ಡಿಜಿಟಲ್ ತಾಂತ್ರಿಕತೆಯನ್ನು ನೀಡಿ ಉನ್ನತೀಕರಿಸಬಹುದು. 'ಗಣಕಯಂತ್ರದ ಕಲೆಯು ಪ್ರಕೃತಿಯಿಂದ ಉಂಟಾದ ವಿಕಾಸದಿಂದ ಬದಲಾವಣೆಯಾದ ತಂತ್ರಜ್ಞಾನಗಳ ಸರಮಾಲೆಯಲ್ಲಿ ಸಾಫ್ಟ್‌ವೇರ್‌ಗಳ ನೇರ ಸಂಪರ್ಕ ಸಾಧನೆಗಳಿಂದ ಉಂಟಾಗಿವೆ. ಇದರ ಎಲ್ಲಾ ಉಪಯೋಗಗಳನ್ನು ದೃಶ್ಯಮಾಧ್ಯಮವು ಇತ್ತೀಚಿನ ದಿನಗಳಲ್ಲಿ ಪಡೆದುಕೊಂಡಿದೆ.

ಗಣಕಯಂತ್ರದಲ್ಲಿ ಕಲೆಯನ್ನು ನಿರ್ಮಿಸಲು ಕ್ರಿ.ಶ. ೧೯೬೦ರಲ್ಲಿ ಬಹುತೇಕ ವಿದ್ವಾಂಸರು ಪ್ರಯತ್ನಿಸಿ ಆವಿಷ್ಕಾರ ಮಾಡಿದ್ದಾರೆನ್ನಲಾಗಿದೆ. ಅನೇಕ ನಿಪುಣ ಕಲಾವಿದರು ಅನಿಶ್ಚಿತತೆಯ ಅನ್ವೇಷಣೆಯಲ್ಲಿ ಅವರ ಸೃಜನಾಶೀಲತೆ, ಸಂವೇದಶೀಲತೆಗೆ ಗಣಕಯಂತ್ರವನ್ನು ಕಲಾ ಮಾಧ್ಯಮವಾಗಿ ಬಳಸುವ ಉದ್ಯಮವನ್ನು ಪ್ರಾರಂಭಿಸಿದರು. ಕ್ರಿ.ಶ. ೧೯೬೦ರಲ್ಲಿ 'ಡೆಸ್ಮಂಡ್ ಪೌಲ್ ಹೆನ್ರಿರವರು ಗಣಕಯಂತ್ರವನ್ನು ರೇಖಾಚಿತ್ರಗಳನ್ನು ನಿರ್ಮಿಸುವ ಕಲಾಸಾಧನವಾಗಿ/ ಮಾಧ್ಯಮವಾಗಿ ಬಳಸಿ ಅದರಂತೆ ಕಲಾಕೃತಿ ನಿರ್ಮಿಸಿದ್ದಾರೆ ಹಾಗೂ ಈ ಮಾಧ್ಯಮದಿಂದ ರಚಿಸಿದ ಕಲಾಕೃತಿಗಳು ೧೯೬೮ರಲ್ಲಿ ಪ್ರದರ್ಶನಗೊಂಡಿದೆ.' '೧೯೬೮ರಲ್ಲಿ ಡಾ.ಎ.ಮೈಕಲ್ ನೋಲ್ ಇವರು ಡಿಜಿಟಲ್ ಗಣಕಯಂತ್ರವನ್ನು ಒಂದು ಮಾಧ್ಯಮವಾಗಿ ಪರಿಗಣಿಸಿ ಅದರಲ್ಲಿ ಅವಲೋಕನ ಸ್ವರೂಪಗಳನ್ನು ಕಲಾವಂತಿಕೆಯ ಉದ್ದೇಶಕ್ಕಾಗಿ ಬಳಸಿ ಆವಿಷ್ಕಾರ ಮಾಡುತ್ತಾ ಸೌಂದರ್ಯ ರೂಪುರೇಷೆಗಳನ್ನು ನೀಡಿದ್ದಾರೆ. ನಂತರ 'ಪೀಟ್ ಮಾಂಡ್ರಿಯನ್ ಮತ್ತು ಬ್ರಿಡ್ಜೆಟ್ ರಿಲ್ಲೈ' ಇವರು ಅದನ್ನು ವರ್ಣಗಳಲ್ಲಿ ಅಳವಡಿಸಿ ಕಲಾಕೃತಿಯ

ಸ್ವರೂಪ ನೀಡಿದರು. ೧೯೬೩ರಲ್ಲಿ ಅಮೇರಿಕಾದ 'ಜಾನ್ ಶೋಗ್ರೇನ್' ಎನ್ನುವವನು ಕಲಾತತ್ವಗಳ ಆಧಾರದ ಮೇಲೆ ಗಣಕ ಯಂತ್ರದಲ್ಲಿ ಹೊಸ ಹೊಸ ಪ್ರೋಗ್ರಾಮ್‌ಗಳನ್ನು ಬರೆದು ಅಭಿವೃದ್ಧಿಪಡಿಸಿದನು.

೧೯೮೪ರಲ್ಲಿ ಮಸಿಂತೋಷ್ ಕಂಪನಿಯು ತನ್ನದೆ ಆದ ಕಲಾವಿದರಿಗೆ ಪರಿಕರ ರೂಪದಲ್ಲಿ ಸಾಫ್ಟ್‌ವೇರ್‌ಗಳನ್ನು ಅಳವಡಿಸುವಂತಹ ಯಂತ್ರಗಳನ್ನು ಬಿಡುಗಡೆಗೊಳಿಸಿತು' ಅದೇ ಸಮಯದಲ್ಲಿ ಜಿಯುಐ ಕಂಪನಿಯು ಬಿಡುಗಡೆಗೊಳಿಸಿದ ಯಂತ್ರದ ಕಲಾವಿದರಿಗೆ ಬಹುವಿಧವಾದ ಸಾಫ್ಟ್‌ವೇರ್‌ಗಳ ಸ್ವರೂಪಗಳನ್ನು ನೀಡಿದೆ ಈಗ ಪ್ರಚಲಿತ ಸಾಫ್ಟ್‌ವೇರ್‌ಗಳನ್ನು ಅವಲೋಕಿಸಿದರೆ ಬಹಳಷ್ಟು ದೊರಕುತ್ತವೆ. ಉದಾಹರಣೆಗೆ ಅಡಾಬ್ ಸಿಸ್ಟಮ್ಸ್ ಕಂಪನಿರವರ ಅತ್ಯಾಧುನಿಕ ತಂತ್ರಜ್ಞಾನದ ಸಾಫ್ಟ್‌ವೇರ್‌ಗಳಲ್ಲಿ ಚಿತ್ರಗಳನ್ನು ನಿರ್ಮಿಸಿ ಅನೇಕ ವೈವಿಧ್ಯತೆಗಳಲ್ಲಿ ವರ್ಣಗಳನ್ನು ಲೇಪಿಸಬಹುದು. ಅಕ್ಷರಗಳನ್ನು ವಿವಿಧ ಮಾದರಿಯಲ್ಲಿ ರೂಪಿಸಬಹುದು. ಗಣಕಯಂತ್ರದ ರೋಬೋ ಸ್ವಯಂ ಚಾಲಿತಯಂತ್ರದಿಂದ ಕುಂಚವನ್ನು ಅಳವಡಿಸಿ ಜೆನೆಲ್ಲೆ ಎಂಬ ಕಲಾಕೃತಿ ನಿರ್ಮಿಸಿರುವುದು ಇದೆ ಇದರ ಕಲಾವಿದರು ಆರೋನ್. ಈ ಕಲಾಕ್ಷೇತ್ರದಲ್ಲಿ ಪರಿಶೋಧಕನೆಂದರೆ ಕೆನ್ ಗೋಲ್ಡ್‌ಬರ್ಗ್. ಗಣಕಯಂತ್ರದ ಕಲೆ, ಮಲ್ಟೀಮೀಡಿಯಾ ಕಲೆ, ಡಿಜಿಟಲ್ ಕಲೆ ಎಂದೆಲ್ಲಾ ಕರೆಸಿಕೊಳ್ಳುವ ಚಟುವಟಿಕೆಗಳೆಲ್ಲಾ ಒಂದು ಛತ್ರಿಯ ನೆರಳಿನಲ್ಲಿನ ಕಲಾ ತಂತ್ರಗಳು. ಇವೆಲ್ಲವೂ ಜಾಗತೀಕರಣದಿಂದ ಮಾತ್ರ ಸಾಧ್ಯವಾಯಿತು ಹಾಗೂ ಎಲ್ಲರಿಗೂ ಲಭ್ಯವಾಯಿತು. ಇಂದಿನ ವೇಗ ಹೇಗಿದೆಯೆಂದರೆ ಆಧುನಿಕ ತಂತ್ರಜ್ಞಾನದ ಸಾಫ್ಟವೇರ್‌ಗಳು, ಪದೇ ಪದೇ ಅಭಿವೃದ್ಧಿ ಹೊಂದುತ್ತಾ ಹೈಟೆಕ್ ತಂತ್ರಜ್ಞಾನವಾಗಿ ರೂಪುಗೊಳ್ಳುತ್ತಿವೆ. ದೃಶ್ಯ ಮಾಧ್ಯಮಗಳ ಸೆಳೆತ, ಹೊಸ ತಲೆಮಾರಿನ ಸಿನೆಮಾಗಳ ಆಕರ್ಷಣೆ, ಅಂತರ್ಜಾಲದ ಮೋಜು, ಸ್ಮಾರ್ಟ್ ಫೋನ್‌ಗಳ ಬಳಕೆ ಅವರನ್ನು ಭ್ರಮಾಲೋಕದ ಉತ್ತುಂಗದಲ್ಲಿ ನಿಲ್ಲಿಸಿವೆ. ವಾಸ್ತವ ಹೀಗಿರುವಾಗ ದೇಸಿ ಸಂಸ್ಕೃತಿ, ಜಾನಪದ ಕಲೆಗಳು ಕೊನೆಗೆ ಪಿಜ್ಜಾ-ಬರ್ಗರ್ ಸಂಸ್ಕೃತಿಯೆದುರು ನಮ್ಮ ಆಹಾರ ಸಂಸ್ಕೃತಿಯೂ ಸೋತು ನಿಂತಿದೆ.

ಒಂದು ತಂಡ ಕಟ್ಟಿಕೊಂಡು ನಿರಂತರ ಪರಿಶ್ರಮದ ಮೂಲಕ ಪಾರಂಪರಿಕ ಕತೆ ಒಂದನ್ನು ರೂಢಿಸಿಕೊಂಡು ತನ್ನದೇ ಸಮುದಾಯದ ಜೊತೆ ಸಂವಾದ ನಡೆಸುವ ದೇಸಿ ಕಲೆಗಳು ಯಾರಿಗೆ ಬೇಕಾಗಿದೆ? ಕೆಲವೇ ದಿನಗಳ ಟ್ರೈನಿಂಗ್‌ನಿಂದ ಯಾರೋ ಒತ್ತುವ ಮೆಸೇಜ್‌ನಿಂದ ಇದ್ದಕ್ಕಿದ್ದಂತೆ ಲಕ್ಷಾಂತರ ಜನ ನೋಡುವ ಹೀರೋಗಳಾಗುವುದು ಯಾರಿಗೆ ಬೇಡ? ಹಾಗಾಗಿ ಇಂದು ರಿಯಾಲಿಟಿ ಶೋಗಳು ಹಳ್ಳಿಯಿಂದ ದಿಲ್ಲಿಯವರೆಗೂ ಯುವ ಸಮೂಹದ ಆಕರ್ಷಣೆಯ ಕೇಂದ್ರವಾಗಿವೆ. ಹಿಂದಿ ಭಾಷೆಯ ಒಂದೇ ಟಿ.ವಿ. ಧಾರಾವಾಹಿಗಳು ಭಾರತದ ಸಕಲ ನೂರೆಂಟು ಭಾಷೆಗಳಿಗೂ ಡಬ್ ಆಗುತ್ತವೆ. ಕೊನೆಗೆ

ಸಾಂಸಾರಿಕ ವಿಷಯಗಳೂ ದೇಸಿ ಕಲೆಗಳು, ದೇಸಿ ಜೀವನ ಕ್ರಮಗಳು, ದೇಸೀ ಆಹಾರ ಪದ್ಧತಿ, ದೇಸಿ ಉಡುಗೆ-ತೊಡುಗೆಗಳು ಜಾಗತೀಕರಣದ ಅಬ್ಬರದಲ್ಲಿ ಮಸುಕಾಗತೊಡಗಿವೆ. ಅದನ್ನು ಶ್ರದ್ಧೆಯಿಂದ, ಜತನದಿಂದ ಕಾಪಾಡುವವರಲ್ಲಿ ಒಂದು ಅಸಾಧ್ಯ ಕೀಳರಿಮೆಯನ್ನು ಸೃಷ್ಟಿಸುತ್ತಿದೆ.

ಕೃಷಿ ಕ್ಷೇತ್ರ ಇಂದಿಗೂ ಲಾಭದಾಯಕವಲ್ಲದ, ಆರ್ಥಿಕವಾಗಿ ಭದ್ರತೆಯಿಲ್ಲದ ಜೋಭದ್ರಗೇಡಿ ಉತ್ಪಾದನಾ ಕ್ಷೇತ್ರವೇ ಆಗಿ ಉಳಿದಿದೆ. ಇಷ್ಟೆಲ್ಲಾ ಹೈಟೆಕ್ ಆಗಿರುವ ಜಾಗತೀಕರಣದ ಸಮಾಜ ರೈತರ ಬೆಳೆಗಳಿಗೆ ಒಂದು ಸುಸ್ಥಿರ ಬೆಲೆಯನ್ನು ನೀಡಲು ಏಕೆ ಸೋತಿದೆ ? ಏಕೆಂದರೆ ಅದು ಯಾವ ಭದ್ರತೆಯೂ ಇಲ್ಲದ ದುಡಿವ ಕೈಗಳ ಉತ್ಪಾದನಾ ಕ್ಷೇತ್ರ. ಅಲ್ಲಿನ ಶ್ರಮಕ್ಕೆ ಕವಡೆಯ ಕಿಮ್ಮತ್ತೂ ಇಲ್ಲ. ದಿನೇದಿನೇ ಶ್ರಮವೆನ್ನುವುದು ಯಾತನೆಯ ಸಂಕೇತವಾಗಿದೆ. ಎಲ್ಲಿ ಶ್ರಮವು ಸಂಸ್ಕೃತಿಯ ಭಾಗವಾಗಿತ್ತೋ ಅಲ್ಲಿ ಮಾತ್ರ ಕಲೆಗಳು ಅರಳಬಲ್ಲವು. ತಮ್ಮ ಸುಗಂಧವನ್ನು ಸುತ್ತಲಿನ ಸಮಾಜಕ್ಕೆ ಪಸರಿಸಬಲ್ಲವು. ಆದರೆ ಎಲ್ಲಿ ಶ್ರಮ ಯಾತನೆಯ ರೂಪವನ್ನು ಪಡೆಯುವುದೋ, ಎಲ್ಲಿ ಶ್ರಮ ಶ್ರಮಿಕನ ಜೀವನ ಕ್ರಮದ ಭಾಗವಾಗುವುದಿಲ್ಲವೋ ಅಲ್ಲಿ, ಆಕ್ರೋಶ, ಅಸಮಾಧಾನಗಳು ಹೆಪ್ಪುಗಟ್ಟಲಾರಂಭಿಸುತ್ತವೆ. ಅದು ಮುಂದೊಂದು ದಿನ ಒಂದು ಮಹಾಸಾಮಾಜಿಕ ಸ್ಫೋಟಕ್ಕೆ ಕಾರಣವಾಗಬಹುದು. ಇಲ್ಲವೇ ಜನಸ್ತೋಮದ ಅಸಹಾಯಕತೆಯೂ ಒಂದು ಸರ್ವಾಧಿಕಾರಿ ಆಡಳಿತಕ್ಕೂ ದಾರಿಯಾಗಬಹುದು. ಏಕರೂಪಿ ಸಂಸ್ಕೃತಿಯ ಹೇರಿಕೆಯ ಕೊನೆಯ ಘಟ್ಟ ಇದೇ ಆಗಿದೆ.

ಒಂದೆಡೆ ಜಾಗತೀಕರಣ ದೇಶ ದೇಶಗಳ ನಡುವಿನ ಗಡಿಗಳನ್ನು ಒಂದೇ ಗೋಳದಲ್ಲಿ ಎಲ್ಲರನ್ನೂ ಅಣಿ ನೆಲೆಸುತ್ತಿದೆ ಎಂದು ಪ್ರಚಾರ ಮಾಡುತ್ತಿರುವಾಗಲೇ ಅನೇಕ ವಿಪರ್ಯಾಸಗಳು ನಮ್ಮ ನಡುವೆ ಸಂಭವಿಸುತ್ತಿವೆ. ಮನುಜ-ಮನುಜರ ನಡುವಿನ ಜಾತಿ, ಮತ, ಪಂಥಗಳ ಭೇದ-ಭಾವಗಳು ಹೆಚ್ಚಾಗುತ್ತಲೇ ಇವೆ, ಟ್ವಿಟರ್, ಫೇಸ್‌ಬುಕ್‌ಗಳಲ್ಲಿ ಹರಿದಾಡುವ ಭಯಾನಕ ಮೆಸೇಜುಗಳು ನಾವು ಮನುಜ-ಮನುಜರ ನಡುವೆ ಎಂತಹ ಬೃಹತ್ ಗಾತ್ರದ ಗೋಡೆಗಳನ್ನು ನಿರ್ಮಿಸುತ್ತಿದ್ದೇವೆ ಎಂಬುದಕ್ಕೆ ಸಾಕ್ಷಿಯಾಗಿವೆ. ವರ್ತಮಾನ ನಮ್ಮನ್ನು ಹಿಡಿದು ಹಿಂದಕ್ಕೆ ಜಗ್ಗುತ್ತಿರುವಂತೆ ಭಾಸವಾಗುತ್ತದೆ. ಇದೇ ಹೊತ್ತಲ್ಲಿ ಗಮನಿಸಬೇಕಾದ ವಿಶೇಷ ವಿದ್ಯಾಮಾನವೊಂದು ಈಚೆಗೆ ಜರುಗಿತು. ಊರಿಗೆಲ್ಲಾ ಆಚಾರ ಹೇಳುವ ಜಾಗತೀಕರಣ ಪರಮ ಪ್ರತಿಪಾದಕನಂತಿದ್ದ ಬ್ರಿಟನ್ ದೇಶ ಈಚೆಗೆ ಐರೋಪ್ಯ ಒಕ್ಕೂಟದಿಂದ ಹೊರನಡೆದದ್ದು ಜಾಗತೀಕರಣದ ಪೊಳ್ಳುತನವನ್ನು ಎತ್ತಿ ಹಿಡಿದಿದೆ. ಗಡಿರೇಖೆಗಳೇ ಇರಬಾರದೆಂದು ಪ್ರತಿಪಾದಿಸುವ ಬಲಿಷ್ಠ ದೇಶವೊಂದು ತನ್ನ ಅಣ್ಣ ತಮ್ಮಂದಿರಿರುವಂತೆ ಇರುವ ಯೂರೋಪಿನ ಇತರೆ ರಾಷ್ಟ್ರಗಳೊಂಧಿಗೆ ಏಗಲಾರದೆ ಟಾಟಾ ಬೈ ಬೈ ಹೇಳಿದ್ದು ಇಡೀ ಜಗತ್ತಿಗೆ ಹೊಸ ಸಂದೇಶವೊಂದನ್ನು ಸಾರಿದೆ. ಅದು

ನಮ್ಮಂತಹ ಬಡದೇಶಗಳಿಗೆ ಬಹುದೊಡ್ಡ ಪಾಠವಾಗಬೇಕು. ನಮ್ಮತನವನ್ನು ಉಳಿಸಿಕೊಳ್ಳುವ ಹೊಸ ಮಾರ್ಗವಾಗಬೇಕು. ಇಲ್ಲದಿದ್ದರೆ ಅಲ್ಲಮ ಹೇಳಿದಂತೆ ಹಿಂದಣ ಹೆಜ್ಜೆಯನರಿಯದ ನಾವು ಮುಂದಣ ಹೆಜ್ಜೆಯನರಿಯಲಾರೆವು.

ಯಾವುದೇ ಹೊಸ ಆರ್ಥಿಕ ನೀತಿಯ ನೇರ ಪರಿಣಾಮ ಈ ದೇಶದ ಕಟ್ಟಕಡೆಯ ವ್ಯಕ್ತಿಯ ಮೇಲೆ ನೇರ ಪರಿಣಾಮ ಬೀರುವುದು ಎಂದಿನ ವಿದ್ಯಮಾನ. ಅಂತೆಯೇ ಕಳೆದ ೨೫ ವರ್ಷಗಳಲ್ಲಿ ಸುಮಾರು ಒಂದು ಕೋಟಿಗೂ ಅಧಿಕ ಆದಿವಾಸಿಗಳು ವಿವಿಧ ಯೋಜನೆಗಳಿಗಾಗಿ ತಮ್ಮ ಮೂಲ ಸ್ಥಳಗಳಿಂದ ಒಕ್ಕಲೆಬ್ಬಿಸಲ್ಪಟ್ಟಿದ್ದಾರೆ. ಸ್ವಾತಂತ್ರ್ಯ ಬಂದ ಲಾಗಾಯ್ತು ಇಲ್ಲಿಯವರೆಗೆ ಸುಮಾರು ೫ ಕೋಟಿಗೂ ಹೆಚ್ಚು ಜನ ಅಂದರೆ ಒಂದು ಕರ್ನಾಟಕ ರಾಜ್ಯದ ಜನಸಂಖ್ಯೆಯಷ್ಟು ಜನ ತಮ್ಮ ಮೂಲ ನೆಲೆಯನ್ನು ಕಳೆದುಕೊಂಡು ನೀರಿನಿಂದ ಹೊರಬಿದ್ದ ಮೀನಿನಂತೆ ಆಗಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಾಗೆ ಒಕ್ಕಲೆಬ್ಬಿಸಲ್ಪಟ್ಟ ಸಮುದಾಯಗಳ ಜೊತೆಗೆ ಅಲ್ಲಿನ ದೇಸೀ ಎನಿಸಲ್ಪಟ್ಟ ಎಲ್ಲವೂ ನಶಿಸಿ ಹೋಗುತ್ತವೆ ಎಂಬುದು ಬಹಳ ಮುಖ್ಯವಾಗಿದೆ. ಸ್ಥಳೀಯ ಪರಿಸರದ ಜೊತೆಗೆ ತಲೆತಲಾಂತರದ ಅನುಭವ ಹೊಂದಿರುವ ಈ ಜನ ಹೊಸ ಪರಿಸರದಲ್ಲಿ ಅಸಹಾಯಕ ಕುರಿ ಮಂದೆಗಳಂತೆ ಬದುಕುವುದನ್ನು ನಾವು ಕಾಣುತ್ತೇವೆ. ಅವರ ಸ್ಥಳೀಯ ಜ್ಞಾನ ಎಷ್ಟು ಮಹತ್ವದ್ದೆಂದರೆ ೨೦೦೪ರಲ್ಲಿ ಸುನಾಮಿ ಅಪ್ಪಳಿಸಿದಾಗ ಅಂಡಮಾನ್ ಬುಡಕಟ್ಟು ಜನರಾದ 'ಜಾರುವಾ'ಗಳು ಸುನಾಮಿ ಬರುವ ಒಂದೆರಡು ದಿನ ಮೊದಲೇ ಸುರಕ್ಷಿತ ಸ್ಥಳಗಳಿಗೆ ತಮ್ಮ ನಿವಾಸವನ್ನು ಬದಲಾಯಿಸಿಕೊಂಡರಂತೆ! ಜಗತ್ತಿನ ಯಾವ ತಜ್ಞನೂ, ವಿಜ್ಞಾನಿಯೂ ಕಂಡುಹಿಡಿಯದ ಈ ಅದ್ಭುತ ಜ್ಞಾನಕ್ಕೆ ಬೆಲೆ ಕಟ್ಟಲಾದೀತೆ?

ವ್ಯಾಪಾರ ಮತ್ತು ಲಾಭವೇ ಜಾಗತೀಕರಣದ ಮುಖ್ಯ ಉದ್ದೇಶವಾಗಿರುವುದರಿಂದ ಜಾನಪದದ ಮೇಲೆ ಅದರ ಪ್ರಭಾವ ದಟ್ಟವಾಯಿತು. ಜಾನಪದ ಎನ್ನುವುದು ನಮ್ಮ ಸಂಸ್ಕೃತಿಯ ಉತ್ಪನ್ನ, ಸಂಸ್ಕೃತಿ ಅನ್ನೋದು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಯ ಉತ್ಪನ್ನ ಜಾತಿ ವ್ಯವಸ್ಥೆಯ ಪಾರುಪತ್ಯದಲ್ಲಿ ಸಮಾಜ ಗುಂಪುಗಳಾಗಿ ಬೇರ್ಪಟ್ಟಿತು. ಒಂದು ಗುಂಪಿನ ರೀತಿ ನೀತಿ ಇನ್ನೊಂದು ಗುಂಪಿನವರಿಗೆ ಅಪರಿಚಿತವಾದವು. ಶಿಕ್ಷಣವು ದೊರಕಿದಂತೆ ಬದುಕಿನ ನಿರ್ವಹಣೆಗೆ ಅದು ಪರ್ಯಾಯ ವ್ಯವಸ್ಥೆಯಾಗಿ ಕಂಡುಬಂದದ್ದರಿಂದ ಜನಪದ ಕಲೆಗಳು ಅವಕೃಪೆಗೆ ಗುರಿಯಾಗಲ್ಪಟ್ಟವು. ಗ್ರಾಮೀಣರು ಜೀವನ ನಿರ್ವಹಣೆಗೆ ನಗರದತ್ತ ಮುಖ ಮಾಡಿದಾಗ ಧಾರ್ಮಿಕ ಉತ್ಸವಗಳು ಕಡಿಮೆಯಾದವು. ಉತ್ಸವಗಳಲ್ಲಿ ಜನಪದ ಕಲೆಗಳ ಪ್ರದರ್ಶನಗಳಿರುತ್ತಿದ್ದವು. ಆ ಒಂದು ಸಂದರ್ಭವು ಅದಕ್ಕಿಲ್ಲವಾಯಿತು. ಶಿಕ್ಷಣದ ಲಾಭ ಪಡೆದಂತೆಲ್ಲಾ ಕಲೆಗಳ ಹಿಂದಿದ್ದ ಕಟ್ಟುನಿಟ್ಟು ಸಡಿಲಗೊಂಡವು. ಕಲೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಯಾದಾಗ ಜನರಿಂದ ಅದಕ್ಕೆ ಪ್ರೋತ್ಸಾಹ ಸಿಕ್ಕಿತು.

ಆದರೆ ಕೆಲವು ತಳ ಸಮುದಾಯದ ಕಲೆಗಳಿಗೆ ಇಂಥ ಅವಕಾಶವಿಲ್ಲದೆ, ತಳ ಸಮುದಾಯದ ವಿದ್ಯಾವಂತರು ತಮ್ಮ ಕಲೆಯ ಬಗ್ಗೆ ತಾವೇ ತಿರಸ್ಕಾರ ಹೊಂದಿದರು. ಅವರೂ ಕೂಡ ಮೇಲ್ಜಾತಿಯ ಕಲೆಗಳ ಕಡೆ ಆಸಕ್ತಿ ಹೊಂದುತ್ತಾರೆ. ಹಿರಿಯರಿಗೆ ತಮ್ಮ ಕುಲ ಕಸುಬುಗಳು ಪವಿತ್ರವಾಗಿ ಕಂಡರೆ ಅವರ ಮಕ್ಕಳಿಗೆ ಅದು ಅಪಮಾನಿತ ಕಸುಬುಗಳಾಗಿ ಕಾಣುತ್ತಿವೆ. ನಮ್ಮ ಇವತ್ತಿನ ಶಿಕ್ಷಣ ಕ್ರಮ ಕುಲ ಕುಸುಬುಗಳನ್ನು ಗೌರವದಿಂದ ನೋಡಲು ಕಲಿಸಿಲ್ಲ. ಇದರಿಂದ ಜನಪದ ಕಲೆಗಳು ಆಧುನಿಕತೆಯಿಂದ ನರಳುವ ಸ್ಥಿತಿ ಬಂದಿದೆ. ಹಾಗಾಗಿ ಬಹಳಷ್ಟು ವೃತ್ತಿದಾಯಕ ಕಲೆಗಳು ಮೂಲೆಗುಂಪಾಗಿವೆ ಎಂದರೆ ತಪ್ಪಾಗಲಾರದು. ಕೆಲವು ಕಲಾವಿದರು, ಕಲೆಗಳು ಇಂದು ನಮ್ಮ ಮುಂದೆ ಕಣ್ಮರೆಯಾಗಿವೆ.

ಹಾಗಾಗಿ ಬಹಳಷ್ಟು ವೃತ್ತಿದಾಯಕ ಕಲೆಗಳು ಮೂಲೆಗುಂಪಾಗಿವೆ ಎಂದರೆ ತಪ್ಪಾಗಲಾರದು. ಕೆಲವು ಕಲಾವಿದರು, ಕಲೆಗಳು ಇಂದು ನಮ್ಮ ಮುಂದೆ ಕಣ್ಮರೆಯಾಗಿವೆ. ಯಕ್ಷಗಾನವನ್ನು ಮೇಲ್ಜಾತಿಯವರು ಮಾಡಿದ್ದರಿಂದ ಅದರಲ್ಲಿ ವಿದ್ಯಾವಂತರಿರುವುದರಿಂದ ಇಂದು ಅಂದು ಏಕಮುಖ ಸಂಸ್ಕೃತಿಯ ಪ್ರಭಾವಕ್ಕೆ ಒಳಪಟ್ಟಿವೆ. ಇಂದು ಬಹಳಷ್ಟು ಕಲೆಗಳು ಸ್ವಲ್ಪ ಮಾತ್ರ ರೂಪಾಂತರ ಹೊಂದಿದರೆ ಇನ್ನೂ ಕೆಲವು ಕಲೆಗಳು ರೂಪಾಂತರ ಹೊಂದುತ್ತಾ ಹೊಂದುತ್ತಾ ತನ್ನ ಮೂಲ ರೂಪವನ್ನೇ ಬದಲಾಯಿಸಿಕೊಂಡಿದೆ. ಇಂದು ಕೃಷಿ ಸಂಸ್ಕೃತಿಯ ಭಾಗವಾಗಿದ್ದ ಬೀಸುವ ಕುಟುವ ಉಳುವ ಯಂತ್ರಗಳಿರುವುದರಿಂದ ಮನುಷ್ಯನಿಗೆ ದೈಹಿಕ ಶ್ರಮವಿಲ್ಲದೆ ಮನರಂಜನೆಯ ವಸ್ತುವಾಗಿದ್ದ ಹಾಡು ಕುಣಿತಗಳು ಕಣ್ಮರೆಯಾಗಿವೆ. ಖುಷಿಗಾಗಿ, ಮನರಂಜನೆಗಾಗಿ ಇಂದು ನಾವು ಟಿ.ವಿ.ಯ ಮುಂದೆ ಕುಳಿತಿರುತ್ತೇವೆ.

ಇಂದು ಸಿನಿಮಾ ಮತ್ತು ದೂರದರ್ಶನಗಳಲ್ಲಿ ಬರುವ ಕಲೆಗಳೂ ಕೂಡ ತನ್ನ ತಾಂತ್ರಿಕ ದೋಷಗಳಿಂದ ಜನರನ್ನು ಸೆರೆಹಿಡಿಯುವುದರಲ್ಲಿ ಸೋತಿವೆ. ಕಾಲಕ್ಕೆ ತಕ್ಕಂತೆ ಕಲೆಗಳು ತನ್ನ ಮೂಲಕ ರೂಪಕ್ಕೆ ಧಕ್ಕೆ ಬರದಂತೆ ಕಾಯಕಲ್ಪವಾಗಬೇಕಿದೆ. ಹಿಂದೆ ಹಳ್ಳಿಗಳಲ್ಲಿ ಹಬ್ಬ ಹರಿದಿನಗಳಲ್ಲಿ ನಡೆಸುತ್ತಿದ್ದ ಹರಿಕಥೆ ಅಥವಾ ಕಲೆಗಳನ್ನು ಪ್ರದರ್ಶಿಸಿ ಹಳ್ಳಿಯ ಒಗ್ಗಟ್ಟನ್ನು ಸೌಹಾರ್ದತನವನ್ನು ತೋರಿಸುತ್ತಿದ್ದರು. ಇಂದು ಜಾಗತೀಕರಣ ಅಂಥಹ ಸಂದರ್ಭಗಳನ್ನು ನಮ್ಮಿಂದ ಕಸಿದುಕೊಂಡಿದೆ ಎಂದರೆ ತಪ್ಪಾಗಲಾರದು.
ಇಂದು ಅಭಿವೃದ್ಧಿ ಹೊಂದಿದ ಜಾತಿ ಸಮುದಾಯಗಳಲ್ಲೂ, ಕೂಡ ಪ್ರದರ್ಶಕ ಕಲೆಗಳಿಗೆ ವಿದ್ಯಾವಂತ ಕಲಾವಿದರು ಮರುಗುವ ಸ್ಥಿತಿ ಬಂದಿದೆ. ಸಾಮಾಜಿಕವಾಗಿ ಮೇಲ್ಮಟ್ಟದಲ್ಲಿರುವ ಕಲೆಗಳಿಗೆ ಗೌರವ ಜಾಸ್ತಿ. ಪ್ರತಿಷ್ಠೆ ಗೌರವಗಳಿರುವುದರಿಂದಲೇ ತರುಣರು ಅದನ್ನು ಅಭ್ಯಾಸ ಮಾಡಲು ಮುಂದಾಗುತ್ತಾರೆ. ಇಂದು ಜನಪದ ಕಲೆಗಳು ಸಾಂದರ್ಭಿಕ ಬಳಕೆಯ ಕಲೆಯಾಗಿ ಉಳಿಯುತ್ತಿರಲಿಲ್ಲ. ಹಬ್ಬ ಉತ್ಸವಗಳನ್ನೇ ಮಾಡದಿದ್ದಾಗ ಆರಾಧನಾ

ಕಲೆಯಾಗಿ ಉಳಿಯುವುದಾದರೂ ಎಂತು. ಇಂದು ಈ ಕಲೆಗಳೆಲ್ಲ ಕೇವಲ ಸಂದರ್ಭದಕ್ಕನುಸಾರವಾಗಿ ಬಂದು ಹೋಗುವ ಕಲೆಗಳಾಗಿವೆ. ಸಿನಿಮಾ, ಟಿ.ವಿ. ಸಭೆ ಸಮಾರಂಭ ರಾಜಕೀಯ ಮೆರವಣಿಗೆಗಳಲ್ಲಿ ಕಾಣುತ್ತಿವೆ. ಈ ಕಲೆಗಳೆಲ್ಲ ತಮ್ಮ ಪರಿಸರದಿದ ಬೇರೆಯಾದಾಗ ಅದರ ಘನತೆಗೆ ಧಕ್ಕೆ ಬರುತ್ತದೆ. ಅಲ್ಲದೇ ತನ್ನ ಮೂಲತನವನ್ನು ಬಿಟ್ಟು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಇಂದು ಕಲೆಗಳನ್ನು ನೋಡುವ ರೀತಿಯೂ ಬದಲಾಗುತ್ತಿದೆ.

ಸಿನಿಮಾಗಳಲ್ಲೂ ಕೂಡ ಮುಖ್ಯ ವಸ್ತುವಿಗೆ ಪ್ರೇರಣೆಯಾಗಷ್ಟೇ ಕಲೆಗಳನ್ನು ಬಳಸುತ್ತಾರೆ. ಹಾಗಾಗಿ ಅಲ್ಲೂ ಕೂಡ ಈ ಕಲೆ ತಳ್ಳಿ ಹಾಕಲ್ಪಟ್ಟ ಕಲೆಗಳೆನಿಸಿಕೊಳ್ಳುವ ಸಾಧ್ಯತೆ ಹೆಚ್ಚು ಬಹುರಾಷ್ಟ್ರೀಯ ಕಂಪನಿಗಳಿಗೆ ಮುಖ್ಯವಾದುದು ಉದಾರೀಕರಣ ಮತ್ತು ವ್ಯಾಪಾರೀಕರಣ. ಆದರೆ ನಮ್ಮ ಕಲೆಗಳ ಆಚರಣೆ ನಂಬಿಕೆ ಅವುಗಳಿಗೆ ಅಮುಖ್ಯವೆನಿಸುತ್ತದೆ. ನಮಗೂ, ನಮ್ಮ ಪೂರ್ವಿಕರಿಗೂ ಬಹಳ ಅಂತರವಿದೆ. ಹಾಗೆಯೇ ನಮಗೂ ನಮ್ಮ ಮುಂದಿನ ಪೀಳಿಗೆಗೂ ಅಂತರವಿದೆ. ಈ ಅಂತರದಲ್ಲಿ ಎಷ್ಟೋ ವಿಚಾರಗಳು ಬಂದು ಹೋಗುತ್ತವೆ. ಆಧುನೀಕರಣ, ಜಾಗತೀಕರಣ ಇಂದು ಹಿಂಸೆಯ ರೂಪದತ್ತ ತಿರುಗಿವೆ. ಹಿಂದೆ ಕುಟುಂಬ, ಗ್ರಾಮ, ದೇಶದ ಹಿತ ಮಖ್ಯವಾಗಿತ್ತು. ಆಗ ಬರುತ್ತಿದ್ದ ಸಿನಿಮಾಗಳು ಅದೇ ಆಶಯವನ್ನುಹೊತ್ತಿದ್ದವು. ಆಗ ವ್ಯಾಪಾರೀಕರಣವಿರಲಿಲ್ಲ. ಜನರಿಗೆ ಹಿತವನ್ನುಂಟು ಮಾಡುವ ಸಂದೇಶವಿರಬೇಕಿತ್ತು ಅಷ್ಟೇ. ಆದರೆ ಇಂದು ಎಲ್ಲವನ್ನೂ ವ್ಯಾಪಾರೀಕರಣದ ಹಿನ್ನಲೆಯಲ್ಲಿ ನೋಡುವಂತಾಗಿದೆ. ಬಂಡವಾಳಶಾಹಿಯ ಕೈಯಲ್ಲಿ ವ್ಯಾಪಾರ ಗೆಲ್ಲುವುದೆಂದರೆ ಹಿಂಸೆಯೇ ಆಗಿದೆ. ಇಂದು ಹಿಂಸೆಯ ನೆಲೆಯಲ್ಲೇ ಎಲ್ಲಾ ನಿಂತಿವೆ. ಹಣ ಮಾಡುವುದು ಮತ್ತು ಗೆಲ್ಲುವುದು ಇವೆರಡೆ ಗುರಿಯಾಗಿದೆ. ಇಂದು ಸಂಸ್ಕೃತಿಯ ಪ್ರತಿನಿಧಿಯಾಗಿ ಸಿನಿಮಾ ಇರುವುದಿಲ್ಲ. ಅದೇನಿದ್ದರೂ ವ್ಯಾಪಾರಿ ಮನೋಭಾವ ಹೊಂದಿರುತ್ತದೆ. ಈ ವ್ಯಾಪಾರಿ ಮನೋಭಾವದಿಂದಾಗಿ ಕಲೆಯನ್ನು ಉಳಿಸುವುದಕ್ಕಾಗಲೀ, ಗೌರವದಿಂದ ಕಾಣುವುದಕ್ಕಾಗಲೀ ಆಗುವುದಿಲ್ಲ. ನಿಜವಾಗಿಯೂ ಇಂದು ಜನಪದ ಕಲೆಗಳನ್ನು ಉಳಿಸಿಕೊಳ್ಳುವುದು ನಿಜಕ್ಕೂ ಅಸಾಧ್ಯವಾಗಿದೆ. ಉದಾರೀಕರಣ, ವ್ಯಾಪಾರೀಕರಣದಲ್ಲಿ ಇವೆಲ್ಲ ಅಮುಖ್ಯವೆನಿಸುತ್ತದೆ.

ವಿಶ್ವವೇ ಒಂದು ಪುಟ್ಟ ಹಳ್ಳಿಯಾಗಿ ಅಂಗೈಯಲ್ಲಿ ಇಡೀ ವಿಶ್ವದ ವಿದ್ಯಮಾನ ತಿಳಿಯಬೇಕೆನ್ನುವುದೇ ಜಾಗತೀಕರಣದ ಉದ್ದೇಶ, ಸಂಸ್ಕೃತಿ ಎಂದರೆ ಮಾನವ ನಿರ್ಮಿತ ತನಗಾಗಿ, ತನ್ನಿಂದ, ತನಗೋಸ್ಕರವಾಗಿ ವಿಶ್ವವನ್ನು ತಲುಪಬೇಕಿದೆ. ಆದ್ದರಿಂದ ಇಂದು ನಾವು ಅದನ್ನು ಶಾಪವಾಗಿ ಪರಿಗಣಿಸಬಾರದು. ತಂತ್ರಜ್ಞಾನದ ಜೊತೆ ದೇಶೀಯತೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕಿದೆ. ಮಾನವ ತನ್ನ ಬದುಕಿನಲ್ಲಿ ಹಂತ ಹಂತವಾಗಿ ತಂತ್ರಜ್ಞಾನ ಬಳಸಿಕೊಂಡರೆ ಪ್ರದರ್ಶನ ಕ್ಷೇತ್ರದಲ್ಲೂ ಕೂಡ ಇತರ ಮಾಧ್ಯಮಗಳಿಗೆ ಸವಾಲಿನಂತೆ ಜನಪದವನ್ನು ವಿಸ್ತರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ.

ಜನಪದ ಕಲೆಗಳ ಹಿನ್ನಲೆ, ಉದ್ದೇಶ, ಕುಣಿತ, ಹಾಡು ಇವುಗಳನ್ನೆಲ್ಲಾ ಇಡೀ ವಿಶ್ವಕ್ಕೆ ತಲುಪಿಸುವ ಅವಶ್ಯಕತೆ ಇದೆ. ಇದನ್ನು ನಾವು ಜಾಗತೀಕರಣದ ಈ ಹೊತ್ತಿನಲ್ಲಿ ಮಾತ್ರ ಮಾಡಲು ಸಾಧ್ಯ. ನಮ್ಮ ಜನಪದರಿಗೆ, ಇಂದಿನ ಜನಪದ ಕಲಾವಿದರಿಗೆ ತಂತ್ರಜ್ಞಾನದ ಅರಿವೂ ಮೂಡಿಸಿ ತಂತ್ರಜ್ಞಾನದೊಂದಿಗೆ ಜನಪದ ಕಲೆಗಳನ್ನೂ ಮೇಳೈಸಿ ಅದರೊಂದಿಗೆ ಗುಣಾತ್ಮಕವಾಗಿ ನಡೆಯುವುದನ್ನು ಹೇಳಕೊಡಬೇಕಾಗಿದೆ.

ದೃಶ್ಯಮಾಧ್ಯಮ ಮತ್ತು ಜಾಗತೀಕರಣದಿಂದ ಕಲಾವಿದರಿಗೆ ಆಗುವ ಲಾಭಗಳು

ಹಿಂದೆ ಜಾನಪದ ಕಲೆಗಳ ಪ್ರದರ್ಶನದಲ್ಲಿ ಪೂರಕವಾದ ಅಂಶಗಳಲ್ಲಿ ಪ್ರಾಚೀನತೆ ಇತ್ತು. ಅದು ಕಾಲಕ್ರಮದಲ್ಲಿ ಬೇರೆ ಬೇರೆ ರೀತಿಯ ಆಯಾಮಗಳನ್ನು ಕಂಡುಕೊಳ್ಳುತ್ತಾ ತನ್ನ ಮಾರ್ಪಾಡನ್ನು ಮಾಡಿಕೊಂಡಿತು. ಅಂದರೆ ಜನಪದ ತಜ್ಞ ಕಲಾವಿದರು ಸಂದರ್ಭೋಚಿತ ಪರಿಷ್ಕರಣೆ ಮಾಡಿದರು. ಉದಾಹರಣೆಗೆ ಇಡೀ ರಾತ್ರಿ ಪ್ರದರ್ಶಿಸುವ ಇರಾದೆಯನ್ನು ಬಿಟ್ಟು ಕಲೆಯನ್ನು ಕಾಲಕ್ಕೆ ತಕ್ಕಂತೆ ಕಾಲಮಿತಿಗೊಳಿಸಿದರು. ವೇಷಭೂಷಣಗಳಲ್ಲಿ ಗೃಹಬಳಕೆಯಲ್ಲಿರುವುದನ್ನೇ ಉಪಯೋಗಿಸುತ್ತಿದ್ದರು. ಆದರೆ ಬದಲಾಗಿ, ಆಧುನಿಕ ಬಣ್ಣಗಾರಿಕೆ, ಅದಕ್ಕೊಪ್ಪುವ ವೇಷಭೂಷಣಗಳನ್ನು ಅಳವಡಿಸಿದರು. ಸಂಗೀತ ಮತ್ತು ಪಕ್ಕವಾದ್ಯಗಳನ್ನು ವಿಶೇಷವಾದ ಪರಿಹಾರಕ್ಕೆ ಒಳಪಡಿಸಿ ಲಯನಿಷ್ಠ, ರಾಗ ನಿಷ್ಠ, ಹಾಗೂ ದೃಶ್ಯ ಮತ್ತು ಭಾವಪೂರ್ಣವಾಗಿ ಕಲಾಸಕ್ತರಿಗೆ ಶ್ರವ್ಯಾನಂದಕರವಾಗಿ ಮಾರ್ಪಾಡು ಮಾಡಿದರು.

ಹಾಗೆಯೇ ಜನಪದ ಕುಣಿತಗಳಲ್ಲಿ ಬಳಸಲ್ಪಡುವ ನರ್ತನ ಪ್ರಕಾರದಲ್ಲಿರುವ ಕೆಲವು ವಿಕಾರಗಳನ್ನು ಆಕಾರಗೊಳಿಸಿದರು. ಸಮೂಹದಲ್ಲಿ ವ್ಯಕ್ತಿಯು ಬೇರೆಯಾಗಿ ಕಾಣದಂತೆ ಸಮೂಹ ನರ್ತನವೇ ಪ್ರಧಾನವನ್ನಾಗಿಸಿದರು. ಮತ್ತು ಈ ಜನಪದ ಕುಣಿತಗಳಿಂದ ಸಮಾಜಕ್ಕೆ ಶಿಕ್ಷಣ ಮತ್ತು ಸಂಸ್ಕಾರ ಪ್ರಧಾನ ಪ್ರಯೋಜನವಾಗುವಂತೆ ಅದರ ಉದ್ದೇಶವನ್ನು ಸಾರಿದರು. ಹೀಗೆ ವಿಕಾಸವನ್ನು ಹೋದಂತೆ ಜನಪದ ಕಲೆಗಳು ಸುಶಿಕ್ಷಿತ ಸಮಾಜದ ಮಧ್ಯೆ ಸಂವಾದ, ಚರ್ಚೆಗಳ ನಡುವೆ ಇನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿಯನ್ನು ಹೊಂದಿತು. ಆಧುನಿಕ ಜಾಗತೀಕರಣದ ನಾಗಾಲೋಟದ ಪ್ರಪಂಚದಲ್ಲಿ ತನ್ನ ಸ್ಥಾನವನ್ನು ದಿನದಿಂದ ದಿನಕ್ಕೆ ಉನ್ನತ ಗೌರವವನ್ನು ಪಡೆಯುವಂತಾಯಿತು. ದೃಶ್ಯ & ಶ್ರವ್ಯ ಮಾಧ್ಯಮಗಳಲ್ಲಿಯೂ ಜನಪದ ಕಲೆಗಳು ತಮ್ಮ ಅಸ್ಥಿತ್ವವನ್ನು ಸಾಧಿಸಿತು.

ಪ್ರಾಚೀನ ಜನಪದ ಕಲೆಗಳನ್ನು ಒಂದಿನಿತು ಮಾರ್ಪಾಡು ಮಾಡದೇ, ಇದ್ದದ್ದನ್ನು ಇದ್ದ ಹಾಗೆ ಉಳಿಸಿಕೊಂಡು ಹೋಗಬೇಕೆನ್ನುವುದು ಒಂದು ಪ್ರಕಾರ ವಿದ್ವಾಂಸರ ವಾದ. ಅಂದರೆ ಕರ್ಮಟತನದಲ್ಲಿ ಮೂಲ ವಿಷಯವನ್ನು ವಸ್ತುವನ್ನು ಬದಲಾಯಿಸಲೇ ಬಾರದು ಎನ್ನುವುದು ಕೆಲವರ ಸಿದ್ಧಾಂತ. ಅದನ್ನು ಸ್ವಾಗತಿಸೋಣ. ಇನ್ನೊಂದು

ಬಗೆಯ ಜಾನಪದ ವಿದ್ವಾಂಸರ ಅಭಿಪ್ರಾಯವೇನೆಂದರೆ ಮೂಲ ವಸ್ತುವಿನ ಜೊತೆಯಲ್ಲಿ ಕಾಲಕ್ಕೆ ತಕ್ಕಂತೆ ಆಧುನಿಕತೆಯನ್ನು ಮೇಳೈಸುವುದರ ಜೊತೆ ಕೊಂಚ ಬದಲಾವಣೆಯನ್ನು ಮಾಡಬೇಕೆಂಬುದು ಕೆಲವರ ಅಭಿಪ್ರಾಯ. ಇನ್ನು ಆಧುನಿಕ ಜಾನಪದ ವಿದ್ವಾಂಸರ ಪ್ರಕಾರ ನಾವೀನ್ಯತೆಯೇ ಜಾನಪದ ಕಲೆಗಳ ಉತ್ಕರ್ಷಕ್ಕೆ ಕಾರಣ ಅದಕ್ಕಾಗಿ ಆಧುನೀಕತೆಯನ್ನು ಅಳವಡಿಸುವುದೇ ಸರ್ವಶ್ರೇಷ್ಠ ಎನ್ನುವವರು ಇದ್ದಾರೆ. ಆದರೆ ಹಳೇ ಬೇರು ಹೊಸಚಿಗುರು ಕೂಡಿರಲು ಮರ ಸೊಬಗು ಎನ್ನುವುದು ವಸ್ತುನಿಷ್ಠ ವಿದ್ವಾಂಸರ ಅಭಿಪ್ರಾಯ.

ಜನಪದ ಕಲೆಗಳನ್ನು ಗ್ರಾಮೀಣರು ಒಂದು ಆರಾಧನಾ ಕಲೆಯಂದು, ಇನ್ನೊಂದು ಆನಂದದ ಕಲೆಯೆಂದು ಭಾವಿಸಿದ್ದರು. ಇದನ್ನು ವಿರೂಪಗೊಳಿಸಿದರೆ ದೈವ ಮುನಿಯುತ್ತದೆ. ಅಥವಾ ಮಹಾರೋಗಗಳು ಊರಿಗೆ ಕಾಡುತ್ತವೆ ಎನ್ನುವ ದೃಢವಾದ ನಂಬಿಕೆಯಿಂದ ಶ್ರದ್ಧಾಭಕ್ತಿಯುಕ್ತವಾಗಿ ಆಚರಿಸುತ್ತಲೇ ಬಂದವರು & ನಂಬಿಕೆಯಿಟ್ಟವರು ತಮ್ಮ ಈ ಕಲೆ ಅಥವಾ ಪದ್ಧತಿಯನ್ನು ಅನ್ಯರು ವಿಡಂಬನೆ ಮಾಡುತ್ತಾರೆ ಅಥವಾ ತಾತ್ಸಾರ ಮಾಡುತ್ತಾರೆ ಎಂಬ ಸಂಕುಚಿತ ಭಾವನೆಯಿಂದ ಅದರ ಪ್ರಚಾರಕ್ಕೋ, ಪ್ರಾಪ್ತಿಗೂ ಮುಂದಾಗಲಿಲ್ಲ. ಆದರೆ ಇಂದು ಆಯಾ ಎಲ್ಲಾ ಭಾವನೆಗಳು ದೂರವಾಗಿವೆ. ಇದಕ್ಕೆ ಕಾರಣ ಸಮಾಜದಲ್ಲಿ ಸುಶಿಕ್ಷಿತರು, ಜಾನಪದ ವಿದ್ವಾಂಸರು ಈ ಕಲೆಗೊಂದು ವಿಶೇಷ ರೂಪಕೊಟ್ಟು ವಿಸ್ತಾರವಾಗುವಲ್ಲಿ ಶ್ರಮಿಸಿದರು. ಮಾಧ್ಯಮಗಳ ಪ್ರಭಾವದಿಂದ ವ್ಯಾಪಕತೆಯನ್ನು ಹೊಂದಿತು. ಸರ್ಕಾರಗಳ ಪ್ರೋತ್ಸಾಹದಿಂದ ಆರ್ಥಿಕ ಸಹಕಾರವೂ ದೊರೆಯಿತು.

ಜಾನಪದ ಕಲೆಗಳ ಮೂಲ ಉದ್ದೇಶವನ್ನು ಸರಿಯಾದ ಬಳಕೆ ಮತ್ತು ತಿಳುವಳಿಕೆಯ ಉದ್ದೇಶವನ್ನು ಸೂಕ್ತವಾಗಿ ಬಳಸಿಕೊಳ್ಳದೆ ಅನನ್ಯ ಕಾರಣಗಳಿಗೆ ಮನುಷ್ಯ ಅದರ ಮೂಲ ಉದ್ದೇಶವನ್ನು ಮಾರ್ಪಾಡುಗೊಳಿಸಿದ ತನ್ನಿಷ್ಟದಂತೆ ಬಳಸಿಕೊಳ್ಳುವುದಕ್ಕೆ ಆರಂಭಿಸಿದ ಆರಾಧನಾ ಮನೋಭಾವದ ಸ್ಥಾನದಲ್ಲಿ ಸಾಂಸ್ಕೃತಿಕ ಜಾಡನ್ನು ಲೇಪಿಸಿ ಹಾದಿಬೀದಿಗಳ ಮೆರವಣಿಗೆಗೂ ಅಥವಾ ವೇದಿಕೆಯ ಕಾರ್ಯಕ್ರಮಗಳ ಅಬ್ಬರಕ್ಕೂ ಅಳವಡಿಸಿಕೊಂಡರು. ಇದರಿಂದಾಗಿ ರಂಗದಲ್ಲಿ ಕೇಂದ್ರೀಕೃತವಾಗಿ ಪ್ರದರ್ಶಿಸಲ್ಪಡಬೇಕಾದ ಜಾನಪದ ಕಲೆಗಳು ಬೇರೆ ಬೇರೆ ಕಾರಣಗಳಿಂದ ಬದಿಗೆ ತಳ್ಳಲ್ಪಟ್ಟವು. ಯಾವುದೇ ಒಂದು ಕಲೆಯು ಅನ್ಯಕಾರಣಗಳಿಗಾಗಿ ಈ ರೀತಿಯ ಅಪಹಾಸ್ಯವನ್ನು ಹೊಂದಬಾರದು. ಕಲೆ ಮತ್ತು ಕಲಾವಿದ ಸಮಾಜದ ಅದ್ಭುತ ಆಸ್ತಿ. ಅದಕ್ಕೆ ಅದರದ್ದೇ ಆದಂತಹ ಸ್ಥಾನಮಾನ ಸಮಯಗಳನ್ನು ನೀಡುವುದರ ಮೂಲಕ ಒಂದು ಕೇಂದ್ರೀಕೃತ ಮಹತ್ವ ಸಲ್ಲಬೇಕು. ಉದಾ: ಡೊಳ್ಳು ಕುಣಿತ, ಕೋಲಾಟ, ಕಂಸಾಳೆ, ಮೂಟಾರುಗೀತೆಗಳು ಇತ್ತೀಚಿನ ದಿನಗಳಲ್ಲಿ ಮೆರವಣಿಗೆಗಳನ್ನು, ಗಣ್ಯವ್ಯಕ್ತಿಗಳನ್ನು ಸಡಗರಗೊಳಿಸುವ ಬೀದಿ ಕಲೆಗಳಾಗುತ್ತಿರುವುದು ವಿಷಾದನೀಯ.

ಆದರೆ ಈ ಎಲ್ಲಾ ಜನಪದೀಯ ಕಲೆಗಳಿಗೆ ಧಾರ್ಮಿಕ, ದೈವೀಕ ಸಾಂಸ್ಕೃತಿಕ, ಶೈಕ್ಷಣಿಕ ಮೌಲ್ಯಗಳಿವೆ. ವಜ್ರದ ಹರಳೊಂದು ಬಂಗಾರದ ಚೌಕಟ್ಟಿನಲ್ಲಿ ಶೋಭಿಸಬೇಕೆ ಹೊರತು, ಮೌಲ್ಯರಹಿತ ವಸ್ತುಗಳಿಂದಲ್ಲ. ಆದ್ದರಿಂದ ದೈವೀ ಆರಾಧನೆ ಪ್ರಧಾನ ಉದ್ದೇಶವಾದರೂ, ಸಾಂಸ್ಕೃತಿಕ ಸೊಗಡು ಬೆರೆತಾಗ ಸಮಾಜದ ಪ್ರೋತ್ಸಾಹ ಹಾಗೂ ಮೌಲ್ಯವರ್ಧನೆ ಆದ್ಯ ಕರ್ತವ್ಯ. ಮನುಷ್ಯನ ಅಂಗಾಂಗಳು ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುವಾಗ ಹಿತವಾದ ವಾತಾವರಣ, ಮಿತವಾದ ದೈನಂದಿಕ ಸ್ಥಿತಿ. ಸಮಯೋಚಿತ ಆಹಾರ ಪದ್ಧತಿ, ಸಮಾನ ಮನಸ್ಥಿತಿ ಮತ್ತು ದೈಹಿಕ ವ್ಯಾಯಾಮ ಇವು ಮನುಷ್ಯ ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲೇಬೇಕಾದ ಅಂಶಗಳು. ಈ ಒಂದೊಂದು ಬೇರೆ ಬೇರೆ ವಿಭಾಗದಿಂದ ದೊರೆಯುತ್ತದೆ. ಅವೆಲ್ಲವೂ ಒಂದೇ ಕಡೆ ದೊರೆಯಬೇಕೆಂದರೆ ಅದು ಕಲೆಯಿಂದ ಮಾತ್ರ ಸಾಧ್ಯ. ನಮ್ಮ ಜನಪದ ಕಲಾ ಪ್ರಕಾರಗಳಲ್ಲಿ ಮೇಲ್ಕಂಡ ಎಲ್ಲಾ ಉದ್ದೇಶಗಳನ್ನು ಪೂರೈಸಿಕೊಳ್ಳುವಾಗ ತನ್ನದೇ ಆದ ಸಾಧಕ–ಭಾದಕಗಳಿವೆ. ಆದರೆ ಅದನ್ನೆಲ್ಲಾ ನಿಭಾಯಿಸುವ ಸಮಯೋಚಿತವಾಗಿ ನಿರ್ವಹಿಸುವ ಶಕ್ತಿಯು ಕಲಾವಿದನಿಗಿರುತ್ತದೆ. ಅದಕ್ಕೆ ಕಾರಣ ಆತನ ಕಲಾಸಕ್ತಿ ಮತ್ತು ಪರಿಶ್ರಮ. ಆದರೆ ಕಲಾವಿದ ಪ್ರಯೋಜನಾಕಾರಿ ಹೊಂದುವುದು ಎಂದರೆ ಆನಂದ. ತಾಯಿ ಮಗುವನ್ನು ಹೆರುವಾಗ ಅತಿ ವೇದನೆಯನ್ನು ಅನುಭವಿಸುತ್ತಾಳೆ. ಆದರೆ ಮಗುವಿನ ಮುಖವನ್ನು ಕಂಡಾಗ ಸಂತೋಷಿಸುತ್ತಾಳೆ. ಅದರಂತೆ ಕಲಾವಿದನು ಕಲಾ ಪ್ರದರ್ಶನದಲ್ಲಿ ಆತ್ಮಾನಂದವನ್ನು ಹೊಂದುತ್ತಾನೆ. ಇಲ್ಲಿರುವ ಮಾನಸಿಕ ಸಮಸ್ಯೆ, ಆರ್ಥಿಕ ಸಮಸ್ಯೆ, ಆಹಾರ ಸಮಸ್ಯೆ, ಪರಿಸರಕ್ಕೆ ಹೊಂದಿಕೊಳ್ಳುವುದು ಮತ್ತು ಸಂಘಟನಾ ಸಮಸ್ಯೆ ಇವುಗಳೇ ದೊಡ್ಡ ಸವಾಲುಗಳು. ಉದಾ: ಸಂಘಟಕರಿಂದ ಕಲಾವಿದರಾಗುವ ತೊಡಕುಗಳು, ಅದರ ಪರಿಣಾಮಕ್ಕೆ ಗುರಿಯಾಗುವ ತೊಡಕುಗಳು, ಅದರ ಪರಿಣಾಮಕ್ಕೆ ಗುರಿಯಾಗುವ ಕಲಾವಿದ, ಕಲಾವಿದರ ಮಾನಸಿಕ ಮತ್ತು ದೈಹಿಕ ಸ್ಥಿತಿ ಒಂದೆಡೆಯಾದರೆ ಕಲಾ ಪ್ರದರ್ಶನದ ಸಮಯದಲ್ಲಿ ಅವ್ಯವಸ್ಥಿತವಾದ ಜೀವನ ಬಳಸಲ್ಪಡುವ ವೇಷಭೂಷಣಗಳ ಭಾರ ಮತ್ತು ಆಯಾಸ ಇವು ತೀವ್ರತರವಾದ ಪರಿಣಾಮವನ್ನು ಬೀರುತ್ತವೆ. ಸಮಾಜಕ್ಕೆ ಸಂತೋಷವನ್ನು ಕೊಡುವವ ತನ್ನ ಸಂತೋಷವನ್ನು ಕಾಣುವುದಕ್ಕೆ ದುರ್ಬಲನಾಗುತ್ತಾ ಹೋಗುತ್ತಾನೆ. ಕಲೆಯೊಂದು ಬೆಳೆದಾಗ ಕಲಾವಿದನು ಬೆಳೆಯುತ್ತಾನೆ ಎನ್ನುವುದು ಕೇವಲ ಅಭಿನಂದನಾ ನುಡಿ ಜನಪದ ಕಲೆಗಳಲ್ಲಿ ಉಪಕರಣಗಳನ್ನು ಅಂದರೆ ವೇಷಭೂಷಣ ಗಳನ್ನು ಪ್ರದರ್ಶನದಲ್ಲಿ ಅಳವಡಿಸಿಕೊಂಡು ಅಭಿನಯಿಸುವುದು ಅತ್ಯಂತ ಸವಾಲೇ.

ಇಂದು ಜಾಗತೀಕರಣದ ಸಂದರ್ಭದಲ್ಲಿ ಕಲಾವಿದ ತನ್ನ ಮೂಲ ಕಲೆಯನ್ನು ಮಾಡಿಕೊಂಡು, ಮತ್ತು ಕೆಲ ಕಲಾವಿದರು ಪ್ರವೃತ್ತಿಯನ್ನಾಗಿ ಮಾಡಿಕೊಂಡು ಕಲೆಯಿಂದ ಹಣವನ್ನು ಸಂಪಾದಿಸುತ್ತಿದ್ದಾರೆ. ಜನಪದ ಕಲಾವಿದರಲ್ಲಿ ಎರಡು ರೀತಿಯಲ್ಲಿ ತಮ್ಮನ್ನು

ತೊಡಗಿಸಿಕೊಂಡವರಿದ್ದಾರೆ. ಅದರಲ್ಲೂ ಮುಖ್ಯವಾಗಿ ಎರಡು ನೆಲೆಗಳಲ್ಲಿ ಕಲಾವಿದರನ್ನು ಕಾಣಬಹುದಾಗಿದೆ. ೧. ಹವ್ಯಾಸಿ ಕಲಾವಿದರು

೨. ವೃತ್ತಿ ಕಲಾವಿದರು.

ಮನಸ್ಸಿನ ಆನಂದ ಮತ್ತು ಕಲಾಸಕ್ತಿ ಈ ಎರಡನ್ನು ತೀವ್ರವಾಗಿ ತನ್ನ ಬದುಕಿನಲ್ಲಿ ಅರಿತು ಅಷ್ಟೋ-ಇಷ್ಟೋ ಕಲಿತುಕೊಂಡು, ಆಗಲೋ ಈಗಲೋ ತಮ್ಮ ಸಮಯವಿದ್ದಾಗ ಭಾಗವಹಿಸುವವರು ಹವ್ಯಾಸಿ ಕಲಾವಿದರು. ಈ ಹವ್ಯಾಸಿ ಕಲಾವಿದರು, ಕಲೆಯಿಂದ ಆರ್ಥಿಕ ಸಂಪಾದನೆಯನ್ನು ಪ್ರಧಾನ ಉದ್ದೇಶವಾಗಿಟ್ಟುಕೊಂಡಿರುವುದಿಲ್ಲ ಇವರು ತಮ್ಮ ಕೈಯಿಂದಲೇ ಹಣವನ್ನು ವಿನಿಯೋಗಿಸಿ ಸಂತೋಷಕ್ಕೋಸ್ಕರ ಪಾಲ್ಗೊಳ್ಳುವವರು ಕಲೆಯನ್ನೇ ತಮ್ಮ ಬದುಕನ್ನಾಗಿಸಿಕೊಂಡು ಕಲಾ ಸಂಪಾದನೆಯನ್ನೇ ನಂಬಿ ಜೀವನ ನಿರ್ವಹಣೆಯನ್ನು ಮಾಡುವವರು ವೃತ್ತಿಕಲಾವಿದರು. ಕಲೆಗೆ ಹವ್ಯಾಸ ಅಥವಾ ವೃತ್ತಿ ಎಂಬ ಬೇಧವಿರುವುದಿಲ್ಲ, ಆದರೆ ಹವ್ಯಾಸಿ ಕಲಾವಿದರಿಗೆ ಸತತ ಅಭ್ಯಾಸ ಸದಾ ರಂಗಪ್ರಯೋಗಶೀಲತೆ, ನಿರಂತರತೆ ಇಲ್ಲದ ಕಾರಣ ಹವ್ಯಾಸಿ ಕಲಾವಿದನು, ವೃತ್ತಿ ಕಲಾವಿದನಿಗೆ ಸಮದಂಡಿಯಾಗಿ ನಿಲ್ಲುವಲ್ಲಿ ಸೋಲುತ್ತಾನೆ. ಹವ್ಯಾಸಿ ಕಲಾವಿದರಿಗೆ ಕಲೆಯ ಮೇಲೆ ತುಡಿತ ಹೆಚ್ಚು, ಆದರೆ ಕಲಾಭಿಮಾನ ಎನ್ನುವುದು ಕಲೆಯನ್ನು ಉಳಿಸಿ-ಬೆಳೆಸುವಲ್ಲಿ ಅಂದವನ್ನು ನೀಡುತ್ತದೆ. ಈ ಜಾನಪದ ಕಲೆಗಳಲ್ಲಿ ಕಲಾ ಪ್ರಕಾರಗಳಿಲ್ಲ ಹವ್ಯಾಸಿ ಕಲಾವಿದರಿದ್ದಾರೆ. ವೃತ್ತಿ ಕಲಾವಿದರಿದ್ದಾರೆ. ಕೆಲವೊಮ್ಮೆ ವೃತ್ತಿ ಕಲಾವಿದರೊಡನೆ ಹವ್ಯಾಸಿ ಕಲಾವಿದರು ಪಾಲ್ಗೊಳ್ಳುತ್ತಾರೆ. ಪ್ರದರ್ಶನದ ಸಂದರ್ಭದಲ್ಲಿ ಇಬ್ಬರೂ ಮೇಳೈಸಿ ಸಮಯೋಚಿತವಾಗಿ ರಂಗ ಪ್ರದರ್ಶನವನ್ನು ನೀಡುತ್ತಾರೆ ಮತ್ತು ಜನರಿಂದ ಪ್ರಶಂಸೆಗಳನ್ನು ಪಡೆಯುತ್ತಾರೆ. ಇವೆಲ್ಲವೂ ಜಾಗತೀಕರಣದ ಸಂದರ್ಭದಲ್ಲಿ ಮಾತ್ರ ಸಾಧ್ಯವಾಗಿದೆ.

ತಮ್ಮ ತಂಡ ಪ್ರಚಾರಕ್ಕೆ ತರಲು ಸಮ್ಮೇಳನಗಳಲ್ಲಿ ಭಾಗವಹಿಸುವ ಮೂಲಕ, ದೂರದರ್ಶನ ಮತ್ತು ಖಾಸಗಿ ವಾಹಿನಿ ಹಾಗೂ ವೃತ್ತಿ ಪತ್ರಿಕೆಗಳಲ್ಲಿ ದೃಶ್ಯ ಶ್ರವ್ಯ ವಾಚನ ಮಾಧ್ಯಮದ ಮೂಲಕ ವಾಣಿಜ್ಯೀಕರಣಕ್ಕೆ ಪೂರಕವಾದ ಜಾಹೀರಾತಿನ ಮೂಲಕ ಹಬ್ಬ ಹರಿದಿನಗಳ ಮತ್ತು ರಥೋತ್ಸವ, ಜಾತ್ರಾ ಸಂಭ್ರಮದಲ್ಲಿ ಪ್ರದರ್ಶನಗಳನ್ನು ನೀಡುವುದರ ಮೂಲಕ ಜಾಗರಣ ಸಂದರ್ಭ ಸಂಘ-ಸಂಸ್ಥೆಗಳು ನೀಡುವ ಪ್ರಾಯೋಜಕತ್ವವನ್ನು ಉಪಯೋಗಿಸಿಕೊಂಡು ಪ್ರದರ್ಶನ ನೀಡುವುದು, ಕಂಪ್ಯೂಟರ್ ಆಧಾರಿತ ಯೂಟ್ಯೂಬ್, ಗೂಗಲ್, ಫೇಸ್‌ಬುಕ್, ವಾಟ್ಸ್ ಆಪ್, ಟಿಟ್ಟರ್‌ಗಳ ಮೂಲಕ ಪ್ರಚಾರ ಪಡೆಯುತ್ತಾರೆ. ಇಂದು ಜಾಗತೀಕರಣ ಅಂಗೈಯಲ್ಲೇ ತಂತ್ರಜ್ಞಾನವನ್ನು ನಮಗೆ ನೀಡಿದೆ. ಇವೆಲ್ಲವುಗಳ ಸದ್ಬಳಕೆಯಿಂದ ಇಂದು ಕಲಾವಿದ ನಾಡಿನಾದ್ಯಂತ ಹೆಸರು ಮಾಡುವಲ್ಲಿ, ಕಾರ್ಯಕ್ರಮವನ್ನು ಹೆಚ್ಚು ಹೆಚ್ಚು ನೀಡುವಲ್ಲಿ ಯಶಸ್ವಿಯಾಗಿದ್ದಾನೆ.

ಹಿಂದೊಂದು ಕಾಲದಲ್ಲಿ ಜನಪದ ಕಲೆಗಳ ಕುರಿತು ಮಡಿವಂತಿಕೆ ಇತ್ತು. ಕಲಾವಿದರೆಂದರೆ ಸ್ವಲ್ಪ ತಾತ್ಸಾರದ ಭಾವವಿದ್ದ ಕಾಲ. ಅದು ಅಂದಿನ ಪರಿಸ್ಥಿತಿಯಾಗಿತ್ತು. ಕಾಲ ಕಳೆದಂತೆ ಕಲೆಯ ಮಾರ್ಪಾಡಿನ ಜೊತೆಗೆ ಕಲಾವಿದನು ಬದಲಾಗುತ್ತಾ ಹೋದ. ಕಲಾವಿದನಲ್ಲಿ ಸಂಸ್ಕಾರ, ಅಧ್ಯಯನ ಮತ್ತು ಅರ್ಥ ಸಂಪಾದನೆ, ಕಲಾ ಪುರೋಗಾಮಿತ್ವ ಇವು ವೃದ್ಧಿಸಿದವು. ಸಮಾಜದಲ್ಲಿಯು ಕಲೆಗಳ ಕುರಿತಾದ ಭಾವನೆ ಪೂರಕವಾಗುತ್ತಾ ಬಂತು. ಕಲೆ ಮತ್ತು ಕಲಾವಿದ ಬೆಳೆಯುವಲ್ಲಿ ಸಮಾಜದ ಪ್ರೋತ್ಸಾಹವು ದೊರೆಯಿತು. ಮಹಿಳೆಯರು, ಬಾಲಕರು, ಮುದುಕರು ಕಲೆಯನ್ನು ಉಳಿಸುವಲ್ಲಿ, ಬೆಳೆಸುವಲ್ಲಿ ಮತ್ತು ಅಭಿನಯಿಸುವಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡರು. ಸ್ತ್ರೀಯು ಕಲಾ ಕ್ಷೇತ್ರಕ್ಕೆ ಕಾಲಿಡಬಾರದೆಂಬ ಧೋರಣೆ ಪ್ರಜ್ಞಾವಂತ ಸಮಾಜದಿಂದ ದೂರವಾಯಿತು. ಕಲಾ ಪ್ರದರ್ಶನದಲ್ಲಿ ಸಮಯಮಿತಿ ಅಳವಡಿಕೆಯಾಯಿತು. ಹೀಗೆ ಕಲೆಯನ್ನು ಉಳಿಸಿ–ಬೆಳೆಸುವ ನಿಟ್ಟಿನಲ್ಲಿ ಕಲಾಭಿಮಾನಿಗಳು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಕೊಂಡರು ಮತ್ತು ಬೆಳೆಸಿಕೊಂಡರು. ಇದೆಲ್ಲದ್ದಕ್ಕೂ ಮುಖ್ಯ ಕಾರಣ ಆಧುನಿಕತೆ ಮತ್ತು ಜಾಗತೀಕರಣ.

ಜನಪದ ಕಲೆಯ ಸತ್ಯ ಮತ್ತು ತತ್ವಗಳನ್ನು ಆಸ್ವಾದಿಸಿದ ಮಹಿಳೆಯರು, ಕಲಾ ಪ್ರಪಂಚದ ಆಕರ್ಷಣೆಗೆ ಒಳಗಾದರು. ಜನನಿ ತಾನೇ ಮೊದಲಗುರು ಎಂಬ ಮಾತಿನಂತೆ ಮನೆಯೊಳಗಿನ ಹಾಗೂ ಮನೆಯ ಹೊರಗಿನ ಅಜ್ಜಿಯರು ಲೀಲಾಜಾಲವಾಗಿ ಹಾಡುವ ಜಾನಪದ ಪದ್ಯಗಳಿಂದ, ಕಿರಿಯರು ಪ್ರಭಾವಿತರಾದರು. ಅದಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡರು. ಕಲೆಯ ಬಗ್ಗೆ ಅಧ್ಯಯನ ಮಾಡಿದರು. ಪ್ರಯೋಗ ರಂಗದಲ್ಲಿ ಯಶಸ್ಸನ್ನು ಸಾಧಿಸಿದರು. ಅಬಲೆಯಾದ ಸ್ತ್ರೀಗೆ ಸಬಲ ಸಮಾಜದ ಸಮ್ಮತಿ ಮತ್ತು ಪ್ರೋತ್ಸಾಹ ದೊರೆಯಿತು. ಮಹಿಳೆಯರೇ ಪ್ರದರ್ಶಿಸುವ ಅನೇಕ ಜಾನಪದ ಕಲಾ ಪ್ರಕಾರಗಳನ್ನು ಕರಗತಗೊಳಿಸಿಕೊಂಡು ಪ್ರದರ್ಶಿಸಿದರು. ಪುರುಷ ಪ್ರಧಾನವಾದ ಪೂಜಾಕುಣಿತ, ಡೊಳ್ಳುಕುಣಿತ ಕಂಸಾಳೆ ಮೊದಲಾದ ಕಲಾ ಪ್ರದರ್ಶನವನ್ನು, ಮಹಿಳೆಯರೇ ಪುರುಷರಿಗೆ ಸಮಾನವಾಗಿ ಪ್ರದರ್ಶಿಸುವ ಪ್ರಯತ್ನವನ್ನು ಮಾಡಿದರು. ಅದರಲ್ಲಿ ಯಶಸ್ಸನ್ನು ಕಂಡರು. ಕೀರ್ತಿಯನ್ನು ಸಂಪಾದಿಸಿದರು. ಮಹಿಳೆಯರು ಈ ಕಲೆಯನ್ನು ಜನಪ್ರಿಯಗೊಳಿಸಲು ಸಾಕಷ್ಟು ಶ್ರಮಿಸುತ್ತಿದ್ದಾರೆ. ಮನೆಯ ಸರ್ವೋತೋಮುಖ ಜವಾಬ್ದಾರಿಯನ್ನು ನಿಭಾಯಿಸುತ್ತಲೇ ಬಿಡುವಿನ ವೇಳೆಯಲ್ಲಿ ತಮಗೆ ಸಿಗಬಹುದಾದ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲಿ ಭಾಗವಹಿಸಿದ ಅನೇಕ ಉದಾಹಣೆಗಳು ಇವೆ. ಮಹಿಳಾ ಸಮಾವೇಶ, ಸಾಹಿತ್ಯ ಸಮ್ಮೇಳನ, ಜನಜಾಗೃತಿ, ಸಂಚಾರ ಮಹಿಳಾ ವಿಜಯ, ಸ್ತ್ರೀಶಕ್ತಿ ಸಂಘ, ವೃತ್ತ ಪತ್ರಿಕೆಗಳಲ್ಲಿ ಜನಪದ ಕಲೆಯ ಕುರಿತಾದ ಲೇಖನಗಳು, ಸ್ತ್ರೀಯ ಸಾಧನೆ, ಇತ್ಯಾದಿ ಇತ್ಯಾದಿಗಳ ಮೂಲಕ ಕಲೆ ಜಯಪ್ರಿಯಗೊಳಿಸಲು ಮಾಧ್ಯಮದ ಮೂಲಕ ಪ್ರಯತ್ನಿಸಿವೆ. ಇವೆಲ್ಲವೂ

ಸಾಧ್ಯವಾಗಿದ್ದು ದೃಶ್ಯಮಾಧ್ಯಮದಿಂದ. ರೇಡಿಯೋ, ಟಿ.ವಿ., ಕಂಪ್ಯೂಟರ್, ಜನರ ಜ್ಞಾನಕ್ಷಿತಿಜವನ್ನು ಹೆಚ್ಚಿಸಿತು. ಹೆಣ್ಣು ಮಕ್ಕಳು ಎಲ್ಲದರಲ್ಲೂ ಮೇಲುಗೈ ಸಾಧಿಸಬೇಕೆನ್ನುವ ಮನಸ್ಥಿತಿಗೆ ಬಂದರು. ಹಾಗೂ ತಮ್ಮ ಮನೆಯ ಹೆಣ್ಣು ಮಕ್ಕಳನ್ನು ನಾಲ್ಕು ಗೋಡೆಯ ಮಧ್ಯದಿಂದ ಹೊರಜಗತ್ತಿಗೆ ತೆರೆದುಕೊಳ್ಳಲು ಅನುವುಮಾಡಿಕೊಟ್ಟರು. ಇದು ಜಾಗತೀಕರಣದಿಂದ ಮಾತ್ರ ಸಾಧ್ಯವಾಯಿತು.

ಆಂಗೀಕ, ವಾಚೀಕ, ಆಹಾರ್ಯಗಳಲ್ಲಿ ಗಣನೀಯ ಸುಧಾರಣೆಗಳೂ ಬಂದವು. ಕಲಾವಿದನನ್ನು ಆದರದಿಂದ ನೋಡುವ ದಿನವು ಬಂತು. ಯಾಕೆಂದರೆ ಉದಾಹರಣೆಯಾಗಿ ಹಿಂದೆ ಕಲಾವಿದರಾದಾಗ ಅವರನ್ನು ಕೀಳಾಗಿ ನೋಡುವ ಕಾಲವಿತ್ತು. ಕಲೆಯನ್ನು ತಾತ್ಸಾರವಾಗಿಸುತ್ತಿದ್ದರು. ಕೆಲವು ಕಲಾವಿದರ ವರ್ತನೆಯೂ ಅದಕ್ಕೆ ಪೂರಕವಾಗಿಯೇ ಇತ್ತು. ಕಲಾವಿದರಿಗೆ ಹೆಣ್ಣು ಕೊಡಬಾರದು ಎಂಬ ಧೋರಣೆ ನಿಜವಾಗಿಯೂ ಇತ್ತು ಎನ್ನುವುದಕ್ಕೆ ಇಂದು ಬದುಕಿರುವ ಅನೇಕ ಹಿರಿಯ ಕಲಾವಿದರು ತಮ್ಮ ಅನುಭವದಲ್ಲಿ ಮೌಖಿಕವಾಗಿ ಹೇಳಿದ್ದನ್ನು ಕೇಳಿದ್ದೇವೆ. ಆತ್ಮಚರಿತ್ರೆಗಳಲ್ಲಿ ಬರೆದಿದ್ದನ್ನು ಓದಿದ್ದೇವೆ. ಆದರೆ ಅರವತ್ತನಾಲ್ಕು ವಿದ್ಯೆಗಳಲ್ಲಿ ಕಲೆ ಕಲಾಭಿಮಾನಿಗಳಿಗೆ ಆನಂದವನ್ನು ಉಂಟು ಮಾಡುತ್ತವೆ. ಬ್ರಹ್ಮಾನಂದವನ್ನು ನೀಡುತ್ತದೆ. ಈ ನೆಲೆಯಲ್ಲಿ ಕಲೆಯ ಜಾಗತೀಕರಣ, ಸಮಾಜದಿಂದ ಅತ್ಯಂತ ಪರಿಣಾಮವನ್ನು ಹೊಂದಿತು. ಕಲಾವಿದ ಪದೇ ಪದೇ ಟಿ.ವಿ. ಪರದೆ, ಚಲನಚಿತ್ರ, ವೇದಿಕೆ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಂಡು ಪ್ರಚಾರಕ್ಕೆ ಬಂದು, ಅವನಿಗೆ ಗೌರವ ಸ್ಥಾನಮಾನಗಳು ಹೆಚ್ಚಿದವು. ಇದಕ್ಕೆಲ್ಲಾ ಕಾರಣ ಜಾಗತೀಕರಣ ಎಂದರೆ ತಪ್ಪಾಗಲಾರದು.

ದೃಶ್ಯಮಾಧ್ಯಮದಿಂದಾಗಿ ಪ್ರಪಂಚದ ಕಲೆಗಳನ್ನು ಕಂಡ ಸಹೃದಯರು, ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಕಲೆಯನ್ನು ಆಸ್ವಾದಿಸುತ್ತಾರೆ. ಅಧ್ಯಯನವು ಇದಕ್ಕೆ ಪೂರಕವಾಗಿರುತ್ತದೆ. ಆಧುನಿಕತೆಯ ಅಬ್ಬರದಲ್ಲಿ ಮನುಷ್ಯ ತನ್ನ ವಿಮರ್ಶಾತ್ಮಕ ಪ್ರಜ್ಞೆಯನ್ನು, ಸದಾಕಾಲ ಎಚ್ಚರಲ್ಲಿಟ್ಟುಕೊಂಡಿರುತ್ತಾನೆ. ಹಾಗಾಗಿಯೇ ವಿಮರ್ಶಾ ಪ್ರಪಂಚದಲ್ಲಿ ಭಿನ್ನ ಭಿನ್ನವಾದ ಆಸ್ವಾದನೆಯನ್ನು ಸವಿಯುವವರಿದ್ದಾರೆ. ಒಂದು ಕಲೆ ಇನ್ನೊಂದು ಕಲೆಯೊಂದಿಗೆ ಮೇಳೈಸಿದಾಗ, ಕಲಾರಸಸ್ವಾದನೆಯನ್ನು, ಸವಿಯುವ ಮನಸ್ಥಿತಿ, ಪ್ರೇಕ್ಷಕನ ವೈಯಕ್ತಿಕ ನಿರ್ಧಾರಕ್ಕೆ ಬಿಟ್ಟಿದ್ದು. ಇಲ್ಲಿ ಪ್ರೇಕ್ಷಕನ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಆಸಕ್ತಿ, ಅಭಿರುಚಿ, ಭಿನ್ನಭಿನ್ನವಾಗಿರುತ್ತದೆ. ಅದರ ಪ್ರಯೋಜನ ಪರಿಣಾಮಗಳು ಭಿನ್ನವಾಗಿರುತ್ತವೆ ಮತ್ತು ತುಲನಾತ್ಮಕ ಅಧ್ಯಯನ ವಿಮರ್ಶೆಗಳು ನಡೆಯುತ್ತವೆ.

* ಜಾಗತಿಕ ಮಟ್ಟದಲ್ಲಿ ಜನಪದ ದೃಶ್ಯಮಾಧ್ಯಮ ಹರಿದಾಡುವಂತೆ ಮಾರ್ಪಾಡು ಮಾಡಬೇಕು.
* ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಜನಪದ ಕಲೆಗಳ ಕಲಾವಿದರ ಪರಿಚಯ, ಉದ್ದೇಶ ಎಲ್ಲರಿಗೂ ತಿಳಿಯಬೇಕು.

* ಇಂದಿನ ಶರವೇಗದಲ್ಲಿ ತಲುಪುವ ಇಂಟರ್‌ನೆಟ್, ಬ್ಲಾಗ್‌ಗಳಲ್ಲಿ ಕಲೆಗಳ ವಿಷಯ ವಿವರಣೆಯನ್ನು ಸಂಘ ಸಂಸ್ಥೆ ಆಕಾಡಮಿಗಳು ಮಾಡಬೇಕು.
* ವಿಶ್ವದ ಜನರೆಲ್ಲರೂ ಹೇಗೆ ಅಧ್ಯಾತ್ಮಿಕದತ್ತ ಸಂಮೋಹನಗೊಂಡಿದ್ದಾರೋ, ಹಾಗೆಯೇ ಜಾನಪದಾಸಕ್ತರೂ ಕೂಡ ಜನಪದ ಕಲೆಗಳ ಬಗ್ಗೆ ವಹಿಸಬೇಕು.
* ಸರ್ಕಾರದ, ವಿಶ್ವವಿದ್ಯಾನಿಲಯಗಳ ಅನುದಾನದ ಧನಸಹಾಯದಿಂದ ಆಯೋಗಗಳು ನಿರಂತರವಾಗಿ ಜನಪದ ಕಲೆಗಳ ಮೇಲೆ ಕಾರ್ಯನಿರ್ವಹಿಸಬೇಕಿದೆ.

ಆಧುನಿಕ ವಸ್ತು ಅಳವಡಿಸಿಕೊಂಡಾಗ ಆಗುವ ಪರಿಣಾಮ-ದುಷ್ಪರಿಣಾಮ

ಪರಿಣಾಮ : ಪ್ರಪಂಚ ಪರಿವರ್ತನಾಶೀಲವಾದುದು ವಿಕಾರದಿಂದಲೇ ಆಕಾರ ಹೊಂದಿದಾಗ ಅದಕ್ಕೊಂದು ಸ್ವರೂಪ ಮತ್ತು ಸಂಸ್ಕಾರ ಬರುತ್ತದೆ ಹಾಗೆಯೇ ಪುರಾತನ ನಾಗರೀಕತೆಯನ್ನು ಅವಲೋಕಿಸಿದಾಗ ವಿಕಾಸವಾದದಿಂದಲೇ ಸರ್ವಾಂಗೀಣ ಪ್ರಗತಿ ಸಾಧ್ಯ. ನಮ್ಮ ಜನಪದ ಕಲೆಗಳು ಪುರಾತನ ಪದ್ಧತಿಯನ್ನು ಸಂಶ್ಲೇಷಿಸಿ, ಆಧುನಿಕತೆಯನ್ನು ಅಳವಡಿಸಿಕೊಂಡು ಬಂದಿರುವುದರಿಂದಲೇ ಪ್ರಪಂಚದ ಯಾವುದೇ ಕಲೆಗಳಿಗಿಂತಲೂ ಕಡಿಮೆಯಿಲ್ಲ ಎನ್ನುವ ಹೆಗ್ಗಳಿಕೆ ನಮ್ಮದು. ನಿಂತ ನೀರು ಕೊಳಚೆಗೆ ಸ್ಥಾನ, ಹರಿವ ನೀರು ಶುಭ್ರತೆಯ ಸಂಕೇತ ಹಾಗೆಯೇ ಕಲೆಯೊಂದು ವಿಕಾಸವನ್ನು ವಿಚಾರಾತ್ಮಕವಾಗಿ ವಿಮರ್ಶಿಸಿ ವಿಜ್ಞಾನಕ್ಕೆ ಒಳಪಡಿಸಿದಾಗ ಸಾಧ್ಯ ಮತ್ತು ಸಾಧ್ಯತೆಗಳು ಹೆಚ್ಚುತ್ತವೆ. ಪ್ರಯೋಜನ ಪರಿಣಾಮಗಳಲ್ಲಿ ಗೆಲ್ಲುತ್ತವೆ. ಜನಪದ ಕಲೆಯು ಆಧುನಿಕತೆಯನ್ನು ಅಂದರೆ ಎಲ್ಲಾ ರೀತಿಯಲ್ಲಿಯೂ ಒಂದು ವಾದ್ಯ ಪರಿಕರ, ನರ್ತನ, ವೇಷಭೂಷಣ, ಪ್ರದರ್ಶನಾ ಕ್ರಮ ಜನಾಕರ್ಷಣಾ ವಿಧಾನ ಇನ್ನೊಂದು ಕಲೆಗೆ ಸಮಾನಾಂತರವಾಗಿ ನಿಲ್ಲುವಿಕೆ ಮತ್ತು ಸ್ಪರ್ಧಿಸುವಿಕೆ ಇವೆಲ್ಲವೂಗಳ ಸಾಧ್ಯತೆಗೆ ಆಧುನಿಕತೆಯನ್ನು ಅಳವಡಿಸಿಕೊಂಡಿದ್ದೇ ಪ್ರಧಾನ ಕಾರಣ ಹಾಗಾಗಿ ಆಧುನೀಕರಣ ಅಳವಡಿಕೆಯಿಂದ ಗುಣಾತ್ಮಕ ಅಂಶಗಳೇ ಹೆಚ್ಚಾಗಿವೆ.

ದುಷ್ಪರಿಣಾಮ : ಒಂದರ ಬದಲಾವಣೆಗಾಗಿ ಅಥವಾ ಸುಧಾರಣೆಗಾಗಿ ಮೂಲವಸ್ತುವಿನ ಸ್ವರೂಪ, ವಿರೂಪಗೊಳ್ಳುವ ಸಾಧ್ಯತೆ ಇರುತ್ತದೆ. ಶಾಸ್ತ್ರೀಯತೆ ಅಥವಾ ಸಂಪ್ರದಾಯತೆ ಎನ್ನುವುದು ಮಾರ್ಪಾಡಿಗೆ ಯೋಗ್ಯವಲ್ಲ ಅದು ಸಿದ್ಧಾಂತಕ್ಕೆ ವಿರೋಧವಾದದ್ದು. ಕೆಲವು ಕಾರಣಗಳಿಂದ ಸಂವರ್ಧನೆಯ ಹೆಸರಲ್ಲಿ ಮೂಲ ಜಾನಪದ ಕಲೆಯು ತನ್ನ ಮೂಲ ಸ್ವರೂಪವನ್ನೇ ಬಿಟ್ಟುಬಿಡುವ ಸಾಧ್ಯತೆ ಇರುತ್ತದೆ. ಪರಿವರ್ತನೆಯನ್ನು ಹೊಂದುತ್ತಾ ಹೋದ ಜನಪದ ಕಲೆಗಳು ಆಧುನೀಕತೆ ಎನ್ನುವ ಕಾರಣದಿಂದ ತನ್ನ ಮೂಲಸತ್ವವನ್ನು, ತತ್ವವನ್ನು ಬಿಡಬಾರದು. ಕೆಲವೊಮ್ಮೆ ವ್ಯಕ್ತಿಯ ಕಾರಣದಿಂದ, ಸಮಾಜದ ಕಾರಣದಿಂದ, ಪರಿಸರದ ಕಾರಣದಿಂದ ಕ್ಷೇತ್ರದ ಕಾರಣದಿಂದ ಪರಿಣಾಮಕ್ಕಿಂತ ದುಷ್ಪರಿಣಾಮವೇ ಹೆಚ್ಚಾಗುವ ಸಾಧ್ಯತೆ ಇರುತ್ತದೆ.

೪.೨ ದೃಶ್ಯ ಶ್ರವ್ಯ ವಾಹಿನಿಗಳು ಮತ್ತು ಕಲಾ ಪ್ರದರ್ಶನದ ನೆಲೆಗಳು

ನಮ್ಮಲ್ಲಿ ಕಲಾ ಮಾಧ್ಯಮವು ಎರಡು ಬಗೆಯಲ್ಲಿ ಬೆಳೆದು ಬಂದಿರುವುದನ್ನು ಗಮನಿಸಬಹುದು. ನಾಟಕ, ಬಯಲಾಟ, ಯಕ್ಷಗಾನ, ಜನಪದ ಕುಣಿತಗಳು ಹಸೆ ರಂಗೋಲಿ ಮೊದಲಾದ ಕಲೆಗಳನ್ನು ನೋಡುವ ಮಾಧ್ಯಮವಾಗಿ ಒಂದು ಬಗೆಯಲ್ಲಿ ಬೆಳೆದು ಬಂದರೆ, ಯಂತ್ರಗಳನ್ನು ಆಧರಿಸಿದ ದೃಶ್ಯ ಮಾಧ್ಯಮದ ಬಗೆ ಇನ್ನೊಂದು ಬಗೆಯಾಗಿದೆ. ಅದರಲ್ಲಿ ಆಕಾಶವಾಣಿ, ಚಲನಚಿತ್ರ, ದೂರದರ್ಶನ, ಖಾಸಗಿ ವಾಹಿನಿಗಳು ಅಂತರ್ಜಾಲ ಸೇರುತ್ತದೆ. ಈ ಎರಡಕ್ಕೂ ಹಲವು ವ್ಯತ್ಯಾಸಗಳಿವೆ ಮತ್ತು ಹಲವು ಮಿತಿಗಳಿವೆ ೧) ಇದನ್ನು ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು. ೨) ಪ್ರೇಕ್ಷಕನಿಗೆ ಪ್ರತ್ಯಕ್ಷವಾಗಿ ದಕ್ಕುವ ನೇರ ದೃಶ್ಯ ಕಲೆ, ಅಪ್ರತ್ಯಕ್ಷವಾಗಿ ದಕ್ಕುವ ಪರೋಕ್ಷ ದೃಶ್ಯ ಮಾಧ್ಯಮಗಳು. ೩) ಪ್ರೇಕ್ಷಕನಿಗೆ ಪ್ರತ್ಯಕ್ಷವಾಗಿ ದಕ್ಕುವ ದೃಶ್ಯ ಕಲೆಗಳಲ್ಲಿ ಕಲಾವಿದನ ಸೋಪಜ್ಞತೆಗೆ ಸಾಕ್ಷಿಯಾಗಿದೆ. ನಾಟಕ, ಬಯಲಾಟ, ಯಕ್ಷಗಾನ ಮೊದಲಾದವುಗಳು ಪ್ರತ್ಯಕ್ಷ ಕಲೆಗಳು. ಇಲ್ಲಿನ ರಂಗಸಜ್ಜಿಕೆ, ವೇಷಭೂಷಣ, ಕಲಾವಿದನ ಚರ್ಯೆ, ವಾದ್ಯ ಪರಿಕರಗಳು ಎಲ್ಲವೂ ಪ್ರೇಕ್ಷಕನ ಅನುಭವಕ್ಕೆ ದಕ್ಕುತ್ತಾ ಹೋಗುತ್ತವೆ. ಕಲಾವಿದ ಪ್ರೇಕ್ಷಕನಿಗೆ ಸ್ಪಂದಿಸುವ ನೇರ ಅವಕಾಶ ಇಲ್ಲಿದೆ. ಆದರೆ ದೃಶ್ಯ ಮಾಧ್ಯಮಗಳು ಇದಕ್ಕೆ ಹೊರತಾಗಿವೆ. ಯಂತ್ರ ಸಾಧನಗಳ ಮೇಲೆ ಕಾರ್ಯನಿರ್ವಹಿಸುವ ಆಧುನಿಕ ದೃಶ್ಯ ಮಾಧ್ಯಮಗಳು ದಾಖಲೀಕರಣಗೊಂಡ ವಸ್ತು ಸಂಗತಿಗಳನ್ನು ಮಾತ್ರ ಪ್ರಸಾರ ಮಾಡಲು ಸಾಧ್ಯವಾಗುತ್ತದೆ. ಇಲ್ಲಿ ಪ್ರತ್ಯಕ್ಷ ಅಥವಾ ಲೈವ್ ಎಂಬ ಪರಿಕಲ್ಪನೆ ಇದ್ದರೂ, ಅದು ಒಂದು ಅರ್ಥದಲ್ಲಿ ಬದಲಾಯಿಸಲಾಗದ ದಾಖಲೀಕರಣವೇ ಆಗಿದೆ. ಇಲ್ಲಿ ಸಂಕಲನ ಪರಿಣಾಮಕಾರಿಯಾಗುವ ಮಹತ್ವವಿದೆ. ಚಿತ್ರೀಕರಿಸಲ್ಪಟ್ಟ ವಿಷಯಗಳನ್ನು ಪ್ರೇಕ್ಷಕನಿಗೆ ಮುಟ್ಟಿಸಲು ಇಲ್ಲಿ ಬೇಕಾದಷ್ಟು ಅವಕಾಶಗಳಿವೆ. ಚಿತ್ರೀಕರಿಸಿದ ಸಂಗತಿಗಳನ್ನಷ್ಟೇ ಇಲ್ಲಿ ಒಪ್ಪ ಓರಣ ಮಾಡಬಹುದೇ ಹೊರತು, ಕಲಾವಿದನ ಸೃಜನಶೀಲತೆಗೆ ಮತ್ತೆ ಮತ್ತೆ ಅವಕಾಶವಿಲ್ಲ. ಆದೆ ದೃಶ್ಯಕಲೆಗಳ ಬೆಳವಣಿಗೆಗೆ ಇವು ಪೂರಕವಾದ ಮಾಧ್ಯಮಗಳೇ ಹೊರತು ಇದೇ ಕಲಾ ಪ್ರಕಾರಗಳಲ್ಲ. ಈ ಹಿನ್ನಲೆಯಲ್ಲಿ ನಮ್ಮ ನಡುವಿರುವ ಪ್ರಮುಖ ದೃಶ್ಯ-ಶ್ರವ್ಯ ಕಲಾವಾಹಿನಿಗಳನ್ನು ಕಲೆಯ ನಿರ್ವಹಣೆಯಲ್ಲಿ ಇವು ನಿರ್ವಹಿಸದ ಪಾತ್ರವನ್ನು ವಿಶ್ಲೇಷಿಸುವುದು ಸೂಕ್ತ.

ಜನವಾಣಿ ಬೇರು ಕವಿವಾಣಿ, ಹೂವು ಎಂಬ ಬಿ.ಎಂ.ಶ್ರೀಯವರ ಮಾತಿನಂತೆ ನಮ್ಮ ಎಲ್ಲಾ ಕಲಾ ಪ್ರಕಾರಗಳಿಗೂ ಜನಪದವೇ ಜೀವಸತ್ವವಾಗಿದೆ. ಮೂಲ ಸ್ತೋತ್ರವಾಗಿದೆ. ಕೈಗಾರಿಕಾ ಕ್ರಾಂತಿಯ ನಂತರ ತಾಂತ್ರಿಕತೆ ಮುಂದುವರೆದಂತೆ ಹೊಸ-ಹೊಸ ಯಂತ್ರಗಳು ಜೀವನದ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಳ್ಳತೊಡಗಿದವು. ಶ್ರವ್ಯ ದೃಶ್ಯ ಸಾಧನಗಳು ಕಂಡು ಹಿಡಿಯಲ್ಪಟ್ಟವು. ಈ ಶ್ರವ್ಯ ದೃಶ್ಯ ಸಾಧನಗಳ ಜನಪ್ರಿಯತೆಗೆ ವಿಶ್ವದ ವಿವಿಧ ಜಾನಪದ ಆಕರಗಳು ಮೂಲ ದ್ರವ್ಯಗಳಾದವು. ಉದಾಹರಣೆಗೆ ಆರಂಭ ಕಾಲಘಟ್ಟದ

ಸಿನಿಮಾಗಳನ್ನು ನೋಡಿದರೆ ಈ ವಿಷಯ ಮನದಟ್ಟಾಗುತ್ತದೆ. ಈ ಸಿನಿಮಾಗಳ ಬಹುತೇಕ ಕಥಾ ವಸ್ತುಗಳು ಆದಾಗಲೇ ಕಂಪನಿ ನಾಟಕಗಳಾಗಿ ಪ್ರಸಿದ್ಧವಾಗಿದ್ದ ಜಾನಪದ ಕಥೆಗಳು, ಜನಪದ ಪುರಾಣಗಳೇ ಆಗಿದ್ದವೆಂಬುದು ಗಮನಾರ್ಹ.

ಇಡೀ ಸಿನಿಮಾ ಜಗತ್ತಿನ ಇತಿಹಾಸವನ್ನು ಅವಲೋಕಿಸಿದರೆ ಜನಪದ ಮತ್ತು ಸಿನಿಮಾದ ನಂಟು ಹೊಕ್ಕುಳ ಬಳ್ಳಿಯ ಸಂಬಂಧದಂತೆ ಕಾಣುತ್ತದೆ. ಚಿತ್ರರಂಗದ ಸಾವಿರಾರು ಹಾಡುಗಳು ಜನಪ್ರಿಯವಾಗಿರುವುದು ಜನಪದ ಹಾಡುಗಳ ರಾಗದ ಮಟ್ಟುಗಳನ್ನು ಮತ್ತು ಜನಪದ ವಾದ್ಯ ಪರಿಕರಗಳನ್ನು ಬಳಸಿರುವುದರಿಂದ ಎಂಬುದು ಬಹಳ ಮುಖ್ಯವಾದುದು ವಿಷಯವಾಗಿದೆ. ಇಂದಿಗೂ ಕೂಡ ಸೂಪರ್ ಹಿಟ್ ಸಿನಿಮಾ ಸಂಗೀತಗಾರರನ್ನು ಸಂದರ್ಶಿಸಿದಾಗ ಅವರು ತಮ್ಮ ವಿರಾಮದ ದಿನಗಳಲಿ ಹಳ್ಳಿ-ಹಳ್ಳಿಗಳಿಗೆ ಜನಪದ ಗಾಯಕರನ್ನು ಹುಡುಕಿಕೊಂಡು ಹೋಗುವುದು ಅವರ ರಾಗ ಮಟ್ಟುಗಳನ್ನು ಸಂಗ್ರಹಿಸುವ ಹವ್ಯಾಸವಿಟ್ಟುಕೊಂಡಿರುವುದನ್ನು ನೆನಪಿಸಿಕೊಳ್ಳುತ್ತಾರೆ. ನಮ್ಮ ನಿತ್ಯದ ಯಾಂತ್ರಿಕ ಜೀವನದಲ್ಲಿ ಬದುಕಿನ ತಾಳ ತಪ್ಪಿರುವುದು ಆಧುನಿಕತೆಯ ಒಂದು ವಿಪರ್ಯಾಸವಾಗಿದೆ. ಆದರೆ ವೃತ್ತಿ ಮೂಲದಿಂದಲೇ ಹುಟ್ಟಿರುವ ಜನಪದ ಸಾಹಿತ್ಯ ಹಾಗಲ್ಲ. ಅದು ಬದುಕಿನ ಕ್ರಿಯೆಯ ಭಾಗವಾಗಿ ಬದುಕಿನ ಲಯವನ್ನು ಗ್ರಹಿಸುವ ಹಾಡಾಗಿದೆ. ಆದ್ದರಿಂದಲೇ ನಾವು ಆಧುನಿಕ ಕಾಲದಲ್ಲಿ ಮತ್ತೆ ಮತ್ತೆ ಮರಳಿ ಮಣ್ಣಿಗೆ ಹೊರಳುತ್ತಿದ್ದೇವೆ. ಹೀಗೆ ನಮ್ಮ ಜನಪದವು ಆಧುನಿಕ ಬದುಕಿನೊಂದಿಗೆ ನಿತ್ಯವು ಲೋಕಾನುಸಂಧಾನ ನಡೆಸುತ್ತಲೇ ಬಂದಿದೆ.

ಜನಪದ ಬದುಕಿನೊಳಗೆ ಪ್ರದರ್ಶನ ಕಲೆಗಳ ಪಾತ್ರ ಹಾಗೂ ಗಾತ್ರಗಳೆರಡೂ ತುಂಬಾ ವಿಸ್ತಾರವಾದುದು. ಪ್ರದರ್ಶನ ಕಲೆಗಳ ಸಂಖ್ಯೆ ನೂರಾರು. ಮೇಲು ನೋಟಕ್ಕೆ ಈ ಕಲೆಗಳು ಮನುಷ್ಯನ ಮನರಂಜನೆಯ ಉದ್ದೇಶದವು ಎಂದೆನಿಸಿದರೂ ಆಳದಲ್ಲಿ ಕೇವಲ ಮನರಂಜನೆಯಲ್ಲ. ಅದರಾಚೆಗಿನ ಒಂದು ಸಾಮಾಜಿಕ ಜವಾಬ್ದಾರಿ ಇದೆ ಕಲೆಗಳಿಗೆ ಇಲ್ಲಿ ಗಮನಿಸಬೇಕಾದುದು ಏನೆಂದರೆ ಪ್ರದರ್ಶನ ಕಲೆಗಳೆಲ್ಲವೂ ಒಂದಿಲ್ಲೊಂದು ಆರಾಧನೆಯ ಅಂಗವಾಗಿಯೇ ಬಂದಿವೆ. ಒಂದು ಕಲೆಯನ್ನು ಪ್ರದರ್ಶಿಸುವ ಸಮುದಾಯದ ಪ್ರಾಪಂಚಿಕ ಜ್ಞಾನವನ್ನು ಪ್ರಕಟಿಸುತ್ತದೆ. ಉದಾ : ಪೂಜಾ ಕುಣಿತ, ಡೊಳ್ಳು, ಸೋಮನಕುಣಿತ, ಭೂತಾರಾಧನೆ, ನಾಗಮಂಡಲ, ವೀರಗಾಸೆ, ಜೋಗತಿಕುಣಿತ, ಕಂಸಾಳೆ, ಗೊರವರ ಕುಣಿತ, ಡೊಳ್ಳು ಕುಣೀತ, ಕರಪಾಲ ಮೇಳ ಇವೇ ಮೊದಲಾದ ಕಲೆಗಳು ತಮ್ಮ ತಮ್ಮ ದೈವಗಳ ಆರಾಧನೆಯ ಹಿನ್ನೆಲೆಯಲ್ಲಿ ರೂಪುಗೊಂಡಿದ್ದರೆ ಕರಗ ಕುಣಿತ, ಅಂಟಿಗೆ ಪಂಟಿಗೆ, ಪಂಜಿನ ಕುಣಿತ, ಲಂಬಾಣಿ ಕುಣಿತ, ಕೋಲಾಟ ಇವೆಲ್ಲವೂ ಸಮುದಾಯದ ಲೋಕದೃಷ್ಟಿಯನ್ನು ಪ್ರಕಟಿಸುತ್ತವೆ. ಹೀಗೆ ಜನಪದರ ಪ್ರದರ್ಶನ ಕಲೆಗಳು ತಮ್ಮದೆ ಆದ ಕಾರ್ಯ ನಿಮಿತ್ತ ಪ್ರದರ್ಶನಗೊಳ್ಳುತ್ತವೆ. ಮುಖ್ಯವಾಗಿ ಸಮಾಜದ

ಜನರಿಗೆ ಸ್ವಾಸ್ಥ್ಯಕ್ಕೆ ಬೇಕಾಗುವ ನೀತಿ ನಿಯಮಗಳನ್ನು ತಿಳಿಸುತ್ತಾ ಅವುಗಳನ್ನೂ ಮುಂದಿನ ತಲೆಮಾರಿಗೆ ಕೊಂಡೊಯ್ಯುವ ಪ್ರಯತ್ನವು ಇಲ್ಲಿ ನಡೆಯುತ್ತದೆ.

ಜನಪದ ಕಲೆಗಳು ಏಕರೂಪ ಮಾಧ್ಯಮದ ಮೂಲಕ ಬೆಳೆದು ಬಂದಿಲ್ಲ. ಆದರ ಅಭಿವ್ಯಕ್ತಿ ಕ್ರಮಕ್ಕೆ ಅದರ ತಾಂತ್ರಿಕ ನಿರ್ವಹಣೆಗೆ ಬಹುರೂಪ ಮಾದ್ಯಮಗಳು ಬಳಕೆ ಆಗಿವೆ. ಇದನ್ನು ವಿಶಾಲ ಅರ್ಥದಲ್ಲಿ ದೃಶ್ಯ ಶ್ರವ್ಯವೆಂದೂ ಕರೆದರು ಅದು ಕೇಳುವ ಮತ್ತು ನೋಡುವ ಈ ಎರಡು ಬಗೆಗಳು ಶ್ರವ್ಯ ಮಾದ್ಯಮದಲ್ಲೂ ಇದೆ. ದೃಶ್ಯ ಮಾಧ್ಯಮದಲ್ಲೂ ಇದೆ. ಜನಪದ ಹಾಡುಗಳು ಕೇವಲ ಕೇಳುವ ಮಾದ್ಯಮವಾಗಿ ಮಾತ್ರ ಉಳಿದಿಲ್ಲ. ಅದು ಕಲಾವಿದನ ಭಾವ, ಭಾಷೆ, ಆಂಗಿಕ, ಅಭಿನಯ, ವೇಷಭೂಷಣ, ತನ್ನದೇ ಆದ ಕೆಲವು ತಾತ್ವಿಕ ಚೌಕಟ್ಟಿನ ಮೂಲಕ ನೋಡುವ ಮಾದ್ಯಮವಾಗಿಯೂ ಮುಖ್ಯವಾಗುತ್ತದೆ. ಜನಪದ ಕಲೆಗಳೂ ಹಾಡುವ ಕ್ರಮ, ಬಳಕೆಯಾಗುವ ವಾದ್ಯ ಪರಿಕರ ಇವೆಲ್ಲವೂ, ತನ್ನದೇ ಅದ ರಂಗಭೂಮಿಕೆ ಮತ್ತು ರಂಗ ಸಜ್ಜಿಕೆಯನ್ನು ನಿರ್ಮಾಣ ಮಾಡುವಷ್ಟು ಸಶಕ್ತವಾಗಿದೆ. ಪ್ರೇಕ್ಷಕವನ್ನು ಕಲಾವಿದ ತಾನು ನಿಂತ ಪರಿಸರದಲ್ಲೇ ತನಗೆ ಬೇಕಾದ ಹಾಗೆ ರೂಪಿಸಬಲ್ಲ. ಹಾಗಾಗಿಯೇ ಜನಪದಕಲೆಗಳು ವಿಶಾಲವಾದ ಅರ್ಥದಲ್ಲಿ ದೃಶ್ಯ ಮಾಧ್ಯಮವಾಗಿದೆ.

ಜನಪದ ಸಾಹಿತ್ಯಕ್ಕೆ ಧ್ವನಿ ಮುದ್ರಿಕೆಗಳ ಪ್ರವೇಶ ಬರುವವರೆಗೂ ಅದು ದೃಶ್ಯ ಮಾಧ್ಯಮವೇ ಆಗಿತ್ತು. ಯಾವಾಗ ಅದು ಧ್ವನಿ ಮುದ್ರಿಕೆಗಳ ದಾಖಲೀಕರಣಕ್ಕೆ ಪಾರಂಭವಾಯಿತೋ ಆಗ ಅದು ಶ್ರವ್ಯ ಮಾದ್ಯಮವಾಗಿಯೂ ಬಹುದೂರ ಸಾಗಲು ಸಾಧ್ಯವಾಯಿತು. ಹಾಗೂ ಇಂತಹ ದಾಖಲೀಕರಣ ಅನಿವಾರ್ಯವು ಆಯಿತು. ಇದರಲ್ಲಿ ರೇಡಿಯೋ ಅಥವಾ ಬಾನುಲಿಯ ಪಾತ್ರವು ಪ್ರಮುಖವಾಯಿತು. ದಾಖಲೀಕರಣಕ್ಕೆ ಪೂರಕವಾಗಿ ಕ್ಯಾಸೆಟ್‌ಗಳು, ಸಿ.ಡಿ,, ಡಿವಿಡಿ ಈಗ ಪೆನ್‌ಡ್ರೈವ್, ಡಿಸ್ಕ್‌ಗಳು ಧ್ವನಿಮುದ್ರಿಕೆಯ ಸಾಧನವಾಗಿ ಲಭ್ಯವಾಗುತ್ತಾ ಬಂದಿರುವುದು ಈಗ ಇತಿಹಾಸ.

ಆಕಾಶವಾಣಿ

ದೃಶ್ಯಮಾಧ್ಯಮಗಳಲ್ಲಿ ಬಹಳ ಮುಖ್ಯವಾದ ಮಾಧ್ಯಮ ರೇಡಿಯೋ ಇದರ ಇತಿಹಾಸ ತುಂಬ ಕುತೂಹಲದಿಂದ ಕೂಡಿದೆ. ಇದರ ಪೂರ್ವ ಇತಿಹಾಸ ನಿಂತಿರುವುದು ಜನಪದ ಕಥನಕಗಳಲ್ಲಿ ಪುರಾಣಗಳಲ್ಲಿ ಮಾಂತ್ರಿಕ ಕಥನಕಗಳಲ್ಲಿ ಕಾಣುತ್ತೇವೆ. ಈ ರೇಡಿಯೋ ಅವಿಷ್ಕಾರ ಪ್ರಯೋಗಗಳು ಹೊರ ರಾಷ್ಟ್ರಗಳಲ್ಲಿ ಕಂಡು ಬರುತ್ತದೆ. ೧೮೩೦ರಲ್ಲಿ ಜೆಮ್ಸ್, ಕ್ಲರ್ಕ್ ಮ್ಯಾಕ್ಸ್‌ವೆಲ್ ವಿದ್ಯುತ್ಕಾಂತೀಯ ಅಲೆಗಳು ಉಚಿತ ಸ್ಥಳಾವಕಾಶದ ಮೂಲಕ ಪ್ರಸಾರವಾಗುತ್ತವೆ ಎಂದು ೧೮೬೪ರಲ್ಲಿ ಸೈದ್ಧಾಂತಿಕ ಮತ್ತು ಗಣಿತ ರೂಪದಲ್ಲಿ ತೋರಿಸಿದನು. ಇದು ವಿದ್ಯುತ್ಕಾಂತೀಯ ತರಂಗಗಳ ಮೂಲಕ ಸಂಕೇತದ ಮೊದಲ

ಉದ್ದೇಶ ಪೂರ್ವಕ ಪ್ರಸರಣ ಪ್ರಯೋಗ ನಿರ್ವಹಿಸಿದರು. ಆದರೆ ಡೇವಿಡ್ ಎಡ್ವರ್ಡ್ ಹ್ಯೂಸ್ ಈ ಸಮಯದಲ್ಲಿ ಇದನ್ನು ಪ್ರವೇಶವೆಂದು ಪರಿಗಣಿಸಿದ. ೧೮೮೦–೧೮೮೮ರಲ್ಲಿ ಹೆನ್ರಿಕ್ ರುಡಾಲ್ಫ್ ಹರ್ಜ್ ನಿರ್ಣಾಯಕವಾಗಿ ಮ್ಯಾಕ್ಸ್ವೆಲ್ನ ಸಿದ್ಧಾಂತವನ್ನು ದೃಢಪಡಿಸುವ ಒಂದು ಪ್ರಯೋಗದಲ್ಲಿ ಹರಡುವ ವಾಯುಗಾಮಿ ವಿದ್ಯುತ್ಕಾಂತೀಯ ಅಲೆಗಳು ಸಾಬೀತು ಸಾಧ್ಯವಾಯಿತು.

ಈ "Hertzian ಅಲೆಗಳು" ಅವಿಷ್ಕಾರ ನಂತರ ಅನೇಕ ವಿಜ್ಞಾನಿಗಳು ಹಾಗೂ ಸಂಶೋಧಕರು ನಿಸ್ತಂತು ಸಂವಹನ ಪ್ರಯೋಗ ಕೆಲವು ಅಭಿವೃದ್ಧಿಪಡಿಸುವ ಪ್ರಯತ್ನ ಸಂವಹನ ವ್ಯವಸ್ಥೆ, ಕೆಲವು ಉದ್ದೇಶಪೂರ್ವಕವಾಗಿ ಈ ಹೊಸ ಊಜಡಿಣದುಚಿಟಿ ಅಲೆಗಳನ್ನು ಬಳಸಿ ಕೆಲವು, ಬೆಳಕು ಮತ್ತು ಊಜಡಿಣದುಚಿಟಿ ವಿದ್ಯುತ್ಕಾಂತೀಯ ಅಲೆಗಳು ತೋರಿಸುವ ಮ್ಯಾಕ್ಸ್ವೆಲ್ನ ಸಿದ್ಧಾಂತವು ವಿವಿಧ ತರಂಗಾಂತರಗಳಲ್ಲಿ ಅದೇ ಸಂಗತಿಯನ್ನು ಜಾನ್ ಪೆರ್ರಿ ಪ್ರಸ್ತಾಪಿಸುತ್ತಾನೆ. ಹೀಗೆ ಹಲವು ವಿಜ್ಞಾನಿಗಳ ಪ್ರಯತ್ನದಿಂದ ೧೮೯೪ರಲ್ಲಿ ಆರಂಭಿಸಿ ಹಲವಾರು ವರ್ಷಗಳಿಂದ ಇಟಾಲಿಯನ್ ಸಂಶೋಧಕ ಗುಗ್ಲಿಯೇಲ್ಮೋ ಮಾರ್ಕೋನಿ ಮೊದಲ ಸಂಪೂರ್ಣ ವಾಣಿಜ್ಯಕವಾಗಿ ಯಶಸ್ವಿಯಾಗಿ ನಿರ್ಮಿಸಿದ ನಿಸ್ತಂತು ತಂತಿವಾಯುಗಾಮಿ ಊಜಡಿಣದುಚಿಟಿ ಅಲೆಗಳು (ವ್ಯವಸ್ಥೆಯ ಆಧಾರದ ಮೇಲೆ ರೇಡಿಯೋ ರವಾನೆ) ಮಾರ್ಕೋನಿ ಮಿಲಿಟರಿ ಮತ್ತು ಸಮುದ್ರ ಸಂಪರ್ಕ ರೇಡಿಯೋ ಅಪ್ಲಿಕೇಷನ್ ಪ್ರದರ್ಶಿಸಿದರು. ರೇಡಿಯೋ ಸಂವಹನ ಸೇವೆಗಳು ಮತ್ತು ಉಪಕರಣಗಳನ್ನು ಪ್ರಸರಣಕ್ಕೆ ಸಂಸ್ಥೆಯೊಂದನ್ನು ಪ್ರಾರಂಭಿಸಿದರು.

೧೯ನೇ ಶತಮಾನದಲ್ಲಿ ರೇಡಿಯೋ ಅರ್ಥ ಮತ್ತು ಪದ ಬಳಕೆ ಸಂಪರ್ಕ ಕ್ಷೇತ್ರದಲ್ಲಿ ಬೆಳವಣಿಗೆಗಳು ಸಮಾನಾಂತರವಾಗಿ ಅಭಿವೃದ್ಧಿ ಮತ್ತು ದೂರ ಹಂತಗಳನ್ನು ಹೊಂದಿರುವುದನ್ನು ಕಾಣಬಹುದು. ವಿದ್ಯುತ್ಕಾಂತೀಯ ಅಲೆಗಳು ಮತ್ತು ಪ್ರಯೋಗ, ನಿಸ್ತಂತು ಸಂವಹನ ಮತ್ತು ತಾಂತ್ರಿಕ ಅಭಿವೃದ್ಧಿ ಹಾಗೂ ರೇಡಿಯೋ ಪ್ರಸಾರಕ್ಕೆ ಮತ್ತು ವ್ಯಾಪಾರೀಕರಣಕ್ಕೆ ಅನುಕೂಲವಾಯಿತು. ೧೮೯೪ರಲ್ಲಿ ಯುವ ಇಟಾಲಿಯನ್ ಸಂಶೋಧಕ ಗುಗ್ಲಿಯೇಲ್ಮೋ ಮಾರ್ಕೋನಿ ಊಜಡಿಣದುಚಿಟಿ ಅಲೆಗಳು (ರೇಡಿಯೋ ಅಲೆಗಳು) ವಿಚಾರಣೆಯ ಒಂದು ಸಾಲಿನ ಅವಿಷ್ಕಾರಕ ವಿಚಾರಗಳನ್ನು ಗಮನಿಸಿದರು. ಆದರೆ ಅವಿಷ್ಕಾರಕರನ್ನು ಗಮನಿಸಿದ ವಾಣಿಜ್ಯ ನಿಸ್ತಂತು ತಂತಿ ಸಂದೇಶ ವ್ಯವಸ್ಥೆಯನ್ನು ನಿರ್ಮಿಸುವ ಆಲೋಚನೆಯೊಂದಿಗೆ ಕೆಲಸ ಪ್ರಾರಂಭಿಸಿದರು. ಮಾರ್ಕೋನಿ ಸಾಹಿತ್ಯದ ವಿದ್ಯಾರ್ಥಿಯಾಗಿದ್ದು, ಬಹಳ ಚೆನ್ನಾಗಿ ಸಾಹಿತ್ಯವನ್ನು ಅಭ್ಯಾಸಮಾಡಿದ್ದ ಮತ್ತು ರೇಡಿಯೋ ಅಲೆಗಳನ್ನು ಪ್ರಯೋಗ ಮಾಡಿದ ಕೂಡ. ಜೊತೆಗೆ ಇತರರ ಕಲ್ಪನೆಗಳನ್ನು ಬಳಸಕೊಂಡ, ಆದರೆ ಅಂತಹ ಪೋರ್ಟಬಲ್ ಟ್ರಾನ್ಸಿಟರ್‌ಗಳು ಮತ್ತು ರಿಸೀವರ್ ವ್ಯವಸ್ಥೆಗಳ ಸಾಧನಗಳನ್ನು ಅಭಿವೃದ್ಧಿಪಡಿಸಲು, ಇನ್ನಷ್ಟು ದೂರದ ಕೆಲಸ ಎಂದು ಭಾವಿಸಲಾಗಿತ್ತು.

ಮೂಲಭೂತವಾಗಿ ಉಪಯುಕ್ತ ವ್ಯವಸ್ಥೆಯಾದರೆ ಪ್ರಯೋಗಾಲಯದಲ್ಲಿ ಪ್ರಯೋಗ ಹೀಗೆ ಮುಂದುವರೆದು ಆಗಸ್ಟ್ ೧೮೯೫ರ ಹೊತ್ತಿಗೆ ಮಾರ್ಕೋನಿ ಕ್ಷೇತ್ರದಲ್ಲಿ ವ್ಯವಸ್ಥೆಯ ಪರೀಕ್ಷಣೆಯಾಗುತ್ತದೆ. ಆದರೆ ಸುಧಾರಣೆಯಾದುದು ಅವರು ಒಂದೂವರೆ ಮೈಲಿ ಸಂಜ್ಞೆಗಳನ್ನು ಸಾಗಿಸಲು ಸಾಧ್ಯವಾಯಿತು. ದೂರದಿಂದ ಆಲಿವರ್ ಲಾಡ್ಜ್ ರೇಡಿಯೋ ತರಂಗಗಳನ್ನು ಗರಿಷ್ಟ ಪ್ರಸರಣ ದೂರ ೧೮೯೪ರಲ್ಲಿ ಮಾರ್ಕೋನಿ ತನ್ನ ಅಂಜಿನಾ ಎತ್ತರ ಬೆಳೆದು ಮತ್ತು ಟ್ರಾನ್ಸಿಸ್ಟರ್ ಅಂಡ್ ರಿಸೀವರ್ ಗ್ರೌಂಡಿಂಗ್ ಕಲ್ಪನೆಯ ಮೇಲೆ ಹಿಟ್ ಆಯಿತು. ಈ ಸುಧಾರಣೆಗಳು ವ್ಯವಸ್ಥೆಯನ್ನು ೨ ಮೈಲಿ (೩.೨. ಕಿ.ಮೀ.) ಮತ್ತು ಬೆಟ್ಟಗಳ ಮೇಲೆ ಸಂಕೇತಗಳನ್ನು ಆ್ಯಪ್ ಹರಡುವ ಸಾಮರ್ಥ್ಯ ಹೊಂದಿತ್ತು. ಮಾರ್ಕೋನಿ ಪ್ರಾಯೋಗಿಕ ಉಪಕರಣ ಪ್ರಥಮ ಇಂಜಿನೀಯರಿಂಗ್ ಸಂಪೂರ್ಣ ವಾಣಿಜ್ಯಿಕವಾಗಿ ಯಶಸ್ವಿಯಾಗಿ ಪರಿಣಮಿಸಿತು ರೇಡಿಯೋ ರವಾನೆ ವ್ಯವಸ್ಥೆ, ಮಾರ್ಕೋನಿ ಉಪಕರಣವು ೭೦೦ ಜನರ ಪ್ರಾಣವನ್ನು ಉಳಿಸಿತು. ೧೮೯೬ರಲ್ಲಿ ಮಾರ್ಕೋನಿ ಬ್ರಿಟೀಷ್ ಪೇಟೆಂಟ್ ೧೨೦೩೯ ನೀಡಲಾಯಿತು. ವಿದ್ಯುತ್ ಪ್ರಚೋದನೆಗಳು ಮತ್ತು ಸಂಕೇತಗಳನ್ನು ಕಳುಹಿಸುವ ಮತ್ತು ಉಪಕರಣ ಫಾರ್ ಸುಧಾರಣೆಗಳು, ಮೊದಲ ಪೇಟೆಂಟ್ ಇದುವರೆಗೆ ಊಜಡಿಣದುಚಿಟಿ ತರಂಗ (ರೇಡಿಯೋ ತರಂಗ) ಬೇಸ್ ನಿಸ್ತಂತು ಟೆಲಿಗ್ರಾಫಿಕ್ ವ್ಯವಸ್ಥೆಯ ರವಾನಿಸಿದ್ದರು. ೧೮೯೭ರಲ್ಲಿ ಅವರು ಆಕಾಶವಾಣಿ ಸ್ಥಾಪಿಸಲಾಯಿತು. ಫ್ಲೈಟ್ ದೀಪದಲ್ಲಿ.

ಜೂನ್ ೧೯೧೨ರಲ್ಲಿ ಮಾರ್ಕೋನಿ ವಿಶ್ವದ ಪ್ರಥಮ ಉದ್ದೇಶಕ್ಕಾಗಿ ನಿರ್ಮಿಸಿದ ರೇಡಿಯೋ ಕಾರ್ಖಾನೆಯನ್ನು ಆರಂಭಿಸಿತು. ನ್ಯೂ ಸ್ಟ್ರೀಟ್ ವರ್ಕ್ಸ್ ಚಲ್ಮೊ ್ಸರ್ಡ್ ಇಂಗ್ಲೇಂಡ್, ಮೊದಲ ರೇಡಿಯೋ ಸುದ್ದಿ ಕಾರ್ಯಕ್ರಮದಲ್ಲಿ ಕೇಂದ್ರ ೮ ಎಂಕೆ ಮೂಲಕ ಆಗಸ್ಟ್ ೩೧, ೧೯೨೦ ಪ್ರಸಾರವಾದ ಡೆಟ್ರಾಯಿಟ್, ಮಿಚಿಗನ್ ಎಲ್ಲಾ ಸುದ್ದಿ ರೂಪದಲ್ಲಿ ಇಂದು ಉಳಿದುಕೊಂಡಿದೆ. ಫಘಎ ಸಿಬಿಎಸ್ ಸಿಟ್ವರ್ಕ್ ಮಾಲೀಕತ್ವದ ಅಡಿಯಲ್ಲಿ ಮೊದಲ ಕಾಲೇಜಿನ ರೇಡಿಯೋ ಸ್ಟೇಷನ್ ಅಕ್ಟೋಬರ್ ೧೪, ೧೯೨೦ ಯೂನಿಯನ್ ಕಾಲೇಜ್, ಶೆನೆಕ್ಟೆಡಿದಿಂದ ಪ್ರಸಾರ ಆರಂಭಿಸಿತು. ನ್ಯೂಯಾರ್ಕ್ ವೆಂಡೆಲ್‌ಕಿಂಗ್, ಒಂದು ವೈಯಕ್ತಿಕ ಕರೆ ಅಕ್ಷರಗಳು ಅಡಿಯಲ್ಲಿ ಅಮೇರಿಕಾದ ನಿಗ್ರೋ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಗೆ ತಲುಪಿತು.

೨೦ನೇ ಶತಮಾನದ ಆರಂಭದಲ್ಲಿ ಮೊದಲ ಅಭಿವೃದ್ಧಿಗೊಳಿಸುವ ಸಂಚರಣೆ ವಾಣಿಜ್ಯ ಎ.ಎಂ. ರೇಡಿಯೋ ಕೇಂದ್ರಗಳು ಬಳಸಿದ ವಿಮಾನವಾಗಿತ್ತು. ಇದು ೧೯೬೦ರ ವರೆಗೆ ಮುಂದುವರೆಯಿತು. ವೋರ್ ವ್ಯವಸ್ಥೆಗಳು ವ್ಯಾಪಕವಾಯಿತು. ೧೯೩೦ರ ಪ್ರಾರಂಭದಲ್ಲಿ ಏಕ ಸೈಡ್ ಮತ್ತು ಕಂಪನಾಂಕ ಸಮನ್ವಯತೆ ಹವ್ಯಾಸಿ ರೇಡಿಯೋ ಆಪರೇಟರ್‌ಗಳು ಕಂಡು ಹಿಡಿಯಲಾಯಿತು. ದಶಕದ ಕೊನೆಯಲ್ಲಿ ಅವರು ವಾಣಿಜ್ಯ

ವಿಧಾನಗಳು ಸ್ಥಾಪಿಸಲಾಯಿತು. ರೇಡಿಯೋ ಕಾಣುವ ಚಿತ್ರಗಳನ್ನು ಪ್ರಸಾರ ಮಾಡಲಾಯಿತು. ಇದು ಐರೋಪ್ಯ ರಾಷ್ಟ್ರಗಳ ಕಥೆಯಾಯಿತು.

ನಮ್ಮ ನಾಡಿನಲ್ಲಿ ಮೌಖಿಕ ಪರಂಪರೆ ವೃತ್ತಿಗಾಯಕ ಬಾಯಲ್ಲಿ ರಾಮಾಯಣ ಮಹಾಭಾರತದ ರೂಪದಲ್ಲಿ ಹರಿದು ಬಂದಿರುವುದರಿಂದ ಅದಕ್ಕೆ ತನ್ನದೇ ಆದ ಕೇಳುಗ ವರ್ಗವೊಂದಿತ್ತು. ರೇಡಿಯೊ ಬಂದ ಕಾಲಕ್ಕೆ ಕೇಳುಗರಿಗೆ ತಂತ್ರಜ್ಞಾನದ ದೃಷ್ಟಿಯಿಂದ ಅದು ಹೊಸತೆನಿಸಿತು. ೧೯೨೭ರ ವೇಳೆಗೆ ರೇಡಿಯೋ ಮೊಟ್ಟಮೊದಲಬಾರಿಗೆ ಭಾರತಕ್ಕೆ ಬಂದಿತು. ೧೯೩೭ರಲ್ಲಿ ಸೆಪ್ಟೆಂಬರ್ ೧೦ರಂದು ಬಾನುಲಿಯನ್ನು ಖಾಸಗಿ ಒಡೆತನದಲ್ಲಿ ಪ್ರಾರಂಭಿಸಲಾಯಿತು. ಮೈಸೂರಿನ ಒಂಟಿಕೊಪ್ಪಲಿನ ತಮ್ಮ ಮನೆಯಲ್ಲೇ ಡಾ.ಎಂ.ವಿ.ಗೋಪಾಲಸ್ವಾಮಿಯವರು ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಕೇಳುಗರ ಸ್ಪಂದನವನ್ನು ಪಡೆಯಲು ಅವರಿಗೇನೂ ಕಷ್ಟವಾಗಲಿಲ್ಲ. ಸಾರ್ವಜನಿಕರಿಗೆ ರೇಡಿಯೋ ಕೇಳಲು ಟೌನ್‌ಹಾಲ್‌ನ ದೊಡ್ಡ ಗಡಿಯಾರಕ್ಕೆ ಧ್ವನಿವರ್ಧಕವನ್ನು ಕಟ್ಟಿ ಸಾರ್ವಜನಿಕರಿಗೆ ಕೇಳುವ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಆಕಾಶವಾಣಿಗೆ ಉತ್ತಮ ಗುಣಮಟ್ಟದ ಕಾರ್ಯಕ್ರಮ ನೀಡುವಲ್ಲಿ ಎ.ಎನ್.ಮೂರ್ತಿರಾವ್, ನಾ.ಕಸ್ತೂರಿ, ಲಿಂಗಪ್ಪಾಜಿ ಮುಂತಾದವರು ಮೊದಲಿಗರಾಗಿದ್ದರು. ನಂತರ ಆಕಾಶವಾಣಿ ಹಣಕಾಸಿನ ಮುಗ್ಗಟ್ಟನ್ನು ಎದುರಿಸಿದಾಗ ಮೈಸೂರು ಮಹಾರಾಜರು ಸಹಾಯ ಹಸ್ತ ನೀಡಿದರು. ೧೯೪೭ ಆಕಾಶವಾಣಿಯು ರಾಜಾಶ್ರಯ ಪಡೆಯಿತು. ರಾಷ್ಟ್ರೀಯ ಪ್ರಸಾರದಲ್ಲಿ ವಿಲೀನಗೊಂಡ ನಂತರವೂ ಆಕಾಶವಾಣಿ ಎಂಬ ಹೆಸರಲ್ಲೇ ಮುಂದುವರೆಯಿತು. ೧೯೫೫ ರಲ್ಲಿ ಬೆಂಗಳೂರು ಆಕಾಶವಾಣಿ ಅಧಿಕ ಶಕ್ತಿಯ ಕೇಂದ್ರ ಸ್ಥಾಪನೆಯಾಯಿತು. ನಂತರ ಪ್ರಾದೇಶಿಕ ವ್ಯಾಪಕತೆಗಾಗಿ ಭದ್ರಾವತಿ, ಗುಲ್ಬರ್ಗ, ಮಂಗಳೂರು ಚಿತ್ರದುರ್ಗ, ಹಾಸನ, ಕಾರವಾರ, ಬಿಜಾಪುರ, ಮುಂತಾದ ಕಡೆಗಳಲ್ಲಿ ಆಕಾಶವಾಣಿ ಕೇಂದ್ರಗಳು ಸ್ಥಾಪನೆಯಾದವು. ಅವು ಪ್ರಸಾರ ಸೇವಕಾರ್ಯವನ್ನು ಮಾಡಲು ಆರಂಭಿಸಿದವು. ಆಗ ಅತ್ಯುತ್ತಮವಾದ ಗುಣಮಟ್ಟದ ಕಾರ್ಯಕ್ರಮ ನೀಡುವುದರಲ್ಲಿ ಆಕಾಶವಾಣಿ ಯಶಸ್ವಿಯಾಯಿತು. ಕಲೆ ಕಲಾವಿದರ ಕಡೆ ಗಮನ ಹರಿಸಿತು. ಜನಪದ ಗೀತೆ, ಲಾವಣಿ, ಬುರ್ರಾಕಥಾ, ದೊಂಬಿದಾಸರ ಪದ, ವೀರಗಾಸೆ, ಡೊಳ್ಳು, ಬಯಲಾಟ, ತತ್ವಪದ ಹೀಗೆ ಮುಂತಾದ ಕಾರ್ಯಕ್ರಮಗಳು ರೂಪಿತಗೊಂಡವು. ಆಧುನಿಕ ಯುಗದಲ್ಲಿ ಕೆಲವು ನಾಗರೀಕವೆನ್ನಬಹುದಾದ ಸಾಧನೆಗಳು ಮಾಡಲಾಗದ ಕೆಲಸವನ್ನು ಜನಪದ ಕಲೆಗಳು ಮಾಡಿ ತೋರಿಸುತ್ತವೆ.

ಆಕಾಶವಾಣಿಯು ಕಲೆ ಮತ್ತು ಕಲಾವಿದರ ಕಂಠವನ್ನು ಕೇಳಿಸುವುದರ ಮೂಲಕ ಜನರಿಗೆ ಅಪ್ಯಾಯವೆನಿಸಿತು ಮತ್ತು ನಾಡು ನುಡಿ ಸಂಸ್ಕೃತಿಯ ಬಗ್ಗೆ ಅನೇಕ ಕಾರ್ಯಕ್ರಮವನ್ನು ಮಾಡಿ ಇಂದಿಗೂ ಕೂಡ ಜನಮಾನಸದಲ್ಲಿ ಉಳಿದು ಬಂದಿದೆ. ಆನಂತರದಲ್ಲಿ ಬಂದ ಎಫ್.ಎಂ. ರೇಡಿಯೋ ರೈನ್‌ಬೋ ಇವುಗಳಲ್ಲಿ ಚಿತ್ರಗೀತೆಗಳೊಂದಿಗೆ

ಜನಪದ ವಿಷಯ ವಸ್ತುವನ್ನಿಟ್ಟುಕೊಂಡು ಫೋನ್ ಇನ್ ಕಾರ್ಯಕ್ರಮವನ್ನು ಮಾಡಿದವು. ಕಾರ್ಯಕ್ರಮ ಆರಂಭವಾಗುತ್ತಿದ್ದಂತೆ ಪ್ರೇಕ್ಷಕರಿಗೆ ಒಗಟನ್ನು ಹೇಳುವುದು ಆ ನಂತರ ಒಂದು ಹಾಡನ್ನು ಕೇಳಿಸುವುದ ಹಾಡು ಮುಗಿದ ನಂತರ ಪ್ರೇಕ್ಷಕರಲ್ಲಿ ಒಬ್ಬರು ಒಗಟನ್ನು ಬಿಡಿಸಿ ಅದಕ್ಕೆ ಉತ್ತರಿಸುತ್ತಾರೆ. ಮತ್ತೆ ಇನ್ನೊಂದು ಒಗಟು ಹೀಗೆ ಕಾರ್ಯಕ್ರಮ ಮುಂದುವರೆಯುತ್ತದೆ ಅಲ್ಲದೇ ಎಲ್ಲ ವರ್ಗದವರಿಗೂ ಇಷ್ಟವಾಗಿ ಜನಮ್ಮಣೆಗೊಳಿಸಿತು ಹೀಗೆ ಆ ಒಗಟನ್ನು ಬಿಡಿಸಲು ಮಹಿಳೆಯರು ಮತ್ತು ಮಕ್ಕಳು ತಮ್ಮ ತಮ್ಮ ಕೆಲಸದಲ್ಲಿ ತೊಡಗಿರುವಾಗಲೇ ರೇಡಿಯೊ ಧ್ವನಿ ಹೆಚ್ಚು ಮಾಡಿಕೊಂಡು ಏಕಾಗ್ರತೆಯಿಂದ ಕೇಳುವ ಪರಿಪಾಠವನ್ನು, ನಾವು ಆಧುನಿಕ ಜನಾಂಗದಲ್ಲೂ ಕಾಣುತ್ತೇವೆ. ಆಕಾಶವಾಣಿಯ ಸ್ಟುಡಿಯೋದಲ್ಲಿ, ಜನಪ್ರಿಯ ಕಲಾವಿದರನ್ನು ಕರೆದು ಸೋಬಾನೆ ಪದ, ಗಾರುಡಿಗೊಂಬೆ, ಪೂಜಾಕುಣಿತ, ಬಯಲಾಟ, ಯಕ್ಷಗಾನ ಮುಂತಾದ ಕಲೆಗಳನ್ನು ರೆಕಾರ್ಡ್‌ಮಾಡಿ ಪ್ರಸಾರ ಮಾಡುತ್ತಾರೆ.

ಹೈಟೆಕ್ ತಂತ್ರಜ್ಞಾನದಿಂದ ೧೯೭೭ ಸೆಪ್ಟೆಂಬರ್ ೩ ರಂದು ಗುಲ್ಬರ್ಗಾ ಮೊದಲ ಕೇಂದ್ರ ಆರಂಭವಾಯ್ತು. ೧೯೮೮ರಲ್ಲಿ ವಿಶ್ವೇಶ್ವರಯ್ಯ ಗೋಪುರದ ೨೧ನೇ ಮಹಡಿಯಿಂದ ಪ್ರಸಾರ ಆರಂಭವಾಯಿತು. ಆಗ ಕನ್ನಡ ಕಾರ್ಯಕ್ರಮಗಳ ಪ್ರಸಾರದ ಅವಧಿಯನ್ನು ಹೆಚ್ಚಿಸಿದ್ದಾರೆ. ಆಕಾಶವಾಣಿಯಲ್ಲೂ ಕೂಡ ಖಾಸಗಿ ಒಡೆತನವನ್ನು ಹೊಂದಿರುವ ಅನೇಕ ಬಾನುಲಿಗಳು ಇದ್ದಾವೆ. ಅವುಗಳಲ್ಲಿ ಎಫ್.ಎಂ. ರೈನ್‌ಬೋ, ಸ್ಪರ್ಶ ಮುಂತಾದ ಬಾನುಲಿಗಳು ಕೂಡ ಹೊಸತನದೊಂದಿಗೆ, ಹೊಸ ಪರಿಕಲ್ಪನೆಯೊಂದಿಗೆ ಜನರನ್ನು ತಲುಪುತ್ತಿವೆ. ಧಾವಂತದಲ್ಲಿ ಓಡುವ ಪಟ್ಟಣವಾಸಿಗಳಿಗಂತೂ ಎಫ್.ಎಂ. ರೈನ್‌ಬೋ ಇವು ತುಂಬಾ ಅಚ್ಚುಮೆಚ್ಚು. ಹಾಗಾಗಿ ಇಂದೂ ಕೂಡಾ ಆಕಾಶವಾಣಿ ಸ್ಪರ್ಧೆಯ ನಡುವೆಯೂ ತನ್ನತನವನ್ನು ಉಳಿಸಿಕೊಂಡು ಬಂದಿದೆ. ಅದನ್ನು ನೋಡಿದರೆ ಇಂದು ಆಕಾಶವಾಣಿಯ ಜನಪ್ರಿಯತೆಯನ್ನು ಮನಗಾಣಬಹುದು. ಆಕಾಶವಾಣಿಯು ಕೂಡ ಕಲೆ ಸಂಸ್ಕೃತಿಗೆ ತನ್ನದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡಿದೆ.

ಆಕಾಶವಾಣಿ ಕೇಂದ್ರವು ಸಹ ದೂರದರ್ಶನದಂತೆ ಸರ್ಕಾರಿ ಸ್ವಾಮತ್ವವನ್ನು ಹೊಂದಿದೆ. ಇಲ್ಲಿಯೂ ಕೂಡ ಜನಪದ ಕಲಾವಿದರನ್ನು ಸ್ಟುಡಿಯೋಗೆ ಕರೆಸಿ, ಅವರಿಂದ ಕಲಾ ಪ್ರದರ್ಶನ ಮಾಡಿಸಿ ಅವರ ಸಂದರ್ಶನವನ್ನು ಪ್ರಸಾರ ಮಾಡುತ್ತಾರೆ. ಈಗ ಈ ನಿಟ್ಟಿನಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ ಅವರ ಜೀವನ ವೃತ್ತಾಂತ ಕೇಳುತ್ತಾ ಮಧ್ಯ ಮಧ್ಯ ಚಿತ್ರಗೀತೆಗಳನ್ನು ಅಳವಡಿಸಿ, ಅಂದಿನ ಕಲಾವಿದನ ಸಂದರ್ಶನಕ್ಕೆ ರಂಗೇರುವಂತೆ ಮಾಡಿ ಕೇಳುಗನು ಪೂರ್ತಿಯಾಗಿ ಆ ಕಾರ್ಯಕ್ರಮವನ್ನು ಕೇಳುವಂತೆ ನಿರೂಪಕರು ಮಾಡುತ್ತಾರೆ. ಅಲ್ಲದೇ ಇಂದು ಆಕಾಶವಾಣಿಯಲ್ಲಿ ಜನಪದ ಕಾರ್ಯಕ್ರಮವನ್ನು ಹೊಸ ರೀತಿಯಲ್ಲೂ ನಿರೂಪಿಸುತ್ತಿದ್ದಾವೆ. ಒಟ್ಟಿನಲ್ಲಿ ದೂರದರ್ಶನ ಮತ್ತು ಆಕಾಶವಾಣಿಗಳು

ಸರ್ಕಾರದ ಹಿಡಿತದಲ್ಲಿರುವುದರಿಂದ ಇವರಿಗೆ ಯಾವುದೇ ರೀತಿಯ ಪ್ರಾಯೋಜಕರ ಟಿ.ಆರ್.ಪಿ.ಗಳ ಕಾಟವಿಲ್ಲ ಎಂದೇ ಹೇಳಬಹುದು. ಅಲ್ಲದೇ ಅವುಗಳು ಈಗ ಕೊಡುತ್ತಿರುವ ಕಾರ್ಯಕ್ರಮಗಳಿಗಿಂತ ಜನಪದ ಕಲೆಗಳಿಗಾಗಿ ಬೇರೆ ರೀತಿಯ ಪರಿಕಲ್ಪನೆಗಳನ್ನು ಮಾಡಿಕೊಂಡು ಹೊಸ ಕಾರ್ಯಕ್ರಮವನ್ನು ರೂಪಿಸಿದರೆ ಒಳಿತು. ಕೆಲವು ಖಾಸಗೀ

ಚಲನಚಿತ್ರದಲ್ಲಿ ಜನಪದ ಕಲೆ

ಕನ್ನಡ ನೆಲದಲ್ಲಿ ಮೂಕಿ ಚಿತ್ರದ ಯುಗವು ೧೯೨೧ರಿಂದ ಆರಂಭವಾಗಿದೆ. ಚಲನಚಿತ್ರ ಸತಿ ಸುಲೋಚನ ಬಿಡುಗಡೆಯ ವೇಳೆ ಮೂಕಿಯುಗ ಅಂತ್ಯ ಕಂಡಿತು. ಬಂಗಾರದ ಮನುಷ್ಯನಿಂದ ಹಿಡಿದು ನಿನ್ನೆ ಮೊನ್ನೆಯ ತನಕವೂ ಕೃಷಿಯಾಧಾರಿತ ಚಟುವಟಿಕೆಗಳಿರಬಹುದು. ಕೋಲಾಟ, ಕಂಸಾಳೆ, ಇಲ್ಲವೇ ಹಾಡಿಗೆ ಎಲ್ಲಾ ಕಲೆಗಳನ್ನು ಅನ್ವಯಿಸಿ ತೋರಿಸುವುದು ಸಾದ್ಯವಾಗಿದೆ. ಚಲನಚಿತ್ರಗಳಲ್ಲಿ ದೇಸಿ ಸೊಗಡು ಬೇಕೆಂದರೆ, ನಮ್ಮ ಜನಪದ ಕಲೆಗಳಿರಲೇಬೇಕು. ಅಲ್ಲದೆ ಆ ಕುಣಿತಗಳ ಪೋಷಾಕು, ವೇಷಭೂಷಣ, ಮೆರೆ ದೇವರ ಅಲಂಕಾರ ಇವುಗಳೆಲ್ಲವೂ ಕ್ಯಾಮಾರಾ ಕಣ್ಣಿನಲ್ಲಿ ಶ್ರೀಮಂತಿಕೆಯ ಆಡಂಬರದಿಂದ ಕೂಡಿ ದೃಶ್ಯಕ್ಕೆ ಹೆಚ್ಚಿನ ಮೌಲ್ಯವನ್ನು ಕೊಡುತ್ತವೆ. ಹಾಗಾಗಿಯೇ ಇಂದು ಸಾಧಾರಣವಾಗಿರುವ ಎಲ್ಲಾ ಚಿತ್ರಗಳಲ್ಲಿಯೂ ಒಂದು ಅಥವಾ ಎರಡು ಹಾಡಿಗಾದರೂ ಜನಪದ ಕಲೆಗಳ ಬಳಕೆಯಾಗುತ್ತಿವೆ. ಇಂದು ಚಲನಚಿತ್ರಗಳಲ್ಲಿ ನಾವು ಪ್ರಾದೇಶಿಕತೆ ಅಳವಡಿಸಿಕೊಳ್ಳಲೆಂದೇ ಯಾವುದಾದರೂ ಒಂದು ಉತ್ಸವ, ಹಬ್ಬ, ತೇರು, ಜಾತ್ರೆ ಮುಂತಾದ ದೃಶ್ಯವನ್ನು, ಹಾಡಿನ ಮೂಲಕವೇ ಇಲ್ಲವೇ ಕಥೆಗೆ ಪೂರಕವಾಗಿಯಾದರೂ ತಂದು ನಮ್ಮ ಸಂಸ್ಕೃತಿಯನ್ನು ತೋರಿಸುವುದು ಸಾಮಾನ್ಯವಾಗಿದೆ. ಕಲಾವಿದರನ್ನು ಜನರು ಗುರುತಿಸುತ್ತಾರೆ. ಚಿತ್ರತಂಡದಲ್ಲಿ ಭಾಗಿಯಾಗಿ ಬಂದ ಜನಪದ ಕಲಾತಂಡ ಎಲ್ಲೆಡೆ ಹೆಸರುವಾಸಿಯಾಗುತ್ತದೆ. ಆಗ ಅದಕ್ಕೆ ಇದ್ದಕ್ಕಿದ್ದಂತೆ ಹೆಚ್ಚಿನ ಬೇಡಿಕೆ ಬರುತ್ತದೆ.

ಇಂದು ನಿರ್ದೇಶಕರುಗಳಾದ ನಾಗಾಭರಣ, ಬರಗೂರು ರಾಮಚಂದ್ರಪ್ಪ, ಗಿರೀಶ ಕಾಸರವಳ್ಳಿ ಇವರೆಲ್ಲರೂ ತಮ್ಮ ಪ್ರತಿ ಸಿನಿಮಾದಲ್ಲೂ ಒಂದಾದರೂ ಜನಪದ ಕಲೆಯನ್ನಾದರೂ , ಗೀತೆಯನ್ನಾದರೂ ದೃಶ್ಯಕಾವ್ಯವಾಗಿ ಹೊರಹೊಮ್ಮಿಸುತ್ತಾರೆ. ನಾಗಾಭರಣ ಅವರ ನಾಗಮಂಡಲ ಜನಪದ ಕಥೆಯಾಧಾರಿತ ಕಥೆಯಾಗಿದ್ದು, ಕನ್ನಡ ಚಿತ್ರರಂಗದಲ್ಲೇ ಅದು ಹೆಸರು ಮಾಡಿತ್ತು. ಹಾಗೆಯೇ ಬರಗೂರು ರಾಮಚಂದ್ರಪ್ಪನವರು ಬರೆದಿರುವ ಮಣಿ ಮಣಿ ಮಣಿಗೊಂದು ಹಾರ, ಗೀತೆಯು ಕಂಸಾಳೆ ಹಾಡುವ ಯುವಕನ ಬಾಯಲ್ಲಿ ಜನಪದ ಒಗಟಾಗಿ ಮೂಡಿ ರಾಜ್ಯ ಪ್ರಶಸ್ತಿಯನ್ನು ಪಡೆದದ್ದು ನಮಗೆಲ್ಲರಿಗೂ ತಿಳಿದ ವಿಷಯವೇ. ಹಾಗೆಯೇ ಜನಪದ ಕಲೆಗಳ ಆಚರಣೆ, ನಂಬಿಕೆ, ಸಂಪ್ರದಾಯ,

ಆರಾಧನೆ, ಕುಣಿತ, ಯಾವುದೇ ಇರಲಿ, ಆಯಾ ಪ್ರದೇಶದ ಸನ್ನಿವೇಶಕ್ಕನುಗುಣವಾಗಿ, ಕಲೆಗಳ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ರಂಗಿತರಂಗ ಚಿತ್ರದಲ್ಲಿ ದಕ್ಷಿಣ ಕನ್ನಡ ಭೂತಾರಾಧನೆಯ ವೇಷ ಕಟ್ಟುವವರನ್ನು ಕಾಣಬಹುದಾಗಿದೆ. ನಾಗಭರಣ ಅವರ ನಿರ್ದೇಶನದ ಜನುಮದ ಜೋಡಿ ಚಿತ್ರದಲ್ಲಿ ಕಂಸಾಳೆ ಕಲೆಯನ್ನು ರಜತ ಪರದೆಯ ಮೇಲೆ ಮೂಡಿಸಿದ್ದಾರೆ. ಈ ಚಿತ್ರವು ಶತದಿನೋತ್ಸವ ಆಚರಿಸಿತು. ಭಾಗೀರಥಿ ಇದು ಜನಪದದ ಕೆರೆಗೆ ಹಾರದ ಕಥೆಯಾದರೆ, ಕಲ್ಲರಳಿ ಹೂವಾಗಿ–ಹಬ್ಬಹರಿದಿನ, ಆಚರಣೆ–ಸಂಪ್ರದಾಯ ಕುರಿತು ಸಂತ ಶಿಶುನಾಳ ಷರೀಫ–ತತ್ವಪದ, ಸಂಗ್ಯಾಬಾಳ್ಯ–ಸಣ್ಣಾಟ, ಪರ್ವ–ಯಕ್ಷಗಾನ, ಅಲ್ಲಮ–ವಚನಕಾರರು, ಸೇವಂತಿ–ಸೇವಂತಿ, ಜನಪದಗೀತೆ, ಬಣ್ಣದವೇಷ–ರಂಗಭೂಮಿ, ಬೇರು–ಕೊರವರು, ಇಜ್ಜೋಡು, ಗೆಜ್ಜೆಪೂಜೆ–ದೇವದಾಸಿಪದ್ಧತಿ, ರಂಗಿತರಂಗ–ಯಕ್ಷಗಾನ, ಚೋಮನದುಡಿ–ಜೀತಪದ್ಧತಿ, ಹಗಲುವೇಷಗಾರರು–ಜನಪದ ಕಲೆ, ರಂಗನಾಯಕಿ–ನಾಟಕ, ನಾಗಮಂಡಲ–ಜನಪದ ಕಥೆ, ಹೀಗೆ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ. ಕೆಲವು ಸಿನಿಮಾಗಳು ಜನಪದ ಗೀತೆಯಿಂದಾಲೇ ಸೂಪರ್ ಹಿಟ್ ಆದ ದಾಖಲೆಯು ಇದೆ. ಬಂಗಾರದ ಮನುಷ್ಯ, ಚಿತ್ರದ ಹನಿ ಹನಿ ಗೂಡಿದರೆ ಹಳ್ಳ, ತೆನೆತೆನೆಕೂಡಿದರೆ ಬಳ್ಳ ಈ ಹಾಡು ಜನರ ಮೆಚ್ಚುಗೆಗಳಿಸಿ ಚಿತ್ರವು ಶತದಿನೋತ್ಸವ ಆಚರಿಸಿತು. ಜೋಗಿ ಚಿತ್ರದ ಎಲ್ಲೋ ಜೋಗಪ್ಪ ನಿನ್ನರಮನೆ ಈ ಹಾಡು ಈ ಚಿತ್ರ ಗೆಲ್ಲಲು ಕಾರಣವಾಯಿತು. ಜನುಮದ ಜೋಡಿಯ ಒಗಟು ಬಿಡಿಸುವ ಜನಪ್ರಿಯ ಹಾಡು ಮಣಿ ಮಣಿ ಮಣಿಗೊಂದು ಹಾರ.... ಈ ಸಾಲಿನಲ್ಲಿ ಜನಪದ ಒಗಟು ಬಿಡಿಸುವ ಹಾಡಿಗೆ. ಈ ಹಾಡಿಗೆ ರಾಜ್ಯ ಪ್ರಶಸ್ತಿ ಸಂದಿದೆ. ಒಗಟು, ಗಾದೆ, ಸಾಹಿತ್ಯ, ಕಥೆಗಳನ್ನು ಬಳಸಿ ಸಿನಿಮಾ ಮಾಡಿದ ನಿರ್ದೇಶಕರುಗಳ ಚಿತ್ರಗಳಿಗೆ ರಾಜ್ಯ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿಗಳು ಬಂದಿವೆ. ಇತ್ತೀಚಿನ ಹೊಸ ಟ್ರೆಂಡ್ ಆರಂಭವಾಗಿರುವುದು ಪ್ರಾದೇಶಿಕವಾದ ಕಲೆಗಳನ್ನು ಹಬ್ಬ, ಉತ್ಸವ, ಜಾತ್ರೆಗಳಲ್ಲಿ ತಂದು ಹಾಡಿನ ಮುಖಾಂತರ ದೃಶ್ಯೀಕರಿಸುವುದು. ತಮಿಳು, ತೆಲುಗು, ಕನ್ನಡ, ಹಿಂದಿ, ಮರಾಠಿ ಚಿತ್ರಗಳಲ್ಲಿ ಇಂದೂ ಕೂಡ ಜನಪದ ಕಲೆಗಳನ್ನು ಕಾಣುತ್ತೇವೆ. ಇತ್ತೀಚಿಗೆ ಜನಪದ ಕಲಾವಿದರು ಸಭೆ ಸಮಾರಂಭ ಉತ್ಸವಗಳ ಕಾರ್ಯಕ್ರಮಕ್ಕೆ ಹೋದಂತೆಯೇ ಚಿತ್ರೀಕರಣಕ್ಕೂ ಕೂಡ ಹೋಗುತ್ತಾರೆ. ರಜತ ಪರದೆಯ ಮೇಲೂ ಇವರ ಕಲೆಗಳು ದೃಶ್ಯ ಕಾವ್ಯವಾಗಿ ಅನಾವರಣಗೊಳ್ಳುತ್ತವೆ. ಕನ್ನಡ ಚಿತ್ರರಂಗವಲ್ಲದೆ ಪರಭಾಷಾ ಚಿತ್ರಗಳಾದ ತಮಿಳು, ತೆಲುಗು, ಮಲೆಯಾಳಂ ಹಿಂದಿ ಚಿತ್ರಗಳಲ್ಲೂ ಕೂಡ ಅಲ್ಲಿಯ ಜನಪದ ಕಲೆಗಳನ್ನು ತುಂಬಾ ಕಲಾತ್ಮಕವಾಗಿ ಬಳಸಿಕೊಂಡು ತಮ್ಮ ಸಿನಿಮಾಗಳಿಗೆ ದೇಸೀಯತೆಯನ್ನು ತಂದುಕೊಟ್ಟು ಜನರು ಚಿತ್ರಮಂದಿರಕ್ಕೆ ಬರುವಂತೆ ಮಾಡುವ ಎಷ್ಟೋ ನಿರ್ದೇಶಕರು ಇಂದು ನಮ್ಮ ನಡುವಿದ್ದಾರೆ.

ನಮ್ಮ ಜನಪದರು ಚಿತ್ರರಂಗಕ್ಕೆ ಸಾಹಿತ್ಯ ಕಲೆಗಳಿಂದ ತಮ್ಮಧೆ ಆದ ಕೊಡುಗೆಯನ್ನು ನೀಡಿದ್ದಾರೆ. ಚಿತ್ರರಂಗದ ಅನೇಕ ದಿಗ್ಗಜರು ಜನಪದವನ್ನೇ ವಸ್ತುವನ್ನಾಗಿಸಿಕೊಂಡು ಅದೆಷ್ಟೋ ಸಿನಿಮಾವನ್ನು ಮಾಡಿ ಜನರಂಜಿಸಿದ್ದಾರೆ. ದೃಶ್ಯ ಮಾಧ್ಯಮದಲ್ಲಿ ಜನಪದ ಕಲೆಗಳ ಅಳವಡಿಕೆಯನ್ನು ಎಲ್ಲರೂ ಮೆಚ್ಚುವಂತೆ ದಿಗ್ದರ್ಶಿಸುವುದು ತುಂಬಾ ಕಷ್ಟದ ಕೆಲಸ ಆದರೂ ಅದರಲ್ಲಿ ಯಶಸ್ವಿಯಾದ ಅನೇಕ ನಿರ್ದೇಶಕರುಗಳು ನಮ್ಮ ಕಣ್ಣ ಮುಂದಿದ್ದಾರೆ. ಅದರಲ್ಲಿ ತುಂಬಾ ಹೆಸರುವಾಸಿಯಾದವರು ಬರಗೂರು ರಾಮಚಂದ್ರಪ್ಪ, ನಾಗಭರಣ, ಗಿರೀಶ್ ಕಾಸರವಳ್ಳಿ, ಅದಕ್ಕೊಂದು ಹೊಸ ಸೇರ್ಪಡೆ ಯುವ ನಿರ್ದೇಶಕ ಅನೂಪ್ ಭಂಡಾರಿ– ರಂಗಿತರಂಗ. ಜಾಗತೀಕರಣದ ವ್ಯಾಪಾರೀಕರಣದಿಂದಾಗಿ ಕಲೆಗಳನ್ನು ಅದರ ಸೊಗಡನ್ನು ತೋರಿಸುತ್ತೇವೆಂದರೂ ಆಗಬಹುದು. ಇಲ್ಲವೇ ನಮ್ಮ ಸಂಸ್ಕತಿಯ ಪ್ರತಿಬಿಂಬದಂತಿರುವ ಜನಪದ ಕಲೆಗಳು ದೃಶೀಕರಿಸಿದಾಗ ರಂಗುರಂಗಾಗಿ ರಜತಪರದೆಯಲ್ಲಿ ಶ್ರೀಮಂತವಾಗಿ ಕಾಣುತ್ತದೆ. ಹಾಗಾಗಿಯೋ ಏನೋ ನಿರ್ದೇಶಕರು ಜನಪದ ಕಲೆಗಳನ್ನು ಬಳಸಿಕೊಳುತ್ತಾರೆ. ಒಟ್ಟಿನಲ್ಲಿ ಕಲೆಗೆ ಚಲನಚಿತ್ರಗಳ್ಲಿ ಮಾನ್ಯತೆ ದೊರೆತಿರುವುದಂತೂ ನಿಜ.

ದೂರದರ್ಶನ

ಬೆಂಗಳೂರು ದೂರದರ್ಶನವು ಸರ್ಕಾರಿ ಸ್ವಾಮ್ಯದಲ್ಲಿರುವ ವಾಹಿನಿಯಾಗಿರುವುದರಿಂದ ಇದು ಶೈಕ್ಷಣಿಕವಾಗಿ ಎಲ್ಲಾ ವಯೋಮಾನದವರಿಗೆ ಬೇಕಾದ ಕಾರ್ಯಕ್ರಮವನ್ನು ತಯಾರು ಮಾಡಬೇಕಾಗುತ್ತದೆ. ಕೃಷಿ, ಆರೋಗ್ಯ, ಜನಪದ, ಅಡುಗೆ, ಪ್ಯಾಶನ್, ಕಾನೂನು, ಸಂದರ್ಶನ, ಧಾರಾವಾಹಿ, ಕ್ರೀಡೆ, ಕಲೆ, ಸಾಹಿತ್ಯ, ಸಂಸ್ಕೃತಿ, ಸಿನಿಮಾ, ಸುದ್ದಿ ಇತ್ಯಾದಿ ಹೀಗೆ ಎಲ್ಲಾ ವಯೋಮಾನದವರಿಗೂ ಬೇಕಾದ ಕಾರ್ಯಕ್ರಮಗಳನ್ನು ನೀಡಲೇ ಬೇಕು. ದೂರದರ್ಶನವು ಡಿ.ಡಿ–೯ ಎಂಬ ಹೆಸರಿನಿಂದ ೧೯೯೪ಳ ಪ್ರಾದೇಶಿಕವಾದ ಕನ್ನಡ ಛಾನಲ್ ಆರಂಭಿಸಿತು. ನಂತರ ಅದಕ್ಕೆ ಚಂದನ ಎಂದು ನಾಮಕರಣ ಮಾಡಲಾಯಿತು. ಚಂದನ ಟಿವಿಯು ಪ್ರೇಕ್ಷಕರನ್ನು ತನ್ನತ್ತ ಸೆಳೆಯಲು ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿತ್ತು. ನಂತರ ಬಂದ ಅಧಿಕಾರಿಗಳು ಕಲೆ ಸಾಹಿತ್ಯ, ಸಂಸ್ಕೃತಿ, ವ್ಯಕ್ತಿ ಚಿತ್ರ ಜನಪದ ಇವುಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟರು. ಇವರು ಕಲಾವಿದರನ್ನು ತಮ್ಮಲ್ಲಿಯ ಸ್ಟುಡಿಯೋಗೆ ಕರೆಸಿಕೊಂಡು ರೆಕಾರ್ಡಿಂಗ್ ಮಾಡಿಕೊಳ್ಳುತ್ತಾರೆ. ಇಲ್ಲವೇ ಚಿತ್ರೀಕರಣ ತಂಡವನ್ನು ಅವರಲ್ಲಿಗೆ ಕಳುಹಿಸಿ ಕೂಡ ರೆಕಾರ್ಡಿಂಗ್ ಮಾಡಬಹುದು. ತಿಂಗಳಲ್ಲಿ ಇಷ್ಟು ಕಲಾವಿದರ ಸಂದರ್ಶನ ಮಾಡಲೇಬೇಕೆಂಬ ನಿಯಮಾವಳಿಗಳಿರುತ್ತವೆ. ಅದಕ್ಕೆ ತಕ್ಕಂತೆ ಕಲೆ ಮತ್ತು ಕಲಾವಿದರಿಗೆ ಗೌರವ ಸಂಭಾವನೆ ನೀಡುತ್ತಾರೆ. ಆಗ ಪ್ರಸಾರವಾಗಿದ್ದೆ ಯಾರಿಗೂ ಬೇಡ ಎಂದು ಮೂಲೆಗೊಂಪಾಗಿದ್ದ ಜನಪದ ಕಲೆಗಳ

ಜಾನಪದ ಸಂಚಿಕೆ ಸಿರಿಗಂಧ

"ತಂದಾನಾನತಾನ, ತಂದನಾನನ....ತಾನಾನಾನಾತಾನಾನಾ.... ಜನಕೆಲ್ಲಾ ಸೂಸ್ಯಾರೇ ಸಿರಿಗಂಧ..." ರಾಗಿಬೀಸುವ ಕಲ್ಲಿನೊಂದಿಗೆ ಆರಂಭವಾಗುವ ಈ ಶೀರ್ಷಿಕೆ ಹಾಡು ೧೯೯೬ರಲ್ಲಿ ಎಲ್ಲರ ಬಾಯಲ್ಲೂ ನಲಿಯುತ್ತಿತ್ತು. ಇದು ದೂರದರ್ಶನ ಮತ್ತು ಚಂದನ ವಾಹಿನಿಯ ಕಾರ್ಯಕ್ರಮ ಜಾನಪಲದ ಸಂಚಿಕೆ ಸಿರಿಗಂಧದ ಶೀರ್ಷಿಕೆ ಸಂಗೀತ. ಅಂದಿನ ದೂರದರ್ಶನದ ನಿರ್ದೇಶಕರಾದ ಶ್ರೀ ಅನೀಸ್ ಉಲ್ ಹಕ್ ಅವರು ಮತ್ತು ಸಿರಿಗಂಧ ಸಂಚಿಕೆಯ ನಿರ್ದೇಶಕ ಛಾಯಾಗ್ರಾಹಕರಾದ ಶ್ರೀನಿವಾಸ ಮೂರ್ತಿಯರ ಬಾಂಧವ್ಯದ ಬೆಸುಗೆಯಾಗಿ 'ಸಿರಿಗಂಧ' ಮೂಡಿಬಂತು. ಯಾರಿಗೂ ಬೇಡದ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಜನಪದ ಕಲೆಗಳು ಒಂದು ದೃಶ್ಯವಾಗಿ ಹೊರಹೊಮ್ಮಿತು. ಜಾನಪದ ಪರಿಷತ್ತಿನ ರುವಾರಿ ಶ್ರೀ.ಹೆಚ್.ಎಲ್. ನಾಗೇಗೌಡರ ಮಾರ್ಗದರ್ಶನದಲ್ಲಿ ೧೯೯೬ ಸೆಪ್ಟೆಂಬರ್ ರಲ್ಲಿ 'ಜಾನಪದ ಸಂಚಿಕೆ ಸಿರಿಗಂಧ' ಪ್ರಸಾರವಾಗಲು ಆರಂಭವಾಯಿತು. ವಾರದಲ್ಲಿ ಎರಡು ಸಲ ಸಂಚಿಕೆ ಮರು ಪ್ರಸಾರ ಕಾಣುತ್ತಿತ್ತು. ಈ ಕಾರ್ಯಕ್ರಮದಲ್ಲ ಸೋಬಾನೆ, ಹಸೆಚಿತ್ತಾರೆ, ಪೂಜಾಕುಣಿತ, ಸುಗ್ಗಿಕುಣಿತ, ಮುಖವೀಣೆ, ತತ್ವಪದ, ತಂಬೂರಿ, ನೀಲಗಾರರು, ಮಂಟೆಸ್ವಾಮಿ ಕಾವ್ಯ, ಮಲೆಮಾದೇಶ್ವರ ಕಾವ್ಯ, ಜುಂಜಪ್ಪನಕಾವ್ಯ, ಕೊರವರು, ಯರವರು, ಹಾಲಕ್ಕಿಗಳು, ತೊಗಲುಗೊಂಬೆ, ಸೂತ್ರದ ಗೊಂಬೆ, ಡೊಳ್ಳು, ಜಗ್ಗಲಿಗೆ, ಲಾಳಾಹೊಡೆಯುವುದು, ಬಿದರಿಕಲೆ, ಹುಲಿವೇಷ, ಕಂಗೀಲುಕುಣಿತ, ರಂಗೋಲಿ, ನೇಕಾರಿಕೆ,ಹಬ್ಬ, ಜಾತ್ರೆ, ಉತ್ಸವ ಇನ್ನು ಮುಂತಾದ ಕಲೆಗಳ ಪರಿಚಯ ಜನರಿಗೆ ಮಾಡಿಕೊಟ್ಟರು. ಜನಪದ ಸಂಸ್ಕೃತಿಯನ್ನು ನಾಡಿನಾದ್ಯಂತ ಹರಡಿದ ಹೆಚ್.ಎಲ್.ನಾಗೇಗೌಡರಿಗೆ ಮತ್ತು ಸಿರಿಗಂಧ ತಂಡಕ್ಕೆ ನಾಡಿನ ಜನತೆ ಪ್ರಶಂಸೆಯ ಮಳೆಗೆರೆದವು. ಎಲ್ಲಾ ದಿನಪತ್ರಿಕೆಗಳು ಕಾರ್ಯಕ್ರಮದಲ್ಲಿ ಪ್ರಸಾರವಾದ ಕಲೆಯ ಬಗೆ ಪ್ರಶಂಸಿಸಿ ಬರೆಯುತ್ತಿದ್ದರು. ಅಜ್ಞಾತ ಜನಪದ ಕಲಾವಿದರಲ್ಲಿ ಸಮಾಜದ ಮುಖ್ಯ ವಾಹಿನಿಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ ಮೂಲಕ ಪ್ರಚಾರ ಪಡೆದರು. ಸಣ್ಣವರಿಂದ ಹಿಡಿದು ದೊಡ್ಡವರ ತನಕವೂ ಎಲ್ಲರೂ ನೋಡುತ್ತಿದ್ದ ಕಲೆ ಕಲಾವಿದರ ಜೀವನ ಎಲ್ಲವೂ ಜನರಿಗೆ ಅಪ್ಯಾಯಮಾನವಾಯಿತು. ನಾಡು-ನುಡಿ ಬಾಷೆಯನ್ನು ಪ್ರೀತಿಸುವ ಎಲ್ಲಾ ಪ್ರೇಕ್ಷಕವರ್ಗ ಯಾರಿಗೂ ಬೇಡದ ಜನಪದ ಸಂಸ್ಕೃತಿಯನ್ನು ೧೫೦ ಸಂಚಿಕೆಗಳ ಮೂಲಕ ಬಿತ್ತರಗೊಳ್ಳುವಂತೆ ಮಾಡಿದವು. ಈ ಸಂಚಿಕೆಗಳ ಪ್ರೇರೇಪಣೆಯಿಂದ ಕೆಲವು ಸಂಘ ಸಂಸ್ಥೆಗಳು ಕಲಾವಿದರ್ನು ಕರೆದು ಪ್ರದರ್ಶನ ಮಾಡಿಸಿ ಅವರಿಗೆ ಮನ್ನಣೆ ಸಿಗುವಂತೆ ಮಾಡಿದವು. ಇದರಿಂದಾಗಿ ಹಳ್ಳಿಯ ಸಂಸ್ಕೃತಿ ನೋಡದೆ ಇರುವವರಿಗೆ ಹಳ್ಳಿ, ಕಲೆ, ಕಲಾವಿದ, ಜೀವನ ಇವುಗಳ ಚಿತ್ರಣ ಮೂಡುವಂತೆ ಮಾಡಿತು ಸಿರಿಗಂಧ. ಇಂದಿಗೂ ಕೂಡ ದೂರದರ್ಶನದಲ್ಲಿ 'ಸಿರಿಗಂಧ' ವನ್ನು ಅಗಾಗ್ಗೆ ಮರು ಪ್ರಸಾರ

ಮಾಡುತ್ತಾರೆ. ಇದು ಸರ್ಕಾರಿ ಸ್ವಾಮ್ಯದ ದೂರದರ್ಶನ ರಾಷ್ಟ್ರೀಯ ಛಾನಲ್ ಕಥೆಯಾದರೆ ಖಾಸಗೀ ವಾಹಿನಿಗಳಲ್ಲಿ ಯಾರೂ ಕಲೆ–ಸಾಹಿತ್ಯ– ಸಂಸ್ಕೃತಿಗೆ ಒತ್ತು ಕೊಡುವುದಿಲ್ಲ. ಇದೆಲ್ಲ ಚಾನಲ್‌ನ ಮುಖ್ಯಸ್ಥರ ಮೇಲೆ ಅವಲಂಬಿತವಾಗಿರುತ್ತದೆ. ಕಲೆ–ಸಾಹಿತ್ಯ–ಸಂಸ್ಕೃತಿಯ ಅರಿವಿರುವವರು ಅಧಿಕಾರಕ್ಕೆ ಬಂದರೆ ತಕ್ಕಮಟ್ಟಿಗಾದರೂ ಕಾರ್ಯಕ್ರಮಗಳು ಸಂಸ್ಕೃತಿಗೊಳಪಟ್ಟವು ರೂಪಿತವಾಗುತ್ತವೆ. ಹೀಗೆ ಇಂದಿಗೂ ಈ ಹೊತ್ತಿನಲ್ಲಿ ಸಂಸ್ಕೃತಿ ನಾಡು–ನುಡಿಯ ಕುರಿತು ಯಾರೇ ಕೆಲಸ ಮಾಡಿದರೂ ಅವರನ್ನು ಗುರುತಿಸುತ್ತಾರೆ.

ಜಾನಪದ ಸಿರಿನವಿಲು

ದೂರದರ್ಶನವು 'ದರ್ಪಣ' ಮಾಲಿಕೆಯಡಿ ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ 'ಜಾನಪದ ಸಿರಿನವಿಲು' ಎನ್ನುವ ಕಾರ್ಯಕ್ರಮವನ್ನು ಸಾದರಪಡಿಸಿತು. ಈ ಕಾರ್ಯಕ್ರಮ ಇಡೀಯಾಗಿ ಜನಪದ ಗೀತೆಗಳ ಚಿತ್ರ ಸಂಚಯವಾಗಿದ್ದು ಜನಪದ ಸಾಹಿತ್ಯದಲ್ಲಿ ಹೆಣ್ಣು ಎನ್ನುವ ವಿಷಯ ವಸ್ತುವನ್ನು ಒಳಗೊಂಡಿತ್ತು. ಮೊದಲ ಸಂಚಿಕೆಯಿಂದ ಹಿಡಿದು ಹದಿಮೂರು ಸಂಚಿಕೆಯವರೆಗೂ ಸುಮಾರು ೭೫ ಜನಪದ ಹಾಡುಗಳನ್ನು ಅನಾವರಣಗೊಳಿಸಲಾಗಿತ್ತು. ಲಾಲಿಪದ, ಕಾಯಕಪದ, ದೈವೀಪದ, ಪ್ರೀತಿ ಪ್ರೇಮ, ದಾಂಪತ್ಯಕುರಿತು, ಬಂಜೆತನದ ನೋವು, ಪ್ರತಿಯೊಂದು ಸಂಚಿಕೆಯೂ ವೈವಿಧ್ಯಮಯವಾಗಿ ಮೂಡಿ ಕರ್ನಾಟಕದ ಪ್ರಾದೇಶಿಕ ಹಿನ್ನಲೆ ಬಳಸಿಕೊಂಡು ಚಿತ್ರೀಕರಿಸಲಾಗಿತ್ತು. ವಿ.ಶ್ರೀನಿವಾಸಮೂರ್ತಿಯವರು ನಿರ್ದೇಶನ ಮತ್ತು ಛಾಯಾಗ್ರಹಣ ಮಾಡಿದ್ದಾರೆ. ಕಿರುತೆರೆ–ಹಿರಿತೆರೆಯ ಕಲಾವಿದರು ಹಾಡುಗಳಿಗೆ ಅಭಿನಯಿಸಿದ್ದಾರೆ. ಹೆಸರಾಂತ ಸಂಗೀತ ನಿರ್ದೇಶಕ ಬಿ.ವಿ. ಶ್ರೀನಿವಾಸ್ ಸಂಗೀತ ನೀಡಿದ್ದಾರೆ. ಹೆಸರಾಂತ ಗಾಯಕ, ಗಾಯಕಿಯರು ಹಿನ್ನಲೆಯಾಗಿ ಹಾಡಿದ್ದಾರೆ.

ಮನುಷ್ಯ ಜೀವನದಲ್ಲಿ ಹುಟ್ಟಿನಿಂದ ಸಾವಿನವರೆಗೆ ನಡೆಯುವ ವಿವಿಧ ಘಟನೆಗಳನ್ನು ನಮ್ಮ ಜನಪದರು ಗ್ರಹಿಸಿದ ಬಗೆಯನ್ನು ಜಾನಪದ ಹಾಡುಗಳ ಮೂಲಕವೇ ಅಭಿವ್ಯಕ್ತಿಗೊಳಿಸಲಾಗಿದೆ. 'ಜಾನಪದ ಸಿರಿನವಿಲು' ಕಾರ್ಯಕ್ರಮ ೨೦೦೩ರಂದು ದೂರದರ್ಶನದಲ್ಲಿ ಪ್ರಸಾರವಾದದ್ದು. ಇಂದು ಕೂಡ ಈ 'ಸಿರಿನವಿಲು' ಆಗಾಗ ಜನರ ಬೇಡಿಕೆಗನುಗುಣವಾಗಿ ಮರು ಪ್ರಸಾರವಾಗುತ್ತಿರುತ್ತದೆ. ಬದಲಾದ ಜಾಗತೀಕರಣದ ಸಂದರ್ಭದಲ್ಲಿ ದೇಶಿ ಸಂಸ್ಕೃತಿಗಳು ನಲುಗಿ ಹೋಗುತ್ತಿವೆ ಎಂಬ ಮಾತು ಎಲ್ಲೆಡೆ ಕೇಳಿಬರುತ್ತಿದೆ. ಇಂತಹ ಸಂದರ್ಭದಲ್ಲಿ ಕೇಂದ್ರ ದೂರದರ್ಶನವು ದರ್ಪಣ ಮಾಲಿಕೆಯಡಿ ಮಹತ್ವದ ಯೋಜನೆಯೊಂದನ್ನು ರೂಪಿಸಿ ನಾಡಿನ ಎಲ್ಲಾ ಬಗೆಯ ಮಹತ್ವದ ಸಾಹಿತ್ಯಗಳನ್ನು ಕಿರುತೆರೆಗೆ ಅಳವಡಿಸಿದೆ ಹಾಗೂ ಈ ಮಹತ್ವದ ಕೃತಿಗಳಿಗೆ ಒಳ್ಳೆಯ ಟಿ.ಆರ್.ಪಿ ಬಂದಿರುವುದು ಸಂತಸದ ವಿಷಯ.

ವೃತ್ತಪತ್ರಿಕೆ

ಜನ ಸಮೂಹದ ಬದುಕಿನಲ್ಲಿ ಸಮೂಹ ಮಾಧ್ಯಮಗಳದ್ದು ನಿರ್ಣಾಯಕ ಪಾತ್ರ ಸಮಾಜದ ಚಲನಶೀಲತೆಯಲ್ಲಿ ಅವುಗಳ ಕೊಡುಗೆಯನ್ನು ಕಡೆಗಣಿಸುವಂತಿಲ್ಲ. ಬಹುಮುಖಿ ನೆಲೆಗಳಲ್ಲಿ ಅವು ಪಾತ್ರವಹಿಸುತ್ತವೆ. ಸದಾಶಯ, ಕಾಳಜಿ ಕರ್ತವ್ಯ, ಹೊಣೆಗಾರಿಕೆ ಮತ್ತು ಪಾತ್ರಗಳ ನಿರ್ವಹಣೆಗಳ ವಿವಿಧ ಆಯಾಮಗಳಲ್ಲಿ ಸಂವಹನ ಮಾಧ್ಯಮಗಳು ಗುರುತಿಸಿ ಕೊಂಡಿವೆ. ವೃತ್ತಪತ್ರಿಕೆಗಳು, ರೇಡಿಯೋ, ಟಿ.ವಿ. ಇಂಟರ್‌ನೆಟ್, ಇವೆಲ್ಲವೂ ಇಂದು ಸಂವಹನದ ವ್ಯಾಪ್ತಿಯನ್ನು ಹಿಗ್ಗಿಸಿವೆ. "ಜನವರಿ ೨೯, ೧೭೮೦ ಭಾರತೀಯ ಪತ್ರಿಕಾರಂಗದ ಸುವರ್ಣ ದಿನ ಯುರೋಪಿನ ಜೇಮ್ಸ್ ಆಗಸ್ಟಸ್ ಹಿಕ್ಕಿ ಬೆಂಗಾಲ್ ಗೆಜೆಟ್ ಅಥವಾ ಕಲ್ಕಟಾ ಜನರಲ್ ಅಡ್ವಟೈರ್ಸರ್ ಎನ್ನುವ ಎರಡು ಪುಟಗಳ ಇಂಗ್ಲೀಷ್ ಸಾಪ್ತಾಹಿಕವನ್ನು ಭಾರತದ ನೆಲದಲ್ಲಿ ಪ್ರಾರಂಭಿಸಿದ ದಿನ ಅದು. ಹಿಕ್ಕಿಯೇ ಈ ಪತ್ರಿಕೆಯ ಸಂಪಾದಕ. ಪ್ರಕಾಶಕ ಮತ್ತು ಮುದ್ರಕನೂ ಆಗಿದ್ದರಿಂದ ಅದು ಹಿಕ್ಕೀಸ್ ಗೆಜೆಟ್ ಎಂದು ಕರೆಸಿಕೊಂಡಿತು. ಅದು ತನ್ನನ್ನು Weekly political and commercial paer open to all partices but influenced by none" ಎಂದು ಘೋಷಿಸಿಕೊಂಡಿತು"[೮].

ಕನ್ನಡ ಪತ್ರಿಕೆಗಳು ಪ್ರಾರಂಭದಲ್ಲಿ ಮತ ಪ್ರಚಾರ ಕಾರ್ಯಕ್ಕಾಗಿ ಹುಟ್ಟಿದರು. ತನ್ನದೇ ಆದ ದಿಟ್ಟ ನಿಲುವುಗಳನ್ನು ಹೊಂದಿತ್ತು. ಜನರಲ್ಲಿ ಸ್ವಾತಂತ್ರ್ಯ ಮತ್ತು ದೇಶಪ್ರೇಮವನ್ನು ಜಾಗೃತಗೊಳಿಸುವ ಗುರಿ ಹೊಂದಿತ್ತು, ಕನ್ನಡ ನಾಡು ನುಡಿಗಳ ಅಭಿವೃದ್ಧಿಯ ಕಡೆ ಜನ ಗಮನ ಹರಿಸುವಿಕೆ, ಹಾಗೂ ಸಾರ್ವಜನಿಕ ಅಭಿಪ್ರಾಯಗಳನ್ನು ತಿಳುವಳಿಕೆ ಮತ್ತು ಸಂಘಟನೆಗಳ ಕರ್ತವ್ಯಗಳ ಕಡೆ ಗಮನ ಹರಿಸುವ ಪ್ರಯತ್ನಗಳತ್ತ ಇಣುಕು ನೋಟ ಬೀರಲು ಆರಂಭಿಸಿತು. ಕಾಲಾನಂತರದಲ್ಲಿ ವೃತ್ತ ಪತ್ರಿಕೆ ಮಾಧ್ಯಮವು ಕ್ಷಣ-ಕ್ಷಣದ ಮಾಹಿತಿಯನ್ನು ವಾಕ್ಯ ಸಮೂಹದ ಮೂಲಕ ತಲುಪಿಸಲು ಆರಂಭಿಸಿತು. ವೃತ್ತ ಪತ್ರಿಕೆಯ ಸರ್ಕುಲೇಶನ್ ಹೆಚ್ಚಾದಂತೆ ಜನರಲ್ಲಿ ಅರಿವು ಮೂಡಲು ಆರಂಭವಾಯಿತು. ವೃತ್ತಪತ್ರಿಕೆಯು ಎಲ್ಲಾ ವರ್ಗದ ಜನರನ್ನು ತಲುಪಿತು. ಇಂದು ಈ ಅರಿವಿನ ತಿಳುವಳಿಕೆ ಜಾನಪದ ಲೊಕವನ್ನು ಬಿಟ್ಟಿಲ್ಲ, ಮನೆಮದ್ದು, ಗಿಡಮೂಲಿಕೆ, ಜನಪದ ಕಲೆ, ಕರಕುಶಲ, ರಂಗೋಲಿ, ಜನಪದ ಅಡುಗೆ ಹೀಗೆ ಹಲವು ರೀತಿಯಲ್ಲಿ ಜಾನಪದ ಜ್ಞಾನ ಶಾಖೆಗಳತ್ತ ಇಣುಕು ನೋಟ ಬೀರಲು ಆರಂಭಿಸಿತು. ಕೆಲವು ಪತ್ರಿಕೆಗಳಂತೂ ತನ್ನ ಸಾಪ್ತಾಹಿಕದಲ್ಲಿ ಒಂದು ಜನಪದ ಕಲೆ ಮತ್ತು ಕಲಾವಿದರ ಕುರಿತು ಸಂದರ್ಶನವನ್ನು ಬರೆದು ಅವರ ವಿಳಾಸವನ್ನು ಅವರ ಪೋನ್ ನಂಬರನ್ನು ನೀಡಿ ಕಲೆ ಮತ್ತು ಕಲಾವಿದರ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡಿ ಅಸಕ್ತರಿಗೆ ಅವರ ಬಗ್ಗೆ ತಿಳಿಸುವಂತೆ ಮಾಡಿತು. ಇದರಿಂದ ಕಲೆಗೆ ಮತ್ತು ಕಲಾವಿದರಿಗೆ ಪ್ರಚಾರ ಸಿಗುತ್ತಿತ್ತು. ಈ ನಿಟ್ಟಿನಲ್ಲಿ ಜನಪದ ಕಲಾವಿದರಿಗೆ ವೃತ್ತ ಪತ್ರಿಕೆಗಳು ಪ್ರೋತ್ಸಾಹ ನೀಡಿವೆ.

ಕಿರುತೆರೆ (ಖಾಸಗಿ ವಾಹಿನಿ)

ಖಾಸಗೀ ಛಾನಲ್‌ಗಳ ನಡುವೆ ಒಂದಕ್ಕಿಂತ ಒಂದು ಪೈಪೋಟಿ ನಡೆಸುತ್ತಿರುವ ಸಂದರ್ಭದಲ್ಲಿ ಕಿರುತೆಯಲ್ಲಿ ಜನಪದ ಕಲೆಗಳಿಗೆ ಅವಕಾಶ ಕೊಡುವುದು ನಿಜಕ್ಕೂ ಕಷ್ಟಸಾಧ್ಯ. ಅದರಲ್ಲೂ ಇಂದು ಜನಪದ ಕಲೆಗಳಿಗಾಗಿ ಮಾಡಿದ ಕಾರ್ಯಕ್ರಮಗಳೀಗೆ ಟಿ.ಆರ್.ಪಿ ಬಂದರೆ ಅದೊಂದು ದೊಡ್ಡ ವಿಚಾರ. ಕಿರುತೆರೆಯ ಕಾರ್ಯಕ್ರಮದ ಯಾವುದೇ ಮಾನದಂಡವು ಟಿ.ಆರ್.ಪಿ ಮೇಲೆ ನಿಂತಿರುತ್ತದೆ (ಟೆಲಿ ರೇಟಿಂಗ್ ಪಾಯಿಂಟ್). ಏಕೆಂದರೆ ಮಾಡುವ ಕಾರ್ಯಕ್ರಮಗಳಿಗೆ ಟಿ.ಆರ್.ಪಿ ಬಂದರೆ ಪ್ರಾಯೋಜಕರು ಜಾಹೀರಾತಿನ ಮುಖಾಂತರ ಬರುತ್ತಾರೆ. ಪ್ರಾಯೋಜಕರು ಬಂದರೆ ಮಾತ್ರ ಛಾನಲ್‌ನ ರೆವೆನ್ಯೂ ಜನರೇಟ್ ಆಗುವುದು. ಹೀಗಾಗಿ ಖಾಸಗೀ ಛಾನಲ್‌ಗಳ ಭವಿಷ್ಯ. ಕಾರ್ಯಕ್ರಮ ಮತ್ತು ಆದಾಯದ ಮೇಲೆ ನಿಂತಿರುತ್ತದೆ. ಇಂದು ಜನರಿಗೆ ನಾಡು ನುಡಿ ಸಂಸ್ಕೃತಿಗೆ ಸಂಬಂಧಪಟ್ಟ ಯಾವ ಕಾರ್ಯಕ್ರಮಗಳು ಬೇಕಾಗಿಲ್ಲ. ಅವರು ಅದರ ಬಗ್ಗೆ ಒಲವು ತೋರಿದರೆ ತಾನೇ ತಾನಾಗಿ ಕಾರ್ಯಕ್ರಮದ ಟಿ.ಆರ್.ಪಿ ಹೆಚ್ಚುತ್ತದೆ. ಆಗ ಇದ್ದಕ್ಕಿದ್ದಂತೆಯೇ ಇಂತಹ ಕಾರ್ಯಕ್ರಮಗಳು ತನ್ನಿಂದತಾನೇ ಹೆಚ್ಚುತ್ತವೆ.

ಇಂದು ಖಾಸಗಿ ಟಿವಿ ಛಾನಲ್‌ಗಳು ಟಿ.ಆರ್.ಪಿ (ಟೆಲಿ ರೇಟಿಂಗ್ ಪಾಯಿಂಟ್) ಗಳತ್ತ ಮುಖ ಮಾಡಿವೆ. 'ಸಮಯ' ಎಂಬ ಖಾಸಗಿ ಛಾನಲ್‌ನಲ್ಲಿ ಪ್ರಪ್ರಥಮ ಬಾರಿಗೆ "ನಮ್ಮ ಕಲೆ ನಮ್ಮ ಬದುಕು" ಎಂಬ ಖ್ಯಾತಿಯ ಅಳಿವಿನ ಅಂಚಿನಲ್ಲಿರುವ ಜನಪದ ಕಲೆಗಳ ಕಾರ್ಯಕ್ರಮವನ್ನು ಪ್ರಸಾರ ಮಾಡಿತು. ಇದು ಕರ್ನಾಟಕ ಜನಪದ ಕಲೆ ಮತ್ತು ಕಲಾವಿದರ ಪರಿಚಯ ಇಂದಿನ ಅವರ ಸ್ಥಿತಿ ಕುರಿತು ಒಳಗೊಂಡ ಕಾರ್ಯಕ್ರಮ ಇದಾಗಿತ್ತು. 'ನಮ್ಮ ಕಲೆ ನಮ್ಮ ಬದುಕು' ಕಾರ್ಯಕ್ರಮಕ್ಕೆ ಕೂಡ ಪ್ರಾಯೋಜಕರು (ಸ್ಪಾನ್ಸರ್) ಸಿಕ್ಕಿದ್ದರು ಎನ್ನುವುದು ಹೆಗ್ಗಳಿಕೆ. ಬೇರೆ-ಬೇರೆ ಛಾನಲ್‌ಗಳಲ್ಲೂ ಕೂಡ ಈ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಯುತ್ತಿತ್ತು. ಅಲ್ಲದೇ ವಿಕಾಸ ಸೌಧದಲ್ಲಿರುವ ಆಗಿನ ಕಾರ್ಯದರ್ಶಿ ಶ್ರೀ ಜಯರಾಮರಾಜೇ ಅರಸ್ ಅವರು 'ನಮ್ಮ ಕಲೆ ನಮ್ಮ ಬದುಕು' ಕಾರ್ಯಕ್ರಮದ ನಿರ್ದೇಶಕರನ್ನು ವಿಕಾಸ ಸೌಧದಲ್ಲಿರುವ ತಮ್ಮ ಕಛೇರಿಗೆ ಕರೆಸಿಕೊಂಡು ಸರಕಾರ ಮಾಡುವ ಕಾರ್ಯವನ್ನು ತಾವು ಅಚ್ಚುಕಟ್ಟಾಗಿ ಮಾಡಿರುವುದಾಗಿ ಮತ್ತು ಕಾರ್ಯಕ್ರಮದ ಬಗ್ಗೆ ಪ್ರಶಂಸೆ ಮಾಡಿರುವುದನ್ನು ನೀಡಿದ್ದನ್ನು ಇಲ್ಲಿ ಸ್ಮರಿಸಲೇಬೇಕು.

ಕನ್ನಡ ಟಿವಿ ವಾಹಿನಿಗಳಲ್ಲಿ ಜನಪ್ರಿಯ ಮನೋರಂಜನಾ ಕಾರ್ಯಕ್ರಮಗಳೇ ಮೇಲುಗೈ ಪಡೆದಿರುವ ಈ ಕಾಲದಲ್ಲಿ ನಮ್ಮ ನಾಡು, ನುಡಿ, ಸಂಸ್ಕೃತಿ ಎಲ್ಲವೂ ದಿನ-ದಿನ ಮೂಲೆಗುಂಪಾಗುತ್ತಿವೆ. ತಕ್ಷಣದ ಜನಪ್ರಿಯತೆ, ಧಿಡೀರ್ ಟಿ.ಆರ್.ಪಿ, ಹೆಚ್ಚಳಕ್ಕಾಗಿ ವಾಹಿನಿಗಳು ಪೈಪೋಟಿ ನಡೆಸುವ ಈ ದಿನಮಾನಗಳಲ್ಲಿ ಸಮಯ ವಾಹಿನಿಯಲ್ಲಿ

ಪ್ರಸಾರವಾದ "ನಮ್ಮ ಕಲೆ ನಮ್ಮ ಬದುಕು" ಎಂಬ ಜಾನಪದ ಆಧಾರಿತ ಕಾರ್ಯಕ್ರಮ ಸರಣಿಯು ಅತ್ಯಂತ ಯಶಸ್ವಿಯಾಗಿ ಮೂಡಿಬಂದು ವ್ಯಾಪಾರಿ–ಜಾಹೀರಾತು ಪಡೆಯುವಷ್ಟರ ಮಟ್ಟಿಗೆ ಜನಪ್ರಿಯತೆ ಗಳಿಸಿದ್ದು ಆಶ್ಚರ್ಯವೇ ಸರಿ. ಸಾಮಾನ್ಯವಾಗಿ ಇಂತಹ ಕಾರ್ಯಕ್ರಮಗಳಿಗೆ ಪ್ರಾಯೋಜಕರೂ ಸಿಗುವುದಿಲ್ಲ. ಜಾಹೀರಾತುಗಳೂ ಬರುವುದಿಲ್ಲ. ಆದರೆ ಈ ಕಾರ್ಯಕ್ರಮ ವ್ಯಾವಹಾರಿಕವಾಗಿಯೂ ಯಶಸ್ಸು ಪಡೆದು ಹತ್ತಿರ ಹತ್ತಿರ ನೂರು ಕಂತುಗಳಲ್ಲಿ ಪ್ರಸಾರವಾಗಿದ್ದು ಕಾರ್ಯಕ್ರಮದ ಪರಿಣಾಮಗಳ ಬಗ್ಗೆ ಜನರ ಅಭಿರುಚಿಯ ಬಗ್ಗೆ ಹಲವು ಒಳನೋಟಗಳನ್ನು ಪಡೆಯಲು ಕಾರಣವಾಗಿದೆ.

ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾನಪದ ಕಲೆಗಳ ಪೋಷಕರು ಕಣ್ಮರೆಯಾಗುತ್ತಿದ್ದಾರೆ. ಆಶ್ರಯದಾತರಿಲ್ಲದ ಯಾವುದೇ ಕಲಾಪ್ರಕಾರ ಕೇವಲ ಕಲಾವಿದನ ಪ್ರತಿಭೆ ಮಾತ್ರದಿಂದಲೇ ಉಳಿದು ಬೆಳೆಯುವುದು ಅಸಾಧ್ಯದ ಮಾತು. ಒಂದೆಡೆ ಪಾಶ್ಚಾತ್ಯ ಪ್ರಭಾವದ ಆಧುನಿಕ ಜೀವನಶೈಲಿಯ ಸೆಳೆತ ಹೊಸ ತಲೆಮಾರನ್ನು ಬಲವಾಗಿ ಕಾಡುತ್ತಿರುವ ಸಂದರ್ಭದಲ್ಲಿ, ಅದನ್ನು ನೆಚ್ಚಿಕೊಂಡವರಿಗೆ ಹೊಟ್ಟೆ ಬಟ್ಟೆ ಕೊರತೆಯಾಗುತ್ತಿರುವುದು ವಾಸ್ತವದ ಸಂಗತಿಯಾಗಿದೆ. ಜೊತೆಗೆ ಪರಿಸರದ ಮೇಲಾಗುತ್ತಿರುವ ನಿರಂತರ ಹಾನಿಯಿಂದ ನಮ್ಮ ಆದಿವಾಸಿಗಳು, ಗ್ರಾಮೀಣರ ಅವಿಭಾಜ್ಯ ಅಂಗವಾದ ಕೃಷಿ ಇಂದು ತನ್ನ ತನವನ್ನು ಕಾಯ್ದುಕೊಂಡಿಲ್ಲ ಕಾಡುಗಳು ನಶಿಸಿ ಹೋಗಿವೆ. ಲಕ್ಷಾಂತರ ಬೆಸ್ತರ ಅನ್ನದಾತನಾದ ಕಡಲು ಇನ್ನಿಲ್ಲದಂತೆ ಮಾಲಿನ್ಯಗೊಂಡಿವೆ. ಅದಕ್ಕೆ ನಮ್ಮ ನದಿಗಳೂ ಹೊರತಾಗಿಲ್ಲ. "ನಮ್ಮ ಕಲೆ–ನಮ್ಮಬದುಕು" ಕಾರ್ಯಕ್ರಮದ ಪ್ರತಿ ಸರಣಿಯಲ್ಲಿ ಒಂದು ಜಾನಪದ ಕಲಾ ಪ್ರಕಾರವನ್ನು ಪರಿಚಯಿಸುವುದರ ಜೊತೆಗೆ ಇಂದು ಅದನ್ನು ನೆಚ್ಚಿಕೊಂಡಿರುವ ಕಲಾವಿದರ ಸ್ಥಿತಿ–ಗತಿಗಳನ್ನು ಕುರಿತು ವೀಕ್ಷಕರಿಗೆ ತಿಳಿಯಪಡಿಸಿದ್ದು ಒಂದು ವಿನೂತನ ಪ್ರಯೋಗವಾಗಿತ್ತು. ಈ ಕಾರ್ಯಕ್ರಮ ಎಷ್ಟು ಪರಿಣಾಮಕಾರಿಯಾಗಿ ಮೂಡಿಬಂತೆಂದರೆ ಪ್ರತಿ ಕಾರ್ಯಕ್ರಮ ಪ್ರಸಾರದ ನಂತರ ಕಾರ್ಯಕ್ರಮದ ಬಗ್ಗೆ ಮೆಚ್ಚಿಗೆ ಮಾತ್ರ ಕೇಳಿ ಬರಲಿಲ್ಲ. ಸಾಮಾನ್ಯವಾಗಿ ಎಲ್ಲಿ ಕಲಾವಿದರು ಒಂದಲ್ಲ ಒಂದು ಸಂಕಷ್ಟದಲ್ಲೇ ಬದುಕುವುದನ್ನು ಕಂಡು ಅನೇಕ ಸಂಘ ಸಂಸ್ಥೆಗಳು ವೀಕ್ಷಕರು ಅವರ ಸಹಾಯಕ್ಕೆ ಧಾವಿಸಿ ಬಂದಿದ್ದು ಅದರ ಯಶಸ್ಸಿಗೆ ಸಾಕ್ಷಿಯಾಗಿದೆ.

ಅಂತರ್ಜಾಲ

ದೃಶ್ಯಮಾಧ್ಯಮಗಳಲ್ಲಿ ಒಂದಾದ ಇಂಟರ್‌ನೆಟ್‌ನ ಅಭಿವೃದ್ಧಿಯ ಇತಿಹಾಸದ ಬಗ್ಗೆ ಪರಿಪೂರ್ಣ ಮಾಹಿತಿಗಳು ಸಿಗಲಾರವು. ಆದರೆ ಅಸಮರ್ಪಕ ಮಾಹಿತಿಗಳಿಂದಲೇ ದೃಶ್ಯಮಾಧ್ಯಮಗಳ ವಿಕಾಸವನ್ನು ತಿಳಿಯಲು ಸಾಧ್ಯ. ಇಂಟರ್‌ನೆಟ್‌ನ ರಚನೆಗೆ ಕಾರಣವಾದ ಅಭಿವೃದ್ಧಿ ಕಾರ್ಯಗಳ ಹಿನ್ನಲೆಯ ದಾಖಲೆಗಳ ಕೊರತೆ ಸೇರಿದಂತೆ

ಹಲವು ಕಾರಣಗಳಿಗೆ ಇಂಟರ್‌ನೆಟ್‌ನ ಉಗಮದ ಬಗ್ಗೆ ಸ್ಪಷ್ಟತೆ ಸಿಗುವುದಿಲ್ಲ. ಆರಂಭಿಕ ಹಂತಗಳ ದಾಖಲೆಗಳ ಕ್ರೋಢೀಕರಣಕ್ಕೆ ಮಹತ್ವ ನೀಡದಿರುವುದೂ ಪ್ರಮುಖ ಕಾರಣಗಳಲ್ಲೊಂದು.

ನೋಕಿಯಾ ೯೦೦೦ ಇಂಟರ್‌ನೆಟ್ ಸಂಪರ್ಕ ಹೊಂದಿದ ಮೊದಲ ಮೊಬೈಲ್ ೧೯೯೬ರಲ್ಲಿ ಇದನ್ನು ಫಿನ್ಲೆಂಡ್‌ನಲ್ಲಿ ಬಿಡುಗಡೆ ಮಾಡಲಾಯಿತು. ಮೊಬೈಲ್ ಆಧಾರಿತ ಇಂಟರ್‌ನೆಟ್‌ನ ಕಲ್ಪನೆಯು ಆ ಮಾದರಿಯ ಮೊಬೈಲ್‌ಗಳ ಬೆಲೆ ಕಡಿಮೆಯಾಗುವವರೆಗೆ ಏರಿಕೆ ಕಾಣಲಿಲ್ಲ. ನೆಟ್‌ವರ್ಕ್ ಸೇವಾ ಪೂರೈಕೆದಾರರು ಮೊಬೈಲ್‌ಗಳಲ್ಲಿ ಇಂಟರ್‌ನೆಟ್‌ನ್ನು ಸಕ್ರೀಯಗೊಳಿಸಲು ತಮ್ಮ ಸಿಸ್ಟಮ್‌ಗಳು ಮತ್ತು ಸೇವೆಗಳನ್ನು ಅಭಿವೃದ್ಧಿ ಪಡಿಸಲು ಪ್ರಾರಂಭಿಸಿದರು. ಜಪಾನ್‌ನಲ್ಲಿ NTT DOCOMO i-Mode ಎಂಬ ಮೊದಲ ಮೊಬೈಲ್ ಇಂಟರ್‌ನೆಟ್ ಸೇವೆಯನ್ನು ೧೯೯೯ರಲ್ಲಿ ಬಿಡುಗಡೆ ಮಾಡಿತು. ಮತ್ತು ಮೊಬೈಲ್ ಆಧಾರಿತ ಇಂಟರ್‌ನೆಟ್ ಹುಟ್ಟು ಎಂದು ಇದನ್ನು ಪರಿಗಣಿಸಲಾಗಿದೆ. ೨೦೦೧ರಲ್ಲಿ ರಿಸರ್ಚ್ ಇನ್ ಮೋಷನ್ ತಮ್ಮ ಬ್ಲಾಕ್ ಬೆರ್ರಿ ಉತ್ಪನ್ನಕ್ಕಾಗಿ ಮೊಬೈಲ್ ಆಧಾರಿತ ಇಮೇಲ್ ವ್ಯವಸ್ಥೆಯನ್ನು ಅಮೇರಿಕಾದಲ್ಲಿ ಬಿಡುಗಡೆ ಮಾಡಿತು. ಮೊಬೈಲ್‌ನ ಚಿಕ್ಕಪರದೆ, ಚಿಕ್ಕ ಕೀ ಪ್ಯಾಡ್ ಮತ್ತು ಒಂದು ಕೈಯ ಕಾರ್ಯಾಚರಣೆ ಅತ್ಯುತ್ತಮವಾಗಿ ಬಳಸಿಕೊಳ್ಳಲು ಮೊಬೈಲ್ ಇಂಟರ್‌ನೆಟ್‌ಗಾಗಿ ಸರಳವಾದ ಪ್ರೋಗ್ರಾಮಿಂಗ್ ಆವರಣವನ್ನು ರಚಿಸಲಾಯಿತು. ಅದನ್ನು ವೈಯರ್‌ಲೆಸ್ ಅಪ್ಲಿಕೇಷನ್ ಪ್ರೋಕಾಲ್ ಆದ ವ್ಯಾಪ್ ಎಂದು ಕರೆಯುತ್ತಾರೆ. ಹೆಚ್ಚಿನ ಮೊಬೈಲ್ ಇಂಟರ್‌ನೆಟ್ ಸೇವೆಗಳು ವ್ಯಾಪ್‌ನಲ್ಲಿ ಕಾರ್ಯನಿರ್ವಹಿಸುತ್ತದೆ. ಮೊಬೈಲ್ ಆಧಾರಿತ ಇಂಟರ್‌ನೆಟ್‌ನಲ್ಲಿನ ಅಭಿವೃದ್ಧಿಯು ಏಷ್ಯಾದ ಜಪಾನ್, ದಕ್ಷಿಣಾಕೋರಿಯಾ, ಮತ್ತು ತೈವಾನ್ ದೇಶಗಳಲ್ಲಿ ಪ್ರಾರಂಭವಾಗಿ, ಆನಂತರ ಪಿಸಿಗಿಂತ ಹೆಚ್ಚು ಮೊಬೈಲ್‌ನಿಂದ ಇಂಟರ್‌ನೆಟ್ ಬಳಸುವವರ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿತು. ಈ ದೇಶಗಳನ್ನು ಅನುಸರಿಸಿದ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಾದ ಭಾರತ ದಕ್ಷಿಣ ಆಫ್ರಿಕಾ, ಕೀನ್ಯಾ, ಫಿಲಿಫೈನ್ಸ್ ಮತ್ತು ಪಾಕಿಸ್ತಾನದಲ್ಲಿಯು ಸಹ ಪಿಸಿಗಿಂತ ಹೆಚ್ಚು ಮೊಬೈಲ್ ಇಂಟರ್‌ನೆಟ್ ಬಳಸುವವರ ಸಂಖ್ಯೆಯಲ್ಲಿ ಏರಿಕೆ ಕಂಡು ಬಂದಿತೆಂದು ವರದಿಯಾಗಿದೆ. ಯುರೋಪ್ ಮತ್ತು ಉತ್ತರ ಅಮೇರಿಕಾದ ಇಂಟರ್‌ನೆಟ್ ಬಳಕೆ ದೊಡ್ಡ ಪ್ರಮಾಣದ ವೈಯುಕ್ತಿಕ ಕಂಪ್ಯೂಟರ್‌ಗಳ ಪ್ರಭಾವಕ್ಕೆ ಒಳಗಾಗಿತ್ತು. ಮೊಬೈಲ್ ಇಂಟರ್‌ನೆಟ್ ಬಳಕೆಯಲ್ಲಿನ ಏರಿಕೆಯು ನಿಧಾನಗತಿಯಲ್ಲಿತ್ತು. ಹೀಗೆ ಇಂಟರ್‌ನೆಟ್ ಇಂದು ಮನುಷ್ಯ ಸಮಾಜಕ್ಕೆ ಬಹುಪಯೋಗಿ ಕೆಲಸವನ್ನು ನಿರ್ವಹಿಸುತ್ತಿದೆ.

ದೃಶ್ಯ ಮಾಧ್ಯಮ ಬೆಳವಣಿಗೆಯಲ್ಲಿ ಇಂದು ಅದನ್ನು ಆಧರಿಸಿದ ಮೊಬೈಲ್ ತಂತ್ರಜ್ಞಾನ ಹೆಚ್ಚು ವ್ಯಾಪಕವಾಗಿ ಬಳಕೆಯಾಗುತ್ತಿದ್ದ ಕೆಲವು ಪ್ರಸಿದ್ಧ ಕಲಾವಿದರ ಪ್ರದರ್ಶನಗಳ ವಿಡೀಯೋಗಳು ದೊರೆಯುತ್ತವೆ. ಈಗಾಗಲೇ ಪ್ರಸಿದ್ಧಿಯನ್ನು ಹೊಂದಿದ ಯಕ್ಷಗಾನ,

ಡೊಳ್ಳಿ, ಪೂಜಾಕುಣಿತ, ಮೊದಲಾದ ಅನೇಕ ಕಲಾ ಪ್ರಕಾರಗಳನ್ನು ಬಹಳ ಹತ್ತಿರದಿಂದ ನೋಡಲು ಸಹಾಯವಾಗುತ್ತಿವೆ. ಸ್ಮಾರ್ಟ್ ಫೋನ್‌ಗಳ ಬಳಕೆಯಿಂದ ಅಂಗೈಯಲ್ಲೇ ರಂಗಸ್ಥಳ ಕಾಣುತ್ತಿದೆ. ಆದರೆ ಕೆಲವು ಕಲೆಗಳು ಮಾತ್ರ ಇನ್ನೂ ಅಂತರ್ಜಾಲದಲ್ಲಿ ನೋಡುವುದಕ್ಕೂ ಕೆಲ ಮಿತಿಗಳಿವೆ. ಒಂದು ನೈಜ ಪ್ರದರ್ಶನವನ್ನು ಸಂಜೆಯಿಂದ ಬೆಳಗಿನವರೆಗೆ ನೋಡಲು ಸಾಧ್ಯ. ಆದರೆ ಅಂತರ್ಜಾಲದಲ್ಲಿ ಈ ಸಾಧ್ಯತೆ ಕಡಿಮೆ ಆದರೆ ಇದರಿಂದ ಕಲೆಗಳ ಪರಿಚಯವಾಗಬಹುದು. ಆದರೆ ಅದರೆ ಪೂರ್ಣ ಪರಿಚಯ ಅಸಾಧ್ಯ.

೪.೩ ದೃಶ್ಯ ಮಾಧ್ಯಮ ವ್ಯಾಪಾರೀಕರಣ

೧. ಇಂದಿನ ದೂರದರ್ಶನ ಮಾಧ್ಯಮ ಒಂದು ಉದ್ಯಮವಾಗಿ ಬೆಳದಿರುವುದು, ಪ್ರತಿಯೊಂದು ಕಾರ್ಯಕ್ರಮವನ್ನು ಲಾಭನಷ್ಟದ ಲೆಕ್ಕಾಚಾರದಲ್ಲಿಯೇ ನಿರ್ಧಾರ ಮಾಡಲಾಗುತ್ತದೆ.

೨. ದಿಢೀರ್ ಜನಪ್ರಿಯತೆ ಗಳಿಸಲು ಮನುಷ್ಯನ ಕಾಮನೆಗಳನ್ನು ಕೆರಳಿಸುವ, ಅಂಧಶ್ರದ್ಧೆಯನ್ನು ಪ್ರಚೋದಿಸುವ ಕಾರ್ಯಕ್ರಮಗಳನ್ನು ಸಹ ಯಾವುದೇ ಎಗ್ಗಿಲ್ಲದೇ ಪ್ರಸಾರ ಮಾಡಲಾಗುತ್ತದೆ.

೩. ಯಾವುದೇ ಗಂಭೀರ ವಿಷಯುವನ್ನು ಜನರಿಗೆ ಮನಮುಟ್ಟುವಂತೆ ತಲುಪಿಸಬೇಕಾದರೆ, ಅದಕ್ಕೊಂದು ದೀರ್ಘವಾದ ಪೂರ್ವ ತಯಾರಿ ಬೇಕಾಗುತ್ತದೆ. ಅಪಾರವಾದ ಅನುಭವವೂ ಜೊತೆಗೆ ಬೇಕೆ–ಬೇಕು.

೪. ಆದರೆ ಬಹುತೇಕ ಹೊಸ ಮುಖಗಳಿಂದಲೇ ತುಂಬಿ ತುಳುಕುವ ಇಂದಿನ ಖಾಸಗಿ ವಾಹಿನಿಗಳಲ್ಲಿ ಅನುಭವ, ಶ್ರದ್ಧೆ ಎರಡರ ಕೊರತೆ ಢಾಳಾಗಿ ಎದ್ದು ಕಾಣುವಂತಿದೆ.

೫. ಹಾಗಾಗಿ ಯಾವುದೇ ಶೈಕ್ಷಣಿ, ಸಾಂಸ್ಕೃತಿಕ ಕಾರ್ಯಕ್ರಮ ಜನೋಪಯೋಗಿ, ದೀರ್ಘಕಾಲೀನ ಪರಿಣಾಮಗಳ ವಿವೇಚನೆಯೊಂದಿಗೆ ರೂಪುಗೊಳ್ಳುವ ಬದಲು ಅದು ಫಾಸ್ಟ್ ಫುಡ್‌ನಂತೆ ತಯಾರಿಯಾಗಿ ಹಾಗೆ ಬಿಕರಿಯಾ ಹಾಗೇ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

೬. ಈ ನಿಟ್ಟಿನಲ್ಲಿ ಸರ್ಕಾರಿ ಸ್ವಾಮ್ಯದಲ್ಲಿರುವ ರಾಷ್ಟ್ರೀಯ ದೂರದರ್ಶನ ವಾಹಿನಿ ಮತ್ತು ಪ್ರಾದೇಶಿಕವಾದ ಚಂದನದಂತಹ ವಾಹಿನಿಗಳು ಮಾಡುತ್ತಿರುವ ಕಾರ್ಯ ಸ್ತುತ್ಯಾರ್ಹ ದೇಶದ ಮೂಲೆ ಮೂಲೆಗಳಲ್ಲಿರುವ ಕಲಾ ಪ್ರಕಾರಗಳನ್ನು ಹುಡುಕಿ ಹುಡುಕಿ ವೀಕ್ಷಕರೆದುರು ಸಾದರ ಪಡಿಸಿದ ಹೆಮ್ಮೆ ರಾಷ್ಟ್ರೀಯ ವಾಹಿನಿಗಿದೆ.

೭. ಈ ಹಿನ್ನಲೆಯಲ್ಲಿ ನಮ್ಮ ಕಲೆ–ನಮ್ಮ ಬದುಕು ಕಾರ್ಯಕ್ರಮವನ್ನು ಅವಲೋಕಿಸಿದಾಗ ಜನರಿಗೆ ಉತ್ತಮ ಅಭಿರುಚಿಯ ಕಾರ್ಯಕ್ರಮಗಳ ಬಗ್ಗೆ ಆಸಕ್ತಿಯಿದೆ. ಆದರೆ ಅವರ ಅಭಿರುಚಿಯನ್ನು ವ್ಯಾಪಾರೀ ಕಾರಣಗಳಿಗಾಗಿ ತಿರುಚಲಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕೆಲವು ಆಯ್ದ ಕನ್ನಡ ಕಥೆಗಳನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸಿ ಅದನ್ನು ಖಾಸಗಿ ವಾಹಿನಿಗಳಲ್ಲಿ ಪ್ರಸಾರ ಮಾಡಿತು. ಅದೇ ರೀತಿ ಜಾನಪದ ಕಲಾ ಪ್ರಕಾರಗಳನ್ನು ಸಹ ಇದೇ ಮಾದರಿಯಲ್ಲಿ ವೀಕ್ಷಕರಿಗೆ ಪರಿಚಯಿಸುವಂತಾದರೆ ನಾಡಿನ ಜಾನಪದ ಲೋಕಕ್ಕೆ ಒಂದು ಹೊಸ ಆಯಾಮ ದೊರಕುತ್ತದೆ. ನೂರಾರು ಸಂಖ್ಯೆಯಲ್ಲಿರುವ ಜಾನಪದ ಕಲಾ ಪ್ರಕಾರಗಳು, ಸಾಂಸ್ಕೃತಿಕ ಆಚರಣೆಗಳು, ಜಾನಪದ ಅಡುಗೆಗಳು ವೀಕ್ಷಕರಿಗೆ ಪರಿಚಯಿಸಿದರೆ ಹಲವಾರು ವರ್ಷಗಳ ಕಾರ್ಯಕ್ರಮವಾದೀತು. ಆ ಮೂಲಕ ನಾಡಿನ ವಿಸ್ಮೃತಿಗೊಳಗಾದ ಸಾಂಸ್ಕೃತಿಕ ಬದುಕಿನ ಬಹುದೊಡ್ಡ ಅನಾವರಣವಾಗುತ್ತದೆ. ಜೊತೆಗೆ ಹೊಸ ತಲೆಮಾರಿಗೆ ಸ್ಫೂರ್ತಿಯ ಸೆಲೆಯೂ ಆಗುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ "ನಮ್ಮ ಕಲೆ–ನಮ್ಮ ಬದುಕು" ದೃಶ್ಯ ಮಾಧ್ಯಮದಲ್ಲಿ ಜಾನಪದದ ಆಧುನಿಕ ಸಾಧ್ಯತೆಯನ್ನು ಒರೆಗೆ ಹಚ್ಚಿದ ಕಾರ್ಯಕ್ರಮ ಎಂಬುದರಲ್ಲಿ ಸಂಶಯವಿಲ್ಲ.

೪.೪ ಜನಪದ ಕಲೆಗಳ ಪ್ರಸರಣ ಮತ್ತು ಸಾಮಾಜಿಕ ಪರಿಣಾಮ

ಜನಪದ ಕಲೆಗಳು ಸಮಾಜದ ಭಾಗವಾಗಿಯೇ ಮೂಡಿ ಬಂದಿರುವುದು ನಮಗೆಲ್ಲರಿಗೂ ತಿಳಿದ ಸಂಗತಿ ಮಾನುಷ ಮತ್ತು ಅತಿಮಾನುಷ ಶಕ್ತಿಗಳ ವಿಜೃಂಭಣೆಯು ಅಲ್ಲಿ ನಡೆದಿದೆ. ವೈದಿಕ ಪುರಾಣಗಳಿಗೆ ಪರ್ಯಾಯವಾಗಿ ಪ್ರತಿ ಪುರಾಣಗಳು ಜನಪದದಲ್ಲಿ ಸೃಷ್ಟಿಯಾಗಿವೆ. ಜನಪದ ಹಾಡು ಕುಣಿತ ಗಾದೆ ಒಗಟು ನುಡಿಗಟ್ಟು ಪುರಾಣ ಕಾವ್ಯ ಜನಪದ ವೈದ್ಯ. ಜನಪದ ವಿಜ್ಞಾನ, ಜನಪದ ಆಚರಣೆ ವಿಚಾರ ಹೀಗೆ ಹಲವು ಮಗ್ಗಲುಗಳಲ್ಲಿ ಅದು ಹರಡಿ ನಿಂತಿದೆ. ಮನುಷ್ಯ ಬದುಕಿನ ಜೊತೆಗೆ ಅದು ಅತಿ ನಿಕಟವಾದ ಸಂಬಂಧವನ್ನು ಹೊಂದಿದೆ. ಇಂದಿನ ನಮ್ಮ ಆಧುನಿಕ ಬದುಕು ಕೂಡ ಒಂದಲ್ಲ ಒಂದು ವಿಧದಲ್ಲಿ ಜನಪದ ನಂಬಿಕೆ, ವಿಚಾರಗಳ ಆಧಾರದಡಿಯಲ್ಲಿಯೇ ಮುನ್ನಡೆಯುತ್ತದೆ. ಕೆಲವೊಮ್ಮೆ ಅದು ಮೂಢ ನಂಬಿಕೆಯಾಗಿ ಕಂಡರೂ ಅದರ ಸಾಂಸ್ಕೃತಿಕ ಆಯಾಮದಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ತುಳು ನಾಡ ಸಿರಿಯಂಥಹ ಆರಾಧನಾ ಸಂಪ್ರದಾಯಗಳು ಇಂದಿಗೂ ಜೀವಂತವಾಗಿ ನಮ್ಮ ನಡುವೆ ನಡೆಯುತ್ತದೆ.

ಅತಿಮಾನುಷ ರೂಪದಲ್ಲಿ ಆರಾಧಿಸಲ್ಪಡುತ್ತಿದೆ ಬದುಕು ಆಧುನೀಕರಣಗೊಳ್ಳುತ್ತಿದ್ದರೂ ಇಂತಹ ಆಚರಣೆಗಳೂ ನಿಂತಿಲ್ಲ. ಮತ್ತು ಅರ್ಥವನ್ನು ಕಳೆದುಕೊಳ್ಳುತಿಲ್ಲ. ಉದಾಹರಣೆಯಾಗಿ ತುಳು ನಾಡಿನ ಭೂತಾರಾಧನೆ ಸಂಪ್ರದಾಯವನ್ನು ಗಮನಿಸಬಹುದು.

ಯಕ್ಷಗಾನ ಬಯಲಾಟವು ಇದಕ್ಕೆ ಇನ್ನೊಂದು ಉದಾಹರಣೆ ಭೂತಾರಾಧನೆಯನ್ನು ಹೆಚ್ಚು ಆಕರ್ಷಕವಾಗಿ ಮಾಡುವ ಅದನ್ನು ಇಡೀ ರಾತ್ರಿ ನೋಡುವಂತೆ ಮಾಡುವ ಆಧುನಿಕ ಸಲಕರಣೆಗಳು ವಿದ್ಯುದೀಪ, ಮಂಟಪ, ವಾದ್ಯ ಪರಿಕರಗಳು ಇವೆಲ್ಲವೂ ಜನಮನ್ನಣೆ ಪಡೆಯುತ್ತಿದೆ. ಭೂತಗಳು ನರ್ತಿಸುವ ವಿಧಾನಗಳು ಸಿನಿಮೀಯ ನೃತ್ಯವನ್ನು ಕೆಲವೊಮ್ಮೆ ಹೋಲುತ್ತಿವೆ. ಅಲ್ಲದೆ ಸಿನಿಮಾ ಹಾಡುಗಳಿಗೂ ಭೂತಗಳು ನರ್ತಿಸಿ ಜನರಿಗೆ ಮನರಂಜನೆ ನೀಡುತ್ತಿವೆ. ಈ ಬಗೆಯ ಆಧುನೀಕರಣ ಪ್ರಕ್ರಿಯೆಯಿಂದಾಗಿ ಇಂದಿಗೂ ತುಳುನಾಡಿನಲ್ಲಿ ಭೂತರಾಧನೆ ತನ್ನ ಅರ್ಥವಂತಿಕೆಯನ್ನು ಪಡೆದಿದೆ. ಅದು ದೈವಾರಾಧನೆಯ ಒಂದು ಸಂಪ್ರದಾಯವಾಗಿ ಬೆಳೆದಿದೆ. ಇದಕ್ಕೆ ಇನ್ನೂ ಸ್ಪಷ್ಟವಾದ ನಿದರ್ಶನವೆಂದರೆ ಯಕ್ಷಗಾನ, ಬಯಲಾಟ ಮತ್ತು ಟೆಂಟ್ ಆಟ ಈ ಎರಡೂ ಮಾದರಿಯಲ್ಲಿ ಜನಾಕರ್ಷಣೆಯ ಕೇಂದ್ರವಾಗಿ ಬೆಳೆಯುತ್ತಿದೆ. ಇತ್ತೀಚೆಗೆ ಅದು ಕಾಲಮಿತಿಯ ಆಧುನೀಕರಣಕ್ಕೊಳಗಾಗಿದೆ. ವೇಷಭೂಷಣಗಳಲ್ಲಿ ಬದಲಾಗಿದೆ. ಹಿಮ್ಮೇಳದಲ್ಲಿಯೂ ಮೃದಂಗ, ಚಂಡೆಗಳಲ್ಲಿ ನವೀನ ಪ್ರಯೋಗವಾಗುತ್ತಿವೆ. ಭಾಗವಂತಿಕೆ ತನ್ನ ಸಾಂಪ್ರಾದಾಯಿಕ ಶೈಲಿಯಿಂದ ಹೊರಬಂದು ಸಿನೀಮಿಯ ಸಂಗೀತಾತ್ಮಕ ಪ್ರಯೋಗಗಳಿಗೆ ಒಳಗಾಗುತ್ತಿದೆ.

ಕುಣಿತದಲ್ಲೂ ಹೊಸ ಬಗೆಯ ಆವಿಷ್ಕಾರಗಳಾಗುತ್ತಿವೆ. ಹೆಚ್ಚು ಕಸರತ್ತುಗಳಿಗೆ ಅವಕಾಶ ಮಾಡಿ ಕೊಡುತ್ತದೆ. ಹೊಟ್ಟೆಗೆ ರಿಂಗ್‌ಧರಿಸಿ ಸರ್ಕಸ್ ರೂಪದ ಪ್ರಯತ್ನಗಳು ನಡೆಯುತ್ತಿವೆ. ಗಂಡು ಕಲೆಯೆಂದೇ ಪ್ರಸಿದ್ಧವಾದ ಆ ಕಲೆಯಲ್ಲಿ ಮಹಿಳೆಯರ ಪ್ರವೇಶವು ಆಗುತ್ತಿದೆ. "ಮೂಲತಃ ಅದು ಪುರುಷಪರವಾದುದು, ಸ್ತ್ರೀವಿರೋಧಿಯಾದುದು, ಸ್ತ್ರೀಯರ ಮೇಲೆ ಹೇರಲ್ಪಟ್ಟ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳು, ಪ್ರಾದೇಶಿಕ ಪರಿಸರದ ಹಿತಾಸಕ್ತಿಗಳು, ದೈಹಿಕ ರಚನೆಯು ಸೇರಿದಂತೆ ಒಟ್ಟಾರೆಯಾಗಿ ಮಹಿಳೆಯನ್ನು ಈ ವಿಷಯದಲ್ಲಿ ನಿಯಂತ್ರಿಸಿವೆ ಯಕ್ಷಗಾನದ ರಂಗರಚನೆಯು ತನ್ನ ಚೌಕಟ್ಟಿಗೆ ಹೆಣ್ಣು ಮಕ್ಕಳು ಬೇಕು ಎನ್ನುವ ಕನಿಷ್ಠ ಅನಿವಾರ್ಯತೆಯು ಸೃಷ್ಟಿಯಾಗದ ಹಾಗೆ ರೂಪಿಸಿದ್ದಾರೆ".[೮]

ಸಾಂಪ್ರಾದಾಯಿಕ ತಿಳುವಳಿಕೆಯ ಜಾಡನ್ನು ತುಳಿಂದು ಮುನ್ನುಗ್ಗುತ್ತಿರುವ ಮಹಿಳೆಯರು ಯಕ್ಷಗಾನದ ಆಧುನೀಕರಣ ಪ್ರಕ್ರಿಯೆಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಸಾಮಾಜಿಕ ವಲಯದಲ್ಲಿ ಯಕ್ಷಗಾನವು ಗಂಡುಕಲೆ ಎಂಬ ಪರಿಕಲ್ಪನೆಯನ್ನು ಬದಲಾಯಿಸುತ್ತಿದ್ದಾರೆ ಪ್ರತಿಯೊಂದು ಕಲೆಗಳ ವಿಷಯದಲ್ಲೂ ಬದಲಾವಣೆ ಆಗುತ್ತಿರುವುದು ಅಪೇಕ್ಷಣೀಯವಾಗಿದೆ. ಅದರಲ್ಲಿ ಕೆಲವು ಕಲೆಗಳು ಸ್ವೀಕರಿಸುತ್ತಿಲ್ಲ. ಕೆಲವು ಬದಲಾವಣೆಯ ಪ್ರಕಿಯೆಗೆ ಒಳಗಾಗುತ್ತಿವೆ. ಪೂಜಾಕುಣಿತ, ಡೊಳ್ಳುಕುಣಿತ ತೊಗಲುಗೊಂಬೆಯಾಟವು ಆಧುನೀಕರಣಕ್ಕೆ ತಕ್ಕಂತೆ ಸಾಮಾಜೀಕರಣಗೊಂಡಿತು. ಆರಾಧನಾತ್ಮಕ ಕಲೆಯಾದ ಡೊಳ್ಳು ತನ್ನ ಕುಣಿತದ ಗತಿಯಲ್ಲಿ ಲಯುವನ್ನು ತಂದುಕೊಂಡರೆ ಪೂಜಾಕುಣಿತವು ತನ್ನಲ್ಲಿ ಚಮತ್ಕಾರವನ್ನು ಅಳವಡಿಸಿಕೊಂಡಿತು, ಪೂಜೆಯನ್ನು ಹೊತ್ತು ಸೂಜಿಗೆದಾರ ಪೋಣಿಸುವುದು, ಬಾಯಲ್ಲಿ

ಲಿಂಬೆಹಣ್ಣು ಎತ್ತುವುದು. ಮಕ್ಕಳನ್ನು ಭುಜಗಳ ಮೇಲೆ ಸೊಂಟದ ಮೇಲೆ ಕೂರಿಸಿಕೊಂಡು ಕುಣಿಯುವುದು ಮುಂತಾದುವು ಇತ್ತಿಚೆಗೆ ಪೂಜೆಯನ್ನು ಹೊತ್ತು ಹೆಣ್ಣು ಮಕ್ಕಳು ಸಹ ಕುಣಿಯುತ್ತಿದ್ದಾರೆ. ಉತ್ತಮ ಪ್ರದರ್ಶನವನ್ನು ನೀಡಿ ಜನಮನ್ನಣೆಗಳಿಸಿದ್ದಾರೆ. ಇನ್ನೂ ತೊಗಲುಗೊಂಬೆಯಾಟವಂತೂ ಪ್ರಚಾರಕ್ಕಾಗಿ, ಅರಿವು ಮೂಡಿಸಲು ಸರ್ಕಾರದ ಕಾರ್ಯಕ್ರಮಗಳು ಜನರಿಗೆ ತಲುಪಿಸಲು ಏಡ್ಸ್ ಕುರಿತು ಮಾಹಿತಿ, ಸಾಕ್ಷರತಾ ಆಂದೋಲನ ಪರಿಸರ ಕಾಳಜಿ ಹೀಗೆ ಮುಂತಾದ ವಿಷಯಗಳನ್ನು ಜನರಿಗೆ ತಲುಪಿಸಲು ಸಣ್ಣ ಸಣ್ಣ ಕಥಾ ರೂಪಕವಾಗಿ ಮೈ ದಳೆಯುತ್ತವೆ. ರಾಜಕಾರಿಣಿಗಳ ವಿಡಂಬನ ಚಿತ್ರ, ಸಮಾಜದಲ್ಲಿರುವ ಓರೆಕೋರೆಗಳನ್ನು ತಿದ್ದಲು ಅನೇಕ ವಸ್ತು ವಿಷಯಗಳನ್ನಿಟ್ಟುಕೊಂಡು ಚಿಕ್ಕ ಚಿಕ್ಕ ಕಥೆ ಹೆಣೆಯುತ್ತಾರೆ ಇವು ಜನರಿಗೆ ಬೇಗನೆ ತಲುಪುತ್ತದೆ. ಉದಾಹಣೆಗೆ ಬಯಲು ಶೌಚಾಲಯ, ತೊಗಲುಗೊಂಬೆಯಾಟದ ಕಲಾವಿದರೆ ಈ ಆಟವನ್ನು ಬಹಳ ಕೌಶಲ್ಯದಿಂದ ಆಡಿಸುತ್ತಾರೆ ಇದನ್ನು ಹೊಸಬರು ಕಲಿತು ಆಡಿಸುವುದು ಕಷ್ಟವಾದ್ದರಿಂದ ತೊಗಲುಗೊಂಬೆಯಾಟದ ಮನೆತನದವರೆ ಆಡಿಸುತ್ತಾರೆ. ಆದರೆ ಕಥೆಗಳೆಲ್ಲವೂ ಈಗ ಇತ್ತೀಚಿನ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಸಿದ್ದಪಡಿಸುತ್ತಾರೆ. ಅದು ಜನರಿಗೆ ಇಷ್ಟವಾಗುತ್ತದೆ ಕೂಡ ಗಾರುಡಿಗೊಂಬೆಯು ಗೊಂಬೆಯ ರಚನೆ, ಸೇರ್ಪಡೆ, ವೇಷಭೂಷಣ ಇವುಗಳೆಲ್ಲವೂ ಕೂಡ ಇತ್ತೀಚಿನದಾಗಿದ್ದು ತನ್ನ ಟ್ರೆಂಡ್ ಬದಲಾಯಿಸಿಕೊಂಡಿದೆ. ನಾಟಕದಂತೆ ಗಾರುಡಿಗೊಂಬೆ ಚಿತ್ರಕಥೆಯನ್ನು ಸಿದ್ದಪಡಿಸಿಕೊಂಡು ಒಟ್ಟು ಕುಟುಂಬದ ಸಂಸಾರವನ್ನು ಅನಾವರಣಗೊಳಿಸುತ್ತಿದೆ. ಕಿನ್ನರಿಜೋಗಿ ಮೇಳದಲ್ಲೂ ಕೂಡ ಹಾಡುವ ಹಾಡಿನ ದಾಟಿ, ಕಥೆಯ ನಿರೂಪಣೆ ಕಥೆಯ ವಸ್ತು ಇವುಗಳಲ್ಲಿ ಹೊಸತನವನ್ನು ಕಾಯ್ದುಕೊಂಡಿದೆ. ಅಲ್ಲದೇ ಕಿನ್ನರಿ ಜೋಗಿಗಳನ್ನು ಸರ್ಕಾರದ ಯೋಜನೆಗಳ ಪ್ರಚಾರ ಕಾರ್ಯಕ್ಕೂ ಬಳಸಿಕೊಳ್ಳುತ್ತಾರೆ ಚೌಡಿಕೆ, ತೊಗಲುಗೊಂಬೆ ಇವೆಲ್ಲವೂ ಅರಿವಿನ ಕಾರ್ಯಕ್ರಮಕ್ಕಾಗಿ ಜನರಿಗೆ ತಲುಪಲು ಸಂಸ್ಕೃತಿಯ ವಾಹಕಗಳಾದ ಕಲೆಗಳನ್ನು ಬಳಸಿಕೊಳ್ಳುತ್ತಾರೆ.

ಜನಪದ ಮಾಹಾಕಾವ್ಯಗಳ ವಿಷಯಕ್ಕೆ ಬಂದರೆ ಅದು ಈಗ ಪ್ರದರ್ಶನ ಕಲೆಯಾಗಿ ಮಾರ್ಪಡುತ್ತಿವೆ. ಇಂತಹ ಕಾವ್ಯಗಳನ್ನು ಹಾಡಬೇಕಾದರೆ ನಿರ್ಧಿಷ್ಟ ಸಮಯ ಸಂದರ್ಭಗಳು ಇರುತ್ತಿದ್ದವು. "ದೈವದ ಸಂಕೇತವಾದ ಜನಪದ ವಾದ್ಯಗಳನ್ನು ಬಳಸಿ ಮೇಳಗಳೋಪಾದಿಯಲ್ಲಿ ಆ ಕಾವ್ಯಗಳನ್ನು ಹಾಡಲಾಗುತ್ತದೆ. ಆ ವಾದ್ಯಗಳನ್ನು ಉಳಿದ ಸಂದರ್ಭಗಳಲ್ಲಿ ದೇವರ ಗದ್ದುಗೆಯ ಮೇಲೆ ಇಟ್ಟು ಪೂಜಿಸಲಾಗುತ್ತದೆ. ದೇವರ ಲಾಂಛನಗಳನ್ನು ಧರಿಸಿ ವಿಶೇಷ ಮತಾಚರಣೆಯ ಸಂದರ್ಭದಲ್ಲಿ ಅಥವಾ ಪೂಜಾ ಸಂದರ್ಭದಲ್ಲಿ, ಹಬ್ಬಹರಿದಿನಗಳಲ್ಲಿ ಯಾತ್ರೆ, ಜಾತ್ರೆಗಳಲ್ಲಿ ಮಾತ್ರ ಹಾಡಬಹುದಾದ ಕಾವ್ಯಗಳಾಗಿರುತ್ರವೆ. ಕೊನೆಯ ಪಕ್ಷ ಒಂದು ರಾತ್ರಿಯಾದರೂ ಹಾಡುವಷ್ಟು ವಿಸ್ತಾರವಾಗಿಯೂ ಇರಬಹುದು".೩೯

ಆದರೆ ಇಂದು ಒಂದು ಒಂದೂವರೆ ಘಂಟೆಯ ಕಾಲಮಿತಿಯಲ್ಲಿ ಮಹಾಕಾವ್ಯದ ರೋಚಕ ಬಾಗಗಳನ್ನಷ್ಟೇ ಹಾಡಿ ಪ್ರದರ್ಶಿಸುವ ಹಂತಕ್ಕೆ ಒಂದು ನಿಂತಿದೆ. ಇದೆಲ್ಲವೂ ಕಾಲದ ಅಗತ್ಯವೂ ಹೌದು. ಹಾಗೆ ಮಾಡಿಕೊಳ್ಳದಿದ್ದರೆ ಉಳಿಸಿಕೊಳ್ಳುವುದು ಕಷ್ಟ.

೧. ಪ್ರದರ್ಶನ ಕಲೆಗಳ ತಾತ್ವಿಕ ಆಯೋಮಗಳು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತಿವೆ. ಪ್ರದರ್ಶನ ಕಲೆಗಳ ಜಾನಪದೀಯ ಚೌಕಟ್ಟು ಅದರ ಆರಾಧನಾ ಗುಣ ಮನರಂಜನಾತ್ಮಕ ಸಾಮಾಗ್ರಿಯಾಗಿ ಪಲ್ಲಟಗೊಳ್ಳುತ್ತಿರುವುದು.

೨. ಇವತ್ತು ಜನಪದ ಪ್ರದರ್ಶನಾತ್ಮಕ ಕಲೆಗಳು ವೃತ್ತಿ ಎನ್ನುವುದಕ್ಕಿಂತ ಪ್ರವೃತ್ತಿಯಾಗಿ ಜನಮನಸದಲ್ಲಿ ನೆಲೆಗೊಳ್ಳುತ್ತಿದೆ. ಕಲಾವಿದನ ಮನೋಭೂಮಿಕೆಯನ್ನು ನಿರ್ಮಾಣ ಮಾಡುತ್ತಿದೆ.

ಇಡೀ ಜಗತ್ತು ದೃಶ್ಯಗಳಿಂದ ತುಂಬಿದೆ. ಬದುಕಿನ ಅನೇಕ ವೌಲ್ಯಗಳು ದೃಶ್ಯರೂಪದಲ್ಲಿದೆ. ಶಬ್ದಕ್ಕೂ ಮೀರಿದ ಅನುಭವಗಳು ಇಲ್ಲಿ ಕಾಣುತ್ತವೆ. ದಿನನಿತ್ಯ ನಾವು ವಸ್ತುಗಳನ್ನು ನೋಡುತ್ತಿರುತ್ತೇವೆ. ನೋಡುವ ಎಲ್ಲಾ ವಸ್ತುಗಳಲ್ಲೂ ಸೌಂದರ್ಯವಿದೆ. ಅದನ್ನು ಗೊತ್ತಿದ್ದೋ ಗೊತ್ತಿಲ್ಲದೆಯೊ ಮೆಚ್ಚಿಕೊಳ್ಳುತ್ತೇವೆ. ಆದರೆ ದೃಶ್ಯ ಮಾಧ್ಯಮದಲ್ಲಿ ಜನಪದ ಕಲೆಗಳ ಅಳವಡಿಕೆಯಲ್ಲಿ ಹಾಗಾಗಬಾರದು ನಿಜವಾದ ದೃಶ್ಯವನ್ನು ನೋಡ ಬೇಕಾದ ದೃಷ್ಟಿಯಿಂದ ನೋಡಿ, ಅನುಭವದಿಂದ ಅದನ್ನು ಮೆಚ್ಚಬೇಕು. ಮತ್ತು ಮುಂದೆಯೂ ಇರಲೆಂದು ಹರಸಬೇಕು. ಜನಪದ ಕಲೆಯೊಂದನ್ನು ಚಿತ್ರೀಕರಿಸುವಾಗ 'ದೃಶ್ಯ ಬಾಷೆ' ಯಲ್ಲಿಯೇ ಚಿತ್ರೀಕರಿಸಬೇಕು. ಎಲ್ಲಾ ಕಲೆಗಳಿಗೂ ಒಂದೊಂದು ಭಾಷೆ ಇರುವಂತೆಯೇ ದೃಶ್ಯ ಕಲೆಗೂ ಕೂಡ ಭಾಷೆ ಇದೆ. ಅದೇ ವಿಶ್ಯುಯಲ್ ಲಾಂಗ್ವೇಜ್. ಈ ಭಾಷೆಯಲ್ಲಿ ದೃಶ್ಯಗಳ ಅರ್ಥಗಳು ಭಾವಗಳು, ಉದ್ದೇಶಗಳು ತಿಳಿಯುತ್ತದೆ. ದೃಶ್ಯಭಾಷೆ ಪ್ರತಿಯೊಬ್ಬರಿಗೂ ಗೊತ್ತಿದ್ದರೆ ಮಾತ್ರ ಜನಪದ ಕಲೆಯನ್ನು ನೋಡುವುದಕ್ಕೆ ಮತ್ತು ಅದರ ಜೊತೆ-ಜೊತೆ ಸಾಗಲು ಸಾಧ್ಯವಾಗುತ್ತದೆ. ಇದಕ್ಕೊಂದು ನಿದರ್ಶನ ಸಮಯ ಟಿ.ವಿ.ಚಾನಲ್‌ನಲ್ಲಿ ಪ್ರಸಾರ ವಾದ ನಮ್ಮಕಲೆ ನಮ್ಮ ಬದುಕು ಕಾರ್ಯಕ್ರಮದ ಯಶಸ್ಸಿನ ಕಥೆ ತತ್ವ ಪದಕಾರ ತಂಬೂರಿ ಜವರಯ್ಯ.

ತತ್ವಪದದ ಗಾಯಕ ದಂಪತಿಗಳು ತಂಬೂರಿ ಜವರಯ್ಯ

ಜನಪದ ಸಾಹಿತ್ಯ ಪರಂಪರೆಯಲ್ಲಿ ತತ್ವಪದಗಳಿಗೆ ಮಹತ್ವದ ಸ್ಥಾನವಿದೆ. ಜೀವನದ ಮೌಲ್ಯಗಳನ್ನು ತಿಳಿಸುವ ತತ್ವಪದಗಳು ಅಂತರಂದ ಕಲ್ಮಶ ತೊಳೆದು ಮೋಕ್ಷ ಸಾಧನೆಯ ಮಾರ್ಗ ತೋರಿಸುತ್ತದೆ. ಬದುಕಿನ ಅಸ್ಥಿರತೆಯನ್ನು ಪರಿಚಯಿಸಿ ಲೋಕದ ಜೀವರಾಶಿಗಳನ್ನು ದುಃಖ ಕಷ್ಟಗಳಿಂದ ಬಿಡುಗಡೆಗೊಳಿಸುವ ದಾರಿ ತೋರಿಸುವ ಹಾಡುಗಳೇ ತತ್ವಪದಗಳು

ಮನುಷ್ಯ ಜೀವನದಲ್ಲಿ ಮಾಡುವ ತಪ್ಪುಗಳನ್ನು, ಯೋಚಿಸುವ ರೀತಿಯನ್ನು, ಯಾವುದೋ ಒಂದು ಸನ್ನಿವೇಶಕ್ಕೆ ಹೋಲಿಸಿ ಹಾಡಿನ ಮೂಲಕ ವಿವರಿಸುವ ಈ ತತ್ವಪದಗಳನ್ನು ನೇರ ಅರ್ಥದಲ್ಲಿ ಕೇಳಿದರೆ ವಿಚಿತ್ರವೆನಿಸುತ್ತದೆ. ಆದರೆ ಇದರ ತಿರುಳು ಅರಿತು ಜೀವನಕ್ಕೆ ಹೋಲಿಸಿದಾಗ ಅದರ ಅರ್ಥ ಹೊರಹೊಮ್ಮುತ್ತದೆ. ಮನುಷ್ಯನ ದೇಹ ನಶ್ವರ, ಪ್ರಾಪಂಚಿಕ ಸುಖಗಳೆಲ್ಲ ಕ್ಷಣಿಕ. ಮುಕ್ತಿಯೇ ಜೀವನದ ಪರಮೋದ್ದೇಶ ಎಂದು ಸಾರುವ ತತ್ವಪದಗಳು ಮೋಕ್ಷಸಾಧನೆಗೆ ಸನ್ಮಾರ್ಗದಲ್ಲಿ ಹೇಗೆ ಸಾಗಬೇಕೆಂದು ಸೂಚಿಸುತ್ತವೆ. ತತ್ವಪದಗಳ ರಚನಾಕಾರರು ಯಾವುದನ್ನೂ ನೇರವಾಗಿ ಹೇಳುವುದಿಲ್ಲ. ಹೋಲಿಕೆಗಳ ಮೂಲಕ ಜಗತ್ತಿನ ಅಶಾಶ್ವತತೆಯನ್ನು ಪರಿಚಯಿಸಿ ಸರಿ–ತಪ್ಪುಗಳ ವಿವೇಚನೆಯನ್ನು ಮಾಡಿಸುತ್ತಾರೆ. ಈ ತತ್ವಪದಗಳನ್ನು ತನುವಿನಲ್ಲಿ ಅರಿತು ಅರಿವಿನಲ್ಲಿ ಬೆರೆತು ಭಾವಪೂರ್ಣವಾಗಿ ಹಾಡಿದಾಗ ಅಂತರಂಗದಲ್ಲಿ ಬೆಳಕು ಮೂಡುತ್ತದೆ.

ಸುಮಾರು ೧೭ ರಿಂದ ೧೯ನೇ ಶತಮಾನದವರೆಗೆ ಉತ್ತುಂಗ ಸ್ಥಿತಿಯಲ್ಲಿದ್ದ ಈ ತತ್ವಪದಗಳು ಜಾತಿ, ಮತ, ಅಸ್ಪೃಶ್ಯತೆ, ಧಾರ್ಮಿಕ ಮೌಢ್ಯಗಳ ವಿರುದ್ಧ ಜನರನ್ನು ಎಚ್ಚರಿಸಿವೆ. ಶಿಶುನಾಳ ಶರೀಫರು, ನಾಗಲಿಂಗಯತಿ, ಸರ್ಪಭೂಷಣ ಶಿವಯೋಗಿ, ಬಂಡೆಗವಿಸಿದ್ಧ, ಗೋವಿಂದ ಭಟ್ಟ ಮೊದಲಾದವರ ರಚನೆಗಳು, ಆಡುಭಾಷೆಗೆ ಹತ್ತಿರವಾಗಿ ಗೀತೆಯೊಂದಿಗೆ ಜನಸಾಮಾನ್ಯರಿಗೂ ಅರ್ಥವಾಗುವಂತಿದೆ. ಮೌಖಿಕ ಪರಂಪರೆಯಿಂದ ಹರಿದು ಬಂದ ಈ ತತ್ವಪದಗಳಿಗೆ ಜಾತಿ–ಭಾಷೆ, ಮತ–ಧರ್ಮಗಳ ಬೇಧವಿಲ್ಲ. ಮನುಷ್ಯ ಮೋಸ ವಂಚನೆಗಳಂತಹ ಕೆಟ್ಟ ಯೋಚನೆಯನ್ನು ಬಿಟ್ಟು ಭಗವಂತನ ಸ್ಮರಣೆಯ ಮೂಲಕ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಜೀವನ ಸಾರ್ಥಕಗೊಳಿಸಿಕೊಳ್ಳಬೇಕು ಎನ್ನುವುದೇ ಈ ತತ್ವಪದಗಳ ಉದ್ದೇಶ.

ಹಾದಿ ತತತ್ವಪದಗಳ ಮೂಲಕ ಮಿಂಚಿನ ಸಂಚಾರ ಉಂಟು ಮಾಡಿದ ಗಾಯಕ ದಂಪತಿಗಳು ತಂಬೂರಿ ಜವರಯ್ಯ ಮತ್ತು ಅವರ ಪತ್ನಿ ಬೋರಮ್ಮ. ಎಪ್ಪತ್ತರ ಹರೆಯ ದಾಟಿರುವ ಇಬ್ಬರ ಕಂಠದಲ್ಲೂ ಮಾಧುರ್ಯದ ಸವಿ ಇನ್ನೂ ಆರಿಲ್ಲ. 'ಸತಿಪತಿಯರೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ಮಾತಿನಂತೆ ಈ ದಂಪತಿಗಳು ೪೦ ವರ್ಷಗಳಿಂದ ತತ್ವಪದಗಳ ಗಾಯನದ ಮೂಲಕ ಈಶ ಸೇವೆ ಮಾಡುತ್ತಿದ್ದಾರೆ. ಜನರಲ್ಲಿ ಜ್ಞಾನದ ಬೀಜವನ್ನು ಬಿತ್ತಿ ಮಿಂಚಿನ ಸಂಚಾರವುಂಟು ಮಾಡುತ್ತಿದ್ದಾರೆ. ಇವರಿಬ್ಬರಿಗೂ ವಯಸ್ಸಿನ ಗಡಿ ೭೦ ದಾಟಿದ್ದರೂ, ಇವರ ಅದ್ಭುತ ಕಂಠದ ಮೇಲೆ ಅದು ಯಾವುದೇ ಪ್ರಭಾವವನ್ನು ಬೀರಿಲ್ಲ. ಮಂಡ್ಯದಿಂದ ಹತ್ತು ಕಿಲೋಮೀಟರ್ ದೂರ ಕ್ರಮಿಸಿದರೆ ಬಸರಾಳು ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಆಧುನಿಕತೆ ಇನ್ನೂ ತನ್ನ ಪ್ರಭಾವವನ್ನು ಅಷ್ಟಾಗಿ ಬೀರಿರದ ಈ ಹಳ್ಳಿಯ ಪುಟ್ಟ ಜೋಪಡಿಯೊಂದರಲ್ಲಿ

ತತ್ವಪದಗಳ ಕಣಜವೇ ಅಡಗಿದೆ. ಜವರಯ್ಯ ಮತ್ತು ಬೋರಮ್ಮ ದಂಪತಿಗಳ ನೆನಪಿನಾಳದಲ್ಲಿ ಮೊಗೆದಷ್ಟು ಮುಗಿಯದ ಹಾಡುಗಳಿವೆ. ಜೊತೆಗೆ ಎದೆಯಲ್ಲಿ ನೂರೆಂಟು ನೋವಿನ ಕಥೆಗಳಿವೆ.

ಸುಮಾರು ೪೦ ವರ್ಷಗಳ ಹಿಂದಿನ ಮಾತು. ಮನೆಯಲ್ಲಿ ಕಡುಬಡತನ ಹುಟ್ಟಿದ ಕಂದಮ್ಮಗಳು ಭಗವಂತನ ಪಾದ ಸೇರಿದಾಗ ಬದುಕಿನ ಜಂಜಡಗಳಿಂದ ಬೇಸತ್ತ ಜವರಯ್ಯ ದೀಕ್ಷೆ ತೆಗೆದುಕೊಳ್ಳಲು ನಿರ್ಧರಿಸಿದರು. ಇವರ ನಿರ್ಧಾರಕ್ಕೆ ನೀರೆರದವರು ಹಾಸನ ಜಿಲ್ಲೆಯ ಕೋಡಿಗಲ್ಲು ಮಠದ ರುದ್ರಮುನಿ ಸ್ವಾಮಿಗಳು ಅವರ ಮಾರ್ಗದರ್ಶನದಲ್ಲಿ ದೀಕ್ಷೆ ಸ್ವೀಕರಿಸಿದವರು ಜವರಯ್ಯ. "ಸಂಸಾರವೆಂಬ ಬಂಡಿಯಲ್ಲಿ ಗಂಡಹೆಂಡಿರು ಜೋಡೆತ್ತುಗಳಂತೆ" ಎನ್ನುವ ಮಾತಿಗೆ ಪೂರಕವಾಗಿ ಬದುಕುತ್ತಿದ್ದ ಬೋರಮ್ಮ ತನ್ನ ಗಂಡ ದೀಕ್ಷೆ ಸ್ವೀಕರಿಸುವಾಗ, ಅವರ ನೆರಳಾಗಿ ಬದುಕುವ ಆಸೆಯಿಂದ ತಾವು ದೀಕ್ಷೆ ಸ್ವೀಕರಿಸಿದರು. ಪತಿಯ ಹಾಡಿಗೆ ತಾವೂ ದನಿಗೂಡಿಸಿದರು. ಭಗವಂತನ ನಾಮಸ್ಮರಣೆಯಿಂದಲೇ ಬದುಕಲು ನಿರ್ಧರಿಸಿದ. ಇವರಿಬ್ಬರು ಜೀವನದ ಹಾದಿಯಲ್ಲಿ ಬರೀ ಕಲ್ಲುಮುಳ್ಳುಗಳನ್ನು ಮೆಟ್ಟಿ ಸಾಗಿದವರು. ದೀಕ್ಷೆ ಸ್ವೀಕರಿಸಿದ ಈ ಪತಿ-ಪತ್ನಿಯರನ್ನು ಸಮಾಜ ತಿರಸ್ಕಾರದಿಂದ ನೋಡಿತು. ದುಡಿಯಲು ಮನಸ್ಸಿಲ್ಲದೆ ಭಿಕ್ಷಾಟನೆಯ ಹಾದಿ ಹಿಡಿದಿದ್ದಾರೆ ಎಂದು ಅವಮಾನ ಮಾಡಿತು.

ಗುರುದೀಕ್ಷೆ ಪಡೆದ ದಂಪತಿಗಳು ತತ್ವಪದಗಳನ್ನು ಹಾಡುತ್ತಾ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಪ್ರಯತ್ನ ಮಾಡುತ್ತಾ ಮನೆಮನೆಗೆ ಹೊರಟರು. ತತ್ವಿಸಿದ್ಧಾಂತ ಬೋಧಿಸುತ್ತಾ, ಮನೆಯವರು ನೀಡಿದ ವಸ್ತುಗಳನ್ನು ಗುರುವಿನ ಕರುಣೆಯೆಂದು ಸ್ವೀಕರಿಸಿದರು. ಕೆಲವರು ಇವರಿಗೆ ಗೌರವ ನೀಡಿದರೆ, ಇನ್ನೂ ಕೆಲವರು ಇವರು ಕೆಲಸಗಳ್ಳರು ದುಡಿಯಲಾರದೆ ಭಿಕ್ಷೆ ಬೇಡುತ್ತಿದ್ದಾರೆಂದು ಹೀಯಾಳಿಸಿದರು. ಜರಿದವರ ಬಗ್ಗೆ ಬೇಸರ ಪಡದೆ ಮುನ್ನಡೆದರು ಈ ದಂಪತಿಗಳ ಅಂದಿನಿಂದ ಇಂದಿನವರೆಗೂ ಇವರಿಗೆ ಭಿಕ್ಷೆಯೇ ಬದುಕಿಗೆ ಆಧಾರ. ಭಿಕ್ಷಾಟನೆಗೆ ಹೊರಡುವ ಮೊದಲು ಇವರು ಮನೆಯಲ್ಲಿ ವಿಭೂತಿ ಧರಿಸಿ ಪೂಜೆ ಪ್ರಾರ್ಥನೆಗಳನ್ನು ಸಲ್ಲಿಸಿ ಅನ್ನ ನೀಡುವ ಭಗವಂತನನ್ನು ಧ್ಯಾನಿಸುತ್ತಾ ಮನೆಯಿಂದ ಹೊರಡುತ್ತಾರೆ. ಮನೆ ಬಾಗಿಲಿಗೆ ಹೋಗಿ ನೀತಿಬೋಧೆಗಳನ್ನು ಹಾಡಿನ ಮೂಲಕ ಬೋಧಿಸಿ ಅವರು ನೀಡುವ ಅಲ್ಪಸ್ವಲ್ಪ ದವಸಧಾನ್ಯಗಳನ್ನು ಸಂತೋಷದಿಂದಲೇ ಸ್ವೀಕರಿಸುತ್ತಾರೆ. ಇವರಿಬ್ಬರ ನೆನಪಿನ ಶಕ್ತಿ ಎಷ್ಟು ಅಗಾಧವೆಂದರೆ, ದಿನಗಟ್ಟಲೆ ಕುಳಿತು ಹಾಡಿದರೂ ಇವರ ಹಾಡುಗಳು ಮುಗಿಯುವುದಿಲ್ಲ. ಸಂತ ಶಿಶುನಾಳ ಶರೀಫರ ಹಾಡುಗಳನ್ನು ಇವರ ಸಿರಿಕಂಠದಲ್ಲಿ ಕೇಳುವುದೇ ಚಂದ. ತಮ್ಮ ಪದಗಳ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದುವ ಇವರ ಬದುಕು ಸಮಾಜಕ್ಕೆ ಒಂದು

ಮಾದರಿ ಎಷ್ಟೇ ಕಷ್ಟಗಳು ಬಂದರೂ ಇವರು ಒಬ್ಬರಿಗೊಬ್ಬರು ಜೊತೆಯಾಗಿ ಬಾಳುತ್ತಿದ್ದಾರೆ. ಸಾಮರಸ್ಯದಿಂದ ಕೂಡಿದ ಆದರ್ಶ ದಾಂಪತ್ಯ ಇವರದು.

ಬೆಳಗಿನಿಂದ ಸಂಜೆಯವರೆಗೂ ಭಗವಂತನನ್ನು ಸ್ಮರಿಸುತ್ತಾ ಸಾಗುವ ಇವರಿಗೆ ದಾಸರ ಪದಗಳು, ಜಾನಪದಗೀತೆಗಳು ಕೂಡಾ ಚಿರಪರಿಚಿತ. ಇಂತಹ ಅದ್ಭುತ ಕಂಠಸಿರಿ ಹೊಂದಿರುವ ಇವರಿಗೆ ಅನೇಕ ಪ್ರಶಸ್ತಿ ಗೌರವಗಳು ಸಂದಿವೆ. ವಿದ್ಯಾಬ್ಯಾಸದ ಕೊರತೆ ಇದ್ದರೂ ತತ್ವಪದಗಳನ್ನು ನಾಡಿನಾದ್ಯಂತ ಪರಿಚಯಿಸಿದ ಕೀತಿ ಇವರಿಗೆ ಸಲ್ಲುತ್ತದೆ. ಜಾನಪದ ಜಾತ್ರೆಯಂತಹ ಕಾರ್ಯಕ್ರಮಗಳಲ್ಲಿ ಇವರು ಹಾಡಲು ಕುಳಿತರೆ ತಲೆದೂಗದವರೇ ಇಲ್ಲ. ಮತ್ತೆ ಮತ್ತೆ ಹಾಡಿಸಿ ಪ್ರೇಕ್ಷಕರು ಸಂತೋಷ ಪಡುತ್ತಾರೆ. ಇವರು ಹಿಮ್ಮೇಳಕ್ಕೆ ಬಳಸುವುದು ಸರಳವಾದ ವಾದ್ಯ ಪರಿಕರಗಳನ್ನು ಏಕತಾರಿ, ಚಿಟಿಕೆ, ದಮ್ಮಡಿ, ಸೋರೆಕಾಯಿಯಿಂದ ತಯಾರಿಸಲ್ಪಟ್ಟ ಏಕತಾರಿಯ ನಾದ ಮನಸ್ಸಿಗೆ ಮುದನೀಡುತ್ತದೆ. ಅಗಾಧ ಸಾಹಿತ್ಯ ನಿಧಿಯನ್ನು ಒಡಲಾಳದಲ್ಲಿ ತುಂಬಿಸಿಕೊಂಡಿರುವ ದಂಪತಿಗಳು ಬದುಕುತ್ತಿರುವ ಸ್ಥಿತಿ ಮಾತ್ರ ಕರುಣಾಜನಕ. ಈಗಲೋ ಆಗಲೋ ಮುರಿದು ಬೀಳುತ್ತಿರುವ ಜೋಪಡಿಯಲ್ಲಿದ್ದಾರೆ. ಹಾಡುಗಳಿಗೆ ಬಡತನವಿಲ್ಲದಿದ್ದರೂ, ಬದುಕಿನಲ್ಲಿ ಮಾತ್ರ ಬರೀ ಬಡತನವೇ ತುಂಬಿ ತುಳುಕಾಡುತ್ತಿದೆ.

ಇಬ್ಬರಿಗೂ ವಯಸ್ಸು ೮೦ ಮೀರಿ ಹೋಗಿದೆ. ಹಿಂದಿನಂತೆ ಓಡಾಡಲು ಖಾಯಿಲೆಗಳು ಬಿಡುತ್ತಿಲ್ಲ. ತಮ್ಮ ಮುಂದಿನ ಬದುಕು ಹೇಗೆ ಸಾಗುವುದೋ ಎನ್ನುವ ಚಿಂತೆ. ಇಂದಿನ ದಿನಗಳಲ್ಲಿ ಜನರಿಗೆ ತಮ್ಮವರ ಹೊಟ್ಟೆ ಹೊರೆದುಕೊಳ್ಳುವುದೇ ಕಷ್ಟವಾಗುತ್ತಿರುವಾಗ ನಮ್ಮಂತವರಿಗೆ ಭಿಕ್ಷೆ ಹಾಕುವವರೇ ಇಲ್ಲ. ಬದುಕಲು ಮಾರ್ಗವಿಲ್ಲ. ಬರುವ ಅಲ್ಪ ಮಾಸಾಶನ ಬಿಟ್ಟರೆ ಪರ್ಯಾಯ ಆಧಾರವಿಲ್ಲ ನಮ್ಮಂತಹ ಕಲಾವಿದರಿಗೆ ಸಮಾಜ ಸರ್ಕಾರ ಸಹಾಯ ಮಾಡಬೇಕು. ತತ್ವಪದಗಳ ಜೊತೆಗೆ ನಮ್ಮಂತಹವರ ಬದುಕನ್ನೂ ಉಳಿಸಿಕೊಡಬೇಕು ಎನ್ನುವ ಹಂಬಲ ನೋವು ಇವರದು. ಇಂದು ಜನರನ್ನು ರಂಜಿಸಲು ಹತ್ತಾರು ಮಾಧ್ಯಮಗಳಿವೆ. ಆದರೆ ಆಧುನಿಕ ಸಮಾಜಕ್ಕೆ ಈ ನೀತಿ ಬೋಧೆಗಳನ್ನು ಆಲಿಸಲು ಸಮಯ–ತಾಳ್ಮೆ ಎರಡೂ ಇಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಕೂಡ ತತ್ವಪದಗಳ ಶ್ರೇಷ್ಠ ಕೊಂಡಿಯನ್ನು ಕಳಚುವಲ್ಲಿ ತನ್ನ ಕೈ ಜೋಡಿಸಿದೆ. ಸಮಾಜದ ಓರೆಕೋರೆಗಳನ್ನು ತಿದ್ದಿ ಸರಿದಾರಿಯಲ್ಲಿ ನಡೆಸಲು ನೀತಿಯ ಚೌಕಟ್ಟಿನಲ್ಲಿ ಬದುಕಲು ಮಾರ್ಗದರ್ಶನ ನೀಡುವ ತತ್ವಪದಗಳು ಉಳಿದಾಗ, ಜನರನ್ನು ತಲುಪಿದಾಗ ಸ್ವಸ್ಥ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

ಜಾನಪದ ನಿಧಿಗಳೆನಿಸಿಕೊಂಡ ಈ ತತ್ತ್ವಪದಗಳನ್ನು ಉಸಿರಾಗಿ ಕಾಯ್ದುಕೊಂಡು ಬಂದಿರುವ ಜವರಯ್ಯ ಮತ್ತು ಬೋರಮ್ಮ ಇವರ ಬಡತನದ ಬದುಕಿಗೊಂದು ಮುಕ್ತಿ

ಸಿಗಬೇಕಾಗಿದೆ. ಬೇರೆಯವರ ಬದುಕು ಹಸನಾಗಿರಲು ಪ್ರಯತ್ನಿಸುವ ಇವರ ಬಾಳಿನಲ್ಲಿ ಕೂಡ ನೆಮ್ಮದಿಯ ನಗು ಅರಳಬೇಕಾಗಿದೆ. "ಜವರಯ್ಯ ದಂಪತಿಗಳಿಗೆ ನೆರವಾಗಲು, ಅವರ ಬದುಕಿನಲ್ಲಿ ಆಶಾಕಿರಣ ಮೂಡಿಸಲು ಜನತೆ ಸಹಾಯ ಹಸ್ತ ಚಾಚಬೇಕು. ಜೊತೆಗೆ ಕರ್ನಾಟಕದ ಆಗಿನ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಕನ್ನಡ ಮತ್ತು ಸಂಸ್ಕೃತಿಕ ಇಲಖೆಯ ಕಾರ್ಯದರ್ಶಿಗಳಾದ ಶ್ರೀಯುತ ಜಯರಾಮ ರಾಜೇ ಅರಸ್, ಮಂಡ್ಯ ಜಿಲ್ಲಾಧಿಕರಿಗಳಾದ ಶ್ರೀಯುತ ಪಿ.ಸಿ.ಜಾಫರ್, ಈ ವೃದ್ಧ ದಂಪತಿಗಳಿಗೆ ಸರ್ಕಾರದಿಂದ ಆರ್ಥಿಕ ನೆರವು ನೀಡಲು ಸಹಕರಿಸಬೇಕು ಎನ್ನುವುದು ಸಮಯ ಟಿ.ವಿಯ. ಆಶಯ. ಹೀಗೆ "ನಮ್ಮ ಕಲೆ ಮತ್ತು ಬದುಕು" ಕಾರ್ಯಕ್ರಮದಲ್ಲಿ ಕಲಾವಿದರ ಕಲೆಯ ಪರಿಚಯದೊಂದಿಗೆ ಮುಕ್ತಾಯದಲ್ಲಿ ಸರ್ಕಾರಕ್ಕೆ ಮನವಿ ಮಾಡುತ್ತಿದ್ದರು. ಈ ರೀತಿಯ ಮನವಿಯನ್ನು ಕಂಡು ಅನೇಕ ಸಂಘ-ಸಂಸ್ಥೆಗಳು, ವ್ಯಕ್ತಿಗಳು ತಾವೇ ಖುದ್ದಾಗಿ ತಂಬೂರಿ ಜವರಯ್ಯ ದಂಪತಿಗಳನ್ನು ಕಂಡು ಮಂಡ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಸಮ್ಮುಖದಲ್ಲಿ ಅವರಿಗೆ ಸಹಾಯ ಹಸ್ತವನ್ನು ನೀಡಿ ಇಂದು ಕೂಡ ವೃದ್ಧಾಪ್ಯದಲ್ಲಿ ಆರಾಮವಾಗಿರುವ ವ್ಯವಸ್ಥೆ ಮಾಡಿದ್ದಾರೆ. ಹೀಗೆ ಟಿ.ವಿ.ಯಲ್ಲಿ ಕಾರ್ಯಕ್ರಮಗಳು ಬಂದರೆ ಪ್ರಚಾರ ಸಿಕ್ಕಿ ಕಲಾವಿದರಿಗೆ ಅಲ್ಪಸ್ವಲ್ಪವಾದರೂ ಒಳ್ಳೆಯದಾಗುತ್ತದೆ. ಈಗ ಹೇಳಿರುವುದು ಒಬ್ಬ ಕಲಾವಿದನ ಕುರಿತು ಮಾತ್ರ. ಹೀಗೆ ೭೫ ಕಂತುಗಳನ್ನು ಮುಗಿಸಿರುವ "ನಮ್ಮ ಕಲೆ ನಮ್ಮ ಬದುಕು" ಕಾರ್ಯಕ್ರಮವು ಸುಮಾರು ೬೦ ರಿಂದ ೬೫ ಜನ ಕಲಾವಿದರಿಗೆ ಸಹಾಯ ಹಸ್ತವನ್ನು ನೀಡಿದೆ. ಕಲೆಯೊಂದು ಪ್ರಸಾರವಾಗಿ ಸಾಮಾಜಿಕರಣಗೊಳ್ಳುವುದು ಹೀಗೆ.

ಸಾಧಾರಣವಾಗಿ ಯಾವುದೇ ಜನಪದ ಕಲೆಯೊಂದನ್ನು ಚಿತ್ರೀಕರಿಸುವಾಗ ಕಲೆಯ ನೆಲೆ, ಹುಟ್ಟು, ಬೆಳವಣಿಗೆ ಪರಿಸರಕ್ಕನುಗುಣವಾಗಿಯೇ ಚಿತ್ರೀಕರಿಸಬೇಕಾಗುತ್ತದೆ. ಆಯಾ ಭೌಗೋಳಿಕ ಹಿನ್ನಲೆಯಲ್ಲಿ ಜನಪದ ಕಲೆಗಳು ಜನರಿಗೆ ತಮ್ಮದೆನ್ನುವ ಪ್ರೀತಿಯನ್ನು ಹುಟ್ಟಿಸುತ್ತದೆ. ದೂರದರ್ಶನದಲ್ಲಿ ಕೆಲವು ಕಲೆಗಳನ್ನು ಸ್ಟುಡಿಯೋಗಳಲ್ಲಿ ಚಿತ್ರೀಕರಿಸಿಕೊಳ್ಳುತ್ತಾರೆ. ಅಲ್ಲಿ ಕಲಾವಿದರಿಗೆ ಇತಿಮಿತಿಗಳಿವೆ. ಸ್ಟುಡಿಯೋದಲ್ಲಿ ಹಳ್ಳಿ ಪರಿಸರದ ಸೆಟ್ ಹಾಕಿ ಅದರ ನಡುವೆ ಕಲಾವಿದರನನು ಹಾಡಲು ಕುಣಿಯಲು ಅನುವು ಮಾಡಿಕೊಡುತ್ತಾರೆ. ಆ ಕಲೆಯು ಭೌಗೋಳಿಕವಾಗಿಯೇ ಆಗಲಿ ಪರಿಸರಕ್ಕೆ ಆಗಲಿ ಹೊಂದುತ್ತದೋ ಇಲ್ಲವೋ ಹಾಕಿ ಸಿದ್ಧಪಡಿಸಿರುವ ಸೆಟ್‌ನಲ್ಲಿ ಪ್ರದರ್ಶನ ಮಾಡುವ ಅನಿವಾರ್ಯತೆ ಕಲಾವಿದರಿಗೆ ಇರುತ್ತೆ. ಕಾರ್ಯಕ್ರಮ ಪ್ರಸಾರವಾದಾಗ ಪ್ರೇಕ್ಷಕರಿಗೆ ಕಲೆಯ ಬಗ್ಗೆ ಎರಡೇ ಮಾಹಿತಿ ಸಿಗಲು ಸಾಧ್ಯ. ಅದೆಂದರೆ ಯಾವ ಕಲೆ, ಕಲಾವಿದರ್ಯಾರು ಎಂಬುದು ಮಾತ್ರ. ಇದೇ ಕಲೆಯನ್ನು ಪ್ರಕೃತಿಯಲ್ಲಿ ಕಲಾವಿದರ ನಡುವೆ ಅವರ ಪರಿಸರದಲ್ಲೇ ಮಾಡಿದಾಗ ಆ ಕಲೆಯ ಬೆಲೆ ಇನ್ನಷ್ಟು ಹೆಚ್ಚುತ್ತದೆ. ಪ್ರದೇಶಕನ್ನುಗುಣವಾಗಿ ಭಿನ್ನವಾಗಿರುವ

ಕಲೆಗಳು ಪ್ರಾದೇಶಿಕತೆಯನ್ನು ಬಿಂಬಿಸುತ್ತವೆ. ಪೂಜಾಕುಣಿತವನ್ನೇ ಚಿತ್ರೀಕರಿಸುವಾಗ ಪೂಜಾ ಕುಣಿತದ ಪರಿಚಯ, ಕಲಾವಿದರ ಪರಿಚಯ, ಪೂಜೆಯ ತಯಾರಿ, ಹಿಮ್ಮೇಳ ಮುಮ್ಮೇಳದಲ್ಲಿ ಬಳಸುವ ತಮಟೆ, ವಾದ್ಯ, ಕಾಲಿಗೆ ಗೆಜ್ಜೆ, ವೇಷಭೂಷಣ, ಕುಣಿಯುವ ಗತ್ತು, ಕುಣಿಯುವ ವಿಧಗಳು ಇವೆಲ್ಲವನ್ನೂ ದೃಶ್ಯ ಮಾಧ್ಯಮದಲ್ಲಿ ಅಳವಡಿಸುವಾಗ ಕ್ಯಾಮರಕ್ಕೆ ಬೇಕೆನಿಸುವಲ್ಲಿ ಕ್ಲೋಸಪ್ (ಹತ್ತಿರದಿಂದ) ವೈಡ್ ಶಾಟ್ಸ್ (ದೂರದಿಂದ) ಟಾಪ್ ಆಂಗಲ್, ಟಿಲ್ಟ್‌ಅಪ್, ಮುಂತಾದ ಶಾಟ್ಸ್‌ಗಳನ್ನು ತೆಗೆದುಕೊಳ್ಳಲಾಗುತ್ತದೆ. ಅಲ್ಲದೇ ಕಲೆಯೊಂದು ಸಮಾಜಮುಖಿಯಾಗಿ ಹೊರಹೊಮ್ಮುವಾಗ ಆ ಕಲೆಯ ಆರಾಧನಾತ್ಮಕವಾಗಿಯೇ ಬಂದಿದರೂ, ಬರುಬರುತ್ತಾ ಸಭೆ, ಸಮಾರಂಭಗಳಲ್ಲಿ ಪೂಜಾಕುಣಿತವನು ಕಾಣಲು ಸಾಧ್ಯವಾಯಿತು.

ಇಂದು ರಾಜಕಾರಣಿಗಳ ಹುಟ್ಟುಹಬ್ಬದಂದು ಪೂಜಾಕುಣಿತವಿರಲೇ ಬೇಕು. ನೋಡಲು ತುಂಬಾ ಆಕರ್ಷಕವಾಗಿರುವ ಪೂಜಾಕುಣಿತ ಆರಾಧನಾತ್ಮಕ ಕಲೆಯಾಗಿದ್ದೂ ಅದು ಇಂದು ತನ್ನತನವನ್ನು ಬಿಟ್ಟು ಅನಿವಾರ್ಯ ಕಾರಣಗಳಿಂದಾಗಿ ವೇದಿಕೆಯನ್ನಲಂಕರಿಸಿವೆ. ದೃಶ್ಯಮಾಧ್ಯಮದಲ್ಲಿ ಕ್ಯಾಮರದಲ್ಲಿ ತುಂಬಾ ಆಕರ್ಷಣೀಯವಾಗಿ ಕಾಣುತ್ತದೆ. ಹಾಗಾಗಿಯೇ ಚಲನಚಿತ್ರಗಳಲ್ಲಿ ಕಥೆಗೆ ಪೂರಕವಾಗಿ ಹಬ್ಬ ಜಾತ್ರೆ ಉತ್ಸವಗಳ ಸಂದರ್ಭದಲ್ಲಿ ಪೂಜಾ ಕುಣಿತ, ಇದ್ದೆ ಇರುತ್ತದೆ. ಕಾರಣ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಮೆರೆ ದೇವರುಗಳ ಪೂಜೆ ಪ್ರಕೃತಿಯಲ್ಲಿ ಅತ್ಯಾಕರ್ಷಕವಾಗಿ ಮೂಡಿ ಬರುತ್ತದೆ. ರಜತಪರದೆಯ ಮೇಲೆ ಶ್ರೀಮಂತಿಕೆ ಕಲೆಯ ವೈಭವವನ್ನು ಮೂಡಿಸುತ್ತದೆ. ಇನ್ನೂ ಕೆಲವು ಕಲೆಗಳು ಶುದ್ಧ ಮನರಂಜನೆಯನ್ನು ಕಟ್ಟಿಕೊಡುತ್ತದೆ. ಅದರಲ್ಲಿ ಗಾರುಡಿಗೊಂಬೆಯು ಇಂದು ಆಧುನಿಕತೆಯ ಅಬ್ಬರದಲ್ಲಿ ಕೆಲಸ ಒತ್ತಡದಲ್ಲಿ ಜನರು ಕುಟುಂಬದ ಸಂಬಂಧ ಇವುಗಳಿಂದ ವಿಮುಖರಾಗುತ್ತಿದ್ದಾರೆ ಅದರ ಕಡೆ ಗೊಂಬೆಗಳು ಜನರನ್ನು ಗಮನ ಸೆಳೆಯುತ್ತದೆ.

ಅಳೆತ್ತರದ ಗೊಂಬೆಗಳನ್ನು ರಂಗುರಂಗಾಗಿ ಸಿದ್ದಪಡಿಸಿ, ದೊಡ್ಡ ಗೊಂಬೆಗಳಿಗೆ ರಾಜರಾಣಿಯರಂತೆ ಮುಖವಾಡಗಳಿದ್ದು ಪೇಟ, ಅಂಗಿ, ಪಂಚೆ ಆಥವಾ ಜಾಲರಿ ಬಟ್ಟೆಯಿಂದ ಅಲಂಕರಿಸಿರುತ್ತಾರೆ. ತಮಾಷೆ ಗೊಂಬೆಗಳಿಗೆ ವೇಷಕ್ಕೆ ತಕ್ಕಂತೆ ಮುಖವಾಡ ಉದ್ದನೆಯ ಸೀರೆ, ಲಂಗ, ಪಂಚೆ ಮೊದಲಾದ ಬಟ್ಟೆಗಳನ್ನು ಹಾಕಲಾಗುತ್ತದೆ. ಆಧುನಿಕತೆಗೆ ಅನುಗುಣವಾಗಿ ಈ ಕಲಾವಿದರು ಇಂದಿನ ದಿನಗಳಲ್ಲಿ ಗೊಂಬೆಯ ಉಡುಗೆತೊಡುಗೆಗಳನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿದ್ದಾರೆ. ಇಂದು ದೃಶ್ಯಮಾಧ್ಯಮದಲ್ಲಿ ಈ ಗೊಂಬೆಗಳ ಪಾತ್ರ ಮಹತ್ವದ್ದಾಗಿದೆ ಯಾವುದೇ ಸರಕಾರಿ ಯೋಜನೆಗಳಾದ ಸಾಕ್ಷರತಾ ಏಡ್ಸ್ ಜಾಗೃತಿ, ಆಯೋಡಿನ್ ಉಪ್ಪು, ಪರಿಸರದ ಕುರಿತು ನಾಡಿನ ಗಣ್ಯರ, ರಾಜರುಗಳ ಕಥೆ ಎಲ್ಲಕ್ಕಿಂತ ಹೆಚ್ಚಾಗಿ ಗಾರುಡಿಗೊಂಬೆಗಳು ಹಾಸ್ಯದ ಜೊತೆಗೆ ಕೌಟುಂಬಿಕ ಬಾಂಧವ್ಯ ಹೇಗಿರಬೇಕು

ಎನ್ನುವುದನ್ನು ಪರಿಚಯಿಸಿ ಕೊಡುತ್ತದೆ. ಗಂಡ-ಹೆಂಡತಿ ಮಕ್ಕಳ ನಡುವಿನ ಸಂಬಂಧದ ಎಳೆಯನ್ನು ಪ್ರೇಕಕರೆದುರು ತೆರೆದಿಡುತ್ತವೆ. ಇಂದು ಅವಿಭಕ್ತಕುಟುಂಬಗಳು ನಾಶವಾಗಿ ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಗಂಡ-ಹೆಂಡತಿ ಇಬ್ಬರು ಮನೆಯಿಂದ ಮಗುವಿನಿಂದ ದೂರಾಗಿ ಕೆಲಸಗಳಿಗೆ ಹೋದಾಗ ಮಗುವನ್ನು ನೋಡಿಕೊಳ್ಳುವ ಕಾರ್ಯ ಮನೆಯಲ್ಲಿರುವ ಅಜ್ಜಿಯ ಮೇಲಿರುತ್ತದೆ. ಈ ಚಿತ್ರಕಥೆಯನ್ನು ಸಿದ್ದಪಡಿಸಿ ಗೊಂಬೆಗಳು ಮಾತಿಲ್ಲದೆ ಬರೀ ಹಾವಭಾವ, ಮೂಕಾಭಿನಯ, ಕುಣಿತಗಳಿಂದ ಪ್ರೇಕ್ಷಕನಿಗೆ ಏನನ್ನೂ ತಲುಪಿಸಬೇಕೋ ಅದನ್ನು ತಲುಪಿಸುತ್ತದೆ. ಹಿಮ್ಮೇಳದ ಸಂಗೀತವೂ ಕೂಡ ಇದಕ್ಕೆ ಜೊತೆಗೂಡಿ ಇನ್ನಷ್ಟು ಮೆರಗನ್ನು ನೀಡುತ್ತದೆ. ಚಿತ್ರೀಕರಣಕ್ಕೆ ಅನುಕೂಲವಾಗುವಂತೆಯೆ ಕಲಾವಿದರೂ ಕೂಡ ಸಹಕರಿಸಬೇಕಾಗುತ್ತದೆ. ಡೊಳ್ಳು ಕೂಡ ಇದಕ್ಕೆ ಹೊರತಾಗಿಲ್ಲ ಜಾನಪದ ಜಾತ್ರೆ, ಜಾನಪದ ವೈಭವ, ಮೆರವಣಿಗೆ ಉತ್ಸವ, ಜಾತ್ರೆ, ಇವುಗಳೆಲ್ಲೆಲ್ಲಾ ಡೊಳ್ಳು ಕುಣಿತ ಇರಲೇಬೇಕು. ಡೊಳ್ಳಿನ ಪೆಟ್ಟಿಗೆ ಜನರು ಓಡೋಡಿ ಬಂದು ಉತ್ಸವದಲ್ಲಿ ಭಾಗಿಗಳಾಗುತ್ತಾರೆ. ಆದರೆ ಈಗ ಮೊದಲಿನಂತೆ ಯಾವುದೋ ಒಂದು ದೇವಸ್ಥಾನದ ಮುಂದೆ ಮಾತ್ರ ಆರಾಧನಾ ರೂಪವಾಗಿ ನಡೆಯುತ್ತಿದ್ದ ಈ ಕಲೆ ಧುತ್ತನೆ ಎಲ್ಲೆಂದರಲ್ಲಿ ನಿಂತ ನಿಲುವಿನಲ್ಲಿಯೇ ಪ್ರದರ್ಶನ ನೀಡಲು ತಯಾರಾಗಿದೆ.

ವೇಷಭೂಷಣಗಳಲ್ಲಿ ಹೊಸತನವನ್ನು ಮೂಡಿಸಿಕೊಂಡು ಡೊಳ್ಳಿನ ಕೈಪೆಟ್ಟುಗಳಲ್ಲೂ ಲಯಗತಿಗಳನ್ನು ಇಂದಿನವರಿಗೆ ಇಷ್ಟವಾಗುವ ರೀತಿಯಲ್ಲಿ ಮಾರ್ಪಾಡಿಸಿ ಕೊಂಡಿದ್ದಾರೆ. ಗಣೇಶೋತ್ಸವಗಳಲ್ಲಂತೂ ಡೊಳ್ಳಿನ ಸದ್ದು ಇರಲೇಬೇಕು. ತೊಗಲುಗೊಂಬೆಯಾಟ ವಂತೂ ಇಂದಿನ ವಿದ್ಯಮಾನಕ್ಕೆ ತಕ್ಕಂತೆ ಸಾಮಾಜೀಕರಣಗೊಂಡಿದೆ. ಸರ್ಕಾರದ ಯೋಜನಾ ಕಾರ್ಯಕ್ರಮ, ವ್ಯಕ್ತಿಗಳ ಬದುಕು, ಅರಿವಿನ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿರುವ ಕಲೆಯಾಗಿದೆ. ಜನರ ಬೇಡಿಕೆಯ ಮೇರೆಗೆ ಕಥೆಯನ್ನು ವಿಸ್ತರಿಸಿಕೊಳ್ಳುತ್ತಾ ಇಲ್ಲವೆ ಕುಗ್ಗಿಸಿಕೊಳ್ಳುತ್ತಾ ಮುನ್ನಡೆದಿದೆ. ಐ.ಟಿ, ಬಿ.ಟಿ ಕಂಪನಿಗಳಲ್ಲೂ ಕೂಡ ತೊಗಲುಗೊಂಬೆ ಮೇಳವನ್ನು ಕರೆದು ಮಾಡಿಸುತ್ತಾರೆ. ಸಾಂಸ್ಕೃತಿಕ ವಲಯದಲ್ಲಿ ತನ್ನದೇ ಛಾಪನ್ನು ಬಿಂಬಿಸುವ ತೊಗಲುಗೊಂಬೆಯಾಟವು ಇಷ್ಟೊಂದು ಪ್ರಸಿದ್ಧಿ ಪಡೆಯಲು ಕಾರಣ ಅದರ ಕಥಾ ವಸ್ತು. ಸಹೃದಯರ ಅಭಿರುಚಿಗೆ ತಕ್ಕಂತೆ ಅದನ್ನು ರೂಪಿಸಿರುತ್ತಾರೆ. ಸಂಗೊಳ್ಳಿರಾಯಣ್ಣ, ಭಗತ್‌ಸಿಂಗ್, ಮಹಾಭಾರತ, ರಾಮಾಯಣ ಹೀಗೆ ಹಲವು ಕಥೆಗಳನ್ನು ತೊಗಲುಗೊಂಬೆಯಾಟದಲ್ಲಿ ಆಡಿಸುತ್ತಾರೆ. ನೆರಳು ಬೆಳಕಿನ ಈ ಆಟದ ತಂತ್ರಗಾರಿಕೆ ಆಧುನಿಕ ಜನವರ್ಗ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದೆ. ಇನ್ನೂ ಕೆಲವು ಕಲೆಗಳು ಆರಾಧನಾತ್ಮಕ ಕಲೆಗಳಾಗಿಯೇ ಇರುತ್ತವೆ. ಸ್ವಲ್ಪ ಮುಂದುವರೆದರೆ ವೇದಿಕೆಯ ಮೇಲೆ ಮಾತ್ರ ವಿಜೃಂಭಿಸುತ್ತವೆ. ಅವುಗಳಲ್ಲಿ ಉಮ್ಮತ್ತಾಟ, ಪಟಾಕುಣಿತ ಹಾಲಕ್ಕಿ ಸುಗ್ಗಿಕುಣಿತ ಇವುಗಳಲ್ಲಿ ಬೇರೆಯೇ ರೂಪಾಂತರವಾಗಿ ಮಾರ್ಪಾಡು ಹೊಂದಲಿಲ್ಲ. ಈಗಲೂ

ಕೂಡ ಆಚರಣೆಯ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಅಲ್ಪ ಬದಲಾವಣೆಯನ್ನು ಮಾತ್ರ ಹೊಂದಿದೆ.

ಅಡಿ ಟಿಪ್ಪಣಿ

೧. ಕೃಷ್ಣಯ್ಯ.ಎಂ.ಎಚ್., ಕಲೆ ಮತ್ತು ರಸಸ್ವಾದನೆ, ಪು.ಸಂ–೧೭

೨. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪು.ಸಂ–೧೦

೩. ಡೊಮಿನಿಕ್.ಡಿ., ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಪು.ಸಂ–೧೩

೪. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪು.ಸಂ–೧೫೩

೫. ನಿಂಗಣ್ಣ.ಬಿ.ಸಿ., ಜಾಗತೀಕರಣ ಮತ್ತು ಜಾತ್ರೆಗಳು, ಪು.ಸಂ–೬೭

೬. ತಿಪ್ಪೇಸ್ವಾಮಿ.ಜಿ.ಆರ್., ಜಾಗತೀಕರಣ ಮತ್ತು ಜಾನಪದ, ಪು.ಸಂ–೯

೭. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪು.ಸಂ–೧೬೦

೮. ಪೂರ್ಣಿಮಾ.ಟಿ.ಸಿ., ಆಧುನಿಕ ಸಂವಹನ ಮಾಧ್ಯಮಗಳು, ಪು.ಸಂ–೫೩

೯. ಶುಭ ಮರವಂತೆ, ಮಹಿಳೆ ಮುನ್ನುಡೆ ಮಲೆನಾಡಿನ ಯಕ್ಷಗಾನ ಕಲಾವಿದೆಯರು, ಪು.ಸಂ–೭೮

ಅಧ್ಯಾಯ ಐದು

ದೃಶ್ಯ ಮಾಧ್ಯಮದ ಬಿಕ್ಕಟ್ಟುಗಳು, ಸವಾಲುಗಳು ಮತ್ತು ಪರಿಹಾರಗಳು

ಆದಿ ಮಾನವ ತನ್ನ ಅವ್ಯವಸ್ಥಿತವಾದ ದೈನಂದಿನ ಬದುಕಿನಲ್ಲಿ ಆಹಾರ ನಿದ್ರಾ ಭಯ ಮೈಥುನಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಜೀವನೋಪಾಯಗಳಾದ ಬೇಟೆ, ಆಹಾರ ಸಂಪಾದನೆ ಮೊದಲಾದವುಗಳಲ್ಲೆ ಅನಾಗರೀಕನಾಗಿ ಜೀವನವನ್ನು ಕಳೆಯುತ್ತಿದ್ದ. ಕಾಲಕಳೆದಂತೆ, ದಿನಗಳು ಉರುಳಿದಂತೆ ಅದೇ ಆದಿ ಮಾನವನಲ್ಲಿ ಹೊಸ ಬಗೆಯ ಜೀವನಶೈಲಿಗಳು, ದೈನಂದಿನ ಬದುಕು, ಸಾಮರಸ್ಯದಿಂದ ಬದುಕುವುದು, ಸಂಸ್ಕಾರವಂತ ಮತ್ತು ಪ್ರಜ್ಞಾವಂತನಾಗುತ್ತಾ, ವಿಕಾಸದತ್ತ ಹೊರಟ ದೈಹಿಕ ತೃಪ್ತಿಯ ಜೊತೆ ಪೂರಕ ವಸ್ತುಗಳ ಕ್ರೂಢೀಕರಣದ ಜೊತೆ, ಸಮೂಹ ಸಂತೋಷಕ್ಕಾಗಿ ತನ್ನನ್ನು ತೊಡಗಿಸಿಕೊಂಡ ಹಾಗೂ ಅದರಿಂದ ಆನಂದವನ್ನು ಕಂಡುಕೊಂಡ ತನಗೆ ತಿಳಿದಿರುವುದನ್ನು ಉಳಿದವರಿಗೂ ತಿಳಿಸಿದ ಅದೇ ಜಾನಪದವಾಯಿತು. ವ್ಯಕ್ತಿ ಇನ್ನೋರ್ವ ವ್ಯಕ್ತಿಗೆ ಮೌಖಿಕವಾಗಿ ಹೇಳಿಕೊಡುವುದುರ ಮೂಲಕ ಈ ಜಾನಪದವು ಕಲೆಯಾಗಿ ಮಾರ್ಪಟ್ಟಿತು. ಕಲೆಯೊಂದು ವಿಕಾಸವಾಗುವಾಗ ಅದಕ್ಕೆ ಪೂರಕವಾಗಿ ಅಥವಾ ಮಾರಕವಾಗಿ ಸವಾಲುಗಳು ಕೂಡ ಜೊತೆ-ಜೊತೆಯಲ್ಲಿಯೇ ಹುಟ್ಟಿಕೊಳ್ಳುತ್ತವೆ. ಪುರಾತನ ಕಲೆಗಳು, ಸಂಪ್ರದಾಯ ವಾದಿಗಳ ಚೌಕಟ್ಟಿನಲ್ಲಿ ಇದ್ದಾಗ ಅದು ಅವಗುಂಟನವಾಗಬಹುದು ಅಥವಾ ವಿಕಾಸವೂ ಆಗಬಹುದು. ಆದರೆ ಜಾನಪದ ಅವನತಿಯನ್ನು ಹೊಂದದೆ ವಿಕಾಸವಾದದನ್ನು ಇಲ್ಲಿ

ಗಮನಿಸಬೇಕು ವಿಕಾಸಕ್ಕೆ ಸವಾಲುಗಳೇ ಪೂರಕ ಕಾರಣ. ಪೂರ್ವಕಾಲೀನ ಜಾನಪದ ಸಂಪ್ರದಾಯ ನಿಷ್ಠವಾಗಿತ್ತು, ಪರಂಪರಾನುಗುತವಾಗಿತ್ತು, ಮಧ್ಯಕಾಲೀನದಲ್ಲಿ ವಿಕಾಸದತ್ತ ಹೊರಟಾಗ ಸವಾಲುಗಳು ಸಾಲುಸಾಲಾಗಿ ನಿರ್ಮಾಣಗೊಂಡವು. ಅವು ಇಂದಿನ ತನಕವೂ ವಿಕಾಸದ ಹಾದಿಯುಲ್ಲಿದ್ದರೂ ಸವಾಲುಗಳನ್ನು ಒಳಗೊಂಡಿವೆ ಕಲೆಯೊಂದು ಜಾಗತೀಕರಣಗೊಳ್ಳುವಾಗ ಸವಾಲುಗಳನ್ನು ಕೂಡ ಜಾಗೃತೆಯಿಂದ ಎದುರಿಸಬೇಕು. ಪರಿಹರಿಸಿಕೊಳ್ಳಬೇಕು. ಜಾಗತೀಕರಣದಲ್ಲಿ ಪ್ರಧಾನವಾದ ಸವಾಲುಗಳನ್ನು ನಾವು ಹೀಗೆ ವಿರ್ಮಶಿಸಬಹುದು.

೫.೧ ದೃಶ್ಯ ಮಾಧ್ಯಮದ ಸವಾಲು

ಯಾವುದೇ ಕಲೆಯು ನಿಂತ ನೀರಾಗಿದೆ ಸದಾವಿಕಸನವನ್ನು ಹೊಂದುವ ಕಲಾಗಂಗೆಯಾಗಿರು ತ್ತದೆ. ಇದು ಭೌತಿಕವಾದ ಶೈಕ್ಷಣಿಕವಾದ, ಧಾರ್ಮಿಕವಾದ, ಸಾಮಾಜಿಕವಾದ, ಸಾಂಸ್ಕೃತಿಕವಾದ ಬೇರೆ-ಬೇರೆ ಕಾರಣಗಳಿಂದ ನಮ್ಮ ಜಾನಪದ ಕಲೆಗಳ ಮೇಲೆ ಮಹತ್ತರವಾದ ಪರಿಣಾಮಗಳು ಉಂಟಾಗಿವೆ. ನಿಸರ್ಗ ವೈಪರೀತ್ಯದಿಂದ ಒಂದು ಪ್ರದೇಶದ ಒಂದು ಜನಾಂಗದ ಅಥವಾ ಒಂದು ಪ್ರಕಾರದ ಕಲೆ ನಾಶಹೊಂದುವ ಸಾಧ್ಯತೆ ಇರುತ್ತದೆ. ಸಮಷ್ಠಿಯಲ್ಲಿ ಅನ್ಯ ಕಾರಣಗಳಿಂದ ಈ ಜಾನಪದ ಕಲೆಗಳ ಮೇಲೆ ವಿಪರೀತವಾದ ಪರಿಣಾಮಗಳು ಸಂಭವಿಸಿದಾಗ, ಇಂತಹ ಸಂದರ್ಭದಲ್ಲಿ ಉತ್ಪತ್ತಿಯಾಗಿ ವಿಕಸನಗೊಂಡ ಕಲೆಯನ್ನು ರಕ್ಷಿಸುವುದೇ ಒಂದು ಸವಾಲು. ನಾಶದ ಅಂಚಿನಲ್ಲಿರುವ ಜಾನಪದ ಕಲೆಗಳನ್ನು ಕ್ರೂಢೀಕರಿಸಿ ಮೂಲ ಆಯಾಮಕ್ಕೆ ನ್ಯೂನ್ಯತೆ ಬಾರದ ಹಾಗೆ ಉಳಿಸಿಕೊಳ್ಳುವುದು ಕೂಡ ಒಂದು ಸವಾಲೇ ಸರಿ. ತಲೆಮಾರಿನಿಂದ ತಲೆಮಾರಿಗೆ ಜನಪದೀಯವಾದ ಜನಪದ ಕಲೆಯನ್ನು ಹಸ್ತಾಂತರವಾಗುವ ಹಾಗೆ ನೋಡಿಕೊಳ್ಳಬೇಕು.

ಪ್ರದೇಶದಿಂದ ಪ್ರದೇಶಕ್ಕೆ ಜಾನಪದ ಕಲೆಯ ಹಾಗೂ ಕಲಾವಿದರ ಬುದ್ಧಿಮತ್ತೆಯಲ್ಲಿ ಅವಿಷ್ಕಾರಗೊಳಿಸುವುದು ಮತ್ತು ಬದಲಾವಣೆಯು ಅಗತ್ಯತೆ ಇದ್ದಲ್ಲಿ ಮಾರ್ಪಾಡುಗೊಳಿಸುವುದು ಪ್ರದೇಶದಿಂದ ಪ್ರದೇಶಕ್ಕೆ ಎಂದರೆ ಒಂದು ಸ್ಥಳದಲ್ಲಿ ಅಚರಣೆಯಲ್ಲಿರುವ ಪ್ರಸಿದ್ಧವಾದ ಜಾನಪದ ಕಲೆಯು ಪರಿಚಿತವಲ್ಲದ ಇನ್ನೊಂದು ಪ್ರದೇಶಕ್ಕೆ ಪರಿಚಯಿಸುವುದು ಮತ್ತು ಆ ಕಲೆಗೆ ಸಂಬಂಧಿಸಿದ ಪರಂಪರೆ ಅದರ ನೀತಿ ಹಾಗೂ ಮಹತ್ವ, ಪ್ರದರ್ಶಿಸುವ ವಿದಾನ ಅದರಲ್ಲುಂಟಾಗುವ ಪರಿಣಾಮ ಇವುಗಳ ಸಮಗ್ರ ಚಿತ್ರಣವನ್ನು ಸತ್ವಯುತವಾಗಿ ಮತ್ತು ತತ್ವಯುತವಾಗಿ ಪ್ರತಿಪಾದಿಸಬೇಕು ಮತ್ತು ಪ್ರದರ್ಶಿಸಬೇಕು, ಆಗ ಮಾತ್ರ ಪ್ರದೇಶದಿಂದ ಪ್ರದೇಶಕ್ಕೆ ಜಾನಪದ ಕಲೆಯ ಸೀಮೋಲ್ಲಂಘನವಾಗುತ್ತದೆ ಮತ್ತು ಜಾನಪದ ಕಲೆಯು ಸಾರ್ಥಕತೆಯನ್ನು ಹೊಂದುತ್ತದೆ.

ಸಮುದ್ರೋಪಮವಾದ ಕಲಾರಂಗ ಭೂಮಿಯಲ್ಲಿ ಪರ್ವತದಷ್ಟು ಎತ್ತರವೂ, ತೀಕ್ಷ್ಣವೂ ಆದ ಕಲಾವಿದ್ದಾರೆ. ಬೇರೆ ಬೇರೆ ಕೆಲಸಗಳಲ್ಲಿ ನಿಷ್ಣಾತರಾದ ಕಲಾವಿದರೊಂದಿಗೆ ಒಂದು ತುಲನಾತ್ಮಕ ಅಧ್ಯಯನ ನಡೆಸಬೇಕು. ಆಗ ಜಾನಪದ ಕಲೆಯು ವಿಕಾಸದತ್ತ ಮುಖಮಾಡಿದಂತಾಗುತ್ತದೆ. ಇದು ಒಂದು ಸವಾಲೇ ಸರಿ.

ದೃಶ್ಯ ಮಾಧ್ಯಮಗಳ ವಿಪರೀತವಾದ ಪ್ರದರ್ಶನಗಳ ಕಾರಣದಿಂದಾಗಿ ಜಾನಪದ ಕಲೆಗಳು ಮೂಲ ಸ್ವರೂಪವನ್ನು ಬಿಟ್ಟು ಎತ್ತಲೋ ಸಾಗುತ್ತಿವೆ. ಇದಕ್ಕೆ ಪ್ರಧಾನ ಕಾರಣ ದೃಶ್ಯ ಮಾಧ್ಯಮದಲ್ಲಿ ಪ್ರದರ್ಶನಗೊಳ್ಳುವ ಅನೇಕ ನೃತ್ಯ-ನರ್ತನ ವೇಷಭೂಷಣ, ವಾದ್ಯ ಪರಿಕರಗಳು ಮತ್ತು ಪಾಶ್ಚಾತ್ಯ ಅನುಕರಣ ಸಂಗತಿಗಳು ಪ್ರಧಾನ ಕಾರಣವಾಗಿರುತ್ತದೆ. ದೃಶ್ಯ ಮಾದ್ಯಮದ ವೇಷಭೂಷಣಗಳಿಂದಾಗಿ ಜಾನಪದ ಕಲೆಗಳು ಅದನ್ನು ಅನುಕರಿಸುತ್ತಾ ಹೊರಟಿರುವುದು ಎಲ್ಲೆಡೆ ಕಂಡು ಬರುತ್ತಿದೆ. ಅದು ಒಂದು ಪ್ರಧಾನ ಕಾರಣ ಇದರಿಂದ ಮೂಲ ಜಾನಪದೀಯ ವೇಷಭೂಷಣಗಳ ಮೇಲೆ ಗಣನೀಯ ಪರಿಣಾಮ ಉಂಟಾಗುತ್ತದೆ. ಅಂದರೆ ತನ್ನ ಮೂಲಸತ್ವವನ್ನ ಕಳೆದುಕೊಂಡಿದೆ. ಶಾಸ್ತ್ರೀಯವಾದ ವೇಷಭೂಷಣಗಳು ಜಾನಪದ ಕಲೆಗಳಿಗೆ ಇಲ್ಲದಿರಬಹುದು. ಆದರೆ ಪ್ರಾದೇಶಿಕವಾದ ಉಡುಗೆ ತೊಡುಗೆಗಳು, ಆಭರಣಗಳು ಸಂಪ್ರದಾಯಗಳಲ್ಲಿ ಬೆಳೆದು ಬಂದಿದ್ದವು ಮತ್ತು ಒಳಗೊಂಡಿದ್ದವು ಸರಿ ಸುಮಾರು ೧೯-೨೦ನೇ ಶತಮಾನದ ಹೊತ್ತಿಗೆ ಸಿನಿಮಾ, ನಾಟಕ, ದೂರದರ್ಶನ ಪ್ರಭಾವದಿಂದಾಗಿ ಜಾನಪದ ಕಲೆಗಳ ಮೇಲೆ ವೀಪರೀತವಾದ ವಿಪರಿಣಾಮಗಳು ಉಂಟಾದವು. ಅಲ್ಲಿಂದ ಆರಂಭಿಸಿ ಜಾನಪದವು ಜಾನಪದೀಯವಾಗಿ ಉಳಿಯದೆ ಅನೇಕ ವಿಕಾರಗಳನ್ನು ಒಳಗೊಂಡವು. ದೂರದರ್ಶನ ಖಾಸಗಿ ವಾಹಿನಿಗಳವರಿಗೆ ಜಾನಪದ ಕಲೆಗಳ ಕುರಿತಾಗಿ ಪರಿಚಯ ಮತ್ತು ಆಸಕ್ತಿ ಇಲ್ಲದಿರುವಿಕೆ.

ಕಲೆಯೊಂದು ನಿಂತ ನೀರಲ್ಲ. ನೀರಾಗಲೂಬಾರದು. ಅದರ ಬೆಳವಣಿಗೆಗೆ ಮಾರ್ಪಾಡು ಮತ್ತು ಆವಿಷ್ಕಾರ ಅನಿವಾರ್ಯವಾಗಿ ಆಗಲೇಬೇಕು. ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಕಲೆಯ ಮುಂದುವರೆಯುವಿಕೆ ಒಟ್ಟಂದವನ್ನು ಬೆಳೆಸುತ್ತದೆ. ಅದರ ಪ್ರಯೋಗವೇ ಕ್ರಿಯೆ ಕ್ರಿಯಯಲ್ಲಿ ಸಕ್ರಿಯ ಮತ್ತು ಸದಾಶಕ್ತಿ ಆರಂಭದಿಂದ ಮುಕ್ತಾಯದ ತನಕ ರಂಗ ಲವಲವಿಕೆ ಕಲೆಯ ಅಭಿವೃದ್ಧಿಗೆ ವಿಶೇಷ ಕಾರಣವಾಗುತ್ತದೆ. ಅಭಿನಯವೊಂದು, ಆಭಿಮಾನವಾಗಿ ಮಾರ್ಪಾಡುವಾಗ. ಕಲೆಯೊಂದು ಆಭಿನಯವಾಗಿ ಮಾರ್ಪಾಡುವಾಗ ಅಭಿಮಾನಿಗಳ ಹೃದಯ ಭಾವಸಂವೇದನೆಯೇ ಸಂವಹನ ಎಂದೆನಿಸಿಕೊಳ್ಳುತ್ತದೆ. ಇದು ಮೂಲ ಜಾನಪದೀಯದಲ್ಲಿ ಜನಪದಕ್ಕೆ ಚ್ಯುತಿ ಬರದ ರೀತಿಯಲ್ಲಿ ವರ್ಧಿಸುವಿಕೆ ಮತ್ತು ಪ್ರಸಾರ ಮಾಡುವಿಕೆ ಮತ್ತು ಸಂರಕ್ಷಿಸುವಿಕೆ ಮತ್ತು ಮುಂದಿನ ತಲೆಮಾರಿಗೆ ಹಸ್ತಾಂತರಿಸುವಿಕೆ, ಈ ಅಂಶಗಳು ಜಾನಪದ ಕಲೆ ಮತ್ತು ಅದರ ಕ್ರಿಯೆ, ಸಂವಹನದಲ್ಲಿ ಮಾರ್ಪಾಡಾಗಲೇ ಬೇಕಾದ ಅಂಶಗಳು ಅದೊಂದು ಸವಾಲುಕೂಡ ಸರಿಯಷ್ಟೇ?

ಆವಿಷ್ಕಾರದ ಹಂತದಲ್ಲಿರುವ ಮೂಲಸ್ಥಿತಿಯನ್ನು ಅಳವಡಿಸಿಕೊಂಡು ಚೌಕಟ್ಟಿನೊಳಗೆ ಇರುವ ಒಂದು ನಿಬಂಧನೆಯನ್ನೆ ಮೂಲ ಪರಂಪರೆಯೆಂದು ಕರೆಯುತ್ತಾರೆ. ಅದನ್ನು ಚಾಚೂತಪ್ಪದೆ ನಡೆಸಿಕೊಂಡು ಅನುಸರಿಸಿ ಪ್ರದರ್ಶಿಸುವ ಕಲೆಯನ್ನು ಪರಂಪರಾಗತ ಎಂದು ಕರೆಯುತ್ತಾರೆ. ಜನಪದ ಕಲೆಗಳ ಮೂಲ ಪರಂಪರೆಯನ್ನು ಮಾರ್ಪಾಡು ಮಾಡುವಾಗ ವಿನ್ಯಾಸಗೊಳಿಸುವಾಗ ಬಹಳ ಜಾಗೃತೆಯಿಂದ ಅದನ್ನು ವಿಕಾಸಗೊಳಿಸಬೇಕೆ ಹೊರತು ಅದನ್ನು ವಿರೂಪಗೊಳಿಸಬಾರದು. ವಿರೂಪಗೊಳಿಸಿದರೆ ಅಪಚಾರವೆಸಗಿದಂತಾಗುತ್ತದೆ. ವಿಕಾಸಗೊಳಿಸಿದರೆ ಕಲೆಯನ್ನು ಅಭಿವೃದ್ಧಿಗೊಳಿಸಿದಂತಾಗುತ್ತದೆ. ಸಂಪ್ರದಾಯವಾದಿ ಕಲಾವಿದರ ಮನಸ್ಸಿಗೆ ಒಪ್ಪುವಂತೆ ವಿಕಾಸಗೊಳಿಸುವುದಕ್ಕೆ ಸಾಧ್ಯ. ಆದರೆ ಅದೊಂದು ಸವಾಲು ಇರುವ ಕಲೆಗಳ ಹೊರತಾಗಿ ಹೊಸತೊಂದು ಜಾನಪದ ಕಲೆಯನ್ನು ಆವಿಷ್ಕರಿಸುವುದಕ್ಕಿಂತ ಇರುವ ಕಲೆಯನ್ನು ಪರಿಷ್ಕರಿಸುವುದೊಳಿತು. ಪರಿಷ್ಕಾರದಲ್ಲಿ ಪ್ರಾದೇಶಿಕ ಕಲಾ ಅನುಭವ ಮೂಲ ಕಲಾವಿದರ ಸಂಪರ್ಕ ಉಪಯೋಗಿಸಬಹುದಾದ ಪರಿಕರಗಳ ಅಗತ್ಯತೆ ಸಮಯೋಚಿತ ಅನುಸಂಧಾನ ಇವು ಪರಿಷ್ಕಾರದಲ್ಲಿ ಉಂಟಾಗುವ ಸಾಮಾನ್ಯ ಸವಾಲುಗಳು.

ಜಾನಪದ ಕಲೆಗಳ ಹೊರತಾಗಿ ಇರುವ ಜಾನಪದೇತರ ಅದನ್ನೇ ಹೋಲುವ ರಾಜ್ಯ ಹಾಗೂ ಅನ್ಯರಾಜ್ಯಗಳಲ್ಲಿ ಪ್ರಚಲಿತವಿರುವ ಕಲೆಗಳ ಕಲಾಪ್ರಕಾರಗಳ ಒಂದು ಅಧ್ಯಯನ ಮತ್ತು ಅನುಭಾವವನ್ನು ಪಡೆದುಕೊಂಡು ಅದನ್ನು ಜಾನಪದಕ್ಕೆ ಅಳವಡಿಸಿಕೊಂಡಾಗ ಇನ್ನೂ ಹೆಚ್ಚು ಜಾನಪದ ಕಲೆಗಳು ವಿಕಾಸಹೊಂದುವುದಕ್ಕೆ ಸಾಧ್ಯ ಅಂದರೆ ಒಂದನ್ನು ಕೊಟ್ಟು ಒಂದನ್ನು ಪಡೆಯಬಹುದು. ಉಳಿದ ಕಲಾ ಪ್ರಕಾರಗಳು ವರ್ತಮಾನಕಾಲದಲ್ಲಿ ಸಾಕಷ್ಟು ಪ್ರಚಾರವನ್ನು ಪ್ರಸಿದ್ಧಿಯನ್ನು ಪಡೆಯುತ್ತಿರುವ ವಿಧಾನವನ್ನು ಕಾಣಬಹುದು. ಒಂದು ತುಲನಾತ್ಮಕ ಅಧ್ಯಯನದೊಂದಿಗೆ ಅನುಭವವೂ ಗಟ್ಟಿಗೊಳ್ಳುತ್ತಾ ಹೋಗುತ್ತವೆ. ಕಲೆಗೆ ಕಲೆಯೇ ಸವಾಲು ಎಂದು ಪರಿಗಣಿಸದೆ ಸವಾಲೇ ಸಾಧನ ಎಂದು ಸಮಗ್ರವಾಗಿ ಚಿಂತಿಸಬೇಕು. ಉದಾ : ಉತ್ತರ ಭಾರತದಲ್ಲಿ ಅನೇಕ ರೀತಿಯ ಜಾನಪದ ಕಲೆಗಳನ್ನು ನಾವು ನೋಡಿರುತ್ತೇವೆ. ಅವುಗಳನ್ನು ಜೈಪುರದ ಸಾಂಗಿನೃತ್ಯ, ಮೇಘಾಲಯದ ತಟ್ಟೆ ನೃತ್ಯ, ಇವೆ ಮುಂತಾದ ಬೇರೆ ರಾಜ್ಯಗಳಲ್ಲಿ ಹಾಸು ಹೊಕ್ಕಾಗಿರುವ ಜಾನಪದ ಕಲೆಗಳನ್ನು ಸ್ವತಃ ಹೋಗಿ ಅಧ್ಯಯನ ಮಾಡಿ ನಮ್ಮ ಜಾನಪದದಲ್ಲಿ ಹೇಗೆ ಸೇರಿಸಿಕೊಳ್ಳಬಹುದು ಮತ್ತು ನಮ್ಮ ಜಾನಪದವನ್ನು ಉತ್ಕೃಷ್ಟಗೊಳಿಸಬಹುದು ಎಂಬ ನೆಲೆಯಲ್ಲಿ ಸಕ್ರಿಯ ರಂಗ ವಿನಿಯಮಗೊಳ್ಳಬೇಕು. ಆಗಲೇ ಜಾನಪದವು ತನ್ನ ಮಿತಿಯನ್ನು ಮೀರಿ ವ್ಯಾಪಕಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಒಂದು ಕಲಾ ಪ್ರಕಾರದ ಸರ್ವಾಂಗ ಸುಂದರತೆ ಮತ್ತು ದೋಷಿತ್ವದ ನಿವಾರಣೆಯಾಗುವುದು.

ಈ ದೇಶದಲ್ಲಿ ಜಾತಿ ಮತ ಗೋತ್ರ ಇಲ್ಲದಿರುವುದೆಂದರೆ ಕಲೆಗೆ ಮಾತ್ರ ಆದರೆ ಕಲಾವಿದರಿಗೆ ಆ ಜಾತೀಯತೆ ಇದ್ದೇ ಇರುತ್ತದೆ. ಯಾವ ಕಲೆಯನ್ನು ಕೂಡ ಮತೀಯ ಚೌಕಟ್ಟಿನೊಳಗೆ ಒಯ್ಯಲೇ ಬಾರದು ಮತ್ತು ಪ್ರದರ್ಶಿಸಬಾರದು ಜಾನಪದವೆಂಬ ಅದ್ಭುತವಾದ ಕಲೆಯು ಜನರಿಂದ, ಜನರಿಗಾಗಿ ಜನರಿಗೋಸ್ಕರ ಸಂಸ್ಕೃತಿಯಿಂದ ಸಂಸ್ಕೃತಿಗಾಗಿ ಸಂಸ್ಕೃತಿಗೋಸ್ಕರ ತನ್ನ ಎಲ್ಲೆಯನ್ನು ಮೀರಿ ಬೆಳೆಯಬೇಕೆಂದರೆ ಜಾತೀಯತೆಯ ಚೌಕಟ್ಟನ್ನು ಮೀರಿದಾಗ ಮಾತ್ರ ಸಾಧ್ಯ. ಕೆಲವು ಪ್ರದರ್ಶನಾತ್ಮಕ ಕಲೆಗಳು ಇಂದಿಗೂ ಕೆಲವೇ ಜಾತಿಯ, ಗುಂಪಿನ ಸೊತ್ತುಗಳಂತೆ ವಿಜೃಂಭಿಸುತ್ತಿವೆ. ಒಂದು ಪಂಗಡದಿಂದ ಇನ್ನೊಂದು ಪಂಗಡಕ್ಕೆ ಜಾನಪದವು ಹಸ್ತಾಂತರವಾಗುವಲ್ಲಿ, ವಿಸ್ತಾರವಾಗುವಷ್ಟು ಜಾತಿಯ ಲಕ್ಷ್ಯವನ್ನು ಬದಲಿಸಬೇಕು. ಮನುಷ್ಯನ ಭಾವನೆಗಳು ಹೇಗೆ ಭಾಷಾಭಿವೃದ್ಧಿಗೆ ಕಾರಣವೂ ಜಾತಿ ರಹಿತ ಕಲೆಗಳು ಕಲಾ ಪ್ರಪಂಚದ ವಿಕಾಸಕ್ಕೆ ಕಾರಣವಾಗುತ್ತವೆ. ಆದರೆ ಇದು ಸಂಕುಚಿತ ಮನೋಭಾವದ ಕಾರಣದಿಂದಾಗಿ ವಿಕಾಸಗೊಳ್ಳುವುದಕ್ಕಿಂತ ವಿನಾಶಗೊಳ್ಳುವ ಸಾಧ್ಯತೆಯೆ ಹೆಚ್ಚಿದೆ. ಉದಾ : ಡೊಳ್ಳು, ಕೋಲಾಟ, ಬಿಂಗಿಪದ, ಅಂಟಿಕೆ ಪಂಟಿಕೆ ಗುಂಡುಭರಮ ಮೊದಲಾದ ಕಲಾ ಪ್ರಕಾರಗಳು ತನ್ನ ಸೀಮಿತ ಪರಿಧಿ ಒಳಗೆ ಇದ್ದು ವ್ಯಾಪಕಗೊಳ್ಳದೇ ಇರುವುದಕ್ಕೆ ಇದು ಒಂದು ಕಾರಣ ಎನ್ನಬಹುದು.

ಮನುಷ್ಯ ಸ್ವಾರ್ಥ ಜೀವಿ, ತನ್ನ ಬದುಕಿನ ಅತೀ ಮುಖ್ಯ ಉದ್ದೇಶವೆಂದರೆ ಹಣಗಳಿಕೆ ಎಂದು ತೀವ್ರವಾಗಿ ತಿಳಿದಿದ್ದಾನೆ. ಈ ಕಾರಣದಿಂದ ಕಲೆಯನ್ನು ನಿಸ್ವಾರ್ಥಕತೆಯಿಂದ ಮಾಡದೆ ಸ್ವಾರ್ಥ ಸಹಿತವಾಗಿ ವ್ಯಾಪಾರೀಕರಣಗೊಳಿಸುತ್ತಾ ಹೋದ ಕಾರಣದಿಂದ ಜಾನಪದ ಕಲೆಗಳು ನೀರಿಕ್ಷಿತ ಮಟ್ಟದಲ್ಲಿ ಬೆಳೆಯಲಿಲ್ಲ ಹಾಗೂ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲೇ ಇಲ್ಲ. ಇದು ಕೂಡ ಒಂದು ಸವಾಲೇ ಆಗಿ ಇಂದು ಎದುರಿಸಲೇ ಬೇಕಾದ ಸಂದರ್ಭ ಒದಗಿದೆ. ಹೇಗೆಂದರೆ ಕಲೆಯನ್ನು ಪ್ರಯೋಜನಕ್ಕಾಗಿ ಬಳಸಿಕೊಳ್ಳಬಾರದು. ಪರಿಣಾಮಕ್ಕಾಗಿ ಬಳಸಿಕೊಳ್ಳಬೇಕು. ಆದರೆ ಇಲ್ಲಿ ಪರಿಣಾಮವು ಸೋಲುತ್ತಾ ಪ್ರಯೋಜನವೂ ಯಶಸ್ಸನ್ನು ಸಾಧಿಸುತ್ತಿರುವುದನ್ನು ನಾವು ಜಾನಪದ ಕ್ಷೇತ್ರದಲ್ಲಿ ಕಾಣಬಹುದು. ಕಲೆಯು ವ್ಯಾಪಾರೀಕರಣಗೊಳ್ಳುವುದೆಂದರೆ ಆದರಿಂದ ಜಾನಪದ ಕಲಾಕ್ಷೇತ್ರಕ್ಕೆ, ರಂಗಭೂಮಿಗೆ ಅವನತಿ ಉಂಟಾಗುತ್ತದೆ. ಕಲೆಯನ್ನು ಕಲೆಗಾಗಿ ಮುಡಿಪಾಗಿಡದೆ ಅಥವಾ ಅದರ ಬೆಳವಣಿಗೆಗೆ ಪ್ರಯತ್ನಿಸದೆ ಸಂಘಟಕ ಅಥವಾ ಕಲಾವಿದ ಆರ್ಥಿಕ ಲಾಭವನ್ನೆ ಗುರಿಯಾಗಿಟ್ಟುಕೊಳ್ಳವುದೆಂರ್ಥ, ಉದಾ : ಒಂದು ಪ್ರದೇಶದ ಜಾನಪದ ಕಲೆಯನ್ನು ಮಾರಿಕೊಳ್ಳುವುದು ಎರಡನೇಯದಾಗಿ ಇನ್ನೊಂದು ಕಲೆಯ ಜೊತೆಯಲ್ಲಿ ವಿಲೀನಗೊಳಿಸಿ, ವಿರೂಪಗೊಳಿಸಿ ಕಲೆಯ ಸಂಪ್ರದಾಯದ ಅಂದವನ್ನು ಕೆಡಿಸಿ ಆರ್ಥಿಕತೆಯಲ್ಲಿ ಸಫಲತೆ ಕಂಡುಕೊಳ್ಳುವುದು ಮತ್ತು ಸರಕಾರ ಸ್ವಾಯುತ್ತ ಸಂಸ್ಥೆಗಳಿಂದ ಕಲೆಯ ಹೆಸರಲ್ಲಿ ಅನುದಾನವನ್ನು ಪಡೆದು ಸದುಪಯೋಗ ಪಡಿಸದೆ ಸ್ವಾರ್ಥ

ಸಂಪಾದನೆಯಲ್ಲಿ ತೊಡಗುವುದು ಇಂತಹ ಸಂಸ್ಥೆಗಳನ್ನು ಹುಡುಕಿ ಜನಪದ ಕಲೆಗೆ ಆಗುವ ಅನ್ಯಾಯವನ್ನು ಮತ್ತು ದುರುಪಯೋಗವನ್ನು ಪರಿಣಾಮವನ್ನು ಖಂಡಿಸಬೇಕು. ಇಂದು ಅತೀ ಹೆಚ್ಚು ಆರ್ಥಿಕ ಅವ್ಯವಹಾರವನ್ನು ನಾವು ಜಾನಪದ ಕ್ಷೇತ್ರದಲ್ಲಿ ಸ್ವಂಘೋಷಿತ ಸಂಸ್ಥೆ ಅಥವಾ ವ್ಯಕ್ತಿಗಳಿಂದ ಉಂಟಾಗುವು ದುಷ್ಪಪರಿಣಾಮವನ್ನು ತಪ್ಪಿಸಬೇಕು. ಆದರೆ ಬೆಕ್ಕಿಗೆ ಗಂಟೆ ಕಟ್ಟುವರ್ಯಾರು ಎಂಬ ಮಾತಿನಂತೆ ಸವಾಲುಗಳಿಗೆ ಸವಾಲೆಸುಯುವುದನ್ನು ಕಂಡುಕೊಳ್ಳಬೇಕಾದ ಪರಿಸ್ಥಿತಿ ನಮ್ಮೆದುರಿಗಿದೆ.

ಮೂಲ ಜಾನಪದ ಕಲಾ ಪ್ರಕಾರಗಳನ್ನು ದಿಗ್‌ದಿಗಂತಕ್ಕೆ ಪಸರಿಸುವಾಗ ಅನ್ಯ ಕಲಾ ಪ್ರಕಾರಗಳ ಪ್ರಭುತ್ವವದಿಂದಾಗಿ ಇದು ತನ್ನ ಸೀಮೋಲಂಘನವನ್ನು ಕಳೆದುಕೊಂಡಿದೆ. ಎಲ್ಲಿಯೋ ಅಲ್ಲಿ ಇಲ್ಲಿ ಜಾನಪದ ವೈಭವ ಎಂಬುದು ನಡೆದರೂ. ನಿಜಾರ್ಥದಲ್ಲಿ ವೈಭವಕ್ಕೆ ಸಾಮಾಜಿಕ ತೊಡಕುಗಳು ತೀವ್ರವಾಗಿ ಎದುರಾಗುತ್ತಿರುವುದನ್ನು ನಾವು ಕಾಣುತ್ತೇವೆ. ಬೇರೆ ಬೇರೆ ಕಲಾ ಪ್ರಕಾರಗಳ ವೈಭವದಲ್ಲಿ ಸರಿಸಾಟಿಯಾಗಬಲ್ಲ, ನಮ್ಮ ಜಾನಪದ ಕಲೆಗಳನ್ನು ಪ್ರದರ್ಶಿಸುವ ಸಂಪೂರ್ಣ ಪರಿಣಾಮವನ್ನು ನಾವು ಸಿದ್ಧಪಡಿಸಿಕೊಳ್ಳಬೇಕು. ಗಾಯನ, ವಾದನ, ವೇಷಭೂಷಣ, ಇವುಗಳನ್ನು ಉಪಯೋಗಿಸುವಲ್ಲಿ ಮತ್ತು ವರ್ಣ ವೈವಿಧ್ಯಗಳ ಅಚ್ಚುಕಟ್ಟುತನದಲ್ಲಿ ಪರಿಣಾಮಕಾರಿ ಯಾಗುವಂತೆ ಸಿದ್ದರಾಗಬೇಕು. ತಾಲೀಮುಗಳಿಲ್ಲದೆ ಪ್ರದರ್ಶನವನ್ನು ಆಯೋಜಿಸಬಾರದು. ಕಾಲಮಿತಿ ದೇಶಮಿತಿ, ಭಾಷಾಮಿತಿ ಇವುಗಳ ಬಗ್ಗೆ ಗಮನಿವಿರಬೇಕು. ಅಲ್ಲದೇ ಮೂಲ ಜಾನಪದ ಅಥವಾ ಅದಕ್ಕೊಪ್ಪುವ ಬದಲಾವಣೆಗಳನ್ನು ಜಾನಪದ ತಜ್ಞರು ಮತ್ತು ಕಲಾವಿದರ ಸೈದ್ಧಾಂತಿಕ ನೆಲೆಯಲ್ಲಿ ಮಾರ್ಪಾಡು ಮಾಡಬೇಕು.

ಆದರೆ ಅನ್ಯ ಕಲಾ ಪ್ರಕಾರಗಳ ಭಟ್ಟಿ ಇಳಿಸುವಿಕೆ ಆಗಬಾರದು. ಹಾಗೂ ಇನ್ನೊಂದು ಕಲೆಯ ಆಕರ್ಷಣೆಗೆ ಒಳಪಟ್ಟು ಜಾನಪದ ಕಲೆಯ ಮೂಲ ಸೊಗಡು ಸೆಳೆತಕ್ಕೂ, ಒತ್ತಡಕ್ಕೂ ಸಿಲುಕಬಾರದು ಜಾನಪದ ಸೊಗಡಿನ ಛಾಯೆ ತನ್ನ ಕ್ಷೇತ್ರ ಮಹತ್ವ ನ್ಯಾಯದಿಂದ ಅಭಿವೃದ್ಧಿ ಯತ್ತ ಸಾಗಬೇಕು. ವರ್ತಮಾನದಲ್ಲಿ ಅನ್ಯಕಲೆಗಳ ಪ್ರಭಾವದಿಂದ ಜಾನಪದ ಕಲೆಗಳು ಹೆಚ್ಚು ಪ್ರಕಾಶಿಸುತ್ತಿಲ್ಲ. ಜೊತೆಗೆ ಕೀಳರಿಮೆಯನ್ನು ಮೈಗೂಡಿಸಿಕೊಂಡಿದೆ. ಸಮಾಜ ಪ್ರೇಕ್ಷಕರು, ಕಲೆ, ಕಲಾವಿದ ಇವು ಕಲೆಯ ಅಭಿವೃದ್ಧಿಗೆಕಾರಕವಗಿರಬೇಕು, ಹೊರತು ಮಾರಕವಾಗಿರಬಾರದು. ಆದರೆ ಇದೊಂದು ಪೂರ್ವ ಸಿದ್ಧಾಂತ ಸಮಸ್ಯೆಯಾದರೆ ಇನ್ನೊಂದು ವರ್ತಮಾನ ತೊಡಕು ಜಾನಪದ ಕಲೆಗಳನ್ನು ಭಾದಿಸುತ್ತಿದೆ. ಬೇರೆ ಕಲಾ ಪ್ರಕಾರಗಳ ವೈಭವ ವ್ಯಾಪಾರೀಕರಣ ಮತ್ತು ಅವುಗಳ ಗೇಯತೆಯಿಂದಾಗಿ ಜಾನಪದ ಕಲಾ ಲೋಕವು ಅದರ ಆಕರ್ಷಣೆಗೆ ಒಳಗಾಗಿ ತನ್ನ ಚೌಕಟ್ಟನ್ನು ಮೀರುವ ಸಾಧ್ಯತೆಗಳುಂಟಾಗುತ್ತಿವೆ. ಬೇರೆ ಕಲಾ ಪ್ರಕಾರಗಳ ಬಾಹುಳ್ಯದಿಂದಾಗಿ ಮತ್ತು ಅದರ

ಆಕರ್ಷಣೆಯಿಂದಾಗಿ ಜಾನಪದೀಯರು ತಮ್ಮ ತನವನ್ನು ತಮ್ಮ ಕ್ಷೇತ್ರ ಮಹತ್ವವನ್ನು ಮರೆಯುವ ಅಥವಾ ಸಂಕುಚಿತ ಭಾವನೆಯಿಂದ ತ್ಯಜಿಸುವ ಸಾಧ್ಯತೆ ಹೆಚ್ಚು ಇರುತ್ತದೆ. ಇದನ್ನು ತಡೆಗಟ್ಟಬೇಕು.

ಒಂದು ಕಲೆಯು ಅನೇಕ ಕಲಾ ಪ್ರಕಾರಗಳ ಸಮಕ್ಷಮ ಪ್ರತಿನಿಧಿಸಬೇಕಾದಾಗ ಅದು ತನ್ನ ಪ್ರಭಾವದಿಂದ ಅನ್ಯಕಲಾ ಪ್ರಕಾರದ ಪ್ರಭಾವಕ್ಕೆ ಒಳಗಾಗಬಾರದು. ಅಂಗಿಕ ವಾಚಿಕ ವೇಷಭೂಷಣ ಮತ್ತು ಸಾತ್ವಿಕ ಮೊದಲಾದವುಗಳು ಅನ್ಯ ಪ್ರಭಾವಕ್ಕೆ ಆಕರ್ಷಿತವಾಗುತ್ತವೆ ಯಾಕೆಂದರೆ ಪಾಶ್ಚಾತ್ಯ ಕಲಾ ಪ್ರಕಾರಗಳು ಆಕರ್ಷಣೆಯಿಂದಲೂ, ಅಲಂಕಾರಿಕಗಳಿಂದಲೂ, ನಾವೀನ್ಯತೆಯಿಂದಲೂ ಕೂಡಿರುವುದರಿಂದ ಮತ್ತು ಹೊಸ ಹೊಸ ಅವಿಷ್ಕಾರ ಪರಿಷ್ಕಾರ ಪಡೆಯುತ್ತಿರುವುದರಿಂದ ಅದರ ಆಕರ್ಷಣೆ ಜಾನಪದದ ಮೇಲೆ ತೀವ್ರ ಅನುಪಾತವನ್ನು ಮಾಡುವ ಸಾದ್ಯತೆ ಇರುತ್ತದೆ. ಆ ಕಾರಣದಿಂದ ವಿದೇಶಿಯ ಅಥವಾ ಪಾಶ್ಚಾತ್ಯ ಕಲಾ ಪ್ರಕಾರಗಳ ಪ್ರಭಾವಕ್ಕೆ ಜಾನಪದ ಕಲೆಗಳು ಒಳಗಾಗದಿರುವಂತೆ ಸಾಕಷ್ಟು ಸವಾಲುಗಳನ್ನು ಎದುರಿಸುವುದರ ಮೂಲಕ ಮಾರ್ಪಾಡಾಗದಿರುವಂತೆ ಈ ಕಲಾ ಲೋಕವು ಒಳಗಾಗಬಾರದು ಎಂದರೆ ಜಾನಪದೀಯರು ಸಾಕಷ್ಟು ಪರಿಶ್ರಮ ವಹಿಸಬೇಕು.

ಪ್ರಾದೇಶಿಕ ಮಿತಿಯಲ್ಲಿ ಜನರಿಂದ ಹಾಗೂ ಅವರ ಆತ್ಮಾಭಿವ್ಯಕ್ತಿ ಸಂತೊಷಕ್ಕಾಗಿ ಹುಟ್ಟಿಕೊಂಡ ಹಾರ್ದಿಕ ಸಮುದಾಯ ಭಾವನೆ ಕಲಾ ಅನೇಕ ಕಾರಣಗಳಿಂದಾಗಿ ಸೀಮೋಲಂಘನದಲ್ಲಿ ಅಷ್ಟೊಂದು ಯಶಸ್ಸನು ಕಾಣಲಿಲ್ಲ. ಇದಕ್ಕೆ ಕಾರಣ ಪ್ರಾದೇಶಿಕ ಮಿತಿಯನ್ನು ಮೀರುವ ಅವಕಾಶಗಳು ಯಥೇಚ್ಛವಾಗಿ ದೊರೆಯದ ಕಾರಣ ಮತ್ತು ಅನ್ಯ ಕಲಾ ಪ್ರಕಾರದವರ ಸಮಯ ಸೂಚನಾ ಪ್ರಜ್ಞೆಯಿಂದ ಪ್ರಭುತ್ವವನ್ನು ಸ್ಥಾಪಿಸಿದರು. ಮಾದ್ಯಮದ ಸಹಕಾರ ಕ್ಷೇತ್ರದಲ್ಲಿ ಜಾನಪದ ಕಲಾ ಲೋಕವು ತನ್ನ ಹಿರಿಮೆ ಗರಿಮೆಯನ್ನು ಸ್ಥಾಪಿಸುವಲ್ಲಿ ಹಿಂದೆ ನಿಂತಿತು. ಭಾಷಾ ತೊಡಕುಗಳು ಎದುರಾದವು. ಅನ್ಯವಾಸ್ಯತ್ವವನ್ನು ಒಪ್ಪಿಕೊಳ್ಳುವುದರ ಮೂಲಕ ಸಮಯ ಸಾಧಕತೆಯನ್ನು ಮಾಡಹೋಗಲಿಲ್ಲ. ವಾಣಿಜ್ಯಾರ್ಥ ಪೂರಕಗಳಾದ ಜಾಹೀರಾತಿನಿಂದಲೇ ನಡೆಯುವ ಕಾರ್ಯಕ್ರಮಗಳ ತೀವ್ರತೆಯಿಂದಾಗಿ ಎಲ್ಲೋ ಒಂದು ಕಡೆ ಜಾನಪದ ಲೋಕವು ಸ್ವಲ್ಪ ಬಡವಾಯಿತು ಮತ್ತು ತೇವವಾಯಿತು.

೫.೨ ಜಾನಪದ ಕಲೆಗಳ ಮೇಲಿನ ಸಾಧ್ಯತೆ ಮತ್ತು ಸವಾಲು

* ನಿಸರ್ಗ ವೈಪರೀತ್ಯವನ್ನು ತಡೆಯುವುದು ಎಂದರೆ ಪ್ರಕೃತಿ ವಿಕೋಪದಿಂದಾಗಿ ಒಂದು ಪ್ರದೇಶ ನಾಶವಾದಾಗ ಆ ಪ್ರದೇಶದ ಕಲೆಗಳು ಮತ್ತು ಸಾಕ್ಷಾಧಾರಗಳು ನಾಶವಾಗುತ್ತವೆ. ಇದರ ಮುಂದಾಲೋಚನ ಕ್ರಮವಾಗಿ ದಾಖಲೀಕರಣ ಮಾಡಿ ಬೇರೆ ಬೇರೆ ಪ್ರದೇಶಗಳಲ್ಲಿ

ಸಂರಕ್ಷಿಸಬೇಕು. ಜಾನಪದ ಕಲೆಗಳಲ್ಲಿಯ ಒಳ ಅಥವಾ ಉಪಕಲೆಗಳು ಸಂಕುಚಿತಗೊಳ್ಳದಿರುವಂತೆ ವಿಸ್ತಾರಗೊಳಿಸಬೇಕು. ಅಶಿಕ್ಷಿತ ವಸ್ತು ಅಥವಾ ವಿಷಯಗಳನ್ನು ಶಿಕ್ಷಿತಗೊಳಿಸಬೇಕು.

* ವಿನಾಶದ ಅಂಚಿನಲ್ಲಿರುವ ಕಲೆಗಳನ್ನು ಪುನರುಜ್ಜೀವನಗೊಳಿಸಬೇಕು. ಪ್ರಸಾರ ಮತ್ತು ಹಸ್ತಾಂತರಗೊಳಿಸವಿಕೆ ಅವಶ್ಯವಾಗಿ ಆಗಲೇಬೇಕಾದ್ದು ಪ್ರದೇಶದಿಂದ ಪ್ರದೇಶಕ್ಕೆ ಸಮನ್ವಯ ಮತ್ತು ಸಮತಾಭಾವದಿಂದ ವಿನಿಮಯಗೊಳ್ಳಬೇಕು.

* ದೃಶ್ಯಮಾದ್ಯಮಗಳ ಸಂಪರ್ಕ ಪ್ರಚಾರ ಮತ್ತು ಪ್ರಸಾರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು.

* ಒಂದು ಕಲೆ ಸಂವಹನೆಯಾಗುವಾಗ ಸಾರ್ವತ್ರಿಕರಣಗೊಳಿಸಬೇಕು. ಅಂದರೆ ಕಲೆಯ ಒಪ್ಪಂದಕ್ಕೆ ವಿಚಾರ ವಿಮರ್ಶೆ, ಟೀಕೆ, ಟಿಪ್ಪಣಿಗಳ ಅವಶ್ಯಕತೆ ಇದ್ದೇ ಇದೆ. ಅದನ್ನು ಹಾರ್ದಿಕವಾಗಿ ಸ್ವೀಕರಿಸಬೇಕು.

* ಪರಂಪರೆ ವಿಸ್ತರಿಸುವ ಸಂದರ್ಭದಲ್ಲಿ ಜಾನಪದ ತಜ್ಞರ ಮತ್ತು ಅನುಭವಿ ಕಲಾವಿದರ ಮಾರ್ಗದರ್ಶನವನ್ನು ಚಾಚೂತಪ್ಪದೇ ಪಾಲಿಸಬೇಕು.

* ಅನ್ಯಕಲಾ ಪ್ರಕಾರಗಳಿಂದ ಎರವಲು ಪಡೆಯುವಾಗ ಅನುಕರಣೆಯಾಗದಂತೆ, ಅಭಾಸವಾಗದಂತೆ ಎಚ್ಚರಿಕೆವಹಿಸುವುದು ಅಗತ್ಯ, ಯಾವುದೇ ರಂಗಭೂಮಿ ಅಥವಾ ಕಲಾ ಕ್ಷೇತ್ರದಲ್ಲಿ.

* ಜಾತೀಯತೆಯ ಲವಲೇಶ ಕಿಂಚಿತ್ತು ಇರಬಾರದು. ಅಭಿನಯ ಭಾವನೆ, ಭಾವಾಭಿವ್ಯಕ್ತಿಯಲ್ಲಿ ಹಾರ್ದಿಕತೆ ಬಹಳ ಮುಖ್ಯ ಪಾತ್ರವನ್ನು ವಹಿಸುತ್ತವೆ.

* ಜಾನಪದ ಕಲೆಗಳು ವ್ಯಾಪಾರೀಕರಣ ಗೊಂಡಾಗ ಕಲೆಯ ವಿಕಸನವಾಗದೆ ಆರ್ಥಿಕ ವಿಕಸನವಾಗುತ್ತದೆ ಆರ್ಥಿಕ ಕ್ರೂಢೀಕರಣ ಕಲೆಯ ಉದ್ದೇಶವಲ್ಲ ಕಲೆಯ ಮಹತ್ವವನ್ನು ಸಾರುವುದು ಮುಖ್ಯ ಉದ್ದೇಶವಾಗಿರಬೇಕು.

* ವರ್ತಮಾನಕಾಲದಲ್ಲಿ ಅನ್ಯಕಲಾ ಪ್ರಕಾರಗಳು ಅತೀ ವೇಗದಿಂದ ವಿಜೃಂಭಿಸುತ್ತಿರುವಾಗ ಜಾನಪದ ಕಲೆಗಳನ್ನು ಕೈಬಿಡದೆ ಸಂಕುಚಿತಕ್ಕೆ ಒಳಗಾಗದೇ ನಿಷ್ಠೆಯಿಂದ ಚಿತ್ತವನ್ನು ಕಾಯ್ದುಕೊಳ್ಳಬೇಕು.

* ಅನ್ಯ ಪಾಶ್ಚಾತ್ಯಕಲಾ ಪ್ರಕಾರಗಳ ಸುಳಿಗೆ ಸಿಲುಕದ ಜಾನಪದ ಕಲೆಗಳನ್ನು ಎತ್ತಿ ಹಿಡಿಯುವಲ್ಲಿ ಮುನ್ನುಗ್ಗಬೇಕು.

೫.೩ ದೃಶ್ಯ ಮಾಧ್ಯಮ ಮತ್ತು ಪರಿಹಾರಗಳು

ಇಂದಿನ ಜಾಗತೀಕರಣವೂ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಶವೇ ಆಗಿವೆ. ಸಂಸ್ಕೃತಿ ಎಂದರೆ ಮಾನವ ನಿರ್ಮಿತ ಅದು ತನಗಾಗಿ ತನಗೋಸ್ಕರ, ತನ್ನಿಂದ ವಿಶ್ವವನ್ನುತಲುಪಬೇಕು. ಆದ್ದರಿಂದ ಜಾಗತೀಕರಣವನ್ನು ನಾವು ಶಾಪವಾಗಿ ಪರಿಗಣಿಸದೆ ಅದರಲ್ಲಿರುವ ತಂತ್ರಜ್ಞಾನದಿಂದ ಏನೆಲ್ಲಾ ಸಾಧಿಸ ಬಹುದು. ದೇಶಿಯತೆಯನ್ನು ಕೂಡ ಉಳಿಸಿಕೊಳ್ಳಬಹುದು. ಮಾನವ ತನ್ನ ಬದುಕಿನಲ್ಲಿ ಹಂತ-ಹಂತವಾಗಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಂತೆ ಪ್ರದರ್ಶನ ಕ್ಷೇತ್ರದಲ್ಲೂ ಇತರ ಮಾಧ್ಯಮಗಳಿಗೆ ಸವಾಲಿನಂತೆ ಜನಪದ ಮಾಧ್ಯಮವನ್ನು ವಿಸ್ತರಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ಜನರಿಗೆ ಹೇಗಾದರೂ ಜನಪದ ಕಲೆಯನ್ನು ತಲುಪಿಸುವ ತುರ್ತು ಇದೆ. ನಮ್ಮ ಜನಪದರಿಗೆ ತಂತ್ರಜ್ಞಾನದ ಅರಿವೂ ಅಗತ್ಯ. ಆ ಕ್ಷೇತ್ರದಲ್ಲಿ ಆಸಕ್ತಿಯಿಂದ ದುಡಿಯುವವರನ್ನು ಗುರುತಿಸುವ ಸಂಘಟಿಸುವ ಅವಶ್ಯಕತೆ ಇಂದು ನಡೆಯಬೇಕಾಗಿದೆ.

ಇಂದು ಕೋಲಾಟ, ಯಕ್ಷಗಾನ ಬಯಲಾಟ ಇವೆಲ್ಲವೂ ಏಕರೂಪಿ ಸಂಸ್ಕೃತಿಯಲ್ಲಿ ತನ್ನ ರೂಪವನ್ನು ಬದಲಾಯಿಸಿಕೊಳ್ಳಬೇಕಿದೆ. ಸಿನಿಮಾ, ದೂರದರ್ಶನ, ವಾಹಿನಿಗಳ ಮುಂದೆ ಜನ ಕುಳಿತರೆ ಆಕರ್ಷಣೆಯ ಹಿನ್ನಡೆಯಿಂದ ಕಲೆಗಳು ನೋಡುವುದಕ್ಕೂ ಇಲ್ಲದೇ ಹೋಗುತ್ತದೆ. ಗಣಕಯಂತ್ರ, ಟ್ಯಾಬ್, ಇಮೇಲ್, ಫೇಸ್‌ಬುಕ್, ಟ್ವಿಟರ್, ಯೂಟ್ಯೂಬ್ ಇವುಗಳೊಡನೆ ಸ್ಪರ್ಧಿಸಬೇಕಾದರೆ ಜನರೆಲ್ಲ ನೋಡುವಂತಾಗಬೇಕಾದರೆ ಜನಪದ ಪ್ರದರ್ಶನಾತ್ಮಕ ಕಲೆ ದೃಶ್ಯಮಾದ್ಯಮದಲ್ಲಿ ಸೆರೆ ಹಿಡಿಯುವುದು ಒಂದು ಸವಾಲೆ ಸರಿ. ಜಗತ್ತು ಇಂದು ನಾಗಲೋಟದಲ್ಲಿ ಓಡುತ್ತಿದೆ. ಓಡುವ ವೇಗಕ್ಕೆ ಸರಿಯಾಗಿ ಅವನಲ್ಲಿ ಸಮಯದ ಅಭಾವವಿದೆ, ಹಾಗಾಗಿ ಟಿವಿಯಲ್ಲಿ ಜನಪದ ಕಲೆಗಳನ್ನು ತೋರಿಸುವುದಾದರೆ ಕಡಿಮೆ ಅವಧಿಯಲ್ಲಿ ಕಾಲಮಿತಿಯೊಂದಿಗೆ ತೋರಿಸುವ ಸವಾಲನ್ನು ಮಾಧ್ಯಮದವರು ಎದುರಿಸಬೇಕಾಗಿದೆ. ರೆವೆನ್ಯೂ ಬರುತ್ತೆ ಬಂದರೆ ತಾನೇ ವಾಹಿನಿಗಳು ಉಳಿಯಲು ಸಾಧ್ಯ. ಇದು ಒಂದು ವಾಸ್ತವವಾದರೆ, ಇದರಾಚೆ ಇನ್ನೊಂದು ಮುಖವಿದೆ. ಇಂದು ಕಳೆದುಹೋದ ಮಾಸಿ ಹೋದ ಜನಪದಕಲೆಗಳನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸಿ. ಅದನ್ನು ಕರ್ನಾಟಕದಾದ್ಯಂತ ನೋಡುವಂತೆ ಮಾಡುವುದು ಸುಲಭದ ಮಾತಲ್ಲ ಅದೊಂದು ಸವಾಲೇ ಸರಿ. ದೃಶ್ಯಮಾದ್ಯಮದಲ್ಲಿ ಅಳವಡಿಸಬೇಕಾದರೆ ಕಲೆಗಳ ಚಿತ್ರೀಕರಣ ಮಾಡಬೇಕು.

ಇಂದಿನ ಪೀಳಿಗೆಗೆ ಜನಪದ ಕಲೆಗಳ ಕುರಿತು ಏನೇನು ತಿಳಿದಿರುವುದಿಲ್ಲ ಅಲ್ಲದೆ ಆಸಕ್ತಿಯು ಇರುವುದಿಲ್ಲ. ಜನಪದ ಕಲೆಗಳ ಕುರಿತು ಕಿಂಚಿತ್ತಾದರೂ ಆಸಕ್ತಿ ಇರುವಂತಹ ಅದರ ಬಗ್ಗೆ ವಿಷಯ ಜ್ಞಾನ ಗೊತ್ತಿರುವಂತಹ ನಿರ್ದೇಶಕರಿರಬೇಕು. ಅಥವಾ ಗೊತ್ತಿಲ್ಲದಿದ್ದರು ಅದರ ಬಗ್ಗೆ ಓದಿ, ತಿಳಿದು, ಕಲಾವಿದರನ್ನು ಭೇಟಿ ಮಾಡಿ ಅದನ್ನು

ತಿಳಿದ ಮೇಲೆ ಚಿತ್ರೀಕರಣ ಮಾಡುವ ಮನೋಭಾವದಿಂದ ನಿರ್ದೇಶಕ/ನಿರ್ದೇಶಕಿ ಇರಬೇಕು. ಕಲೆ ಯಾವುದೇ ಇರಲಿ ಕಲೆಯ ಬಗೆ ಒಲವು ಇರುವ ಕ್ಯಾಮರಮನ್ ಇದ್ದರೆ ಉತ್ತಮ. ಕಲೆಗೆ ಭಂಗ ಬಾರದಂತೆ ವಿಷಯ ಜ್ಞಾನ ಹೊಂದಿ ಸಂಪೂರ್ಣವಾಗಿ ಚಿತ್ರೀಕರಿಸುವ ತಾಳ್ಮೆಯಿಂದಿರುವ ಅದರ ಹಿನ್ನಲೆಯಾಗಿ ಯಾವ ಯಾವ ದೃಶ್ಯ ಚಿತ್ರೀಕರಿಸಬೇಕು ಎಂದು ಸ್ವಯಂ ತೀರ್ಮಾನ ತೆಗೆದುಕೊಳ್ಳುವ ಛಾಯಾಗ್ರಾಹಕನಿರಬೆಕು.

ದೃಶ್ಯಮಾಧ್ಯಮದಲ್ಲಿ ನಿರ್ದೇಶಕನ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ ವಿಶ್ವವಿದ್ಯಾನಿಲಯಗಳು, ಸಂಘ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಸಾಕ್ಷ್ಯಚಿತ್ರವನ್ನು ಚಿತ್ರೀಕರಿಸಿ ಮುಂದಿನವರಿಗಾಗಿ ಇಡುತ್ತಾರೆ. ಅಂಥ ಸಂದರ್ಭದಲ್ಲಿ ಚಿತ್ರೀಕರಣ ಮಾಡುವ ಶೈಲಿ ಬೇರೆಯದ್ದಾಗಿರುತ್ತದೆ. ಖಾಸಗಿ ವಾಹಿನಿಯ ಮುಖಾಂತರ ಬಿತ್ತರಿಸಬೇಕಾದ ಪ್ರಸಂಗದಲ್ಲಿ ಕಲೆ, ಕಲಾವಿದನ ಬದುಕು, ಪ್ರಶಸ್ತಿ ಸನ್ಮಾನ, ಇವುಗಳೆಲ್ಲವನ್ನೂ ಜನ ಕೂತು ೧/೨ ಗಂಟೆಯ ಕಾರ್ಯಕ್ರಮ ವೀಕ್ಷಿಸುವಂತೆ ಮಾಡುವಲ್ಲಿ ನಿರ್ದೇಶಕನು ತನ್ನ ಬುದ್ಧಿಯನ್ನು ಖರ್ಚು ಮಾಡಲೆ ಬೇಕಾಗುತ್ತದೆ. ಈ ಕಾರ್ಯಕ್ರಮದ ಮಧ್ಯದಲ್ಲಿ ನಿರೂಪಕ/ನಿರೂಪಕಿ ಬರುವಂತೆ ಮಾಡಿ ಕಲೆಯ ಬಗ್ಗೆ ಒಂದಿಷ್ಟು ಮಾಹಿತಿ ನೀಡಿ ನಂತರ ಹಿನ್ನಲೆ ನಿರೂಪಣೆಯಿಂದ ಕಲೆಯ ಬಗ್ಗೆ ಇನ್ನಷ್ಟು ಮಾಹಿತಿಯನ್ನು ನೀಡುತ್ತಾ ನಿಜವಾದ ಕಲಾವಿದನ್ನು ಅಲ್ಲಲ್ಲಿ ತೋರಿಸುತ್ತಾ, ಕಾರ್ಯಕ್ರಮ ರಂಜನೀಯವಾಗಿ ಮಾಡಿ ಜನ ನೋಡಿ ನಮ್ಮೂರಿನ ಕಲೆಯೆಂದು ಸಂಭ್ರಮಿಸುವಂತೆ ಮಾಡುವ ಕಲೆ ನಿರೂಪಣಾ ಶೈಲಿಯಿಂದ ಮಾತ್ರ ತರಲು ಸಾಧ್ಯ. ಹಾಗಾಗಿ ಜನಪದ ಕಲೆಯ ಯಾವುದೇ ವಸ್ತು ವಿಷಯವಾಗಿರಬಹುದು ಆಯಾ ಸಂದರ್ಭನುಸಾರವಾಗಿ ಟ್ರೆಂಡ್ ಬದಲಾಯಿಸಬೇಕಾಗುತ್ತದೆ. ನಿರ್ದೇಶಕನ ಪರಿಕಲ್ಪನೆಗೆ ಅನುಸಾರವಾಗಿ ಕಾಯಕ್ರಮ ಸಿದ್ದವಾಗುತ್ತದೆ.=

೫.೩.೧ ಜೀವನಶೈಲಿ

ಜನಪದ ಒಂದು ಕಲೆಯನ್ನು ಚಿತ್ರೀಕರಿಸುವಾಗ ಕಲಾವಿದರ ನಿಜವಾದ ಜೀವನಶೈಲಿಯನ್ನೆ ತೋರಿಸಬೇಕು. ಇಂದಿನ ಆಧುನಿಕತೆಯ ಅಬ್ಬರದಲ್ಲಿ ಹಳ್ಳಿಗರು ಕೂಡ ನಗರವಾಸಿಗಳಂತೆ ಆಗಿರುತ್ತಾರೆ. ಅವರಗೆ ಚಿತ್ರೀಕರಿಸುವ ವಿಷಯ ತಿಳಿಸಿ ಆ ಕಾಲದಂತೆ ವಸ್ತ್ರವಿನ್ಯಾಸ ಮಾಡಿಸಿ, ನಮಗೆ ಬೇಕಾದಂತೆಯೇ ಚಿತ್ರೀಕರಿಸಬೇಕು. ಹಬ್ಬ ಹರಿದಿನಗಳ ಜಾತ್ರೆ-ಉತ್ಸವಗಳನ್ನು ಇನ್ನೊಮ್ಮೆ ಚಿತ್ರೀಕರಿಸಲು ಸಾಧ್ಯವಾಗುವುದಿಲ್ಲ. ಅಲ್ಲಿ ರೀಟೇಕ್ ಶಾಟ್ಸ್‌ಗಳು ಇರುವುದಿಲ್ಲ. ಸಮಷ್ಟಿಯ ಹಿತದೃಷ್ಟಿಯಿಂದ ಒಳ್ಳೆಯ ಕಾರ್ಯ ನಡೆಯುವಾಗ ಪರಂಪರೆಯಿಂದ ಬಂದ ಸಂಪ್ರದಾಯವನ್ನು ಪುನಃ ಪುನರಾವರ್ತನೆ ಮಾಡಿ ಚಿತ್ರೀಕರಿಸಲು ಜನಪದರು ಒಪ್ಪುವುದಿಲ್ಲ. ಹಾಗಾಗಿ ಚಿತ್ರೀಕರಣ ಮಾಡುವಾಗ ಅವರ ಎಂದಿನ ಜೀವನ ಶೈಲಿಯಿಂದಲೇ ಚಿತ್ರಿಸಿ ಮುಂದಿನ ಪೀಳಿಗೆಗೆ ರವಾನಿಸುವ

ಜವಾಬ್ದಾರಿ ನಿರ್ದೇಶಕ ಮತ್ತು ಕ್ಯಾಮರಾಮನ್ ಮೇಲಿರುತ್ತದೆ. ಆರಾಧನಾತ್ಮಕ ಕಲೆಗಳಲ್ಲಿ ಕಲಾವಿದರ ಮನವೊಲಿಕೆ ನಿಜಕ್ಕೂ ಸವಾಲೆ ಸರಿ.

೫.೩.೨ ಏಕತೆ ಕಾಯ್ದುಕೊಳ್ಳುವಿಕೆ

ಜನಪದ ಕಲಾವಿದರು ಇಂದು ಕಾಲಕ್ಕೆ ತಕ್ಕ ಬದಲಾವಣೆಯಂತೆ ತಮ್ಮ ವಸ್ತ್ರವನ್ನು ವಿನ್ಯಾಸಗಳಿಸಿಕೊಳ್ಳಬೇಕು. ರಂಗುರಂಗಿನ ಪೋಷಾಕುಕ್ಯಾಮರದಲ್ಲಿ ಚೆನ್ನಾಗಿ ಕಾಣುತ್ತದೆ ಮತ್ತು ನರ್ತನ ಗತಿಯನು ಒಂದೇ ರೀತಿ ಬರುವಂತೆ ಎಲ್ಲರೂ ಮುಂಚಿತವಾಗಿಯೇ ತರಬೇತಿ ಪಡೆದಿರಬೇಕು. ಸಾಧಾರಣವಾಗಿ ಜನಪದ ಕಲೆಗಳೆಲ್ಲಿ ಹತ್ತರಿಂದ ಹದಿನೈದು ಜನರಿರುತ್ತಾರೆ. ಎಲ್ಲರ ಕುಟುಂಬಗಳಲ್ಲೂ ಒಂದಲ್ಲ ಒಂದು ಸಮಸ್ಯೆ ಇರುತ್ತದೆ ಕಲಾವಿದರು ತಮ್ಮೆಲ್ಲಾ ನೋವುಗಳನ್ನು ಮರೆತು ಎಲ್ಲರೂ ಒಂದೆಡೆ ಸೇರಿ ಕಲೆತು. ಲಯಗತಿಯನ್ನು ಅರಿತು ನರ್ತಿಸಿದಾಗ ನೋಡುಗರು ಆಕರ್ಷಣೆಗೆ ಒಳಗಾಗುವರು.

೫.೩.೩ ಕಾಲಮಿತಿ

ಪ್ರಸ್ತುತ ಸಂದರ್ಭದಲ್ಲಿ ಮನುಷ್ಯ ಸಮಯವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುತ್ತಾ ಜನಪದ ಕಲೆಗಳಿಗೆ ಕಾಲಮಿತಿ ಕೊಡಬೇಕು. ನಿರಕ್ಷರಕುಕ್ಷಿಗಳಾದ ನಮ್ಮ ಜನಪದರು ಒಂದೆರಡು ಹಗಲು ಒಂದೆರಡು ರಾತ್ರಿ ಹಾಡಿದರೂ ಮುಗಿಯದ ಜ್ಞಾನ ಭಂಡಾರವನ್ನು ಹೊಂದಿದ್ದಾರೆ. ಅಂಥವರಿಂದ ನಮಗೆ ಬೇಕೆನ್ನಿಸಿದ ಕೆಲವೇ ಪದಗಳನ್ನು ಸಿಮೀತಗೊಳಿಸಿ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ರಾತ್ರಿಯಿಂದ ಬೆಳಗಿನ ತನಕ ಆಡುತ್ತಿದ್ದ ಯಕ್ಷಗಾನ ಇಂದು ಒಂದರಿಂದ ಒಂದೂವರೆ ಘಂಟೆಗೆ ಸೀಮೀತಗಗಳಿಸಿಕೊಂಡಿದೆ. ಅಲ್ಲದೇ ಹೆಚ್ಚು ಜನಮನ್ನಣೆಗೆ ಪಾತ್ರವಾಗಿದೆ. ನಮ್ಮ ಜನಪದ ಕಲೆಗಳು ಕೂಡ ಸಂದರ್ಭಕ್ಕನುಸಾರವಾಗಿ ಮಿತಿಗೆ ಒಳಪಟ್ಟರೆ ಅವಕಾಶಗಳು ಜಾಸ್ತಿ ಸಿಗುವ ಸಾದ್ಯತೆಗಳು ಹೆಚ್ಚು. ದೃಶ್ಯ ಮಾಧ್ಯಮದ ಅಳವಡಿಕೆಯಲ್ಲಿ ಮಾಧ್ಯಮದವರಿಗೆ ಜನಪದ ಕಲೆಗಳು ಕಾಲಮಿತಿ ಅನ್ವಯ ಸಿಕ್ಕರೆ ನಾಡು–ನುಡಿ ಸಂಸ್ಕೃತಿ–ಕಲೆ ಎಂದು ಬಂದಾಗ ಸುದ್ದಿವಾಹಿನಿಗಳಲ್ಲಿ ಜನಪಧ ಕಾರ್ಯಕ್ರಮಗಳನ್ನು ಕೇವಲ ೮ ರಿಂದ ೧೦ ನಿಮಿಷ ಕಾಲಾವಧಿಯಲ್ಲೂ ಕೂಡ ನೀಡಬಹುದು. ಜನರಿಗೆ ಒಂದು ಕಲೆಯ ಪರಿಚಯವಾದರೂ ಆಗುತ್ತದೆ. ಆಧುನಿಕ ತಂತ್ರಜ್ಞಾನ ಬೆಳವಣಿಗೆ ಹೊಂದುತ್ತಾ ಮನುಷ್ಯ ಶ್ರಮವನ್ನು ಯಂತ್ರ ಶಕ್ತಿಯ ಮೂಲಕ ದೂರಮಾಡುತ್ತಿದೆ. ನಮ್ಮ ಬಹುತೇಕ ಜಾನಪದ ಕಲೆಗಳು ನಿತ್ಯದ ಕಾಯಕದ ಲಯದ ಜೊತೆಗೆ ಹುಟ್ಟಿಕೊಂಡವುಗಳಾದ್ದರಿಂದ, ಯಾಂತ್ರಿಕಶಕ್ತಿ, ಮಾಹಿತಿ ತಂತ್ರಜ್ಞಾನ ನಮ್ಮ ಬದುಕನ್ನು ವ್ಯಾಪಿಸಿಕೊಂಡಂತೆಲ್ಲಾ ಮನುಷ್ಯ ಶ್ರಮದಿಂದ ಹುಟ್ಟುವ ಜೀವನ ಸಹಜ ಲಯವು ಮಾಯವಾಗಿ ಮನುಕುಲವನ್ನು ಏಕತಾನತೆ ಬಾಧಿಸುತ್ತಿದೆ.

ಇದು ದೃಶ್ಯ-ಶ್ರವ್ಯ-ಮುದ್ರಣ ಹಾಗೂ ಎಲೆಕ್ಟ್ರಾನಿಕ್ಸ್ ಮಾಧ್ಯಮಗಳಲ್ಲಿ ಪ್ರಕಟವಾಗುವ ಜಾಹಿರಾತು ಭಾಷೆಯು ಬಳಕೆದಾರರನ್ನು ಚೆನ್ನಾಗಿ ನಂಬಿಸುತ್ತದೆ ಹಾಗೂ ಆಧುನಿಕ ಮೌಢ್ಯತೆಯನ್ನು ಬಿತ್ತುತ್ತದೆ. ಈ ಆಧುನಿಕ ಸಂಕೇತಗಳು ಮಾತ್ರ ಆತ್ಮರಕ್ಷಕಗಳಾಗಿ ತಮ್ಮ ಶಕ್ತಿ ಚೈತನ್ಯ, ಆರೋಗ್ಯ ಸೌಂದರ್ಯ, ನಾಗರೀಕತೆ, ಸಂಸ್ಕೃತಿ ಎಲ್ಲವನ್ನೂ ರಕ್ಷಿಸಬಲ್ಲವೆಂದು ಸಾರ್ವಜನಿಕ ಸ್ವೀಕೃತಿ ಮತ್ತು ಒಪ್ಪಿಗೆಯ ಮುದ್ರೆ ಒತ್ತಿಬಿಡುತ್ತಾರೆ. ಜಾಹಿರಾತು ಭಾಷೆಯಲ್ಲಿ ಆಧುನಿಕ ಮೂಢಮತಿಗಳನ್ನು ಸೃಷ್ಟಿಸುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಸಾರ್ವಜನಿಕ ವಿಶ್ವಾಸ ಭಾವನೆ ಮತ್ತು ಒಪ್ಪಿಗೆಯನ್ನು ಪಡೆದುಕೊಳ್ಳಲು ಕ್ರಿಕೆಟ್ ತಾರೆಯರು, ಸಿನಿಮಾ ತಾರೆಯರು ಮುಂತಾದ ಸೆಲಿಬ್ರಿಟಿಗಳನ್ನು ಜಾಹಿರಾತು ಭಾಷೆಯ ಬೀಜಾಕ್ಷರಗಳ ಬಿತ್ತನೆ ಮಾಡಿಸುತ್ತಿದೆ. ತಂಪು ಪಾನಿಯಾದ ಜಾಹೀರಾತೊಂದು ಸಿನಿಮಾ ತಾರೆಯರನ್ನು ಬಳಸಿಕೊಂಡು ಕಬ್ಬಿನ ಹಾಲಿಗಿಂತಲೂ, ಎಳನೀರಿಗಿಂತಲೂ ಕೋಕೋ ಕೋಲವೇ ಮಿಗಿಲಾದುದೆಂದು ನಂಬಿಸುತ್ತದೆ. ಅಲ್ಲದೇ ಬಾಯಾರಿಕೆ ತಣಿಸಿಕೊಂಡು ಚೈತನ್ಯ ಪಡೆದುಕೊಳ್ಳಲು ಜಾಗತಿಕ ಕೋಕೋ ಉತ್ತಮ ಎಂದು ನಂಬಿಸುತ್ತವೆ. ಈ ನಂಬಿಕೆಯಿಂದ ಸ್ಥಳೀಯ ಶ್ರಮ ಸಂಸ್ಕೃತಿಯ ಉತ್ಪನ್ನಗಳು ನಿರಾಕರಣೆಗೆ ಒಳಪಡುತ್ತವೆ. ಅಲ್ಲದೇ ದೇಶಿ ಪದ್ಧತಿಗಳೆಲ್ಲವೂ ಕೀಳ್ತನವೆಂಬ ಭಾವನೆ ಅಥವಾ ಕೇವಲ ಎಂಬ ಭಾವನೆ ಬರುವಂತೆ ಮಾಡುತ್ತದೆ. ಹೀಗಾಗಲು ಕಾರಣ ದೃಶ್ಯ ಶ್ರವಣದಿಂದ ಕೂಡಿದ ದೃಶ್ಯ ಮಾಧ್ಯಮ ಒಂದು ಪ್ರಬಲವಾದ ಕಾರಣ. ಈ ರೀತಿಯ ಜಾಹೀರಾತುಗಳು ಕೂಡ ರೈತಾಪಿಗಳ ಪರಿಭಾಷೆ ಮತ್ತು ಸಂಕೇತಗಳಲ್ಲಿಯೇ ವ್ಯವಹರಿಸುತ್ತದೆ. ಅಂದರೆ ಮಾರುಕಟ್ಟೆಯ ಭಾಷೆಯನ್ನು ಪ್ರಯೋಗಿಸುವವರು ದುಡಿಯುವ ಜನರ ಎಚ್ಚರ ತಪ್ಪಿಸುವ ಅರವಳಿಕೆಯ ಜ್ಞಾನವನು ತಮ್ಮ ಕೈವಶದಲ್ಲಿರಿಸಿಕೊಂಡಿರುತ್ತಾರೆ, ಜಾಗತೀಕರಣವೆಂಬುದು ಚಿನ್ನದ ಕತ್ತಿ ಜಳಪಿಸಿ ಎರಗುತ್ತಿರುವ ಮೋಹ ಮಾಯಾಂಗನೆ. ಈ ಮಾಯೆಯಿಂದ ಹೊರಬರಲು ಸಾಧ್ಯವಿಲ್ಲ. ಆದರೆ ಆ ಮಾಯಾಜಾಲವನ್ನು ಭೇದಿಸುವ ಪ್ರತಿಮಾಂತ್ರಿಕ ವಿದ್ಯೆಗಳನ್ನು ಪ್ರಯೋಗಿಸುವ ದಿಕ್ಕಿನಲ್ಲಿ ಆಲೋಚಿಸಬೇಕಿದೆ.

ಭಾರತದಲ್ಲಿ ಸುಮಾರು ೫೦೦೦ಕ್ಕೂ ಹೆಚ್ಚು ಜನಪದ ಕಲೆಗಳಿವೆಯೆಂದು ಒಂದು ಅಂದಾಜಿದೆ. ವೈಜ್ಞಾನಿಕ ಯುಗದ ಸಿನಿಮಾ ದೂರದರ್ಶನ ಮುಂತಾದ ಮಾಧ್ಯಮಗಳು ಹೆಚ್ಚು ಕಡಿಮೆ ದೇಶಿಯತೆ ಹೊಂದಿರುವ ನಮ್ಮ ಕಲೆಗಳನ್ನು ಅನಾದರ ಮಾಡುವಂತಿಲ್ಲ. ಈ ಅಪೂರ್ವ ಕಲೆಗಳನ್ನು ತಮ್ಮ ಗರ್ಭದಲ್ಲಿರಿಸಿಕೊಂಡು ಅಂತರ್ಧಾನವಾಗಿರುವ ಜನಪದರ ಪೀಳಿಗೆ ಮರೆಯಾಗುವುದರ ಜೊತೆಗೆ, ವಯಸ್ಸಾಗಿ ಇನ್ನೂ ಜೀವ ಹಿಡಿದಿರುವ ವೃದ್ಧ ಕಲಾವಿದರು ಜೀವ ತೊರೆಯುವುದರೊಳಗೆ ಇವುಗಳನ್ನು ರಕ್ಷಿಸಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ. ಇವೆಲ್ಲವುಗಳ ಅಳಿವು ನಮ್ಮ ಮೂಲ ಸಂಸ್ಕೃತಿಯ ಅಪೂರ್ವ ದಾಖಲೆ ಎಂಬುದನ್ನು ನಾವು ಮರೆಯುವಂತಿಲ್ಲ. ವಿಡೀಯೋ, ಸಾಕ್ಷ್ಯಚಿತ್ರ, ಸ್ಥಿರಚಿತ್ರಗಳ

ಮೂಲಕ ಈ ಕಲೆಗಳನ್ನು ಸೆರೆಹಿಡಿದು ಸಂರಕ್ಷಿಸಬೇಕು. ಈ ಕಾರ್ಯವು ಯಾವೊಬ್ಬ ವ್ಯಕ್ತಿಯಿಂದ ಆಗುವಂಥದಲ್ಲ. ಏಕೆಂದರೆ ಕಲೆಗಳನ್ನು ಸಂರಕ್ಷಿಸಿಡಬೇಕಾದರೆ ಇದಕ್ಕೆ ಸರ್ಕಾರದ ಸಂಘ ಸಂಸ್ಥೆಗಳು, ಅಕಾಡೆಮಿಗಳು, ಪರಿಷತ್ತುಗಳಿಂದ ಸಾಧ್ಯ. ಕಾರಣ ಚಿತ್ರೀಕರಣ ಮಾಡಲು ಸಾಕಷ್ಟು ಖರ್ಚು ವೆಚ್ಚಗಳು ಬರುತ್ತವೆ. ಅದನ್ನು ಭರಿಸುವುದು ಸರ್ಕಾರಿ ಸ್ವಾಮ್ಯದ ಸಂಘ ಸಂಸ್ಥೆಗಳಿಂದ ಮಾತ್ರ ಸಾಧ್ಯ. ಅವೆಲ್ಲವನ್ನು ಮೂಲರೂಪಕ್ಕೆ ಧಕ್ಕೆ ತರದೆ ಚಿತ್ರೀಕರಿಸಿ ಇಡುವುದು ಕೂಡ ದೊಡ್ಡ ಸವಾಲೆ, ಇದರೊಂದಿಗೆ ನಮ್ಮ ಜನಪದ ಕಲೆಗಳನ್ನು ಜನಜೀವನದ ಜೊತೆ ನಿಕಟ ಸಂಬಂಧ ಕಲ್ಪಿಸಿಕೊಡುವಂತೆ ಮಾರ್ಪಾಡಿಸಬೇಕಿದೆ. ರಾಷ್ಟ್ರಪ್ರೇಮ ಇತಿಹಾಸ ಪ್ರೇಮ, ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮಗಳನ್ನು ಜನಪದ ಕಲೆಗಳ ಮಾಧ್ಯಮದ ಮೂಲಕ ಅತ್ಯಂತ ಆಕರ್ಷಕವಾಗಿ ಜನಮನಸ್ಸಿಗೆ ಮುಟ್ಟುವಂತಹ ಕಾರ್ಯಕ್ರಮಗಳನ್ನು ನಿಯೋಜಿಸಬೇಕಿದೆ. ಇದಕ್ಕಾಗಿ ಕಲಾವಿದರ ಮನವೊಲಿಸುವುದು ನಿಜಕ್ಕೂ ಕಷ್ಟಸಾಧ್ಯ. ಬದುಕಿನ ಕೆಡಕುಗಳನ್ನು ನಿವಾರಿಸುವ, ಸಹಕಾರ, ಸಮಾನತೆ, ಸಾಮಾಜಿಕ ನ್ಯಾಯ ಮುಂತಾದ ಮಾನವ ಬದುಕಿಗೆ ಉನ್ನತಿಗೆ ಕಾರಣವಾಗುವ ಪ್ರಕರಣಗಳನ್ನು ಈ ಕಲಾ ಮಾಧ್ಯಮಗಳ ಮೂಲಕ ಅತ್ಯಂತ ತೀವ್ರವಾಗಿ ಜನಮನಸ್ಸಿಗೆ ಮುಟ್ಟುವಂತಹ ಕಾರ್ಯ ಪ್ರಯೋಜಕ ಮಾರ್ಗೋಪಾಯಗಳನ್ನು ಕಂಡುಹಿಡಿಯಬೇಕಿದೆ. ಹೀಗೆ ಜನಪದ ಕಲೆಗಳ ಸಂಶೋಧನೆ, ಸಂಗ್ರಹಣೆ, ವಿಶ್ಲೇಷಣೆ ಒಂದು ಕಡೆಯಾದರೆ, ಮತ್ತೊಂದು ಕಡೆ ಅವುಗಳನ್ನು ಆಧುನಿಕ ಬಯಕೆಗೆ ಅನುಗುಣವಾಗಿ ಪರಿಷ್ಕರಿಸಿ, ಸುಧಾರಿಸಿ ಬೆಳೆಸುವುದು ಸವಾಲಿನ ಕೆಲಸ. ಹಾಗೆ ಮಾಡಿದರೆ ಮಾತ್ರ ಜನಪದ ಕಲೆಗಳ ಪರಿಣಾಮ, ನಿರಂತರವೂ ನಿತ್ಯಪ್ರೇರಕವೂ ಆನಂದದಾಯಕವೂ ಆಗುತ್ತದೆ.

ಸಮಾಜದಲ್ಲಿ ಹುಟ್ಟಿದ ಪ್ರತಿಯೊಬ್ಬ ವ್ಯಕ್ತಿ ತನ್ನಪರಂಪರೆಯ ತೊರೆಯನ್ನು ಈಜುತ್ತಲೇ ಸಂಸ್ಕೃತಿಯ ಜ್ಞಾನದ ನೆಲೆಗಳಿಗೆ ತನ್ನದೇ ಬಗೆಯ ಕಾಣಿಕೆ ನೀಡುವ ಹಂಬಲವನ್ನು ಕಾಣುತ್ತಾನೆ. ತನ್ನದೇ ಆದ ಗುರುತನ್ನು ಸ್ಥಾಪಿಸಲು ಇಚ್ಛಿಸುತ್ತಾನೆ. ಪರಂಪರೆ ಎಂಬ ಪದವೇ ಆಕರ್ಷಣೀಯ ಏಕೆಂದರೆ ಗತದ ವೈಭವದ ಭ್ರಾಮಕತೆಗೋ, ಗತದ ದಾರಿದ್ರ್ಯದ ಮುರುಕಕ್ಕೋ, ಕಳೆದುಹೋದ ಸುಂದರಗತದ ಹಳಹಳಿಕೆಗೂ ನಮ್ಮನ್ನು ಒಯ್ದು ಮುಟ್ಟಿಸಬಲ್ಲ ಮಹಿಮೆಯುಳ್ಳದ್ದು. ಪರಂಪರೆಯನ್ನು ಒಳಗೊಳ್ಳುವ ವಿಸ್ತರಿಸುವ ಅಥವಾ ಪರಂಪರೆಯನ್ನು ಮೀರುವ ಮುರಿದು ಕಟ್ಟುವ ಪ್ರಯತ್ನಗಳಿಗೆ ಪ್ರತಿಯೊಬ್ಬರೂ ಒಡ್ಡಿಕೊಳ್ಳುತ್ತೇವೆ. ಕವಿ ಸಾಹಿತಿಗಳಾದವರು ತಮ್ಮ ಸೃಜನಶೀಲ ಉಪಕ್ರಮಗಳ ಮೂಲಕ ಪರಂಪರೆಯ ಸಾಂಸ್ಕೃತಿಕ ನೆಲೆಗಳ ಹುಡುಕಾಟಕ್ಕೆ ಬೇಕಾದ ದಾರಿಗಳನ್ನು ಶೋಧಿಸಿಕೊಳ್ಳುತ್ತಾರೆ. ರೈತನಾದವನು ತನ್ನ ನೇಗಿಲಗುಳದ ಆಧ್ಯಾತ್ಮದಿಂದ ಹಿಡಿದು ಬಹುರಾಷ್ಟ್ರೀಯ ಕಂಪನಿಗಳ ಬೀಜರಹಿತ ತಳಿಗಳ ಉತ್ಪಾದನೆಯ ನಿರ್‌ಬೀಜಿಕರಣದ ವಿಪತ್ತಿನವರೆಗೆ ತನ್ನನ್ನು ಒಂದು ಪ್ರಯೋಗದ ಪಶುವಾಗಿ ನಿಲ್ಲುತ್ತಾನೆ.

ಸ್ಥಳೀಯ–ದೇಸಿ ನೆಲೆಗಳ ಉಳಿವು ಮತ್ತು ಹೈಟೆಕ್ ತಂತ್ರಜ್ಞಾನದ ವಿಶ್ವಗ್ರಾಮ ಪರಿಕಲ್ಪನೆಗಳ ನಡುವೆ ಸಂಘರ್ಷ ತೀವ್ರಗೊಳ್ಳುತ್ತಿರುವ ಜಾಗತೀಕರಣದ ಈ ಹೊತ್ತಿನಲ್ಲಿ ಸ್ಥಳೀಯತೆಯ ನೆಲೆಗಳೆನೆಂಬುದನ್ನು ಅರಿಯುವ ಮುನ್ನವೇ ವಿಶ್ವಗ್ರಾಮ ನಿರ್ಮಿಸುವ ಜಾಗತಿಕ ಪ್ರಕ್ರಿಯೆಗೆ ಒಡ್ಡಿಕೊಂಡು ಸ್ಥಳೀಯ ನೆಲೆಗಳನ್ನು ನಿರ್ಲಕ್ಷಿಸುತ್ತಾ ಜಾಗತೀಕಣದ ರೂವಾರಿಗಳಾಗಿ ನಿಯೋಜಿತಗೊಳ್ಳುತ್ತಿದ್ದೇವೆ. ನೆಲದ ಮೇಲೆ ಕಾಲೂರದೆ ಮುಗಿಲ ಚುಂಬಿಸುವ ಹಂಬಲ ಹೊತ್ತು ನೆಲಮುಗಿಲುಗಳ ಸಂಬಂಧ ಸೂತ್ರ ತಪ್ಪಿದ ಅಪನಡೆಯನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ವಿಶ್ವಗ್ರಾಮ ಎಂಬ ಮುಗಿಲನ್ನು ಎಟುಕಿಸಿಕೊಳ್ಳುವ ನಮ್ಮ ಪ್ರಯತ್ನಗಳಲ್ಲಿ ಸ್ಥಳೀಯ ಭೂಗೋಳ ಮತ್ತು ಅಲ್ಲಿನ ದೇಸಿ ಜ್ಞಾನ ನೆಲೆಗಳಿಗೆ ಎರವಾಗಿದ್ದೇವೆ.

ಅಧ್ಯಾಯ ಏಳು

ಉಪಸಂಹಾರ

ಸಮಾಜದಲ್ಲಿನ ಪ್ರತಿಯೊಂದು ಹಂತಗಳಲ್ಲಿಯೂ ಸಹ ಜನರ ಪಾತ್ರವು ಬಹಳ ಮುಖ್ಯವಾಗಿರುತ್ತದೆ. ಜನಪದ ಸಂಸ್ಕೃತಿಯು ಜನರಿಂದಲೇ ಹುಟ್ಟಿದ್ದಾಗಿದ್ದು, ಜನರ ನಡುವಿನಿಂದಲೇ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಹಂತ ಹಂತವಾಗಿ ಮೌಖಿಕ ರೂಪದಲ್ಲಿ ಮುಂದುವರೆಯುತ್ತಾ ಬಂದಿದೆ. ನಂತರದ ಹಂತಗಳಲ್ಲಿ ಇದನ್ನು ಶಿಷ್ಟ ಸಾಹಿತ್ಯಿಕ ರೂಪದಲ್ಲಿ ಅದನ್ನು ಸಂಗ್ರಹಿಸುವ, ಸಂಸ್ಕರಿಸುವ, ಪರಿಷ್ಕರಿಸುವ, ಸಂಪಾದನೀಯ ಕೆಲಸವು ನಡೆದಿದೆ. ಜನಪದ ಕಲೆಗಳು ಸಹ ಈ ಹಂತದಿಂದಲೇ ಬೆಳೆದು ಇಂದು ಆಧುನಿಕ ಪ್ರಕ್ರಿಯೆಗೆ ಒಳಪಡುತ್ತಿವೆ. ಆದ್ದರಿಂದಲೇ ಬಿ.ಎಂ.ಶ್ರೀಯವರ ಹೇಳುವಂತೆ ಜನವಾಣಿ ಬೇರು ಕವಿವಾಣಿ ಹೂವು ಎಂಬ ಉಲ್ಲೇಖ ಸರ್ವಕಾಲೀಕವಾಗಿ ನಮ್ಮ ಮನಸ್ಸಿನಲ್ಲಿ ನಿಲ್ಲುವಂತಾಗುತ್ತದೆ ಎಂದು ಹೇಳಬಹುದು. ಜನಪದ ಪರಂಪರೆಯು ಇಂದಿನ ನಮ್ಮ ಆಧುನಿಕ ಜೀವನದ ಎಲ್ಲಾ ಪ್ರಕ್ರಿಯೆಗಳಿಗೂ ಮೂಲ ನೆಲೆ ಹಾಗೂ ಸೆಲೆಯಾಗಿದೆ.

ಆಧುನಿಕ ಕಾಲದಲ್ಲಿ ಆಧುನೀಕರಣದ ಪ್ರಭಾವದಲ್ಲಿ ಬದುಕುತ್ತಿರುವ ನಾವು ಇಂದಿನ ನಮ್ಮ ಈ ಸ್ಥಿತಿಗತಿಗೆ ಮೂಲ ನೆಲೆಯಾಗಿ ಜನಪದರ ಹಿಂದಿನ ಜನಜೀವನವನ್ನು ಅವರ ಕೊಡುಗೆಯನ್ನು ಮರೆಯಬಾರದು. ಜನಪದವು ಶುಷ್ಕ ಜನರ ಒಡನಾಡಿಯಾಗಿ ಜನರ ಒಳಗಿನಿಂದ ಅವರ ನೋವು-ನಲಿವು, ಹಸಿವು, ಕರುಣೆ, ದುಡಿಮೆ ಮುಂತಾದ ಪ್ರತಿಯೊಂದು ಹಂತಗಳಲ್ಲಿಯೂ ಅವರಿಂದಲೇ ಬೆಳೆದುಬಂದಿರುವುದು. ತಮ್ಮ ನೋವು-ನಲಿವನ್ನು ಮರೆಯಲು, ತಮ್ಮ ದುಡಿಮೆಯ ಕಾಲಕ್ಕೆ ತಮ್ಮ ಆಯಾಸವನ್ನು ನೀಗಿಸಿಕೊಳ್ಳಲು,

ತಮ್ಮ ದಿನನಿತ್ಯದ ಕೆಲಸ ಕಾರ್ಯಗಳನ್ನು ಮಾಡುವಂತಹ ಸಂದರ್ಭಗಳಲ್ಲಿ ಈ ರೀತಿಯಾದಂತಹ ಹಾಡು, ನೃತ್ಯ, ಕುಣಿತ, ಮುಂತಾದ ಹಲವಾರು ಪ್ರಕಾರಗಳ ಮೂಲಕ ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸುವ ಸಾಧನವಾಗಿ ಬಳಸಿಕೊಂಡಿದ್ದರು. ಅದನ್ನೇ ತಮ್ಮ ಮುಂದಿನ ಪೀಳಿಗೆಯವರಿಗೆ ಮೌಖಿಕ ಪರಂಪರೆಯ ಮೂಲಕವಾಗಿ ಉಳಿಸುವ ಅದನ್ನು ಬೆಳೆಸುವ ಒಂದು ಸಮಾಜದ ಸಾಂಸ್ಕೃತಿಕ ಜನರ ಜೀವನವನ್ನು ಉಳಿಸುವ ಹಾಗೆಯೇ ಬೆಳೆಸುವ ನಿಟ್ಟಿನಲ್ಲಿ ಜನಪದವನ್ನು ಅವರ ಕಲೆ, ನಂಬಿಕೆ, ಆಚರಣೆಗಳನ್ನು ಅರಿಯುವ ಅಗತ್ಯ ಇಂದು ನಮಗೆ ಪ್ರಸ್ತುತವೆನಿಸುತ್ತದೆ. ಮೌಖಿಕತೆ ಎನ್ನುವುದನ್ನು ಸಾಮುದಾಯಿಕ ಸಂವೇದನೆಯ ತತ್ವವನ್ನಾಗಿಯೇ ಗ್ರಹಿಸಬೇಕು. ಬಾಯಿಂದ ಬಾಯಿಗೆ ಸಾಗುವುದಷ್ಟೇ ಅಲ್ಲ, ಸಮುದಾಯದ ಅರಿವಿನ, ಸಂವೇದನೆಯ ಅಂಗವಾಗುವುದು ಮೌಖಿಕತೆಯ ಲಕ್ಷಣ.

ಈ ಜನಪದರ ಸಾಮುದಾಯಿಕ ಸಂಘಟಿತ ಶಕ್ತಿಯನ್ನು ಇಂದಿನ ಆಧುನಿಕ ಜಾಗತೀಕರಣವು ಒಡೆಯುವ ಆ ಮೂಲಕ ತನ್ನ ಪ್ರಭಾವ ಮತ್ತು ಪರಿಣಾಮವನ್ನು ಬೀರುವ ಪ್ರಯತ್ನ ಮಾಡಿದೆ. ಜನಪದರು ಇಂದಿನ ಆಧುನೀಕರಣದ ಪರಿಣಾಮಕ್ಕೆ ಸಿಲುಕಿ ಅನೇಕ ತೊಂದರೆಗಳನ್ನು ಅನುಭವಿಸುವಂತಾಗಿದೆ. ಅಲ್ಲದೇ ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದಾಗಿ ಜನಪದ ಕಲೆಗಳನ್ನು ಕಡೆಗಣಿಸುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಜನಪದ ಕಲೆಗಳು ಇಂದಿನ ಆಧುನಿಕ ಸಂದರ್ಭದಲ್ಲಿ ತಮ್ಮ ಮೂಲಭೂತ ಆಚರಣೆಯ ನೆಲೆಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಂಡುಕೊಂಡು ಬೆಳೆಯುತ್ತಿವೆ. ಇಂತಹ ಸಂದರ್ಭದಲ್ಲಿ ಜನಪದ ಕಲೆಗಳನ್ನು ದೃಶ್ಯ ಮಾಧ್ಯಮಗಳು ಬದಲಾಗುತ್ತಿರುವ ಜನರ ಸಾಂಸ್ಕೃತಿಕ ಅಭಿರುಚಿಗೆ ತಕ್ಕಂತೆ ಪರಿಚಯಿಸುವ ಕೆಲಸವನನು ಸಹ ಮಾಡುತ್ತಿವೆ. ಭಾಷಿಕವಾಗಿ ಜನಪದ ಪರಂಪರೆಯೇ ಎಲ್ಲಾ ಸಂಸ್ಕೃತಿಗಳ ಮೂಲವಾಗಿ ನಿಂತಿದೆ. ಶಿಷ್ಟ ಸಾಹಿತ್ಯ ಪರಂಪರೆ ಬೆಳೆದುಬರುವುದಕ್ಕೂ ಮುಂಚೆಯೇ ಜನಪದ ಸಾಹಿತ್ಯವು ಹುಟ್ಟಿದ್ದರಿಂದ ಹಾಗೆಯೇ ದುಡಿಮೆಯೇ ಅವರ ಜೀವಾಳವಾಗಿದ್ದರಿಂದ ದುಡಿಮೆಯ ಸಂದರ್ಭದಲ್ಲಿ ಲಯಕ್ಕನುಸಾರವಾಗಿ ಈ ಜನಪದ ಕಲೆಗಳು ರಚನೆಗೊಂಡಿವೆ.

ಜನಪದ ಕಲೆಗಳು ಜನರ ಪದಗಳೊಂದಿಗೆ ಬೆಳೆದುಕೊಂಡು ಬಂದಿವೆ. ಅದರಲ್ಲೂ ತಮ್ಮ ದುಡಿಮೆಯ ಕಷ್ಟ–ಸುಖಗಳ ನೋವು–ನಲಿವುಗಳ ಸಂದರ್ಭದಲ್ಲಿ ತಮ್ಮ ಒಳಗಿನ ಭಾವನೆಗಳನ್ನು ತಮ್ಮ ಹಾಡು, ಕುಣಿತ, ಗಾದೆ, ಒಗಟು, ಡೊಳ್ಳು ಕುಣಿತ, ಸುಗ್ಗಿ ಹಾಡು, ಲಾವಣಿಗಳು, ತೊಗಲು ಗೊಂಬೆ ಯಾಟ ಮುಂತಾದ ಹಲವಾರು ಜನಪದ ಪ್ರಕಾರಗಳನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಈ ರೀತಿಯ ಜನಪದರು ತಮ್ಮ ರಚನೆಯಲ್ಲಿ ನೈಸರ್ಗಿಕವಾದ ಅಂಶಗಳಿಗೆ ಹೆಚ್ಚಿನ ಒತ್ತನ್ನು ನೀಡಿರುವುದನ್ನು ಮುಖ್ಯವಾಗಿ ಗಮನಿಸಬಹುದು. ತಮ್ಮ ಕಲೆಗಳನ್ನು ಪ್ರಕೃತಿಯ ಆರಾಧನೆಯನ್ನು ಮಾಡಲು, ದೈವವನ್ನು

ಒಲಿಸಿಕೊಳ್ಳಲು, ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿಕೊಳ್ಳಲು ತಮ್ಮ ಕಲೆಗಳನ್ನು ಈ ರೀತಿಯಾದಂತಹ ನೈಸರ್ಗಿಕವಾಗಿ ಅಂಶಗಳ ಕಡೆಗೆ ಹೆಚ್ಚಿನ ಒತ್ತನ್ನು ನೀಡಿರುವುದನ್ನು ಗಮನಿಸಬಹುದು. ಈ ರೀತಿಯ ದೈವತ್ವದ ರೂಪುರೇಷೆ ಯನ್ನು ಪಡೆದಂತಹ ಜನಪದ ಕಲೆಗಳು ಇಂದಿನ ಸಂದರ್ಭದಲ್ಲಿ ಅದು ತನ್ನ ಬದಲಾವಣೆಯನ್ನು ಪಡೆದುಕೊಂಡು ಜನಪದ ಕಲೆಗಳು ಪ್ರದರ್ಶನಾತ್ಮಕ ರೂಪವನ್ನು ಪಡೆದಿವೆ. ಜನರ ಜೀವನದ ಭಾಗವಾಗಿ ಮನುಷ್ಯರ ನಂಬಿಕೆ, ಆಚರಣೆ, ಸಂಪ್ರದಾಯ, ಸಂಸ್ಕೃತಿಯ ಭಾಗವಾಗಿ ಈ ಕಲೆಗಳು ಬೆಳೆದುಬಂದಿವೆ.

ಜಾಗತೀಕರಣದ ಈ ಸಂಕ್ರಮಣ ಕಾಲದಲ್ಲಿ ಇಡೀ ಜಗತ್ತಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಈ ದೃಶ್ಯ ಮಾಧ್ಯಮಗಳು ಆಹುತಿಯನ್ನು ತೆಗೆದುಕೊಳ್ಳಲಾಗುತ್ತಿದೆ. ಭಾರತೀಯ ಸಂಸ್ಕೃತಿಯು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ನಾಡಿದು. ಭಾರತದಲ್ಲಿನ ಪ್ರತಿ ೧೦-೧೨ ಕಿ.ಮೀ.ಗೆ ಭಾಷೆಯಲ್ಲಿ ಭಿನ್ನತೆಯನ್ನು ನಾವು ಕಾಣಬಹುದಾಗಿದೆ. ಇಂತಹ ಸಂದರ್ಭದಲ್ಲಿ ಜಾಗತೀಕರಣದ ಘೋಷ ಧ್ಯೇಯ ವಾಕ್ಯವಾಗಿರುವ “ಇಡೀ ಪ್ರಪಂಚವೇ ಒಂದು ಗ್ರಾಮದಂತಿದೆ” ಎಂಬ ಅಂಶದಿಂದ ಆಗಬಹುದಾದ ಲಾಭಗಳನ್ನು ಅದರಿಂದ ಉಂಟಾಗಬಹುದಾದ ಸಾಂಸ್ಕತಿಕ ನಷ್ಟವನ್ನು ಮುಖ್ಯವಾಗಿ ಅರಿಯಬೇಕಾಗುತ್ತದೆ. ಒಂದು ಸಂಸ್ಕೃತಿ, ಒಂದು ಭಾಷೆ, ಒಂದು ಆಚರಣೆ, ಒಂದು ವಿಧಿ-ವಿಧಾನವನ್ನು ಇಡೀ ಸಮುದಾಯದ ಮೇಲೆ ಹೇರುವಂತಹ ಪರಿಸ್ಥಿತಿ ನಿರ್ಮಾಣವಾಗಿರುವ ಪ್ರಸ್ತುತ ಕಾಲಮಾನದಲ್ಲಿ ಜನಪದರ ಭಿನ್ನ ಸಂಸ್ಕೃತಿಗಳ, ಅವರ ಭಿನ್ನ ಕಲಾಪ್ರಕಾರಗಳ, ಭಿನ್ನ ಆಶಯಗಳು ಈ ಸಂದರ್ಭಕ್ಕೆ ತುಂಬಾ ಪ್ರಸ್ತುತವೆನಿಸುತ್ತವೆ. ಆದ್ದರಿಂದ ಈ ಹೊತ್ತಿನಲ್ಲಿ ಜನಪದ ಕಲೆಗಳನ್ನು ಉಳಿಸಿಕೊಳ್ಳುವ ಸಾಂಸ್ಕೃತಿಕವಾದ ಅಗತ್ಯತೆ ನಮ್ಮೆಲ್ಲರ ಹೊಣೆಯಾಗಿದೆ.

ಜನಪದ ಕಲೆಗಳು ಇಂದು ಒಂದು ಪರಂಪರೆಯ ಪಳೆಯುಳಿಕೆಯಾಗಿ ನಡೆದುಬರುತ್ತಿದೆ. ಅದಕ್ಕೆ ಈ ಹಿಂದೆ ಇದ್ದಂತಹ ಸಾಂಸ್ಕೃತಿಕ ಚಹರೆಗಳು ಈಗ ಇದ್ದರೂ ಹಿಂದಿನ ಸತ್ವವನ್ನು ಕಳೆದುಕೊಂಡು ಯಾಂತ್ರಿಕವಾದ ಆಚರಣೆಯಾಗಿ ಬೆಳೆಯತೊಡಗಿದೆ. ಒಂದು ಸಂಸ್ಕೃತಿಯ ಭಾಗವಾಗಿ, ತಮ್ಮ ಮಾನಸಿಕವಾದ ಭಾವನೆಗಳನ್ನು ಅಭಿವ್ಯಕ್ತಿಸುವ ನಿಲುವಿನಿಂದ ಹುಟ್ಟಿಕೊಮಡಂತಹ ಈ ಜನಪದ ಕಲೆಗಳು ಇಂದು ತಮ್ಮ ನೆಲೆಯನ್ನು ಬದಲಿಸಿಕೊಂಡು ಅವು ಪ್ರದರ್ಶನಕ್ಕಾಗಿ, ವಾಣಿಜ್ಯ ವ್ಯವಹಾರಗಳ ಉದ್ದೇಶಕ್ಕೋಸ್ಕರವಾಗಿ ಆಚರಣೆಗೆ ಒಳಗಾಗಿವೆ. ರಾಜಕಾರಣಿಗಳ ಉತ್ಸವ, ದಸರಾ ಆಚರಣೆ, ಮೆರವಣಿಗೆಯ ಆಚರಣೆ, ಕಾರ್ಯಕ್ರಮಗಳಲ್ಲಿ ವಿಶಿಷ್ಟತೆಗಾಗಿ ಜನಪದ ಕಲೆಗಳನ್ನು ಇಂದು ಬಳಸಿಕೊಳ್ಳಕ್ಕಾಗುತ್ತಿದೆ. ಸಮಾಜದಲ್ಲಿ ಹಿಂದೆ ಇದ್ದಂತಹ ಕೆಳವರ್ಗಗಳ ಅಥವಾ ದುಡಿಯುವ ವರ್ಗಗಳು

ರೂಪಿಸಿದ್ದ ಈ ಜನಪದ ಕಲೆಗಳನ್ನು ಇಂದು ಸಮಾಜದಲ್ಲಿ ಮೇಲ್ವರ್ಗಗಳು ತಮ್ಮ ಉನ್ನತಿಗೆ, ಹೆಸರಿಗೋಸ್ಕರ ಬಳಸಿಕೊಳ್ಳುತ್ತಿರುವ ಸೂಕ್ಷ್ಮವಾದ ಸನ್ನಿವೇಶವನ್ನು ನಾವು ಅವಲೋಕಿಸುವ ಅಗತ್ಯವಿದೆ.

ದೃಶ್ಯ ಮಾಧ್ಯಮಗಳಲ್ಲಿ ಉಂಟಾಗುತ್ತಿರುವ ಜನಪದ ಸನ್ನಿವೇಶಗಳನ್ನು, ಕಲೆಗಳನ್ನು ವಾಣಿಜ್ಯ-ವ್ಯವಹಾರಗಳ ಉದ್ದೇಶಕ್ಕೋಸ್ಕರ ಮಾತ್ರ ಬಳಸಿಕೊಳ್ಳದೇ, ಅದನ್ನು ಒಂದು ಸಮಾಜದಲ್ಲಿರುವ ಸಂಸ್ಕೃತಿಯೊಂದನ್ನು ಮುಂದಿನ ಪೀಳಿಗೆಗೆ ಉಳಿಸುವ ಮತ್ತು ಅದನ್ನು ಬೆಳೆಸುವ ನಿಟ್ಟಿನಲ್ಲಿ ದೃಶ್ಯ ಮಾಧ್ಯಮಗಳು ತಮ್ಮ ಕೆಲಸವನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಅಲ್ಲದೇ ಇಂದಿನ ಆಧುನಿಕ ಯುಗದಲ್ಲಿ ಯುವ ಜನತೆಯು ಆಧುನೀಕರಣದ ಪ್ರಭಾವಕ್ಕೆ ಒಳಗಾಗಿ ಮೊಬೈಲ್, ಇಂಟರ್‌ನೆಟ್, ಟಿ.ವಿ., ಸಿನಿಮಾ, ಕಂಪ್ಯೀಟರ್ ಮುಂತಾದ ಹಲವಾರು ಸಾಧನಗಳು ಅವರನ್ನು ಯಾಂತ್ರಿಕ ಲೋಕಕ್ಕೆ ಕೊಂಡೊಯ್ಯುವ ಆ ಮೂಲಕ ಸಮಾಜದಲ್ಲಿರುವ ಜನಪದರ ಶ್ರಮಿಕ ಸಂಸ್ಕೃತಿಯನ್ನು ಕಡೆಗಣಿಸುವ ಕೆಲಸವು ಸೂಕ್ಷ್ಮವಾಗಿ ನಡೆಸುತ್ತಿದೆ. ದೃಶ್ಯ ಮಾಧ್ಯಮಗಳು ಜನಸಮುದಾಯದ ಮನಸ್ಸನ್ನು ಆಳುವ ಸಾಧನಗಳಾಗಿ ಅವರನ್ನು ತಮ್ಮ ಹತೋಟಿಗೆ ತಂದುಕೊಳ್ಳುವ ಕೆಲಸವನ್ನು ಸಹ ತುಂಬಾ ಸೂಕ್ಷ್ಮವಾಗಿ ಮಾಡುತ್ತಿವೆ. ವ್ಯವಸಾಯವೇ ಭಾರತೀಯ ಸಮಾಜದ ಪ್ರಧಾನ ವೃತ್ತಿಯಾಗಿದ್ದಂತಹ ಸಂದರ್ಭದಲ್ಲಿ ಕೃಷಿ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದವು. ಆ ಸಂಧರ್ಭದಲ್ಲಿ ಈ ಜನಪದ ಕಲೆಗಳಿಗೆ ಒಂದು ಸಾಂಸ್ಕೃತಿಕವಾದ ಹಿನ್ನೋಟ ಒಂದಿತ್ತು. ಆದರೆ ಇಂದಿನ ಆಧುನಿಕ ಜಾಗತೀಕರಣದ ಸಂದರ್ಭದಲ್ಲಿ ಕೃಷಿ ವ್ಯವಸ್ಥೆಯನ್ನು ಮೀರಿ ಕೈಗಾರಿಕೆ, ವ್ಯವಹಾರ, ವಾಣಿಜ್ಯಗಳು ಮುನ್ನೆಲೆಗೆ ಬಂದಿರುವುದರಿಂದ ಜನಪದ ಕಲೆಗಳು ಮಾಯವಾಗಿ ಇಂದಿನ ವಿದೇಶಿ ಸಂಸ್ಕೃತಿಯ ಕಲೆಗಳನ್ನು ನಮ್ಮ ಯುವಪೀಳಿಗೆ, ತನ್ನೆಡೆಗೆ ಒಳಗೂ ಮಾಡಿಕೊಳ್ಳುತ್ತಿದೆ. ಇಂತಹ ಸಂದರ್ಭದಲ್ಲಿ ಜನಪದ ಕಲೆಗಳನ್ನು ನಮ್ಮ ಯುವಪೀಳಗೆಯ ಮನಸ್ಸಿನಲ್ಲಿ ನೆಲೆಯೂರುವಂತಹ ಕೆಲಸವನ್ನು ಮಾಡಬೇಕಾದ ಕರ್ತವ್ಯ ಇಂದು ನಮ್ಮೆಲ್ಲರ ಮೇಲಿದೆ.

ಅಧ್ಯಯನದ ಫಲಿತಗಳು :

೧. ದೃಶ್ಯ ಮಾಧ್ಯಮ ಸಾಮಾಜಿಕ ಜಾಲತಾಣಗಳ ಬಳಕೆಯ ಜೊತೆಗೆ ಕೆಲವು ಸಂದರ್ಭದಲ್ಲಿ ಮನೋರಂಜನೆಯ ಈಡೇರಿಕೆಯ ತಾತ್ಕಾಲಿಕ ಉದ್ದೇಶಗಳಿಗೆ ಬಳಸಲಾಗುತ್ತಿದೆ.

೨. ದೃಶ್ಯ ಮಾಧ್ಯಮ ಇಂದು ಯಾವ ಸದುದ್ದೇಶಕ್ಕೆ ಬಳಸಲಾಗುತ್ತಿದೆಯೋ ಆ ಉದ್ದೇಶಕ್ಕೆ ಬಳಕೆಯಾದರೆ ಆಧುನಿಕತೆಗೆ ಹೆಚ್ಚು ಸೂಕ್ತವಾಗುತ್ತದೆ.

೩. ಜಾಗತೀಕರಣವನ್ನು ಅಪ್ಪಿಕೊಂಡ ಮೇಲೆ ಅದರ ಬಳಕೆಯ ಪರಿಣಾಮವಾಗಿ ಆಗಾಧ ಬೆಳವಣಿಗೆಯಾಗಿ ದೃಶ್ಯಮಾಧ್ಯಮ ಸಂಪರ್ಕ ಕ್ರಾಂತಿಗೆ ಕಾರಣವಾಗುತ್ತದೆ.

೪. ದೃಶ್ಯಮಾಧ್ಯಮವು ಸಾಂಸ್ಥಿತಿಕ ಮತ್ತು ನೈತಿಕತೆಯ ನೆಲೆಗಳನ್ನು ಮೌಲ್ಯಗೊಳಿಸುತ್ತದೆ.

೫. ಅಭಿವ್ಯಕ್ತತೆ ಸ್ವಾತಂತ್ರ್ಯ ಬಳಸಿಕೊಳ್ಳಲು ಅದ್ಭುತ ಆಧುನಿಕ ವೇದಿಕೆಯಾಗಿರುವ ಜಾಲತಾಣಗಳು, ಇಂದು ವೈಯಕ್ತಿಕ ಅವನತಿಗೂ ಕೆಲವು ಸಂದರ್ಭಗಳಲ್ಲಿ ದೃಶ್ಯ ಮಾಧ್ಯಮ ಕಾರಣವಾಗಬಾರದು.

೬. ದೃಶ್ಯ ಮಾಧ್ಯಮದಿಂದ ಪ್ರದರ್ಶನಕಲೆಗಳಲ್ಲಿರುವ ಹಿಂಸಾಚಾರದ ಪ್ರಕರಣಗಳು, ಅವುಗಳಿಗೆ ನೀಡುವ ಪ್ರಚೋದನೆ ತುಂಬಾ ಕಳವಳಕಾರಿಯಾಗಿರುತ್ತದೆ.

೭. ದೃಶ್ಯ ಮಾಧ್ಯಮ ವಿಶೇಷವಾಗಿ ಆರಂಭದ ದಿನಗಳಿಂದಲೂ ಕೆಲವರಿಗೆ ಮಾತ್ರ ಅಕ್ಷಯಪಾತ್ರೆಯಾಗಿದೆ.

೮. ಪ್ರದರ್ಶನ ಕಲೆಗಳು, ಸಾಮಾಜಿಕ ಚಟುವಟಿಕೆಗಳು ಅನಕ್ಷರಸ್ಥ ಅಕ್ಷರಸ್ಥರ ಹಿಂದುಳಿದ ಅಲ್ಪಸಂಖ್ಯಾತ, ಇನ್ನಿತರ ಮಾಹಿತಿ ಸಂಘರ್ಷಗಳು ದೃಶ್ಯ ಮಾಧ್ಯಮದ ದೊಡ್ಡ ಪಾತ್ರವಾಗಿದೆ.

೯. ಪ್ರಸ್ತುತ ಸಂದರ್ಭದಲ್ಲಿ ಕರಣಗಳ ಆದ್ರತೆಯಿಂದ ಜಾನಪದ ಕತಿಗಳು ರಕ್ಷಿಸುವುದೇ ಕಷ್ಟ. ಇಂತಹ ಸ್ಥಿತಿಯಲ್ಲಿ ಅವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುವ ಜರೂರು ಇದೆ.

೧೦. ದೃಶ್ಯಮಾಧ್ಯಮದ ಎಥೇಚ್ಛವಾದ ಪ್ರದರ್ಶನ ಹಾವಳಿಯಿಂದ ಜಾನಪದ ಕಲೆಗಳು ತನ್ನ ಮೂಲಮೌಲ್ಯ ಸ್ವರೂಪವನ್ನು ಬೇರೆ ಕಡೆ ಸಾಗುತ್ತಿದೆ. ಇಂತಹವುಗಳನ್ನು ಸೂಕ್ಷ್ಮಪ್ರಜ್ಞೆಯಿಂದ ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು.

೧೧. ದೃಶ್ಯ ಮಾಧ್ಯಮದ ಉಡುಗೆತೊಡುಗೆ ಸಾಹಿತ್ಯ, ಭಾಷೆ, ಹಾಡು, ಪ್ರಕಾರಗಳಗಳಿಂದ ಜಾನಪದದ ಮೂಲಮೌಲ್ಯವನ್ನು ಕಳೆದುಕೊಳ್ಳಬಹುದಾಗಿದೆ. ಅಂಥವುಗಲ ಸೂಕ್ಷ್ಮಮಾಹಿತಿಗಳನ್ನು ತೆರೆದಿಟ್ಟು ಜನಸಾಮಾನ್ಯರಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಸಾಗುತ್ತಿದೆ.

೧೨. ಜಾಗತಿಕ ದೃಶ್ಯಮಾದ್ಯಮ ಸ್ಪರ್ಧೆಯ ಅನಿವಾರ್ಯತೆಯಾಗಿದ್ದು ಅದರ ಅವಲಂಬನೆ ಇಂದು ಮಾಯಲೋಕದಲ್ಲಿದೆ.

೧೩. ತಂತ್ರಜ್ಞಾನವನ್ನು ಬಳಸಿ ಸಂಘನ್ಮೂಲಗಳನ್ನು ಬಳಸಿಕೊಂಡು ಒಂದೆಡೆ ಸಂಗ್ರಹಿಸಿ ಜನ ಸಾಮಾನ್ಯರಿಗೆ ತಲುಪಿಸುವ ಕೆಲಸವನ್ನು ದೃಶ್ಯಮಾಧ್ಯಮ ನಿರ್ವಹಿಸುತ್ತಿದೆ.

೧೪. ದೃಶ್ಯ ಮಾಧ್ಯಮ ಸೆರೆಹಿಡಿಯುವ ಮೋಜಿನ ಸಲಕರಣೆಯಾಗಿದೆ.

೧೫. ಭಾರತದಂಥ ಅಭಿವೃದ್ಧಿ ಶೀಲ ದೇಶಗಳಲ್ಲಿ ಹೆಚ್ಚು ಸಂರಕ್ಷಿಸುವುದು ಕಷ್ಟಸಾಧ್ಯ.

೧೬. ದೃಶ್ಯ ಮಾಧ್ಯಮ ಆಗಾಧ ಬೆಳವಣಿಗೆಯಾಗಿ ಇದರ ಬಳಕೆಯ ಸಾಧಕ ಬಾಧಕಗಳಿಂದ ಹೆಚ್ಚಾಗಿ ವಿಜೃಂಭಿಸುವುದು ಕಾಣಬಹುದು.

೧೭. ಹಿರಿಯರು ಮತ್ತು ವೃದ್ಧಾಪ್ಯದ ಅಂಚಿನಲ್ಲಿರುವ ಕಲಾವಿದರನ್ನು ಹುಡುಕಿ ಅವರ ಒಡಲಲ್ಲಿರುವ ಅಮೂಲ್ಯ ಪದ, ಹಾಡುವ ದಾಟಿ, ಕಥೆ, ಗಾಥೆ, ಒಗಟು ಒಡಪು, ಕುಣಿತಗಳ ವೈಖರಿ ಇತ್ಯಾದಿಗಳನ್ನು ಧ್ವನಿ ಮುದ್ರಿಸಿಕೊಳ್ಳಬೇಕು ಹಾಗೆಯೇ ಅವರು ಬದುಕಿ ಬಾಳಿದ ಬಗ್ಗೆ ಅವರ ಕಲಾಜೀವನದ ಬಗ್ಗೆ ಸಂಕ್ಷಿಪ್ತ ಸಾಕ್ಷ್ಯಚಿತ್ರಗಳನ್ನು ತುರ್ತಾಗಿ ನಿರ್ಮಿಸಬೇಕು.

೧೮. ಸಂಗ್ರಹಿಸಿ, ಸಂಸ್ಕರಿಸಿ, ಸಂಕಲಿಸಿದ ಅತ್ಯುತ್ತಮ ಹಾಗೂ ಉಪಯುಕ್ತ ಮೂಲ ದಾಟಿಯ ಜನಪದ ಸಾಹಿತ್ಯ, ಕಲೆಗಳ ಅಡಿಯೋ ವಿಡಿಯೋವನ್ನು ವಿಶ್ವವಿದ್ಯಾಲಯಗಳಲ್ಲಿ ಸಂರಕ್ಷಿಸಿ ಇಡುವುದಲ್ಲದೆ ಇಡಬೇಕು. ಅದನ್ನು ಆಸಕ್ತರಿಗೆ ಹಾಗೂ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಲಿಸುವ ಅಥವಾ ತಿಳಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಬೇಕು.

೧೯. ಜಾನಪದ ವಿಶ್ವವಿದ್ಯಾಲಯ ಅಥವಾ ಸಂಘ ಸಂಸ್ಥೆಗಳು ಮಾಡಬೇಕಾದ ಮತ್ತೊಂದು ತುರ್ತುಕಾರ್ಯವೇನೆಂದರೆ ಪ್ರತಿಯೊಬ್ಬ ಆಸಕ್ತ ನಾಗರೀಕನಿಗೂ ಅವನ ಮನೆಯಲ್ಲಿ ಅಥವಾ ಪರಿಸರದಲ್ಲಿ ದೊರಕುವ ವಸ್ತು ವಿಶೇಷಗಳು. ಕಥೆ,ಗಾಥೆ, ಒಗಟು ಒಡಮುಗಳಲ್ಲಿ ಕಲೆಯ ವೈವಿಧ್ಯತೆಯನ್ನು ಛಾಯಾಚಿತ್ರ, ವೀಡಿಯೋ, ಆಡಿಯೊ ಮಾಡಿ ಸಂಸ್ಥೆಗಳಿಗೆ ಒಪ್ಪಿಸುವ ಆಕರ್ಷಕ ಯೋಜನೆಯನ್ನು ರೂಪಿಸಬೇಕು ಇದನ್ನು ಸಾಮೂಹಿಕ ಕಾರ್ಯಕ್ರಮವಾಗಿ ವರ್ಷವಿಡೀ ಹಮ್ಮಿಕೊಳ್ಳಬೇಕು.

೨೦. ಈಗಾಗಲೇ ಅನೇಕ ವ್ಯಕ್ತಿಗಳು, ಸಂಘ ಸಂಸ್ಥೆಗಳು ತಮ್ಮ ವಶದಲ್ಲಿರುವ, ಸಂರಕ್ಷಿಸುವ, ದಾಖಲಾಗಿಸಿರುವ, ಜನಪದ ಪರಂಪರೆಗೆ, ಸಂಸ್ಕೃತಿಗೆ ಸಂಬಂಧಪಟ್ಟ ಎಲ್ಲಾ ಛಾಯಾಚಿತ್ರ ಗಳನ್ನು, ಆಡಿಯೊ ವೀಡಿಯೋಗಳನ್ನು, ಸಾಕ್ಷ್ಯಚಿತ್ರಗಳನ್ನು, ವ್ಯಕ್ತಿ ಚಿತ್ರಗಳನ್ನು, ವಸ್ತು ಚಿತ್ರಗಳನ್ನು ಸೂಕ್ತಗೌರವ ಸಂಭಾವನೆ ನೀಡಿ ಸಂಗ್ರಹಿಸಲು ಮುಂದಾಗಬೇಕು.

೨೧. ಅರ್ಹ ಅನುಭವಿ ತಂತ್ರಜ್ಞರನ್ನು ಮತ್ತು ತಜ್ಞರನ್ನು ಕೂಡಲೇ ತಾತ್ಕಾಲಿಕವಾಗಿಯಾದರೂ ನೇಮಿಸಿಕೊಂಡು ದಾಖಲೀಕರಣದ ಕಾರ್ಯಕ್ಕೆ ಚಾಲನೆ ನೀಡಬೇಕು. ತಾತ್ಕಾಲಿಕವಾಗಿ ಹಾಗೂ ವೈಜ್ಞಾನಿಕವಾಗಿ ಸಂರಕ್ಷಿಸಿ ಇಡುವ ವಿಧಾನವನ್ನು ಅನುಸರಿಸಿ ಸಂಗ್ರಹಿಸಬೇಕು.

೨೨. ನಿಷ್ಠಾವಂತ, ನುರಿತ ಮತ್ತು ಅನುಭವಿ ಕ್ಷೇತ್ರ ಕಾರ್ಯಕರ್ತರನ್ನು, ತಜ್ಞರನ್ನು ಹಾಗೂ ತಂತ್ರಜ್ಞರನ್ನು ನೇಮಿಸಿಕೊಂಡು ಅವರಿಗೆ ಸಾಧ್ಯವಾದಷ್ಟು ಸರಿಯಾದ ರೀತಿ ಮಾರ್ಗದರ್ಶನ

ಮಾಡಿ ಬಳಸಿಕೊಂಡಲ್ಲಿ ಕೇವಲ ಒಂದೇ ವರ್ಷದಲ್ಲಿ ಈ ಕಾರ್ಯವನ್ನು ಮಾಡಿ ಮುಗಿಸಬಹುದು.

೨೩. ಯಾವುದೇ ವ್ಯಕ್ತಿ ಕರ್ನಾಟಕ ಜನಪದ ಪರಂಪರೆಯನ್ನು ತಿಳಿಯಬಯಸಿದರೆ, ನೋಡಲು ಆಸಕ್ತಿ ತೋರಿದರೆ, ಒಂದು ಪ್ರತಿಯನ್ನು ಕೊಳ್ಳಲು ಮುಂದಾದರೆ ಓಡಾಡಿಸದೆ (ಸತಾಯಿಸದೆ) ಶೀಘ್ರವೇ ಆತನಿಗೆ ದೊರಕುವಂತ ವ್ಯವಸ್ಥೆ ಮಾಡಿದಾಗ ಮಾತ್ರ ಜಾನಪದ ವಿಶ್ವವಿದ್ಯಾಲಯದ ಧ್ಯೇಯ ಸಾರ್ಥಕವೆನಿಸುತ್ತದೆ.

೨೪. ನಮ್ಮ ಜನಪದ ಸಂಸ್ಕೃತಿಯ ವೈವಿಧ್ಯತೆಯನ್ನು ಅದರಲ್ಲಿನ ಮೌಲಿಕ ಆಚಾರ–ವಿಚಾರಗಳನ್ನು, ವಿಶೇಷತೆಗಳನ್ನು ಜಗತ್ತಿಗೆ ಪರಿಚಯಿಸುವುದು ವಿಶ್ವವಿದ್ಯಾಲಯದ ಆದ್ಯ ಕರ್ತವ್ಯಗಳಲ್ಲಿ ಒಂದಾಗಬೇಕು. ಈ ನಿಟ್ಟಿನಲ್ಲಿ ಬಹುಭಾಷೆಯಲ್ಲಿ ಆಡಿಯೋ ವೀಡಿಯೋ ದೊರೆಯುವಂತೆ ತುರ್ತು ಕ್ರಮಕೈಗೊಳ್ಳಬೇಕು.

೨೫. ಶೀಘ್ರವೇ ದೂರದರ್ಶನದಲ್ಲಿ ವಾರಕ್ಕೆ ಒಂದು ಜಾನಪದ ಕಾರ್ಯಕ್ರಮ ಪ್ರಸಾರವಾಗುವಂತೆ ಒಪ್ಪಂದ ಮಾಡಿಕೊಳ್ಳಬೇಕು. ಇದರಿಂದ ಜನಪದ ಪರಂಪರೆಯ ವಿವಿಧ ಆಯಾಮಗಳನ್ನು ಪರಿಚಯಿಸದಂತಾಗುತ್ತದೆ. ಈ ಮೂಲಕ ಉತ್ತಮ ಅಂಶಗಳನ್ನು ಸಾರ್ವಜನಿಕರು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಹಾಯಕವಾಗುತ್ತದೆ. ಹಾಗೆಯೇ ಕಲೆಯನ್ನು ಉತ್ತೇಜಿಸಿದಂತಾಗುತ್ತದೆ.

೨೬. ಎಲ್ಲಾ ವಿಶ್ವವಿದ್ಯಾಲಯಗಳು ಪ್ರತಿದಿನವು ಆಧುನಿಕ ತಂತ್ರಜ್ಞಾನದ ಜೊತೆ ಜೊತೆಯಲ್ಲಿ ಸಾಗಬೇಕು. ಆ ತಂತ್ರಜ್ಞಾವನ್ನು ಅಳವಡಿಸಿಕಂಡು ಕಾರ್ಯಪ್ರವೃತ್ತರಾಗಬೇಕು. ಆಗ ಇಂದಿನ ಪೀಳಿಗೆಗೂ ಆ ಕಾರ್ಯಗಳು ಮೆಚ್ಚುಗೆಯಾಗುತ್ತದೆ. ಉದಾಹರಣೆಗೆ ಅಂತರಜಾಲವನ್ನು ವರ್ತಮಾನ ಮತ್ತು ಭವಿಷ್ಯತ್ತಿಗೆ ಅಳವಡಿಸುವುದು.

೨೭. ಹಿರಿಯ ಹಾಗೂ ಅನುಭವಿ ಕಲಾವಿದರಿಂದ ಪ್ರಾತ್ಯಕ್ಷಿಕೆ ಮೂಲಕ ಆಕರ್ಷಕ ಕಲೆ ಹಾಗೂ ಹಾಡುಗಳನ್ನು ಆಸಕ್ತರಿಗೆ, ಶಾಲಾಕಾಲೇಜು ವಿದ್ಯಾರ್ಥಿಗಳಿಗೆ ಕಲಿಸುವ ಕೆಲಸ ತುರ್ತಾಗಿ ಆಗಬೇಕು.

೨೮. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಸಾಂಸ್ಕೃತಿಕ ಹಾಗೂ ನೈಸರ್ಗಿಕ ಸ್ವತ್ತುಗಳನ್ನು ಪರಂಪರೆಯ ಸ್ವತ್ತುಗಳೆಂದು ಘೋಷಿಸಿ ಸಂರಕ್ಷಿಸುವ ರೀತಿಯಲ್ಲಿ ಜನಪದ ಪರಂಪರೆಯ ವಸ್ತು ವಿಶೇಷಗಳನ್ನು ಘೋಷಿಸಿ ಸಂರಕ್ಷಿಸಬೇಕು ಅದರ ಉಸ್ತುವಾರಿ ವಿಶ್ವವಿದ್ಯಾಲಯಕ್ಕೆ ಬಿಡಬೇಕು.

೨೯. ನಮ್ಮ ಮೌಲಿಕ, ಮೌಖಿಕ ಮತ್ತು ಸಾಂಸ್ಕೃತಿಕ ಜಾನಪದ ಪರಂಪರೆಯನ್ನು ಸಂರಕ್ಷಿಸಿ ಕಾಪಾಡಲು ಜಾನಪದ ವಿಶ್ವವಿದ್ಯಾಲಯ ಸಾರ್ವಜನಿಕರಲ್ಲಿ ಸಮೂಹ ಅರಿವು ಮೂಡಿಸುವತ್ತಾ ಚಿಂತನೆ ನಡೆಸಬೇಕು ಮತ್ತು ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಅನುಬಂಧ ಒಂದು

ಪರಾಮರ್ಶನ ಗ್ರಂಥ

೧. ಅಶೋಕ ಟಿ. ಅಕ್ಕಿ, ಕಲಾಚರಿತ್ರೆ, ಎಂ.ಎಸ್.ಶಾಬಾದಿಮಠ ಪ್ರಕಾಶಕರು, ೨೦೦೩.

೨. ಅಂಬಳಿಕೆ ಹಿರಿಯಣ್ಣ, ೧೯೮೮, ಜಾನಪದ ಪರಿಶೋಧನ (೩ನೇ ಆವೃತ್ತಿ), ಪ್ರಜ್ವಲ ಪ್ರಕಾಶನ, ಮೈಸೂರು

೩. ಅಂಬಳಿಕೆ ಹಿರಿಯಣ್ಣ, ೧೯೮೯, ಕರ್ನಾಟಕ ಜಾನಪದ, ಕರ್ನಾಟಕದಲ್ಲಿ ಜಾನಪದ ನಡೆದು ಬಂದ ದಾರಿ, ಪುಟ ೭೬, ಪ್ರ.ಕ.ಜಾ.ಯ ಅಕಾಡೆಮಿ

೪. ಆಚಾರ್ಯ ಎಂ.ಟಿ.ವಿ., ೧೯೮೫, ಕಲೆ ಮತ್ತು ನಾನು-ಆಚಾರ್ಯ ಚಿತ್ರಕಲಾ ಭವನ ಇಂಡಿಯನ್ ಪೇಟಿಂಗ್, ೨೦೦೩, ಷರ್ಷಿಬ್ರೌನ್

೫. ಕರೀಂಖಾನ ಎಸ್.ಕೆ (ಸಂ.), ೧೯೮೮ (ಮಾರ್ಚ್), ಜಾನಪದ ಗಂಗೋತ್ರಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೬. ಕರೀಂಖಾನ ಎಸ್.ಕೆ (ಸಂ.), ೧೯೮೯, ಜಾನಪದ ಗಂಗೋತ್ರಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೭. ಕರೀಂಖಾನ ಎಸ್.ಕೆ (ಸಂ.), ೧೯೮೮ (ಡಿಸೆಂಬರ್), ಜಾನಪದ ಗಂಗೋತ್ರಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಕಲಾ ವಿಕಾಸ ಸಂಚಿಕೆ-೩೦

೮. ಕೃಷ್ಣಯ್ಯ ಎಂ.ಹೆಚ್., ೧೯೮೯, ಕಲೆ ಮತ್ತು ರಸಸ್ವಾದನೆ, ಲಲಿತಕಲಾ ಅಕಾಡೆಮಿ ಬೆಂಗಳೂರು

೯. ಕ್ಯಾತವಳ್ಳಿ ರಾಮಣ್ಣ, ೧೯೮೫, ಜಾನಪದ ವಿಹಾರ ಸಂಪುಟ ೨, ದಿನಕರ ಪ್ರಕಾಶನ, ೬೯೦, ೭ನೇ ಬ್ಲಾಕ್, ಬನಶಂಕರಿ ನಗರ, ಬೆಂಗಳೂರು.

೧೦. ಗುರುಮೂರ್ತಿ ಕೆ.ಜಿ, ೧೯೭೯, ಜನಪದ ಸಮಾಜ ಮತ್ತು ಸಂಸ್ಕೃತಿ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಚಂದ್ರಶೇಖರ ಕಂಬಾರ (ಸಂ.), ೧೯೮೫, ಕನ್ನಡ ಜಾನಪದ ವಿಶ್ವಕೋಶ ಸಂ. ೧ ಮತ್ತು ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨. ಚಂದ್ರಶೇಖರ ಕಂಬಾರ (ಸಂ.), ೧೯೬೫, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಮನ್ವಂತರ ಪ್ರಕಾಶನ, ಧಾರವಾಡ

೧೩. ಚಕ್ಕರೆ ಶಿವಶಂಕರ್, ೨೦೦೩, ಜನಪದ ಸಾಹಿತ್ಯದಲ್ಲಿ ಕನ್ನಡ ನೆಲದ ಸಂಸ್ಕೃತಿ, ಪುಟ ೧೪೫, ಕ.ಜಾ.ಯ.ಅಕಾಡೆಮಿ

೧೪. ಚಕ್ಕರೆ ಶಿವಶಂಕರ್, ಜನಪದ ಕಲಾ ಪ್ರವೇಶ, ಪುಟ ೧೦

೧೫. ಚೆನ್ನಬಸಪ್ಪ ಗೊ.ರು. (ಸಂ.), ೧೯೭೭, ಕರ್ನಾಟಕ ಜಾನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೬. ಚೆನ್ನಬಸಪ್ಪ ಗೊ.ರು. (ಸಂ.), ೧೯೯೧, ಜಾನಪದ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೭. ಜವರೇಗೌಡ ದೇ. (ಸಂ.), ೧೯೭೮, ಜಾನಪದ ಗೀತಾಂಜಲಿ, ಸಾಹಿತ್ಯ ಅಕಾಡೆಮಿ, ದೆಹಲಿ

೧೮. ತಿಪ್ಪೇಸ್ವಾಮಿ ಎನ್.ಡಿ., ೨೦೧೪, ಕಲಾಧೀಮಂತ–ರಾಮಾಂಜನೇಯ ತೊಗಲುಗೊಂಬೆ ಮೇಳ ಟ್ರಸ್ಟ್

೧೯. ತಿಪ್ಪೇಸ್ವಾಮಿ ಜಿ.ಆರ್., ೨೦೧೦, ಜಾಗತೀಕರಣ ಮತ್ತು ಜಾನಪದ, ಕರ್ನಾಟಕ ಜಾನಪದ ಯಕ್ಷಗಾನ ಅಡಾಡೆಮಿ, ಬೆಂಗಳೂರು

೨೦. ತಿಪ್ಪೇಸ್ವಾಮಿ ಜಿ.ಆರ್., ಜಾಗತೀಕರಣ ಮತ್ತು ಜಾನಪದ, ಕರ್ನಾಟಕ ಜಾನಪದ ಅಕಾಡೆಮಿ

೨೧. ನರಸಿಂಹನ್ ಅ.ಲ., ಕಲೆ ಮತ್ತು ರಸಸ್ವಾದನೆ ಚಿತ್ರಕಲೆಯ ಪರಿಭಾಷೆ ಮತ್ತು ಸಾಮಾಗ್ರಿಗಳು

೨೨. ನಾಗೇಗೌಡ ಎಚ್.ಎಲ್. (ಸಂ.), ೧೯೮೭, ಪ್ರಶಸ್ತಿ ಪಡೆದ ಮಹನೀಯರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೩. ನಾಯಕ ಹಾ.ಮಾ., ೧೯೭೧, ಜಾನಪದ ಸ್ವರೂಪ. ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು

೨೪. ನಾವಡ ಎ.ವಿ., ೧೯೯೩, ಜಾನಪದ ಸಮಾಲೋಚನ ಕರ್ನಾಟಕ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೫. ನಾರಾಯಣರಾವ್ ಎಂ.ವಿ., ೧೯೯೮, ನಮ್ಮ ಕರಕುಶಲ ವಸ್ತುಗಳು, ನ್ಯಾಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ

೨೬. ನಿಂಗಣ್ಣ ಬಿ.ಸಿ., ಜಾಗತೀಕರಣ ಜಾತ್ರೆಗಳು

೨೭. ನಿಂಗಣ್ಣ ಸಣ್ಣಕ್ಕಿ, ೧೯೮೧, ಎಲ್ಲಮ್ಮನ ಜೋಗಿಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೮. ಹಾ.ಮಾ ನಾಯಕ, ೨೦೧೫, ಜಾನಪದ ಸ್ವರೂಪ, ಗೀತಾಂಜಲಿ ಪ್ರಕಾಶನ.

೨೯. ಪರಮಶಿವಯ್ಯ ಜೀ.ಶಂ., ೧೯೭೫, ಜಾನಪದ, ಸಾಹಿತ್ಯ ಸದನ, ಮೈಸೂರು

೩೦. ಪರಮಶಿವಯ್ಯ ಜೀ.ಶಂ., ೧೯೮೦, ಕಿನ್ನರ ಜೋಗಿಗಳು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೩೧. ಪರಮಶಿವಯ್ಯ ಜೀ.ಶಂ., ೧೯೮೭, ಕರ್ನಾಟಕ ಜಾನಪದ ಸಮೀಕ್ಷೆ ವಿಶ್ವ ಕನ್ನಡ ಸಮ್ಮೇಳನ, ೧೪–೩೧, ನೃಪತುಂಗ ರಸ್ತೆ, ಬೆಂಗಳೂರು.

೩೨. ಪರಮಶಿವಯ್ಯ ಜೀಂ.ಶಂ., ೧೯೮೨, ಕರ್ನಾಟಕ ವೃತ್ತಿ ಗಾಯಕರ ಕಾವ್ಯಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೩೩. ಪರಮಶಿವಯ್ಯ ಜೀ.ಶಂ., ೧೯೮೯, ಜಾನಪದ ಗಂಗೋತ್ರಿ, ಪುಟ ೭೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೩೪. ಪ್ರಭಾಕರ ಶಿಶಿಲ. (ಸಂ.), ೧೯೮೮, ಬಣ್ಣ ತೆಂಕುತಿಟ್ಟು, ಯಕ್ಷಗಾನ ಹಿತರಕ್ಷಣಾ ವೇದಿಕೆ, ಸೂಳ್ಯ, ದ.ಕ.

೩೫. ಪೂರ್ಣಿಮಾ ಟಿ.ಸಿ., ೨೦೦೩, ೨೦೧೧, ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ, ಪ್ರಸಾರಂಗ, ಕನ್ನಡವಿಶ್ವವಿದ್ಯಾಲಯ ಹಂಪಿ

೨೬. ಪರಮಶಿವಯ್ಯ ಜೀ.ಶಂ., ೨೦೦೧, ವೈಜ್ಞಾನಿಕ ಕನ್ನಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೨೭. ಪರಮಶಿವಯ್ಯ ಜೀ.ಶಂ., ೨೦೦೦, ಜಾನಪದ ಕಲಾವಿಹಾರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೨೮. ಬಸವರಾಜ ನೆಲ್ಲಿಸರ, ೧೯೭೮, ಜಾನಪದ ಸಂಕಲನ, ಯಕ್ಷ ಪ್ರಕಾಶನ, ಮೈಸೂರು.

೨೯. ಬಸವರಾಜ ನೆಲ್ಲಿಸರ, ೧೯೭೯, ಜಾನಪದ ಜಿಜ್ಞಾಸೆ, ಯಕ್ಷ ಪ್ರಕಾಶನ, ಮೈಸೂರು.

೩೦. ಬಸವರಾಜ ನೆಲ್ಲಿಸರ, ೧೯೯೦, ನಮ್ಮ ಪ್ರದರ್ಶಕ ಜನಪದ ಕಲೆಗಳು, ಶಕ್ತಿ ಪ್ರಕಾಶನ, ಗೋಕುಲ ೩ನೇ ಹಂತ, ಮೈಸೂರು.

೩೧. ಬಸವರಾಜ ನೆಲ್ಲಿಸರ, ಡಾ. ಸಣ್ಣರಾಮ, ೨೦೧೦, ಜಾನಪದ ಮೂಲ ತತ್ವಗಳು ಪ್ರಕಾರಗಳು, ಕುವೆಂಪು ವಿಶ್ವವಿದ್ಯಾಲಯ

೩೨. ಬಸವರಾಜ ಪೋಲೀಸ್ ಪಾಟೀಲ, ೧೯೯೦, ಜಾನಪದ ಸಿರಿ, ವಿದ್ಯಾಸಾಗರ ಪ್ರಕಾಶನ, ಗುಲ್ಬರ್ಗ

೩೩. ಬಸವರಾಜ ಮಲಶೆಟ್ಟಿ, ೧೯೮೨, ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೪. ಬಸವರಾಜ ಮಲಶೆಟ್ಟಿ, ೧೯೮೭, ಉತ್ತರ ಕರ್ನಾಟಕದ ಜಾನಪದ ವಾದ್ಯಗಳು, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೩೫. ಬಾಯರಿ ಬಿ.ಪಿ., ೨೦೦೦, ಭಾರತೀಯ ಚಿತ್ರಕಲೆ, ಶಾಬಾದಿಮಠ

೩೬. ಬಿರಾದಾರ ಮ.ಗು., ೧೯೮೭, ಮೇಲಾಧಿಕಾರಿಗಳು, ಐ.ಬಿ.ಎಚ್.ಪ್ರಕಾಶನ. ಬೆಂಗಳೂರು.

೩೭. ಬೆನಕನಹಳ್ಳಿ ಜಿ.ನಾಯಕ., ೧೯೮೪, ಕಿಳ್ಳಿಕ್ಯಾತರು, ಐ.ಬಿ.ಎಚ್. ಪ್ರಕಾಶನ. ಬೆಂಗಳೂರು.

೩೮. ಬೆನಕನಹಳ್ಳಿ ಜಿ.ನಾಯಕ, ೧೯೮೬, ಕರ್ನಾಟಕ ಕಲೆಗಳು(೩ನೇ ಸಂಪುಟ), ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨೯. ಬೋರಲಿಂಗಯ್ಯ ಹಿ.ಚಿ., ೧೯೯೬, ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೩೦. ಬೋರಲಿಂಗಯ್ಯ ಹಿ.ಚಿ., ೧೯೯೧, ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು.

೩೧. ಭಟ್ಟ ಜಿ.ಎಸ್. (ಸಂ.), ೧೯೯೩, ಜಾನಪದ– ೧೯೯೧, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೨. ಮರಿಶಾಮಾಚಾರ್ ಎನ್., ೧೯೯೧, ಭಾರತದ ಜನಪದ ಕಲೆ, ಸಿ.ಎಂ.ಎನ್. ಪ್ರಕಾಶನ, ೩೩, ೧ನೇ ಕ್ರಾಸ್, ಸಂಪಿಗಿ, ರಾಮನಗರ, ಬೆಂಗಳೂರು.

೩೩. ಮರಿಶಾಮಾಚಾರ್ ಎನ್., ೧೯೮೨, ಭಾರತದಲ್ಲಿ ಸಮಕಾಲೀನ ಕಲೆ, ರಶ್ಮಿ ಮುದ್ರಣ, ಬೆಂಗಳೂರು.

೩೪. ಮಲ್ಲಿಕಾರ್ಜುನ ಲಠ್ಠೆ, ೧೯೮೦, ಜಾನಪದ ಸಂಶೋಧನಾತ್ಮಕ ಪ್ರಬಂಧಗಳು, ಎಸ್.ಬಿ. ಪಾಟೀಲ, ದಾಲ್‌ಮಿಲ್ಲ್, ನೆಹರುಗುಂಜ, ಕಲಬುರಗಿ.

೩೫. ಮಹೇಶ್ವರಯ್ಯ ಎಚ್.ಎಂ., ೧೯೮೮, ಹಚ್ಚೆ : ಒಂದು ಜಾನಪದ ಕಲೆ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು.

೩೬. ಮರಿಶಾಮಾಚಾರ್, ಭಾರತೀಯ ಕಲೆ

೩೭. ಮಾರಿಹಾಳ ವ್ಹಿ.ಜಿ., ಸಂಸ್ಕೃತಿ ಶಿಕ್ಷಣ, ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

೩೮. ಮರಿಶಾಮಾಚಾರ್ ಎನ್., ಭಾರತೀಯ ಕಲೆ, ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

೩೯. ಮೊಗಳ್ಳಿ ಗಣೇಶ್, ೧೯೯೯, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೪೦. ದೇವೇಂದ್ರ ಕುಮಾರ ಹಕಾರಿ, ೧೯೯೮, ಕರ್ನಾಟಕ ಜಾನಪದ, ಜನಪದ ಪ್ರದರ್ಶನಾತ್ಮಕ ಕಲೆಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

೪೧. ರಂಗನಾಥ ಎಚ್.ಕೆ, ೧೯೭೮, ಕರ್ನಾಟಕ ರಂಗಭೂಮಿ, ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು.

೪೨. ರಾಜಗೋಪಾಲ ಕ.ವೆಂ. (ಸಂ.), ೧೯೮೯, ತುಳುವರ ಆಚರಣೆಗಳಲ್ಲಿ ಕಲಾವಂತಿಕೆ, ಕರ್ನಾಟಕ ಲಲಿತಕಲಾ ಅಕಾಡೆಮಿ ಬೆಂಗಳೂರು.

೪೩. ರಾಜಗೋಪಾಲಾಚಾರ್ಯ ಎಂ., ೧೯೮೫, ರಂಗಪ್ರದರ್ಶನ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೪೪. ರಾಜೇಂದ್ರ ಡಿ.ಕೆ. (ಸಂ.), ೧೯೯೧, ಜಾನಪದ ಸಂಭಾವನೆ, (ಜೀ.ಶಂ.ಪ. ಅಭಿನಂದನ ಗ್ರಂಥ) ತುಳುಕಿನ ವೆಂಕಣ್ಣಯ್ಯ ಮಾರಕ ಗ್ರಂಥಮಾಲೆ, ಗೋಕುಲಂ, ೩ನೇ ಹಂತ, ಮೈಸೂರು.

೪೫. ರಾಜೇಂದ್ರ ಡಿ.ಕೆ., ೧೯೯೦, ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೪೬. ರಾಮಕೃಷ್ಣ ಆಚಾರ ಪಾಲ್ತಾಡಿ, ೧೯೯೨, ಜನಪದ ಕುಣಿತಗಳು, ಕರ್ನಾಟಕ ಸಂಘ, ಪುತ್ತೂರು.

೪೭. ರಾಮಚಂದ್ರೇಗೌಡ ಹಿ.ಶಿ., ೧೯೮೨, ಜಾನಪದ ವ್ಯಕ್ತಿ ಮತ್ತು ವಿಚಾರ, ಮಾನವಿ ಪ್ರಕಾಶನ, ಟಿ–೮, ಮಾನಸಗಂಗೋತ್ರಿ ಮೈಸೂರು.

೪೮. ರಾಮಚಂದ್ರೇಗೌಡ ಹಿ.ಶಿ., ೧೯೮೮, ಜಾನಪದ ತಡಕಾಟ, ಮಾನವಿ ಪ್ರಕಾಶನ, ಎಲ್. ೬೫, ಮಾನಸಗಂತ್ರೋತ್ರಿ, ಮೈಸೂರು.

೪೯. ರಾಮಚಂದ್ರೇಗೌಡ ಹಿ.ಶಿ., ೨೦೦೪, ಜಾನಪದ ಗ್ರಹಿಕೆ–ಪರಿಕಲ್ಪನೆ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ಪು. ೧೦

೫೦. ರಾಮಚಂದ್ರೇಗೌಡ ಹಿ.ಶಿ., ಜಾನಪದ ಪರಿಕಲ್ಪನೆ, Standard Dictionary Folklore VOL ೧

೫೧. ರಾಮಚಂದ್ರಗೌಡ ಹಿ.ಸಿ., ೧೯೮೨, ಬಡಗರು, ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.

೫೨. ಲಕ್ಕಪ್ಪಗೌಡ ಎಚ್.ಜೆ.(ಸಂ)., ೧೯೮೩, ಮಲೆನಾಡು ಜಾನಪದ, ಮೈಸೂರು ವಿಶ್ವವಿದ್ಯಾನಿಕಲಯದ, ಕನ್ನಡ ವಿಭಾಗ ಸ್ನಾತಕೋತ್ತರ ಕೇಂದ್ರ, ಬಿ.ಅರ್.ಪ್ರಾಜೆಕ್ಟ್, ಶಿವಮೊಗ್ಗ.

೫೩. ಲಿಂಗಯ್ಯ ಡಿ. (ಸಂ). ೧೯೭೯, ಕರ್ನಾಟಕ ಜನಪದ ಕಾವ್ಯಗಳು, ದಿನಕರ ಪ್ರಕಾಶನ, ಬೆಂಗಳೂರು.

೫೪. ವಾಮನ ನಂದಾವರ, ೧೯೯೨, ಜನಪದ ಸುತ್ತಮುತ್ತ, ಪ್ರಜಾಬಂಧು ಪ್ರಕಾಶನ, ನೋಯೆಲ್ಲಾ ಬಿಲ್ಡಿಂಗ, ಹಂಪನಕಟ್ಟೆ ಮಂಗಳೂರು.

೫೫. ವಾಲಿ ಎಂ.ಎನ್., ೧೯೮೬, ಹಬ್ಬಗಳ ಜಾನಪದ ಹಾಡುಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೬. ವಿವೇಕ ರೈ ಬಿ.ಎ., ೧೯೮೫, ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೫೭. ವಿವೇಕರೈ. ಬಿ.ಎ., ೧೯೮೭, ಅನ್ವಯಿಕ ಜಾನಪದ, ಮಂಗಳ ಗಂಗೋತ್ರಿ. ದ.ಕ.

೫೮. ವೆಂಕಟಕೃಷ್ಣಯ್ಯ ಕೆ. (ಸಂ.), ೧೯೯೧, ಗೊಂಬೆಯಾಟವಯ್ಯ, ಶ್ರೀಗೋಪಾಲಕೃಷ್ಣ ಯಕ್ಷಗಾನ ಬೊಂಬೆಯಾಟ ಸಂಘ (ರಿ), ಶ್ರೀರಾಮಪೇಟ, ಕಾಸರಗೋಡು,

೫೯. ಶಂಕರನಾರಾಯಣ ತೀ.ನಂ., ೧೯೭೮, ಜಾನಪದ ವಿಚಾರ, ಹಂಸಧ್ವನಿ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೬೦. ಶಿವರಾಮ.ಕೆ.ಐತಾಳ, ೧೯೭೧, ದಕ್ಷಿಣ ಕನ್ನಡದ ಜನಪದ ಸಾಹಿತ್ಯ, ಶಾರದಾ ಮಂದಿರ, ರಾಮಯ್ಯರ ರಸ್ತೆ, ಮೈಸೂರು.

೬೧. ಶಕುಂತಳಾ ಭಟ್ ಹೆಚ್., ರಂಗೋಲಿ ರೇಖಾತ್ಮಕ ಸಿದ್ಧಾಂತ, ಶ್ರೀ ರಂಗೋಲಿ ಪತ್ರಿಕೆ

೬೨. ಶಿವರಾಮ ಕಾರಂತ, ೧೯೮೩, ಯಕ್ಷಗಾನ ಬಯಲಾಟ, ಐ.ಬಿ.ಎಚ್.ಪ್ರಕಾಶನ. ಬೆಂಗಳೂರು.

೬೩. ಶಿವರಾಮ ಕಾರಂತ, ಕಲಾ ಪ್ರಪಂಚ

೬೪. ಸುಶೀಲಾ ಉಪಧ್ಯಾಯ, ೧೯೮೯, ಜನಪದ ಆರಾಧನೆ ಮತ್ತು ರಂಗಕಲೆ, ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೬೫. ಹಂಪ ನಾಗರಾಜಯ್ಯ (ಸಂ)., ೧೯೮೨, ಜಾನಪದ ಅಧ್ಯಯನ ವಿಚಾರ ಸಂಕಿರಣ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೬೬. ಹಂಪನ ನಾಗರಾಜಯ್ಯ, ೧೯೮೫, ಕರ್ನಾಟಕ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೭. ಹಿರೇಮಠ ಆರ್.ಸಿ (ಸಂ)., ೧೯೭೪, ಜಾನಪದ ಸಾಹಿತ್ಯ ದರ್ಶನ ಭಾಗ–೧, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೮. ಹಿರೇಮಠ ಎಸ್.ಎಸ್, ೧೯೯೨, ಹಬ್ಬಗಳು, ಸಮತಾ ಪ್ರಕಾಶನ, ಹರಪನಹಳ್ಳಿ

೬೯. ಹಿರೇಮಠ ಎಸ್.ಎಸ್, ೧೯೯೩, ಜಾತ್ರೆಗಳು, ಸಮತಾ ಪ್ರಕಾಶನ, ಹೊಸಪೇಟೆ.

೭೦. ಹಿರೇಮಠ ಬಿ.ಆರ್., "ಕರ್ನಾಟಕ ಜಾನಪದ ಕಲೆಗಳು", ಕರ್ನಾಟಕ ಭಾರತಿ (೧೪–೪)

೭೧. ಹೆಗಡೆ ಎಲ್.ಆರ್., ೧೯೭೭, ಜನಪದ ಜೀವನ ಮತ್ತು ಕಲೆ, ಸಮಾಜ ಪುಸ್ತಕಾಲಯ, ಧಾರವಾಡ.

೭೨. ಡೊಮಿನಿಕ್ ಡಿ., ಜಾಗತೀಕರಣದ ಐಡಿಯಾಲಜಿ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೭೨. Christopher candwell : Illusion and reality

ಪತ್ರಿಕೆಗಳು

೧. ಭಾರತಿಯ ಕಲೆಯ ಸಿಂಹಾವಲೋಕನ

೨. ಮಾರ್ಡನ್ ಆರ್ಟ್ ಇನ್ ಇಂಡಿಯಾ–ಗೀತಾ ಕಪೂರ್

೩. ಮಾರ್ಡನ್ ಆರ್ಟ್ ಇನ್ ಇಂಡಿಯಾ, ಗುಲಾಮ್ ಮಹಮದ್ ಶೇಕ್ ಅವರ ಉಪನ್ಯಾಸಗಳು

೪. ಮರಿಶಾಮಾಚಾರ್ ಎನ್., ೨೦೦೨, ಸೃಜನಶೀಲರು, ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ

೫. ಮೂರ್ತಿ ಎಂ.ಎಸ್., ೨೦೦೪, ಲಲಿತಕಲಾ ಟೆಂಪರರಿ, ಕರ್ನಾಟಕ ಚಿತ್ರಕಲಾ ಅಕಾಡೆಮಿ

೬. ವಾಸುದೇವ ಕಾಣೆಮಾರ್, ೨೦೦೧, ಕಲಾ ವಿಶೇಷಗಳು, ಭಾರಧ್ವಾಜ ಪ್ರಕಾಶನ ಕದಿರೆ ಮಂಗಳೂರು

೭. ಪಾಟೀಲ ಎಸ್.ಸಿ., ೧೯೮೭, ಬಾರೋಕ್ ಕಲೆ, ವಾಸ್ತುಶಿಲ್ಪ, ಚಿತ್ರಕಲೆ

೮. ಪಾಟೀಲ ಎಸ್.ಸಿ., ವರ್ಣ ಸಂಚಯ ಪ್ರಕಾಶನ, ವಿಜಯ ಚಿತ್ರಕಲಾ ಮಹಾವಿದ್ಯಾಲಯ ಇಳಕಲ್ಲ.

೯. ಪಾಟೀಲ ಎಸ್.ಸಿ., ೧೯೯೩, ಕರ್ನಾಟಕ ಜನಪದ ಕಲೆ

೧೦. ಪಾಟೀಲ ಎಸ್.ಸಿ., ೧೯೯೫, ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು

೧೧. ಪಾಟೀಲ ಎಸ್.ಸಿ., ೧೯೯೫, ಜನಪದ ಕಲೆ ಚಿತ್ರಕಲೆಯನ್ನು ಅನುಲಕ್ಷಿಸಿ

೧೨. ಶಿರಹಟ್ಟಿ ಎಸ್.ಎಂ., ಭಾರತೀಯ ಚಿತ್ರಕಲೆಯ ಸಂಕ್ಷಿಪ್ತ ಪರಿಚಯ, ಧಾರವಾಡ

೧೩. ಹೂಗಾರ ಎಸ್.ಕೆ., ೧೯೯೮, ಕಲೆ ಮತ್ತು ಹಬ್ಬ, ಲಕ್ಷ್ಮೀ ಮುದ್ರಣಾಲಯ

ಅನುಬಂಧ ಎರಡು

ಪ್ರಶ್ನಾವಳಿ

* ವಕ್ತೃ ಹೆಸರು : ಊರು :
* ಕಲೆ : ವಯಸ್ಸು :
* ಈ ಕಲೆ ವಂಶಪಾರಂಪರ್ಯವಾಗಿ ಬಂದಿದ್ದ ಅಥವಾ ನೀವು ಕಲಿತಿದ್ದಾ?
* ಆ ಕಲೆಯನ್ನು ಆಯ್ಕೆ ಮಾಡಿಕೊಳ್ಳಲು ಕಾರಣಗಳು :
* ಕಲೆಯಲ್ಲಿ ಬಳಸುವ ವಾದ್ಯ ಪರಿಕರಗಳು :
* ವಾದ್ಯ ಪರಿಕರಗಳ ಬಗ್ಗೆ ಅವರ ನಂಬಿಕೆ ಮತ್ತು ಆಚರಣೆ :
* ವಾದ್ಯ ಪರಿಕರಗಳ ತಯಾರಿಕೆ :
* ಕಾರ್ಯಕ್ರಮ ನೀಡುವ ಬಗ್ಗೆ :
* ಎಲ್ಲೆಲ್ಲಿ ಕಾರ್ಯಕ್ರಮ ನೀಡಿರುವಿರಿ?
* ಯಾವ ಯಾವ ಸಂದರ್ಭದಲ್ಲಿ ಕಲೆಯನ್ನು ಪ್ರದರ್ಶಿಸುತ್ತಾರೆ?
* ಕಲೆಯಲ್ಲಿ ಕುಟುಂಬದ ಭಾಗಿತ್ವ :
* ಹಿಂದಿನ ಸಾಮಾಜಿಕ / ಆರ್ಥಿಕ ಜೀವನಕ್ಕೂ ಈಗಿನ ಜೀವನಕ್ಕೂ ವ್ಯತ್ಯಾಸಗಳು
* ನೀವು ಕಲಿತಿರುವ ಕಲೆಗಳ ಕುರಿತು ಏನನಿಸುತ್ತದೆ?
* ಪರಂಪರೆಯಿಂದ ಬಂದ ಕಲೆಗಳು ಇಂದು ಯಾವ ರೂಪ ಪಡೆದಿದೆ?
* ಜನಪದ ಕಲೆ ಬೇಕೋ? ಬೇಡವೋ? ಹಾಗಾದರೆ .... ಏಕೆ?
* ಜನಪದ ಕಲೆಗಳ ಮುಂದುವರಿಕೆಗೆ ಇರುವ ಸಮಸ್ಯೆಗಳು:
* ವಕ್ತೃ ಅಭಿಪ್ರಾಯ :
* ನಿಮ್ಮ ಮಕ್ಕಳಿಗೆ ಈ ಕಲೆ ಹೇಳಿಕೊಟ್ಟಿದ್ದೀರಾ?
* ನಿಮ್ಮ ಮಕ್ಕಳು ಏನನ್ನು ಓದ್ತಿದ್ದಾರೆ? ನಿಮ್ಮ ಮಕ್ಕಳಿಗೆ ಜನಪದ ಕಲೆಯನ್ನು ಕಲಿಸುತ್ತಿದ್ದೀರಾ?

* ಈ ಕಲೆಯನ್ನು ಉಳಿಸಬೇಕು ಅಂದರೆ ಏನು ಮಾಡಬೇಕು? ಕಾರ್ಯಕ್ರಮ ನೀಡುವಲ್ಲಿ ಸಂಘಟಕರು ಹೇಗೆ ನಡೆಸಿಕೊಳ್ಳುತ್ತಾರೆ?
* ಗೌರವ ಸಂಭಾವನೆಯನ್ನು ಮೊದಲು ಮಾತನಾಡಿದಂತೆಯೇ ಕೊಡುತ್ತಾರಾ?
* ಸಂಘ-ಸಂಸ್ಥೆಗಳು ನಿಮ್ಮ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತವೆಯೇ?
* ಕಲಾವಿದರಾಗಿ ಸರ್ಕಾರಕ್ಕೆ ಏನಾದರೂ ಮನವಿ ಮಾಡುವುದಿದೆಯೇ?
* ಶಾಲಾ-ಕಾಲೇಜುಗಳಲ್ಲಿ ಕಲೆಗಳನ್ನು ಕಲಿಸುವ ಬಗ್ಗೆ?
* ಯುವಕ-ಯುವತಿಯರಿಗೆ ಹೇಳಿಕೊಡುವುದರಿಂದ ಏನಾದರೂ ಪ್ರಯೋಜನವಿದೆಯೇ?
* ಕಲೆಗಳಿಂದ ಜೀವನ ನಿರ್ವಹಣೆ ಆಗದಿದ್ದರೆ ಪರ್ಯಾಯವಾಗಿ ಏನು ಮಾಡಿಕೊಂಡಿದ್ದೀರಾ?
* ಜನ ನಿಮ್ಮನ್ನು ಯಾವ ರೀತಿ ಕಾಣ್ತಾರೆ?
* ಕಲಾವಿದರಾದ ನೀವು ಸಭೆ-ಸಮಾರಂಭಗಳಿಗೆ ಮುಖ್ಯ ಅತಿಥಿಯಾಗಿ ಹೋಗಿದ್ದೀರಾ?

ವಕ್ತೃಗಳ ವಿವರ

ಕ್ರಸಂ	ಹೆಸರು	ವಯಸ್ಸು	ಊರು	ಉದ್ಯೋಗ	ಜಾತಿ
೧	ಶಿವಣ್ಣ	೬೦	ರಾಮನಗರ	ಕೃಷಿ/ಕಲಾವಿದ	ವಕ್ಕಲಿಗ ಗೌಡ
೨	ಗುಡ್ಡಪ್ಪಜೋಗಿ	೬೮	ಆನಂದಪುರ	ಕೃಷಿ/ಕಲಾವಿದ	ಪರಿಶಿಷ್ಟ
೩	ಟಾಕಪ್ಪ	೬೮	ಗೌತಮಪುರ	ಕೃಷಿ/ಕಲಾವಿದ	ದೀವರು
೪	ಬೆಳಗಲ್ಲು ವೀರಣ್ಣ	೬೪	ಬಳ್ಳಾರಿ	ಕಲಾವಿದರು	ಪರಿಶಿಷ್ಟ
೫	ಹೊನ್ನೆಗೌಡ	೩೫	ಮಂಡ್ಯ	ಕೃಷಿ/ಕಲಾವಿದ	ವಕ್ಕಲಿಗ ಗೌಡ
೬	ಕೃಷ್ಣೇಗೌಡ	೪೮	ಪಾಂಡವಪುರ	ಕೃಷಿ/ಕಲಾವಿದ	ವಕ್ಕಲಿಗ ಗೌಡ
೭	ರಾಣಿಮಾಚಯ್ಯ	೫೫	ಕೊಡಗು	ಕಲಾವಿದೆ	ಗೌಡ್ರು
೮	ರಾಧಾಬಾಯಿಮಾದರ	೫೫	ಅಥಣಿ	ಕಲಾವಿದೆ	ಪರಿಶಿಷ್ಟ
೯	ಗಣಪುಗೌಡ	೫೩	ಅಂಕೋಲಾ	ಕೃಷಿ/ಕಲಾವಿದ	ಹಾಲಕ್ಕಿ ಗೌಡ್ರು
೧೦	ರಾಮಪ್ಪ ಚೌಡಪ್ಪ	೩೦	ಸಾಗರ	ಕೃಷಿ/ಕಲಾವಿದ	ವಕ್ಕಲಿಗ ಗೌಡ
೧೧	ಮುರಗ್ಯಪ್ಪ ಪಕೀರಪ್ಪ	೪೮	ಸೊರಬ	ಕೃಷಿ/ಕಲಾವಿದ	ದೀವರು
೧೨	ಪುಟ್ಟಪ್ಪ ಇಂತಪ್ಪ	೩೦	ಬೆಂಗಳೂರು ಗ್ರಾಮಾಂತರ	ಕೃಷಿ/ಕಲಾವಿದ	ಪರಿಶಿಷ್ಟ

ಹಾಲಕ್ಕಿ ಒಕ್ಕಲಿಗರ ಕಲಾವಿದರು

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1.	ಗಣಪುಗೌಡ	50	....	ಕೂಲಿ	B.A.	ಹಾಲಕ್ಕಿ ಒಕ್ಕಲಿಗರು
2.	ಸುಬ್ರಾಯ	40	....	ಕೂಲಿ	B.A.	
3.	ಸೂರಗೌಡ	60	....	ಕೂಲಿ	B.A.	
4.	ಮಂಜುನಾಥ ಗೌಡ	33	....	ಕೂಲಿ	7th	
5.	ಗಣೇಶ್‌ಗೌಡ	26	......	ಕೂಲಿ	7th	
6.	ನಾಗರಾಜಗೌಡ	35	....	ಕೂಲಿ	10th	
7.	ನಾರಾಯಣಗೌಡ	33	....	ಕೂಲಿ	....	
8.	ಟಿ. ಗಣೇಶಗೌಡ	35	....	ಕೂಲಿ	....	
9.	ಲಕ್ಷ್ಮಣಗೌಡ	38	....	ಕೂಲಿ	10th	
10.	ಪುಟ್ಟಗೌಡ	40	....	ಕೂಲಿ	7th	

ಮಹಿಳಾ ತಂಡ

ಪಟ ಕುಣಿತ ಕಲಾವಿದರು

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1	ಸುಕನ್ಯ ಡಿ.ಎಸ್.	26	ಕಿರಗಂದೂರು	....	B.A. BEd	ಪರಿಶಿಷ್ಟ ಜಾತಿ
2	ಜಯಶ್ರೀ ಕೆ.ಎಸ್.	24	ಕಿರಗಂದೂರು	....	B.A. DEd	ಪರಿಶಿಷ್ಟ ಜಾತಿ
3	ನಿಷ್ಕಲ ಕೆ.ಆರ್.	24	ಕಿರಗಂದೂರು	....	B.A. DEd	ಪರಿಶಿಷ್ಟ ಜಾತಿ
4	ರೋಜಾ ಕೆ.ಎಸ್.	18	ಕಿರಗಂದೂರು	....	ದ್ವಿತೀಯ ಬಿ.ಎ	ಪರಿಶಿಷ್ಟ ಜಾತಿ
5	ಅರ್ಪಿತಾ ಹೆಚ್.ಆರ್.	24	ಹುಳ್ಳೇನಹಳ್ಳಿ	....	ಡಿಪ್ಲೊಮಾ	ಪರಿಶಿಷ್ಟ ಜಾತಿ
6	ವೇದ ಎಂ.ಜೆ.	21	ಹೆಚ್.ಮಲ್ಲಿಗೆರೆ	....	ಪ್ರಥಮ ಬಿ.ಎ	ಪರಿಶಿಷ್ಟ ಜಾತಿ

ಮೂಜಾ ಕುಣಿತ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1	ಹರ್ಷಿತ	21	ಬೆಳುವಾಯಿ	....	B.Com.	ವಿಶ್ವಕರ್ಮ
2	ವೈಷ್ಣವಿ	12	ಬೆಳುವಾಯಿ	....	8th	ವಿಶ್ವಕರ್ಮ
3	ಅನುತ	18	ಬೆಳುವಾಯಿ	....	II PUC	ಮಡಿವಾಳ
4	ಶ್ವೇತ	17	ಬೆಳುವಾಯಿ	....	I PUC	ಬಿಲ್ಲವ
5	ಅಕ್ಷಿತ್	22	ಬೆಳುವಾಯಿ	....	IInd Year	ಮಡಿವಾಳ
6	ಪ್ರತಿಕ್ಷಾ ಶೆಟ್ಟಿ	22	ಶೆಟ್ಟಿ	....	ಪದವಿ	ಬೆಳುವಾಯಿ
7	ದಿವ್ಯಾ	23	ಪರಿಶಿಷ್ಟ	....	ಪದವಿ	ಬೆಳುವಾಯಿ
8	ಸುಪ್ರಿಯ	20	ಪರಿಶಿಷ್ಟ	ಕಲಾವಿದೆ	ಪದವಿ	ಬೆಳುವಾಯಿ
9	ಕಾವ್ಯ	22	ಪರಿಶಿಷ್ಟ	BPL ಉದ್ಯೋಗಿ	ಪದವಿ	ಬೆಳುಮಾನ್
10	ರವಿರಾಜ ಶೆಟ್ಟಿ	36	PUC	ಶೆಟ್ಟಿ	ಶೆಟ್ಟಿ	ಬೆಳುಮಾನ್

ಗಾರುಡಿ ಗೊಂಬೆ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1	ಕೃಷ್ಣೇಗೌಡರು	59	....	ಕಲಾವಿದರು	....	ಗಂಗಟಕಾರಗೌಡರು
2	ಅಭಿಲೇಶ್	20	....	ಕಲಾವಿದರು	....	ಗಂಗಟಕಾರಗೌಡರು
3	ಧರ್ಮೇಂದ್ರ	34	....	ಕೂಲಿ/ಕಲಾ	....	ಒಕ್ಕಲಿಗ
4	ಪಾಪೇಗೌಡ	56	....	ಕೂಲಿ/ಕಲಾ	....	ಒಕ್ಕಲಿಗ
5	ಹೇಮಲಿಂಗ	35	....	ವ್ಯವಸಾಯ/ ಕಲಾವಿದ	....	ಒಕ್ಕಲಿಗ
6	ಜವರೇಗೌಡ	45	....	ಕೂಲಿ/ಕಲಾ	....	ಒಕ್ಕಲಿಗ
7	ಲೋಕೇಶ್	38	....	ಕೂಲಿ/ಕಲಾ	....	ಒಕ್ಕಲಿಗ
8	ಲಿಂಗೇಗೌಡ	60	....	ಕೂಲಿ/ಕಲಾ	....	ಒಕ್ಕಲಿಗ
9	ದೊಳ್ಳೇಗೌಡ	62	....	ಕೂಲಿ/ಕಲಾ	....	ಒಕ್ಕಲಿಗ
10	ಚಿಕ್ಕಹೊನ್ನೇಗೌಡ	68	....	ಕೂಲಿ/ಕಲಾ	....	ಒಕ್ಕಲಿಗ
11	ದಿನೇಶ್	28	....	ವ್ಯವಸಾಯ/ ಕಲಾವಿದ	....	ಒಕ್ಕಲಿಗ
12	ನಿಂಗೇಗೌಡ	68	....	ವ್ಯವಸಾಯ/ ಕಲಾವಿದ	....	ಒಕ್ಕಲಿಗ
13	ಹಿರೇಗೌಡ	62	....	ವ್ಯವಸಾಯ/ ಕಲಾವಿದ	....	ಒಕ್ಕಲಿಗ
14	ಸ್ವಾಮಿಗೌಡ	35	....	ಕೂಲಿ/ಕಲಾ	....	ಒಕ್ಕಲಿಗ

ಡೊಳ್ಳು ಕುಣಿತ ತಂಡ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1.	ರಾಘವೇಂದ್ರ	31	....	ವ್ಯವಸಾಯ/ ಕಲಾವಿದ	3rd	ಕುಂಚಿಟಿಗ
2.	ಮಂಜುನಾಥ	23	....	ಗಾರೆ ಕೆಲಸ	10th	ಭೋವಿ
3.	ರಾಜು	26	....	ವ್ಯವಸಾಯ	10th	ತಳವಾರ
4.	ನಂದೀಶ್	23	....	ವ್ಯವಸಾಯ	9th	ಕುಂಚಿಟಿಗ
5.	ಪವನ್	23	....		10th	ಕುಂಚಿಟಿಗ
6.	ಪರಮೇಶ್	30	....		B.A.	ಕುಂಚಿಟಿಗ
7.	ಶ್ರೀಧರ್	23	....		6th	ಕುಂಚಿಟಿಗ
8.	ಅರವಿಂದ್	25	....		M.Com.	ಕುಂಚಿಟಿಗ
9.	ಅರುಣ್	26	....		P.U.C.	ಕುಂಚಿಟಿಗ
10.	ಮನು	24	....		10th	ಕುಂಚಿಟಿಗ
11.	ಅವಿನಾಶ್	24	....	ಕೂಲಿ/ಕಲಾ	P.U.C.	ವಾಲ್ಮೀಕಿ
12.	ಅವಿ	25	....	ವ್ಯವಸಾಯ	10th	ಕುಂಚಿಟಿಗ
13.	ರಾಜಪ್ಪ	42	....	ವ್ಯವಸಾಯ	10th	ಕುಂಚಿಟಿಗ
14.	ಶಶಿಧರ್	23	....	ವ್ಯವಸಾಯ	P.U.C.	ಕುಂಚಿಟಿಗ

ಕಂಗೀಲು ಕುಣಿತ ತಂಡ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1	ಗುರುಚರಣ್	31	ಉಡುಪಿ	ಕಲಾವಿದ	....	ಹರಿಜನ
2	ರಾಜೇಶ್	25	ಪಡುಬಿದ್ರಿ	ಮೀನುಗಾರಿಕೆ	....	ಹರಿಜನ
3	ಕಾರ್ತಿಕ್	19	ಪಡುಬಿದ್ರಿ	ಕಲಾವಿದ	....	ಹರಿಜನ
4	ಜಿತೇಂದ್ರ	22	ಪಡುಬಿದ್ರಿ	ಪೇಯಿಂಟಿಂಗ್	....	ಹರಿಜನ
5	ಕಿರಣ್	20	ಪಡುಬಿದ್ರಿ	ಮೀನುಗಾರಿಕೆ	....	ಹರಿಜನ
6	ಸಂತೋಷ್	36	ಕಾರ್ಕಳ	ಗಾರೆ ಕೆಲಸ	....	ಹರಿಜನ
7	ಸುಖೇಶ್	34	....	ಕಲಾವಿದ	....	ಹರಿಜನ
8	ಗೌತಮ್	19	ಪಡುಬಿದ್ರಿ	ಕಲಾವಿದ	....	ಹರಿಜನ
9	ಅರುಣ್ ಕಾಮತ್	33	ಕಾಪು	ಗಾರೆ ಕೆಲಸ	....	ಹರಿಜನ
10	ಸುಖೇಶ್ ಸುವರ್ಣ	33	ಕಾಪು	ಹೋಟೆಲ್ ಕೆಲಸ	....	ಮೋಗವೀರ
11	ಪಾಂಡುರಂಗ ಪದ್ದಮ್ಮ	36	ಹಿಡಿಯಡ್ಕ	ಹಿಡಿಯಡ್ಕ	....	ನಳಿಕೆ
12	ರಾಜೇಶ್ ಕುಂದರ್	37	ಬ್ರಹ್ಮಾವರ	ವಾದ್ಯಸೆಂಡಿಸಾರೆ	....	ಮೋಗವೀರ
13	ಚೇತನ್	25	ಪಡುಬಿದ್ರಿ	ಸೂಪರ್‌ವೈಸರ್	....	ಎಸ್‌ಸಿ
14	ಕಿರಣ್	22	ಕಾಪು	ಪೌರಕಾರ್ಮಿಕ	....	ಕೊರಗ
15	ಸನತ್	24	ಕಾಪು	ಪೇಯಿಂಟಿಂಗ್	....	ಮುಂಡಾಲ
16	ಐತಪ್ಪ	25	ಕಾಪು	ಹೋಂಗಾರ್ಡ್	....	ಕೊರಗ

ದಟ್ಟಿ ಕುಣಿತ ತಂಡ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
1.	ಉದ್ದಣ ಸ.ಗೋಡೇರ್	54	ಉದಗಟ್ಟಿ	ವಕೀಲರು	MA,LLB	ವಾಲ್ಮೀಕಿ
2.	ಮಾರುತಿ ಹ. ಮುತ್ತಣ್ಣವರ್	50	ತಳಕಟನಾಳ್	ಕೃಷಿ	೪ನೇ ತರಗತಿ	ವಾಲ್ಮೀಕಿ
3.	ಮಾಯಪ್ಪ ಸಿ. ಮುತ್ತಣ್ಣವರ್	46	ತಳಕಟನಾಳ್	ಕೃಷಿ	....	ಪರಿಶಿಷ್ಟ
4.	ಲಕ್ಕಪ್ಪ ತ. ದೊಡ್ಡಮನಿ	40	ತಳಕಟನಾಳ್	ಕೃಷಿ	೪ನೇ ತರಗತಿ	ಪರಿಶಿಷ್ಟ
5.	ಹನುಮಂತಪ್ಪ ಮ. ಭಜಂತ್ರಿ	54	ತಳಕಟನಾಳ್	ಕೃಷಿ	೭ನೇ ತರಗತಿ	ಪರಿಶಿಷ್ಟ
6.	ಭೀಮಪ್ಪ ಬ. ಭಜಂತ್ರಿ	56	ತಳಕಟನಾಳ್	ಕೃಷಿ	೫ನೇ ತರಗತಿ	ವಾಲ್ಮೀಕಿ
7.	ಪರಸಪ್ಪ ಲ ದೊಡ್ಮನಿ	52	ತಳಕಟನಾಳ್	ಕೃಷಿ	....	ವಾಲ್ಮೀಕಿ
8.	ಪರಶುರಾಮ ಮ. ಮುತ್ತಣ್ಣವರ್	16	ತಳಕಟನಾಳ್	ವಿದ್ಯಾರ್ಥಿ	೬ನೇ ತರಗತಿ	ವಾಲ್ಮೀಕಿ
9.	ವಿಠ್ಠಲ್ ಮ. ಮುತ್ತಣ್ಣವರ್	16	ತಳಕಟನಾಳ್	ವಿದ್ಯಾರ್ಥಿ	೬ನೇ ತರಗತಿ	ವಾಲ್ಮೀಕಿ
10.	ಕಾಡಪ್ಪ ಮ. ಗಡ್ಡದರಿ	16	ತಳಕಟನಾಳ್	ವಿದ್ಯಾರ್ಥಿ	೬ನೇ ತರಗತಿ	ವಾಲ್ಮೀಕಿ
11.	ಚಿತ್ತಣ್ಣ ರ. ಗಡ್ಡದರಿ	14	ತಳಕಟನಾಳ್	ವಿದ್ಯಾರ್ಥಿ	೨ನೇ ತರಗತಿ	ವಾಲ್ಮೀಕಿ
12.	ಲಕ್ಕಪ್ಪ ಬ. ನಂದಿ	16	ತಳಕಟನಾಳ್	ವಿದ್ಯಾರ್ಥಿ	೬ನೇ ತರಗತಿ	ವಾಲ್ಮೀಕಿ
13.	ಬಸವರಾಜು ರ. ಮುತ್ತಣ್ಣ	14	ತಳಕಟನಾಳ್	ವಿದ್ಯಾರ್ಥಿ	೨ನೇ ತರಗತಿ	ವಾಲ್ಮೀಕಿ
14.	ಬಾಲಚಂದ್ರ ಲ. ನಂದಿ	36	ತಳಕಟನಾಳ್	ಕೃಷಿ	....	ವಾಲ್ಮೀಕಿ
15.	ವಿಠ್ಠಲ ಎ. ಜೋಗಿ	30	ತಳಕಟನಾಳ್	ಕೃಷಿ	....	ಪರಿಶಿಷ್ಟ

ಜಗ್ಗಲಿಗೆ ತಂಡ

1	ವಸಂತ ನಾರಾಯಣ ರಣ್ಣವರೇ	83	ಸುಳ್ಯ	ಕೃಷಿ–ಕಲೆ	೨ನೇ ತರಗತಿ	ಮರಾಠ
2	ಅಪ್ಪಣ ವಸಂತ ರಾವ್ ರಣ್ಣವರೇ	28	ಬೆಂಗಳೂರು	ಸರ್ಕಾರಿ ಉದ್ಯೋಗಿ	B.A.	ಮರಾಠ
3	ವೀರೂಪಣ್ಣ ಕಲ್ಲಪ್ಪ ಕುಂದುಗೋಳ್	58	ಸುಳ್ಯ	ಕೃಷಿ	೪ನೇ ತರಗತಿ	ಲಿಂಗಾಯಿತ
4	ಗಂಗಪ್ಪ ಮಾದೇವಪ್ಪ ಸತಬನ್ನವರ್	50	ಸುಳ್ಯ	ಕೃಷಿ	....	ಮರಾಠ

ಜಗ್ಗಲಿಗೆ ತಂಡ

ಕ್ರ. ಸಂ.	ಹೆಸರು	ವಯಸ್ಸು	ಊರು	ಉದ್ಯೋಗ	ವಿದ್ಯಾರ್ಹತೆ	ಜಾತಿ
5	ಚನ್ನಬಸಪ್ಪ ತುಳಜಣ್ಣನವರ್	38	ಸುಳ್ಯ	ಕೂಲಿ	....	ಮರಾಠ
6	ದೇವರಾಜ್ ವಸಂತ್ ರಣ್ಣವರೆ	38	ಸುಳ್ಯ	ಕೃಷಿ	....	ಮರಾಠ
7	ಪ್ರವೀಣ ದೇವರಾಜ ರಣ್ಣವರೆ	22	ಸುಳ್ಯ	ವಿದ್ಯಾರ್ಥಿ	ಬಿ.ಕಾಂ.	ಮರಾಠ
8	ಕಲ್ಮೇಶ್ ಶಂಕರಪ್ಪ ಕುಂದುಗೋಳ್	22	ಸುಳ್ಯ	ಕೂಲಿ	....	ಲಿಂಗಾಯಿತ
9	ಮಾದೇವಪ್ಪ ಶಿವಪ್ಪ ಅವರಾದಿ	52	ಸುಳ್ಯ	ಕೃಷಿ	....	ಲಿಂಗಾಯಿತ
10	ವಿಠ್ಠಲ್ ಮಹಾದೇವಪ್ಪ ಅವರಾದಿ	30	ಸುಳ್ಯ	ಕೃಷಿ	....	ಲಿಂಗಾಯಿತ
11	ಪುಂಡಲೀಕ ಮಹಾದೇವಪ್ಪ ಅವರಾದಿ	24	ಸುಳ್ಯ	ಕೂಲಿ	....	ಲಿಂಗಾಯಿತ
12	ಸಿದ್ಧರಾಮಪ್ಪ ಈರಪ್ಪ ಕಳ್ಳಿ	28	ಸುಳ್ಯ	ಕೂಲಿ	10ನೇ ತರಗತಿ	ಲಿಂಗಾಯಿತ
13	ಮರಿಯಪ್ಪ ಮಾದರ	35	ಸುಳ್ಯ	ಕೂಲಿ	....	ಪರಿಶಿಷ್ಟ
14	ಶಂಕರಪ್ಪ ಕುಂದುಗೋಳ್	32	ಸುಳ್ಯ	ಕೂಲಿ	....	ಲಿಂಗಾಯಿತ
15	ರಾಜುಗಂಗಪ್ಪ ಸತವಣ್ಣವರ್	24	ಸುಳ್ಯ	ಕೂಲಿ	....	ಮರಾಠ